

# ಗೌರವದ ಸಂಕೇತ

ನೀತಿಶಾಸ್ತ್ರ, ವೈಯುಕ್ತಿಕ ಗುಣಮಟ್ಟ ಮತ್ತು ಕ್ರೈಸ್ತ ಸೇವೆಯಲ್ಲಿನ ಪುರುಷ ಮತ್ತು ಸ್ತ್ರೀಯರಿಗಾಗಿ ಪ್ರಾಯೋಗಿಕ ಜ್ಞಾನ.

ಆಶಿಷ್ ರಾಯ್‌ಚೂರ್

ನೀತಿಶಾಸ್ತ್ರವು, ನೈತಿಕ ಸಂಕೇತ, ಮೌಲ್ಯಗಳು ಮತ್ತು ತತ್ವಗಳನ್ನು ಹೊಂದಿದೆ. ನೀತಿಯ ಸಂಕೇತವು ಚರ್ಚಿಸಲ್ಪಟ್ಟಿದೆ ಮತ್ತು ದಾಖಲಿಸಲಾಗಿದೆ. ನೀತಿಶಾಸ್ತ್ರದ ಗುಣಮಟ್ಟವು ಸ್ವತಃ ಕೆಲಸ ಮಾಡಲು ಬೇಕಾದ ಸಾಮರ್ಥ್ಯವನ್ನು ಒದಗಿಸುವುದಿಲ್ಲ. ನೈತಿಕ ಮೌಲ್ಯಗಳು ಮತ್ತು ತತ್ವಗಳನ್ನು ಮಾಡಲು ಬದ್ಧವಾಗಿರುವ ಬಲವು ಪ್ರತ್ಯೇಕವಾಗಿ, ವೈಯುಕ್ತಿಕವಾಗಿ ಒಳಗಿನಿಂದ ಬರುತ್ತದೆ. ಕ್ರೈಸ್ತ ಸೇವಕರುಗಳಾಗಿ, ನೈತಿಕವಾಗಿ ನಡೆಯಲು ಬಲವು ನಮ್ಮ ಕರ್ತನ ಮೇಲೆ ಆತುಕೊಳ್ಳುವುದರಿಂದ ಬರುತ್ತದೆ ಮತ್ತು ಆತನು ಒದಗಿಸುವ ಕೃಪೆಯ ಮೂಲಕವಾಗಿ ಬರುತ್ತದೆ. ನಡತೆಯ ಸಂಕೇತವಿಲ್ಲದಿರುವುದು, ನೈತಿಕತೆಯ ಬಗ್ಗೆ ಬೋಧನೆಯಿಲ್ಲದಿರುವುದು, ಜ್ಞಾನದ ಸಲಹೆಯಿಲ್ಲದಿರುವುದು ಅಥವಾ ಮಾರ್ಗದರ್ಶನಗಳ ಪಟ್ಟಿ, ಇವುಗಳು, ದೇವರೊಂದಿಗೆ ನಡೆಯುವುದನ್ನು ಗಂಭೀರವಾಗಿ ಪರಿಗಣಿಸದಿರುವ ಕ್ರಿಸ್ತೀಯ ಸೇವಕರುಗಳಿಗೆ ಸಹಾಯಕವಾದಂತಿದೆ.

ಇಂದಿನ ಸಭೆಗಳಲ್ಲಿ, ಅನೇಕರು ದೇವರ ಬಲ, ಅಭಿಷೇಕ, ಮಹತ್ಕಾರ್ಯಗಳು, ಸೂಚಕ ಕಾರ್ಯಗಳು, ಅದ್ಭುತಗಳು ಮತ್ತು ಸ್ವಸ್ಥತೆ, ಪ್ರವಾದನೆ ಮತ್ತುಅತ್ಯದ್ಭುತವಾದವುಗಳಿಗೆ ಹೆಚ್ಚಿನ ಒತ್ತು ನೀಡುತ್ತಿದ್ದೇವೆ. ನಡವಳಿಕೆ ಮತ್ತು ದೈವಿಕ ಗುಣಮಟ್ಟದ ಜೀವಿತದ ಕರೆಯು ಅಷ್ಟಾಗಿ ಜನಪ್ರಿಯವಾಗಿಲ್ಲ. ಸಂದೇಶಕರು ಮತ್ತು ಸೇವಕರುಗಳು, ಜೀವಿತಗಳು ಜೀವಿಸುವುದಕ್ಕಿಂತಲೂ, ಪ್ರಸಂಗ ಪೀಠದಲ್ಲಿ ಒಂದು ಗಂಟೆಗಳು ಪ್ರದರ್ಶಿಸುವುದರಲ್ಲಿ ಬೇಡಿಕೆಯುಳ್ಳವರಂತೆ ಪ್ರಯತ್ನಿಸುತ್ತಾರೆ.

ಕ್ರಿಸ್ತನ ಸೇವಕರುಗಳಾಗಿ ನಾವುಗಳು, ಆತನಿಗೆ ಭಕ್ತಿಯಿಂದಲೂ, ಭಯದಿಂದಲೂ "ದೇವರಿಗೆ ಪೂಜ್ಯತೆಯಿಂದ ಸೇವೆ ಸಲ್ಲಿಸುವ ಗುಣಮಟ್ಟವನ್ನು ಮರು-ಸ್ಥಾಪಿಸುವ." (ಇಬ್ರಿಯರಿಗೆ 12:28). ಈ ಪುಸ್ತಕವು ಇವುಗಳ ಕುರಿತಾಗಿದೆ. ನೈತಿಕ ಮೌಲ್ಯಗಳ, ದೈವಿಕ ಗುಣಮಟ್ಟಗಳು ಮತ್ತು ಕ್ರಿಸ್ತೀಯ ಸೇವೆಯಲ್ಲಿನ ಪುರುಷ ಮತ್ತು ಸ್ತ್ರೀಯರಿಗೆ ಪ್ರಾಯೋಗಿಕ ಜ್ಞಾನಗಳ ಕುರಿತ ಸುಲಭ ಅಧ್ಯಯನದ ಸಂಗ್ರಹವಾಗಿದೆ. ನೀವು ಈ ಪುಸ್ತಕವನ್ನು ಓದಿದರೆ ನಿಮ್ಮ ಜೀವಿತ ಮತ್ತು ಸೇವೆಯು ಖಚಿತವಾಗಿ ಪುಷ್ಟೀಕರಿಸಲ್ಪಡುತ್ತದೆ.

ಈ ಪುಸ್ತಕವು, ಕ್ರಿಸ್ತೀಯ ಸೇವೆಗಾಗಿ ಪುರುಷ ಮತ್ತು ಸ್ತ್ರೀಯರು ತರಬೇತಿ ಹೊಂದುವಾಗ ಮತ್ತು ಸತ್ಯವೇದ ಶಾಲೆಗಳು, ಸೆಮಿನಾರ್‌ಗಳು, ಸತ್ಯವೇದ ತರಬೇತಿ ಕೇಂದ್ರಗಳು ಮತ್ತು ಸೇವೆಗಾಗಿ ಪುರುಷ ಮತ್ತು ಸ್ತ್ರೀಯರನ್ನು ತರಬೇತಿಗೊಳಿಸುವವರಿಗಾಗಿ ಉಪಯುಕ್ತವಾದ ಸಂಪನ್ಮೂಲವಾಗಿದೆ. ಸಮಾವೇಶಗಳು, ಸೆಮಿನಾರ್‌ಗಳು ಮತ್ತು ಸಭಾಪಾಲಕರುಗಳಿಗೆ ಬೋಧಿಸಲು ಇದು ಒಂದು ಒಳ್ಳೆಯ ಅಧ್ಯಯನ ಕೈಪಿಡಿಯಾಗಿದೆ. ಸಭಾಪಾಲಕರು ಮತ್ತು ಸೇವಾನಾಯಕರುಗಳು, ತಮ್ಮ ಸೇವಾ ತಂಡಗಳನ್ನು ತರಬೇತಿಗೊಳಿಸಲು ಮತ್ತು ಸಿದ್ಧಗೊಳಿಸಲು ಇರುವ ಉಪಯುಕ್ತವಾದ ಸಂಪನ್ಮೂಲ ಮತ್ತು ಸಹಾಯಕಾರಿಯಾದ ಪುಸ್ತಕ ಇದಾಗಿದೆ.

ಆಶಿಷ್ ರಾಯಚೂರ್

**ಆಲ್ ಪೀಪಲ್ಸ್ ಚರ್ಚ್ ಅಂಡ್ ವರ್ಲ್ಡ್ ಔಟ್‌ರೀಚ್**
319, 2ನೇ ಮಹಡಿ, 7ನೇ ಮೈನ್, ಹೆಚ್.ಆರ್.ಬಿ.ಆರ್. ಲೇಔಟ್,
2ನೇ ಬ್ಲಾಕ್, ಕಲ್ಯಾಣ ನಗರ, ಬೆಂಗಳೂರು - 560 043
ಕರ್ನಾಟಕ, ಭಾರತ

ದೂರವಾಣಿ: +91-80-25452617, +91-80-65970617
ಇ-ಮೇಲ್: contact@apcwo.org
ವೆಬ್‌ಸೈಟ್: www.apcwo.org

ಮುದ್ರಣ ಮತ್ತು ವಿತರಣೆ: **ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್, ಬೆಂಗಳೂರು**
ಪ್ರಥಮ ಪ್ರತಿ ಮುದ್ರಣ: ಮೇ 2016

ಮುಖಪುಟ ಮತ್ತು ವರ್ಣವಿನ್ಯಾಸ: ಬಿಜೋ ಥಾಮಸ್

**ಸಂಪರ್ಕಿಸಬೇಕಾದ ವಿಳಾಸ:**
ಆಲ್ ಪೀಪಲ್ಸ್ ಚರ್ಚ್ ಅಂಡ್ ವರ್ಲ್ಡ್ ಔಟ್‌ರೀಚ್
319, 2ನೇ ಮಹಡಿ, 7ನೇ ಮೈನ್, ಹೆಚ್.ಆರ್.ಬಿ.ಆರ್. ಲೇಔಟ್,
2ನೇ ಬ್ಲಾಕ್, ಕಲ್ಯಾಣ ನಗರ, ಬೆಂಗಳೂರು - 560 043
ಕರ್ನಾಟಕ, ಭಾರತ.

ದೂರವಾಣಿ: +91-80-25452617, +91-80-65970617
ಇ-ಮೇಲ್: contact@apcwo.org
ವೆಬ್‌ಸೈಟ್: www.apcwo.org

Unless otherwise indicated, all Scripture quotations are taken from the Holy Bible, New King James Version. Copyright © 1982 by Thomas Nelson, Inc., Used by permission. All rights reserved.
Scriptures marked as "(MSG)" are taken from THE MESSAGE: The Bible in Contemporary Language copyright 2002 by Eugene H. Peterson.
Scriptures marked as "(GNB)" are taken from the GNB – Second Edition © 1992 by American Bible Society. Used by permission.

**ಉಚಿತ ವಿತರಣೆಗಾಗಿ**

ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಸ್ನೇಹಿತರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ವಂದನೆಗಳು!

**ಮೇಲಿಂಗ್ ಪಟ್ಟಿ ಮತ್ತು ಉಚಿತ ಹೆಚ್ಚುವರಿ ಪುಸ್ತಕಗಳಿಗಾಗಿ**

ಹೊಸ ಪುಸ್ತಕಗಳು ಮುದ್ರಣವಾದಾಗ ಅವುಗಳನ್ನು ಪಡೆದುಕೊಳ್ಳಲು ದಯವಿಟ್ಟು ನಿಮ್ಮ ಸರಿಯಾದ ಅಂಚೆ ವಿಳಾಸ ಮತ್ತು ಯಾವ ಭಾಷೆಗಳಲ್ಲಿ ಪುಸ್ತಕಗಳು ಬೇಕೆಂಬುದನ್ನು ನಮ್ಮೊಂದಿಗೆ ಹಂಚಿಕೊಳ್ಳಿರಿ. ನಾವು ನಿಮ್ಮ ಸಭೆಯಲ್ಲಿ, ಸತ್ಯವೇದ ಅಧ್ಯಯನ ಗುಂಪು, ಸತ್ಯವೇದ ಶಾಲೆ, ಸೆಮಿನಾರ್ ಮುಂತಾದವುಗಳಿಗಾಗಿ ಹೆಚ್ಚಿನ ಪುಸ್ತಕಗಳನ್ನು ಕಳುಹಿಸಲು ನಾವು ಸಂತೋಷವುಳ್ಳವರಾಗಿದ್ದೇವೆ. ನಿಮಗೆ ಎಷ್ಟು ಪುಸ್ತಕಗಳು ಬೇಕೆಂಬುದನ್ನು ನಮಗೆ ತಿಳಿಸಿರಿ. ನಾವು ಅವುಗಳನ್ನು ನಿಮಗೆ ಕಳುಹಿಸುತ್ತೇವೆ.

(Kannada Book - Code of Honor)

# ಗೌರವದ ಸಂಕೇತ

# ವಿಷಯಗಳು


1. **ವೈಯಕ್ತಿಕ ಜೀವಿತ** **9**

ರಹಸ್ಯವಾದ ಸ್ಥಳದಲ್ಲಿ ಪ್ರತಿದಿನವೂ ಸಮಯ ನಿಗದಿ ಮಾಡಬೇಕು 10

ನಿಮ್ಮ ಸ್ವಭಾವವನ್ನು ಮುಂದುವರಿಸಿ ಬಲಪಡಿಸಿರಿ 11

ಮಾಡಿರಿ, ನಂತರ ಬೋಧಿಸಿರಿ 13

ಒಂದು ಸ್ವರವಾಗಿರ್ರಿ. ಒಂದು ಪ್ರತಿಧ್ವನಿಯಲ್ಲ 15

ಜೀವನ ಶೈಲಿ–ಅದನ್ನು ಸರಳವಾಗಿ ಇರಿಸಿಕೊಳ್ಳಿ 16

ನಿಮ್ಮ ಹೃದಯವನ್ನು ಶುದ್ಧವಾಗಿಟ್ಟುಕೊಳ್ಳಿರಿ, ನಿಮ್ಮ ಪ್ರಚೋದನೆಗಳನ್ನು ಕಾಯ್ದುಕೊಳ್ಳಿರಿ 18

ನಿಮ್ಮ ಸ್ವಂತ ಮನಸಾಕ್ಷಿಯನ್ನು ಕೊಲ್ಲಬೇಡಿರಿ 22

ಪರಿಶುದ್ಧತೆಗಾಗಿ ನಿಮ್ಮ ಅನುಕಂಪವನ್ನು ಉಜ್ವಲಿಸಿರಿ 24

ವೈಯಕ್ತಿಕವಾದ ನೈತಿಕ ಸರಹದ್ದುಗಳನ್ನು ಸಿದ್ಧಪಡಿಸುವುದು 26

ಎಲ್ಲಾ ಖಾಸಗಿ ಲೈಂಗಿಕ ಪಾಪದಿಂದ ಶುದ್ಧವಾಗಿ ಉಳಿಯುವುದು 27

ಪ್ರತಿ ಕ್ಷಣದಲ್ಲೂ–ದೇವರಿಗೆ ಹೊಣೆಗಾರರಾಗಿರಿ 31

ಪೂರ್ಣಾವಧಿ ಅಥವಾ ಅಲ್ಪಾವಧಿ? 33

ನಿಮ್ಮ ಆಹಾರ ಕ್ರಮವನ್ನು ಗಮನಿಸಿರಿ ಹಾಗೂ ಕ್ರಮವಾಗಿ ವ್ಯಾಯಾಮ ಮಾಡಿರಿ 35

ಒಂದು ವೈಯಕ್ತಿಕ ನಿರ್ವಹಣೆ ಯೋಜನೆಯನ್ನು ಹೊಂದಿಕೊಳ್ಳಿರಿ 37

2. **ಕುಟುಂಬ** **45**

ಮೂರು ಅಂಗವಿನ್ಯಾಸಗಳು, ಒಂದು ಜೀವಿತ 46

ನಿಮ್ಮ ಜೀವನ ಸಂಗಾತಿಯೊಂದಿಗೆ ನಿಮ್ಮ ಸಂಬಂಧವನ್ನು ಪೋಷಿಸಿರಿ 48

ನಿಮ್ಮ ಮಕ್ಕಳೊಂದಿಗೆ ನಿಮ್ಮ ಸಂಬಂಧವನ್ನು ಪೋಷಿಸಿರಿ 49

ನಿಮ್ಮ ಕುಟುಂಬಕ್ಕಾಗಿ ಒದಗಿಸಲು ಕೆಲಸ ಮಾಡಿರಿ 50

ಒಬ್ಬ ವ್ಯಕ್ತಿಯಾಗಿ ದೇವರ ಉದ್ದೇಶವನ್ನು ಅನುಸರಿಸಿರಿ 51

| | | |
|---|---|---|
| | ದೇವರ ಉದ್ದೇಶವನ್ನು ಅನುಸರಿಸಲು ನಿಮ್ಮ ಜೀವನ ಸಂಗಾತಿಯನ್ನು ಪ್ರೋತ್ಸಾಹಿಸಿರಿ | 52 |
| | ದೇವರ ಚಿತ್ತವನ್ನು ಅನುಸರಿಸಲು ನಿಮ್ಮ ಮಕ್ಕಳನ್ನು ಪ್ರೋತ್ಸಾಹಿಸಿರಿ | 55 |
| | ಮನೆಯಲ್ಲಿ (ಕುಟುಂಬದಲ್ಲಿ) ದೈವಿಕ ಮಾದರಿಯನ್ನು ಸಿದ್ಧಪಡಿಸಿರಿ | 56 |
| | ನಿಮ್ಮ ಜೀವನ ಸಂಗಾತಿಗೆ ಬೋಧಿಸಬೇಡಿರಿ | 57 |
| | ಸೇವೆಯ ಎದುರು ವೈಯಕ್ತಿಕ ಹಾಗೂ ಕೌಟುಂಬಿಕ ವಿವಾದಗಳ ಕುರಿತು ಮಾತನಾಡಿರಿ | 58 |
| | ನಿಮ್ಮ ಮಕ್ಕಳೊಂದಿಗೆ ಸಮಯ ಕಳೆಯಿರಿ | 59 |
| | ಅವರಿಗೆ ಯಾವುದು ಮುಖ್ಯವೋ ಅದು ನಿಮಗೂ ಮುಖ್ಯವಾಗಿರಬೇಕು | 60 |
| | ನಿಮ್ಮ ಕುಟುಂಬದ ಪ್ರಾರ್ಥನೆಯನ್ನು ನಿರ್ವಹಿಸಿರಿ | 64 |
| | ಸೇವೆಗೆ ಮೊದಲು ಕುಟುಂಬವನ್ನಿಡಿರಿ | 65 |
| | ಜನರಿಗೆ ಸೇವೆ ಮಾಡುವ ಸಮಯದಲ್ಲಿ ನಿಮ್ಮ ಕುಟುಂಬವನ್ನು ಕಾಯಿರಿ | 66 |
| | ಹೊರಕ್ಕೆ ಹೆಜ್ಜೆ ಇಡಬೇಡಿರಿ, ಒಳಕ್ಕೆ ಹೆಜ್ಜೆ ಇಡ ಬೇಡಿರಿ | 68 |
| | ನಿಮಗೆ ಅಗತ್ಯವೆನಿಸಿದ ಕೂಡಲೇ ಸಹಾಯ ಪಡೆಯಿರಿ | 68 |
| | ನಿಮ್ಮ ಸೇವೆಯು ಒಂದು, “ಕುಟುಂಬ ವ್ಯವಹಾರ”ವಲ್ಲ | 71 |
| 3. | **ಜನರು** | **77** |
| | ಸೇವೆ ಎಂದರೆ ಜನರನ್ನು ಕಟ್ಟುವ ಬಗ್ಗೆ ಇರುವಂಥದ್ದಾಗಿದೆ | 78 |
| | ಬೆಳವಣಿಗೆಯು ಹಂತಗಳಲ್ಲಿ ಸಂಭವಿಸುತ್ತದೆ-ಸಹನೆಯಿಂದ ಒಟ್ಟಾಗಿ ಪ್ರಯಾಣ ಮಾಡಿರಿ | 80 |
| | ಪ್ರತಿಯೊಬ್ಬರನ್ನೂ ಸನ್ಮಾನಿಸಿರಿ | 82 |
| | ನಾಯಕರನ್ನು, ಹಿರಿಯರನ್ನು, ತಂದೆಯರನ್ನು ಸನ್ಮಾನಿಸಿರಿ | 83 |
| | ಪಕ್ಷಪಾತ ಮಾಡಬೇಡಿರಿ | 84 |

ಕೃತಜ್ಞತೆಯುಳ್ಳವರಾಗಿರಿ, “ಧನ್ಯವಾದ!” ಹೇಳಿರಿ 86
ರಹಸ್ಯವಾಗಿ ಹಂಚಿಕೊಳ್ಳಲ್ಪಟ್ಟದ್ದು ರಹಸ್ಯವಾಗಿ ಉಳಿಯಬೇಕು 87
ಪ್ರೀತಿಯಿಂದ ಜನರನ್ನು ತಿದ್ದಿರಿ 88
ಗೋಪ್ಯವಾಗಿ ತಪ್ಪು ತಿದ್ದಿರಿ, ಸಾರ್ವಜನಿಕವಾಗಿ ಹೊಗಳಿರಿ 91
ಕಷ್ಟಕರ ಸನ್ನಿವೇಶಗಳನ್ನು ನಿಭಾಯಿಸುವಾಗ ಒಂದು ವೈಯಕ್ತಿಕ ತಂತ್ರೋಪಾಯವನ್ನು ಹೊಂದಿಕೊಳ್ಳಿರಿ 92
ದೇವರ ಜನರ ಮೇಲೆ ಅಧಿಕಾರ ನಡೆಸಬೇಡಿರಿ 94
ನಿರ್ಬಂಧಿಸಬೇಡಿ, ಕೈವಾಡ ತೋರಿಸಬೇಡಿ 95
ವೈಯಕ್ತಿಕ ಅಭದ್ರತೆಗಳನ್ನು ಜಯಿಸಿರಿ 97
ಒಂದು ವೈಯಕ್ತಿಕ ಕಾರ್ಯ ಪಟ್ಟಿಯೊಂದಿಗಿನ ಜನರಿಗಾಗಿ ವೇದಿಕೆ ಒದಗಿಸಬೇಡಿರಿ 99
ನೀವು ಅರ್ಥಮಾಡಿಕೊಳ್ಳಲು ಆಗದೆ ಇರುವುದರೊಡನೆ ಹೋರಾಡಬೇಡಿರಿ 100
ಜನರು ಹೇಳುವ ಹಾಗೂ ಮಾಡುವ ಕೆಲವು ವಿಷಯಗಳು ನಿಮ್ಮ ಸಮಯಕ್ಕೆ ಬೆಲೆಕಟ್ಟುವುದಿಲ್ಲ 103
ಅಪರಾಧಗಳನ್ನು ಹಿಂದೆ ಬಿಡಿರಿ ಅವುಗಳನ್ನು ನಿಮ್ಮೊಂದಿಗೆ ಕೊಂಡೊಯ್ಯುವುದು ಬೆಲೆಯಿರಲಾರದು 104
ಜನರು ಬೆಳೆಯುತ್ತಾರೆ, ಜನರು ಬದಲಾಗುತ್ತಾರೆ–ಅದರಿಂದ ಹೋಗಲು ಸಿದ್ಧವಾಗಿರಿ 106
ಮುಖಸ್ತುತಿ–ಅದನ್ನು ಅಂಗೀಕರಿಸಬೇಡಿರಿ, ಅದನ್ನು ಕೊಡಬೇಡಿರಿ 107
ನೀವು ಜನರ ಅಭಿಪ್ರಾಯಗಳನ್ನು ಆಲಿಸಬಹುದು. ಆದರೆ, ನೀವು ಅಂತಿಮ ತೀರ್ಮಾನವನ್ನು ಮಾಡಿರಿ 109
ಯಾವ ವ್ಯಕ್ತಿಯೂ ನಿಮ್ಮನ್ನು ಆಳಲು ಅಪ್ಪಣೆಕೊಡಬೇಡಿರಿ 110
“ಆತ್ಮಿಕ”ವಾದವುಗಳನ್ನು ಎಚ್ಚರಿಕೆಯಿಂದ ನಿಭಾಯಿಸಿರಿ 113
ನಾಯಕರನ್ನು ಎಚ್ಚಿಸಿರಿ 114
ನಿಮ್ಮ ನಾಯಕರಿಗೆ ಒತಾಸೆಯಾಗಿ ನಿಲ್ಲಿರಿ 116

ಆಲಸ್ಯ ಅಥವಾ ಉದಾಸೀನತೆಗಳು ಹುಟ್ಟಿ ಅಬ್ಷಾಲೋಮನಂತೆ ಆಗಲು ಅವಕಾಶ ಕೊಡಬೇಡಿರಿ 118

ಇತರ ಜನರ ಪಾಪಗಳ ಪಾಲುದಾರರಾಗಬೇಡಿರಿ 120

"ಇಲ್ಲ" ಎಂದು ಹೇಳುವುದು ಪಾಪವಲ್ಲ 123

ನಿಮ್ಮನ್ನು ದೋಷಾರೋಪಣೆಗೆ ಗುರಿ ಮಾಡುವವರ ಮಟ್ಟಕ್ಕೆ ಬಾಗಬೇಡಿರಿ 124

4. **ನಡತೆ** **129**

ಮಾದರಿಯಾಗಿರು, ಒಂದು ಪ್ರಯಾಣ (ಮಟ್ಟ)ವನ್ನು ಸಿದ್ಧ ಮಾಡು 129

ನಿಮ್ಮ ಜೀವಿತ ಮಾದರಿಯು ಅತ್ಯಂತ ಗಟ್ಟಿಯಾಗಿ ಮಾತಾಡುತ್ತದೆ 131

ಶ್ರಮಪಟ್ಟು ಕೆಲಸ ಮಾಡಿರಿ 132

ನಮ್ರತೆಯಿಂದ ನಡೆಯಿರಿ 133

ಸಮಾಧಾನವನ್ನು ಅನುಸರಿಸಿರಿ 134

ಯಾವಾಗಲೂ ಬೋಧನೆಗೆ ಒಳಗಾಗಿರಿ 136

ಸಾಧ್ಯವಾದಷ್ಟು ಮಟ್ಟಿಗೆ-ನಿಮ್ಮ ಮಾತನ್ನು ಉಳಿಸಿಕೊಳ್ಳಿ ಅಥವಾ ಅದಕ್ಕೆ ವಾಗ್ದಾನ ಮಾಡಲೇಬೇಡಿ 137

ಇತರರ ಸಮಯವನ್ನು ಗೌರವಿಸಿರಿ-ಯಾವಾಗಲೂ ಕಾಲನಿಷ್ಠೆಯುಳ್ಳವರಾಗಿರಿ 139

ದೇವರು ಹಾಗೂ ಮನುಷ್ಯನ ಮುಂದೆ ನಿರ್ದೋಷಿಯಾಗಿರಿ 141

ಜೀವಿತದಲ್ಲಿ ಆನಂದಿಸಿರಿ, ಆದರೆ ಅಸಹ್ಯವಾದ ಮಾತು ಹಾಗೂ ಮೂರ್ಖ ತನದ ಪರಿಹಾಸ್ಯವನ್ನು ತಡೆಗಟ್ಟಿರಿ 142

ಅನುಕೂಲತೆಗಳು ಹಾಗೂ ಸುಖಭೋಗಗಳಿಗಾಗಿ ಹಾತೊರೆಯಬೇಡಿರಿ 142

5. **ಬೋಧಿಸುವುದು** **149**

ದೇವರ ವಾಕ್ಯದಲ್ಲಿ ಜನರನ್ನು ಸ್ಥಿರಪಡಿಸಿರಿ 150

| | | |
|---|---|---|
| | ಶುದ್ಧವಾಗಿರಿ, ಪೂಜ್ಯಭಾವವುಳ್ಳವರಾಗಿರಿ, ನಿಷ್ಕಪಟರಾಗಿರಿ, ಹಿತಕರವಾಗಿರಿ | 151 |
| | ತಿಳಿಸಲು ಉಪದೇಶಿಸಿರಿ, ಪ್ರಭಾವ ಬೀರುವುದಕ್ಕಾಗಿ ಅಲ್ಲ | 153 |
| | ಕಷ್ಟವಾದ ವಿಷಯಗಳನ್ನು ಸಂಬೋಧಿಸಿರಿ, ಅದನ್ನು ಪ್ರೀತಿಯಿಂದ ಮಾಡಿರಿ | 154 |
| | ವಾಕ್ಯವನ್ನು ಸರಿಯಾಗಿ ವಿಭಾಗಿಸಿರಿ ಸ್ವಸ್ಥ ಬೋಧನಾ ಸಿದ್ಧಾಂತವನ್ನು ನಿಭಾಯಿಸಿರಿ | 155 |
| | ನಿಯಮದ ಮೇಲೆ ನಿಯಮವನ್ನು ನಿರ್ಮಿಸಿರಿ | 157 |
| | ದೇವರ ವಾಕ್ಯವನ್ನು ತಕ್ಕ ರೀತಿ ಸಾರಿರಿ | 158 |
| | ನೀವು ನಿಮ್ಮ "ಪ್ರಕಟನೆ"ಗಳನ್ನು ಬೋಧಿಸುವ ಮೊದಲು ಅದನ್ನು ಸ್ಥಿರೀಕರಿಸಿರಿ | 158 |
| | ಪ್ರಚಲಿತವಾಗಿ ಉಳಿಯಿರಿ–ಆದರೆ ದೈವಜ್ಞಾನ ಶಾಸ್ತ್ರ ಬಿಟ್ಟು ದಾರಿತಪ್ಪಿಹೋಗಬೇಡಿ | 160 |
| | ಜಯ ಹೊಂದಲು ಸತ್ಯವನ್ನು ವಿಸ್ತರಿಸಿರಿ | 164 |
| | ಮುಖಸ್ತುತಿ ಬೇಡ, ಸುಲಿಗೆ ಬೇಡ, ಆತ್ಮ ಅಭಿವೃದ್ಧಿಬೇಡ | 165 |
| | ಪ್ರಸಂಗ ಪೀಠದ ಸಮಯವನ್ನು ಸೈತಾನನಿಗೆ ಕೊಡಬೇಡಿ | 167 |
| | ಜನರನ್ನು ನಿಮ್ಮ ಕಡೆಗೆ ಸೆಳೆದು ಕೊಳ್ಳಬೇಡಿ | 168 |
| | ದೇಹದಲ್ಲಿ (ಸಭೆಯಲ್ಲಿ) ಭೇದಗಳನ್ನೂ ಹಾಗೂ ವಿಘ್ನಗಳನ್ನೂ ಉಂಟು ಮಾಡಬೇಡಿರಿ | 169 |
| 6. | **ಅಭಿಷೇಕಿಸುವುದು** | **173** |
| | ಜನರ ಸೇವೆಮಾಡಲು ಅಭಿಷೇಕ ಹಾಗೂ ವರಗಳು ಕೊಡಲ್ಪಟ್ಟಿವೆ | 173 |
| | ನಿಜವಾದ ನೀನು ಯಾರಂದರೆ, ನಿನಗಿರುವ ವರ ಮತ್ತು ಅಭಿಷೇಕದ ಹೊರಗೆ ಯಾವ ರೀತಿ ಇದ್ದೀಯೋ ಅದೇ | 174 |
| | ನಿನ್ನ ನಿಜವಾದ ಆತ್ಮಿಕ ಗುರಿತಿಸುವಿಕೆಯು ನೀವು ಕ್ರಿಸ್ತನಲ್ಲಿ ಯಾರು ಎಂಬುದಾಗಿರುತ್ತದೆ | 175 |
| | ಯೋಗ್ಯವಾದುದನ್ನು ಬಯಸಿರಿ, ಅನುಕರಣೆಗಳನ್ನು ಸ್ವೈರಿಸಿಕೊಳ್ಳಬೇಡಿರಿ | 176 |

| | | |
|---|---|---|
| | ಕ್ರೈಸ್ತ ಪ್ರಪಂಚದಲ್ಲಿ ಇತ್ತೀಚಿನ "ಕಲ್ಪನೆ"ಯ ಹಿಂದೆ ಓಡಬೇಡಿರಿ | 177 |
| | ನೀವು ದೇವರಿಂದ ಪಡೆಯದೆ ಹೋದ ಹೊರತು ನೀವು ಯಾವುದನ್ನೂ ಹೊಂದಲು ಸಾಧ್ಯವಿಲ್ಲ | 178 |
| | ತೀರ್ಪು ಮಾಡಲು ನಿಮ್ಮನ್ನು ಒಪ್ಪಿಸಿಕೊಡಿರಿ | 179 |
| | ಭಾವಪ್ರಧಾನವಾದ ಹಾಗೂ ಅತಿ ಹೆಚ್ಚಾದ ಭಾವೋದ್ವೇಗಗಳನ್ನು ತಡೆಗಟ್ಟಿರಿ | 180 |
| | ಮಿತಿ (ಎಲ್ಲೆ)ಗಳಿಲ್ಲ, ಆದ್ದರಿಂದ ಅಂಚಿನಿಂದ ಬೀಳಬೇಡಿರಿ | 181 |
| 7. | **ಫಲಿತಾಂಶಗಳು** | **185** |
| | ಕಸಿಮಾಡುವುದು ಅಥವಾ ಕತ್ತರಿಸುವುದು | 185 |
| | ವರಗಳು ಹೆಚ್ಚಳವಾಗಬೇಕು | 186 |
| | ಫಲವು ತಕ್ಕ ಕಾಲದಲ್ಲಿ ಬರುತ್ತದೆ, ಅದಕ್ಕಾಗಿ ಕಾಯಿರಿ | 186 |
| | ಸಾಕ್ಷ್ಯಗಳನ್ನು ಉತ್ಪ್ರೇಕ್ಷೆ ಮಾಡಬೇಡಿ, ಅದು ನಡೆದ ರೀತಿಯಲ್ಲಿಯೇ ಹೇಳಿರಿ | 187 |
| | ನಿಶ್ಚಯವಾದದ್ದು ಅಥವಾ ಅಂದಾಜು-ನಿರ್ದಿಷ್ಟವಾದದ್ದನ್ನೇ ದಯವಿಟ್ಟು ತಿಳಿಯಪಡಿಸಿರಿ | 189 |
| | ಬೇರೊಬ್ಬ ವ್ಯಕ್ತಿಯ ಕೆಲಸವನ್ನು ಒಪ್ಪಿಕೊಳ್ಳಿರಿ | 190 |
| | ದೇವರಿಗೆ ಎಲ್ಲ ಮಹಿಮೆಯನ್ನೂ ಸಲ್ಲಿಸಿರಿ-ಆತನಿಂದಲೇ ಅದೆಲ್ಲ ನಡೆಯಿತು | 191 |
| | ಹೋಲಿಕೆ ಮಾಡಬೇಡಿರಿ, ಸ್ಪರ್ಧಿಸಬೇಡಿರಿ | 191 |
| 8. | **ಅನ್ಯೋನ್ಯತೆ** | **197** |
| | ರಾಜ್ಯವನ್ನು ಕಟ್ಟುವವರಾಗಿರಿ | 198 |
| | ಇತರ ದೇವ ಸೇವಕರೊಟ್ಟಿಗೆ ಸಂಬಂಧ ಕಲ್ಪಿಸಿರಿ | 199 |
| | ಇತರ ಪಂಗಡಗಳ ಜತೆ ಅನ್ಯೋನ್ಯತೆ ಬೆಳೆಸಿರಿ | 200 |
| | ಜೊತೆ ದೇವ ಸೇವಕರಿಂದ ಕಲಿಯಿರಿ | 201 |
| | ಒಬ್ಬ ಅನುಯಾಯಿಯಾಗಿದ್ದು ಆರಾಮವಾಗಿರಿ-ಸೂಚನೆಗಳನ್ನು ಅನುಸರಿಸಿರಿ | 202 |

| | | |
|---|---|---|
| | ಗುರುತಿಸಲ್ಪಡದೆ ಇರುವುದರೊಂದಿಗೆ ಆರಾಮ ವಾಗಿರಿ | 203 |
| | ಇತರರ ವರಗಳನ್ನು ಅಭಿಷೇಕವನ್ನು, ಸೇವೆಯನ್ನು ಗೌರವಿಸಿ | 204 |
| | ಮತ್ತೊಬ್ಬ ವ್ಯಕ್ತಿಯ ಸೇವಕನನ್ನು ತೀರ್ಪು ಮಾಡಬೇಡಿರಿ | 205 |
| | ಹರಟಬೇಡಿರಿ–ನಿಮ್ಮ ಸಹೋದರನನ್ನು ಕಾಯುವವರಾಗಿರಿ | 206 |
| | ವೈಷಮ್ಯವನ್ನು ಬಿತ್ತಬೇಡಿರಿ | 208 |
| | ಅನ್ಯೋನ್ಯತೆಯು ಜೀವಿತ ಬದಲಾವಣೆಗಾಗಿ ಇದೆ | 208 |
| | ಯಾವ ಶ್ರೇಷ್ಠನಾದ ಖಳನಾಯಕನೂ ಇಲ್ಲ | 209 |
| 9. | **ಹಣ** | **213** |
| | ಹಣಕ್ಕಾಗಿ ಪ್ರೀತಿ | 213 |
| | ಹಣಕ್ಕಾಗಿ ಇದರೊಳಗೆ ಇರಬೇಡಿರಿ | 215 |
| | ಆತ್ಮಿಕವಾಗಿ ಬಿತ್ತಿರಿ, ಜನರು ಭೌತಿಕವಾಗಿ ಕೊಡಲಿ | 216 |
| | ನಿಮ್ಮ ಹಣ ಸಂಗ್ರಹವನ್ನು ಶುದ್ಧವಾಗಿ, ಪಾರದರ್ಶಕವಾಗಿ, ಹಾಗೂ ಗೌರವಾನ್ವಿತವಾಗಿಯೂ ಇಟ್ಟುಕೊಳ್ಳಿರಿ | 217 |
| | ವಿದೇಶೀ ಸಹಾಯದ ಮೇಲೆ ಆತುಕೊಳ್ಳಬೇಡಿರಿ | 218 |
| | ನಿಮ್ಮ ಯೋಜನೆಗಳ "ಬೆಲೆ ಪಟ್ಟಿಯನ್ನು ದ್ವಿಗುಣ" ಗೊಳಿಸಬೇಡಿ | 220 |
| | ದಾನಿಯ ಅಪ್ಪಣೆ ಇಲ್ಲದೆ, ನಿಧಿಯನ್ನು ಒಂದು ಯೋಜನೆಯಿಂದ ಇನ್ನೊಂದು ಯೋಜನೆಗೆ ತಿರುಗಿಸಬಾರದು | 221 |
| | ಸಮುದ್ರದಾಚೆಯ ಸೇವೆಗಳನ್ನು ಕಳವು ಮಾಡಬೇಡಿರಿ | 221 |
| | ಸೇವೆ ಮತ್ತು ವ್ಯವಹಾರವನ್ನು ಬೆರೆಸಬೇಡಿರಿ | 222 |
| | ದೇವರ ಮನೆಯು ವ್ಯಾಪಾರದ ಸ್ಥಳವಲ್ಲ–ದೇವಾಲಯದ 'ಕಳ್ಳರಾಗಬೇಡಿ' | 224 |
| | ದುರಾಶೆಯ ವಿರುದ್ಧ ಕಾವಲಾಗಿರಿ, ನೀವು ನಿಧಾನವಾಗಿ ಅದರೊಳಗೆ ಜಾರುತ್ತೀರಿ | 225 |
| | ಇತರ ಸೇವೆಗಳಲ್ಲಿ ಆರ್ಥಿಕವಾಗಿ ನೀಡಿರಿ | 227 |

10. **ಸ್ತ್ರೀಯರು** **231**
ದೆಲೀಲಳ ತೊಡೆಯ ಮೇಲೆ ಮಲಗಬೇಡಿರಿ 232
ಚಿಕ್ಕ ಕಣ್ಣುಗಳೇ ನೀವು ಹೇಗೆ ನೋಡುತ್ತೀರೆಂದು ಜಾಗರೂಕರಾಗಿರ್ರಿ 234
ಯೌವ್ವನ ಸ್ತ್ರೀಯರನ್ನು ಪೂರ್ಣ ಶುದ್ಧಭಾವದಿಂದ ಸಹೋದರಿಯರೆಂದು ನಡೆಸಿಕೊಳ್ಳಿರಿ 235
ಒಂದು ಅಂತರದಿಂದ ಬೇರೆಯಾಗಿರಿ ಆದರೆ ಸ್ತ್ರೀಯರು ಸ್ತ್ರೀಯರಿಗೆ ಸಲಹೆಗಾರರಾಗುವುದನ್ನು ಬಿಡಿರಿ 236
ಮಹಿಳಾ ಸೇವಕರನ್ನು ಸರಿಯಾಗಿ ನಡೆಸಿರಿ 237
ಅವರನ್ನು ಸಮನಾಗಿ ನಡೆಸಿರಿ, ಹೀಗಿದ್ದರೂ ಸೌಮ್ಯವಾಗಿರಿ 239
ಅವರ ಬಲಹೀನತೆಯು ನಿಮ್ಮ ಭೂಸ್ಫೋಟಕ-ದೂರ ಇರಿ 239
ಒಂದು ವೈಯಕ್ತಿ ಸ್ವಯಂ ರಕ್ಷಣಾ ಯೋಜನೆಯೊಂದನ್ನು ಹೊಂದಿರಿ 241
ಗುಡ್ ಬೈ! (ಶುಭವಾಗಲಿ), ಪವಿತ್ರವಾದ ಮುತ್ತು 242
ಮಹಾ ಜಯೋತ್ಸವ ಅಥವಾ ಬಿಕ್ಕಟ್ಟಿನ ಕ್ಷಣಗಳಲ್ಲಿ ಎರಡರಷ್ಟು ಕಾವಲಿನಲ್ಲಿರ್ರಿ 244
ನಿಮ್ಮ ವಾತ್ಸಲ್ಯಗಳನ್ನು ಕಾಯಿರಿ 245
ಆತ್ಮ ಸಂಬಂಧ (ಸೇತುವೆ)ಗಳನ್ನು ವಿವೇಚಿಸಿರಿ ಅಥವಾ ನಾಶಮಾಡಿರಿ 246

11. **ಕೀರ್ತಿ** **251**
ಒಳ್ಳೆಯ ಹೆಸರು ಪ್ರಾಮುಖ್ಯವಾದದ್ದು, ಆದರೆ ಕೀರ್ತಿಯಲ್ಲ 252
ಮನುಷ್ಯರನ್ನು ಸಂತೋಷಪಡಿಸುವವರಾಗಬೇಡಿರಿ 253
ಸ್ವಯಂ ಪದೋನ್ನತಿಯಲ್ಲಿ ಒಳಗೊಳ್ಳಬೇಡಿರಿ ದೇವರೇ ಪ್ರಗತಿಯನ್ನು ಕೊಡಲಿ 254
ಜನಪ್ರಿಯತೆಯು ಫಲಭರಿತ ಸ್ಥಿತಿಯ ಗುರುತಿಸುವಿಕೆಯಲ್ಲ 255

ಜನರು ನಿಮ್ಮ ಬಗ್ಗೆ ಏನು ಯೋಚಿಸುತ್ತಾರೋ ಅವರಿಂದ ನಿಮ್ಮನ್ನು ಪ್ರತ್ಯೇಕಿಸಲ್ಪಡಿರಿ 256

ಮನುಷ್ಯರ ಮುಂದಿನ ನಿಮ್ಮ ನಿಲುವಿಗಿಂತಲೂ ದೇವರ ಮುಂದೆ ನಿಮ್ಮ ನಿಲುವು ಬಹು ಪ್ರಾಮುಖ್ಯವಾದದ್ದು 257

ನಿಮ್ಮನ್ನು "ಮೂರ್ತಿ"ಯಾಗಿ ಮಾಡದೆ ಅಥವಾ ನಿಮಗೆ "ಪದೋನ್ನತಿ" ಮಾಡದಂತೆ ಜನರಿಗೆ ಬೋಧಿಸಿರಿ 258

ನೀವು ಎಷ್ಟು "ದೊಡ್ಡ"ವರಾಗಿದ್ದರೂ ಯಾವಾಗಲೂ ಸಮನಾದ ನೆಲದ ಮೇಲೆ ನಡೆಯಿರಿ 259

ನಾನು ಎಷ್ಟು ಹೆಚ್ಚಾಗಿ ಕೊಡಲ್ಪಡುತ್ತೇನೋ, ನಾನು ಅಷ್ಟೂ ಹೆಚ್ಚಾಗಿ ಜವಾಬ್ದಾರನಾಗಿರಬೇಕು 260

ನನ್ನನ್ನು ಆತನು ಎಷ್ಟು ಎತ್ತರಕ್ಕೆ ಕೊಂಡೊಯ್ಯುತ್ತಾನೋ ಅಷ್ಟು ಕೆಳಕ್ಕೆ ನಾನು ಹೆಜ್ಜೆಯಿಡಬೇಕು 260

ನಾನು ಕಡಿಮೆಯಾಗಿ ತಿಳಿದಷ್ಟೂ ಇದು ಉತ್ತಮವಾಗಿರುತ್ತದೆ 261

“ದೇವರ ಸಂಕೀರ್ಣತೆ”ಯ ಬಗ್ಗೆ ಎಚ್ಚರವಾಗಿರಿ 262

# ಪೀಠಿಕೆ

ಕರ್ತನಾದ ಯೇಸುಕ್ರಿಸ್ತನ ಸೇವಕನಾಗಿರುವುದು ಬಹು ಉತ್ತೇಜಕವಾದದ್ದು, ಬಹು ಪ್ರತಿಫಲ ನೀಡುವಂಥದ್ದು ಹಾಗೂ ಅತ್ಯಂತ ಹೆಚ್ಚಿನ ಅಪಾಯಕಾರಕ ಅಂಶಗಳಲ್ಲೊಂದು ಒಳಗೊಳ್ಳುವಂಥದ್ದೂ ಆಗಿರುತ್ತದೆ. ಜೀವಿತ ಮತ್ತು ಸೇವೆಯಲ್ಲಿ ನಮ್ಮ ನಡತೆಗಾಗಿ ಅಡಚಣೆಯು ಇಡಲ್ಪಟ್ಟಿದೆ. ನಾವು ಸ್ಥಿರವಾಗಿ ನಡೆಯುವ ಮಟ್ಟಗಳು ಸುಲಭವಾದವುಗಳಲ್ಲ. ಕೆಲವು ಸ್ಥಿತಿಗಳಲ್ಲಿ, ಹಿಂಸೆಯ ಪರಿಣಾಮಗಳು ಹಾಗೂ ಪ್ರತಿಧ್ವನಿಗಳು ನಮ್ಮ ಸ್ವಂತಕ್ಕಾಗಿ ಮಾತ್ರವಲ್ಲ, ಕ್ರಿಸ್ತನ ದೇಹಕ್ಕೆ – ನೂರಾರು ಮಂದಿಗೆ ಬಹುಶಃ ನಮ್ಮ ಜೀವಿತಗಳು ಹಾಗೂ ಸೇವೆಗಳಿಂದ ಪ್ರಭಾವಿತರಾಗುವ ಮಿಲಿಯಗಟ್ಟಳೆ ಜನರಿಗೆ ಬಹು ಕಠೋರವಾಗಿರುತ್ತದೆ. ಯಾಕೋಬನು ಕರ್ತನು ನಮ್ಮನ್ನು ಉನ್ನತ ಮಟ್ಟಕ್ಕೆ ಎತ್ತಿ ಹಿಡಿಯುತ್ತಾನೆ ಎಂದು ಹೇಳುತ್ತಾನೆ. *"ನನ್ನ ಸಹೋದರರೇ, ಬೋಧಕರಾದ ನಮಗೆ ಕಠಿಣವಾದ ತೀರ್ಪು ಆಗುವುದೆಂದು ತಿಳಿದುಕೊಂಡು ಬಹುಮಂದಿ ಬೋಧಕರಾಗಬೇಡಿರಿ"* (ಯಾಕೋಬನು 3:1).

ಇದುವರೆಗೂ ನನ್ನ ಪ್ರಯಾಣದಲ್ಲಿ ನಾನು ಯಾವ ರೀತಿಯಲ್ಲೂ ಪರಿಪೂರ್ಣನಲ್ಲ ಎಂಬುದು ನನಗೆ ತಿಳಿದಿದೆ. ನಾನು ದಾರಿಯುದ್ದಕ್ಕೂ ನನ್ನ ಸೋಲುಗಳ, ತಪ್ಪುಗಳ, ಬೀಳುವಿಕೆಗಳ ಮತ್ತು ಜಜ್ಜುವಿಕೆಗಳಲ್ಲಿ ಪಾಲು ಹೊಂದಿರುತ್ತೇನೆ. ನನ್ನನ್ನು ಮುಂದುವರಿಸುವುದು ಕೇವಲ ದೇವರ ಕರುಣೆ ಹಾಗೂ ದೇವ ಜನರ ಬೆಂಬಲವಾಗಿರುತ್ತದೆ. ಲೋಕದೆಲ್ಲಾಕಡೆ, ಕ್ರಿಸ್ತನ ದೇಹದಲ್ಲಿ ಏನಾಗುತ್ತಿದೆ ಎಂದು ನಾನು ನೋಡುತ್ತಿರುವಲ್ಲಿ, ನಾನು ಮತ್ತೊಂದು ಸೋಲುವಿಕೆ ದೇವರ ಬೇರೊಬ್ಬ ಸೇವಕನ ಅಥವಾ ಸೇವಕಿಯ ತಪ್ಪು ನಡವಳಿಕೆಯ ಬಗ್ಗೆ ನಾನು ಕೇಳುವಾಗ, ಪ್ರತಿಸಾರಿಯೂ ನನ್ನ ಹೃದಯವು ನೋಯುತ್ತದೆ. ಕೆಲವು ನಾನು ಮಾಡಿದ ತಪ್ಪುಗಳು, ನಾನು ನೋಡುವ ಇತರರ ತಪ್ಪುಗಳು, ಹೇಗೆ ತಡೆಯಬಹುದೆಂದು ನಾವು ಮೊದಲೇ ಎಚ್ಚರಿಸಲ್ಪಟ್ಟರೆ–ದೈವಿಕ ಬುದ್ಧಿಮಾತನ್ನು ಯಾರಾದರೂ ಹಂಚಿಕೊಂಡರೆ, ತೊಂದರೆಯಿಂದ ತಪ್ಪಿಸಿಕೊಳ್ಳುವಂತೆ ನಾವು ದೂರವಾಗಿರಲು ಯಾರಾದರೂ ನಡಿಸಿದರೆ, ಅಂತವುಗಳನ್ನು ತಡೆಯಲು ಸಾಧ್ಯ. ವಾಸ್ತವವಾಗಿ ನಾವು ಗಮನ ಹರಿಸಬೇಕಾದ ದೈವಿಕವಾದ

ಪೂರ್ಣ ಸೂಚನೆಗಳನ್ನು ದೇವ ಸೇವಕರಿಗಾಗಿ ಹೊಸ ಒಡಂಬಡಿಕೆಯು ಹೊಂದಿದೆ, ಹಾಗೂ ನಾವು ಹಾಗೆ ಮಾಡಿದರೆ, ನಾವು ನಮ್ಮನ್ನು ಹಾಗೂ ನಮ್ಮ ಜೀವಿತಗಳಿಂದ ಸ್ಪರ್ಶಿಸಲ್ಪಟ್ಟ ಸಾವಿರಾರು ಮಂದಿಯನ್ನು ರಕ್ಷಿಸಲು ಸಾಧ್ಯ. ಇದು ನನಗೂ ಹಾಗೂ ದೇವರ ಸೇವಕರಾಗಿ ನಮ್ಮೆಲ್ಲರಿಗೂ ಸಹಾಯ ಮಾಡಲು ಈ ಉದ್ದೇಶದಿಂದಲೇ ಈ ಪುಸ್ತಕವು ಬರೆಯಲ್ಪಟ್ಟಿದೆ.

ಈ ದಿನ ಸಭೆಯಲ್ಲಿ, ಬಹಳಷ್ಟು ಮಂದಿ ಒಳಕ್ಕೆ ಹೆಜ್ಜೆ ಇಡುತ್ತಿರುವಲ್ಲಿ, ದೇವರ ಶಕ್ತಿ, ಅಭಿಷೇಕ ಸಂಕೇತಗಳು ಮತ್ತು ಅದ್ಭುತಗಳು ಮತ್ತು ಸ್ವಸ್ಥತೆಗಳು, ಪ್ರವಾದನೆ ಹಾಗೂ ಅತಿ ಮಾನುಷತೆ ಇವುಗಳ ರುಜುವಾತುಪಡಿಸುವಿಕೆಯು ದೈವಿಕ ಮಟ್ಟದ ಜೀವಿತದ ಹಾಗೂ ನಡತೆಯ ಒಂದು ಕರೆಯು ಬಹುಶಃ ಹೆಚ್ಚು ಹೆಸರು ವಾಸಿಯಾಗುವುದಿಲ್ಲ. ಉಪದೇಶಕರು ಹಾಗೂ ದೇವ ಸೇವಕರು ಪ್ರಸಂಗ ಪೀಠದ ಆಚೆ ನಡೆಸುವ ಜೀವಿತಕ್ಕಿಂತ ಅವರ ಹಿಂದೆ ಕಳೆಯುವ ಒಂದು ತಾಸಿಗಾಗಿ ಬೇಡಿಕೆಯಲ್ಲಿದ್ದಾರೆ, ಹೀಗಿದ್ದರೂ ಪೌಲನು ನಾವೆಲ್ಲರೂ ಅನುಸರಿಸಬೇಕಾದ ಏನೋ ಒಂದನ್ನು ಬೋಧಿಸಿದನು ಹಾಗೂ ಮಹಾ ಅದ್ಭುತಗಳ ಕಾರ್ಯ ಮಾಡಿದನು. ಅವನು *"ನಾನು ಕ್ರಿಸ್ತನನ್ನು ಅನುಸರಿಸುವಂತೆಯೇ ನೀವು ನನ್ನನ್ನು ಅನುಸರಿಸುವವರಾಗಿರಿ"* (I ಕೊರಿಂಥದವರಿಗೆ 11:1). ಅವನು ಕೇವಲ ಜ್ಞಾನಕ್ಕೆ ಹಾಗೂ ಅಭಿಷೇಕಕ್ಕಾಗಿ ಗಮನ ಕೊಡಲು ಕರೆದದ್ದು ಮಾತ್ರವಲ್ಲ, ಆದರೆ ಅವನು ಮಾಡಿದ ಸೇವೆಯಲ್ಲಿ, ತಾನು, *"ಸಹೋದರರೇ, ನೀವೆಲ್ಲರು ನನ್ನನ್ನು ಅನುಸರಿಸುವವರಾಗಿರಿ ಮತ್ತು ನಾನು ನಿಮಗೆ ತೋರಿಸಿದ ಮಾದರಿಯ ಪ್ರಕಾರ ನಡೆದುಕೊಳ್ಳುವವರನ್ನು ಲಕ್ಷ್ಯಕ್ಕೆ ತಂದುಕೊಳ್ಳಿರಿ."* (ಫಿಲಿಪ್ಪಿಯರಿಗೆ 3:17) ಎಂದು ಹೇಳುವಷ್ಟು ಧೈರ್ಯ ಹೊಂದಿರುತ್ತಾನೆ. ಕ್ರಿಸ್ತನ ಸೇವಕರಾಗಿ, ಸೇವೆಯ ಮಟ್ಟಗಳನ್ನು ಮರು ಸ್ಥಾಪನೆ ಮಾಡಲು ಇದು ನಮಗೆ ಸಮಯವಾಗಿದೆ. "ದೇವರಿಗೆ ಸಮರ್ಪಕವಾದ ಆರಾಧನೆಯನ್ನು ಭಕ್ತಿಯಿಂದಲೂ, ಭಯದಿಂದಲೂ ಮಾಡೋಣ," (ಇಬ್ರಿಯರಿಗೆ 12:28)

**"ನಾವು ಪ್ರಯಾಸಪಟ್ಟು ಮಾಡಿದವುಗಳನ್ನು ನೀವು ಕಳಕೊಳ್ಳದೆ ಪೂರ್ಣ ಫಲವನ್ನು ಹೊಂದುವಂತೆ ಜಾಗರೂಕರಾಗಿರಿ"** (2 ಯೋಹಾನ 1:8).

ಆಶೀರ್ವಾದಗಳು!
ಆಶಿಶ್ ರಾಯ್‌ಚೂರ್

# ಅಂಗೀಕಾರಗಳು


ನಾನು 13ನೇ ವಯಸ್ಸಿನಲ್ಲಿ ಪ್ರಸಂಗಿಸಲಾರಂಭಿಸಿದೆನು ಬೆಳೆಯುತ್ತಾ, ನಾನು ಕ್ರೈಸ್ತ್ರೀಯ ಜೀವಿತದ ಹಾಗೂ ಸೇವೆಯ ಬಗ್ಗೆ ದೇವರೊಂದಿಗೆ ಪ್ರಯಾಣಮಾಡುತ್ತಾ ಹಲವಾರು ವಿಷಯಗಳನ್ನು ಕಲಿಯಬೇಕಾಗಿತ್ತು. ಇದಕ್ಕೆ ಹೆಚ್ಚಿನದಾಗಿ, ಆರಂಭದಲ್ಲಿ ನಾನು ಬೆಳೆಸಿಕೊಂಡ ಒಂದು ಪ್ರಮುಖವಾದ ರೂಢಿ ಏನೆಂದರೆ ಕ್ರೈಸ್ತೀಯ ಒಳ್ಳೆಯ ಪುಸ್ತಕಗಳನ್ನು ಓದುವುದು. ಈ ಪುಸ್ತಕಗಳು ಹಲವು ದೇವ ಸೇವಕರ ಹಾಗೂ ಬೋಧನೆಗಳು ಹಾಗೂ ಉಪದೇಶಗಳನ್ನು ಆಲಿಸುವುದರೊಂದಿಗೆ ಹಾಗೂ ಜನರನ್ನು, ಸಭೆಗಳನ್ನು ಹಾಗೂ ಸೇವೆಗಳನ್ನು ಗಮನಿಸುವುದರೊಂದಿಗೆ ಸೇವೆಗಾಗಿ ಒಂದು ತರಬೇತಿಯ ಒಂದು ವಿಸ್ತರಣೆಯ ಆಧಾರವಾಯಿತು. ಆ ಪುಟ್ಟ ಆರಂಭದಿಂದ 30 ವರ್ಷಗಳಾಗಿವೆ ಹಾಗೂ ನಾನು ಇನ್ನೂ ಕಲಿಯುತ್ತಿದ್ದೇನೆ. ನಾನು ಯಾರ ಮುಖಾಂತರ ಪೋಷಿಸಲ್ಪಟ್ಟೆನೋ, ಆ ಹಲವಾರು ಮಂದಿ ದೇವ ಸೇವಕರಿಗೆ ನಾನು, ಅದು ಒಂದು ಪರೋಕ್ಷ ಮಾರ್ಗದಲ್ಲಾಗಿದ್ದರೂ, ಅವರ ಪುಸ್ತಕಗಳನ್ನು ಓದುವುದರಿಂದ, ಅವರ ಸಂದೇಶಗಳನ್ನು ಆಲಿಸುವುದರಿಂದ ಹಾಗೂ ಸ್ವಲ್ಪ ಅಂತರದಿಂದ ಅವರ ಜೀವಿತಗಳನ್ನು ಗಮನಿಸುವುದರಿಂದ ಋಣಿಯಾಗಿರುತ್ತೇನೆಂದು ನನಗೆ ತಿಳಿದಿದೆ. ಅವರಲ್ಲಿ ಹಲವರನ್ನು ನಾನು ವೈಯಕ್ತಿಕವಾಗಿ ಪರಲೋಕದ ಈ ಕಡೆ ಎಂದಿಗು ಸಂಧಿಸದೆ ಇದ್ದರೂ, ನನ್ನ ಹೃದಯವು ಯಾವಾಗಲೂ ಅವರಿಗೆ ಕೃತಜ್ಞತೆಯುಳ್ಳದ್ದಾಗಿರುತ್ತದೆ. ಈ ಪುಸ್ತಕದಲ್ಲಿ ಏನು ಹಂಚಿಕೊಳ್ಳಲ್ಪಟ್ಟಿದೆಯೋ ಅದು ದೇವರೊಂದಿಗೆ ನನ್ನ ವೈಯಕ್ತಿಕ ಪ್ರಯಾಣದ ಹಾಗೂ ಹಲವಾರು ದೇವ ಸೇವಕರಿಂದ ನಾನು ಏನು ಕಲಿತೆನೋ ಅದರ ಸಂಗ್ರಹಕಾರಕ ಫಲಿತಾಂಶವಾಗಿದೆ.

# ಸಮರ್ಪಣೆ

ಈ ದಿನ ಲೋಕದೆಲ್ಲಾಕಡೆ ದೇವರು ಏನು ಮಾಡುತ್ತಿದ್ದಾನೆ ಎಂಬುದನ್ನು ನೋಡುವುದು ಅತಿಶಯವಾಗಿದೆ. ಆತನು ಪವಿತ್ರಾತ್ಮನ ಬಲದಿಂದ ಅಭಿಷೇಕಿಸಲ್ಪಟ್ಟ ಆತನ ವಾಕ್ಯದ ಜ್ಞಾನದ ಪ್ರಕಟನೆಯೊಂದಿಗೆ ತುಂಬಲ್ಪಟ್ಟ, ಹಲವಾರು ಯುವಕ ಮತ್ತು ಯುವತಿಯರನ್ನು ಮೇಲಕ್ಕೆತ್ತಿ ಅವರನ್ನು ಸಮುದಾಯಗಳು, ನಗರಗಳು ಮತ್ತು ರಾಷ್ಟ್ರಗಳಲ್ಲಿ ಪರಿಣಾಮ ಹೊಂದುವಂತೆ ಕಳುಹಿಸುತ್ತಾನೆ. ಅದರಲ್ಲಿ ಎಲ್ಲಾ ಕಡೆಯಲ್ಲೂ ಸಂಭವಿಸುತ್ತಿರುವ ಆತ್ಮನ ವೇಗವರ್ಧಿಸಲ್ಪಟ್ಟ ಕೆಲಸದ ಒಂದು ತುರ್ತುಗ್ರಹಿಕೆಯು ಉಂಟಾದಂತಿದೆ. ಹಿಂದಿನ ಸಂತತಿಗಳನ್ನು ಈ ದಿನ ಕಲಿಯಲು, ಅರ್ಥಮಾಡಿಕೊಳ್ಳಲು ಹಾಗೂ ಅದು ಏನು ತೆಗೆದುಕೊಂಡಿದೆ? ಕ್ರೈಸ್ತೀಯ ಯುವ ಜನರು ಈ ಸಂಗತಿಗಳಲ್ಲಿ ಬಹು ಶೀಘ್ರದಲ್ಲಿ ಹಾಗೂ ಸುಲಭವಾಗಿ ಹೆಜ್ಜೆ ಇಡುತ್ತಾರೆ. ಆದರೆ ಇದರೊಂದಿಗೆ, ದೈವಿಕ ಜ್ಞಾನ ಹಾಗೂ ಪ್ರಾಯೋಗಿಕ ತಿಳುವಳಿಕೆಯ ಮೇಲೆ ಹಾದು ಹೋಗುವ ಅಗತ್ಯತೆಯು ಕಾಣಿಸಿಕೊಳ್ಳುತ್ತದೆ, ಇದರಿಂದ ಮೇಲಕ್ಕೆ ಎಳೆಯಲ್ಪಟ್ಟವರು ಹಿಂದಿನ ಸಂತತಿಯವರು ಮಾಡಿದ ಅದೇ ತಪ್ಪುಗಳನ್ನು ಮಾಡಲಿಕ್ಕಿಲ್ಲ ಈ ಪುಸ್ತಕವು ಕ್ರೈಸ್ತೀಯ ಸೇವೆಯಲ್ಲಿ ಪುರುಷ ಮತ್ತು ಸ್ತ್ರೀಯರ ಹೊಸ ಹಾಗೂ ಮುಂದುವರಿಯುತ್ತಿರುವ ಸಂತತಿಗಳಿಗಾಗಿ ಪ್ರತಿಷ್ಟಿಸಲ್ಪಟ್ಟಿದೆ. ನಿಮ್ಮ ಜೀವಿತಗಳು ಹಾಗೂ ಸೇವೆಗಳು ಅಭಿವೃದ್ಧಿಹೊಂದಿ, ಆತನ ರಾಜ್ಯಕ್ಕಾಗಿ ನೋವು, ನಾಚಿಕೆ, ವಿಳಂಬಗಳು ಹಾಗೂ ಸುತ್ತು ಮಾರ್ಗಗಳು ಮುಂತಾದ ಹಿಂದಿನ ಸಂತತಿಯವರು ಅನುಭವಿಸಿದಂಥವುಗಳಿಲ್ಲದ ಹೆಚ್ಚಾದ ಫಲಗಳನ್ನು ಫಲಿಸುವಂತಾಗಲಿ.

# ಎ.ಪಿ.ಸಿ. ತಂಡವೇ ನಿಮಗೆ ಧನ್ಯವಾದ

ನಾನು ವಿಶೇಷವಾಗಿ ನನ್ನ ತಂಡದ ಸದಸ್ಯರನ್ನು ಅಂದರೆ ಸಭಾಪಾಲಕರು, ಸೇವಾ ನಾಯಕರು, ಸ್ವಯಂ ಸೇವಾ ತಂಡಗಳು ಮುಂತಾದ ಬೆಂಗಳೂರಿನ ಆಲ್ ಪೀಪಲ್ಸ್ ಸಭೆಯಲ್ಲಿ ಹಾಗೂ ನಮ್ಮ ಹೊರ ಸಂಪರ್ಕ ಸಭೆಗಳಲ್ಲಿ ಸೇವೆ ಮಾಡುವ ಎಲ್ಲರನ್ನೂ ಪ್ರಶಂಶಿಸುತ್ತೇನೆ. ನಿಮ್ಮೆಲ್ಲರೊಂದಿಗೆ ಕೆಲಸ ಮಾಡಲು ಹಾಗೂ ದೇವರ ರಾಜ್ಯದಲ್ಲಿ ಒಟ್ಟಾಗಿ ದುಡಿಯುವುದು ಒಂದು ಸದಾವಕಾಶವಾಗಿದೆ. ದೇವರ ಬಗ್ಗೆ ಎಡೆ ಬಿಡದೆ ಹೆಚ್ಚಾಗಿ ಹಸಿವೆಯಿಂದಿರುವ, ದೇವರಲ್ಲಿ ತಾವು ಹೊಂದಿರುವವುಗಳಲ್ಲಿ ಒತ್ತಡ ಹಾಕುವ, ಹಾಗೂ ಆತನ ರಾಜ್ಯಕ್ಕಾಗಿ ತಮ್ಮ ಪ್ರತಿಶತ ನೂರನ್ನು ಕೊಡುವ ಅತ್ಯುತ್ತಮವಾದ, ಭಾವೈಕ್ಯತೆ ಹಾಗೂ ಶುದ್ಧತ್ವವನ್ನು ಅನುಸರಿಸುವ ಜನರೊಂದಿಗೆ ಇರುವುದು ಅಂಥಾ ಉಲ್ಲಾಸಕರವಾಗಿರುತ್ತದೆ. ನೀವು ಒಂದು ಅತಿಶಯವಾದ ತಂಡವಾಗಿರುತ್ತೀರಿ! ನಿಮ್ಮ ತಂಡದಲ್ಲಿ ಇರುವ ಅದ್ಭುತವಾದ ಅವಕಾಶಕ್ಕಾಗಿ ನಿಮಗೆ ಧನ್ಯವಾದ!



# ವೈಯುಕ್ತಿಕ ಜೀವಿತ

“ಯಾಕೆಂದರೆ, ಸಭಾಧ್ಯಕ್ಷನು ದೇವರ ಮನೆ ವಾರ್ತೆಯವನಾಗಿರುವುದರಿಂದ ನಿಂದಾ ರಹಿತನಾಗಿರಬೇಕು; ಅವನು ಸ್ವೇಚ್ಛಾಪರನಾದರೂ, ಮುಂಗೋಪಿಯಾದರೂ, ಕುಡಿದು ಜಗಳ ಮಾಡುವವನಾದರೂ, ಹೊಡೆದಾಡುವವನಾದರೂ ನೀಚ ಲಾಭವನ್ನು ಅಪೇಕ್ಷಿಸುವವನಾದರೂ ಆಗಿರದೆ ಅತಿಥಿ ಸತ್ಕಾರ ಮಾಡುವವನೂ ಒಳ್ಳೇಯದನ್ನು ಪ್ರೀತಿಸುವವನೂ ಸ್ವಸ್ಥಚಿತ್ತನೂ ನ್ಯಾಯವಂತನೂ ದೇವಭಕ್ತನೂ ಜಿತೇಂದ್ರಿಯನೂ ಆಗಿರಬೇಕು.”

(ತೀತನಿಗೆ 1:7,೮)

## ಅಧ್ಯಾಯ 1

# 1

# ವೈಯಕ್ತಿಕ ಜೀವಿತ

ಭಾನುವಾರ ಆರಾಧನೆಗಳು, ಪ್ರಾರ್ಥನಾ ಕೂಟಗಳು ವಾರಾಂತ್ಯ ಸೆಮಿನರಿಗಳು ಅಥವಾ ಕ್ರೈಸ್ತೀಯ ಹೋರಾಟಗಳು ಹಾಗೂ ಸಮ್ಮೇಳನಗಳಲ್ಲಿ ನಾವು ತೋರುವ ಉತ್ತಮ ಪ್ರದರ್ಶನಕ್ಕಿಂತ ಕ್ರೈಸ್ತೀಯ ಸೇವೆಯು ಹೆಚ್ಚಿನದಾಗಿರುತ್ತದೆ. ಇದು ಜನರು ನಮ್ಮನ್ನು ಆಲಿಸಲು ಹಿಂದಕ್ಕೆ ಬರುತ್ತಿರುವಂತೆ, ಅವರನ್ನು ಉತ್ತೇಜಿಸಿ, ಪ್ರಭಾವಿತರನ್ನಾಗಿ ಮಾಡಲು ನಾವು ಮಾಡುವ ವಾಕ್ಚಾತುರ್ಯದ ಭಾಷಣ ಅಥವಾ ಸ್ಫೂರ್ತಿ ನೀಡುವ ಮಾತುಗಳಗಿಂತಲೂ ಹೆಚ್ಚಿನದಾಗಿರುತ್ತದೆ. ಸೇವೆಯು ವಾಸ್ತವವಾಗಿ ದೇವರು ನಮ್ಮಲ್ಲಿ ವೈಯಕ್ತಿಕವಾಗಿ ಏನು ಮಾಡುತ್ತಾನೋ ಅದರ ಮಿತಿ ಮೀರುವಿಕೆಯಾಗಿರುತ್ತದೆ. ನಾವು ಸೇವೆಯಲ್ಲಿ ಏನಾದರೂ ಮಾಡುವುದಾದರೆ, ಅದು ಸೇವೆಯಲ್ಲಿ ದೇವರೊಂದಿಗಿನ ನಮ್ಮ ವೈಯಕ್ತಿಕ ನಡೆಯ ಮಿತಿಮೀರುವಿಕೆಯಾಗಲಾರದು, ಆಗ ಅದು ಕೇವಲ ಮತ್ತೊಂದು ಅಭಿವೃದ್ಧಿಯ ಕಾರ್ಯಚರಣೆಯಾಗುತ್ತದೆ, ಒಂದು ಅಗ್ಗದ ಸ್ವಸಹಾಯದ ಪ್ರೇರಣಾತ್ಮಕ ಮಾತು ಅಥವಾ ಕೇವಲ ಮತ್ತೊಂದು ಘಟನೆಯ ಯಾವುದೇ ರಕ್ಷಿಸಲ್ಪಡದ ಒಬ್ಬ ವ್ಯಕ್ತಿಯು ಮಾಡಬಹುದಾದ ನಿರ್ವಹಣ ಚಟುವಟಿಕೆಯಾಗಿರುತ್ತದೆ.

ಸೇವಕರಾದ ನಮ್ಮಲ್ಲಿ ಹಲವರು, ನಮ್ಮ ಸೇವೆಯ ಉದ್ದೇಶವು ಸಣ್ಣದಾಗಿ ನಾವು ಇನ್ನೂ ಚೆನ್ನಾಗಿ ತಿಳಿಯದೆ ಇರುವಾಗ ಆರಂಭದ ದಿನಗಳಲ್ಲಿ ಪರಿಶ್ರಮದ ದುಡಿತ ಹೊಂದುವ ಪ್ರೇರಣೆ ಹೊಂದುತ್ತೇವೆ. ನಾವು ಪರಿಶ್ರಮದಿಂದ ಸತ್ಯವೇದ ಓದುತ್ತೇವೆ, ಉದ್ದವಾದ ಪ್ರಾರ್ಥನೆ ಮಾಡುತ್ತೇವೆ. ನಮ್ಮ ಸೇವೆ ಆರಂಭವಾಗುವುದಕ್ಕಾಗಿ ಏನೇನು ಮಾಡುವ ಅಗತ್ಯವಿದೆಯೋ ಅಷ್ಟನ್ನೂ ನಾವು ಮಾಡುತ್ತೇವೆ. ಆದರೆ ಒಮ್ಮೆ ನಾವು ಉತ್ತಮವಾಗಿ ಸ್ಥಾಪಿಸಲ್ಪಟ್ಟು ಒಂದು ಹೆಸರು ಮತ್ತು ಕೀರ್ತಿಯನ್ನು ಸಂಪಾದಿಸಿಕೊಂಡಾಗ ಗುಂಪು ಗುಂಪು ಜನರು ನಮ್ಮ ಆರಾಧನೆಗಳಿಗೆ ಬರುತ್ತಾರೆ, ನಮ್ಮ ಸ್ವಂತ ವೈಯಕ್ತಿಕ ಜೀವಿತಗಳಲ್ಲಿ ಎಲ್ಲಿ ಹೆಚ್ಚು

ಪ್ರಾಮುಖ್ಯವಾಗಿ ಇದು ಇರುತ್ತದೋ, ಅಲ್ಲಿ ವಿಶೇಷವಾಗಿ ಉದಾಸೀನತೆ ಉಂಟಾಗುವುದು ಬಹು ಸುಲಭವಾಗಿರುತ್ತದೆ.

ನೀತಿ ಸಿದ್ಧಾಂತವು ನೈತಿಕ ಸಂಕೇತ, ಮೌಲ್ಯತೆಗಳು ಹಾಗೂ ತತ್ವಗಳೊಂದಿಗೆ ಕಾರ್ಯಮಾಡುತ್ತದೆ. ಒಂದು ಗೌರವದ ಸಂಕೇತವೂ ಚರ್ಚಿಸಲ್ಪಡುವಾಗ ಹಾಗೂ ದಾಖಲಾಗುವಾಗ, ನೀತಿ ಸಿದ್ಧಾಂತದ ಮಟ್ಟಗಳು ಅವುಗಳನ್ನು ಉಳಿಸಿಕೊಳ್ಳಲು ಶಕ್ತಿಯನ್ನು ಒದಗಿಸುವುದಿಲ್ಲ. ನೈತಿಕ ಮೌಲ್ಯತೆಗಳು ಹಾಗೂ ತತ್ವಗಳಿಗೆ ಅಂಟಿಕೊಳ್ಳಲು ಶಕ್ತಿಯು ಪ್ರತಿಯೊಬ್ಬ ವ್ಯಕ್ತಿಯಿಂದ ಬರುತ್ತದೆ. ನಮಗೆ ನೈತಿಕವಾಗಿ ಸತ್ಯತೆಯಲ್ಲಿ ನಡೆಯಲು ನಮ್ಮ ಶಕ್ತಿಯು ಕರ್ತನ ಮೇಲೆ ನಮ್ಮ ಆತುಕೊಳ್ಳುವಿಕೆಯಿಂದ ಹಾಗೂ ಕೃಪೆಯ ಮುಖಾಂತರ ಬರುತ್ತದೆ. ಆತನು ಒದಗಿಸುತ್ತಾನೆ. ದೇವರೊಂದಿಗೆ ತನ್ನ ವೈಯಕ್ತಿಕ ನಡೆಯನ್ನು ತೆಗೆದುಕೊಳ್ಳುವ ಒಬ್ಬ ಕ್ರೈಸ್ತ ಸೇವಕನಿಗೆ/ಸೇವಕಿಗೆ ಯಾವ ಗೌರವದ ಸಂಕೇತವಾಗಲಿ, ನೈತಿಕ ಸಿದ್ಧಾಂತವಾಗಲಿ, ಯಾವ ವಿವೇಕವುಳ್ಳ ಸಮಾಲೋಚನೆಯಾಗಲಿ ಸಹಾಯ ಮಾಡಲಾಗುವುದಿಲ್ಲ. ಇದು ನಮ್ಮೊಳಗಿಂದ ಬರಬೇಕು. ದೇವರನ್ನು ಅನುಸರಿಸಲು ಆಳವಾದ ಆಶೆಯು ಹಾಗೂ ಖಾಸಗಿ ಜೀವಿತದಲ್ಲಿ ಒಬ್ಬರು ಗಣನೆಗೊಳಪಡಲು, ಹೊರಗಿನ ಮೋಸಕ್ಕೆ ಒಳಪಡಲಾಗುವುದಿಲ್ಲ, ಆದರೆ ದೇವರ ಪಟ್ಟು ಹಿಡಿತದಲ್ಲಿ ಒಂದು ಹೃದಯದಿಂದ ಆಳವಾಗಿ ಒಳಗಿನಿಂದ ಸ್ವಯಂ ಪ್ರೇರಿತವಾಗಿ ಬರಬೇಕಾಗುತ್ತದೆ. ನಾವು ಚರ್ಚಿಸುವ ಮಟ್ಟಗಳು, ನಾವು ನಮ್ಮ ವೈಯಕ್ತಿಕ ಜೀವಿತಗಳಲ್ಲಿ ನಿಭಾಯಿಸಲು, ವೈಯಕ್ತಿಕವಾಗಿ ನಾವು ಲೆಕ್ಕಾಚಾರವಾಗಿ ಹಿಡಿದುಕೊಳ್ಳಬೇಕಾದ ಅಂಶಗಳು ಇಲ್ಲವೆ.

## ರಹಸ್ಯವಾದ ಸ್ಥಳದಲ್ಲಿ ಪ್ರತಿದಿನವೂ ಸಮಯ ನಿಗದಿ ಮಾಡಬೇಕು

**"ಆದರೆ, ನೀನು ಪ್ರಾರ್ಥನೆಮಾಡಬೇಕಾದರೆ, ನಿನ್ನ ಏಕಾಂತವಾದ ಕೋಣೆಯೊಳಗೆ ಹೋಗಿ, ಬಾಗಿಲನ್ನು ಮುಚ್ಚಿಕೊಂಡು ಅಂತರಂಗದಲ್ಲಿಯೂ ಇರುವ ನಿನ್ನ ತಂದೆಗೆ ಪ್ರಾರ್ಥನೆಮಾಡು. ಅಂತರಂಗದಲ್ಲಿ ನಡೆಯುವುದನ್ನು ನೋಡುವ ನಿನ್ನ ತಂದೆಯು ನಿನಗೆ ಫಲಕೊಡುವನು"** (ಮತ್ತಾಯ 6:6).

ನಿಜವಾದ ಸೇವೆಯು ಒಂದು ರಹಸ್ಯವಾದ ಸ್ಥಳದಲ್ಲಿ ಪ್ರಾರ್ಥನೆ, ಆರಾಧನೆ, ಆತನ ವಾಕ್ಯವನ್ನು ಓದಿ ಧ್ಯಾನ ಮಾಡುವುದರ ಮುಖಾಂತರ ದೇವರೊಂದಿಗೆ ನಾವು ಎಲ್ಲಿ ಆನಂದಕರ ಅನ್ಯೋನ್ಯತೆಯಲ್ಲಿರುತ್ತೇವೋ

ಅಲ್ಲಿ ಹುಟ್ಟುತ್ತದೆ. ರಹಸ್ಯವಾದ ಸ್ಥಳದಲ್ಲಿ ನೀವು ಮತ್ತು ದೇವರು ಮಾತ್ರ ಇರುತ್ತೀರಿ. ಪ್ರಭಾವ ಬೀರಲು ಗಮನ ಹರಿಸಲು ಅಥವಾ ಬೇರೆಡೆಗೆ ಸೆಳೆಯಲು ಬೇರೆ ಯಾರೂ ಇರುವುದಿಲ್ಲ. ದೇವರು ನಮ್ಮೊಂದಿಗೆ ವ್ಯವಹರಿಸುವುದು ರಹಸ್ಯವಾದ ಸ್ಥಳದಲ್ಲೇ ಆಗಿರುತ್ತದೆ, ಅಲ್ಲಿ ಆತನು ನಮಗೆ ಬೋಧಿಸುತ್ತಾನೆ ಹಾಗೂ ನಮ್ಮೊಂದಿಗೆ ಅದ್ಭುತವಾದ ಕಾರ್ಯ ಮಾಡುತ್ತಾನೆ. ನಾವು ಆತನನ್ನು ರಹಸ್ಯ ಸ್ಥಳದಲ್ಲಿ ಹುಡುಕಿ ಆತನು ಮುಕ್ತವಾಗಿ ಪ್ರತಿಫಲಕೊಡುತ್ತಾನೆ. ಸಾರ್ವಜನಿಕ ಸ್ಥಳದಲ್ಲಿ ಏನು ನಡೆಯುತ್ತದೋ ಅದು ನಿಜವಾಗಿಯೂ ರಹಸ್ಯವಾದ ಸ್ಥಳದಲ್ಲಿ ಖಾಸಗಿಯಾಗಿ ಏನು ನಡೆಯುತ್ತದೋ ಅದರ ಪ್ರತಿಫಲವಾಗಿರುತ್ತದೆ. ರಹಸ್ಯ ಸ್ಥಳದಲ್ಲಿ ದೇವರೊಂದಿಗೆ ವೈಯಕ್ತಿಕ ಅನ್ಯೋನ್ಯತೆಯ ಸಮಂಜಸವಾದ ರೂಢಿಯನ್ನು ನಿರ್ವಹಿಸುವುದು ದೇವರ ಸೇವಕನಿಗೆ ಮಹತ್ವಪೂರ್ಣವಾಗಿರುತ್ತದೆ. ದೇವರೊಂದಿಗೆ ನಮ್ಮ ಅನ್ಯೋನತೆ ನಾವು ರಹಸ್ಯ ಸ್ಥಳದಿಂದ ಒಮ್ಮೆ ಹೊರ ಬಂದಾಗ ಅಂತ್ಯವಾಗುವುದಿಲ್ಲ. ನಾವು ವಾಸ್ತವವಾಗಿ ನಮ್ಮೊಂದಿಗೆ ರಹಸ್ಯವಾದ ಸ್ಥಳವನ್ನು ನಮ್ಮ ಹೃದಯಗಳಲ್ಲಿ ನಾವು ಎಲ್ಲಿ ಹೋದರೂ ಇಡೀ ದಿನ ಸಾಗಿಸುತ್ತೇವೆ. ಇದರಿಂದ ನಾವು ದೇವರೊಂದಿಗೆ ದಿನದುದ್ದಕ್ಕೂ ಅನ್ಯೋನ್ಯತೆಯನ್ನು ಮುಂದುವರಿಸುತ್ತೇವೆ. ಸೇವೆಯು ನಾವು ಏನು ಪಡೆದುಕೊಳ್ಳುತ್ತೇವೋ, ಹಾಗೂ ಕರ್ತನೊಂದಿಗೆ ನಮ್ಮ ಸಂಬಂಧವನ್ನು ಅನುಭವಿಸುತ್ತೇವೋ ಅದನ್ನು ಇತರರಿಗೆ ದಾಟಿಸುವುದೇ ಸೇವೆಯಾಗಿರುತ್ತದೆ.

ದೇವರೊಂದಿಗೆ ಅನ್ಯೋನ್ಯತೆಯ ರಹಸ್ಯ ಸ್ಥಳದ ಒಂದು ಸಮಂಜಸವಾದ ಜೀವನ ನಿರ್ವಹಿಸಲು ಶಿಸ್ತಿನ ಅಗತ್ಯತೆ ಇರುತ್ತದೆ. ಶಿಸ್ತಿನ ರೀತಿಗಳು ಹಲವಾರು ಇರುವಲ್ಲಿ ನಿಜವಾದ ಶಿಸ್ತು ಶುದ್ಧವಾದ ಸಂತೋಷದ ಅಂಶವಾಗಿರುತ್ತದೆ. ನಾವು ದೇವರಲ್ಲಿ ಆನಂದಿಸುವಾಗ ಹಾಗೂ ಆತನೊಂದಿಗೆ ಒಡನಾಟ ಹೊಂದಿರುವಾಗ, "ಸ್ವಾಭಾವಿಕವಾಗಿಯೇ" ರಹಸ್ಯ ಸ್ಥಳದ ಅನ್ಯೋನ್ಯತೆಯ ಸಮಂಜಸವಾದ ಜೀವಿತವು ಸಾಗುತ್ತದೆ.

## ನಿಮ್ಮ ಸ್ವಭಾವವನ್ನು ಮುಂದುವರಿಸಿ ಬಲಪಡಿಸಿರಿ

**"ಆದುದರಿಂದ ನಿಂತಿದ್ದೇನೆಂದು ನೆನಸುವವನು ಬೀಳದಂತೆ ಎಚ್ಚರಿಕೆಯಾಗಿರಲಿ"** (1 ಕೊರಿಂಥದವರಿಗೆ 10:12).

ನಮ್ಮ ಜೀವಿತದಲ್ಲಿ ಒಂದು ನಿರ್ದಿಷ್ಟ ಮಟ್ಟಕ್ಕೆ ನಾವು ತಲುಪಿದಾಗ, ನಾವು ಸಮುದ್ರ ಪರ್ಯಟನದಲ್ಲಿ ಹಾಗೂ ಆ ಮಟ್ಟದಲ್ಲಿ ಮುಂದುವರಿಯುತ್ತೇವೆಂದು ನಾವು ಆಲೋಚಿಸಲು ಉದ್ದೇಶಿಸಲು ಸಾಧ್ಯವಾಗುತ್ತದೆ. ಇಷ್ಟಕ್ಕೂ ನಾವು ಸಮಾನ್ಯ ಕ್ರೈಸ್ತನನ್ನು ಆಕ್ರಮಿಸುವ ಪಾಪಗಳನ್ನು ಮಾಡುವುದಿಲ್ಲ. ಹೆಚ್ಚಾಗಿ ದೇವರು ನಮ್ಮನ್ನು ತನ್ನ ರಾಜ್ಯದ ಕೆಲಸಕ್ಕಾಗಿ ಉಪಯೋಗಿಸುತ್ತಿದ್ದಾನೆ ಹಾಗೂ ನಾವು ಫಲಿತಾಂಶಗಳನ್ನು ನೋಡುತ್ತಿದ್ದೇವೆ. ಹೀಗಾಗಿ ನಾವು ದೈವಿಕತೆಯಲ್ಲಿ ನಮ್ಮನ್ನು ತೊಡಗಿಸಿಕೊಳ್ಳುವುದನ್ನು ನಿಲ್ಲಿಸುತ್ತೇವೆ (1ತಿಮೊಥೆಯನಿಗೆ 4:7) ಒಂದು ಮಾಂಸಖಂಡವು ವ್ಯಾಯಾಮ ಮಾಡುವುದನ್ನು ನಾವು ನಿಲ್ಲಿಸುವಾಗ ಸ್ವಭಾವಿಕವಾಗಿ ಏನಾಗುತ್ತದೆ? ಮಾಂಸಖಂಡವು ಕ್ರಮೇಣ, ನಮಗೆ ಅರಿತುವಿಲ್ಲದೆಯೇ ಬಲಹೀನವಾಗುತ್ತಾ ಹೋಗುತ್ತದೆ. ನಮ್ಮ ಆತ್ಮಿಕ ಜೀವಿತಗಳಲ್ಲಿಯೂ ಹಾಗೂ ಸ್ವಭಾವದಲ್ಲಿಯೂ ಇದು ನಿಜವಾಗಿರುತ್ತದೆ. ನಾವು ಕ್ರಮವಾಗಿ, ನಮ್ಮ ಸ್ವಭಾವದಲ್ಲಿ ಹೇಗೆ ಮಾಡುತ್ತಿದ್ದೇವೆಂಬುದನ್ನು ಪರಿಶೀಲಿಸಿಕೊಳ್ಳಬೇಕು. ಸ್ವಭಾವವು ನಮ್ಮ ನೈತಿಕ ಸತ್ವವಾಗಿರುತ್ತದೆ. ಇದು ನಾವು ಉದಾಸೀನತೆಯಲ್ಲಿ ನಡೆಯುವ ಅದೈವಿಕತೆಯ ಮಟ್ಟವಾಗಿದೆ. ಅಂದರೆ ಯಾರೂ ನೋಡದೆ ಇರುವಾಗ ನಾವು ಸ್ವಂತವಾಗಿ ನಡೆಯುವ ನಡೆಯಾಗಿರುತ್ತದೆ. ಇದು ಒಳ್ಳೇಯದನ್ನು ಆಯ್ಕೆ ಮಾಡಿಕೊಂಡು ಕೆಟ್ಟದನ್ನು ನಿರಾಕರಿಸುವ ನಮ್ಮ ಸಾಮರ್ಥ್ಯವಾಗಿರುತ್ತದೆ. ನಾವು ದೇವರ ವಾಕ್ಯದ ಸತ್ಯಕ್ಕೆ ಸಮರೇಖೆಯಲ್ಲಿ ಉಳಿಯಲು ಇದು ನಮ್ಮ ಸಾಮರ್ಥ್ಯವಾಗಿರುತ್ತದೆ. ನಾವು ದೇವರಿಗೆ ವಿಧೇಯರಾಗಿ, ಹಲವಾರು ಪರಿಸ್ಥಿತಿಗಳ ಮುಖಾಂತರ ದೃಢಚಿತ್ತರಾಗುವಾಗ ನಮ್ಮ ಸ್ವಭಾವವು ಸಮಯ ಕಳೆದಂತೆ ಅಭಿವೃದ್ಧಿಯಾಗುತ್ತದೆ (ರೋಮಾ 5:3-4) ದೇವರಿಗೆ ನಿಮ್ಮ ವಿಧೇಯತೆಯ ಮಟ್ಟದಾಚೆಗೆ ನಮ್ಮ ಸ್ವಭಾವವು ಎಂದಿಗೂ ಏಳುವುದಿಲ್ಲ, 'ಕ್ರೈಸ್ತ ಸೇವಕರಾದ ನಮಗಾಗಿ ಸವಾಲು ನಮ್ಮ ಸ್ವಭಾವದ ಮೇಲೆ ಜಾಗರೂಕ ಗಮನವನ್ನು ಇಡುವುದು ಹಾಗೂ ನಮ್ಮನ್ನು ಬಲಪಡಿಸಿಕೊಳ್ಳುವುದನ್ನು ಉಳಿಸಿಕೊಳ್ಳಬೇಕು. ಒಂದು ನಿರ್ದಿಷ್ಟ ಮಟ್ಟಕ್ಕೆ ನಾವು ದೃಢವಾಗಿ ಉಳಿಯುತ್ತೇವೆಂದು ತೀರ್ಮಾನಿಸುವುದಕ್ಕಿಂತ, ನಾವು ಆತನ ವಾಕ್ಯ ಆತನ ಆತ್ಮ ಹಾಗೂ ದೈವಿಕ ಜನರ ಪ್ರಭಾವಗಳ ಮುಖಾಂತರ, ನಮ್ಮ ಸ್ವಭಾವದಲ್ಲಿ ಶಕ್ತಿಯ ಹೊಸ ಮಟ್ಟಗಳಿಗೆ

ಮುಂದುವರಿದು ಮೇಲಕ್ಕೇರುತ್ತಾ ದೇವರ ಕಾರ್ಯವನ್ನು ಆಹ್ವಾನಿಸುವ ಅಗತ್ಯವಿದೆ.ನಾವು ಮುಂದುವರಿದು ಈ ವಲಯದಲ್ಲಿ ನಮ್ಮ ಸಾಮರ್ಥ್ಯವನ್ನು ವೃದ್ಧಿಸಿಕೊಳ್ಳಬೇಕಾಗಿದೆ.

ಕೇವಲ ನಾವು ಕ್ರೈಸ್ತೀಯ ಸೇವೆಯಲ್ಲಿರುವುದರಿಂದ, ನಾವು ಶೋಧನೆಗಳು ಮತ್ತು ಪಾಪದ ಆಹ್ವಾನಗಳಂದ ಆಹ್ವಾನಿಸಲ್ಪಡಲು ಹೊರತಾಗಿಲ್ಲ, ವಾಸ್ತವವು ಯಾವಾಗಲೂ ನಾವು ಎಲ್ಲಿ ರಕ್ಷಣೆಗಳ ಹೆಚ್ಚಳ ಹೊಂದಿ ಕಾವಲಿನಲ್ಲಿ ಇರಬೇಕಾದ ಅಗತ್ಯವಿದೆಯೋ ಅವೆಲ್ಲವೂ ಹೊಸದಾದ ಪ್ರದೇಶಗಳಾಗಿರುತ್ತವೆ. ಆದಕಾರಣ ಎಲ್ಲಾ ಮುಮ್ಮುಖಗಳ ಮೇಲೆ ನಾವು ಸ್ವಭಾವಗಳನ್ನು ಬಲಪಡಿಸಲು ಮುಂದುವರಿಯುವ ಅಗತ್ಯವಿದೆ. ಅಪೊಸ್ತಲನಾದ ಪೌಲನು ಮಹಾಪ್ರಕಟನೆಗಳನ್ನು ಪಡೆದ ನಂತರ ಹಾಗೂ ಕರ್ತನಿಗಾಗಿ ಬಹಳಷ್ಟು ಮಾಡಿದ ನಂತರವೂ, *"ಇಷ್ಟರೊಳಗೆ ನಾನು ಬಿರುದನ್ನು ಪಡಕೊಂಡು ಸಿದ್ಧಿಗೆ ಬಂದವನೆಂದು ಹೇಳುವುದಿಲ್ಲ; ನಾನು ಯಾವುದನ್ನು ಹೊಂದುವುದಕ್ಕಾಗಿ ಕ್ರಿಸ್ತಯೇಸು ನನ್ನನ್ನು ಹಿಡಿದುಕೊಂಡನೋ ಅದನ್ನು ಹಿಡಿದುಕೊಳ್ಳುವುದಕ್ಕೋಸ್ಕರ ಓಡುತ್ತಾ ಇದ್ದೇನೆ"* ಎಂದು ಹೇಳಿದ್ದಾನೆ. (ಫಿಲಿಪ್ಪಿಯವರಿಗೆ 3:12)

## ಮಾಡಿರಿ, ನಂತರ ಬೋಧಿಸಿರಿ

**"ಆದದರಿಂದ ಈ ಸಣ್ಣ ಸಣ್ಣ ಆಜ್ಞೆಗಳಲ್ಲಿಯಾದರೂ ಒಂದನ್ನು ಮೀರಿ ಜನರಿಗೂ ಹಾಗೆ ಮೀರುವುದಕ್ಕೆ ಬೋಧಿಸುವವನು ಪರಲೋಕರಾಜ್ಯದಲ್ಲಿ ಬಹಳ ಚಿಕ್ಕವನೆನಿಸಿಕೊಳ್ಳುವನು; ಆದರೆ ತಾನೇ ಆ ಆಜ್ಞೆಗಳಂತೆ ನಡೆದುಕೊಂಡು ಜನರಿಗೂ ಹಾಗೆ ನಡೆಯಬೇಕೆಂದು ಬೋಧಿಸುವವನು ಪರಲೋಕ ರಾಜ್ಯದಲ್ಲಿ ದೊಡ್ಡವನೆನಿಸಿಕೊಳ್ಳುವನು"** (ಮತ್ತಾಯ 5:19).

ಸ್ವಯಂಶಿಸ್ತಿನ ನಮ್ಮ ಸೇವೆಗಳಲ್ಲಿ ನಾವು ನಿಭಾಯಿಸಲೇಬೇಕಾದ ಒಂದು ಅತಿ ಪ್ರಮುಖವಾದ ಅಂಶವೇನೆಂದರೆ, ನಾವಾಗಿಯೇ ಮೊದಲು ಅಭ್ಯಾಸ ಮಾಡಿರದ ಏನನ್ನೋ ನಾವು ಬೋಧಿಸದೆ ಇರುವುದು, ದೇವರ ರಾಜ್ಯದ ಒಬ್ಬ ಸೇವಕನಾಗಿರುವುದು ಎಂದರೆ ಕೇವಲ ಇತರರಿಗೆ ಏನು ಮಾಡಬೇಕು ಅಥವಾ ಏನು ಮಾಡಬಾರದು ಎಂಬುದರ ಬಗ್ಗೆ ಹೇಳುವುದಲ್ಲ. ಇದು ಮೊಟ್ಟಮೊದಲು ದೇವರೊಂದಿಗೆ ನಡೆಯುವ ಹಾಗೂ ನಮ್ಮ ಸಂತ ಜೀವಿತಗಳನ್ನು ಆತನ ವಾಕ್ಯ ಹಾಗೂ ಆತ್ಮನಿಗೆ ಹೊಂದಿಕೊಂಡು ನಡೆಯುವುದರ ಬಗ್ಗೆ ಇರಬೇಕು. ನಂತರ ಈ

ಅನುಭವದಿಂದ, ನಾವು ಇತರರಿಗೆ ಅದನ್ನೇ ಹೇಗೆ ಮಾಡಬೇಕೆಂದು ಹಂಚಿಕೊಳ್ಳಲು ಹಾಗೂ ಕಲಿಸಲು ಸಾಧ್ಯ. ಇದೇ ದೇವರ ರಾಜ್ಯದ ಸೇವಕರನ್ನಾಗಿ ನಮ್ಮನ್ನು ಮಾಡುವಂಥದ್ದಾಗಿದೆ. ನಮ್ಮ ಸಂದೇಶದ ವಿಶ್ವಾಸಾರ್ಹತೆಯು, ನಾವು ಜೀವಿಸುವುದನ್ನು ಜನರು ನೋಡುವಾಗ ಮಹತ್ವವಾಗಿ ಬಲಹೊಂದುತ್ತದೆ. ಮುಂದೆ ಇರುವ, ನಾವು ಯಾರೂ ಇನ್ನೂ ಹೋಗದೆ ಇರುವ ಸ್ಥಳಕ್ಕೆ ದೇವರು ನಮ್ಮನ್ನು ಕರೆಯುವ ವಿಷಯಗಳ ಬಗ್ಗೆ ನಾವು ಮಾತನಾಡಬೇಕಾದ ಸಮಯಗಳಿವೆ ಎಂಬುದನ್ನು ನಾನು ಅರಿತುಕೊಂಡಿರುತ್ತೇನೆ. ಈ ಸಂದೇಶಗಳು ನಮ್ಮೆಲ್ಲರಿಗೂ, ದೇವರು ನಮಗಾಗಿ ವಾಗ್ದಾನ ಮಾಡಿರುವ ಉನ್ನತವಾದ ಸಾಮ್ರಾಜ್ಯದೊಳಕ್ಕೆ ಮುಂದುವರಿದು ಒತ್ತುಕೊಡಲು ಸವಾಲಾಗಿವೆ. ನಾವು ಕೆಲವು ವೇಳೆ ನಾವು ಆ ಭಾಗದಲ್ಲಿ ವೈಯಕ್ತಿಕ, ಅನುಭವವನ್ನು ಹೊಂದದೆ ಇದ್ದರೂ ದೇವರ ವಾಕ್ಯದ ಸತ್ಯತೆಯ ಮೇಲೆ ಪರಿಪೂರ್ಣವಾಗಿರುವ ವಿಷಯಗಳ ಮೇಲೆ ಬೋಧಿಸಿ ಉಪದೇಶಿಸುತ್ತವೆಂದು ಎಂಬುದನ್ನೂ ನಾನು ಅರಿಯಿತ್ತೇನೆ, ಉದಾಹರಣೆಗಾಗಿ, ಒಬ್ಬ ದೇವರ ಮನುಷ್ಯನು, ಅವಿವಾಹಿತನು, ವಿವಾಹದ ವಿಷಯವಾಗಿ ಸತ್ಯವೇದವು ಏನು ಹೇಳುತ್ತದೋ ಅದನ್ನು ಉಪದೇಶಿಸಬಹುದು ಹಾಗೂ ಕಲಿಸಬಹುದು ಹಾಗೂ ನಂತರ ವಾಸ್ತವವಾಗಿ ನಾವೆಲ್ಲರೂ ಸೋತು ಹೋಗಿರುವವರಾಗಿದ್ದು ಅನುಭವಗಳನ್ನು ಹೊಂದುತ್ತೇವೆ. ನಮ್ಮ ತಪ್ಪುಗಳಿಂದ ಕಲಿತುಕೊಂಡಿರುತ್ತೇವೆ. ನಮ್ಮ ಕಾಲುಗಳ ಮೇಲೆ ನಾವು ಹಿಂತಿರುಗಿ ಹೋಗುತ್ತೇವೆ ಹಾಗೂ ಹಿಂದಿನ ದಿನಗಳಲ್ಲಿ ನಾವು ಸೋಲುವಿಕೆಯ ಕ್ಷಣಗಳನ್ನೂ ಹೊದಿದ್ದರೂ, ವಾಕ್ಯದ ಸತ್ಯವನ್ನು ನಾವು ಹಂಚಿಕೊಳ್ಳಲು ಸಾಧ್ಯ. ದೇವರ ವಾಕ್ಯದ ಸತ್ಯತೆಯನ್ನು ಸಾಕಲು ನಾವು ಕರೆಯಲ್ಪಟ್ಟಂದಿನಿಂದ ಇವೆಲ್ಲವೂ ಪರಿಪೂರ್ಣವಾಗಿ ಉತ್ತಮವಾಗಿವೆ ಹಾಗೂ ನಮ್ಮ ಸ್ವಂತ ಅನುಭವವಲ್ಲ. ಹೀಗಿದ್ದರೂ, ನಾವು ಎಲ್ಲಿ ದೇವರಿಗೆ ವಿಧೇಯರಾಗಿರಬೇಕಾಗಿದೆಯೋ ಅಲ್ಲಿ ನಾವು ಮೊದಲು ವಾಕ್ಯವನ್ನು ಅಭ್ಯಾಸ ಮಾಡುವುದು, ದೇವರ ವಾಕ್ಯಕ್ಕೆ ನೇರವಾಗಿ ನಡೆದು ಜೀವಗಳನ್ನು ಪಡೆದುಕೊಳ್ಳುವುದು ಹಾಗೂ ನಂತರ ಬೋಧಿಸುವುದು ಮುಖ್ಯವಾಗಿರುತ್ತದೆ.

## ಒಂದು ಸ್ವರವಾಗಿರಿ, ಒಂದು ಪ್ರತಿಧ್ವನಿಯಲ್ಲ

**"ನಾನು ಕತ್ತಲಲ್ಲಿ ನಿಮಗೆ ಹೇಳುವುದನ್ನು ನೀವು ಬೆಳಕಿನಲ್ಲಿ ಹೇಳಿರಿ, ಮತ್ತು ಕಿವಿಯಲ್ಲಿ ಕೇಳಿದ್ದನ್ನು ಮಾಳಿಗೆಗಳ ಮೇಲೆ ನಿಂತು ಸಾರಿರಿ"** (ಮತ್ತಾಯ 10:27).

ಕ್ರೈಸ್ತೀಯ ನಡೆಯ ನನ್ನ ಆರಂಭದ ಹಂತಗಳಲ್ಲಿ, ಕರ್ತನು ನನಗೆ ಕ್ರಿಸ್ತನ ದೇಹಕ್ಕೆ ವಿಶ್ವಾದಾದ್ಯಂತ ವಿಭಿನ್ನವಾದ ಜನರ ಮೂಲಕ ತಾನು ಬಿಡುಗಡೆ ಮಾಡುವ ಪ್ರಕಟಣೆಯನ್ನು ಪಡೆದುಕೊಳ್ಳುವಂತೆ ಸೂಚಿಸಿದನು. ಯಾವ ವ್ಯಕ್ತಿಯೂ ಇದನ್ನೆಲ್ಲಾ ಅಥವಾ ದೇವರು ಸಭೆಗೆ ಮಾತನಾಡುತ್ತಿರುವ ಎಲ್ಲವನ್ನು ತಿಳಿದಿರುವುದಿಲ್ಲ. ಇದರಿಂದ ನಾವು ಲೋಕದೆಲ್ಲ ಕಡೆಯ ವಿಭಿನ್ನ ಪುರುಷರು ಮತ್ತು ಮಹಿಳೆಯರ ಮುಖಾಂತರ ದೇವರು ಮಾತನಾಡುತ್ತಿರುವ ಎಲ್ಲವನ್ನೂ ಕೇಳಿಸಿಕೊಳ್ಳುವ, ಆಲಿಸುವ ಹಾಗೂ ಪಡೆದುಕೊಳ್ಳುವ ಅಗತ್ಯವಿದೆ ಹಾಗೂ ನಾನು ವರ್ಷಗಳ ಕಾಲದುದ್ದಕ್ಕೂ ಇದನ್ನು ಪಾಲಿಸಲು ನಾನು ಪ್ರಯತ್ನಿಸುತ್ತಾ ಬಂದೆನು. ಇತರ ದೇವ ಜನರಿಂದ (ದೈವಿಕ ಪುರುಷರು ಹಾಗೂ ಮಹಿಳೆಯರು) ಕಲಿಯುವುದೂ ಪಾಮುಖ್ಯವಾದದ್ದು ಹಾಗೂ ಮೊದಲಿಗೆ ವೈಯಕ್ತಿಕ ಪ್ರಕಟನೆಯಾಗಿ ಮಾಡದೇ ಯಾರೋ ಒಬ್ಬರಂತೆ ಸಾರುವುದನ್ನು ನಾವು ಸುಮ್ಮನೆ ಹೇಳುವುದರಲ್ಲಿ ಬಹಳ ಜಾಗರೂಕರಾಗಿರಬೇಕು. ಇತರರಿಂದ ನಾವು ಏನು ಕೇಳಿಸಿಕೊಳ್ಳುತ್ತೇವೋ, ಅದು ಮೊದಲು ನಮ್ಮ ಭಾಗವಾಗಿ ಆಗುವಂತೆ ಅವಕಾಶಕೊಡಬೇಕು–ನಮ್ಮ ಜೀವಿತಗಳಲ್ಲಿ ಹಾಗೂ ದೇವರೊಂದಿಗೆ ನಮ್ಮ ವೈಯಕ್ತಿಕ ಜೀವಿತಗಳಲ್ಲಿ ಜೀರ್ಣಿಸಲ್ಪಡಬೇಕು ಹಾಗೂ ಮುಂದೆ ಅದು ಸಾಗಿಸಲ್ಪಡಬೇಕು. ನಾವು ಇದನ್ನು ಮಾಡದಿದ್ದರೆ ನಾವು ಕೇವಲ ಆಳವಲ್ಲದ ಒಂದು ಪ್ರತಿಧ್ವನಿಯಾಗುತ್ತದೆ–ಆಗ, ನಾವು ಉಪದೇಶ ಹಾಗೂ ಭೋಧಿಸುವುದರಲ್ಲಿ ಜೀವ ಮತ್ತು ಶಕ್ತಿ ಇಲ್ಲವಾಗುತ್ತದೆ.

ಬಹು ಪ್ರಾಮುಖ್ಯವಾಗಿ, ದೇವರು ನಮಗೆ ವೈಯಕ್ತಿಕವಾಗಿ ಒಬ್ಬೊಬ್ಬರೊಂದಿಗೂ ಮಾತನಾಡಲು ಹಾಗೂ ಸೂಚನೆಕೊಡಲು ಬಯಸುತ್ತಾನೆ. ದೇವರು ನಮ್ಮೊಂದಿಗೆ "ಕತ್ತಲಲ್ಲಿ ಹಾಗೂ ವೈಯಕ್ತಿಕವಾಗಿ, "ಕಿವಿಯಲ್ಲಿ" ನಿಶ್ಯಬ್ಧತೆಯಲ್ಲಿ ಖಾಸಗಿಯಾಗಿ ಹಾಗೂ ರಹಸ್ಯ ಕ್ಷಣಗಳಲ್ಲಿ ಮಾತನಾಡಲು ಬಯಸುತ್ತಾನೆ. *"ಬಳಲಿ ಹೋದವರನ್ನು ಮಾತುಗಳಿಂದ ಸುಧಾರಿಸುವುದಕ್ಕೆ ನಾನು ಬಲ್ಲವನಾಗುವಂತೆ ಕರ್ತನಾದ ಯೆಹೋವನು*

*ಶಿಕ್ಷಿತರ ನಾಲಿಗೆಯನ್ನು ನನಗೆ ದಯಪಾಲಿಸಿದ್ದಾನೆ; ಬೆಳಬೆಳಗೂ ನನ್ನನ್ನು ಎಚ್ಚರಿಸಿ ಶಿಕ್ಷಿತರಂತೆ ನಾನು ಕೇಳುವ ಹಾಗೆ ನನ್ನ ಕಿವಿಯನ್ನು ಜಾಗರೂಕಗೊಳಿಸುತ್ತಾನೆ. ಕರ್ತನಾದ ಯೆಹೋವನು ನನ್ನ ಕಿವಿಯನ್ನು ತೆರೆದಿದ್ದಾನೆ; ನಾನು ಎದುರು ಬೀಳಲಿಲ್ಲ, ವಿಮುಖನಾಗಲೂ ಇಲ್ಲ."* (ಯೆಶಾಯ 50:4,5) ದೇವರು ನಮ್ಮೊಂದಿಗೆ ರಹಸ್ಯವಾಗಿ ಏನು ಮಾತನಾಡುತ್ತಾನೆ? ಆತನು ನಮ್ಮನ್ನು ಸಾರ್ವಜನಿಕವಾಗಿ ಸಾರಲು ಬಯಸುತ್ತಾನೆ. ನಾವು ದೇವರನ್ನು ವೈಯಕ್ತಿಕವಾಗಿ ಆಲಿಸುವುದರ ಮುಖಾಂತರ ಪಡೆದುಕೊಂಡ ತಿಳುವಳಿಕೆ ಹಾಗೂ ಪ್ರಕಟನೆಯನ್ನು ಉಪದೇಶಿಸಿ, ಬೋಧಿಸುವಾಗ ಇವು ಬಹಳ ಬಲವಾಗಿರುತ್ತವೆ. ಹೀಗೆ ನಾವು ಒಂದು ಸ್ವರವಾಗಿರುತ್ತೇವೆ ಒಂದು ಪ್ರತಿಧ್ವನಿಯಲ್ಲ.

## ಜೀವನಶೈಲಿ—ಅದನ್ನು ಸರಳವಾಗಿ ಇರಿಸಿಕೊಳ್ಳಿರಿ

**"ನಾನು ಕೇವಲ ಮಾನುಷಜ್ಞಾನವನ್ನು ಬಳಸದೆ ದೇವರ ಕೃಪೆಯನ್ನು ಆಶ್ರಯಿಸಿ ಆತನಿಂದಾಗುವ ಪವಿತ್ರತ್ವವೂ ನಿಷ್ಕಪಟತ್ವವೂ ಉಳ್ಳವರಾಗಿ ಈ ಲೋಕದಲ್ಲಿ ಮುಖ್ಯವಾಗಿ ನಿಮ್ಮ ವಿಷಯದಲ್ಲಿ ನಡಕೊಂಡೆವೆಂದು ನಮ್ಮ ಮನಸ್ಸು ನಮಗೆ ಸಾಕ್ಷಿ ಹೇಳುತ್ತದೆ; ಇದೇ ನಮಗಿರುವ ಉಲ್ಲಾಸ"** (2 ಕೊರಿಂಥದವರಿಗೆ 1:12).

ಸರಳತೆಯಲ್ಲಿ ಸೌಂದರ್ಯವಿದೆ. ಅಪೊಸ್ತಲರು ಸರಳತೆಯಲ್ಲಿ ಹಾಗೂ ದೈವಿಕ ಯಥಾರ್ಥತೆಯಲ್ಲಿ ಜೀವಿಸಿದರು. ನಾವು ನಮ್ಮ ಜೀವನ ಶೈಲಿಯನ್ನು ಸರಳವಾಗಿ ಇಟ್ಟುಕೊಳ್ಳಲು ಕಲಿಯಬೇಕು. ನಮ್ಮ ಜೀವಿತವು ಸುಮ್ಮನೆ ಧರಿಸಿಕೊಳ್ಳುವ ಒಂದು ನೋಟವಲ್ಲ. ಅಲ್ಲಿ ಕಟ್ಟಡದ ಮುಂಭಾಗವಿಲ್ಲ, ತೋರಿಕೆಯಿಲ್ಲ, ಅಲ್ಲಿ ನಾವು ಜೀವಿಸುವ ದಾರಿಯಲ್ಲಿ ಯಾವ ಸುಳ್ಳಾದದ್ದೂ ಇರುವುದಿಲ್ಲ, ನೀವು ಏನು ಪಡೆಯುತ್ತೀರೋ ಅದನ್ನೇ ನೀವು ನೋಡುತ್ತೀರಿ.

ಸರಳತೆಯಲ್ಲಿ ಸ್ವಾತಂತ್ರ್ಯವಿದೆ, ದೇವರು ನಿಮ್ಮನ್ನು ಏನಾಗಿರಲು ಉಂಟುಮಾಡಿದನೋ ಹಾಗೆ ಎಲ್ಲಾ ಕಾಲದಲ್ಲಿರಲು ನೀವು ಸ್ವತಂತ್ರವಾಗಿದ್ದೀರಿ. ನೀವು ಯಾರಾಗಿಲ್ಲವೋ ಅವರ ಸುಳ್ಳಾದ ತೋರಿಕೆಯಲ್ಲಿ ಕಟ್ಟಲ್ಪಟ್ಟಿಲ್ಲ.

ನಾವು ಲೋಕದಲ್ಲಿ ಒಳಗೊಳ್ಳುವಾಗ, ಕ್ರಿಸ್ತನಿಗಾಗಿ ಜನರನ್ನು ಪ್ರಭಾವಿಸಲು, ಹಾಗೂ ತಲುಪಲು ಅದಕ್ಕೆ ಸಂಬಂಧಿಸುವಂತೆ, ಲೋಕದ ಸಂಕೀರ್ಣತೆಗಳೊಂದಿಗೆ ನಾವು ಸಿಕ್ಕಿಕೊಳ್ಳಲಾರೆವು. *"ಯುದ್ಧಕ್ಕೆ ಹೋಗುವ ಸೈನಿಕನು ಲೋಕ ವ್ಯವಹಾರದಲ್ಲಿ ಸಿಕ್ಕಿಕೊಳ್ಳದೆ ತನ್ನನ್ನು ಸೈನ್ಯದಲ್ಲಿ ಸೇರಿಸಿಕೊಂಡವನನ್ನು ಮೆಚ್ಚಿಸುವುದಕ್ಕೆ ಪ್ರಯಾಸಪಡುತ್ತಿರುವನಲ್ಲವೇ"* (2 ತಿಮೊಥೆಯನಿಗೆ 2:4). ಒಂದು ದೊಡ್ಡ ಮನೆ, ಒಂದು ದೊಡ್ಡ ಕಾರು, ಬಹಳಷ್ಟು ವಸ್ತುಗಳು, ಇತ್ತೀಚೆಗಿನ ಉಪಕರಣಗಳು, ದುಂದು ವೆಚ್ಚದ ಜೀವಿತ, ಹೀಗೆ ಮುಂತಾದದ್ದನ್ನು ನಾವು ಬೆನ್ನಟ್ಟಬೇಕಾಗಿಲ್ಲ. ಸುತ್ತಲಿನ ಜನರಿಗೆ ಒಂದು ಹೇಳಿಕೆ ಮಾಡಲು ವಾಸ್ತವಿಕ ಸ್ಥಿತಿಯು ಇರುವುದಾದರೆ, ನಿಮ್ಮ ಕುಟುಂಬವು ಬೆಳೆಯುತ್ತಿರುವುದಾದರೆ, ನಿಮಗೆ ಒಂದು ದೊಡ್ಡ ಮನೆಯ ಅಗತ್ಯತೆ ಇರುತ್ತದೆ ಹಾಗೂ ಅದರಲ್ಲಿ ಯಾವ ತಪ್ಪೂ ಇಲ್ಲ. ಹೆಚ್ಚು ಜನರ ಸುಖ ಪ್ರಯಾಣ ಹಾಗೂ ಸಾಗಾಣಿಕೆಗಾಗಿ ಅಥವಾ ನಂಬಲರ್ಹವಾದ ಕಾರಣಕ್ಕಾಗಿ ಹೀಗೆ ಮುಂತಾದ ಅಗತ್ಯತೆಗಾಗಿ ನೀವು ಒಂದು ದೊಡ್ಡದಾದ ಹಾಗೂ ಉತ್ತಮವಾದ ಕಾರಿನ ಅಗತ್ಯ ನಿಮಗಿದ್ದರೆ, ಹಾಗೆ ಮಾಡುವುದರಲ್ಲಿ ಯಾವ ತಪ್ಪೂ ಇಲ್ಲ, ಇತ್ತೀಚೆಗಿನ ಒಂದು ಉಪಕರಣವು ಉತ್ತಮವಾಗಿ, ನೀವು ಪ್ರದರ್ಶಿಸಲು, ಸಾಮರ್ಥ್ಯವನ್ನು ಸುಧಾರಿಸಿದರೆ, ಮತ್ತಷ್ಟು ಅನುಕೂಲಕರವಾಗಿ ಹೆಚ್ಚಾಗಿ ಮಾಡಿದರೆ ಆಗ ಎಲ್ಲ ರೀತಿಯಲ್ಲಿ ಅದನ್ನು ಬಳಸಿರಿ. ಅದರೆ "ಇಲಿಯ ಓಟ ಸ್ಪರ್ಧೆ"ಯಲ್ಲಿ ನಾವು ಸಿಕ್ಕಿಕೊಂಡರೆ "ಜನರಿಗೆ ಏನನ್ನಾದರೂ ತೋರಿಸಲು" ಕಾರ್ಯಗಳನ್ನು ಮಾಡಿದರೆ, ನಾವು ದೇವರನ್ನು ತಿಳಿಯದವರಂತೆ ಅದೇ ಬಲೆಯಲ್ಲಿ ಬೀಳುತ್ತೇವೆ.

ಒಂದು ಸರಳವಾದ ಜೀವನ ಶೈಲಿಯ ಭಾಗಶಃ ಜೀವಿಸುವುದು ಲೌಕಿಕ ಆಸ್ತಿಪಾಸ್ತಿಗಳೊಂದಿಗೆ ತೃಪ್ತಿಯಾಗಿರಲು ಕಲಿಯುವುದಾಗಿರುತ್ತದೆ. ಆತ್ಮಿಕತೆಯ ವಿಷಯಗಳಲ್ಲಿರುವಾಗ ನಾವು ಒಂದು ಪವಿತ್ರವಾದ ಅಸಂತೃಪ್ತಿಯ ಗ್ರಹಿಕೆಯೊಂದಿಗೆ ಜೀವಿಸುತ್ತೇವೆ. ನಮ್ಮ ಜೀವಿತಗಳು ಈ ಲೋಕದ ಜೀವಿತಗಳ ಸಂಬಂಧದಲ್ಲಿ ಜೀವಿಸುವಾಗ ಅದು ಸಂತೃಪ್ತಿಯೊಂದಿಗೆ ದೈವಿಕತೆಯಾಗುತ್ತದೆ. *"ಸಂತುಷ್ಟಿ ಸಹಿತವಾದ ಭಕ್ತಿಯು ದೊಡ್ಡ ಲಾಭವೇ ಸರಿ. ನಾವು ಲೋಕದೊಳಕ್ಕೆ ಏನೂ ತಕ್ಕೊಂಡು ಬರಲಿಲ್ಲವಷ್ಟೆ; ಅದರೊಳಗಿಂದ ಏನೂ ತಕ್ಕೊಂಡು ಹೋಗಲಾರೆವು. ನಮಗೆ*

*ಅನ್ನವಸ್ತ್ರಗಳಿದ್ದರೆ ಸಾಕು"* (1 ತಿಮೊಥೆಯನಿಗೆ 6:6–8). ಈ ಲೋಕದಲ್ಲಿ ಯಶಸ್ಸು, ಬೆಳವಣಿಗೆ, ವಿವಿಧ ಕಾರ್ಯಕ್ಷೇತ್ರಗಳಲ್ಲಿ ಹೆಚ್ಚಳ ಮುಂತಾದ ಪೂರೈಸಬೇಕಾದ ವಿಷಯಗಳನ್ನು ನಾವು ಬೆನ್ನಟ್ಟುವ ಕಾರಣವೇನೆಂದರೆ, ರಾಜ್ಯದ ಕಾರಣಕ್ಕಾಗಿ ಮುಂದಾಗುವುದು. ಇದಕ್ಕಿಂತ ಬೇರೆ ಎಂದರೆ, ಈ ಲೋಕದ ವಿಷಯಗಳು ನಮ್ಮನ್ನು ಪ್ರಭಾವಿತಗೊಳಿಸುವುದಿಲ್ಲ. ನಾವು ನಮ್ಮ ಮನಸ್ಸುಗಳನ್ನು ಲೋಕದ ವಿಷಯಗಳ ಮೇಲೆಲ್ಲ, ಆದರೆ ಮೇಲಿನ ಅಂಶಗಳಲ್ಲಿ ನೆಲೆಗೊಳಿಸಬೇಕು (ಕೊಲೊಸ್ಸೆ 3:2).

ಕೆಲವು ವೇಳೆ ನಾವು ಕ್ರೈಸ್ತೀಯ ಸೇವಕರಾಗಿ ನಾವು ಅಲ್ಲದವುಗಳ ಒತ್ತಡವನ್ನು ಗ್ರಹಿಸುತ್ತೇವೆ. ನೀವು ಒಬ್ಬ ಜ್ಞಾನವಂತರಲ್ಲದಿದ್ದರೆ—ಹಾಗಿದ್ದೇನೆಂದು ನಟಿಸಬೇಡಿರಿ. ನೀವು ಐಶ್ವರ್ಯವಂತರಲ್ಲದಿದ್ದರೆ, ಐಶ್ವರ್ಯವಂತರಾಗಿ ನಟಿಸಬೇಡಿರಿ. ನೀವು ಸಾಂಪ್ರದಾಯಿಕವಾಗಿದ್ದರೆ, ನೀವು ಒಲವು ತುಂಬಿದವರಂತೆ ನಟಿಸಬೇಡಿರಿ (ನೀವು ಬದಲಾಗಿ ಒಲವು ತುಂಬಿದವರಂತೆ ಆಗುವ ಬಯಕೆ ಹೊಂದದ ಹೊರತು). ಜನರು ಸುಲಭವಾಗಿ ಇವುಗಳ ಮುಖಾಂತರ ನೋಡುತ್ತಾರೆ. ಸಮಾಜದಲ್ಲಿ ನೀವು "ಉತ್ತಮ ಅಂಶದೊಂದಿಗೆ ಮುಂದುವರಿಯಲು ಹೆಮ್ಮೆ ಪಡಬೇಡಿರಿ. ಉನ್ನತ ಸ್ಥಳಗಳಲ್ಲಿ ನಾವು ಹೊರಗೆ ಹೋಗಿ ಜನರ ಮೇಲೆ ಪರಿಣಾಮ ಬೀರಲು—ಅವರನ್ನು ಮಾನವರಂತೆ ಕಂಡು—ಸರಳತೆಯೊಂದಿಗೆ ಕಾರ್ಯಮಾಡಬೇಕು. ಎಲ್ಲಾ ರೀತಿಯ ಜನರೊಂದಿಗೆ ಅಂದರೆ ಶ್ರೀಮಂತರು ಮತ್ತು ಬಡವರು, ಉನ್ನತ ಸಾಧನಗಳಲ್ಲಿ ಅಥವಾ ಅತ್ಯಂತ ಕೀಳಾದ ಏಣಿಯ ಮೆಟ್ಟಿಲುಗಳ ಕೆಳಗೆ ವಾಸಿಸುವ ಜನರೊಂದಿಗೆ ಒಂದಾಗಿರಲು ಹಾಗು ಸಂಬಂಧ ನೀಡಲು ನಾವು ನಮ್ಮ ಸಾಮರ್ಥ್ಯವನ್ನು ನಿಭಾಯಿಸಬೇಕು. *"ನಿಮ್ಮ ನಿಮ್ಮೊಳಗೆ ಏಕಮನಸ್ಸುಳ್ಳವರಾಗಿರಿ. ದೊಡ್ಡಸ್ತಿಕೆಯ ಮೇಲೆ ಮನಸ್ಸಿಡದೆ ದೀನರ ಸಂಗಡ ಬಳಕೆಯಾಗಿರಿ. ನಿಮ್ಮನ್ನು ನೀವೇ ಬುದ್ಧಿವಂತರೆಂದು ಎಣಿಸಿಕೊಳ್ಳಬೇಡಿರಿ"* (ರೋಮಾಪುರದವರಿಗೆ 12:16).

## ನಿಮ್ಮ ಹೃದಯವನ್ನು ಶುದ್ಧವಾಗಿಟ್ಟುಕೊಳ್ಳಿರಿ, ನಿಮ್ಮ ಪ್ರಚೋದನೆಗಳನ್ನು ಕಾಯ್ದುಕೊಳ್ಳಿರಿ

**"ನಿನ್ನ ಹೃದಯವನ್ನು ಬಹು ಜಾಗರೂಕತೆಯಿಂದ ಕಾಪಾಡಿಕೋ, ಅದರೊಳಗಿಂದ ಜೀವಧಾರೆಗಳು ಹೊರಡುವವು** (ಜ್ಞಾನೋಕ್ತಿಗಳು 4:23).

ಕ್ರೈಸ್ತೀಯ ಜೀವಿತದಲ್ಲಿ ಎದುರಿಸುವ ದೊಡ್ಡ ಸವಾಲುಗಳಲ್ಲಿ ಒಂದು ಯಾವುದೆಂದರೆ, ನಿರ್ಮಲವಾದ ಮತ್ತು ಶುದ್ಧವಾದ ಹೃದಯವನ್ನು ನಿಭಾಯಿಸುವುದು. ಆಗಾಗ್ಗೆ ಬಾಹ್ಯ ವಿಷಯಗಳೊಂದಿಗೆ ವ್ಯವಹರಿಸುವುದು ಸುಲಭ ನಾವು ಕುಡಿಯುವುದಿಲ್ಲ, ಧೂಮಪಾನ ಮಾಡುವುದಿಲ್ಲ, ಶಪಿಸುವುದಿಲ್ಲ, ಆಣೆ ಇಡುವುದಿಲ್ಲ, ಕೋಪಗೊಳ್ಳುವುದಿಲ್ಲ ಹಾಗೂ ಇತ್ಯಾದಿಗಳು. ದೇವರು ನಡವಳಿಕೆಯನ್ನು ನೋಡುವುದು ಮಾತ್ರವಲ್ಲದೆ ಹೃದಯದ ಮನೋಭಾವನೆಗಳು, ಆಶೆಗಳು, ಪ್ರಚೋಧನೆಗಳು ಮತ್ತು ಉದ್ದೇಶಗಳನ್ನು ನೋಡುತ್ತಾನೆ. ಅಪೊಸ್ತಲ ಪೌಲನು *"ಆದುದರಿಂದ ಕಾಲಕ್ಕೆ ಮೊದಲು ಯಾವುದನ್ನು ಕುರಿತೂ ತೀರ್ಪುಮಾಡಬೇಡಿರಿ; ಕರ್ತನು ಬರುವ ತನಕ ತಡೆಯಿರಿ, ಆತನು ಕತ್ತಲೆಯಲ್ಲಿರುವ ಗುಪ್ತ ಕಾರ್ಯಗಳನ್ನು ಬೆಳಕಿಗೆ ತರುವನು, ಹೃದಯದ ಯೋಚನೆಗಳನ್ನು ಪ್ರತ್ಯಕ್ಷಪಡಿಸುವನು; ಆ ಕಾಲದಲ್ಲಿ ಪ್ರತಿಯೊಬ್ಬನಿಗೆ ಬರತಕ್ಕ ಹೊಗಳಿಕೆಯು ದೇವರಿಂದ ಬರುವುದು"* (1 ಕೊರಿಂಥದವರಿಗೆ 4:5), ಎಂದು ನಮಗೆ ಹೇಳುತ್ತಾನೆ. ಕ್ರೈಸ್ತ ಸೇವಕರುಗಳಾಗಿ ನಾವು ಈ ಭಾಗದಲ್ಲಿ ಅತ್ಯಂತ ದೊಡ್ಡ "ವಂಚಕರಾಗು"ತ್ತೇವೆ–ಏಕೆಂದರೆ ನಾವು ಅತ್ಯಂತ ವೈಭವಯುತ ವಿಷಯಗಳನ್ನು ಪ್ರಸಂಗಿಸಿ ಸಾರುವಾಗ, ನಮ್ಮ ಹೃದಯಗಳ ಮತ್ತು ಮನಸ್ಸುಗಳ ಆಂತರಿಕ ಗೂಡುಗಳಲ್ಲಿ ಎಲ್ಲಾ ವಿಧವಾದ ಕೆಡುಕುಗಳು ಇರಲು ಸಾಧ್ಯ.

ಬಹುಶಃ ನಾವು ನಮ್ಮ ಪ್ರಚೋದನೆಗಳಲ್ಲಿ ನಾವು ಮಹಿಮೆ ಕೀರ್ತಿ ಹಾಗೂ ಗುರುತಿಸುವಿಕೆಗಳನ್ನು ನಾವು ಮಾಡುವ ಸೇವೆಗಳ ಮುಖಾಂತರ ಹುಡುಕುವಾಗ, ನಮ್ಮ ಹೃದಯಗಳು ತಪ್ಪಾಗಿರುತ್ತವೆ. ಯೇಸುವು *"ಕಲ್ಪಿಸಿ ಹೇಳುವವನು ತನಗೆ ಮಾನ ಬರಬೇಕೆಂದು ಅಪೇಕ್ಷಿಸುತ್ತಾನೆ; ತನ್ನನ್ನು ಕಳುಹಿಸಿದವನಿಗೆ ಮಾನಬರಬೇಕೆಂದು ಅಪೇಕ್ಷಿಸುವವನು ಸತ್ಯವಂತನು, ಅಧರ್ಮವು ಅವನಲ್ಲಿ ಇಲ್ಲ"* (ಯೋಹಾನ 7:18). ಎಂದು ಹೇಳಿದ್ದಾನೆ. ಬಹು ಹೆಚ್ಚಿನ ಮಟ್ಟಕ್ಕೆ ನಾನು ಮಹಿಮೆಯನ್ನು ನನಗಾಗಿ ಎದುರು ನೋಡುತ್ತೇನೆ. ಬಹು ಹೆಚ್ಚಿನ ಮಟ್ಟಕ್ಕೆ ನನ್ನಲ್ಲಿ ಅನೀತಿಯು ಇರುತ್ತದೆ.

ಕಣ್ಣಿನಾಶೆಗಳ ಆಲೋಚನೆಯನ್ನು ಹೊಂದಿರುವುದು ಕಾರ್ಯಮಾಡಿದ್ದಕ್ಕೆ ಸಮನಾದದ್ದಾಗಿರುತ್ತದೆ (ಮತ್ತಾಯ 5:28).

ಜನರಿಂದ ದುರಾಶೆಯ ಮನೋಭಾವನೆಗಳೊಂದಿಗೆ ನಮ್ಮ ಆಟಗಳನ್ನು ಮುಚ್ಚಿಟ್ಟು ಪವಿತ್ರರಾಗುವಂತೆ ಕಾಣಿಸಿಕೊಳ್ಳುವಾಗ ದೇವರು ಇನ್ನೂ ನಮ್ಮ ಆಂತರ್ಯವನ್ನು ನೋಡುತ್ತಾನೆ ಹಾಗೂ ನಾವು ಆತನ ದೃಷ್ಟಿಯಲ್ಲಿ ಪಾಪ ಮಾಡಿರುತ್ತೇವೆ.

ನಾವು "ಹಲ್ಲೆಲೂಯ!" ಎಂದು ಗುಂಪಿನ ಮುಂದೆ ಕೂಗುವಾಗ, ನಾವು ಬೇರೊಬ್ಬ ಜೊತೆ ಸೇವಕನು ದೇವರಿಂದ ಮಹತ್ತರವಾಗಿ ಬಳಸಲ್ಪಡುವಾಗ ಅಥವಾ ಒಂದು ಮಹಾ ಅವಕಾಶದೊಂದಿಗೆ ಆಶೀರ್ವದಿಸಲ್ಪಟ್ಟಾಗ ನಾವು ಹಾಗೇ ಮಾಡುತ್ತೇವೋ ಅಥವಾ ನಮ್ಮ ಹೃದಯಗಳು ತಕ್ಷಣವೇ ಅಸೂಯೆ ಮತ್ತು ಹೊಟ್ಟೆ ಕಿಚ್ಚಿನಿಂದ ತುಂಬಿಕೊಳ್ಳುತ್ತವೋ? ಮತ್ತೊಬ್ಬ ಸೇವಕನೊಂದಿಗೆ ಹೇಗೆ ಸ್ಪರ್ಧಿಸಬೇಕು ಹಾಗೂ ಹಿಡಿಯಬೇಕೆಂದು ಯೋಜನೆಯ ವ್ಯವಸ್ಥೆ ಮಾಡುತ್ತೇವೋ?

ಮತ್ತೊಬ್ಬ ಸ್ಥಳೀಯ ಸಭಾಪಾಲಕರು ಅಥವಾ ಸಭೆಯು ನಮಗಿಂತ ಅಥವಾ ನಮ್ಮ ಸ್ವಂತ ಸಭೆಗಿಂತ ಉತ್ತಮವಾಗಿ ಮಾಡುತ್ತಾರೆಂದು ನಾವು ಕೇಳುವಾಗ ನಾವು ತಕ್ಷಣವೇ ಅಸುರಕ್ಷತೆಯ ಭಾವನೆ ಹೊಂದುತ್ತೇವೋ? ನಮ್ಮ ಸಭೆಯ ಜನರು ಬೆರೊಂದು ಸಭೆಯಲ್ಲಿ ಆರಾಧನೆಗಾಗಿ ಭೇಟಿಕೊಡುತ್ತಾರೆ ಅಥವಾ ಬೇರೊಬ್ಬ ಸಭಾ ಪಾಲಕರು ಅಥವಾ ಉಪದೇಶಕರಿಂದ ವ್ಯವಸ್ಥೆ ಮಾಡಲ್ಪಟ್ಟ ಕೂಟಕ್ಕೆ ಹಾಜರಾದರೆ ನೀವು ಅಸುರಕ್ಷತೆಯ ಭಾವ ಹೊಂದುತ್ತೀರೋ? ಆಗ ನಾವು "ಮಂದೆಯನ್ನು ಕಾಯುವಿಕೆ" ಹಾಗೂ "ಮಂದೆಯ ಮೇಯಿಸುವಿಕೆಯ" ಹೆಸರಿನಲ್ಲಿ ಇತರ ದೇವ ಸೇವಕರಿಂದ ಪ್ರತ್ಯಕ್ಷವಾದ ಹಾಗೂ ಅಪ್ರತ್ಯಕ್ಷವಾದ ಮಾರ್ಗಗಳಲ್ಲಿ, ಇತರ ದೇವ ಸೇವಕರಿಂದ ಪಡೆದು ಕೊಳ್ಳುವುದರಿಂದ ಜನರನ್ನು ತಡೆಯಲು ಯೋಚಿಸುತ್ತಿದ್ದೇವಾ? ನಮ್ಮ ನಾಯಕತ್ವದಲ್ಲಿ ಸೇವಕರುಗಳಲ್ಲಿ ಒಬ್ಬರು, ನಮ್ಮೆಲರಿಗಿಂತ ಮೇಲೆ ಇದ್ದಕ್ಕಿದ್ದಂತೆ ಎದ್ದು, ನಮಗಿಂತ ಉತ್ತಮವಾಗಿ ಮಾಡುವರೆಂದು ನಾವು ಭಯ ಪಡುತ್ತೇವಾ? ಇವೆಲ್ಲವೂ ಕೇವಲ ಅಸುರಕ್ಷಿತ ಹೃದಯದ ಸಂಕೇತಗಳಾಗಿರುತ್ತವೆ.

ನಾವೆಲ್ಲಾ ಕ್ರೈಸ್ತ ಸೇವಕರು ಒಂದು ಹಂತದಲ್ಲಿ ಮೇಲಿನ ಎಲ್ಲಾ ಭಾಗಗಳಲ್ಲಿಯೂ ಇಲ್ಲದಿದ್ದರೂ ಹೋರಾಟಕ್ಕೆ ಒಳಗಾಗಿರಬೇಕೆಂದು ನಾನು ಯೋಚಿಸುತ್ತೇನೆ. ನಾನು ಹೊಂದಿರುತ್ತೇನೆಂದು ನನಗೆ ಗೊತ್ತು.

ವರ್ಷಗಳ ಕಾಲ, ನಾನು ಒಂದು ಶುದ್ಧವಾದ ಹಾಗೂ ನಿರ್ಮಲವಾದ ಹೃದಯವನ್ನು ಎಲ್ಲ ಸಮಯಗಳಲ್ಲಿ ಹೊಂದಿಕೊಳ್ಳಲು ಪ್ರಯತ್ನಿಸಿದ್ದೇನೆ. ಇದು ಹೃದಯ ಭಾಗ-ಅಂದರೆ ದೇವರು ಮತ್ತು ಸೇವೆಯೊಂದಿಗೆ ಸಂಬಂಧವು ಆರಂಭವಾಗುವ ಮಧ್ಯದ ಭಾಗವಾಗಿರುತ್ತದೆ. ದೇವರು ಸತ್ಯ ಹಾಗೂ ನಿರ್ಮಲತೆಯನ್ನು ಹೃದಯದಲ್ಲಿರಬೇಕೆಂದು ನೋಡುತ್ತಾನೆ (ಕೀರ್ತನೆ 51:6) ಹಾಗೂ *"ನಾನು ಕೆಟ್ಟತನದ ಮೇಲೆ ಮನಸ್ಸಿಟ್ಟಿದ್ದರೆ, ಸ್ವಾಮಿಯು ನನ್ನ ವಿಜ್ಞಾಪನೆಯನ್ನು ಕೇಳುತ್ತಿದ್ದಿಲ್ಲ"* (ಕೀರ್ತನೆ 66:18). ವೈಯಕ್ತಿಕವಾಗಿ, ನಾವು ಹೇಗೆ ಒಂದು ಶುದ್ಧವಾದ ಹೃದಯವನ್ನು ಇಟ್ಟುಕೊಳ್ಳುವ ಬಗ್ಗೆ ನಾನು ಪ್ರಯತ್ನಿಸಿದೆನೆಂಬುದು ಇಲ್ಲಿ ತಿಳಿಯುತ್ತದೆ. ಬಹಿರಂಗವಾಗಿ ಆತ್ಮ ನಿರೀಕ್ಷಣೆ ಮಾಡದೆ, ಆತ್ಮ ಶಿಕ್ಷೆಗೆ ಒಳಪಡುತ್ತಾ ನಾನು ನನ್ನನ್ನೇ ತೀರ್ಪು ಮಾಡಿಕೊಳ್ಳುತ್ತೇನೆ. ನನ್ನ ಹೃದಯದ ಮತ್ತು ಮನಸ್ಸಿನ ಆಂತರಿಕ ಆಲೋಚನೆಗಳು, ಭಾವನೆಗಳು, ಉದ್ದೇಶಗಳು ಹಾಗು ಆಶೆಗಳನ್ನು ಮೌಲ್ಯ ಮಾಪನ ಮಾಡುವಾಗ ನಾನು ನನಗೂ ಹಾಗೂ ದೇವರಿಗೂ ಸತ್ಯವಾಗಿರಬೇಕಾದ ಅಗತ್ಯತೆ ನನಗಿದೆ. ನನ್ನೊಳಗೆ ಏನು ಆಗುತ್ತಿದೆ ಎಂಬುದರ ಬಗ್ಗೆ ನಾನು ನನಗೂ ಅಥವಾ ದೇವರಿಗೂ ಸುಳ್ಳು ಹೇಳಲು ನಾನು ಬಯಸುವುದಿಲ್ಲ. ಪೌಲನು ನಮಗೆ, *"ನಮ್ಮನ್ನು ನಾವೇ ವಿಚಾರಿಸಿಕೊಂಡರೆ, ನ್ಯಾಯ ವಿಚಾರಣೆಗೊಳಗಾಗುವುದಿಲ್ಲ"* ಎಂದು ನಮಗೆ ಕಲಿಸುತ್ತಾನೆ (1 ಕೊರಿಂಥದವರಿಗೆ 11:31). ನನ್ನ ಆಲೋಚನೆಗಳು ಹಾಗೂ ನನ್ನ ಸ್ವಂತ ಹೃದಯದ ಉದ್ದೇಶಗಳನ್ನು ವಿವೇಚಿಸುವ ಪ್ರಕ್ರಿಯೆಯಲ್ಲಿ ನನಗೆ ಸಹಾಯ ಮಾಡುವಂತೆ ನಾನು ಕರ್ತನನ್ನು ಆಹ್ವಾನಿಸುತ್ತೇನೆ. ಕೀರ್ತನೆಗಾರನಂತೆ ನಾನು ಆಗಾಗ್ಗೆ *"ದೇವಾ, ನನ್ನನ್ನು ಪರೀಕ್ಷಿಸಿ ನನ್ನ ಶೋಧಿಸಿ ನನ್ನ ಆಲೋಚನೆಗಳನ್ನು ಗೊತ್ತುಮಾಡು. ನಾನು ಕೇಡಿನ ಮಾರ್ಗದಲ್ಲಿರುತ್ತೇನೋ ಏನೋ ನೋಡಿ ಸನಾತನ ಮಾರ್ಗದಲ್ಲಿ ನನ್ನನ್ನು ನುಡಿಸು"* (ಕೀರ್ತನೆ 139:23-24) ಎಂದು ಪ್ರಾರ್ಥಿಸುತ್ತೇನೆ. ದೇವರ ಹೃದಯಕ್ಕೆ ಹೊಂದಿಕೆಯಾಗದಿರುವ ಆಲೋಚನೆಗಳು. ಪ್ರಚೋದನೆಗಳು ಅಭಿಪ್ರಾಯಗಳು ಆಶೆಗಳನ್ನು ನಾನು ಗುರುತಿಸುತ್ತಿದ್ದಂತೆ ನನ್ನನ್ನು ಇವುಗಳಿಂದ ಶುಚಿ ಮಾಡಬೇಕೆಂದು ಕರ್ತನನ್ನು ಬೇಡಿಕೊಳ್ಳುತ್ತೇನೆ. ಆತನ ವಾಕ್ಯ ಹಾಗೂ ಆತನ ಆತ್ಮನ ಮುಖಾಂತರ ನನ್ನ ಹೃದಯ ಮತ್ತು ಮನಸ್ಸಿನಿಂದ ಇವುಗಳನ್ನು ತೆಗೆದು

ಹಾದುವಂತೆ ದೇವರ ಶುದ್ಧೀಕರಿಸುವ ಹಾಗೂ ಸಂಸ್ಕರಿಸುವ ಅಗ್ನಿಯನ್ನು ನಾನು ಆಹ್ವಾನಿಸುತ್ತೇನೆ. ಕೆಲವು ವೇಳೆ ಬಿಡುಗಡೆಯು ಶೀಘ್ರವೂ ಹಾಗೂ ಸುಲಭವಾಗಿ ನಡೆಯುವುದೂ ಆಗಿರುತ್ತದೆ. ಕೆಲವು ವೇಳೆ ಕೆಲವು ದಿನಗಳ ಕಾಲ ನಾನು ಯಾವುದಾದರೊಂಗೆ ಹೋರಾಡಬೇಕಾಗುತ್ತದೆ—ಆದರೆ ನಾನು ಪ್ರಾರ್ಥಿಸುವುದನ್ನು ಮುಂದುವರಿಸುತ್ತೇನೆ ಹಾಗೂ ಈ ವಲಯದಲ್ಲಿ ನನ್ನನ್ನು ಬಲ ಪಡಿಸಲು, ದೇವರ ಕೃಪೆಯನ್ನು ನಾನು ಆಹ್ವಾನಿಸುತ್ತೇನೆ. ನಾನು ಮತ್ತೊಂದು ಪ್ರಯೋಜನಕರವಾದ ಅಂಶವನ್ನು ಕಂಡು ಕೊಂಡೆನು, ಅದೇನೆಂದರೆ, ನಾನು ಶುದ್ಧವಾಗಿ ಉಳಿಯಲು ಅಗತ್ಯತೆಯನ್ನು ಕಂಡುಕೊಂಡ ನಿರ್ದಿಷ್ಟವಾದ ಸತ್ಯವೇದ ಭಾಗವನ್ನು ಧ್ಯಾನಿಸುವುದು. ನಾನು ಸಂಬಂಧಪಟ್ಟ ಸತ್ಯವೇದ ಭಾಗವನ್ನು ಓದಲು ಮತ್ತು ಧ್ಯಾನಿಸಲು ಸಮಯ ತೆಗೆದುಕೊಳ್ಳುತ್ತೇನೆ ಹಾಗೂ ಇದು ಶುದ್ಧತೆಯನ್ನು ತರಲು ಹಾಗೂ ಶುದ್ಧವಾದ ಮತ್ತು ನಿರ್ಮಲವಾದ ಹೃದಯವನ್ನು ನಿರ್ವಹಿಸಲು ಸಹಾಯ ಮಾಡುತ್ತದೆ. ವೈಯಕ್ತಿಕವಾಗಿ ನಾನು, ನಮ್ಮ ಹೃದಯಗಳನ್ನು ನಿರ್ಮಲವಾಗಿಟ್ಟುಕೊಂಡು, ನಮ್ಮ ಪ್ರಚೋದನೆಗಳು, ಆಲೋಚನೆಗಳು ಮತ್ತು ಆಶೆಗಳನ್ನು ನಮ್ಮೊಳಗೆ ಕಾಯ್ದುಕೊಳ್ಳುವುದಾದರೆ, ಅರ್ಧದಷ್ಟು ಹೋರಾಟವನ್ನು ಗೆಲ್ಲ ಬಹುದೆಂದು ನಂಬುತ್ತೇನೆ.

## ನಿಮ್ಮ ಸ್ವಂತ ಮನಸಾಕ್ಷಿಯನ್ನು ಕೊಲ್ಲಬೇಡಿರಿ

**"ಆಗ ಪೌಲನು ಹಿರೀ ಸಭೆಯನ್ನು ದೃಷ್ಟಿಸಿ ನೋಡಿ– ಸಹೋದರರೇ, ನಾನು ಈ ದಿನದವರೆಗೂ ಒಳ್ಳೇ ಮನಸಾಕ್ಷಿಯಿಂದ ದೇವರ ಮುಂದೆ ನಡೆದು ಕೊಂಡಿದ್ದೇನೆ ಅಂದನು"** (ಅಪೊಸ್ತಲರ ಕೃತ್ಯ 23:1)

**"ಇದರ ದೆಸೆಯಿಂದ ದೇವರ ವಿಷಯದಲ್ಲಿಯೂ ಮನುಷ್ಯರ ವಿಷಯದಲ್ಲಿಯೂ ನಾನು ನಿರ್ದೋಷಿ ಎಂದು ಸಾಕ್ಷಿ ಹೇಳುವ ಮನಸ್ಸು ನನಗೆ ಯಾವಾಗಲೂ ಇರಬೇಕೆಂದು ಅಭ್ಯಾಸ ಮಾಡಿಕೊಳ್ಳುತ್ತೇನೆ"** (ಅಪೊಸ್ತಲರ ಕೃತ್ಯ 24:16)

ನಮ್ಮ ಮನ ಸಾಕ್ಷಿಯು ನಮ್ಮ ಹೃದಯದಲ್ಲಿಡಲ್ಪಟ್ಟಿರುವ ದೈವದತ್ತ ಗತಿ ನಿಯಂತ್ರಕವಾಗಿದೆ (ರೋಮಾಪುರದವರಿಗೆ 2:15). ಇದು ನಾವು ಯಾವಾಗ ಸರಿಯಾಗಿದ್ದೇವೆ, ಯಾವಾಗ ಸರಿಯಾಗಿಲ್ಲ ಎಂದು ನಮಗೆ ಹೇಳುತ್ತದೆ. ನಮ್ಮ ಮನಸಾಕ್ಷಿಯು ಪವಿತ್ರಾತ್ಮನ ಸಾಕ್ಷಿಯಾಗಲು ಹೊಂದಿಕೊಳ್ಳಲ್ಪಟ್ಟ ಸಾಕ್ಷಿಯನ್ನು ಹೊಂದಿರುತ್ತದೆ.

ಇದು ಪವಿತ್ರಾತ್ಮನು ನಮ್ಮೊಂದಿಗೆ ಏನು ಮಾತಾಡುತ್ತಾನೋ ಅದನ್ನು ಅವಶ್ಯಕವಾಗಿ ಭದ್ರಪಡಿಸುತ್ತದೆ (ರೋಮಾಪುರದವರಿಗೆ 9:1). ಪೌಲನು ಕ್ರೈಸ್ತೀಯ ಸೇವೆಯಲ್ಲಿ ಕಾರ್ಯ ಮಾಡುವವರ ಬಗ್ಗೆ ಬರೆಯುವಾಗ, *"ಅದೇ ರೀತಿಯಾಗಿ ಸಭಾಸೇವಕರು ಗೌರವವುಳ್ಳವರಾಗಿರಬೇಕು. ಅವರು ಎರಡು ಮಾತಿನವರೂ, ಮದ್ಯ ನಿರತರೂ ನೀಚಲಾಭವನ್ನು ಅಪೇಕ್ಷಿಸುವವರೂ ಆಗಿರದೆ ನಂಬಿದವರಿಗೆ ಪ್ರಕಟವಾಗಿರುವ ಸತ್ಯಾರ್ಥವನ್ನು ಶುದ್ಧ ಮನಸ್ಸಾಕ್ಷಿಯಿಂದ ಕೈಕೊಳ್ಳುವವರಾಗಿರಬೇಕು"* (1 ತಿಮೊಥೆಯನಿಗೆ 3:8,9) ಎಂದು ಬರೆದಿರುತ್ತಾನೆ. ಕ್ರೈಸ್ತ ಸೇವಕರಾಗಿ, ನಾವು ನಮ್ಮ ಸೇವೆಯನ್ನು ನಿರ್ಮಲವಾದ ಮನಸಾಕ್ಷಿಯೊಂದಿಗೆ ದ್ವಿಗುಣಗೊಳಸಬೇಕು—ಒಂದು ನಿರ್ಮಲವಾದ ಹಾಗೂ ಶುದ್ಧವಾದ ಮನಸ್ಸಾಕ್ಷಿಯು ದೇವರ ಕಡೆಗೆ ಭಯ ಭಕ್ತಿಯಿಂದಿರಲು, ನಮ್ಮ ನಾಲಗೆಗಳನ್ನು ಹಸಿವುಗಳನ್ನು ಹಿಡಿತದಲ್ಲಿಟ್ಟುಕೊಂಡು, ಹಣದ ಮೇಲಿನ ಪ್ರೀತಿಯಿಂದ ದೂರವಾಗಿ ಬಿಡುಗಡೆಯಾಗಿ ಇರುವುದರಲ್ಲಿ ನಡೆಯುವ ಅಗತ್ಯತೆ ನಮಗಿದೆ. ನಾವು ನಮ್ಮ ಸ್ವಂತ ಮನಸಾಕ್ಷಿಗಳನ್ನು ಕುಗ್ಗಿಸಲು, ನಮ್ಮ ಸ್ವಂತ ಮನಸ್ಸಾಕ್ಷಿಗಳನ್ನು ನಿಗ್ರಹಿಸಲು ಹಾಗೂ ಕೊಲ್ಲಲು ಆರಂಭಿಸಿದರೆ, ಆಗ ನಾವು ಶೀಘ್ರದಲ್ಲಿಯೇ ಕಪಟತನದಲ್ಲಿ ಸುಳ್ಳು ಮಾತನ್ನಾಡುವುದನ್ನು ಕೊನೆಗೊಳಿಸುತ್ತೇವೆ (1 ತಿಮೊಥೆ 4:2) ಹಾಗೂ ಇದರ ಬಗ್ಗೆ ಯಾವ ಮರುಕವನ್ನೂ ನಾವು ಹೊಂದುವುದಿಲ್ಲ. ಇದು ಒಂದು ಅಪಾಯಕಾರಕ ಸ್ಥಳವಾಗಿರುತ್ತದೆ.

ಕೆಲವು ಕ್ರೈಸ್ತ ಸೇವಕರು ಉತ್ತಮವಾಗಿ ಆರಂಭಿಸಿ, ಸೇವೆಯ ಹಣವನ್ನು ದುರುಪಯೋಗಪಡಿಸಿ ಅಥವಾ ತಪ್ಪಾಗಿ ಬಳಸಿಕೊಂಡು ತಕ್ಷಣ ಸುಳ್ಳುಗಳನ್ನು ಹೇಳುವುದು, ಕೊಲೆಗಳು, ಕಳಂಕ ಮುಂತಾದ ಘೋರವಾದ ಅಪರಾಧಗಳಲ್ಲಿ ಅಂತ್ಯಗೊಳ್ಳುವುದು ಏಕೆ? ನಿಧಾನವಾಗಿ ಒಂದು ಶುದ್ಧವಾದ ಮನಸಾಕ್ಷಿಯನ್ನು ಹೊಂದಿಕೊಳ್ಳುವುದರಿಂದ ಒಂದು ನಿರ್ಗಮನವಿತ್ತು. ನಿಧಾನವಾಗಿ ಅವರ ಸ್ವಂತ ಮನಸಾಕ್ಷಿಗಳ ಸ್ವರವು ಉತ್ತಮವಾಗಿ ಎಣಿಸಲ್ಪಟ್ಟ ಅಭಿಪ್ರಾಯಗಳೊಂದಿಗೆ, ಆಲೋಚನೆ, ನೆಪಗಳು ಹಾಗೂ ಸತ್ಯವೇದಾಧಾರಿತ ತೀರ್ಪುಗಳು ನಿಗ್ರಹಿಸಲ್ಪಟ್ಟು, ತಮ್ಮ ಮನಸ್ಸಾಕ್ಷಿಗಳು ಎಂದಿಗೂ ಕೇಳಿಸಿಕೊಳ್ಳದ ಹಾಗೆ ಆಗುತ್ತವೆ. ಪೌಲನು ನಮ್ಮನ್ನು ಎಚ್ಚರಿಸುತ್ತಾನೆ. ಏನೆಂದರೆ, ನಾವು ಒಳ್ಳೆ ಮನಸ್ಸಾಕ್ಷಿಯೊಂದಿಗೆ

ನಂಬಿಕೆಯನ್ನು ಹೊಂದಿಕೊಂಡಿರಬೇಕೆಂದು ಪೌಲನು ನಮ್ಮನ್ನು ಎಚ್ಚರಿಸುತ್ತಾನೆ. ನಾವು ಒಂದು ಒಳ್ಳೆ ಮನಸ್ಸಾಕ್ಷಿಯನ್ನು ತಿರಸ್ಕರಿಸಿದರೆ, ನಾವು ನಮ್ಮ ನಂಬಿಕೆಯ "ಹಡಗು ಒಡೆದ" ಸ್ಥಿತಿಯ ಬಾಧೆಯನ್ನು ಅನುಭವಿಸುತ್ತೇವೆ (1 ತಿಮೊಥೆ 1:19)—ಅಗತ್ಯವಾಗಿ ನಮ್ಮ ನಂಬಿಕೆಯ ಹೋರಾಟದಲ್ಲಿ ಒಂದು ಪ್ರಮುಖ ಅಪಘಾತ ಉಂಟಾಗುತ್ತದೆ. "ನಂಬಿಕೆಯ ಒಡೆದ ಸ್ಥಿತಿ"ಯಿಂದ ನಾವು ಚೇತರಿಸಿಕೊಳ್ಳಲು ದೇವರು ನಮಗೆ ಸಹಾಯ ಮಾಡಲು ಸಾಧ್ಯವೋ? ಆತನಿಗೆ ಸಾಧ್ಯವೆಂಬುದು ನಿಶ್ಚಯ. ನಾವು ಶುದ್ಧವಾದ ಹಾಗೂ ಒಂದು ಒಳ್ಳೆಯ ಮನಸಾಕ್ಷಿಯನ್ನು ಹೊಂದುವುದನ್ನು ದೃಢಪಡಿಸಿದರೆ, ಮೊದಲ ಸ್ಥಾನದಲ್ಲಿಯೇ ನಾವು ನಮ್ಮ ನಂಬಿಕೆಯ ಹಡಗು ಒಡೆದ ಸ್ಥಿತಿಯನ್ನು ತಡೆಯಬಹುದು.

ನಿಮ್ಮ ಮನಸ್ಸಾಕ್ಷಿಯನ್ನು ಆಲಿಸುತ್ತೀರಿ, ಅದನ್ನು ಕೊಲ್ಲಬೇಡಿರಿ. ಇದು ಒಂದು ಸಣ್ಣ ವಿಷಯವಾಗಿರುತ್ತದೆ. ಆದರೆ ಒಂದು ದೊಡ್ಡ ವ್ಯತ್ಯಾಸವನ್ನು ಮಾಡಲು ಸಾಧ್ಯ.

## ಪರಿಶುದ್ಧತೆಗಾಗಿ ನಿಮ್ಮ ಅನುಕಂಪವನ್ನು ಉಜ್ವಲಿಸಿರಿ

**"ಆದರೂ ದೇವರ ಸ್ಥಿರವಾದ ಅಸ್ಥಿವಾರವು ನಿಲ್ಲುತ್ತದೆ. ಅದರ ಮೇಲೆ–ತನ್ನವರು ಯಾರಾರೆಂಬುದನ್ನು ಕರ್ತನು ತಿಳಿದಿದ್ದಾನೆಂತಲೂ ಕರ್ತನ ನಾಮವನ್ನು ಹೇಳಿಕೊಳ್ಳುವವರೆಲ್ಲರು ದುರ್ಮಾರ್ಗತನವನ್ನು ಬಿಟ್ಟುಬಿಡಬೇಕೆಂತಲೂ ಲಿಪಿಯುಂಟು. ದೊಡ್ಡ ಮನೆಯಲ್ಲಿ ಬೆಳ್ಳಿ ಬಂಗಾರದ ಪಾತ್ರೆಗಳಲ್ಲದೆ ಮರದ ಪಾತ್ರೆಗಳೂ ಮಣ್ಣಿನ ಪಾತೆಗಳೂ ಇರುತ್ತವೆ; ಅವುಗಳಲ್ಲಿ ಕೆಲವು ಉತ್ತಮವಾದ ಬಳಕೆಗೂ ಕೆಲವು ಹೀನವಾದ ಬಳಕೆಗೂ ಬರುತ್ತವೆ. ಹೀಗಿರಲಾಗಿ ಒಬ್ಬನು ಹೀನ ನಡತೆಯುಳ್ಳವರ ಸಹವಾಸವನ್ನು ಬಿಟ್ಟು ತನ್ನನ್ನು ಶುದ್ಧ ಮಾಡಿಕೊಂಡರೆ ಅವನು ಉತ್ತಮವಾದ ಬಳಕೆಗೆ ಯೋಗ್ಯನಾಗಿರುವನು; ಅವನು ದೇವರ ಸೇವೆಗೆ ಪ್ರತಿಷ್ಠಿತನಾಗಿಯೂ ಯಜಮಾನನಿಗೆ ಉಪಯುಕ್ತನಾಗಿಯೂ ಸಕಲ ಸತ್ಕ್ರಿಯೆಗಳನ್ನು ಮಾಡುವುದಕ್ಕೆ ಸಿದ್ಧನಾಗಿಯೂ ಇರುವನು. ನೀನು ಯೌವನದ ಇಚ್ಛೆಗಳಿಗೆ ದೂರವಾಗಿರು; ನೀತಿ ವಿಶ್ವಾಸ ಪ್ರೀತಿ ಮತ್ತು ಸಮಾಧಾನವನ್ನು ಸಂಪಾದಿಸುವುದಕ್ಕೆ ಶುದ್ಧ ಹೃದಯವುಳ್ಳವರಾಗಿ ಕರ್ತನನ್ನು ಬೇಡಿಕೊಳ್ಳುವವಾ ಸಂಗಡ ಪ್ರಯಾಸಪಡು"**
(2 ತಿಮೊಥೆಯನಿಗೆ 2:19–22).

ಈ ದಿನ ಸಭೆಯಲ್ಲಿ ಹೆಚ್ಚಾಗಿ ವೈಯಕ್ತಿಕ ಶುಚಿತ್ವದ ಒತ್ತಡವು ಇರುವುದಿಲ್ಲ. ವೈಯಕ್ತಿಕ ಶುಚಿತ್ವ—ಯಾವುದು ಅಶುದ್ಧವೋ ಅದರಿಂದ ನಮ್ಮನು ಶುಚಿಗೊಳಿಸುವುದು ಅತ್ಯಗತ್ಯ. ದೇವರ ಮನೆಯಲ್ಲಿ ನಾವು

ಗೌರವದ ಪಾತ್ರೆಗಳಾಗಿ ಇರುವುದಾದರೆ, ಅದನ್ನು ಒತ್ತಟ್ಟಿಗಿಟ್ಟು ಒಡೆಯನ ಉಪಯೋಗಕ್ಕೆ ಸಿದ್ಧಪಡಿಸಿಕೊಳ್ಳಿರಿ. ನಾವು ವೈಯಕ್ತಿಕ ಶುಚಿತ್ವವು ಒಂದು ಬಲಹೀನತೆ, ಒಂದು ವಿಲಕ್ಷಣತೆ ಹಾಗೂ ಚಾರಿತ್ರ್ಯವಲ್ಲದ್ದೆಂಬ ಒಂದು ಪ್ರಪಂಚದಲ್ಲಿ ನಾವು ಬಾಳುತ್ತಿದ್ದೇವೆ ಎಂದು ಭಾವಿಸುತ್ತೇವೆ. "ಪಾಪ" ಮತ್ತು "ಅಶುದ್ಧತೆ"ಗಳು ಆ ಹೆಸರುಗಳಿಂದ ಕರೆಯಲ್ಪಡದೆ ಹೋದರೂ ಲೋಕವು ಇದನ್ನು, "ಅಶುದ್ಧತೆ"ಗೆ ಸಾಮಾನ್ಯವಾದುದ್ದೆಂದು ಅಭಿಪ್ರಾಯ ಪಡುತ್ತದೆ, ಆದರೆ ಒಂದು ವ್ಯಕ್ತಿಗತ ಒಲವಿನದಾಗಿ ಅಥವಾ ವೈಯಕ್ತಿಕ ಜೀವನ ಶೈಲಿಯ ಆಯ್ಕೆಯಾಗಿ ಅಭಿಪ್ರಾಯಕ್ಕೆ ಒಳಗಾಗಿದೆ. ದುರದೃಷ್ಟಕರವಾಗಿ ಈ ಅಭಿಪ್ರಾಯಗಳು ಹಾಗೂ ಪಾಪದ ಕಡೆಗಿನ ಅದೇ ಕ್ರೂರತ್ವವು ಸಭೆಯೊಳಗೆ ಬಂದಂತೆ ಕಾಣುತ್ತದೆ. ಕ್ರೈಸ್ತ ಸೇವಕರಾಗಿ, ಬೆಳೆಯುವ ಸಭೆಗಳ ಸೇವೆಗಳನ್ನು ಬೆಳೆಸುವುದು. ಗುಂಪುಗಳನ್ನು ಆಕರ್ಷಿಸುವ, ಆದರೆ ಪಾಪದ ವಲಯದಲ್ಲಿ ಅಲಕ್ಷ್ಯಭಾವ ಹೊಂದುವ ಸಂದೇಶಗಳನ್ನು ನೀಡುವುದು, ಇವುಗಳೊಂದಿಗೆ ಪೂರ್ವಾಕ್ರಮಣ ಹೊಂದುವುದು ಬಹು ಸುಲಭವಾಗಿರುತ್ತದೆ. ಸೇವೆಯಲ್ಲಿ ನಮ್ಮ ಕಾರ್ಯ ಮಗ್ನತೆಯು ಅಥವಾ ಕೆಲವು ವೇಳೆ ನಾವು ಕಾಣುವ ಯಶಸ್ಸು ಮತ್ತು ಫಲವು, ವೈಯಕ್ತಿಕ ಶುದ್ಧತ್ವಕ್ಕೆ ಬರುವಾಗ ನಮ್ಮನ್ನು "ಸುಲಭವಾಗಿ ತೆಗೆದುಕೊಳ್ಳುವಂತೆ" ಪ್ರೇರಿಸುತ್ತದೆ. ನಿಧಾನವಾಗಿ ನಾವು ಶುಚಿತ್ವದ ಕಡೆಗೆ ಸಂದೇಶ ನೀಡುವುದನ್ನು ನಿಲ್ಲಿಸುತ್ತೇವೆ. ಏಕೆಂದರೆ, ಹೇಗಿದ್ದರೂ ಪ್ರತಿಯೊಂದೂ ಒಳ್ಳೇ ರೀತಿ ಸಾಗುತ್ತದೆಂಬಂತೆ ಕಾಣುತ್ತದೆ. ನಾವು ಒಮ್ಮೆ ತಾಳಿಕೊಳ್ಳಲಿಕ್ಕಾಗದಂಥ ಪಾಪಗಳೊಡನೆ ಸಂಧಾನ ಮಾಡಿಕೊಳ್ಳಲು, ಹೊಂದಿಕೊಳ್ಳಲು ಹಾಗೂ ಮಾರ್ಪಡಿಸಿಕೊಳ್ಳಲು ಆರಂಭಿಸುತ್ತೇವೆ. ಶೀಘ್ರದಲ್ಲಿ ನಾವು ತಾಳಿಕೊಳ್ಳುವ ಈ ಪಾಪಗಳು ನಮ್ಮ ಜೀವಿತಗಳನ್ನು ಆಳಲು ಆರಂಭಿಸುತ್ತವೆ. ಇದು ನಿಲ್ಲದಿದ್ದರೆ, ಮೇಲಿನಿಂದ ಕೆಳಗಿನ ಒಲವಿನಲ್ಲಿ ನಾವು ಕೊನೆಗೊಳ್ಳುತ್ತೇವೆ, ಇದು ಹಾನಿಕರವಾಗಿ ಪರಿಣಮಿಸುತ್ತದೆ. ಇದರ ವಿರುದ್ಧವಾಗಿ ಕಾಪಾಡುವ ಒಂದೇ ದಾರಿಯು ಶುದ್ಧತೆಯ ಕಡೆಗೆ ನಮ್ಮ ಒಲವನ್ನು ಎಲ್ಲಾ ಸಮಯಗಳಲ್ಲಿ ಇರಿಸುವಂಥದ್ದಾಗಿರುತ್ತದೆ. ನಾವು ಎಡೆಬಿಡದೆ, ಜೀವಿತಕ್ಕಾಗಿ ಹಾಗೂ ಸೇವೆಗಾಗಿ ದೇವರ ದೃಢವಾದ ಅಸ್ತಿವಾರವಾದ ಪಾಪದಿಂದ ಹೊರಬಂದ, ಕ್ರಿಸ್ತನ ಹೆಸರನ್ನು ಹೊಂದಿದ ಹೆಸರುಗಳನ್ನು ಹೊಂದಿದ ಹೆಸರುಗಳನ್ನು ಹೊಂದಿದ ಪ್ರತಿಯೊಬ್ಬರಿಗೂ

ಅನಗತ್ಯವಾಗಿದೆ ಎಂದು ನೆನಪು ಮಾಡಿಕೊಳ್ಳಬೇಕು. ಪಾಪವನ್ನು ತಾಳಿಕೊಳ್ಳುವ ಯಾವುದಾದರೂ ಕಟ್ಟಡ ನಿರ್ಮಾಣಕ್ಕ ದೃಢವಿಲ್ಲದ ಅಸ್ತಿವಾರವಾಗಿರುತ್ತದೆ.

## ವೈಯಕ್ತಿಕವಾದ ನೈತಿಕ ಸರಹದ್ದುಗಳನ್ನು ಸಿದ್ಧಪಡಿಸುವುದು

**"ಸನ್ಮಾರ್ಗವನ್ನು ಲಕ್ಷಿಸಿ ನಡೆಯುವೆನು; ನನಗೆ ಯಾವಾಗ ದರ್ಶನ ಕೊಡುವಿ? ಮನೆಯೊಳಗೂ ಯಥಾರ್ಥ ಹೃದಯದಿಂದಲೇ ಪ್ರವರ್ತಿಸುವೆನು. ಯಾವ ನೀಚವಾದಕಾರ್ಯವನ್ನೂ ದೃಷ್ಟಿಸುವುದಿಲ್ಲ; ದುರಾಚಾರವನ್ನು ಹಗೆ ಮಾಡುತ್ತೇನೆ, ಅದರ ಗೊಡವೆಯೇ ನನಗೆ ಬೇಡ"** (ಕೀರ್ತನೆಗಳು 101:2,3).

ದೇವರ ಮುಂದೆ ಪರಿಪೂರ್ಣವಾದ ಮಾರ್ಗದಲ್ಲಿ ನಡೆಯಲು ನಾವು ಜ್ಞಾನ ಮತ್ತು ವಿವೇಕಗಳನ್ನು ರೂಢಿಮಾಡಿಕೊಳ್ಳಬೇಕು. ನಮಗಾಗಿ ನಾವು ಸಿದ್ಧಪಡಿಸಿಕೊಳ್ಳಬಹುದಾದ ಕೆಲವು ಸರಳವಾದ ಸರಹದ್ದುಗಳು ನಮಗೆ, ಅನವಶ್ಯಕವಾದ ತೊಂದರೆಗಳಿಂದ ಬೀಳದಂತೆ ಸಹಾಯಮಾಡುತ್ತವೆ. ನಾನು ಪ್ರಯೋಜನಕರವೆಂದು ಕಂಡ ಕೆಲವು ಸರಹದ್ದುಗಳು ಇಲ್ಲವೆ, ಇವುಗಳನ್ನು ನಾನು ನನ್ನ ಜೀವಿತದಲ್ಲಿನ ಆರಂಭದಲ್ಲಿಯೇ ನನಗಾಗಿ ಸಿದ್ಧಮಾಡಿಕೊಂಡೆನು. ಈ ಸರಹದ್ದುಗಳನ್ನು ನಾನು ಕೇವಲ ಒಳ್ಳೆಯ ಕಾರಣಕ್ಕಾಗಿ ಹಾದುಹೋದ ಬಹು ಅಪರೂಪದ ಸಮಯಗಳಾಗಿವೆ.

ಒಬ್ಬ ಮಹಿಳೆಯೊಂದಿಗೆ ರಹಸ್ಯವಾದ ಸ್ಥಳದಲ್ಲಿ ಸಂಧಿಸಬೇಡಿರಿ. ಒಬ್ಬ ಮಹಿಳೆಯು ನಿಮ್ಮೊಂದಿಗೆ ಮಾತನಾಡಲು ಬಯಸಿದರೆ ಮುಕ್ತವಾದ ಸ್ಥಳವೊಂದರಲ್ಲಿ ಸಂಧಿಸಿರಿ, ಅಲ್ಲಿ ಇತರರೂ ಸುತ್ತ ಮುತ್ತ ಇರಬೇಕು. ಇದಕ್ಕಾಗಿಯೇ ಉದ್ದೇಶಪೂರ್ವಕವಾಗಿ ನಮ್ಮ ಸಭೆಯ ಕಛೇರಿಯು ಪೂರ್ಣವಾಗಿ ತೆರೆಯಲ್ಪಟ್ಟ, ಹಾಗೂ ಎಲ್ಲವೂ ಕಾಣುವಂಥ ಗಾಜಿನ ಆವರಣವಾಗಿರುತ್ತದೆ. ಕೆಲವು ಸಭಾಪಾಲಕರುಗಳ ಕಛೇರಿಗಳು ವಾತಾಯನ (ಏರ್‌ಕಂಡಿಶನ್) ವ್ಯವಸ್ಥೆಯನ್ನೊಳಗೊಂಡ ಕೋಣೆಗಳನ್ನು ಹೊಂದಿರುವುದನ್ನು ನಾನು ನೋಡಿದ್ದೇನೆ. ನಾನು ಒಬ್ಬ ಮಹಿಳೆಯನ್ನು ಇಂಥಾ ಸ್ಥಳದಲ್ಲಿ ಸಂಧಿಸುವುದಾಗಿದ್ದರೆ, ಎಂಥಾ "ಅಪಾಯಕಾರಿ"ಯಾಗಿರುತ್ತದೆಂಬುದು ನನ್ನ ತಕ್ಷಣದ ಆಲೋಚನೆಯಾಗಿರುತ್ತದೆ. ಇದು ಅನವಶ್ಯಕವಾಗಿ ತೊಂದರೆಗೆ ನಮ್ಮನ್ನು ಸಿಕ್ಕಿಸುವಂಥದ್ದಾಗಿರುತ್ತದೆ.

ಬಹಳ ದೀರ್ಘಕಾಲದ ಹಿಂದೆ ನಾನು ಸಿದ್ಧಪಡಿಸಿಕೊಂಡ ಮತ್ತೊಂದು ಸರಹದ್ದು ಯಾವುದೆಂದರೆ ನಾನು ನನ್ನ ಪತ್ನಿಯನ್ನು ಹೊರತುಪಡಿಸಿ ಬೇರೊಬ್ಬ ಸ್ತ್ರೀಯೊಂದಿಗೆ ಎಂದಿಗೂ ಪ್ರಯಾಣ ಮಾಡುವುದಿಲ್ಲ. ಅಪರೂಪದ ವಿನಾಯಿತಿಗಳು ಕೆಲವಿವೆ, ಆದರೆ ಬಹುಮಟ್ಟಿಗೆ ನಾನು ಇದನ್ನು ಸ್ಥಿರಪಡಿಸಿಕೊಳ್ಳುವ ಪ್ರಯತ್ನ ಮಾಡುತ್ತೇನೆ ಹಾಗೂ ದಿನ ಕಳೆದಂತೆ ಇದರ ಬಗ್ಗೆ ದೃಢವಾಗಿರಲು ಬಹುಶಃ ಆಗಬಹುದು.

ನಾನು ಸಾಮಾನ್ಯವಾಗಿ ಮಹಿಳೆಯರನ್ನು ಅಪ್ಪಿಕೊಳ್ಳುವುದಿಲ್ಲ. ನಾನು ಕೇವಲ ಒಂದು ಸರಳವಾದ ಕೈಕುಲುಕುವಿಕೆ ಅಥವಾ ಒಂದು ಮುಗುಳ್ನಗೆಯನ್ನು ನೀಡುತ್ತೇನೆ. ಅಪ್ಪುಗೆಗಳು ಕುಟುಂಬದ ಮಹಿಳೆಯರಾದ ಹೆಂಡತಿ, ಮಗಳು, ಚಿಕ್ಕಮ್ಮ ದೊಡ್ಡಮ್ಮಂದಿರು ಅಥವಾ ವಿಶ್ವಾಸದಲ್ಲಿ ತಾಯಂದಿರಂತೆ ಇರುವವರಿಗಾಗಿ ಮೀಸಲಾಗಿರುತ್ತದೆ.

ನೀವು ನಿಮಗಾಗಿ ಸಿದ್ಧಮಾಡಬಹುದಾದ ಸರಳವಾದ, ಆದರೆ ಪರಿಣಾಮಕಾರಿಯಾದ ಸರಹದ್ದುಗಳು ಹಲವಾರು ಇವೆ. ಈ ಪುಸ್ತಕದ ಅವಧಿಯುದ್ದಕ್ಕೂ ನಾವು ಇತರ ಹಲವಾರು ಎಚ್ಚರಿಕೆಗಳನ್ನು ನಾವು ತರ್ಕ ಮಾಡಬಹುದು. ನಾವು ಶಾಸನಗಳನ್ನು ಸೃಷ್ಟಿಸುತ್ತೇವೆ ಹಾಗೂ ನಮ್ಮನ್ನು ಬಂಧನದೊಳಕ್ಕೆ ಇಡುತ್ತೇವೆ ಎಂಬುದಾಗಿ ಅಲ್ಲ. ಬದಲಾಗಿ ಇವು ನಮ್ಮನ್ನು ತೊಂದರೆಗಳಿಂದ ಹೊರಗೆ ಉಳಿಯಲು ಸಹಾಯ ಮಾಡುವ ಸುರಕ್ಷಣೋಪಾಯಗಳಾಗಿ ಇರುತ್ತವೆ. ಇವು ಪಾಪವನ್ನು ದೂರವಾಗಿಡುವ ಪ್ರತಿಬಂಧಕ ಮಾನಗಳಾಗಿರುತ್ತವೆ. ಇದು ಪರಿಪೂರ್ಣವಾದ ಒಂದು ಹೃದಯದೊಂದಿಗೆ ವಿವೇಕದಿಂದ ನಡೆಯುತ್ತದೆ.

## ಎಲ್ಲಾ ಖಾಸಗಿಯಾದ ಲೈಂಗಿಕ ಪಾಪದಿಂದ ಶುದ್ಧವಾಗಿ ಉಳಿಯುವುದು

**"ಎಲ್ಲಾ ಕಾರ್ಯಗಳನ್ನು ಮಾಡುವುದಕ್ಕೆ ನನಗೆ ಸ್ವಾತಂತ್ರ್ಯವೇನೋ ಉಂಟು, ಆದರೆ ಎಲ್ಲವೂ ವಿಹಿತವಾಗಿರುವುದಿಲ್ಲ. ಎಲ್ಲ ಕಾರ್ಯಗಳನ್ನು ಮಾಡುವುದಕ್ಕೆ ಸ್ವಾತಂತ್ರ್ಯ ಉಂಟು, ಆದರೆ ನಾನು ಯಾವುದಕ್ಕೂ ಒಳಗಾಗುವುದಿಲ್ಲ. ಭೋಜನ ಪದಾರ್ಥಗಳು ಹೊಟ್ಟೆಗಾಗಿಯೂ ಹೊಟ್ಟೆಯು ಭೋಜನ ಪದಾರ್ಥಗಳಿಗಾಗಿಯೂ ಇವೆ; ದೇವರು ಇದನ್ನೂ ಅವುಗಳನ್ನೂ ಕೂಡ ತೆಗೆದುಹಾಕುವನು. ಆದರೂ ದೇಹವು ಹಾದರಕ್ಕೋಸ್ಕರ ಇರುವಂಥದಲ್ಲ, ಕರ್ತನಿಗೋಸ್ಕರವಾಗಿದೆ; ಕರ್ತನು ದೇಹಕ್ಕೋಸ್ಕರ ಇದ್ದಾನೆ. ದೇವರಿಂದ ದೊರಕಿ ನಿಮ್ಮೊಳಗೆ ನೆಲೆಗೊಂಡಿರುವ ಪರಿಶುದ್ಧಾತ್ಮನಿಗೆ ನಿಮ್ಮ ದೇಹವು ಗರ್ಭಗುಡಿಯಾಗಿದೆಯೆಂಬುದು ನಿಮಗೆ**

**ತಿಳಿಯದೋ? ನೀವು ನಿಮ್ಮ ಸ್ವಂತ ಸೊತ್ತಲ್ಲ; ನೀವು ಕ್ರಯಕ್ಕೆ ಕೊಳ್ಳಲ್ಪಟ್ಟವರು; ಆದಕಾರಣ ನಿಮ್ಮ ದೇಹದಲ್ಲಿ ದೇವರ ಪ್ರಭಾವವನ್ನು ಪ್ರಕಾಶಪಡಿಸಿರಿ"** (1 ಕೊರಿಂಥದವರಿಗೆ 6:12,13,19,20).

**"ಇತರರನ್ನು ಹೋರಾಟಕ್ಕೆ ಕರೆದ ಮೇಲೆ ನಾನೇ ಅಯೋಗ್ಯನೆನಿಸಿಕೊಂಡೇನೋ ಎಂಬ ಭಯದಿಂದ ನನ್ನ ಮೈಯನ್ನು ಜಜ್ಜಿ ಸ್ವಾಧೀನಪಡಿಸಿಕೊಳ್ಳುತ್ತೇನೆ"** (1 ಕೊರಿಂಥದವರಿಗೆ 9:27).

ದೇವರು ನಮ್ಮ ಲೈಂಗಿಕತೆಯನ್ನು ಚಿತ್ರಿಸಿರುತ್ತಾನೆ. ನಾವು ಏನಾಗಿ ಇರುವಂತೆ ದೇವರು ಮಾಡಿರುವ ಭಾಗವಾಗಿರುತ್ತದೆ. ಆತನು ನಮಗೆ ಸ್ಪಷ್ಟವಾಗಿ, ನಾವು ವ್ಯಕ್ತಪಡಿಸಬೇಕಾದ ಹಾಗೂ ನಮ್ಮ ಲೈಂಗಿಕತೆಯನ್ನು ಅನುಭವ ಹೊಂದುವುದರೊಳಗೆ ಪರಿಮಿತಿಗಳನ್ನು ಕೂಡಾ ನೀಡಿರುತ್ತಾನೆ. ಹೇಗಾದರೂ ಪುರುಷರಾದ ನಮಗೆ ನಮ್ಮ ಲೈಂಗಿಕ ಒಲವುಗಳನ್ನು ನಿಭಾಯಿಸುವುದು ಸುಲಭವಲ್ಲ. ನಾವು ಕ್ರೈಸ್ತ ಸೇವೆ ಮಾಡುವವರಾಗಿರುವುದರಿಂದ, ನಾವು ದೇವ ದೂತರಾಗುವುದಿಲ್ಲ. ನಮ್ಮ ಲೈಂಗಿಕತೆಯ ಒಲವುಗಳು ಮಾಯವಾಗುವುದಿಲ್ಲ. ಇದರಿಂದ ದೇವರ ಬಲಪಡಿಸುವ ನಮಗೆ ನೀಡಲ್ಪಟ್ಟಿರುವ ಕೃಪೆಯ ಸಹಾಯದಿಂದ ಆತನ ವಾಕ್ಯ ಮತ್ತು ಆತನ ಪವಿತ್ರಾತ್ಮನ ಮುಖಾಂತರವಾಗಿ ನಾವು ನಮ್ಮ ಲೈಂಗಿಕ ಹಸಿವನ್ನು ಹಿಡಿತದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ.

ನಮ್ಮ ಲೈಂಗಿಕತೆಯ ವಲಯವು ಒಂದು ಖಾಸಗಿಯಾದ ಅಂಶವಾಗಿದೆ ನಾವು ಸಾಮಾನ್ಯವಾಗಿ ಸಾರ್ವಜನಿಕವಾಗಿ ಇದರ ಕುರಿತು ಚರ್ಚಿಸುವುದಿಲ್ಲ. ಹೇಗಾದರೂ, ಇದು ನಮ್ಮ ಜೀವಿತಗಳ ಖಾಸಗಿ ವಲಯವಾಗಿರುವುದರಿಂದ—ಹಲವಾರು ಕ್ರೈಸ್ತ ಸೇವಕರು ಎಲ್ಲಾ ರೀತಿಯ ಬಂಧನಗಳಲ್ಲಿ, ಪಾಪಗಳಲ್ಲಿ ಇರಲು ಹಾಗೂ ಈ ವಲಯದಲ್ಲಿ ಸಂಧಾನ ಮಾಡಿಕೊಳ್ಳಲು ಸಾಧ್ಯತೆ ಉಂಟು ಹಾಗೂ ಪ್ರೇಕ್ಷಕರಲ್ಲಿರುವ ಜನರು ಸಂಧಾನ ಮಾಡಿಕೊಳ್ಳಲು ಸಾಧ್ಯತೆಯುಂಟು, ಹಾಗೂ ಪ್ರೇಕ್ಷಕರಲ್ಲಿರುವ ಜನರು ಇದರ ಬಗ್ಗೆ ತಿಳಿದಿರುವುದಿಲ್ಲ. ಅಲ್ಪಮಟ್ಟಿಗೆ ಅಶ್ಲೀಲ ಸಾಹಿತ್ಯಗಳು, ಅಲ್ಪಮಟ್ಟಿಗೆ ಕಾಮಾಸಕ್ತ ಆಲೋಚನೆ, ವಿರುದ್ಧ ಲಿಂಗದೊಡನೆ ಅಲ್ಪಮಟ್ಟಿಗೆ ಲಲ್ಲೆ, ಸಲಿಂಗ ಕಾಮಸಂಬಂಧಗಳು ಹಾಗೂ ಇತ್ಯಾದಿ. *"ಸರಿಯಾಗಿರುವಂತೆ ಕಂಡರೂ, ಸಾರ್ವಜನಿಕತೆಯಿಂದ ಮುಚ್ಚಿಡಲ್ಪಡುತ್ತವೆ. ಆದರೆ ಸತ್ಯವೇದವು ನಮಗೆ, "ಸ್ವಲ್ಪ ಹುಳಿಯಿಂದ ಕಣಕವೆಲ್ಲಾ ಹುಳಿಯಾಗುವುದು,"* (1 ಕೊರಿಂಥದವರಿಗೆ 5:6: ಗಲಾತ್ಯ

5:9) ಎಂದು ಹೇಳುತ್ತದೆ. ಹಲವು ಸ್ಥಿತಿಗಳಲ್ಲಿ ಸೇವೆಯು ಸಾಧಾರಣವಾಗಿ ಎಂದಿನಂತೆ ಮುಂದುವರಿಯುತ್ತದೆ ಹಾಗೂ ಕ್ರೈಸ್ತ ಸೇವಕನು ಶುದ್ಧವಾಗಿ ಬಾರದೆ ಹೋದರೆ, ದೇವರು ಖಂಡಿತವಾಗಿ ಒಂದಲ್ಲ ಒಂದು ರೀತಿಯಲ್ಲಿ ಇದರೊಂದಿಗೆ ನಿಭಾಯಿಸುತ್ತಾನೆ. ಇದರಿಂದ ಕ್ರೈಸ್ತ ಸೇವಕರುಗಳಾಗಿ, ನಾವು ಎಲ್ಲಾ ವಿಧವಾದ ಖಾಸಗಿ ಲೈಂಗಿಕ ಪಾಪಗಳಿಂದ ಶುದ್ಧವಾಗಿ ಉಳಿಯಬೇಕಾಗುತ್ತದೆ. ಈ ವಲಯದಲ್ಲಿ ನಾನು ಹೋರಾಟಗಳನ್ನು ಹೊಂದಿರುತ್ತೇನೆ ಹಾಗೂ ನಾನು ನನ್ನ ಲೈಂಗಿಕತೆಯನ್ನು ನಿಭಾಯಿಸುವ ಒಂದು ಸಮೀಪದ ಲಕ್ಷ್ಯವನ್ನು ಹೊಂದುವ ಹಾಗೂ ಎಲ್ಲ ಲೈಂಗಿಕ ಒಲವುಗಳನ್ನು ಹಿಡಿತದಲ್ಲಿಟ್ಟುಕೊಳ್ಳುವುದನ್ನು ಕಲಿಯುವ ಅಗತ್ಯವಿದೆ.

ಎಲ್ಲಾ ಖಾಸಗಿಯಾದ ಲೈಂಗಿಕ ಪಾಪಗಳನ್ನು ಬಿಟ್ಟು ಶುದ್ಧವಾಗಿಟ್ಟುಕೊಳ್ಳಲು ನಾನು ಅಭ್ಯಾಸ ಮಾಡಬೇಕಾದ ಕೆಲವು ಅಂಶಗಳು ಇಲ್ಲಿವೆ. ದೇವರು ನಿಮ್ಮನ್ನು ವಿಭಿನ್ನವಾಗಿ ನಡೆಸಬಹುದು ಹಾಗೂ ನಿಮಗೆ ನಿಮ್ಮ ದೇಹವನ್ನು ಮುಖ್ಯವಾದದ್ದಾಗಿ ಇಟ್ಟುಕೊಳ್ಳುವುದರ ಮುಖಾಂತರ ಇತರ ಮಾರ್ಗಗಳನ್ನು ತೋರಿಸುತ್ತಾನೆ, ನಿಮ್ಮ ಯಾವ ಕಾರ್ಯಗಳನ್ನು ಅಭ್ಯಾಸ ಮಾಡಿರಿ, ಆದರೆ ಎಲ್ಲದರ ಅಂತ್ಯದಲ್ಲಿ ನಾವು ಆತನ ಕೃಪೆಯ ಮುಖಾಂತರ, ಈ ವಲಯದಲ್ಲಿ ಪವಿತ್ರವಾಗಿ ನಡೆಯುತ್ತೇವೆಂಬುದನ್ನು ಮನದಟ್ಟು ಮಾಡಿಕೊಳ್ಳಬೇಕು.

ಕ್ರೈಸ್ತೀಯ ಸೇವಕರಾಗಿ, ನಮ್ಮಲ್ಲಿ ಕೆಲವರು ಮೇಲಿಂದ ಮೇಲೆ ಪ್ರಯಾಣ ಮಾಡಬೇಕಾಗುತ್ತದೆ ಹಾಗೂ ಹೋಟೆಲಿನ ಕೊಠಡಿಗಳಲ್ಲಿ ಅಥವಾ ಖಾಸಗಿ ಕೊಠಡಿಗಳಲ್ಲಿ ಉಳಿಯಬೇಕಾಗುತ್ತದೆ. ಒಂದು ಮುನ್ನೆಚ್ಚರಿಕೆಯಾಗಿ, ನಾನು ಒಂದು ಹೋಟೆಲಿನ ಕೋಣೆಯಲ್ಲಿ ಒಂಟಿಯಾಗಿ ಉಳಿಯಬೇಕಾಗಿ ಬಂದಾಗ ನಾನು ಸಾಮಾನ್ಯವಾಗಿ ಟಿ.ವಿ. ಚಾಲನೆ ಮಾಡುವುದಿಲ್ಲ ನಾನೆಂದಿಗೂ ಟಿ.ವಿ. ನೋಡುವುದಿಲ್ಲ ಎಂದಲ್ಲ. ನಾನು ಒಂಟಿಯಾಗಿರುವಾಗ, ನಾನು ಅಯೋಗ್ಯಕರ ಪರಿಸ್ಥಿತಿಗಳಿಗೆ ನನ್ನನ್ನು ಅನಾವಶ್ಯಕವಾಗಿ ಬಹಿರಂಗ ಪಡಿಸಿಕೊಳ್ಳುವುದು ನನಗೆ ಇಷ್ಟವಿಲ್ಲ. ನನ್ನೊಂದಿಗೆ ಯಾರಾದರೂ ಇದ್ದಾಗ ಉದಾ: ನನ್ನ ಪತ್ನಿ ಅಥವಾ ನನ್ನ ಮಗನು ನನ್ನೊಂದಿಗೆ ಪ್ರಯಾಣ ಮಾಡುವಾಗ ನಮ್ಮಲ್ಲಿ ಪರಸ್ಪರ ಹೊಣೆಗಾರಿಕೆಯು ಶ್ರೀಘ್ರದಲ್ಲಿಯೇ ಉಂಟಾಗುತ್ತದೆ ಹಾಗೂ ನಾವು ಏನು ನೋಡಬೇಕೆಂಬುದರ ಬಗ್ಗೆ ಜಾಗರೂಕರಾಗುತ್ತೇವೆ.

ನಾವು ಎಚ್ಚರಿಕೆಯಿಂದ ಇರಬೇಕಾದ ಮತ್ತೊಂದು ವಲಯವು ವೃತ್ತಾಂತ ಪತ್ರಿಕೆಗಳು ಹಾಗೂ ನಿಯತಕಾಲಿಕಗಳನ್ನು ಓದುವುದರಲ್ಲಿದೆ. ಇದರಲ್ಲಿ ಮುದ್ರಣವಾಗಿರುವುದನ್ನು ನಾವು ಹಿಡಿತದಲ್ಲಿಟ್ಟುಕೊಳ್ಳಲಾರೆವು ಆದರೆ, ನಾವು ಏನು ಓದುತ್ತೇವೋ ಅದನ್ನು ನೋಡುವಾಗ ಮತ್ತು ಗ್ರಹಿಸಿಕೊಳ್ಳುವಾಗ ನಮ್ಮನ್ನು ಅಂಕೆಯಲ್ಲಿಟ್ಟುಕೊಳ್ಳಲು ಸಾಧ್ಯ ನೀವು ಒಂದು ಪುಟ ತಿರುಗಿಸಿದಾಗ, ಅಲ್ಲಿ ಮುದ್ರಿತವಾಗಿರುವ ಒಂದು ಅಶ್ಲೀಲವಾದ ಚಿತ್ರವನ್ನು ನೋಡುತ್ತೀರಿ, ನಿಮ್ಮ ಕಣ್ಣುಗಳು ಮೊದಲ ನೋಟವನ್ನು ಪಡೆಯಬಹುದು, ಆದರೆ ಅಲ್ಲಿಯೇ ನಾನು ನಿಲ್ಲುತ್ತೇನೆ. ನಾನು ಎರಡನೆಯ ದೃಷ್ಟಿಯನ್ನು ಹೊಂದಲು ನಿರಾಕರಿಸಿದೆನು. ನಾನು ಪುಟದಲ್ಲಿ ಎಲ್ಲೋ ಸುದ್ದಿಯನ್ನು ಓದಿದೆನು. ಆದರೆ ನನ್ನ ಕಣ್ಣು ಹಿಂದಕ್ಕೆ ಹೋಗಲು ಹಾಗೂ ಯಾವುದು ಅಯೋಗ್ಯವೋ ಅದರ ಮೇಲೆ ದೃಷ್ಟಿಯಿಡಲು ನಾನು ನಿರಾಕರಿಸಿದೆನು. ಇಂಟರ್‌ನೆಟ್‌ಗಳನ್ನು ನಾವು ಬಳಸುವಾಗಲೂ ನಾವು ಜಾಗರೂಕರಾಗಿರಬೇಕು. ನಾನು ಉದ್ದೇಶಪೂರ್ವಕವಾಗಿ ಅಯೋಗ್ಯವಾದ ಚಿತ್ರಗಳನ್ನು ಹೊಂದಿರುವ ಜಾಗಕ್ಕೆ ಹೋಗುವುದಿಲ್ಲ, ಇತ್ಯಾದಿ. ಹೇಗಾದರೂ, ಏನಾದರೂ ನನ್ನ ಮುಖಕ್ಕೆ ಬಡಿದರೆ, ನಾನು ತಕ್ಷಣವೇ ಪಕ್ಕಕ್ಕೆ ಸರಿಯುತ್ತೇನೆ ಹಾಗೂ ಅದನ್ನು ದೃಷ್ಟಿಸುವುದನ್ನು ನಿರಾಕರಿಸುತ್ತೇನೆ.

ನಮ್ಮಲ್ಲಿ ಬಹುಮಂದಿ ಹೋರಾಡುವ ಮತ್ತೊಂದು ವಲಯವು ಹಸ್ತ ಮೈಥುನವಾಗಿರುತ್ತದೆ. ಈ ವಿಷಯದ ಬಗ್ಗೆ ಸತ್ಯವೇದವು ನೇರವಾಗಿ ಮಾತನಾಡದೆ ಇರುವಲ್ಲಿ ಹಾಗೂ ಈ ವಿಷಯದಲ್ಲಿ ಕ್ರೈಸ್ತೀಯ ಹಾಗೂ ವೈದ್ಯಕೀಯ ಸಮುದಾಯಗಳಿಂದ ವ್ಯತ್ಯಾಸವಾದ ನೋಟಗಳು ಇರುವುದಾಗಿದೆ. ನನ್ನ ದೃಷ್ಟಿ ಏನೆಂದರೆ, ಯಾವುದೇ ವಿಷಯಕ್ಕೆ ನನ್ನ ದೇಹವು ಗುಲಾಮತನಕ್ಕೊಳಗಾಗಬಾರದು ಎಂಬುದಾಗಿರುತ್ತದೆ. *“ಎಲ್ಲಾ ಕಾರ್ಯಗಳನ್ನು ಮಾಡುವುದಕ್ಕೆ ನನಗೆ ಸ್ವಾತಂತ್ರ್ಯವೇನೋ ಉಂಟು, ಆದರೆ ಎಲ್ಲವೂ ವಿಹಿತವಾಗಿರುವುದಿಲ್ಲ. ಎಲ್ಲಾ ಕಾರ್ಯಗಳನ್ನು ಮಾಡುವುದಕ್ಕೆ ಸ್ವಾತಂತ್ರ್ಯ ಉಂಟು, ಆದರೆ ನಾನು ಯಾವುದಕ್ಕೂ ಒಳಗಾಗುವುದಿಲ್ಲ.”* (1 ಕೊರಿಂಥದವರಿಗೆ 6:12). ಇದು ಸರಿಯೋ ಅಥವಾ ಅಂಗೀಕೃತವಾಗುವುದೋ, ಎಂಬುದು ಇಲ್ಲಿನ ಪ್ರಶ್ನೆಯಲ್ಲ. ಇಲ್ಲಿ ಇದು ಸಹಾಯಕವಾಗಿರುವುದೋ ಹಾಗೂ ಯಾವುದೇ ರೀತಿಯಲ್ಲಿ

ಅಧಿಕಾರ ಚಲಾಯಿಸುವುದೋ ಎಂಬುದಾಗಿರುತ್ತದೆ. ಈ ದೃಢ ನಿಲುವಿನ ರೂಢಿಯ ಹಸ್ತ ಮೈಥುನ ಎಂಬುದಾಗಿರುತ್ತದೆ ಹಾಗೂ ಅಭ್ಯಾಸಕ್ಕೆ ಗುಲಾಮರಾಗಿರುವುದು ಹಾಗೂ ದಾಸ್ಯವೂ ಒಂದು ಪಾಪವಾಗಿರುತ್ತದೆ. ಇದನ್ನು ಅಭ್ಯಾಸ ಮಾಡುವುದನ್ನು ನಿಲ್ಲಿಸುವುದು ಅತ್ಯಂತ ಉತ್ತಮ ಕಾರ್ಯವಾಗಿರುತ್ತದೆ.

ನನ್ನ ದೇಹವು ಪಾಪ ಅಥವಾ ಲೈಂಗಿಕ ಅನೈತಿಕತೆಗಾಗಿ ಅಲ್ಲ, ಆದರೆ ಕರ್ತನಿಗಾಗಿ ಎಂದು ಸ್ಪಷ್ಟಪಡಿಸಲು ನಾನು ಕಲಿತಿದ್ದೇನೆ. ನನ್ನ ಲೈಂಗಿಕ ಆಶೆಗಳ ಮೇಲೆ ಯೇಸುವು ಕರ್ತನಾಗಿದ್ದಾನೆ ಎಂಬ ಸ್ಪಷ್ಟಪಡಿಸುವ ಶಕ್ತಿಯನ್ನು ನಾನು ಅರ್ಥಮಾಡಿಕೊಂಡಿರುತ್ತೇನೆ. ನಾನು ಪ್ರಾರ್ಥಿಸುತ್ತೇನೆ ಹಾಗೂ ನನ್ನ ಅಸ್ತಿತ್ವದ ಲೈಂಗಿಕತೆಯ ಭಾಗವನ್ನು ದೇವರಿಗೆ ಸಮರ್ಪಿಸುತ್ತೇನೆ. ನನ್ನ ಎಲ್ಲಾ ಲೈಂಗಿಕ ಆಶೆಗಳು ಹಾಗೂ ಲೈಂಗಿಕ ಹಸಿವುಗಳು ಪವಿತ್ರವಾಗಿವೆ ಹಾಗೂ ದೇವರಿಗೆ ಸಮರ್ಪಿಸಿದ್ದೇನೆಂದು ನಾನು ಪ್ರಕಟಿಸುತ್ತೇನೆ. *"ದೇವರ ಚಿತ್ತವೇನೆಂದರೆ ನೀವು ಶುದ್ಧರಾಗಿ ಇರಬೇಕೆಂಬುದೇ. ಆದುದರಿಂದ ಹಾದರಕ್ಕೆ ದೂರವಾಗಿರಬೇಕು. ದೇವರನ್ನರಿಯದ ಅನ್ಯ ಜನಗಳಂತೆ ಕಾಮಾಭಿಲಾಷೆಗೆ ಒಳಪಡದೆ ನಿಮ್ಮಲ್ಲಿ ಪ್ರತಿಯೊಬ್ಬನು ಪವಿತ್ರವಾದ ಮನಸ್ಸಿನಿಂದಲೂ ಘನತೆಯಿಂದಲೂ ಸ್ವಂತ ಪಾತ್ರೆಯನ್ನು ಸ್ವಾಧೀನದಲ್ಲಿಟ್ಟುಕೊಂಡಿರಲು ತಿಳಿಯಬೇಕು"* (1 ಥೆಸಲೋನಿಕದವರಿಗೆ 4:3–5).

## ಪ್ರತಿ ಕ್ಷಣದಲ್ಲೂ—ದೇವರಿಗೆ ಹೊಣೆಗಾರರಾಗಿರಿ

**"ಆದುದರಿಂದ ನಾವು ದೇಹವೆಂಬ ಮನೆಯಲ್ಲಿದ್ದರೂ ಸರಿಯೇ, ಅದನ್ನು ಬಿಟ್ಟಿದ್ದರೂ ಸರಿಯೇ, ಕರ್ತನಿಗೆ ಮೆಚ್ಚುವವರಾಗಿರಬೇಕೆಂಬುದೇ ನಮ್ಮ ಗುರಿಯಾಗಿದೆ. ಯಾಕೆಂದರೆ ಪ್ರತಿಯೊಬ್ಬನು ತನ್ನ ದೇಹದ ಮೂಲಕ ನಡಿಸಿದ ಒಳ್ಳೆಯದಕ್ಕಾಗಲಿ ಕೆಟ್ಟದ್ದಕ್ಕಾಗಲಿ ಸರಿಯಾಗಿ ಪ್ರತಿಫಲವನ್ನು ಹೊಂದುವುದಕ್ಕೋಸ್ಕರ ನಾವೆಲ್ಲರೂ ಕ್ರಿಸ್ತನ ನ್ಯಾಯಾಸನದ ಮುಂದೆ ಯಥಾಸ್ಥಿತಿಯಲ್ಲಿ ಕಾಣಿಸಿಕೊಳ್ಳಬೇಕು"** (2 ಕೊರಿಂಥದವರಿಗೆ 5:9,10).

"ದೇವರಿಗೆ ಮೆಚ್ಚುಗೆ"ಯಾಗಿರುವುದು ನಿಮ್ಮ ಕಟ್ಟಕಡೆಯ ಗುರಿಯಾಗಿರುವಂತೆ ಮಾಡಿರಿ. ಜನರು ಒಂದು ವೇಳೆ ನಿಮ್ಮ ಬಗ್ಗೆ ಅನುಮೋದಿಸಬಹುದು ಹಾಗೂ ನಿಮಗಾಗಿ ಉತ್ತಮ ಅಭಿಪ್ರಾಯಗಳನ್ನು ಹೊಂದಿಕೊಳ್ಳಬಹುದು, ಆದರೆ ದೇವರು ನಮ್ಮ ಜೀವಿತಗಳನ್ನು ಮೊದಲು

ಒಪ್ಪದಿದ್ದರೆ, ಪರಲೋಕದ ಧಾರಣೆಯಲ್ಲಿ ಯಾವುದಕ್ಕೂ ಲೋಕದ ಅನುಮೋದನೆಯು ಗಣನೆಗೆ ಬರುವುದಿಲ್ಲ.

ನಾವು ಮನುಷ್ಯನಿಗೆ ಗೌರವ ನೀಡಿ ಹೊಣೆಗಾರಿಕೆಯನ್ನು ಪ್ರೋತ್ಸಾಹಿಸುವಾಗ–ಅದು ಹೊಣೆಗಾರ ಗುಂಪುಗಳು, ನಾಯಕರು, ಸಲಹೆಗಾರರು, ಮೇಲ್ವಿಚಾರಕರು ಇತ್ಯಾದಿಗಳ ಮುಖಾಂತರವಾಗಿದ್ದರೂ, ಕೊನೆಯಲ್ಲಿ ಎಲ್ಲವೂ ನಮ್ಮ ಜೀವಿತಗಳು ಎಲ್ಲಿ ಭರವಸೆ ಇಟ್ಟಿವೆಯೋ ದೇವರಿಗೆ ವೈಯಕ್ತಿಕ ಹೊಣೆಗಾರಿಕೆಯ ಕ್ಷಣ ಕ್ಷಣದ ಆಳವಾದ ಗ್ರಹಿಕೆಯಿಂದ ದೃಢತೆ ಹೊಂದಿರುತ್ತವೋ ಆ ಸ್ಥಳಕ್ಕೆ ಬರಬೇಕಾಗುತ್ತದೆ. ಒಂದುದಿನ ನಾನು ವಿಶ್ವವನ್ನೆಲ್ಲ ಸೃಷ್ಟಿಸಿದ ಈ ಗಂಭೀರವುಳ್ಳ ದೇವರ ಮುಂದೆ, ಭೂಮಿಯ ಮೇಲೆ ನನ್ನ ಜೀವಿತದ ಲೆಕ್ಕ ಒಪ್ಪಿಸಲು, ನನ್ನನ್ನು ನೇರವಾದ, ಹಾಗೂ ಇಕ್ಕಾಟ್ಟದ ದಾರಿಯಲ್ಲಿ ನೀಡಲಿಕ್ಕಾಗುವಷ್ಟು ಮಹತ್ವವುಳ್ಳವನಾಗಿರುವಂತೆ ನಿಲ್ಲುತ್ತೇನೆ. ದೇವರಿಗೆ ಈ ಹೊಣೆಗಾರಿಕೆಯ ಈ ಗ್ರಹಿಕೆಯು ನನ್ನನ್ನು ಹಿಡಿಯದಿದ್ದರೆ, ಆಗ ನಾನು ನನ್ನನ್ನು ಆವರಿಸಿಕೊಳ್ಳುವ ಇತರ ಯಾವ ರೀತಿಯ ಹೊಣೆಗಾರಿಕೆಯೂ ನನಗೆ ಹೆಚ್ಚು ಒಳ್ಳೆಯದನ್ನು ಮಾಡುತ್ತದೆ. ಮಾನವ ಹೊಣೆಗಾರಿಕೆಯ ಎಲ್ಲಾ ರೀತಿಗಳೂ ಸುಲಭವಾಗಿ ಪುಸಲಾಯಿಸಲ್ಪಡುತ್ತವೆ ಅಥವಾ ಮೋಸಕ್ಕೆ ಒಳಗಾಗುತ್ತವೆ.

ನೀವು ಮಾಡುವ ಯಾವುದೇ ಸೇವೆಯಲ್ಲೂ ಹಾಗೂ ನೀವು ಭಾಗಿಯಾಗಿರುವ ಯಾವ ಚಟುವಟಿಕೆಯಲ್ಲೂ ಮೇಲಿರುವ ದೇವರು ಗಮನಿಸುತ್ತಿರುವ, ಮೌಲ್ಯಮಾಪನ ಮಾಡುತ್ತಿರುವ ಹಾಗೂ ನಿನ್ನನ್ನು ಅನುಸರಿಸುತ್ತಿರುವ ಆಳವಾದ ಗ್ರಹಿಕೆಯನ್ನು ನಿಮ್ಮೊಳಗೆ ಸಾಗಿಸುತ್ತದೆ. ಜನರು ಏನು ನೋಡುತ್ತಾರೋ, ಹಾಗೂ ಪರೀಕ್ಷಿಸುತ್ತಾರೋ ನಮ್ಮ ಕೆಲಸದ ಗುಣಮಟ್ಟವನ್ನು ಮಾತ್ರವಲ್ಲ ಅವುಗಳನ್ನು ನಾವು ಮಾಡಿದ ಪ್ರಚೋದನೆಗಳ ಆಚೆಯೂ ಆತನು ನೋಡುತ್ತಾನೆ. ಒಂದು ಒಳ್ಳೆಯ ಕಾರ್ಯವನ್ನು ಮಾಡುವುದು ಮಾತ್ರ ಸಾಲದು. ಒಳ್ಳೇ ಕಾರ್ಯವು ಒಳ್ಳೆಯ ಪ್ರಚೋದನೆಗಳಿಂದ ಆಗಬೇಕು. ದೇವರಿಗೆ, ಪ್ರತಿಕ್ಷಣದಲ್ಲೂ ಹೊಣೆಗಾರಿಕೆಯಲ್ಲಿ ಉಳಿಯಿರಿ.

## ಪೂರ್ಣಾವಧಿ ಅಥವಾ ಅಲ್ಪಾವಧಿ?

**"ನಾನು ಯಾರ ಬೆಳ್ಳಿ ಬಂಗಾರವನ್ನಾಗಲಿ ಉಡಿಗೆ ತೊಡಿಗೆಯನ್ನಾಗಲಿ ಬಯಸಲಿಲ್ಲ. ಈ ಕೈಗಳೇ ಕೆಲಸ ಮಾಡಿ ನನ್ನ ಕೊರತೆಗಳನ್ನೂ ನನ್ನ ಜೊತೆಯಲ್ಲಿದ್ದವರ ಕೊರತೆಗಳನ್ನೂ ನೀಗಿದ್ದನ್ನು ನೀವೇ ಬಲ್ಲಿರಿ. ಎಲ್ಲಾ ವಿಷಯಗಳಲ್ಲಿ ನಾನು ನಿಮಗೆ ಮಾದರಿ ತೋರಿಸಿದ್ದೇನೆ. ನೀವು ಹಾಗೆಯೇ ದುಡಿದು ಬಲವಿಲ್ಲದವರಿಗೆ ಉಪಕಾರ ಮಾಡಬೇಕು ಮತ್ತು–ತೆಗೆದುಕೊಳ್ಳುವುದಕ್ಕಿಂತ ಕೊಡುವುದೇ ಹೆಚ್ಚಿನ ಭಾಗ್ಯವೆಂಬದಾಗಿ ಕರ್ತನಾದ ಯೇಸು ತಾನೇ ಹೇಳಿದ ಮಾತುಗಳನ್ನು ನೆನಪಿನಲ್ಲಿಟ್ಟುಕೊಂಡಿರಬೇಕು ಅಂದನು (ಅಪೊಸ್ತಲರ ಕೃತ್ಯ 20:33–35).**

ನಾವು ಅರ್ಥ ಮಾಡಿಕೊಳ್ಳಬೇಕಾದ ಒಂದು ಅಂಶವೇನೆಂದರೆ, ನಾವು ಎಲ್ಲಾ ಸಮಯದಲ್ಲೂ ದೇವರ ಸೇವಕರಾಗಿರಬೇಕು. ನಾವು ಏನನ್ನಾದರೂ ಮಾಡುವುದರಿಂದ, ಬಹುಶಃ "ಪ್ರಾಪಂಚಿಕ"ವಾದದ್ದೆಂದು (ಉದಾ: ಒಂದು ಉದ್ಯೋಗ ಮಾಡುವುದು) ಎಂಬುದಾಗಿ ಅಂದುಕೊಳ್ಳಬಹುದು. ನಾವು ದೇವರ ಸೇವಕರಾಗಿರುವುದನ್ನು ಅಲ್ಪಕಾಲಕ್ಕೆ ನಿಲ್ಲಿಸಬಹುದೆಂಬ ಅರ್ಥವಲ್ಲ. ಅಲ್ಪಾವಧಿ ವಿಶ್ವಾಸಿಗಳು ಇಲ್ಲ, ಹಾಗೂ ಅಲ್ಪಾವಧಿ ದೇವರ ಸೇವಕರೂ ಇಲ್ಲ. ನಾವೆಲ್ಲರೂ ಪೂರ್ಣಾವಧಿ ವಿಶ್ವಾಸಿಗಳು ಹಾಗೂ ಪೂರ್ಣಾವಧಿ ದೇವರ ಸೇವಕರೂ ಆಗಿರುತ್ತೇವೆ, ನಾವು ಎಲ್ಲಾ ಸಮಯದಲ್ಲೂ ಪ್ರತಿಯೊಂದು ಸ್ಥಳದಲ್ಲೂ ಆತನ ರಾಯಭಾರಿಗಳಾಗಿರುತ್ತೇವೆ.

ಹೇಗಾದರೂ, ಆಗಾಗ್ಗೆ ನಾವು ಭೋಧನೆ, ಉಪದೇಶ ಅಥವಾ ಮತ್ತೊಂದು ರೀತಿಯ ಕ್ರೈಸ್ತ ಸೇವೆಗಳ ಮುಖಾಂತರ ದೇವರ ಸೇವೆ ಮಾಡುವ ಆಶೆಯನ್ನು ಯಾರಾದರೂ ಹೊಂದಿರುವುದನ್ನು ನೋಡುವಾಗ, ಅವರು ಯೋಚಿಸುವ ಮೊದಲ ಅಂಶವೇನೆಂದರೆ, ತಮ್ಮ ಉದ್ಯೋಗವನ್ನು ಬಿಟ್ಟು ಪೂರ್ಣಾವಧಿಗೆ ಹೋಗುತ್ತಾರೆ, ಮಾರುಕಟ್ಟೆಯಲ್ಲಿ ಉದ್ಯೋಗ ಮಾಡುವ ಅವಕಾಶವನ್ನು ಬದಿಗಿಡುವಂತೆ ದೇವರು ಜನರನ್ನು ಕರೆಯುತ್ತಾನೆಂದು ನಾನು ನಂಬುತ್ತೇನೆ. ಇದರಿಂದ ಅವರು ತಮ್ಮ ಸಮಯ, ಲಕ್ಷ್ಯ ಹಾಗೂ ಶಕ್ತಿಗಳನ್ನು ತಮ್ಮನ್ನು ಆತನು ಕರೆದಿರುವ ವಿಶಿಷ್ಟ ಸೇವೆಗಳಿಗಾಗಿ ಒಪ್ಪಿಸಬಹುದು. ಇದು ಸಂಪೂರ್ಣವಾಗಿ ನಿಜವಾದದ್ದು, ಹೇಗಾದರೂ ಒಬ್ಬರು ಏನು ಮಾಡಬೇಕೆಂದು ನಾನು ಭಾವಿಸುವುದೇನೆಂದರೆ, ಅವರು ಇಂಥಾ ಒಂದು ಹೆಜ್ಜೆಯನ್ನು ತೆಗೆದುಕೊಳ್ಳಲು ದೇವರು ಬಯಸುತ್ತಾನೋ ಇಲ್ಲವೋ, ಅವರು ಇನ್ನೂ ಯೋಚಿಸುತ್ತಾರೆ

ಹಾಗೂ ಅವರು ಅಂಥಾ ಸ್ಥಳಕ್ಕೆ ಸಾಗಲು ದೇವರ ನಡೆಸುವಿಕೆ ಹಾಗೂ ಸಮಯಕ್ಕಾಗಿ ಅವರು ಕಾಯುತ್ತಾರೆ ಎಂಬುದಾಗಿರುತ್ತದೆ. ಒಬ್ಬರು ಮಾರುಕಟ್ಟೆಯಲ್ಲಿ ಯಾವುದಾದರೂ ಉದ್ಯೋಗದಲ್ಲಿ ಅಥವಾ ತಾವು ಪರಿಣಿತರಾದ ಯಾವುದೋ ವೃತ್ತಿಯಲ್ಲಿ ಮುಂದುವರಿಯಲು ಹಾಗೂ ಅದೇ ಸಮಯದಲ್ಲಿ, ತಾವು ಕರೆಯಲ್ಪಟ್ಟ, ವರಗಳನ್ನು ಹೊಂದಿದ ಹಾಗೂ ಅಭಿಷೇಕಿಸಲ್ಪಟ್ಟ ಕ್ರೈಸ್ತೀಯ ಸೇವೆಯ ವಲಯಗಳಲ್ಲಿ ಪಾಲುಗೊಳ್ಳಲು ಮುಂದಾಗಬೇಕು. ದ್ವಿ–ವೃತ್ತಿ ಪರನಾಗಿರುವುದರಲ್ಲಿ ನಿಜವಾಗಿಯೂ ಯಾವ ತಪ್ಪೂ ಇಲ್ಲ. ಅಪೊಸ್ತಲನಾದ ಪೌಲನು ಹಲವಾರು ಸ್ಥಳಗಳಲ್ಲಿ ಇದನ್ನು ಮಾಡಿದ್ದಾನೆ. ಅವನು ತನ್ನ ಸ್ವಂತ ಕೈಗಳಿಂದ, ತನಗಾಗಿ, ತನ್ನ ತಂಡ ಹಾಗೂ ಇತರರಿಗಾಗಿ, ಜೀವನೋಪಾಯಕ್ಕಾಗಿ ಆದಾಯವನ್ನು ಗಳಿಸಲು ಕೆಲಸ ಮಾಡಿದನು. ಅದೇ ಸಮಯದಲ್ಲಿ ಸಭೆಗಳನ್ನು ಸ್ಥಾಪಿಸಿ, ವಿಶ್ವಾಸಿಗಳನ್ನು ಪೋಷಿಸಿದನು. ತನ್ನ ಆದಾಯವನ್ನು ಗಳಿಸುವುದು ಪೌಲನು ಸೇವೆಗೆಂಬುದಕ್ಕಾಗಿ ಮಾಡಬೇಕಾಗಿದ್ದುದರ ಒಂದು ಭಾಗವಾಗಿತ್ತು. ಇದು ಅವನ ಜೀವಿತಕ್ಕೆ ವಿಶ್ವಾಸಾರ್ಹತೆಯನ್ನೂ ಅವನು ಬೋಧಿಸಿದ ಸಂದೇಶವನ್ನೂ ನೀಡಿತು. ಇದು ಅವನು ಮಾಡುತ್ತಿದ್ದ ಏನೋ ಒಂದು ಅಶುದ್ಧತೆಯಾಗಿರಲಿಲ್ಲ. ಬದಲಾಗಿ ಅವನು ಯಾರು ಹಾಗೂ ಅವನ ಸೇವೆಯ ಒಂದು ಪ್ರಮುಖ ಅಂಶದ ಒಂದು ಸಮಗ್ರ ಭಾಗವಾಗಿತ್ತು. ಬಹಳಷ್ಟು ಮಾಡಿದನು, ಇದರಿಂದ ಅವನು ವೇದ ಭಾಗಗಳಲ್ಲಿ ಹಲವು ಸ್ಥಳಗಳಲ್ಲಿ ಇದರ ಬಗ್ಗೆ ಬರೆದಿದ್ದಾನೆ.

ಒಬ್ಬ ವ್ಯಕ್ತಿಯು ಒಂದು ಕ್ರಮವಾದ ಉದ್ಯೋಗದಲ್ಲಿ ಅಲ್ಲದೆ ಕ್ರೈಸ್ತೀಯ ಸೇವೆಯನ್ನು ಮಾಡುವುದರಲ್ಲಿ ಒಳಗೊಳ್ಳುವುದೂ ಕೂಡಾ ಒಬ್ಬರ ಕರೆಯುವಿಕೆ, ವರಪಡೆಯುವುದು ಹಾಗೂ ಅಭಿಷೇಕ ಹೊಂದುವುದನ್ನು ಸಾಬೀತು ಪಡಿಸುವ ಒಂದು ಒಳ್ಳೆಯ ಮಾರ್ಗವಾಗಿರುತ್ತವೆ. ಒಮ್ಮೆ ಕೆಲವು ಕಾಲಗಳಿಗಿಂತ ಹೆಚ್ಚಾಗಿ ಸಂರಕ್ಷಿಸಲ್ಪಟ್ಟ ಫಲವು ಹಾಗೂ ಸೇವೆಯಲ್ಲಿ ಕೆಲಸದ ಹೊರೆಯು ವೃದ್ಧಿಯಾಗುತ್ತದೆ ಹಾಗೂ ಕರೆಯಲ್ಪಟ್ಟ, ವರ ಹೊಂದಿದ ಹಾಗೂ ಅಭಿಷೇಕ ಹೊಂದಿದ ಒಬ್ಬರನ್ನು ದೇವ ಜನರು ಗುರುತಿಸುತ್ತಾರೆ. ನಂತರ ಕರ್ತನ ನಡೆಸುವಿಕೆಯಿಂದ ಕ್ರೈಸ್ತೀಯ ಸೇವೆಯ ನಿರ್ದಿಷ್ಟ ವಲಯಕ್ಕಾಗಿ ಒಬ್ಬರ ಸಮಯವನ್ನೆಲ್ಲಾ, ನಿವೇದಿಸಲು ಕ್ರಮವಾದ ಉದ್ಯೋಗದಿಂದ ಬದಲಾವಣೆ ಹೊಂದುವುದು ವಿವೇಕವುಳ್ಳದ್ದಾಗಿರುತ್ತದೆ.

## ನಿಮ್ಮ ಆಹಾರ ಕ್ರಮವನ್ನು ಗಮನಿಸಿರಿ ಮತ್ತು ಕ್ರಮವಾಗಿ ವ್ಯಾಯಾಮ ಮಾಡಿರಿ

**"ನೀವು ಕ್ರಯಕ್ಕೆ ಕೊಳ್ಳಲ್ಪಟ್ಟವರು; ಆದಕಾರಣ ನಿಮ್ಮ ದೇಹದಲ್ಲಿ ದೇವರ ಪ್ರಭಾವವನ್ನು ಪ್ರಕಾಶಪಡಿಸಿರಿ" (1 ಕೊರಿಂಥದವರಿಗೆ 6:20).**

ನಮ್ಮ ದೇಹಗಳು ಮತ್ತು ಮನಸ್ಸುಗಳು ಆರೋಗ್ಯವಾಗಿ ಇದ್ದಾಗ, ಹೇಗಿರುತ್ತದೆಂದು ನಾವೆಲ್ಲರೂ ವಾಸ್ತವವನ್ನು ಅನುಭವಿಸಿರುತ್ತೇವೆ. ಇದು ನಮ್ಮ ಆತ್ಮಿಕ ಜೀವಿತಗಳಲ್ಲೂ ಸಹಾಯಮಾಡುತ್ತದೆ. ನಾವು ಪ್ರಾರ್ಥಿಸಬಹುದು, ವಾಕ್ಯವನ್ನು ಓದಬಹುದು ಹಾಗೂ ಅಡೆತಡೆಯಿಲ್ಲದೆ ಸೇವೆಗೆ ಹೋಗಬಹುದು. ನಮ್ಮ ದೇಹಗಳು ದೇವರಿಂದ ಕೊಂಡುಕೊಳ್ಳಲ್ಪಟ್ಟಿವೆ ಹಾಗೂ ಅವು ದೇವರ ಆಸ್ತಿ, ಇದಕ್ಕೆ ನಾವು ಮನೆ ವಾರ್ತೆಯವರಾಗಿರುತ್ತೇವೆ. ನಮ್ಮ ದೇಹಗಳು ಪಾಪದಿಂದ ಶುದ್ಧ ಮತ್ತು ಪವಿತ್ರವಾಗಿರಿಸುವುದು ಮಾತ್ರವಲ್ಲ, ಆದರೆ ಅವುಗಳ ಆರೋಗ್ಯ ಮತ್ತು ಸ್ವಸ್ಥತೆಯಲ್ಲಿಯೂ ತಾನು ಮಹಿಮೆ ಹೊಂದಲ್ಪಡುವಂತೆ ದೇವರು ನಮ್ಮ ದೇಹಗಳಿಂದ ಬಯಸುತ್ತಾನೆ.

ನಾವು ಉತ್ತಮವಾದ ಆರೋಗ್ಯವನ್ನು ನಾವು ಉತ್ತಮವಾದದ್ದನ್ನು, ಆರೋಗ್ಯವಾದದ್ದನ್ನು ತಿನ್ನಲು ನಮ್ಮ ಜವಾಬ್ದಾರಿಯಾಗಿದೆ, ಹಾಗೂ ನಮ್ಮ ದೇಹವು ವ್ಯಾಯಾಮ ಮಾಡಬೇಕಾಗಿದೆ. ಕೆಲವು ಮಾಡಬೇಕಾದ ಸೂಕ್ಷ್ಮ ಅಂಶಗಳು ಮಿತಿಮೀರಿ ತಿನ್ನುವುದನ್ನು, ಸಿಹಿ, ಉಪ್ಪು ಹಾಗೂ ಎಣ್ಣೆ/ ಕೊಬ್ಬಿನ ಆಹಾರಗಳನ್ನು ತಿನ್ನುವುದನ್ನು ಒಳಗೊಂಡಿದೆ, ಸಮಯಕ್ಕೆ ಸರಿಯಾಗಿ ಊಟಮಾಡಬೇಕು, ಮುಂತಾದವುಗಳನ್ನು ಒಳಗೊಂಡಿದೆ. ಒಬ್ಬ ವೈದ್ಯರು ಬೇರೆ ಇತರ ನಾವು ಮಾಡಬೇಕಾದ ವಿಶಿಷ್ಟವಾದ, ನಮ್ಮ ವೈಯಕ್ತಿಕ ಆರೋಗ್ಯ ಸ್ಥಿತಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ನಮಗೆ ತಿಳುವಳಿಕೆ ಕೊಡಲು ಸಾಧ್ಯ.

ಸೇವೆಯಲ್ಲಿ ಪ್ರಯಾಣ ಮಾಡುವವರು, ಯಾವ ಊಟವು ನಿಮಗೆ ನೀಡಲ್ಪಡುತ್ತದೆ ಹಾಗೂ ಯಾವಾಗ ನೀಡಲ್ಪಡುತ್ತದೆ ಎಂಬುದನ್ನು ತಿಳಿಯದಿರಬೇಕು. ಸಾಮಾನ್ಯವಾಗಿ ನೀವು ಸೇವೆಗಳ ನಡುವೆ ಯಾವಾಗ ಸಮಯವಿರುತ್ತದೋ ಅಥವಾ ಸೇವೆಯ ಕೊನೆಯಲ್ಲಿ ಊಟಮಾಡುವಿರಿ, ಇದು ಮುಸ್ಸಂಜೆಯ ಸಮಯವಾಗಿರಬಹುದು. ಇವು ಅನಿವಾರ್ಯ, ಆದದ್ದರಿಂದ ನಾನು ಪ್ರಯಾಣ ಮಾಡುವಾಗ, ಲಘುವಾದ ಆಹಾರವನ್ನು

ತಿನ್ನಲು ಹಾಗೂ ಕಡಿಮೆ ಪ್ರಮಾಣದಲ್ಲಿ ತಿನ್ನಲು ಪ್ರಯತ್ನಿಸುತ್ತೇನೆ. ನಾವು ಪ್ರಯಾಣ ಮಾಡುವಾಗ ಮಿತಿಮೀರಿ ತಿನ್ನಲು ನಮಗೆ ಶೋಧನೆ ಉಂಟಾಗುತ್ತದೆ. ಏಕೆಂದರೆ, ನಮ್ಮ ಆತಿಥೇಯರು ನಮಗೆ ಅತ್ಯುತ್ತಮವಾದ ಹಾಗೂ ತಮ್ಮ ನಗರಗಳ ಸ್ವಾದಿಷ್ಟವಾದ ತಿನಿಸುಗಳನ್ನು ನೀಡಲು ಬಯಸುತ್ತಾರೆ. ನಾವು ನಮ್ಮ ಆತಿಥೇಯರಿಗೆ ವಿನಯಶೀಲರೂ ದಯೆಯುಳ್ಳವರೂ ಆಗಿರಬೇಕಾಗಿರುವಲ್ಲಿ, ನಾವು ನಮ್ಮ ಆರೋಗ್ಯದ ಕಡೆಗೆ ಗಮನ ಹರಿಸಬೇಕಾದುದನ್ನು ನೆನಪಿಟ್ಟುಕೊಳ್ಳಬೇಕಾಗುತ್ತದೆ. ಹೀಗಾಗಿ ಒಂದು ದಯಾ ಪೂರಿತವಾದ, ಚತುರತೆಯುಳ್ಳ ರೀತಿಯಲ್ಲಿ, ನಾವು ಅವರ ಆಹಾರವನ್ನು ನಮ್ಮ ದೇಹಕ್ಕೆ ಹೆಚ್ಚಾಗಿ ತುಂಬದಂತೆ, ಆನಂದದೊಂದಿಗೆ ಸೇವಿಸಬಹುದು.

ಆರೋಗ್ಯಕರವಾದ ಆಹಾರ ಸೇವನೆಯ ಅಭ್ಯಾಸಗಳು ಹಾಗೂ ಕ್ರಮವಾದ ವ್ಯಾಯಾಮವನ್ನು ರೂಢಿ ಮಾಡಿಕೊಳ್ಳುವುದು ದೇವರ ಮತ್ತು ಆತನ ಜನರಿಗೆ ಉತ್ತಮವಾಗಿ ಹಾಗೂ ದೀರ್ಘವಾಗಿ ಸೇವೆಮಾಡಲು ಸಹಾಯ ಮಾಡುತ್ತದೆ. ವೈಯಕ್ತಿಕವಾಗಿ ನನಗೆ, ಕರ್ತನಾದ ಯೇಸುವು ವಿಳಂಬ ಮಾಡಿ, ಆರೋಗ್ಯಕರ ಜೀವಿತವೊಂದನ್ನು ಮುಂದುವರಿಸುವಂತೆ ದೀರ್ಘಕಾಲದ ಬಾಳುವಿಕೆಯ ದರ್ಶನವಾಯಿತು. ನನಗೆ ಸಾಧ್ಯವಾದಷ್ಟುಮಟ್ಟಿಗೆ, ಸ್ಥಿರವಾಗಿ ಉಳಿದು, ಕೊನೆವರೆಗೂ ಆರೋಗ್ಯವಂತನಾಗಿದ್ದು, ದೀರ್ಘಕಾಲ ದೇವರಿಗೆ ಸೇವೆ ಮಾಡಲು ನಾನು ಬಯಸುತ್ತೇನೆ. ಆರೋಗ್ಯವಾಗಿ ಇರುವುದು. ನಮಗೆ ಸಮಯವನ್ನು ಹಾಗೂ ಹಣವನ್ನು ಉಳಿಸುತ್ತದೆ, ಇಲ್ಲವಾದರೆ ಆಸ್ಪತ್ರೆಗಳಲ್ಲಿ ಹಾಗೂ ವೈದ್ಯಕೀಯ ಪರಾಂಬರಿಕೆಯಲ್ಲಿ ಕಳೆಯಬೇಕಾಗುತ್ತದೆ. ನಾವು ನಮ್ಮ ಸಮಯ ಮತ್ತು ಹಣವನ್ನು ಬೇರೆ ಹೆಚ್ಚಿನ ಪ್ರಯೋಜನಕರ ಕಾರ್ಯಗಳಿಗಾಗಿ ಬಳಸಬಹುದು ಹಾಗೂ ಇದೆಲ್ಲವೂ ಏಕರೂಪವಾಗಿ ಆರೋಗ್ಯಕರವಾಗಿ ಆಹಾರ ಸೇವಿಸುವ ಹಾಗೂ ಕ್ರಮವಾಗಿ ಅಭ್ಯಾಸ ಮಾಡುವುದನ್ನು ಹೊಂದಿಕೊಳ್ಳುತ್ತದೆ.

ಈ ವಲಯದಲ್ಲಿ ನನ್ನ ತಂದೆಯು ಒಬ್ಬ ಉತ್ತಮವಾದ ಸ್ಫೂರ್ತಿಯೂ, ಪ್ರೋತ್ಸಾಹವೂ ಆಗಿರುತ್ತಾರೆ. ಕಳೆದ 40 ವರ್ಷಗಳ ಕಾಲ

ಅವರು ಕ್ರಮವಾಗಿ ವ್ಯಾಯಾಮ ಮಾಡುತ್ತಿದ್ದರು. ಅವರು ಈಗ 71 ವರ್ಷ ವಯಸ್ಸಾಗಿದ್ದು ಇನ್ನೂ ಬಲವನ್ನೂ ಶಕ್ತಿಯನ್ನೂ ಹೊಂದಿರುತ್ತಾರೆ. ಅವರು ನಡೆದಾಡಲು, ಅಂಗಸಾಧನೆ ಮಾಡಲು ಹೋಗುತ್ತಾರೆ. ಅವರು ಇನ್ನೂ ನಿಧಾನ ನಡಿಗೆ, ಹಿಗ್ಗಿಸುವಿಕೆ ಹಾಗೂ ತೂಕ ಎತ್ತುವಿಕೆಗಳನ್ನು ಮಾಡುತ್ತಾರೆ, ನಾನು ಅವರಿಂದ ಕ್ರಮವಾದ ವ್ಯಾಯಾಮದ ಪ್ರಾಮುಖ್ಯತೆಯನ್ನು ಕಲಿತುಕೊಂಡಿರುತ್ತೇನೆ ಹಾಗೂ ನನ್ನ ಮುಂದಿನ ವರ್ಷಗಳಲ್ಲಿ ನಾನು ಆರೋಗ್ಯವಂತನಾಗಿ ಪ್ರವೇಶಿಸುವವರೆಗೆ ಅದೇರೀತಿ ಉಳಿಸಿಕೊಳ್ಳುವ ನಿರೀಕ್ಷೆ ಹೊಂದಿರುತ್ತೇನೆ. ನಾನು ದೇವರ ವಾಕ್ಯೋಪದೇಶ ಮಾಡುತ್ತಾ, ಬೋಧಿಸುತ್ತಾ ಇರಲು ಹಾಗೂ ಕೊನೆಯವರೆಗೂ ದೇವರ ರಾಜ್ಯದಲ್ಲಿ ದೇವ ಪುರುಷರು ಹಾಗೂ ಸ್ತ್ರೀಯರನ್ನು ಎಬ್ಬಿಸಲು ಬಯಸುತ್ತೇನೆ.

## ಒಂದು ವೈಯಕ್ತಿಕ ನಿರ್ವಹಣಾ ಯೋಜನೆಯನ್ನು ಹೊಂದಿಕೊಳ್ಳಿರಿ

**"ಯಾಕೆಂದರೆ ಸಭಾಧ್ಯಕ್ಷನು ದೇವರ ಮನೆವಾರ್ತೆಯವನಾಗಿರುವುದರಿಂದ ನಿಂದಾರಹಿತನಾಗಿರಬೇಕು; ಅವನು ಸ್ವೇಚ್ಛಾಪರನಾದರೂ, ಮುಂಗೋಪಿಯಾದರೂ, ಕುಡಿದು ಜಗಳಮಾಡುವವನಾದರೂ, ಹೊಡೆದಾಡುವವನಾದರೂ ನೀಚಲಾಭವನ್ನು ಅಪೇಕ್ಷಿಸುವವನಾದರೂ ಆಗಿರದೆ ಅತಿಥಿ ಸತ್ಕಾರ ಮಾಡುವವನೂ ಒಳ್ಳೇದನ್ನು ಪ್ರೀತಿಸುವವನೂ ಸ್ವಸ್ಥಚಿತ್ತನೂ ನ್ಯಾಯವಂತನೂ ದೇವಭಕ್ತನೂ ಜಿತೇಂದ್ರಿಯನೂ ಆಗಿರಬೇಕು"** (ತೀತನಿಗೆ 1:7,8).

**"ದೇವರು ನಮಗೆ ಕೊಟ್ಟಿರುವ ಆತ್ಮವು ಬಲ ಪ್ರೀತಿ ಶಿಕ್ಷನಗಳ ಆತ್ಮವೇ ಹೊರತು ಹೇಡಿತನದ ಆತ್ಮವಲ್ಲ"** (2 ತಿಮೊಥೆಯನಿಗೆ 1:7).

"ಸ್ವಸ್ಥಚಿತ್ತನು" ಎಂಬುದು ಶಿಸ್ತಿನ ಅಥವಾ ಆತ್ಮ ಸಂಯಮವುಳ್ಳದ್ದೆಂದು ಅನುವಾದಿಸಲ್ಪಡುತ್ತದೆ. ಪವಿತ್ರಾತ್ಮನು ನಮ್ಮಲ್ಲಿ ಧೈರ್ಯ, ಬಲ, ಪ್ರೀತಿ ಮತ್ತು ಶಿಸ್ತು ಅಥವಾ ಆತ್ಮ ಸಂಯಮವನ್ನು ತುಂಬಿಸಿದ್ದಾನೆ. ಪವಿತ್ರಾತ್ಮನು ನಮ್ಮನ್ನು ಸ್ಥಿರಪಡಿಸಲು, ಆತ್ಮ, ಪ್ರಾಣ ಮತ್ತು ಶರೀರಗಳನ್ನು ಶಿಸ್ತಿನ ಅಡಿಯಲ್ಲಿ ನಮಗೆ ಬಲವನ್ನು ನೀಡಿರುತ್ತಾನೆ.

ಪವಿತ್ರಾತ್ಮನ ಸಹಾಯದಿಂದ ಹಾಗೂ ಕೊಡಲ್ಪಟ್ಟಿರುವ ಪರಿಸ್ಥಿತಿಗಳು ಹಾಗೂ ಸನ್ನಿವೇಶಗಳಿಂದ ನೀವು ಜೀವಿಸಲು ಹಾಗೂ ಕಾರ್ಯಾಚರಣೆ ಮಾಡಲು, ನಿಮ್ಮ ಜೀವಿತವನ್ನು ಕ್ರಮಪಡಿಸುವಂತೆ, ನೀವು ಹೇಗೆ ಹೋಗುತ್ತೀರಿ ಮತ್ತು ನಿಮಗೆ ಕೊಡಲ್ಪಟ್ಟ ಸಮಯ ಮತ್ತು ಸಂಪನ್ಮೂಲಗಳನ್ನು ಹೇಗೆ

ಬಳಸುತ್ತೀರೆಂದು ಒಂದು ಯೋಜನೆಯನ್ನು ನೀವು ಹೊಂದಬೇಕಾಗುತ್ತದೆ. ದೇವರು ನಿಮಗೆ ಒದಗಿಸಿರುವವುಗಳನ್ನು ನೀವು ಎಲ್ಲಿ ಬಳಸಬೇಕೆಂದು ನೀವು ತೀರ್ಮಾನಿಸಬೇಕಾಗುತ್ತದೆ. ನೀವು ಒಂದು ಪೂರ್ವಾಲೋಚನೆಯ ವೈಯಕ್ತಿಕ ನಿರ್ವಹಣೆಯನ್ನು ಅಥವಾ ಪೂರ್ವಾಲೋಚನೆಯ ಆದ್ಯತೆಗಳ ಪಟ್ಟಿಯನ್ನು ಹೊಂದಿದ್ದರೆ, ಯಾವುದು ಪ್ರಾಮುಖ್ಯವಾದದ್ದೆಂಬುದರ ಮೇಲೆ ಕೇಂದ್ರೀಕರಿಸುವಂತೆ ನಿಮಗೆ ಸಹಾಯಮಾಡುತ್ತದೆ ಹಾಗೂ ದೇವರ ಉದ್ದೇಶಗಳೊಂದಿಗೆ ನಿಮ್ಮನ್ನು ಮುಂದಕ್ಕೆ ನಡೆಸುತ್ತದೆ. ಇಲ್ಲವಾದರೆ ಹಲವಾರು ವಿಭಿನ್ನವಾದ ಅಂಶಗಳೊಂದಿಗೆ ದೂರವಾಗಲು ಸಹಾಯಮಾಡುತ್ತದೆ. ಚಿತ್ತಭ್ರಮಣೆಗಳು ವ್ಯರ್ಥವಾದ ಸಮಯ ಹಾಗೂ ಶಕ್ತಿಯಲ್ಲಿ ಫಲ ಹೊಂದುತ್ತವೆ. ಚಿತ್ತ ಭ್ರಮಣೆಗಳು ವಿಳಂಬವನ್ನು ಒದಗಿಸುತ್ತವೆ. ಇವು ಮುಂಚಿತವಾಗಿ ನಿಮ್ಮ ಮೂಲ ಉದ್ದೇಶದ ಬೆನ್ನಟ್ಟುವಿಕೆಯಲ್ಲಿ ನಿಮ್ಮನ್ನು ಬಲಹೀನಗೊಳಿಸುತ್ತದೆ. ಜ್ಞಾನೋಕ್ತಿಗಳ ಪುಸ್ತಕವು ನಮಗೆ, "ಆತ್ಮವನ್ನು ಸ್ವಾಧೀನ ಪಡಿಸಿಕೊಳ್ಳದವನು, ಗೋಡೆಬಿದ್ದ ಹಾಳೂರಿಗೆ ಸಮಾನ," (ಜ್ಞಾನೋಕ್ತಿ 25:28) ಎಂದು ಕಲಿಸುತ್ತದೆ. ಒಂದು ವೈಯಕ್ತಿಕ ನಿರ್ವಹಣೆಯ ಯೋಜನೆಯನ್ನು ಹೊಂದುವಾಗ, ಅದು ದೇವರು ನಿಮಗೆ ನೀಡಿರುವ ಸಂಪನ್ಮೂಲಗಳ ಬಳಕೆಯ ಶಿಸ್ತಿಗೆ ಸಹಾಯ ಮಾಡುತ್ತದೆ.

ನನ್ನ ವೈಯಕ್ತಿಕ ನಿರ್ವಹಣೆಯ ಯೋಜನೆಯ ಭಾಗಕ್ಕೆ ಈ ಕೆಲವು ಅಂಶಗಳಿವೆ:

### *ದೈನಂದಿನ ವಿವರಪಟ್ಟಿ*

ನಾನೊಂದು ದೈನಂದಿನ ವಿವರ ಪಟ್ಟಿಯನ್ನು ಇಟ್ಟುಕೊಳ್ಳಲು ಬಯಸುತ್ತೇನೆ. ಇದು ನನಗೆ ಯಾವಾಗ, ಏನೇನು ಮಾಡಬೇಕೆಂದು ತಿಳಿಯಲು ಸಹಾಯ ಮಾಡುತ್ತದೆ. ನನ್ನ ದೈನಂದಿನ ವಿವರ ಪಟ್ಟಿಯು ಅಗತ್ಯವಾಗಿ ನಾನು ಮಾಡಬೇಕಾದವುಗಳ ಬಗ್ಗೆ ವಿವಿಧವಾದ ಕಾರ್ಯಗಳಿಗಾಗಿ ಸಮಯವನ್ನು ಸಿದ್ಧಮಾಡಿರುತ್ತದೆ. ಉದಾ: ಮುಂಜಾನೆಯಲ್ಲಿನ ಸಮಯವು ಕರ್ತನಿಗಾಗಿ, ಅಂಗ ಸಾಧನೆಯಲ್ಲಿ ಕಾರ್ಯ ಮಾಡಲು ಸಮಯ, ಕುಟುಂಬದೊಂದಿಗೆ ಮುಂಜಾನೆಯ ಉಪಹಾರ, ಆಫೀಸಿನಲ್ಲಿ ಸಮಯ ಇತ್ಯಾದಿ, ನಾನು ಪ್ರಯಾಣ ಮಾಡುವಾಗ ನಾನು ಈ ವಿವರ

ಪಟ್ಟಿಯನ್ನು ಹೊಂದಿಕೊಳ್ಳಬೇಕು. ಆದರೆ, ನಾನು ಮನೆಗೆ ಹಿಂತಿರುಗಿದ ತಕ್ಷಣ, ನಾನು ನನ್ನ 'ತಪ್ಪಿದ' ದೈನಂದಿನ ವೇಳಾಪಟ್ಟಿಗೆ ಹಿಂತಿರುಗುತ್ತೇನೆ.

***ಆದ್ಯತೆಗಳು***

ಇತರ ಅಂಶಗಳಗಿಂತ ಹೆಚ್ಚು ಪ್ರಾಮುಖ್ಯವಾದ, ದೇವರೊಂದಿಗೆ ವೈಯಕ್ತಿಕ ಸಮಯ, ಕುಟುಂಬದೊಂದಿಗೆ ಸಮಯ ವ್ಯಾಯಾಮ ಮತ್ತು ವಿಶ್ರಾಂತಿಗಾಗಿ ಸಮಯ ಮುಂತಾದ ವಿಷಯಗಳಗೆ ನಾನು ಅಂಟಿಕೊಳ್ಳುತ್ತೇನೆ. ನಾನು ವರಗಳನ್ನು ಹೊಂದಿದ ಹಾಗೂ ಮಾಡಲು ಕರೆಯಲ್ಪಟ್ಟ, ಅಂಶಗಳನ್ನು ಮಾಡುವುದರ ಮೇಲೆ ಕೇಂದ್ರೀಕರಿಸುತ್ತೇನೆ ಹಾಗೂ ನನ್ನ ಸೇವೆಯ ತಂಡದ ಇತರರು ತಾವು ವರಗಳನ್ನು ಹೊಂದಿದ ಹಾಗೂ ಕರೆಯಲ್ಪಟ್ಟ ಕಾರ್ಯಗಳ ಇತರ ವಿಷಯಗಳಲ್ಲಿ ಕಾರ್ಯಮಾಡಲು ಅವಕಾಶ ಮಾಡಿಕೊಡುತ್ತೇನೆ. ನಾನು ಅವರ ದಾರಿಗಳಂದ ಹೊರಗೆ ಉಳಯಲು ಪ್ರಯತ್ನಿಸುತ್ತೇನೆ, ಇದರಿಂದ ನಾನು ಅಗತ್ಯವಿದ್ದಾಗ ಮಾರ್ಗದರ್ಶನ ಒದಗಿಸುವಲ್ಲಿ ತಾವು ಏನು ಮಾಡಬೇಕಾಗಿದೆಯೆಂಬುದನ್ನು ಮಾಡಲು ಅವರು ಸ್ವಾತಂತ್ರ್ಯ ಹೊಂದುತ್ತಾರೆ.

***ಸೇವೆಯ ಆಹ್ವಾನಗಳನ್ನು ಅಂಗೀಕರಿಸುವುದು***

ನನ್ನ ಹಾದಿಯಲ್ಲಿ ಬರುವ ಸೇವೆಗಾಗಿ ಎಲ್ಲಾ ಆಹ್ವಾನಗಳನ್ನು ನಾನು ಪೂರೈಸಲು ಮಾನವತೆಯಲ್ಲಿ ಸಾಧ್ಯವಾಗುವುದಿಲ್ಲ. ನಾನು ಸೇವೆಯ ಒಪ್ಪಂದಗಳನ್ನು ಆಯ್ಕೆ ಮಾಡಿಕೊಳ್ಳುವುದರಲ್ಲಿ ಎಚ್ಚರಿಕೆ ಹೊಂದಿರುತ್ತೇನೆ. ಗೊತ್ತು ಗುರಿಯಿಲ್ಲದೆ ಆಹ್ವಾನಗಳನ್ನು ಅಂಗೀಕರಿಸುವುದಕ್ಕಿಂತ, ನಾನು ನನ್ನ ಸಮಯವನ್ನು ದೇವರು ನನ್ನನ್ನು ಎಲ್ಲಿಗೆ ಕರೆದಿದ್ದಾನೆಂದು ನಾನು ಭಾವಿಸುತ್ತೇನೋ ಆ ವಲಯಗಳಗೆ, ದೇವರ ರಾಜ್ಯಕ್ಕಾಗಿ ತಂತ್ರೋಪಾಯದ ಲಾಭವೆಲ್ಲಿದೆಯೋ ಅಲ್ಲಿಗೆ ನೀಡಲು ನಾನು ಪ್ರಯತ್ನಿಸುತ್ತೇನೆ, ಜನರು ಕೇವಲ ಒಬ್ಬ ಸಂದೇಶಕನಿಗಾಗಿ ಅವಶ್ಯಕತೆ ಇರುವ ಭಾಗ ತುಂಬಿಸಲು ಎದುರು ನೋಡುತ್ತಾರೋ ಅಥವಾ ಯೋಗ್ಯವಾದ ರೀತಿಯಲ್ಲಿ ಉಡುಗೊರೆಯನ್ನು ಸ್ವೀಕರಿಸಲು ತಮಗಾಗಿ ದೇವರು ಸುರಿಸುವ ಅಭಿಷೇಕವನ್ನು ಹೊಂದಲು ಕಾದಿದ್ದಾರೋ ಎಂದು ಬೆಲೆ ಕಟ್ಟಲು ಪ್ರಯತ್ನಿಸುತ್ತೇನೆ.

### *ಸಭೆಯ ಜನರನ್ನು ಸಂಧಿಸುವುದು*

ನನ್ನ ಸೇವೆಯ ಆರಂಭದ ಆದಿಯಿಂದಲೇ, ನಾನು ನನ್ನ ಸಭೆಯಲ್ಲಿ, ಜನರು ನನ್ನನ್ನು ಸಂಧಿಸಲು ಬಯಸಿದರೆ, ಅವರು ಬಂದು ನನ್ನ ಆಫೀಸಿನಲ್ಲೇ ಸಂಧಿಸಬೇಕೆಂಬ ರೂಢಿಯನ್ನು ಮಾಡಿದ್ದೆನು, ಇದು ಅವರು ನನ್ನೊಂದಿಗೆ ಯಥಾರ್ಥವಾಗಿ ಮಾತನಾಡಬೇಕಾಗಿದೆಯೆಂಬುದನ್ನು ಸ್ಥಿರಪಡಿಸುತ್ತದೆ ಹಾಗೂ ನನ್ನ ಸಮಯವನ್ನು ಉಳಿಸುವುದಕ್ಕೂ ಸಹಾಯವಾಗಿತ್ತು. ಕೇವಲ ವಿಶಿಷ್ಟವಾದ ಸಂದರ್ಭಗಳಲ್ಲಿ ನಾನು ಹೋಗಿ ಅವರೊಂದಿಗೆ ಅವರ ಮನೆಗಳಲ್ಲಿ ಸಂದರ್ಶಿಸುತ್ತೇನೆ ಹಾಗೂ ಅದೇ ಮನೋಭಾವದಲ್ಲಿ ನಾನು, ಜನರನ್ನು ಭೋಜನಕ್ಕಾಗಿ, ಜನ್ಮದಿನಗಳು ಹಾಗೂ ಇತರ ವಿಶೇಷಗಳಿಗಾಗಿ ಮನೆಗಳಲ್ಲಿ ಸಂಧಿಸುವ ಎಲ್ಲಾ ಆಹ್ವಾನಗಳನ್ನು ನಾನು ಅಂಗೀಕರಿಸುವುದಿಲ್ಲ. ನಮ್ಮಂಥ ಸಭೆಯಗಾತ್ರವುಳ್ಳ ಸಭಿಕರೊಂದಿಗೆ ಇದು ಪ್ರಾಯೋಗಿಕವಾಗಿ ಅಸಾಧ್ಯವಾಗುತ್ತದೆ ಹಾಗೂ ನಮ್ಮ ಸಭಿಕರೂ ಇದನ್ನು ಅರ್ಥಮಾಡಿಕೊಳ್ಳುತ್ತಾರೆ.

### *ಸಮಸ್ಯೆಗಳನ್ನು ಪರಿಹರಿಸುವುದು, ಅಗತ್ಯತೆಗಳನ್ನು ಸಂಧಿಸುವುದು*

ನಮ್ಮ ಸುತ್ತಲೂ ಯಾವಾಗಲೂ "ಅಗತ್ಯತೆಗಳು" ಇರುತ್ತವೆ. ತಮಗೆ ಬೆಂಬಲ ನೀಡಲು ನಿಮ್ಮನ್ನು ಕೇಳುವ ಮೌಲ್ಯತೆಯುಳ್ಳ ಹಲವಾರು ಸೇವೆಗಳು ಇರುತ್ತವೆ. ಜೀವಿತದ ವಿಭಿನ್ನ ವಲಯಗಳಲ್ಲಿ ಹಲವಾರು ಯಥಾರ್ಥ ಜನರು ಸಹಾಯಕ್ಕೆ ಬಯಸುವವರಿದ್ದಾರೆ. ನಾವು ಮಾಡಬೇಕಾದ ಯಾವುದಕ್ಕಾಗಿ ಆದರೂ ಅನುಕಂಪ ಹಾಗೂ ಆಶೆಯೊಂದಿಗೆ ಸ್ಪಂದಿಸುವುದರಲ್ಲಿ, ನಾವು ದೇವರಲ್ಲ ಹಾಗೂ ನಾವು ಲೋಕದ ರಕ್ಷಕರಲ್ಲ ಎಂಬುದನ್ನು ನಾವು ನಮಗೆ ನೆನಪು ಹುಟ್ಟಿಸುತ್ತಿರಬೇಕು. ಪ್ರತಿಯೊಂದು ಸಮಸ್ಯೆಯನ್ನೂ ಬಗೆಹರಿಸಲು ಹಾಗೂ ಪ್ರತಿಯೊಂದು ಅಗತ್ಯತೆಯನ್ನೂ ಸಂಧಿಸಲು ನಾನು ಇಲ್ಲಿ ಇಲ್ಲ ಎಂದು ನಾನು ನನಗೆ ನೆನಪು ಹುಟ್ಟಿಸಬೇಕು. ದೇವರು ಮಾತ್ರ ಅದನ್ನು ಮಾಡಲು ಸಾಧ್ಯ. ನನ್ನ ಜವಾಬ್ದಾರಿಯು ಏನೆಂದರೆ, ದೇವರು ನನಗೆ ಏನು ಮಾಡಲು ಪ್ರೇರಿಸುತ್ತಾನೋ ಹಾಗೂ ಅದಕ್ಕೆ ಪ್ರತಿಕ್ರಿಯಿಸುವುದಾಗಿದೆ ಹಾಗೂ ದೇವರು ಯಾವುದನ್ನು ಮಾಡಲು ನನಗೆ ಜವಾಬ್ದಾರಿ ಕೊಟ್ಟಿರುತ್ತಾನೋ ಆ ಪರಿಸ್ಥಿತಿಗಳೊಳಗೆ ಮಾತ್ರ ಪ್ರವೇಶಿಸಲು ಅಥವಾ ಅದಕ್ಕೆ ಪ್ರತಿಕ್ರಿಯಿಸುವಂತೆ ನನ್ನನ್ನು ಕಲಕುತ್ತಾನೆ. ನಾನು ಭಾವನಾತ್ಮಕವಾಗಿ ಯಾವುದಾದರೂ ಅಗತ್ಯತೆ ಅಥವಾ ಒಂದು ನಿರ್ದಿಷ್ಟ

ಪರಿಸ್ಥಿತಿಯಿಂದ ಸ್ಪಂಧಿಸಲ್ಪಟ್ಟಾಗ, ನಾನು ಕರ್ತನನ್ನು ಅನುಸರಿಸಲು ಕಲಿಯಬೇಕು ಹಾಗೂ ಇದು ಆತ್ಮಿಕ ವಿವೇಚನೆ ಹಾಗೂ ನಿರ್ಬಂಧದ ಅಗತ್ಯತೆ ಹೊಂದಿರುತ್ತದೆ.

***ಜೀವಿತ ಯೋಜನೆ***

ಸೇವೆಯಲ್ಲಿ ನಾನು ಮಾಡಿದ ಮತ್ತೊಂದು ಅಂಶವೇನೆಂದರೆ ದೇವರನ್ನು ಆಲಿಸುವುದು ಹಾಗೂ ಪ್ರತಿ ಹತ್ತು ವರ್ಷಗಳ ಅವಧಿಯಲ್ಲಿ ನಾನು ಏನನ್ನು ಕೇಂದ್ರೀಕರಿಸಬೇಕೆಂದು ಒಂದು ಗ್ರಹಿಕೆಯನ್ನು ಹೊಂದುವುದು. ಇದರಿಂದ ನಾನು ನನ್ನ ಜೀವಿತವನ್ನು ವಿಭಿನ್ನವಾದ ದಶಕಗಳಾಗಿ ಅಥವಾ ಹತ್ತು ವರ್ಷಗಳ ಅವಧಿಗಳಾಗಿ ವಿಭಾಗಿಸಿರುತ್ತೇನೆ. ಪ್ರತಿಯೊಂದು ದಶಕವೂ ಒಂದು ವಿಶಿಷ್ಟ ಗುರಿಯನ್ನು ಹೊಂದಿರುತ್ತದೆ—ನಾನು ಕೇಂದ್ರೀಕರಿಸಬೇಕಾದ ಏನೋ ಒಂದನ್ನು ಹಾಗೂ ಆ ದಶಕದ ಕಡೆಗೆ ಕೆಲಸ ಮಾಡುವುದು ಮತ್ತು ಮುಂದಿನ ದಶಕದ ಕಡೆಗೆ ಕಟ್ಟುವುದು ಆಗಿರುತ್ತದೆ. ಮುಂದಿನ ದಶಕವು ಬಂದಾಗ ನಾನು ಮುಂದಿನ ಗುರಿಯ ಕಡೆಗೆ ಬದಲಾವಣೆ ಮಾಡುತ್ತೇನೆ. ಪ್ರತಿಯೊಂದು ದಶಕಗಳೂ ಹೇಗೆ ತೆರೆದಿಡಲ್ಪಟ್ಟಿವೆ ಎಂದು ನೋಡುವುದು ನಿಜವಾಗಿಯೂ ವಿಸ್ಮಯವಾದುದು. ಎರಡನೇ ದಶಕದಲ್ಲಿ ನಾನು ಏನು ಕನಸುಕಂಡೆನು (12–22 ವಯಸ್ಸು), ಎಂದರೆ ದೇವರು ನನ್ನನ್ನು ಮೂರನೇ ದಶಕಕ್ಕಾಗಿ (22–32 ವರ್ಷ) ಸಿದ್ಧಪಡಿಸುತ್ತಿದ್ದುದನ್ನು ಕಂಡೆನು, ನಂತರ ಈ ತೆರೆಯಲ್ಪಟ್ಟ ಹಾಗೂ ನಾಲ್ಕನೇ ದಶಕದಲ್ಲಿ ರೂಪು ಹೊಂದಲು ಆರಂಭಿಸಿರುವ (32–42 ವರ್ಷ)ದನ್ನು ನಾನು ನೋಡಿದೆನು, ನಾನು ಈಗ ಮುಂಬರುವ ಮಹಾ ಸಂಗತಿಗಳೊಳಗೆ ಪ್ರಯಾಣ ಮಾಡುತ್ತಿದ್ದೇನೆ. ನೀವು ಇದನ್ನೇ ದಶಕದಿಂದ ದಶಕಕ್ಕೆ ಜೀವಿತ ಯೋಜನೆಯನ್ನು ಅನುಸರಿಸಬೇಕೆಂದು ನಾನು ನೀಡುತ್ತಿಲ್ಲ, ನಾನು ಶಿಫಾರಸ್ಸು ಮಾಡುವುದೇನೆಂದರೆ, ನೀವೂ ಕೂಡಾ ನಿಮ್ಮ ಜೀವಿತಕ್ಕಾಗಿ ದೇವರಾತ್ಮದಿಂದ ದೈವಿಕ ಉದ್ದೇಶದ ಒಂದು ಗ್ರಹಿಕೆಯನ್ನು ತೆಗೆದುಕೊಳ್ಳಬೇಕು ಹಾಗೂ ನಂತರ ಅದು ನೆರವೇರುವುದೆಂದು ಕಾಣಲು ಒಂದು ಯೋಜನೆಯನ್ನು ಬೆಳೆಸಿರಿ. ಒಂದು ದೈವಿಕ ಉದ್ದೇಶದೊಂದಿಗೆ ಜೀವಿತವನ್ನು ಜೀವಿಸಿರಿ!



# ಕುಟುಂಬ

"ಸಭಾಧ್ಯಕ್ಷನ ಉದ್ಯೋಗವನ್ನೂ ಪಡಕೊಳ್ಳಬೇಕೆಂದಿರುವವನು ಒಳ್ಳೇ ಕೆಲಸವನ್ನು ಅಪೇಕ್ಷಿಸುವವನಾಗಿದ್ದಾನೆಂಬ ಮಾತು ನಂಬತಕ್ಕದ್ದಾಗಿದೆ. ಸಭಾಧ್ಯಕ್ಷನು ದೋಷಾರೋಪಣೆಯಿಲ್ಲದವನೂ ಏಕಪತ್ನಿಯುಳ್ಳವನೂ ಮಾದ್ಯಾಸಕ್ತಿಯಿಲ್ಲದವನೂ, ಜಿತೇಂದ್ರಿಯನೂ, ಮಾನಸ್ಥನೂ, ಅತಿಥಿಸತ್ಕಾರ ಮಾಡುವವನೂ, ಬೋಧಿಸುವುದರಲ್ಲಿ ಪ್ರವೀಣನೂ ಆಗಿರಬೇಕು. ಪೂರ್ಣ ಗೌರವದಿಂದ ತನ್ನ ಮಕ್ಕಳನ್ನು ಅಧೀನದಲ್ಲಿಟ್ಟುಕೊಂಡು ಸ್ವಂತ ಮನೆಯವರನ್ನು ಚೆನ್ನಾಗಿ ಆಳುವವನಾಗಿರಬೇಕು. ಸ್ವಂತ ಮನೆಯವರನ್ನು ಆಳುವುದಕ್ಕೆ ತಿಳಿಯದವನು ದೇವರ ಸಭೆಯನ್ನು ಹೇಗೆ ಪರಾಮರಿಸುವನು? ಅವನು ಹೊಸದಾಗಿ ದೇವರ ಸಭೆಯಲ್ಲಿ ಸೇರಿದವನಾಗಿರಬಾರದು; ಅಂಥವನಾದರೆ ಉಬ್ಬಿಕೊಂಡು ಸೈತಾನನಿಗೆ ಪ್ರಾಪ್ತವಾದ ಶಿಕ್ಷಾ ವಿಧಿಗೆ ಒಳಗಾದಾನು."

(1 ತಿಮೊಥೆಯನಿಗೆ 3:1–2,4–6)

## ಅಧ್ಯಾಯ 2

# 2

# ಕುಟುಂಬ

ಕ್ರೈಸ್ತೀಯ ಸೇವೆಯಲ್ಲಿ ನಮ್ಮಲ್ಲಿ ಅನೇಕರು, ನಾವು ನಮ್ಮ ಕರೆಯನ್ನು ಕುಟುಂಬದಲ್ಲಿ, ಸೇವೆಯಲ್ಲಿ ನಮ್ಮ ಕರೆಯೊಂದಿಗೆ ಸಮತೋಲನ ಮಾಡಲು ಯಶಸ್ಸು ಸಾಧಿಸಿಲ್ಲ, ನಮ್ಮಲ್ಲಿ ಅನೇಕ ಕ್ರೈಸ್ತೀಯ ಸೇವಕರಿಗಾಗಿ, ನಮ್ಮ ಹಲವು ಪ್ರಮುಖ ಹೋರಾಟಗಳು ಮುಚ್ಚಿದ ಬಾಗಿಲುಗಳ ಹಿಂದೆ ನಡೆದಿವೆ, ಅಂದರೆ ನಮ್ಮ ಮನೆಗಳ ಖಾಸಗೀ ಸ್ಥಳಗಳಲ್ಲಿ ನಾವು ಲೋಕವನ್ನು ರಕ್ಷಿಸುವುದರಲ್ಲಿ ಗಡಿಬಿಡಿಯಾಗಿರುವಲ್ಲಿ, ದಾರಿತಪ್ಪಿಹೋದ ನಮ್ಮ ಜೀವನ ಸಂಗಾತಿ ಅಥವಾ ಮಕ್ಕಳೊಂದಿಗೆ ನಡೆಯುತ್ತವೆ. ಇದು ದುಃಖಕರ ಸಂಗತಿಯಾಗಿದೆ. ಆದರೆ ಸತ್ಯ ಇದನ್ನು ಇನ್ನೂ ಹೆಚ್ಚಾಗಿ ಕಠೋರವಾಗಿರುವುದು ಏನೆಂದರೆ, ನಾವು ನಮ್ಮ ಸ್ವಂತ ವಿವಾಹದ, ಮನೆ ಹಾಗೂ ಕುಟುಂಬ ಜೀವಿತದ ಹೋರಾಡುತ್ತಿರುವಲ್ಲಿ ನಮ್ಮಲ್ಲಿ ಹಲವಾರು ಕ್ರೈಸ್ತೀಯ ಸೇವಕರು ಇತರ ವಿವಾಹಗಳನ್ನು ಸಮಾಲೋಚನೆ ಮಾಡಿ ಮಾರ್ಗದರ್ಶನ ನೀಡುತ್ತಾರೆ.

ಒಬ್ಬ ಕ್ರೈಸ್ತೀಯ ಸೇವಕನ ಅಗತ್ಯತೆಯು ಅನಿಶ್ಚಯತ್ವದ ರೀತಿಗಳಿಲ್ಲದೆ ಸ್ಪಷ್ಟವಾಗಿ ತಿಳಿಸಲ್ಪಟ್ಟಿದೆ. ಕ್ರೈಸ್ತೀಯ ಸೇವಕನು, *"ಪೂರ್ಣ ಗೌರವದಿಂದ ತನ್ನ ಮಕ್ಕಳನ್ನು ಅಧೀನದಲ್ಲಿಟ್ಟುಕೊಂಡು ಸ್ವಂತ ಮನೆಯವರನ್ನು ಚೆನ್ನಾಗಿ ಆಳುವುದಕ್ಕೆ ತಿಳಿಯದವನು ದೇವರ ಸಭೆಯನ್ನು ಹೇಗೆ ಪರಾಂಬರಿಸುವನು?"* (1 ತಿಮೊಥೆಯನಿಗೆ 3:4,5). ನಮ್ಮ ವೈವಾಹಿಕ ಸ್ಥಿತಿಯಲ್ಲಿ ನನ್ನ ಪತ್ನಿ ಮತ್ತು ನಾನು ಕಷ್ಟಕರ ಸ್ಥಿತಿಗಳನ್ನು ಹಾದು ಹೋಗಿದ್ದೇವೆ. ದೇವರ ದಯೆ ಹಾಗೂ ನಮ್ಮೊಂದಿಗೆ ನಿಂತ ಕೆಲವು ಮಂದಿಯ ಬೆಂಬಲ ಮಾತ್ರ ಈ ದಿನ ನಾವು ಎಲ್ಲಿದ್ದೇವೆಂದು ನಮ್ಮನ್ನು ನೋಡಿದಂಥದ್ದಾಗಿದೆ. ನಮ್ಮ ವಿವಾಹವು ಪರಿಪೂರ್ಣವಾಗಿಲ್ಲ ಹಾಗೂ ನಾವು ಒಂದು ಪರಿಪೂರ್ಣವಾದ ಮನೆಯನ್ನು ಹೊಂದಿಲ್ಲ. ಕಲಿಯಲು ಕೆಲವು ಕಠಿಣವಾದ ಪಾಠಗಳಿವೆ. ಆದ ಕಾರಣ ಕೆಳಗಿನ ಕೆಲವು ಪಾಠಗಳು ನಮ್ಮ ವೈಯಕ್ತಿಕ ಹೋರಾಟಗಳು ಹಾಗೂ ಸೋಲುವಿಕೆಗಳ

ಕುಲುಮೆಯೊಳಗಿಂದ ಬಂದಿವೆ. ಈ ಪಾಠಗಳಿಗೆ ಗಮನಕೊಡುವುದು ವಿವೇಕವಾದದ್ದೆಂದು ನಾನು ಯೋಚಿಸುತ್ತೇನೆ. ಕೆಳಗೆ ಪಟ್ಟಿಯಲ್ಲಿರುವ ಹಲವಾರು ಪಾಠಗಳು ಕ್ರೈಸ್ತೀಯ ಸೇವೆಯಲ್ಲಿರುವ ಒಬ್ಬ ವ್ಯಕ್ತಿಯ ದೃಷ್ಟಿಯಿಂದ ಬಂದದ್ದಾಗಿವೆ. ಅವು ಕ್ರೈಸ್ತೀಯ ಸೇವೆಯಲ್ಲಿನ ಮಹಿಳೆಯರಿಗೆ ಸಿದ್ಧವಾಗಿ ಅಳವಡಿಸಿಕೊಳ್ಳಬಹುದಾಗಿದೆ.

## ಮೂರು ಅಂಗವಿನ್ಯಾಸಗಳು, ಒಂದು ಜೀವಿತ

**"ಯಾವನಾದರೂ ನನ್ನ ಬಳಿಗೆ ಬಂದು ತನ್ನ ತಂದೆ ತಾಯಿ ಹೆಂಡತಿ ಮಕ್ಕಳು ಅಣ್ಣತಮ್ಮಂದಿರು ಅಕ್ಕ ತಂಗಿಯರು ಇವರನ್ನೂ ತನ್ನ ಪ್ರಾಣವನ್ನು ಸಹ ಹಗೆ ಮಾಡದಿದ್ದರೆ ಅವನು ನನ್ನ ಶಿಷ್ಯನಾಗಿರಲಾರನು"** (ಲೂಕ 14:26).

**"ಸಹೋದರರೇ, ನಾನು ಹೇಳುವುದೇನೆಂದರೆ,—ಸಮಯವು ಸಂಕೋಚವಾದದ್ದರಿಂದ ಇನ್ನು ಮೇಲೆ ಹೆಂಡತಿಯುಳ್ಳವರು ಹೆಂಡತಿಯಿಲ್ಲದವರಂತೆಯೂ, ಅಳುವವರು ಅಳದವರಂತೆಯೂ, ಸಂತೋಷ ಪಡುವವರು ಸಂತೋಷಪಡದವರಂತೆಯೂ, ಕೊಂಡುಕೊಳ್ಳುವವರು ಕೊಂಡದ್ದು ತಮ್ಮದೇ ಎಂದು ಹೇಳದವರಂತೆಯೂ, ಲೋಕವನ್ನು ಅನುಭೋಗಿಸುವವರು ಅದನ್ನು ಅಪ್ರಿಪೂರ್ಣವಾಗಿ ಅನುಭೋಗಿಸದವರಂತೆಯೂ ಇರಬೇಕು; ಯಾಕೆಂದರೆ ಈ ಪ್ರಪಂಚದ ತೋರಿಕೆಯು ಗತಿಸಿ ಹೋಗುತ್ತಾ ಇದೆ. ಆದರೆ ನೀವು ಚಿಂತೆಯಿಲ್ಲದವರಾಗಿರಬೇಕೆಂಬುದು ನನ್ನ ಇಷ್ಟ. ಮದುವೆಯಿಲ್ಲದವನು ತಾನು ಕರ್ತನನ್ನು ಹೇಗೆ ಮೆಚ್ಚಿಸಬೇಕೆಂದು ಕರ್ತನ ಕಾರ್ಯಗಳನ್ನು ಕುರಿತು ಚಿಂತಿಸುತ್ತಾನೆ. ಮದುವೆಯಾದವನು ತನ್ನ ಹೆಂಡತಿಯನ್ನು ಹೇಗೆ ಮೆಚ್ಚಿಸಬೇಕೆಂದು ಪ್ರಪಂಚದ ಕಾರ್ಯಗಳನ್ನು ಕುರಿತು ಚಿಂತಿಸುತ್ತಾನೆ. ಅದರಂತೆ ಮುತ್ತೈದೆಗೂ ಕನ್ನಿಕೆಗೂ ವ್ಯತ್ಯಾಸವುಂಟು. ಮದುವೆಯಿಲ್ಲದವಳು ತಾನು ದೇಹಾತ್ಮಗಳಲ್ಲಿ ಪವಿತ್ರಳಾಗಿರಬೇಕೆಂದು ಕರ್ತನ ಕಾರ್ಯಗಳನ್ನು ಕುರಿತು ಚಿಂತಿಸುತ್ತಾಳೆ, ಆದರೆ ಮದುವೆಯಾದವಳು ತನ್ನ ಗಂಡನನ್ನು ಹೇಗೆ ಮೆಚ್ಚಿಸಬೇಕೆಂದು ಪ್ರಪಂಚದ ಕಾರ್ಯಗಳನ್ನು ಕುರಿತು ಚಿಂತಿಸುತ್ತಾಳೆ. ನಾನು ನಿಮಗೆ ಉರ್ಲು ಹಾಕಬೇಕೆಂದು ಇದನ್ನು ಹೇಳುವುದಿಲ್ಲ. ನೀವು ಸಜ್ಜನರಿಗೆ ತಕ್ಕ ಹಾಗೆ ನಡೆದು ಭಿನ್ನ ಭಾವವಿಲ್ಲದೆ ಕರ್ತನಿಗೆ ಪಾದಸೇವೆಯನ್ನು ಮಾಡುವವರಾಗಬೇಕೆಂದು ನಿಮ್ಮ ಹಿತಕ್ಕೋಸ್ಕರವೇ ಹೇಳುತ್ತೇನೆ.** (1 ಕೊರಿಂಥದವರಿಗೆ 7:29–35).

**"ಸಭಾಧ್ಯಕ್ಷನು ದೋಷಾರೋಪಣೆಯಿಲ್ಲದವನೂ ಏಕಪತ್ನಿಯುಳ್ಳವನೂ ಮದ್ಯಾಸಕ್ತಿಯಿಲ್ಲದವನೂ ಜಿತೇಂದ್ರಿಯನೂ ಮಾನಸ್ಥನೂ ಅತಿಥಿ ಸತ್ಕಾರ ಮಾಡುವವನೂ ಬೋಧಿಸುವುದರಲ್ಲಿ ಪ್ರವೀಣನೂ ಆಗಿರಬೇಕು. ಅವನು ಕುಡಿದು ಜಗಳವಾಡುವವನೂ, ಹೊಡೆದಾಡುವವನೂ ಆಗಿರಬಾರದು, ಸಾತ್ವಿಕನೂ ಕುತರ್ಕ ಮಾಡದವನೂ ದ್ರವ್ಯಾಶೆಯಿಲ್ಲದವನೂ ಆಗಿರಬೇಕು. ಪೂರ್ಣ ಗೌರವದಿಂದ ತನ್ನ ಮಕ್ಕಳನ್ನು ಅಧೀನದಲ್ಲಿಟ್ಟುಕೊಂಡು ಸ್ವಂತ ಮನೆಯವರನ್ನು ಚೆನ್ನಾಗಿ ಆಳುವವನಾಗಿರಬೇಕು. ಸ್ವಂತ ಮನೆಯವರನ್ನು ಆಳುವುದಕ್ಕೆ ತಿಳಿಯದವನು ದೇವರ ಸಭೆಯನ್ನು ಹೇಗೆ ಪರಾಂಬರಿಸುವನು?** (1 ತಿಮೋಥೆಯನಿಗೆ 3:2–5).

ನಮ್ಮ ಕುಟುಂಬಕ್ಕೆ ಸಂಬಂಧವಾಗಿ ನಾವು ನಿಭಾಯಿಸಲು ಕರೆಯಲ್ಪಟ್ಟಿರುವ ವಿರೋಧವೆನಿಸುವಂತೆ ಕಾಣುವ ಮೂರು ಅಂಗವಿನ್ಯಾಸಗಳಿವೆ. ಕರ್ತನಾದ ಯೇಸುವು, ಹೇಳಿದ್ದೇನೆಂದರೆ,ನಾವು ನಮ್ಮ ಹೆಂಡತಿ ಮತ್ತು ಮಕ್ಕಳನ್ನು "ದ್ವೇಷಿ"ಸದೆ ಹೋದರೆ ಆತನ ಶಿಷ್ಯರಾಗಲಾರೆವು. ಕೊರಿಂಥದವರಿಗೆ ಬರೆದ ಪುಸ್ತಕದಲ್ಲಿ ಕರ್ತನು ಪೌಲನು ಮುಖಾಂತರ ನಮಗೆ ಸೂಚಿಸುವುದೇನೆಂದರೆ ವಿವಾಹವಾಗಿರುವವನು ವಿವಾಹವಾಗಿಲ್ಲದವನಂತೆ ಬಾಳಬೇಕು, ಇದರಿಂದ ಅವನು ಚಿತ್ತ ಭ್ರಮಣೆ ಹೊಂದುವುದಿಲ್ಲ, ಹಾಗೂ ಮತ್ತೆ ತಿಮೊಥೆಯನಿಗೆ ಬರೆದ ಪುಸ್ತಕದಲ್ಲಿ ಕರ್ತನು ಪೌಲನ ಮುಖಾಂತರ ಒಬ್ಬ ಆತ್ಮಿಕ ನಾಯಕನು ತನ್ನ ಪತ್ನಿ ಮತ್ತು ಮಕ್ಕಳನ್ನು ಪರಾಂಬರಿಸಬೇಕು ಹಾಗೂ ತನ್ನ ಮನೆಯನ್ನು ಕ್ರಮವಾಗಿ ಇಟ್ಟುಕೊಳ್ಳಬೇಕು ಎಂದು ನಮಗೆ ಸೂಚಿಸುತ್ತಾನೆ. ಕೆಲವು ವೇಳೆ, ನಾವು ಈ ಅಂಗ ವಿನ್ಯಾಸಗಳಲ್ಲಿ ಒಂದನ್ನು ಆಯ್ಕೆಮಾಡಿಕೊಳ್ಳಬಹುದು ಎಂದು ಯೋಚಿಸುತ್ತೇವೆ ಹಾಗೂ ನಾವು ಉತ್ತಮವಾಗಿದ್ದೇವೆ. ಇದರಿಂದ ನಮ್ಮಲ್ಲಿ ಕೆಲವರು ನಮ್ಮ ಹೆಂಡತಿ ಮತ್ತು ಮಕ್ಕಳನ್ನು "ದ್ವೇಷ" ಮಾಡಲು ತೀರ್ಮಾನಿಸುತ್ತೇವೆ, ಹಾಗೂ ಪೂರ್ಣವಾಗಿ ಅವರನ್ನು ತಿರಸ್ಕರಿಸಿಬಿಡುತ್ತೇವೆ ಹಾಗೂ ನಮ್ಮನ್ನು "ಪೂರ್ಣವಾಗಿ" ಕರ್ತನ ಸೇವೆಗೆ ಒಪ್ಪಿಸಿಕೊಡುತ್ತೇವೆ. ಇತರ ಕೆಲವರು ಅಂಗ ವಿನ್ಯಾಸವನ್ನು, ನಾವು ವಿವಾಹಿತರಾಗಿದ್ದರೂ ನಾವು ವಿವಾಹಿತರಲ್ಲದ ಸ್ಥಿತಿಯಲ್ಲಿ ತೋರಿಸಿಕೊಳ್ಳುವ ಆಯ್ಕೆ ಮಾಡುತ್ತೇವೆ! ಹಾಗೂ ಬಹುಶಃ ನಮ್ಮ ಹೆಂಡತಿ, ಮಕ್ಕಳೊಂದಿಗೆ ನಮ್ಮ ಸಂಬಂಧವನ್ನು ವೃದ್ಧಿಪಡಿಸಲು ಹಾಗೂ ನಮ್ಮ ಮನೆ ಮತ್ತು ಕುಟುಂಬದ ಪೋಷಣೆ ಮಾಡಲು ನಮ್ಮಲ್ಲಿ ಕೆಲವರು ಎಡೆಬಿಡದೆ ಪ್ರಯತ್ನಿಸುತ್ತೇವೆ ಹಾಗೂ ಹೋರಾಡುತ್ತೇವೆ.

ಈ ಮೂರು ಭಂಗಿಗಳು ಎಲ್ಲಾ ಸಮಯದಲ್ಲಿ ಏಕಕಾಲಿಕವಾಗಿ ನಾವು ಪೂರೈಸುತ್ತೇವೆಂಬ ಏನೋ ಒಂದು ಆಗಿರುತ್ತದೆಂದು ನಾನು ನಂಬುತ್ತೇನೆ. ಮೊದಲನೆಯದಾಗಿ ಯೇಸುವಿನ ಮೇಲಿನ ನಮ್ಮ ಪ್ರೀತಿಯು, ಪತ್ನಿ ಹಾಗೂ ಮಕ್ಕಳು ಅಥವಾ ಲೌಕಿಕ ಸಂಬಂಧಗಳ ಮೇಲಿನ ನಮ್ಮ ಪ್ರೀತಿಯನ್ನು ಆಕ್ರಮಿಸುತ್ತದೆ. ಆದಕಾರಣ, ಕರ್ತನು ನಮ್ಮನ್ನು ಕರೆದಾಗ ನಾವು ಲೌಕಿಕ ಸಂಬಂಧಗಳ ಮೇಲೆ ನೆಪಗಳನ್ನೊಡ್ಡದೆ, ತ್ಯಾಗಗಳನ್ನು ಮಾಡಲು ನಾವು ಬಯಸುತ್ತೇವೆ.

ಎರಡನೇಯದಾಗಿ ನಾವು ವಿವಾಹವಾಗಿದ್ದರೂ ಕೂಡಾ, ಕರ್ತನಾದ ಯೇಸುವಿನ ಮೇಲೆ ಅತಿ ತೀಕ್ಷ್ಣವಾಗಿ ಕೇಂದ್ರೀಕರಿಸಲು ಕಲಿಯಬೇಕು, ಇದರಿಂದ ನಮ್ಮ ಕುಟುಂಬ ಜವಾಬ್ದಾರಿಗಳನ್ನು ಪೂರೈಸುವಲ್ಲಿ ಕರ್ತನ ಸೇವೆ ಮಾಡುವುದರ ಮೇಲಿನ ನಮ್ಮ ಕೇಂದ್ರೀಕರಣದಿಂದ ನಾವು ಚಂಚಲವಾಗುವುದಿಲ್ಲ ಹಾಗೂ ಎಲ್ಲವುಗಳಿಗಿಂತ ಮೇಲಾಗಿ ಆತನನ್ನು ಸಂತೋಷಪಡಿಸಬಹುದು. ಮೂರನೇದಾಗಿ, ಆತ್ಮಿಕ ನಾಯಕರಾಗಿ ನಮ್ಮ ಕುಟುಂಬ ಹಾಗೂ ಮನೆಯನ್ನೂ ಒಂದು ರೀತಿಯಲ್ಲಿ ಬೆಳೆಸಿ ಪೋಷಿಸುವುದರಲ್ಲಿ ನಾವು ನಮ್ಮ ಪಾಲನ್ನು ಮಾಡುತ್ತೇವೆ, ಇದರಿಂದ ಕರ್ತನು ಮಹಿಮೆ ಹೊಂದಲ್ಪಡುತ್ತಾನೆ. ಯಾವುದೇ ಕೊಡಲ್ಪಟ್ಟ ಸಮಯದಲ್ಲಿ ನಾವು ಎಲ್ಲಾ ಮೂರು ಅಗತ್ಯತೆಗಳನ್ನು ಪೂರೈಸುತ್ತೇವೆ. ಈ ರೀತಿಯ ಜೀವನ ಜೀವಿಸಲು ದೇವರ ಕೃಪೆ, ಹಾಗೂ ಬಹಳಷ್ಟು ಆತ್ಮಿಕ ವಿವೇಕ ಹಾಗೂ ತಿಳುವಳಿಕೆಯು ತೆಗೆದುಕೊಳ್ಳಲ್ಪಡುತ್ತದೆ.

## ನಿಮ್ಮ ಜೀವನ ಸಂಗಾತಿಯೊಂದಿಗೆ ನಿಮ್ಮ ಸಂಬಂಧವನ್ನು ಪೋಷಿಸಿರಿ

**"ಹಾಗೆಯೇ ಪುರುಷರು ಸಹ ಸ್ವಂತ ಶರೀರವನ್ನು ಪ್ರೀತಿಸಿಕೊಳ್ಳುವ ಪ್ರಕಾರವೇ ತಮ್ಮ ಹೆಂಡತಿಯರನ್ನು ಪ್ರೀತಿಸುವ ಹಂಗಿನವರಾಗಿದ್ದಾರೆ. ತನ್ನ ಹೆಂಡತಿಯನ್ನು ಪ್ರೀತಿಸುವವನು ತನ್ನನ್ನೇ ಪ್ರೀತಿಸಿಕೊಳ್ಳುವವನಾಗಿದ್ದಾನೆ, ಯಾರೂ ಎಂದೂ ಸ್ವಶರೀರವನ್ನು ಹಗೆ ಮಾಡಿದ್ದಿಲ್ಲ; ಎಲ್ಲರೂ ತಮ್ಮ ಶರೀರಗಳನ್ನು ಪೋಷಿಸಿ ಸಂರಕ್ಷಿಸುತ್ತಾರೆ"** (ಎಫೆಸದವರಿಗೆ 5:28,29).

"ಅವನು ಲೋಕವನ್ನು ರಕ್ಷಿಸಿದನು, ಆದರೆ ತನ್ನ ಸ್ವಂತ ಮನೆಯನ್ನು ರಕ್ಷಿಸಲಾರದಾದನು!" ಇದು ಎಂಥ ಲಜ್ಜಾಹೀನವಾದ ಹೇಳಿಕೆಯಾಗಿದೆ, ಹಾಗೂ ಇದು ಕ್ರೈಸ್ತೀಯ ಸೇವೆಯಲ್ಲಿ ದೇವಜನರಾದ ಪುರುಷ ಹಾಗೂ ಹಾಗೂ ಸ್ತ್ರೀಯರಾಗಿ ಒಂದು ಹೆಚ್ಚುವರಿ ನೀಡುವ ನಮ್ಮ ಶ್ರೇಣಿಗಳೊಂದಿಗೆ ಆಗುವ ಸ್ಥಿತಿಯಾಗಿರುತ್ತದೆ. ಇದಕ್ಕಾಗಿ ಒಂದು ಮೂಲ ಕಾರಣವು ನಾವು ನಮ್ಮ ಸಭೆಯಲ್ಲಿ ಜನರನ್ನು ಪೋಷಿಸುವುದರಲ್ಲಿ ಕಾರ್ಯಮಗ್ನರಾಗಿರುವಲ್ಲಿ ಅಥವಾ ಸೇವೆಯ ಬೇರೆ ವಲಯಗಳಲ್ಲಿರುವಾಗ ನಾವು ನಮ್ಮ ಸ್ವಂತ ಜೀವನ ಸಂಗಾತಿಯನ್ನು ಅಲಕ್ಷಿಸಲು ಪ್ರಚೋದಿಸಲ್ಪಡುತ್ತೇವೆ. ದೇವರು ನಮ್ಮ ಜೀವನ ಸಂಗಾತಿಯ ಪರಾಂಬರಿಕೆ ಮಾಡುತ್ತಾನೆ ಅಥವಾ ನಮ್ಮ ಜೀವನ ಸಂಗಾತಿಯು ತನ್ನ ಸ್ವಂತ ಅಗತ್ಯತೆಗಳ ಪರಾಂಬರಿಕೆ ಮಾಡಿಕೊಳ್ಳುತ್ತಾಳೆ, ಹಾಗೂ ಮನೆಯ ಹೆಚ್ಚಿನ ಹೊರೆಯನ್ನು ನಮ್ಮ

ಮೇಲೆ ಹಾಕುವುದಿಲ್ಲ ಎಂದು ನಾವು ತೀರ್ಮಾನಿಸಿಕೊಳ್ಳುತ್ತೇವೆ. ಈ ಎರಡೂ ತೀರ್ಮಾನಗಳೂ ತಪ್ಪಾಗಿವೆ. ದೇವರು ನಮ್ಮ ಮೇಲೆ "ನಮ್ಮ ಜೀವನ ಸಂಗಾತಿಯನ್ನು ಪೋಷಿಸಿ ಕಾಪಾಡಲು" ಜವಾಬ್ದಾರಿಯನ್ನು ಕೊಟ್ಟಿರುತ್ತಾನೆ. ನಮ್ಮ ಜೀವನ ಸಂಗಾತಿಯು ನಾವು ಸೇವೆ ಮಾಡುವ ಎಲ್ಲಾ ಜನರಂತೆಯೇ, ಮಾನವಳಾಗಿರುತ್ತಾಳೆ ಹಾಗೂ ನಮ್ಮ ಸಮಯ ಪರಾಂಬರಿಕೆ ಹಾಗೂ ಮಮತೆಗಳ ಅಗತ್ಯತೆ ಹೊಂದಿರುತ್ತಾಳೆ. ನಮ್ಮ ಜಿವನ ಸಂಗಾತಿಯೊಂದಿಗೆ ನಮ್ಮ ಸಂಬಂಧವನ್ನು ಪೋಷಿಸುವುದರ ಆಜ್ಞೆಯಾಗಿದೆ ಹಾಗೂ ಇದು ಸತ್ಯವೇದದ ಬೇರೆ ಯಾವುದೇ ಆಜ್ಞೆಯಷ್ಟೇ ಪ್ರಾಮುಖ್ಯವಾಗಿದೆ. ನಾವು ನಮ್ಮ ಸ್ವಂತ ಕುಟುಂಬಕ್ಕೆ ಸೇವೆ ಮಾಡುವುದು, ಲೋಕಕ್ಕೆ ಸೇವೆ ಮಾಡುವಷ್ಟೇ ಪ್ರಾಮುಖ್ಯವಾಗಿದೆ. ನಾವು ಎರಡನ್ನೂ ಮಾಡಲು ಕರೆಯಲ್ಪಟ್ಟಿದ್ದೇವೆ.

## ನಿಮ್ಮ ಮಕ್ಕಳೊಂದಿಗೆ ಸಂಬಂಧವನ್ನು ಪೋಷಿಸಿರಿ

**"ತಂದೆಗಳೇ, ನಿಮ್ಮ ಮಕ್ಕಳಿಗೆ ಕೋಪವನ್ನೆಬ್ಬಿಸದೆ ಕರ್ತನಿಗೆ ಮೆಚ್ಚಿಗೆಯಾಗಿರುವ ಬಾಲಶಿಕ್ಷೆಯನ್ನೂ ಬಾಲೋಪದೇಶವನ್ನೂ ಮಾಡುತ್ತಾ ಅವರನ್ನು ಸಾಕಿ ಸಲಹಿರಿ"** (ಎಫೆಸದವರಿಗೆ 6:4).

ತಂದೆ ತಾಯಂದಿರಾಗಿ ನಾವು ನಮ್ಮ ಮಕ್ಕಳನ್ನು ತರಬೇತಿಯಲ್ಲಿ ಹಾಗೂ ಕರ್ತನ ದಾರಿಗಳಲ್ಲಿ ಬೆಳೆಸುವ ಜವಾಬ್ದಾರಿ ಹೊಂದಿರುತ್ತೇವೆ. ಆಗಾಗ್ಗೆ ಮನುಷ್ಯನು ಸೇವೆಯಲ್ಲಿ ಒಳಗೊಂಡು ಇರುವುದಾದರೆ, ಮಕ್ಕಳನ್ನು ಪೋಷಿಸುವ ಹೊಣೆಯು ಸಂಪೂರ್ಣವಾಗಿ ಹೆಂಡತಿಯ ಮೇಲೆ ಬೀಳುತ್ತದೆ ಎಂಬುದು ನಮಗೆ ಕಾಣುತ್ತದೆ. ಅಥವಾ ಪತಿ ಮತ್ತು ಪತ್ನಿಯರಿಬ್ಬರೂ ಸೇವೆಯಲ್ಲಿ ಕಾರ್ಯನಿರತವಾಗಿರುವ ಸ್ಥಿತಿಗಳಲ್ಲಿ ಅವರ ಮಕ್ಕಳ ಆತ್ಮಿಕ ಪೋಷಣೆಯು ಸಭೆಯ ಕಡೆಗೆ ಬಿಡಲ್ಪಟ್ಟದ್ದಾಗಿ ಕಾಣುತ್ತದೆ. ಈ "ಸೇವೆಯ ತಂದೆ ತಾಯಂದಿರು, ಹೇಗೋ ತಮ್ಮ ಮಕ್ಕಳು ಕರ್ತನ ಮಾರ್ಗಗಳಲ್ಲಿ ತರಬೇತಿ ಹೊಂದುತ್ತಾರೆ ಎಂದು ನಿರೀಕ್ಷಿಸುತ್ತಾರೆ. ಇವುಗಳಲ್ಲಿ ಯಾವುದೂ ಸರಿಯಲ್ಲ. ತಂದೆ ತಾಯಂದಿರಾಗಿ ನಾವು ನಮ್ಮ ಮಕ್ಕಳನ್ನು ಕರ್ತನ ಮಾರ್ಗಗಳಲ್ಲಿ ತರಬೇತಿಗೊಳಿಸಲು ನಾವು ಒಂದು ಜವಾಬ್ದಾರಿ ಹೊತ್ತಿರುತ್ತೇವೆಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಇದು ಕೇವಲ ಅವರು ಏನು ಮಾಡಬೇಕೆಂದು ಹೇಳುವುದರಿಂದ ನಡೆಯುವುದಿಲ್ಲ.

ನಾವು ಅವರೊಂದಿಗೆ ಒಂದು ಸಂಬಂಧ ಹೊಂದಿರಬೇಕು ಹಾಗೂ ಆ ಸಂಬಂಧದ ಮುಖಾಂತರ; ನಾವು ಆತ್ಮಿಕ ವಿಷಯಗಳಲ್ಲಿ ತರಬೇತಿ ಹಾಗೂ ಪೋಷಣೆಯನ್ನು ಬೇರೆ ಮಾಡಬಹುದು. ನಾವು ನಮ್ಮ ಮಕ್ಕಳೊಂದಿಗೆ ಒಂದು ಸಂಬಂಧ ಬೆಳೆಸಲು ಕಾರ್ಯನಿರತರಾಗಿದ್ದರೆ ನಾವು ಅವರ ಜೀವಿತಗಳಲ್ಲಿ ಆತ್ಮಿಕ ವಿಷಯಗಳನ್ನು ಪ್ರತ್ಯೇಕಿಸಲು ಸಮರ್ಥರೆಂದು ಮರೆಯುತ್ತೇವೆ.

ಇದರಿಂದ ನಿಮ್ಮ ಮಕ್ಕಳೊಂದಿಗೆ ತೀರಾ ಸಾಮಿಪ್ಯ ಸಂಬಂಧವನ್ನು ಬೆಳೆಸಲು ಸಮಯ ತೆಗೆದುಕೊಳ್ಳಿರಿ. ನೀವು ಮಾಡುವ ದೇವರ ವಾಕ್ಯದ ಬೋಧನೆಗೆ ನಿಮ್ಮ ಸ್ವಂತ ಮಕ್ಕಳು ವ್ಯತಿರಿಕ್ತವಾಗುವಾಗ ನಿಮ್ಮ ಬೋಧನೆಗಳನ್ನು ಆಲಿಸಲು ಲೋಕವು  ಬರುವುದನ್ನು ನೋಡುವುದು ಮೌಲ್ಯವಾದದ್ದಲ್ಲ. ನಿಮ್ಮ ಸ್ವಂತ ಮಕ್ಕಳ ಜೀವಿತಗಳಲ್ಲಿ ಕೊಡಲು ನಿಮಗೆ ಇರುವ ಅವಕಾಶವನ್ನು ಕಳೆದುಕೊಳ್ಳಬೇಡಿರಿ ಹಾಗೂ ನಿಮ್ಮ ಮಕ್ಕಳನ್ನು ಪೋಷಿಸುವ ಜವಾಬ್ದಾರಿಗೆ ಯಾರನ್ನೂ ಪ್ರತಿನಿಧಿಯನ್ನಾಗಿ ಮಾಡಬೇಡಿರಿ. ಇದನ್ನು ನೀವೇ ಮಾಡಿರಿ. ಕರ್ತನ ಮಾರ್ಗಗಳಲ್ಲಿ ನಿಮ್ಮ ಸ್ವಂತ ಮಕ್ಕಳ ನಡೆಯುವುದು ಹಾಗೂ ಆತನ ಅತ್ಯಂತ ಉನ್ನತವಾದ ಹಾಗೂ ಅವರ ಜೀವಿತಗಳಲ್ಲಿ ಅತ್ಯುತ್ತಮವಾದುದನ್ನು ಪೂರೈಸುವುದಕ್ಕಿಂತ ಹೆಚ್ಚಿನ ಸಂತೋಷ ಯಾವುದೂ ಇಲ್ಲ.

## ನಿಮ್ಮ ಕುಟುಂಬಕ್ಕಾಗಿ ಒದಗಿಸುವ ಕೆಲಸ ಮಾಡಿರಿ

**"ಯಾವನಾದರೂ ಸ್ವಂತ ಜನರನ್ನು, ವಿಶೇಷವಾಗಿ ತನ್ನ ಮನೆಯವರನ್ನು ಸಂರಕ್ಷಿಸದೆ ಹೋದರೆ ಅವನು ಕ್ರಿಸ್ತ ನಂಬಿಕೆಯನ್ನು ತಿರಸ್ಕರಿಸಿದವನೂ ನಂಬದವನಿಗಿಂತ ಕಡೆಯಾದವನೂ ಆಗಿದ್ದಾನೆ"** (1 ತಿಮೊಥೆಯನಿಗೆ 5:8).

ಅಪೊಸ್ತಲನಾದ ಪೌಲನಿಂದ ನೀಡಲ್ಪಟ್ಟ ಅತಿ ಬಲವಾದ ಮಾತು ಇವಾಗಿವೆ. ನಮ್ಮ ಸ್ವಂತ ಮನೆಯವರಿಗೆ ಒದಗಿಸುವುದರಲ್ಲಿ ಸೋತು ಹೋಗುವುದು ದೇವರ ಮುಂದೆ ಅನಂಗೀಕಾರವಾದದ್ದು. ಒಂದು ವೇಳೆ ಬಹಳಷ್ಟು ಆರ್ಥಿಕ ಬಿಕ್ಕಟ್ಟಿನ ತೇಪೆಗಳಿರುವ ಸಮಯಗಳಿರಬಹುದು, ವಿಶೇಷವಾಗಿ, ನಾವು ಕ್ರೈಸ್ತೀಯ ಸೇವೆಯನ್ನು ಆರಂಭಿಸಿದ ದಿನಗಳಿಂದ ಇರಬಹುದು, ಹೇಗೂ ಸೇವೆಯ ಮುಂದಿನ ಕಾಲದಲ್ಲಿ ಸಂಗತಿಗಳು ಬದಲಾಗದಿದ್ದರೆ, ಪುರುಷನು ಅಥವಾ ಮಹಿಳೆಯು ತನ್ನನ್ನು ಪೂರ್ಣಾವಧಿ ಸೇವೆಗೆ ಸಮರ್ಪಿಕೊಂಡಿದ್ದರೆ, ಒಂದು ಕಾಲಕ್ಕಾಗಿ ಉದ್ಯೋಗವೊಂದನ್ನು

ಪಡೆದುಕೊಂಡಿದ್ದರೆ, ಅದರಲ್ಲಿ ನಾನು ಯಾವ ತಪ್ಪನ್ನು ಕಾಣುವುದಿಲ್ಲ. ನೀವು ನಿಮ್ಮ ಸೇವೆಯೂ ಬೆಳೆಯಲು ಸಮಾನಾಂತರವಾಗಿ ಕೆಲಸ ಮುಂದುವರಿಸಬಹುದು ಆದರೆ, ಕುಟುಂಬ ನಿರ್ವಹಣೆಗಾಗೆ ಉದ್ಯೋಗದ ಮುಖಾಂತರ ಸಾಕಷ್ಟು ಹಣವು ಇರಬೇಕಾಗುತ್ತದೆ.

ದುರದೃಷ್ಟಕರವಾಗಿ, ಬಹಳಷ್ಟು ಕುಟುಂಬಗಳು ಮೂಲವಾಗಿ ಪತ್ನಿ ಮತ್ತು ಮಕ್ಕಳು ಮನೆಯಲ್ಲಿದ್ದು, ಪತಿಯು ಹೊರಗಡೆ ತಾತ್ಕಾಲಿಕವಾಗಿ ಒಂದು ಉದ್ಯೋಗ ಮಾಡಿ ಕುಟುಂಬದ ಮೂಲ ಅಗತ್ಯತೆಗಳನ್ನು ಸಂಧಿಸಲು ಮನಸ್ಸು ಕೊಡದಿದ್ದಾಗ, ಕಷ್ಟ ತೊಂದರೆಗಳು ಹೆಚ್ಚುತ್ತವೆ. ಪತಿಯು ಪೂರ್ಣಾವಧಿಯ ಸೇವೆಯ ಕರೆಗಾಗಿ ಬಹು ಹಟಮಾರಿತನದಿಂದಿದ್ದು, ಕುಟುಂಬದ ಅಗತ್ಯತೆಗಳ ನಿರ್ವಹಣೆಗೆ ಸೇವೆಯ ಮೂಲಕ ಸಾಕಾಗಲಾರದಷ್ಟು ಹಣವು ಬರಬಹುದು. ಅಪನಂಬಿಕೆಯ ಒಂದು ಸೂಚನೆ ಅಥವಾ ತನ್ನ ಕೈಯನ್ನು ನೇಗಿಲಿನ ಮೇಲಿಟ್ಟು “ಹಿಂತಿರುಗಿ ನೋಡುವ” ಸೂಚನೆ ಇದಾಗಿದೆ ಎಂದು ಯೋಚಿಸಿ ಪತಿಯು ಉದ್ಯೋಗ ತೆಗೆದುಕೊಳ್ಳಲು ನಿರಾಕರಿಸಬಹುದು. ಪತಿಯು ತಾನು ತಾತ್ಕಾಲಿಕ ಉದ್ಯೋಗ ಪಡೆಯಲು ದೇವರ ನಡೆಸುವಿಕೆ ಇಲ್ಲ ಎಂಬುದಾಗಿಯೂ ಹೇಳಬಹುದು. ವೈಯಕ್ತಿಕವಾಗಿ, ಮನೆಯ ಒಡೆಯನು ತನ್ನ ಕುಟುಂಬಕ್ಕಾಗಿ ಒದಗಿಸಲು ಏನು ಮಾಡಬೇಕೆಂದು ದೇವರು ಬಯಸಿದ್ದಾನೆಂಬುದನ್ನು ದೇವರು ಈಗಾಗಲೇ ತನ್ನ ವಾಕ್ಯದಲ್ಲಿ ಸ್ಪಷ್ಟಪಡಿಸಿರುತ್ತಾನೆ ಎಂದು ನಾನು ಯೋಚಿಸುತ್ತೇನೆ. ಕಷ್ಟಕರ ಸಮಯಗಳಲ್ಲಿ ಕುಟುಂಬಕ್ಕಾಗಿ ಒದಗಿಸಲು ಒಂದು ಉದ್ಯೋಗ ಪಡೆಯಲು ಬರೆಯಲ್ಪಟ್ಟಿರುವ ದೇವರ ವಾಕ್ಯಕ್ಕೆ ಇದು ಒಂದು ವಿಧೇಯತೆಯಾಗಿರುತ್ತದೆಂದು ನಾನು ಯೋಚಿಸುತ್ತೇನೆ. ಇದು ದೇವರಿಗೆ ಅಂಗೀಕೃತವಾದುದು.

## ಒಬ್ಬ ವ್ಯಕ್ತಿಯಾಗಿ ದೇವರ ಉದ್ದೇಶವನ್ನು ಅನುಸರಿಸಿರಿ

**“ತಂದೆಯ ಮೇಲಾಗಲಿ ತಾಯಿಯ ಮೇಲಾಗಲಿ ನನ್ನ ಮೆಲೆ ಇಡುವುದಕ್ಕಿಂತ ಹೆಚ್ಚಾದ ಮಮತೆಯನ್ನಿಡುವವನು ನನಗೆ ಯೋಗ್ಯನಲ್ಲ; ಮಗನ ಮೇಲಾಗಲಿ ಮಗಳ ಮೇಲಾಗಲಿ ನನ್ನ ಮೇಲೆ ಇಡುವುದಕ್ಕಿಂತ ಹೆಚ್ಚಾದ ಮಮತೆಯನ್ನಿಡುವವನು ನನಗೆ ಯೋಗ್ಯನಲ್ಲ; ಮತ್ತು ಯಾವನಾದರೂ ತನ್ನ ಶಿಲುಬೆಯನ್ನು ತೆಗೆದುಕೊಂಡು ನನ್ನ ಹಿಂದೆ ಬಂದ ಹೊರತು ನನಗೆ ಯೋಗ್ಯನಲ್ಲ.”** (ಮತ್ತಾಯ 10:37,38)

ಈ ಅಂಶವು ಹಿಂದಿನ ವಿಭಾಗಗಳಲ್ಲಿ ನಾವು ಕುಟುಂಬ ಮತ್ತು ಮನೆಯ ಮೇಲೆ ಇಟ್ಟುಕೊಂಡಿರುವ ಎಲ್ಲಾ ಪ್ರಾಮುಖ್ಯತೆಯಿಂದ ಇದ್ದಕ್ಕಿದ್ದಂತೆ ಸಾಗಿಸಲ್ಪಡುವ ಅಂಶವಾಗಿರಬಹುದು. ಆದರೆ ನಾನು ಇಲ್ಲಿ ತಿಳಿಸಬಯಸುವ ಅಂಶವು  ಕುಟುಂಬ ಮತ್ತು ಮನೆಯ ಪ್ರಾಮುಖ್ಯತೆಯನ್ನು ನಾವು ನಿರ್ವಹಿಸುವಲ್ಲಿ, ಯಾವುದೇ ಅಂಶದಲ್ಲಿ ದೇವರ ಪ್ರೀತಿ ಹಾಗೂ ಆತನ ಕರೆಗಾಗಿ ವಿಧೇಯತೆಗಾಗಿ ನಾವು ಸಂಧಾನ ಮಾಡಲಾಗುವುದಿಲ್ಲ ಎಂಬುದಾಗಿದೆ. ದೇವರ ಕರೆಯಲ್ಲಿ ಮುಂದಕ್ಕೆ ತಳ್ಳಲು ನಾನು ಕುಟುಂಬವನ್ನು ಒಂದು ನೆಪವಾಗಿ ಬಳಸಲಾರೆನು. ನಾವು ಏತಕ್ಕಾಗಿ ಕರೆಯಲ್ಪಟ್ಟಿದ್ದೇವೆ ಎಂಬುದು, ದೇವರಂಥ ಪುರುಷ ಅಥವಾ ಸ್ತ್ರೀಯಾಗಿ ನಿಮ್ಮ ಜೀವನ ಸಂಗಾತಿಗೆ ಆಗಿರಬೇಕು. ನಮ್ಮ ಮಕ್ಕಳಿಗೆ ದೇವರಂಥ ತಂದೆ ತಾಯಂದಿರಾಗಿರಬೇಕು ಹಾಗೂ ಹೀಗೆ ಮಾಡುವಾಗ, ಕ್ರೈಸ್ತೀಯ ಸೇವೆಯಲ್ಲಿ ದೇವರು ನಮಗಾಗಿ ಹೊಂದಿರುವ ಯೋಜನೆಗಳು ಹಾಗೂ ಉದ್ದೇಶಗಳಲ್ಲಿ ಮುಂದಾಗಿ ನಡೆಯಲು ಮುಂದುವರಿಯಬೇಕು. ಇವೆಲ್ಲವೂ ಪರಸ್ಪರ ಜೋಡಣೆಯಾಗಿ ಒಂದಕ್ಕೊಂದು ಹೆಚ್ಚಳವುಂಟು ಮಾಡುತ್ತವೆ. ಒಬ್ಬ ಪತಿಯಾಗಿ, ಒಬ್ಬ ತಂದೆಯಾಗಿ, ಒಬ್ಬ ದೇವರ ಸೇವಕನಾಗಿ ನನ್ನ ಕರೆಯು ಎಲ್ಲವೂ ಪರಸ್ಪರ ಹೊಂದಿಕೆಯಾಗಿದೆ. ಪ್ರತಿಯೊಂದು ಪಾತ್ರವೂ ಮತ್ತೊಂದನ್ನು ಬಲಪಡಿಸುತ್ತದೆ. ಒಂದು ಸ್ಥಳದ ಯಶಸ್ಸು ಮತ್ತೊಂದು ಸ್ಥಳದಲ್ಲಿ ಯಶಸ್ಸನ್ನು ಕಾಣಲು ಬಲವನ್ನು ಒದಗಿಸುತ್ತದೆ. ಹೀಗಾಗಿ ನಿಮ್ಮ ಜೀವಿತದಲ್ಲಿ ಮನೆಯಲ್ಲಿ ಪತಿಯಾಗಿ ಹಾಗೂ ತಂದೆಯಾಗಿ ದೇವರ ಕರೆಯನ್ನು ಪೂರೈಸುವುದರಲ್ಲಿ ಆತನ ಕರೆಯನ್ನು ಹಿಂದಟ್ಟಲು ಮುಂದುವರಿಸಿರಿ.

## ದೇವರ ಉದ್ದೇಶವನ್ನು ಅನುಸರಿಸಲು ನಿಮ್ಮ ಜೀವನ ಸಂಗಾತಿಯನ್ನು ಪ್ರೋತ್ಸಾಹಿಸಿರಿ

**"ಅಂತಃಪುರದಲ್ಲಿರುವ ನಿನ್ನ ಹೆಂಡತಿಯು ಫಲಭರಿತವಾದ ದ್ರಾಕ್ಷಾಲತೆಯಂತಿರುವಳು; ನಿನ್ನ ಸಂಗಡ ಊಟದ ಮಣತಿಯ ಸುತ್ತಲೂ ಕೂತುಕೊಳ್ಳುವ ನಿನ್ನ ಮಕ್ಕಳು ಎಣ್ಣೇ ಮರದ ಸಸಿಗಳಂತಿರುವರು** (ಕೀರ್ತನೆಗಳು 128:3).

ಫಲಭರಿತ ದ್ರಾಕ್ಷಿಬಳ್ಳಿಯು ಹಲವಾರು ವಿಷಯಗಳನ್ನು ಸಾಂಕೇತಿಸುತ್ತದೆ. ಇದರಲ್ಲಿ ಒಂದು ದ್ರಾಕ್ಷಿಯ ಫಲವು—"ಸಂತೋಷ

ಮತ್ತು ಆನಂದ"ಕ್ಕಾಗಿ ನಿಲ್ಲುತ್ತದೆ. ನಿಮ್ಮ ಪತ್ನಿಯು ಮನೆಗೆ ಸಂತೋಷ ಮತ್ತು ಆನಂದದ ಮೂಲವಾಗಿರಲು ಪ್ರತಿಷ್ಟಿತಳಾಗಿರುತ್ತಾಳೆ. ಹೇಗಾದರೂ ಇದು ಸ್ವಯಂಚಾಲಿತವಾಗಿ ಆಗುವುದಿಲ್ಲ. ನಿಮ್ಮ ಪತ್ನಿಯನ್ನು ಪೋಷಿಸುವುದಕ್ಕೆ ಹೆಚ್ಚಿನದಾಗಿ, ನೀವು ಆಕೆಯ ಸಂತೃಪ್ತಿಕರವಾದ ಹಾಗೂ ಪೂರೈಕೆಯ ಜೀವಿತವನ್ನು ಕಂಡುಕೊಳ್ಳಲು ಆಕೆಯನ್ನು ಪ್ರೋತ್ಸಾಹಿಸಬೇಕಾಗುತ್ತದೆ. ನಿಮ್ಮ ಪತ್ನಿಯು ಅತೃಪ್ತಳಾದರೆ ಅಥವಾ ಜೀವಿತದಲ್ಲಿ ಯಶಸ್ಸುಗಳಿಸದಿದ್ದರೆ—ಇದು "ಹುಳಿದ್ರಾಕ್ಷಿ"ಯನ್ನು ಪ್ರತಿಬಿಂಬಿಸುತ್ತದೆ, ಅಲಂಕಾರಿಕವಾಗಿ ಮಾತನಾಡುವಾಗ ಮನೆಯಲ್ಲಿ ಸಂತೋಷವಾಗಲೀ, ಆನಂದವಾಗಲೀ ಇರುವುದಿಲ್ಲ ಕ್ರೈಸ್ತೀಯ ಸೇವಕರೊಂದಿಗೆ ಏನಾಗುತ್ತದೆಂದರೆ ನಾವು ಬಹಳ ಕಾರ್ಯತತ್ಪರಗಾಗಿದ್ದು; ನಮ್ಮ ಕರೆಯನ್ನು ಬೆನ್ನಟ್ಟುತ್ತಾ, ದೇವರು ಮಾಡಲು ನಮ್ಮನ್ನು ಕರೆದಿರುವುದು ಇದಕ್ಕೇ ಎಂದು, ಭಾವಿಸಿ ಮಹಾಶಕ್ತಿಯುತ ಕಾರ್ಯಗಳನ್ನು ಮಾಡುತ್ತಾ, ದೇವರು ನಮ್ಮ ಬಾಳ ಸಂಗಾತಿಗೂ ಒಂದು ಕರೆ, ಯೋಜನೆ ಹಾಗೂ ಉದ್ದೇಶವನ್ನು ಹೊಂದಿರುವುದನ್ನು ಮರೆತು ಹೋಗುತ್ತೇವೆ! ನಾವು ಬಹುದೊಡ್ಡ ಸಾಹಸಗಳನ್ನು ಮಾಡುತ್ತೇವೆಂದುಕೊಂಡು ಹೊರಕ್ಕೆ ಹೋಗುವಾಗ, ಆಕೆಯ ಪಾತ್ರವು ಕೇವಲ ಒಂದು ಬೆಂಬಲವಾಗಿರುವುದು ಮಾತ್ರವೆಂದು ನಾವು ಯೋಚಿಸುತ್ತೇವೆ. ಇದು ತಪ್ಪು.

ಕೆಲವು ಸ್ಥಿತಿಗಳಲ್ಲಿ, ಪತಿ ಮತ್ತು ಪತ್ನಿ ಇಬ್ಬರೂ ಒಂದೇ ರೀತಿಯ ಸೇವೆ ಮಾಡಲು ಕರೆಯಲ್ಪಟ್ಟಿರುತ್ತಾರೆ ಹಾಗೂ ಇದರಿಂದ ಅವರು ಒಟ್ಟಾಗಿ, ಅಕ್ಕ ಪಕ್ಕದಲ್ಲಿ ಕೆಲಸಮಾಡಲು ಸಮರ್ಥರಾಗಿರುತ್ತಾರೆ. ಇದು ಮಹತ್ವವಾದ ಹಾಗೂ ನಿಶ್ಚಯವಾಗಿ ಒಂದು ಅದ್ಭುತವಾದದ್ದಾಗಿರುತ್ತದೆ. ಹೇಗಾದರೂ, ವಿವಾಹವಾದ ಪ್ರತಿದಂಪತಿಯೂ ಈ ರೀತಿ ಮಾಡಲ್ಪಟ್ಟಿರುವುದಿಲ್ಲ. ಪತಿ ಮತ್ತು ಪತ್ನಿ ಬಹುಶಃಅ ಅವರನ್ನು ವಿಭಿನ್ನವಾದ ಸ್ಥಳಗಳಿಗೆ ಹಾಗೂ ವಲಯಗಳಿಗೆ ಒಳಗೊಂಡು ಕಾರ್ಯ ನಡೆಸಲು ಕರೆಯಲ್ಪಡುವ ಸ್ಥಿತಿಗಳೂ ಇರಬಹುದು. ಇದು ನಿಭಾಯಿಸಲು ನಿಜವಾಗಿ ಸುಲಬವಲ್ಲ, ಹಾಗೂ ಇದು ಬಹಳ ವಿವೇಕವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇಬ್ಬರೂ ಬಾಳ ಸಂಗಾತಿಗಳು ತಮ್ಮ ನಿಗದಿತ ಕರೆಗಳಲ್ಲಿ ಬೆಳೆಯಲು ಪ್ರೋತ್ಸಾಹ ಹೊಂದಿರುವ ನಿಶ್ಚಯತ್ವವನ್ನು ಇದು ಮೂಡಿಸುತ್ತದೆ.

ನಾನು ಮಾಡಲು ಪ್ರಯತ್ನಿಸಿರುವುದೇನೆಂದರೆ, ದೇವರು ತನ್ನನ್ನು ಯಾವುದಕ್ಕಾಗಿ ಕರೆದಿರುತ್ತಾನೆಂದು ಆಕೆಯು ಭಾವಿಸುತ್ತಾಳೋ ಅದನ್ನು ನಾನು ನೆರವೇರಿಸಲು, ನನ್ನನ್ನು ದೇವರು ಕರೆದ ಕಾರಣ ನೆರವೇರಿಸಲು ಆಕೆಯಿಂದ ಎಷ್ಟು ಒತ್ತಾಸೆ ಹೊಂದಿಕೊಳ್ಳುತ್ತೇನೋ ಹಾಗೆಯೇ ಆಕೆಗೂ ನಾನು ಬೆಂಬಲ ನೀಡಬೇಕೆಂದುಕೊಂಡಿರುತ್ತೇನೆ. ಇದರ ಅರ್ಥವೇನೆಂದರೆ, ನಾನು ನನ್ನ ವೇಳಾಪಟ್ಟಿಯನ್ನು ಹೊಂದಿಸಿಕೊಂಡು, ನನ್ನ ಯೋಜನೆಗಳನ್ನು ಬದಲಾಯಿಸಿಕೊಳ್ಳುವುದು ಹಾಗೂ ಇತ್ಯಾದಿ, ಇದರಿಂದ ನನ್ನ ಪತ್ನಿಯು ತನಗೆ ಅಗತ್ಯವಾದ ಸಮಯ ಮತ್ತು ಸ್ಥಳವನ್ನು, ದೇವರು ತನಗೆ ಕೃಪೆಮಾಡಿ ಕರೆದ ಕಾರ್ಯಗಳನ್ನು ಮಾಡಲು ಹೊಂದಿಕೊಳ್ಳುತ್ತಾಳೆ. ಇನ್ನೊಂದು ಕಡೆ ಒಬ್ಬ ಪತಿಯಾಗಿ ಹಾಗೂ ತಂದೆಯಾಗಿ ನಾನು ಮನೆಯಿಂದ ಹೊರಗೆ ಒಳಗೊಳ್ಳಬಹುದಾದ ಎರಡು ಪ್ರಮುಖವಾದ ವಲಯಗಳು ಇರುತ್ತವೆ. ನಾನು ಬೆಂಗಳೂರಿನ ಆಲ್ ಪೀಪಲ್ಸ್ ಸಭೆಯ ಸಭಾಪಾಲಕನಾಗಿದ್ದೇನೆ, ಹಾಗೂ ನಾನು ಒಂದು ಸಾಫ್ಟ್‌ವೇರ್ ಹಾಗೂ ಅಭಿವೃದ್ಧಿಯ ಸ್ವಂತ ಕಂಪೆನಿಯನ್ನು ಹೊಂದಿದ್ದು, ಇದು ಆರೋಗ್ಯ ಸುಧಾರಣಾ ಸಾಫ್ಟ್‌ವೇರ್ ಮತ್ತು ಸೇವೆಗಳ ಮೇಲೆ ಕೇಂದ್ರಿಕರಿಸಲ್ಪಟ್ಟಿರುತ್ತದೆ. ನಾನು ಈ ಎರಡು ಪಾತ್ರಗಳನ್ನು 2001ರ ಆರಂಭದಿಂದ ಹೊಂದಿರುತ್ತೇನೆ. ಇದೇ ರೀತಿ ಮನೆಯಿಂದ ಆಚೆ ನನ್ನ ಪತ್ನಿಯು ಬೆಂಗಳೂರಿನ ಒಂದು ಮಿಷನ್ ಆಸ್ಪತ್ರೆಯಲ್ಲಿ ಒಬ್ಬ ಪೂರ್ಣಾವಧಿ ಮೆಡಿಕಲ್ ಡಾಕ್ಟರ್ ಆಗಿ ಕೆಲಸ ಮಾಡುತ್ತಿದ್ದಾಳೆ. ಹಾಗೂ ಸಭೆಯ ಕಾರ್ಯ ಸ್ಥಳಗಳೊಂದರಲ್ಲಿ ಆರಾಧನೆಯ ತಂಡದಲ್ಲಿ ಭಾಗ ತೆಗೆದುಕೊಳ್ಳುತ್ತಾಳೆ. ಜನರು, ಒಬ್ಬ "ಆದರ್ಶಭೂತ ಸಭಾಪಾಲಕನ ಪತ್ನಿ" ಎಂದು ಯಾವ ರೀತಿ ಯೋಚಿಸುವಂತೆ ಯಾವ ರೀತಿಯ ಒತ್ತಡವನ್ನೂ ನಾನು ನನ್ನ ಪತ್ನಿಯ ಮೇಲೆ ಹೇರಿರುವುದಿಲ್ಲ—ಯಾರೋ ಒಬ್ಬರು ಮಕ್ಕಳಿಗಾಗಿ ಸಬ್ಬತ್ತು ಶಾಲೆಯ ಕಾರ್ಯನೋಡಿಕೊಳ್ಳುತ್ತಾರೆ. ಮಹಿಳೆಯರ ಸೇವೆ ನೋಡಿಕೊಳ್ಳುತ್ತಾರೆ. ಆಕೆಯ ಜೀವಿತದಲ್ಲಿ ದೇವರ ಕರೆಯ ಬಗ್ಗೆ ಯಾವ ಭಾವನೆ ಹೊಂದಿರುತ್ತಾಳೋ ಅದರ ಹಿಂದೆ ಬೆನ್ನಟ್ಟಲು ಆಕೆಗೆ ಸ್ವಾತಂತ್ರ್ಯ ಕೊಡಬೇಕೆಂಬುದು ನನ್ನ ಗುರಿಯಾಗಿರುತ್ತದೆ ಹಾಗೂ ಜನರ ನಿರೀಕ್ಷೆಗಳಿಗೆ ತಕ್ಕಂತೆ ಜೀವಿಸುವುದಕ್ಕಾಗಿ ಅಲ್ಲ.

## ದೇವರ ಚಿತ್ತವನ್ನು ಅನುಸರಿಸಲು ನಿಮ್ಮ ಮಕ್ಕಳನ್ನು ಪ್ರೋತ್ಸಾಹಿಸಿರಿ

**"ನಾನು ಇನ್ನೂ ಕೇವಲ ಪಿಂಡವಾಗಿರುವಾಗ ನಿನ್ನ ಕಣ್ಣುಗಳು ನನ್ನನ್ನು ನೋಡಿದವು; ನನ್ನ ಆಯುಷ್ಕಾಲದ ಪ್ರಥಮ ದಿನವು ಪ್ರಾರಂಭವಾಗುವ ಮೊದಲೇ ಅದರ ಎಲ್ಲಾ ದಿನಗಳು ನಿನ್ನ ಪುಸ್ತಕದಲ್ಲಿ ಬರೆಯಲ್ಪಟ್ಟವು"** (ಕೀರ್ತನೆ 139:16)

ದೇವರು ಪ್ರತಿಯೊಬ್ಬರನ್ನೂ ಅಪೂರ್ವವಾಗಿ ರಚಿಸಿರುತ್ತಾನೆ ಹಾಗೂ ಅವರಿಗಾಗಿ ತನ್ನ ಮನಸ್ಸಿನಲ್ಲಿ ಹೊಂದಿರುವ ಉದ್ದೇಶಕ್ಕಾಗಿ ರೂಪಿಸಿರುತ್ತಾನೆ. ಇದು ಮಕ್ಕಳ ಕುರಿತಾಗಿಯೂ ನಿಜವಾಗಿರುತ್ತದೆ. ಒಬ್ಬ ತಂದೆ / ತಾಯಿಯಾಗಿ ನಿಮ್ಮ ಮಕ್ಕಳು ತಮ್ಮ ದೈವದತ್ತವಾದ ವರಗಳು ಮತ್ತು ಉಡುಗೊರೆಗಳನ್ನು ಗುರುತಿಸಲು ಸಹಾಯ ಮಾಡುವುದು ನಿಮ್ಮ ಹೊಣೆಯಾಗಿರುತ್ತದೆ. ಹಾಗೂ ರಾಜ್ಯ ಹಾಗೂ ಆತನ ಮಹಿಮೆಗಾಗಿ ತಮ್ಮನ್ನು ರೂಪಿಸಿ ದೇವರಿಗೆ ಹೆಚ್ಚಿನ ಘನತೆಯನ್ನು ಅವರು ಎಲ್ಲಿ ಸಲ್ಲಿಸಬಹುದೆಂದು ಮಾರ್ಗದರ್ಶನ ನೀಡಿ ಅವರನ್ನು ನಡಿಸುವ ಹೊಣೆಯೂ ನಿಮ್ಮದಾಗುತ್ತದೆ. ಮಕ್ಕಳು ತಮ್ಮ ತಂದೆ ತಾಯಂದಿರ ಝೆರಾಕ್ಸ್ ಪ್ರತಿಗಳಲ್ಲ. ಮಕ್ಕಳು ತಮ್ಮ ಸ್ವಂತ ಅಪೂರ್ವವಾದ ವರಗಳನ್ನು ಹೊಂದಿರುತ್ತಾರೆ.

ನಮ್ಮ ಮಕ್ಕಳನ್ನು ಅವರು ಏನಾಗಬೇಕೆಂದು ನಾವು ಬಯಸುತ್ತೇವೋ ಹಾಗೆ ಅವರನ್ನು ಅಚ್ಚುಹಾಕುವ ಆಲೋಚನೆಯನ್ನು ಹಾಗೂ ಅವರನ್ನು ಏನು ಮಾಡಲು ದೇವರು ಬಯಸಿದ್ದಾನೋ ಅದನ್ನು ಪ್ರೋತ್ಸಾಹಿಸುವ ಬದಲು, ನಮ್ಮ ಆಲೋಚನೆಯನ್ನು ನಾವು ಬಿಟ್ಟುಬಿಡಬೇಕು, ಹೌದು, ಮಕ್ಕಳು ತಮ್ಮ ತಂದೆ ತಾಯಂದಿರ ಹೆಜ್ಜೆಜಾಡುಗಳನ್ನು ಅನುಸರಿಸುವುದು ನಿಜವಾಗಿಯೂ ಅದ್ಭುತವಾದದ್ದು. ಮಗನು ತನ್ನ ತಂದೆಯಂತೆಯೇ ಭೋಧಕನಾಗುವಾಗ ಅದು ಅದ್ಭುತವಾದದ್ದು. ಆದರೆ ದೇವರು ಕ್ರಿಯಾತ್ಮಕನಾದಾತನು, ಆತನು ನಕಲುಗಳ ಅಗತ್ಯವಿರುವುದಿಲ್ಲ. ನಾವು ನಮ್ಮಂತೆಯೇ ಆಗಬೇಕೆಂದು ಹಾಗೂ ನಾವು ಸೇವೆಯಲ್ಲಿ ಏನು ಮಾಡುತ್ತೇವೋ ಅದನ್ನೇ ಮಾಡಬೇಕೆಂದು ನಮ್ಮ ಮಕ್ಕಳಿಗೆ ಒತ್ತಡ ಹೇರಬಾರದು. ಇದು ನಿಶ್ಚಯ ಮಾಡಿಕೊಳ್ಳಲು ಒಂದು ಸ್ವಯಂ ಸೋಲಿನ ಪ್ರಯತ್ನವಾಗಿರುತ್ತದೆ. ಬದಲಾಗಿ ಅವರಲ್ಲಿ ದೇವರು ಏನನ್ನು ಇಟ್ಟಿರುತ್ತಾನೋ ಅದನ್ನು ಗುರುತಿಸಿ ಪೋಷಿಸಿರಿ. ಜೀವಿತದಲ್ಲಿ ಮತ್ತು

ಸೇವೆಯಲ್ಲಿ ಅವರು ನಮ್ಮ ನಡೆಯನ್ನು ಅನುಸರಿಸಲು ರೂಪಿಸಲ್ಪಟ್ಟು ಕರೆಯಲ್ಪಟ್ಟಿದ್ದರೆ, ಅದು ಅದ್ಭುತವಾದದ್ದು, ಅದೂ ಕೂಡಾ ಅದ್ಭುತವೇ ಹಾಗೂ ತಮ್ಮ ಜೀವಿತಗಳಗಾಗಿ ದೇವರ ಉದ್ದೇಶವನ್ನು ಅನುಸರಿಸಲು ನಾವು ಅವರನ್ನು ಪ್ರೋತ್ಸಾಹಿಸಬೇಕು.

## ಮನೆಯಲ್ಲಿ (ಕುಟುಂಬದಲ್ಲಿ) ದೈವಿಕ ಮಾದರಿಯನ್ನು ಸಿದ್ಧಪಡಿಸಿರಿ

**"ಸ್ವಂತ ಮನೆಯವರನ್ನು ಆಳುವುದಕ್ಕೆ ತಿಳಿಯದವನು ದೇವರ ಸಭೆಯನ್ನು ಹೇಗೆ ಪರಾಂಬರಿಸುವನು?"** (1 ತಿಮೊಥೆಯನಿಗೆ 3:5).

**"ಮಕ್ಕಳ ಸಂತತಿಯವರು ವೃದ್ಧರಿಗೆ ಕಿರೀಟ; ಹೆತ್ತವರು ಮಕ್ಕಳಿಗೆ ಭೂಷಣ"** (ಜ್ಞಾನೋಕ್ತಿಗಳು 17:6).

**"ಜೀವಂತನು ಜೀವಂತನೇ ನಿನ್ನನ್ನು ಸ್ತುತಿಸುವನು, ಹೌದು, ಜೀವಂತವಾದ ನಾನೇ ಈ ಹೊತ್ತು ನಿನ್ನನ್ನು ಹೊಗಳುವೆನು. ತಂದೆಯು ಮಕ್ಕಳಿಗೆ ನಿನ್ನ ಸತ್ಯಸಂಧತೆಯನ್ನು ಬೋಧಿಸುವನು"** (ಯೆಶಾಯ 38:19).

ನಾವು ಒಂದು ಪ್ರಸಂಗ ಪೀಠದ ಹಿಂದೆ ನಿಂತು ಬೋಧಿಸದೆ ಇದ್ದಾಗಲೂ ನಮ್ಮ ಜೀವಿತವು ಎಲ್ಲಾ ಸಮಯದಲ್ಲಿ ಮಾತನಾಡುತ್ತದೆ. ನಮ್ಮ ಮನೆಯೊಳಗಿನ ನಮ್ಮ ಜೀವಿತವು ಕೇವಲ ಕೆಲವು ಮಂದಿ ಕುಟುಂಬ ಸದಸ್ಯರಿಂದ ನಮ್ಮ ಬಾಳ ಸಂಗಾತಿ ಹಾಗೂ ಮಕ್ಕಳಿಂದ ಗಮನಿಸಲ್ಪಡುತ್ತದೆ. ಆದರೆ ಎಷ್ಟೇ ಆದರೂ ಇದು ಅತ್ಯಂತ ಹೆಚ್ಚಾಗಿ ಪ್ರಾಮುಖ್ಯವಾಗಿರುತ್ತದೆ. ದೇವರು ಅಬ್ರಹಾಮನನ್ನು ಕರೆದಾಗ ಇದಕ್ಕಾಗಿ ಆತನ ಕಾರಣಗಳಲ್ಲಿ ಒಂದು ಏನೆಂದರೆ, *"ಅವನು ತನ್ನ ಪುತ್ರ ಪೌತ್ರರಿಗೆ—ನೀವು ನೀತಿ ನ್ಯಾಯ ನೀತಿಗಳನ್ನು ನಡಿಸಿ ಯೆಹೋವನ ಮಾರ್ಗವನ್ನು ಅನುಸರಿಸಬೇಕೆಂದು ಬೋಧಿಸುವಂತೆ ಅವನನ್ನು ನಾನು ಆದುಕೊಂಡೆನಲ್ಲಾ; ಅವನು ಹೀಗೆ ಮಾಡುವುದರಿಂದ ಯೆಹೋವನಾದ ನನ್ನ ವಾಗ್ದಾನವು ನೆರವೇರುವುದು ಅಂದುಕೊಂಡನು"* (ಆದಿಕಾಂಡ 18:19). ದೇವರು ತಾನು ಆರಿಸಿದ ಮನುಷ್ಯನು ತನ್ನ ಕುಟುಂಬವನ್ನು ಆತನು ಸಿದ್ಧಮಾಡಿರುವ ಮಾದರಿಯಲ್ಲಿ, ಆತನ ಹೆಜ್ಜೆಗಳನ್ನು ಅನುಸರಿಸಲು, ಕರ್ತನ ಮಾರ್ಗದೊಳಗೆ ನಡೆಸಲು ಬಯಸಿದನು. ಅಬ್ರಹಾಮನ ಕರೆ ಮತ್ತು ಗುರಿಯು ತಾನು ನೆರವೇರಿಸಬೇಕಾದ ಈ ಪಾತ್ರದಲ್ಲಿ ಕಟ್ಟಲ್ಪಟ್ಟಿದ್ದವು.

ನಮ್ಮ ಸಾರ್ವಜನಿಕ ಸೇವೆಯನ್ನು ಶ್ಲಾಘಿಸಿ ಪ್ರಶಂಸಿಸುವ ಸಾವಿರಾರು ಜನರು ಇದ್ದರೂ, ನಾವು ಮನೆಯಲ್ಲಿ ಒಳ್ಳೆ ಮಾದರಿಯನ್ನು ಅನುಸರಿಸದಿದ್ದರೆ ಹಾಗೂ ಇದರಿಂದ ನಮ್ಮ ಮಕ್ಕಳನ್ನು ಕರ್ತನಿಂದ ದೂರವಾಗಿ ಹೊರಡಿಸಿದರೆ, ನಾವು ನಿಜವಾಗಿ ದೇವ ಪುರುಷನಾಗಿ ಅಥವಾ ದೇವ ಮಹಿಳೆಯಾಗಿ ಯಶಸ್ಸು ಹೊಂದುತ್ತೇವೋ? ಊಹಿಸಿರಿ.

ನಾನು ನನ್ನ ಮನೆಯ ನಾಲ್ಕು ಗೋಡೆಗಳೊಳಗೆ ಜೀವಿಸುವ ಜೀವಿತವು, ದೇವರೊಂದಿಗೆ ನಡೆಯಲು ನನ್ನ ಕುಟುಂಬಕ್ಕಾಗಿ ಒಂದು ಸ್ಪೂರ್ತಿಯನ್ನು ಹಾಗೂ ಒತ್ತಾಯದ ಸೆಳೆತಕ್ಕೆ ಹಾರೈಸುತ್ತೇನೆ. ದೇವರನ್ನು ಹಿಂಬಾಲಿಸಲು ನಾನು ನನ್ನ ಮಕ್ಕಳಿಂದ ಬಯಸುತ್ತೇನೆ. ಇದು ನಾನು ನನ್ನ ಮಾತುಗಳಿಂದ ಅವರನ್ನು ಒತ್ತಾಯಪಡಿಸುವುದರಿಂದಲ್ಲ, ಆದರೆ ಅವರ ಕಣ್ಣುಗಳ ಮುಂದೆ ಜೀವಿಸಿದ ಜೀವಿತವು ಉತ್ತಮವಾದ ಆಯ್ಕೆಯಾಗಿರಲಿಲ್ಲ. ನನ್ನ ಮಕ್ಕಳು ನನ್ನ ಬಗ್ಗೆ ಹೆಮ್ಮೆಪಡುವ ಜೀವಿತವನ್ನು ನಾನು ಜೀವಿಸಿದ್ದರೆ, ಇದು ಅವರಿಗೆ ನನ್ನ ಹೆಜ್ಜೆಗಳನ್ನು ಅನುಸರಿಸಲು, ದೇವರನ್ನು ಮಹಿಮೆಪಡಿಸುವ ಒಂದು ಜೀವಿತವನ್ನು ಜೀವಿಸುವುದರಲ್ಲಿ ಅತ್ಯಂತ ಸ್ವಾಭಾವಿಕವಾದುದಾಗುತ್ತದೆ.

## ನಿಮ್ಮ ಬಾಳ ಸಂಗಾತಿಗೆ ಬೋಧಿಸಬೇಡಿರಿ

**"ಅದೇ ರೀತಿಯಾಗಿ ಪುರುಷರೇ, ಸ್ತ್ರೀಯು ಪುರುಷನಿಗಿಂತ ಬಲಹೀನಳೆಂಬುದನ್ನು ಜ್ಞಾಪಕ ಮಾಡಿಕೊಂಡು ನಿಮ್ಮ ಹೆಂಡತಿಯರ ಸಂಗಡ ವಿವೇಕದಿಂದ ಒಗೆತನ ಮಾಡಿರಿ. ಅವರು ಜೀವ ವರಕ್ಕೆ ನಿಮ್ಮೊಂದಿಗೆ ಬಾಧ್ಯರಾಗಿದ್ದಾರೆಂದು ತಿಳಿದು ಅವರಿಗೆ ಮಾನವನ್ನು ಸಲ್ಲಿಸಿರಿ. ಹೀಗೆ ನಡೆದರೆ ನಿಮ್ಮ ಪ್ರಾರ್ಥನೆಗಳಿಗೆ ಅಡ್ಡಿಯಿರುವುದಿಲ್ಲ** (1 ಪೇತ್ರನು 3:7).

ದೇವರ ವಾಕ್ಯವನ್ನು ಕುರಿತು ಚರ್ಚಿಸಲು ಹಾಗೂ ಹಂಚಿಕೊಳ್ಳಲು ಸಮರ್ಥರಾಗಿರುವುದು ಮಹತ್ವವಾಗಿರುವಲ್ಲಿ ನಾವು ನಮ್ಮ ಬಾಳಸಂಗಾತಿಯೊಂದಿಗೆ ಪಡೆಯುವ ಸಾಕ್ಷಿಗಳು ಹಾಗೂ ಪ್ರಕಟನೆಗಳೂ ಕೂಡಾ ಜೀವಿತದ ದೈನಂದಿನ ವಿಷಯಗಳ ಬಗ್ಗೆ ಕ್ರಮವಾಗಿ ಆಲಿಸುವುದು ಮತ್ತು ಮಾತನಾಡುವುದೂ ಪಾಮುಖ್ಯವಾಗಿವೆ. ನಾವು ಪ್ರತಿಯೊಂದು ಸಂಭಾಷಣೆಯ ಬಗ್ಗೆಯೂ ಒಂದು ಪ್ರಸಂಗ ಮಾಡುವ ತಪ್ಪನ್ನು ಮಾಡಬಾರದು, ಹೀಗೆ ಬೋಧನೆ ಹೊಂದಲು ಯಾರೂ ಬಯಸುವುದಿಲ್ಲ.

ನಿಮ್ಮ ಬಾಳ ಸಂಗಾತಿಯು ಸ್ವಾಭಾವಿಕವಾದ, ಸಾಮಾನ್ಯವಾದ ರೀತಿಗಳಲ್ಲಿ ಸಂಪರ್ಕಹೊಂದಲು ನಿಮ್ಮಿಂದ ಬಯಸುತ್ತಾಳೆ. ವಿನೋದ ಹೊಂದಿರಿ. ಹಾಸ್ಯ ಪಟಾಕಿಗಳನ್ನು ಸಿಡಿಸಿರಿ. ನಗಿರಿ, ಆಟವಾಡಿರಿ, ನೀವು 24/7 ಎಲ್ಲಾ ಸಮಯದಲ್ಲೂ ಪ್ರಸಂಗಿ ಆಗಬೇಡಿರಿ. ನಿಮ್ಮ ಜೀವನ ಸಂಗಾತಿಯು ಒಬ್ಬ ವ್ಯಕ್ತಿಯಾಗಿ ನಿಮಗೆ ವಿವಾಹವಾಗಿರುತ್ತಾಳೆ, ಒಬ್ಬ ಪ್ರಸಂಗಿಯೊಂದಿಗೆ ಅಲ್ಲ. ಮನೆಯಲ್ಲಿ ಏನಾದರೂ ತಪ್ಪು ನಡೆದರೆ, ಅದನ್ನು ಸರಿಪಡಿಸಲು ಒಂದು ಪ್ರಸಂಗವನ್ನೇ ಬಿಗಿಯಬೇಡಿರಿ. ಯೋಚಿಸಿರಿ, ಹಂಚಿಕೊಳ್ಳಿರಿ, ಚರ್ಚಿಸಿರಿ, ಒಂದು ಅರ್ಥಪೂರ್ಣವಾದ ಸರಳ ರೀತಿಯಲ್ಲಿ ಮಾತನಾಡಿರಿ. ಇದು ಪ್ರತಿಸಾರಿಯೂ ಅಧ್ಯಾಯ ವಚನಗಳನ್ನು ಉಲ್ಲೇಖಿಸುವ ಅಗತ್ಯವಿಲ್ಲ. ಒಂದು ಬಿಸಿಯಾದ ವಾಗ್ವಾದದ ನಡುವೆ ಅಧ್ಯಾಯ ಮತ್ತು ವಚನವನ್ನು ಉಲ್ಲೇಖಿಸುವುದು ಬಹು ಕೆಟ್ಟದಾದ ಸಮಯವಾಗಿರುತ್ತದೆ. ಇದು ನೀವು ಏನು ಹೇಳುತ್ತೀರೋ ಅದರಿಂದ ಒಬ್ಬರು ದೂರವಾಗಲು ದಾರಿಮಾಡುತ್ತದೆ, ಅಷ್ಟೆ. ಇದನ್ನು ಮಾಡುವುದನ್ನು ತಡೆಯಿರಿ.

## ಸೇವೆಯ ಎದುರು ವೈಯಕ್ತಿಕ ಹಾಗೂ ಕೌಟುಂಬಿಕ ವಿವಾದಗಳ ಕುರಿತು ಮಾತನಾಡಿರಿ

**"ಸಮಯೋಚಿತವಾದ ಮಾತುಗಳು ಬೆಳ್ಳಿಯ ನಕಾಸಿಯಲ್ಲಿ ಖಚಿತವಾದ ಬಂಗಾರದ ಹಣ್ಣುಗಳಿಗೆ ಸಮಾನ"** (ಜ್ಞಾನೋಕ್ತಿ 25:11).

ಮನೆಗೆ ಹಿಂದಕ್ಕೆ ತೆಗೆದುಕೊಂಡು ಹೋಗಲು ನಾನು ತಡೆಯಲು ಪ್ರಯತ್ನಿಸುವ ಅಂಶಗಳಲ್ಲಿ ಒಂದು ಯಾವುದೆಂದರೆ, ಸಭೆ ಅಥವಾ ಸೇವೆಗೆ ಸಂಬಂಧವಾದ ವಾದಗಳು. ವೈಯಕ್ತಿಕವಾಗಿ ಒಬ್ಬೊಬ್ಬರನ್ನು, ಮಕ್ಕಳು ಶಾಲೆಯಲ್ಲಿ ಹೇಗೆ ಮಾಡಿದ್ದಾರೆ, ಅವರಿಗಾಗಿ ಆ ದಿನದಲ್ಲಿ ಹೇಗೆ ದಾಟುತ್ತಾ ಇದೆ, ಮುಂತಾದ ವಿಷಯಗಳ ಬಗ್ಗೆ ಮೊದಲು ನಾನು ಕಂಡುಕೊಳ್ಳಲು ಬಯಸುತ್ತೇನೆ. ಕುಟುಂಬವು ಯಾವುದರಲ್ಲಿ ಆಸಕ್ತಿ ಹೊಂದಿದೆ ಎಂಬುದರ ಬಗ್ಗೆ ನಾನು ಮಾತನಾಡಿ, ನಂತರವೇ ಸಭೆ ಮತ್ತು ಸೇವೆಯ ಬಗ್ಗೆ ಯೋಗ್ಯವಾದ, ಅಗತ್ಯವಾದ, ವಿಷಯಗಳ ಬಗ್ಗೆ ಮಾತನಾಡುತ್ತೇನೆ. ನಾನು ಪ್ರಯಾಣ ಮಾಡುತ್ತಿದ್ದರೆ, ಒಳದೃಷ್ಟಿಯಲ್ಲಿ ಬರುವ ಕಥಾನಕಗಳು ಮುಂತಾದ ಸಮೀಪಿಸುವ, ಮೇಲೆ ಬರುವ ವಿವರಪಟ್ಟಿಗಳು ಈ

ವಿಶೇಷ ಘಟನೆಗಳು ಹಂಚಿಕೊಳ್ಳಲ್ಪಡುತ್ತವೆ. ಮನೆಯಲ್ಲಿ ನಾನು ಯಾವ ವೈಯಕ್ತಿಕ ವಿಷಯಗಳನ್ನು ಕುರಿತು ತರ್ಕ ಮಾಡುವುದಿಲ್ಲ ಹಾಗೂ ಆ ದಿನ ಸಮಾಲೋಚನೆ ಅವಧಿಗಳು ಅಥವಾ ಸಲಹೆಗಾರ ಕೂಟಗಳಲ್ಲಿಯೂ ಚರ್ಚಿಸುವುದಿಲ್ಲ. ಇವೆಲ್ಲದರೊಂದಿಗೆ ಕುಟುಂಬಕ್ಕಾಗಿ ಮನೆಯು ಒಂದು ಸ್ಥಳವಾಗಿದೆ ಎಂದು ನಿಶ್ಚಯಮಾಡುತ್ತೇನೆ. ಒಬ್ಬ ಸಭಾಪಾಲಕನಾಗಿ ಇರುವುದನ್ನು ಒಂದು ಬದಿಗಿಡುವ ಸ್ಥಳವು ಇದಾಗಿದೆ ಹಾಗೂ ಕುಟುಂಬದಲ್ಲಿ ಕೇವಲ ಒಬ್ಬ ಪತಿಯಾಗಿ, ಹಾಗೂ ಒಬ್ಬ ತಂದೆಯಾಗಿ ಇರುವ ಸ್ಥಳವಾಗಿದೆ. ಇದು ನನ್ನ ಕುಟುಂಬ ಸದಸ್ಯರಿಗೆ ಅಗತ್ಯವಾದವುಗಳು ಮುಖ್ಯವಾದವೆಂಬ ಸಂದೇಶವನ್ನು ಸಂಪರ್ಕಿಸುವಂತೆ ಮಾಡುತ್ತೇನೆ ಹಾಗೂ ನಾನು ಇಲ್ಲಿ ಮನೆಯಲ್ಲಿ ಆ ಅಗತ್ಯತೆಗಳನ್ನು ಆಲಿಸುವ ಹಾಗೂ ತಿಳಿಸುವ ಕಾರ್ಯಮಾಡಲೂ ಇದ್ದೇನೆ.

## ನಿಮ್ಮ ಮಕ್ಕಳೊಂದಿಗೆ ಸಮಯ ಕಳೆಯಿರಿ

**"ನಡೆಯಬೇಕಾದ ಮಾರ್ಗಕ್ಕೆ ತಕ್ಕಂತೆ ಹುಡುಗನನ್ನು ಶಿಕ್ಷಿಸು; ಮುಪ್ಪಿನಲ್ಲಿಯೂ ಓರೆಯಾಗನು."** (ಜ್ಞಾನೋಕ್ತಿ 22:6)

ಸೇವೆಯು ಬೆಳೆಯುತ್ತಾ, ವಿಸ್ತರಿಸುತ್ತಿದ್ದಂತೆ, ಹಾಗೂ ನಮ್ಮ ಸಮಯದ ಬೇಡಿಕೆಗಳು ಹೆಚ್ಚುತ್ತಿದ್ದಂತೆ, ನಾವು ಸಮಯವನ್ನು ಕಡಿತಗೊಳಿಸಿಕೊಳ್ಳಲು ಪ್ರೇರೇಪಿಸಲ್ಪಡುವ ಮೊದಲ ವಲಯಗಳಲ್ಲಿ ಒಂದು ಯಾವುದೆಂದರೆ, ನಮ್ಮ ಮಕ್ಕಳೊಂದಿಗೆ ನಾವು ಕಳೆಯುವ ಸಮಯವಾಗಿರುತ್ತದೆ. ಹೇಗಿದ್ದರೂ ಆಟಗಳನ್ನು ಆಡುವುದು, ಕತೆ ಪುಸ್ತಕಗಳನ್ನು ಓದುವುದು, "ಮಗುವಿನ ಮಾತನ್ನು" ಆಡುವುದು, ಇಂಥ ಅಂಶಗಳು ಹೇಗೆ ದೇವರಿಗೆ ಪ್ರಾಮುಖ್ಯವಾಗುತ್ತವೆ? ಮಿಲಿಯಗಟ್ಟಳೆ ಮಂದಿ ಸುವಾರ್ತೆಯನ್ನು ಕೇಳಬೇಕಾಗಿರುವಲ್ಲಿ ನಮ್ಮ ಮಕ್ಕಳೊಂದಿಗೆ ನಗುತ್ತಾ, ಆಟವಾಡುತ್ತಾ ಸಮಯ ಕಳೆಯುವುದರಲ್ಲಿ ಏನು ಪ್ರಯೋಜನವಿದೆ? ಹಲವು ಸಾರಿ ಇದೇ ರೀತಿಯ ಆಲೋಚನೆಯನ್ನು ನಾವು ನಮ್ಮ ಮಕ್ಕಳೊಂದಿಗೆ ಸಮಯ ಕಳೆಯುವಾಗ ಹಾಗೂ ಸೇವೆಯಲ್ಲಿ ಚಟುವಟಿಕೆಯಿಂದ ಇರುವಾಗ ಬಳಸುತ್ತೇವೆ. ಹೇಗಾದರೂ, ದೇವರು ನಮಗೆ ನಮ್ಮ ಮಕ್ಕಳನ್ನು ವಿಶ್ವಾಸದಲ್ಲಿ ತರಬೇತುಗೊಳಿಸಿ ಪೋಷಿಸುವ ಹೊಣೆಗಾರಿಕೆಯನ್ನು ನಮಗೆ ಕೊಟ್ಟಿರುತ್ತಾನೆ. ಈ ರೀತಿಯ

ತರಬೇತು ಹಾಗೂ ಪೋಷಣೆಯು, ನಾವು ನಮ್ಮ ಮಕ್ಕಳ ಪ್ರೀತಿ, ಭರವಸೆ ಹಾಗೂ ಗೌರವವನ್ನು ಗಳಿಸಲು, ಅವರೊಂದಿಗೆ ಸಮಯ ಕಳೆಯದಿದ್ದರೆ ಸಾಧ್ಯವಾಗುವುದಿಲ್ಲ. ಇಂಥಾ ಸಂಬಂಧದ ಮುಖಾಂತರ ಮಾತ್ರ ನಾವು ನಿಜವಾಗಿ ಅವರ ಜೀವಿತಗಳನ್ನು ಪ್ರತ್ಯೇಕಿಸಿ ಪ್ರಭಾವಗೊಳಿಸಲು ಸಾಧ್ಯ.

ಮಕ್ಕಳೊಂದಿಗೆ ಸಮಯ ಕಳೆಯುವುದರಲ್ಲಿ ನಾವು ಅವರ ಸುತ್ತ, ಅವರೊಂದಿಗೆ, ಇರಬೇಕಾದ ಅಗತ್ಯವಿದೆ ಹಾಗೂ ಅವರಿಗೆ ಮುಖ್ಯವೆನಿಸುವ ವಿಷಯಗಳಲ್ಲಿ ಆಸಕ್ತಿ ಹೊಂದಿರಬೇಕು. ಪ್ರತಿಗಳಿಗೆಯೂ ಅವರೊಂದಿಗೆ ಸಮಯ ಕಳೆಯುವಾಗ "ಆತ್ಮಿಕ ವಿಚಾರಗಳ ಕುರಿತು ಮಾತನಾಡುವುದು," ಎಂಬ ಅರ್ಥವಲ್ಲ. ಆಗಾಗ್ಗೆ ನಾವು ಅವರ ಸುತ್ತ ಇದ್ದು, ಅವರಿಗೆ ಹೆಚ್ಚಿನದೆನಿಸುವ ವಿಷಯಗಳನ್ನು ಗಮನಿಸುತ್ತಾ ಆಲಿಸುತ್ತಾ ಇರಬೇಕಾಗುತ್ತದೆ.

## ಅವರಿಗೆ ಯಾವುದು ಮುಖ್ಯವೋ ಅದು ನಿಮಗೂ ಮುಖ್ಯವಾಗಿರಬೇಕು

**"ಇಗೋ ನಾನು ನಿಮ್ಮ ಬಳಿಗೆ ಬರುವುದಕ್ಕೆ ಸಿದ್ಧವಾಗಿರುವುದು ಇದು ಮೂರನೆಯ ಸಾರಿ; ಮತ್ತು ನಿಮಗೆ ಭಾರವಾಗಿರುವುದಿಲ್ಲ; ನಾನು ನಿಮ್ಮ ಸೊತ್ತನ್ನು ಆಶಿಸದೆ ನಿಮ್ಮನ್ನೇ ಆಶಿಸುತ್ತೇನೆ. ಮಕ್ಕಳು ತಂದೆ ತಾಯಿಗಳಿಗೋಸ್ಕರ ದ್ರವ್ಯವನ್ನು ಕೂಡಿಸಿಡುವುದು ಧರ್ಮವಲ್ಲ, ತಂದೆ ತಾಯಿಗಳು ಮಕ್ಕಳಿಗೋಸ್ಕರ ಕೂಡಿಸಿಡುವುದೇ ಧರ್ಮ** (2 ಕೊರಿಂಥದವರಿಗೆ 12:14).

ತಂದೆ ತಾಯಂದಿರಾಗಿ ನಮ್ಮ ಆಸಕ್ತಿಯು ನಮ್ಮ ಮಕ್ಕಳು ನಮಗೆ ಏನು ಕೊಡುತ್ತಾರೆ, ಅಥವಾ ನಮಗಾಗಿ ಏನು ಮಾಡುತ್ತಾರೆ ಎಂಬುದಾಗಿ ಅಲ್ಲ, ಬದಲಾಗಿ ನಾವು ಅವರಿಗೆ ಜೀವಕೊಡಲು, ಅವರಿಗಾಗಿ ನಿರೀಕ್ಷಿಸಲು, ಅವರಲ್ಲಿ ಬಂಡವಾಳ ಹೂಡಲು, ಹಾಗೂ ಅವರ ಭವಿಷ್ಯಕ್ಕಾಗಿ ಸೃಷ್ಟಿ ಮಾಡಲು ಇಲ್ಲಿ ಅವರಿಗಾಗಿ ಇದ್ದೇವೆ. ಅಂದರೆ, ನಾವು ಅವರೊಂದಿಗೆ ಒಂದಾಗಿರಲು, ಅವರ ಜೀವಿತಗಳಲ್ಲಿ ಆಸಕ್ತಿ ಹೊಂದಲು ಅಗತ್ಯವಿದೆ. ಅವರಿಗೆ ಪ್ರಾಮುಖ್ಯವಾದದ್ದು ಏನೋ ಅದು ನಮಗೂ ಪ್ರಾಮುಖ್ಯವಾಗಿ ಆಗಬೇಕು. ನಾವು ಅವರೊಂದಿಗೆ ಅವರ ಭಾಷೆಯಲ್ಲಿ, ಅವರ ಮಟ್ಟಕ್ಕೆ, ಅಂದರೆ ಅವರು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುವಂತೆ ಹಾಗೂ ಸಂಬಂಧ ಹೊಂದುವಂತೆ ಮಾತನಾಡಬೇಕು.

ನನ್ನ ಎರಡು ಮಕ್ಕಳ ಜೀವಿತಗಳಲ್ಲಿ ನಾನು ಅವರಿಗೆ ಆಸಕ್ತಿಯಾಗಿರುವ ವಿಷಯಗಳಲ್ಲಿ ಅವರೊಂದಿಗೆ ಒಂದಾಗಲು ಹಾಗೂ ಅದರ ಬಗ್ಗೆ ಮಾತನಾಡಲು ಪ್ರಯತ್ನಿಸುತ್ತೇನೆ. ಅವರಿಬ್ಬರೂ ಬಹಳ ವಿಭಿನ್ನವಾಗಿದ್ದಾರೆ ಹಾಗೂ ವಿಭಿನ್ನ ಆಸಕ್ತಿಗಳನ್ನು ಹೊಂದಿರುತ್ತಾರೆ. 13 ವರ್ಷದ ನನ್ನ ಮಗಳಿಗೆ, ಆಕೆಯ ಆಸಕ್ತಿಯು ಆಕೆಯ ಮಿತ್ರರೊಂದಿಗೆ ಸಮಯ ಕಳೆಯಲು ಕಲಾಕೃತಗಳನ್ನು ಮಾಡಲು, ಸ್ವಲ್ಪಮಟ್ಟಿಗೆ ಪುಟ್ಟದಾದ ಅಡಿಗೆಗಳನ್ನು ಅಡಿಗೆ ಕೋಣೆಯಲ್ಲಿ ತನ್ನ ಸ್ವಂತದ್ದಾಗಿ ಮಾಡುವುದು, ಟೆನ್ನಿಸ್ ಆಡುವುದು, ಕತೆ ಪುಸ್ತಕಗಳನ್ನು ಓದುವುದು ಮುಂತಾದದ್ದಾಗಿರುತ್ತದೆ. ಇವು ನಮಗೆ ಸಣ್ಣ ವಿಷಯಗಳಾಗಿರಬಹುದು. ಆದರೆ ಇವು ನಾನು ಒಳಗೊಳ್ಳಬೇಕಾದ ಆಕೆಯೊಂದಿಗೆ ಆಕೆಯ ಹೃದಯದೊಂದಿಗೆ ಸಂಬಂಧ ಹೊಂದುವ ಅಂಶಗಳಾಗಿವೆ. 16 ವರ್ಷದ ಮಗನಿಗೆ, ಅವನ ಆಸಕ್ತಿಯು ಅವನು ಕಂಪ್ಯೂಟರ್ ಮೇಲೆ ಮಾಡುವ ಅಂಶಗಳು, ಸಾಹಸಿಗಳ ಜೀವನ ಚರಿತ್ರೆಗಳನ್ನು ಓದುವುದು, ಗಿಟಾರ್ ಮತ್ತು ಸಾಕರ್ ಆಡುವುದು ಆಗಿರುತ್ತದೆ. ಹೀಗಾಗಿ ಈ ವಲಯಗಳು ನಾನು ಒಳಗೊಂಡಿರಬೇಕಾದವುಗಳಾಗಿದ್ದು ನಾನು ಅವನ ಹೃದಯದೊಂದಿಗೆ ಸಂಬಂಧ ಹೊಂದುತ್ತೇನೆ. ಅವನಿಗೆ ಯಾವುದು ಪ್ರಾಮುಖ್ಯವೋ ಅದು ನನಗೂ ಪ್ರಾಮುಖ್ಯವಾಗಿರುತ್ತದೆ. ನಮ್ಮ ಮಕ್ಕಳು ನಾವು ಅವರಿಗೆ ಆಸಕ್ತಿಯುಳ್ಳ ವಿಷಯಗಳಲ್ಲಿ ನಾವೂ ಯೋಗ್ಯರಾಗಿ ಆಸಕ್ತಿಯುಳ್ಳವರಾಗಿದ್ದರೆ, ಆಗ ನಮಗೆ ಆಸಕ್ತಿಯುಳ್ಳ ವಿಷಯಗಳಲ್ಲಿ ಆಸಕ್ತಿಯುಳ್ಳವರಾಗಿ ಗಮನಕೊಡುತ್ತಾರೆ, ನಾವು ಈಗ ಅವರ ಜೀವಿತಗಳಲ್ಲಿ ಮಾತನಾಡಲು ಹಕ್ಕನ್ನು ಗಳಿಸಿಕೊಂಡು ಅವರ ಹೃದಯಗಳ ಮೇಲೆ ಬರೆಯುತ್ತೇವೆ.

ನಾನು ನಿಜವಾಗಿ ನನ್ನ ಮಕ್ಕಳಿಗೆ ಮಾಡಿ ಸಂತೋಷ ಪಡುವ ಕೆಲಸವೇನೆಂದರೆ, ರಾತ್ರಿಯಲ್ಲಿ ಅವರನ್ನು ಹಾಸಿಗೆಗಳಲ್ಲಿ ಮಲಗಿಸಿ ಭದ್ರಪಡಿಸುವುದು. ನಾನು ಕೆಲವು ನಿಮಿಷಗಳ ಕಾಲ ಒಬ್ಬೊಬ್ಬರ ಬಳಿಯೂ ಕುಳಿತು ಅವರಿಗಾಗಿ ಪ್ರಾರ್ಥಿಸುವುದು ಅವರನ್ನು ಅಪ್ಪಿಕೊಳ್ಳುವುದು ಹಾಗೂ ಶುಭರಾತ್ರಿಯ ಮುತ್ತನ್ನು ನೀಡುವುದು. ಆದರೆ ಇವು ಬೆಲೆಕಟ್ಟಲಾಗದ ಕ್ಷಣಗಳಾಗಿರುತ್ತವೆ. ಇವು ನಾವು ಹೊಂದುವ ಹೃದಯದಿಂದ ಹೃದಯಕ್ಕೆ ಆಡುವ ಮಾತುಗಳ ಕ್ಷಣಗಳಾಗಿವೆ. ನಾನು ಅವರ ಮನಸ್ಸಿನಲ್ಲಿ ನಿಜವಾಗಿ

ಏನಿದೆ ಎಂದು ಆಲಿಸುತ್ತೇನೆ, ಹಾಗೂ ಈ ಕ್ಷಣಗಳು ನಾನು ಅವರ ಜೀವಿತಗಳಲ್ಲಿ ನಾನು ಪುಟ್ಟ ವಾಕ್ಯಗಳಲ್ಲಿ ಸರಳ ವಿಷಯಗಳಲ್ಲಿ ಆಡುವ ಆದರೆ ಅವರ ಅಸ್ಥಿತ್ವಗಳಲ್ಲಿ ಉಳಿಯುವ ತಿರುಳಾಗಿರುತ್ತವೆ.

ಬೋಧಿಸುವ ಕ್ಷಣಗಳನ್ನು ಸ್ವಯಂ ಸ್ಪೂರ್ತಿಯಾಗಿ ಬಳಸಿರಿ. ಏನಾದರೂ ಸಂಭವಿಸುವುದನ್ನು ನೀವು ಕಂಡಾಗ, ಹಾಗೂ ನೀವು ಆ ಘಟನೆಯ ಪರಿಸ್ಥಿತಿಯ ಸುತ್ತ, ಸಂಭವದ ಸುತ್ತ ಒಂದು ಸರಳವಾದ ಸತ್ಯವನ್ನು ಹಂಚಿಕೊಳ್ಳುವ ಭಾವ ಉಂಟಾದಾಗ ಅದನ್ನು ಆಗ ಬಳಸಿ, ದೇವರ ವಾಕ್ಯವನ್ನು ಅವರಿಗೆ ಬೋಧಿಸಿರಿ, ಅದನ್ನು ಸರಳವಾಗಿ ಇಡಿರಿ ಹಾಗೂ ಪುಟ್ಟವಾಕ್ಯಗಳಲ್ಲಿ ಮುಖ್ಯಾಂಶ ತಿಳಿಸಿ, ಅಲ್ಲಿಗೆ ಮುಕ್ತಾಯ ಮಾಡಿರಿ. ಐದು ವಾಕ್ಯಗಳಲ್ಲಿ ಮುಖ್ಯಾಂಶ ತಿಳಿಸಿ, ಅಲ್ಲಿಗೆ ಮುಕ್ತಾಯ ಮಾಡಿರಿ ದಿನದ ಯಾವ ಸಮಯದಲ್ಲಿ, ನೀವು ಎಲ್ಲಿದ್ದರೂ, ಹಂಚಿಕೊಳ್ಳಲು ಹಾಗೂ ನಿತ್ಯತ್ವದ ಸತ್ಯವನ್ನು ತಿಳಿಸಲು ಉತ್ತಮವಾದ ಕ್ಷಣವಾಗಿರುತ್ತದೆ. ಕರ್ತನು ಹೀಗೆ ಮಾಡಲು ನಮಗೆ ಕಲಿಸಿರುತ್ತಾನೆ. *"ನಾನು ಈಗ ನಿಮಗೆ ತಿಳಿಸುವ ಮಾತುಗಳು ನಿಮ್ಮ ಹೃದಯದಲ್ಲಿರಬೇಕು. ಇವುಗಳನ್ನು ನಿಮ್ಮ ಮಕ್ಕಳಿಗೆ ಅಭ್ಯಾಸಮಾಡಿಸಿ ಮನೆಯಲ್ಲಿ ಕೂತಿರುವಾಗಲೂ ದಾರಿ ನಡೆಯುವಾಗಲೂ ಮಲಗುವಾಗಲೂ ಏಳುವಾಗಲೂ ಇವುಗಳ ವಿಷಯದಲ್ಲಿ ಮಾತಾಡಬೇಕು" (ಧರ್ಮೋಪದೇಶಕಾಂಡ 6:6,7).*

ನನ್ನ ಮಕ್ಕಳೊಂದಿಗೆ ನಾನು ಇರುವ ಸಮಯಗಳವೆ ಹಾಗೂ ಕೆಲವು ಆತ್ಮಿಕ ಸತ್ಯತೆಯನ್ನು ಹಂಚಿಕೊಳ್ಳಲು ಅವಕಾಶವನ್ನು ನಾನು ಕಾಣುತ್ತೇನೆ. ಅನೇಕ ವೇಳೆ ಅವರ ಜೀವಿತಗಳಲ್ಲಿ ಏನಾದರೂ ಮಾತಾನಾಡಲು ದೇವರು ನನಗೆ ಹೇಳುವ ಯೋಗ್ಯವಾದ ಪ್ರವಾದನಾ ಕ್ಷಣಗಳು ಇವಾಗಿವೆ. ವಾಸ್ತವವಾಗಿ, ನಾನು "ಕರ್ತನು ಹೀಗೆ ಹೇಳುತ್ತಾನೆ," ಎಂದು ಹೇಳುವುದಿಲ್ಲ, ಬದಲಾಗಿ ಒಂದು ಸರಳ ರೀತಿಯಲ್ಲಿ ಕರ್ತನು ನನ್ನ ಹೃದಯದಲ್ಲಿ ಏನನ್ನು ಕಲಕಿದ್ದಾನೋ ಅದನ್ನು ಸಂಪರ್ಕಿಸುತ್ತೇನೆ, ಹಾಗೂ ಅವರು ಅದನ್ನು ತೆಗೆದುಕೊಳ್ಳುತ್ತಾರೆ.

ಕುಟುಂಬದರಜಾಕಾಲಕ್ಕಾಗಿವರ್ಷಕ್ಕೊಮ್ಮೆಅಥವಾಎರಡಾವರ್ತಿಸಮಯ ನಿಗದಿಮಾಡುವುದನ್ನು ಮರೆಯಬೇಡಿರಿ. ಆರ್ಥಿಕ ಮುಗ್ಗಟ್ಟಿನಿಂದ ಅಥವಾ ಇತರ ಕಟ್ಟುಪಾಡುಗಳಿಂದ ಇದು ಯಾವಾಗಲು ಸಾಧ್ಯವಾಗುವುದಿಲ್ಲವೆಂದು

ನಾನು ಅರಿತಿದ್ದೇನೆ. ಆದರೆ ಸಾಧ್ಯವಾದಾಗಲೆಲ್ಲಾ ಪ್ರತಿವರ್ಷವೂ ಕ್ರಮವಾದ ಕುಟುಂಬ ರಜಾಕಾಲಗಳನ್ನು ತೆಗೆದುಕೊಳ್ಳುವ ಯೋಜನೆ ಮಾಡಿರಿ. ಕುಟುಂಬದ ರಜಾಕಾಲಗಳಿಗಾಗಿ ನಮ್ಮ ಗುರಿಗಳು ಮೂಲವಾಗಿ ವಿಶ್ರಾಂತಿ ಹೊಂದುವುದು ಹಾಗೂ ಗಡಿಬಿಡಿಯ ಕಾರ್ಯಕ್ರಮಗಳಿಂದ ಹೊರಬರುವುದು ಆಗಿರುತ್ತವೆ, ಅಲ್ಲದೆ ನೆನಪುಗಳನ್ನು ಸೃಷ್ಟಿಮಾಡಿಕೊಳ್ಳುವುದೂ ಆಗಿರುತ್ತದೆ. ನಮ್ಮ ಮಕ್ಕಳೊಂದಿಗೆ ನಾವು ಬಿಡಬಹುದಾದ ಅತ್ಯಂತ ಮಹತ್ವವಾದ ವರಗಳಲ್ಲಿ ಒಂದು ಯಾವುದೆಂದರೆ, ಮನೆಯಲ್ಲಿ ಅವರ ಬೆಳವಣಿಗೆಯ ವರ್ಷಗಳ ಸುಂದರವಾದ ನೆನಪುಗಳು ಇವು ಬೆಲೆಕಟ್ಟಲಾರದವುಗಳಾಗಿರುತ್ತವೆ ಹಾಗೂ ಅವರು ಅವುಗಳನ್ನು ತಾವು ಮನೆಬಿಟ್ಟು ಹೋದ ಮೇಲೆ ಬಹಳಕಾಲದ ನಂತರ ತಮ್ಮೊಂದಿಗೆ ತೆಗೆದುಕೊಂಡು ಹೋಗುತ್ತಾರೆ. ಪ್ರತೀದಿನ ನಾವು ಈ ನೆನಪುಗಳನ್ನು ಅವರಿಗಾಗಿ ಸೃಷ್ಟಿಸಬೇಕು ಹಾಗೂ ನಂತರ ಕುಟುಂಬ ರಜಾಕಾಲಗಳು, ಜನ್ಮದಿನಗಳು ಮುಂತಾದ ನೆನಪುಗಳನ್ನು ಉಳಿಸುವ ವಿಶೇಷ ಸಂದರ್ಭಗಳು ಇರುತ್ತವೆ.

ಕಾರ್ಯನಿರತ ಕ್ರೈಸ್ತೀಯ ಸೇವಕರಿಗೆ ಒಂದು ಸೂಚನೆ, ನಮ್ಮ ಕಾರ್ಯಗಳ ಪಟ್ಟಿಯಿಂದ ವಿಶ್ರಾಂತಿಗಾಗಿ, ಸೇವೆಯಿಂದ ಹೊರಹೋಗಲು ಹಾಗೂ ಕುಟುಂಬದ ರಜಾದಿನಗಳು ಇವುಗಳಿಗಾಗಿ ಸ್ವಲ್ಪ ಬಿಡುವು ತೆಗೆದುಕೊಳ್ಳುವುದು ಒಂದು 'ಪಾಪ'ವಲ್ಲ ಅಥವಾ ಒಂದು ಲೌಕಿಕ ವಿಚಾರವಲ್ಲ. ವಾಸ್ತವವಾಗಿ ಇದನ್ನು ಮಾಡುವುದು ಬಹು ಲೌಕಿಕ ವಿಚಾರವಲ್ಲ. ವಾಸ್ತವವಾಗಿ ಇದನ್ನು ಮಾಡುವುದು ಬಹು ಪ್ರಾಮುಖ್ಯವಾದದ್ದು. ಯೇಸುವಿನ ಕಡೆಗೆ ನೋಡಿರಿ. ಈ ವಿಷಯದಲ್ಲಿ ಆತನು ಆಲೋಚನಾಪರನಾಗಿದ್ದನು. ಹಾಗೂ ಕಾರ್ಯನಿರತ ಸಮಯಗಳ ನಡುವೆ ವಿಶ್ರಾಂತಿಗಾಗಿ ಕ್ಷಣಗಳನ್ನು ಸೃಷ್ಟಿ ಮಾಡಲು ಪ್ರಯತ್ನಿಸಿದ್ದನು. *"ಇತ್ತಾಲಾಗಿ ಅಪೊಸ್ತಲರು ಅತನ ಬಳಿಗೆ ಕೂಡಿ ಬಂದು ತಾವು ಮಾಡಿದ್ದನ್ನೂ, ಉಪದೇಶಿಸಿದ್ದನ್ನೂ ಎಲ್ಲ ಆತನಿಗೆ ತಿಳಿಸಲು ಆತನು ಅವರಿಗೆ ನೀವು ಮಾತ್ರ ವಿಂಗಡವಾಗಿ ಅಡವಿಗೆ ಬಂದು ಸ್ವಲ್ಪ ದಣಿವಾರಿಸಿಕೊಳ್ಳಿರಿ ಎಂದು ಹೇಳಿದನು. ಯಾಕೆಂದರೆ ಬಹಳ ಮಂದಿ ಬರುತ್ತಾ ಹೋಗುತ್ತಾ ಇದ್ದದರಿಂದ ಅವರಿಗೆ ಊಟಮಾಡುವುದಕ್ಕೂ ಅವಕಾಶ ಸಿಕ್ಕಲಿಲ್ಲ. ಆಗ ಅವರು ದೋಣಿಯಲ್ಲಿ ವಿಂಗಡವಾಗಿ ಅಡವಿಗೆ ಹೋದರು."* (ಮಾರ್ಕ 6:30-32).

## ನಿಮ್ಮ ಕುಟುಂಬ ಪ್ರಾರ್ಥನೆಯನ್ನು ನಿರ್ವಹಿಸಿರಿ.

**"ನನ್ನ ಜನರೇ, ನನ್ನ ಉಪದೇಶಕ್ಕೆ ಕಿವಿಗೊಡಿರಿ, ನನ್ನ ನುಡಿಗಳನ್ನು ಲಾಲಿಸಿರಿ. ನಾನು ಬಾಯ್ದೆರೆದು ಸಾಮ್ಯರೂಪವಾಗಿ ಉಪದೇಶಿಸುವೆನು. ಪೂರ್ವಕಾಲದ ಗೂಡಾರ್ಥಗಳನ್ನು ಹೊರಪಡಿಸುವೆನು. ನಾವು ನಮ್ಮ ಹಿರಿಯರ ಬಾಯಿಂದಲೇ ತಿಳಿದ ಸಂಗತಿಗಳನ್ನು ಅವರ ಸಂತಾನದವರಿಗೆ ಮರೆಮಾಡದೆ ಯೆಹೋವನ ಘನತೆಯನ್ನೂ ಆತನ ಪರಾಕ್ರಮವನ್ನೂ ಅದ್ಭುತ ಕೃತ್ಯಗಳನ್ನೂ ಮುಂದಣ ಸಂತತಿಯವರಿಗೆ ವಿವರಿಸುವೆವು. ಆತನು ಯಾಕೋಬ ವಂಶದಲ್ಲಿ ಕಟ್ಟಳೆಯನ್ನಿಟ್ಟು ಇಸ್ರಾಯೇಲ್ಯರಿಗೆ ನಿಯಮಮಾಡಿ ನಮ್ಮ ಹಿರಿಯರಿಗೆ ಆಜ್ಞಾಪಿಸಿದ್ದೇನೆಂದರೆ–ಅವುಗಳನ್ನು ನಿಮ್ಮ ಮಕ್ಕಳಿಗೆ ಹೇಳಿಕೊಡಿರಿ; ಇದರಿಂದ ಅವು ಮುಂದಿನ ತಲೆಯವರಿಗೆ ಗೊತ್ತಾಗಿ ಅವರ ಮಕ್ಕಳು ಅವುಗಳನ್ನು ತಮ್ಮ ಮಕ್ಕಳು ಮೊಮ್ಮಕ್ಕಳಿಗೆ ತಿಳಿಸುತ್ತಾ ಹೋಗುವರು. ಆಗ ಅವರು ಮೊಂಡರೂ ಅವಿಧೇಯರೂ ಚಪಲಚಿತ್ತರೂ ದೇವದ್ರೋಹಿಗಳೂ ಆದ ತಮ್ಮ ಪೂರ್ವಿಕರಂತಾಗದೆ ನನ್ನ ಮಹತ್ಕೃತ್ಯಗಳನ್ನು ಮರೆಯದೆ ನನ್ನಲ್ಲಿಯೇ ಭರವಸವಿಟ್ಟು ನನ್ನ ಆಜ್ಞೆಗಲನ್ನು ಕೈಕೊಂಡರು ಎಂಬದೇ"** (ಕೀರ್ತನೆಗಳು 78:1–7).

ಹಲವಾರು ಕುಟುಂಬಗಳು ಮಾಡುವಂತೆ ಊಟಕ್ಕೆ ಮೊದಲು ಒಟ್ಟಾಗಿ ಪ್ರಾರ್ಥಿಸುವುದಕ್ಕಿಂತ ಬೇರೆಯಾಗಿ ಕ್ರಮವಾಗಿ ಆರಾಧನೆ, ಹಂಚಿಕೊಳ್ಳುವಿಕೆ ಹಾಗೂ ಪ್ರಾರ್ಥನೆಗಾಗಿ ಒಂದು ಸಮಯಕ್ಕಾಗಿ ಒಟ್ಟಾಗಿ ಸೇರುವ ಅಭ್ಯಾಸ ಬೆಳೆಸಿಕೊಳ್ಳಿರಿ. ನಮ್ಮ ಮನೆಯಲ್ಲಿ ನಾವು ಈ ಸಮಯವನ್ನು ಸಾಯಂಕಾಲಗಳಲ್ಲಿ ಇಟ್ಟುಕೊಂಡಿರುತ್ತೇವೆ. ಇದನ್ನು ನಾವು ಪ್ರತಿದಿನವೂ ಮಾಡುವುದಿಲ್ಲ ಕೆಲವು ಪ್ರಾಯೋಗಿಕ ಕಾರಣಗಳಗಾಗಿ ಕೆಲವು ದಿನಗಳನ್ನು ನಾವು ತಪ್ಪಿಸುತ್ತೇವೆ. ಹೇಗಾದರೂ ಹಲವು ದಿನಗಳಲ್ಲಿ ನಾವು ರಾತ್ರಿ ಊಟವಾದ ನಂತರ ನಮ್ಮ ಕುಟುಂಬ ಪ್ರಾರ್ಥನೆಗಾಗಿ ಕುಳಿತುಕೊಳ್ಳುತ್ತೇವೆ. ಈ ಸಮಯವನ್ನು ಸರಳವಾಗಿ ಇಟ್ಟುಕೊಳ್ಳುತ್ತೇವೆ ಹಾಗೂ ಈ ಸಮಯವನ್ನು ವಿನೋದವಾಗಿಯೂ ಇಟ್ಟುಕೊಳ್ಳುತ್ತೇವೆ. ಈ ಸಮಯವನ್ನು ನಾವು ಮಕ್ಕಳು ಕೂಡಾ ಒಳಗೊಳ್ಳುವ ಸಮಯವಾಗಿ ಇಟ್ಟುಕೊಳ್ಳುತ್ತೇವೆ. ನಾವು ಈ ಸಮಯವನ್ನು ದೇವರ ವಾಕ್ಯದಿಂದ ಸತ್ಯವನ್ನು ಕಲಿಯಲು ಇಟ್ಟುಕೊಳ್ಳುತ್ತೇವೆ. ಯಾವ ರೀತಿಯಲ್ಲೂ ಗ್ರಹಿಕೆ ಇಲ್ಲದೆ ಧ್ಯಾನ ಭಾಗವನ್ನು ಕೇವಲ ಅಲುಗಾಟಗಳ ಮೂಲಕ ಓದುವುದಕ್ಕಿಂತಲೂ ಸತ್ಯವನ್ನು ಕಲಿಯುವುದು ಪ್ರಾಮುಖ್ಯವಾದದ್ದು ಇದರಿಂದ, ನಾವು ಪ್ರತಿ ಸಾರಿಯೂ ವಿಭಿನ್ನ ರೀತಿಯ ಕಾರ್ಯಗಳನ್ನು ಮಾಡುತ್ತೇವೆ. ಉದಾಹರಣೆಗೆ, ಜೀವಿತದಲ್ಲಿ ದೇವರ ಕನಸು ಮತ್ತು ಉದ್ದೇಶದ ಕುರಿತಾಗಿ ನಾವು ಮಾತನಾಡಿದ ಒಂದು ಸಮಯವಿತ್ತು.

ಪ್ರಸ್ತುತ ನಾವು ಕ್ರಿಸ್ತನಲ್ಲಿದ್ದೇವೆ ಎಂಬುದರ ಕುರಿತು ಕಲಿಯುತ್ತಿದ್ದೇವೆ. ಇದರಿಂದ ಈ ಸತ್ಯಗಳನ್ನು ನಾವು ಸಾಲುಸಾಲಾಗಿ ಸ್ವಲ್ಪಸ್ವಲ್ಪವಾಗಿ ಅವರ ವಯಸ್ಸಿಗೆ ತಕ್ಕಂತೆ ಸ್ಪಷ್ಟಪಡಿಸುತ್ತೇವೆ. ಕುಟುಂಬ ಸಮಯವನ್ನು ಚಿಕ್ಕದಾಗಿ ಅರ್ಥಗರ್ಭಿತವಾಗಿ, ಮಣಿಯುವಂಥ, ಸ್ವಯಂಪ್ರೇರಿತವಾದ ಹಾಗೂ ಕಾಲಕಾಲಕ್ಕೆ ವಿಭಿನ್ನವಾಗಿ ಇಟ್ಟುಕೊಳ್ಳುವುದು ಪ್ರಾಮುಖ್ಯವಾದುದಾಗಿದೆ. ಕೆಲವು ವೇಳೆ, ನಾವು ಕೇವಲ ಪ್ರಾರ್ಥಿಸುತ್ತೇವೆ ಅಥವಾ ಕುಟುಂಬಕ್ಕಾಗಿ ಒಟ್ಟಾಗಿ ಅನ್ಯ ಭಾಷೆಗಳಲ್ಲಿ ಪ್ರಾರ್ಥಿಸುತ್ತೇವೆ ಅಥವಾ ಕೇವಲ ಆರಾಧನೆಯ ಒಂದು ಸಮಯ ಮಾತ್ರ ಆದರೆ ಈ ಕಾಲಗಳು ಒಟ್ಟಾಗಿ ಶ್ರೇಷ್ಠವಾದದ್ದು.

## ಸೇವೆಗೆ ಮೊದಲು ಕುಟುಂಬವನ್ನಿಡಿರಿ

**"ಪೂರ್ಣಗೌರವದಿಂದ ತನ್ನ ಮಕ್ಕಳನ್ನು ಅಧೀನದಲ್ಲಿಟ್ಟುಕೊಂಡು ಸ್ವಂತ ಮನೆಯವರನ್ನು ಚೆನ್ನಾಗಿ ಆಳುವುದಕ್ಕೇ ತಿಳಿಯದವನು ದೇವರ ಸಭೆಯನ್ನು ಹೇಗೆ ಪರಾಂಬರಿಸುವನು?**
(1 ತಿಮೊಥೆಯನಿಗೆ 3:4,5)

ನಮ್ಮಲ್ಲಿ ಬಹಳಷ್ಟು ಕ್ರೈಸ್ತರು ನಾವು ದೇವರ ಮನೆಯಲ್ಲಿ ಸೇವೆಗಾಗಿ ಹೋಗುವ ಮೊದಲು ನಮ್ಮ ಸ್ವಂತ ಮನೆಯನ್ನು ಹೊಂದಿಕೊಳ್ಳಬೇಕೆಂಬ ಅಗತ್ಯತೆಯನ್ನು ತಿಳಿದಿರುವಲ್ಲಿ, ಇದನ್ನು ನಿರ್ಲಕ್ಷಿಸಲು ನಾವು ಆಗಾಗ್ಗೇ ಹವಣಿಸುತ್ತೇವೆ. ಒಂದು ವೇಳೆ ಸೇವೆಯ ಬೇಡಿಕೆಗಳು ಅಥವಾ ಕೆಲವು ವೇಳೆ ಪುಳಕಗಳು, ನಮ್ಮ ಸ್ವಂತ ಮನೆ ಹಾಗೂ ಕುಟುಂಬದ ಪರಾಂಬರಿಕೆ ಮಾಡುವ ಸರಳವಾದ ಸಂತೋಷಕ್ಕಿಂತ ಹೆಚ್ಚಾಗಿ ನಮ್ಮನ್ನು ಬಲವಾಗಿ ಹಿಡಿಯುವಂತೆ ಕಾಣುತ್ತದೆ. ಇದರಿಂದ ನಾವು ಎಚ್ಚರಿಕೆಯಿಂದ ನಮ್ಮ ಮೇಲೆ ನಮ್ಮ ಕುಟುಂಬಗಳ ಮೇಲೆ ಗಮನ ಹರಿಸಬೇಕು ಹಾಗೂ ಈ ವಲಯಗಳಲ್ಲಿ ಹೇಗೆ ಮಾಡುತ್ತೇವೆಂಬುದನ್ನು ನೋಡಬೇಕು ಅಗತ್ಯವಿದ್ದರೆ, ನಾವು ನಮ್ಮ ಸೇವೆಯ ಚಟುವಟಿಕೆಗಳನ್ನು ನಿಧಾನ ಮಾಡಬೇಕು ಅಥವಾ ಬದಲಾಯಿಸಬೇಕು. ಇದರಿಂದ ನಾವು ಮೊದಲು ನಮ್ಮ ಕುಟುಂಬಕ್ಕೆ ಸೇವೆಮಾಡಬೇಕು. ಈ ವಲಯದಲ್ಲಿ ನಿಜವಾಗಿ ಪರಿಪೂರ್ಣರಾಗಿರುವಂತೆ ನಾನು ಹಕ್ಕು ಚಲಾಯಿಸುವುದಿಲ್ಲ. ನಾನು ತೆಗೆದುಕೊಳ್ಳುವ ಸೇವೆಯ ಕಾರ್ಯಗಳ ನಡುವೆ ಹಾಗೂ ನಾನು ಮನೆಯಲ್ಲಿ ಕಳೆಯುವ ಸಮಯವನ್ನು ಸಮತೋಲನ ಮಾಡಲು ವರ್ಷಗಳುದ್ದಕ್ಕೂ ಪ್ರಯತ್ನಿಸಿದೆನು. ಹಾಗೂ ಇನ್ನೂ ಪ್ರಯತ್ನಿಸಲು ಮುಂದುವರಿಸುತ್ತಿದ್ದೇನೆ.

ಕೆಲವು ಸೇವೆಯ ಕಾರ್ಯಗಳು ಇಲ್ಲವೆ. ನಾನು ಮನೆಯಲ್ಲಿ ಸ್ವಲ್ಪ ಸಮಯ ಕಳೆಯುವ ಆಶೆಯಿಂದ ಸುಮ್ಮನೆ "ಇಲ್ಲ" ಎಂದು ಹೇಳುತ್ತೇನೆ. ಉದಾಹರಣೆಗಾಗಿ, ವಾರದ ಅವಧಿಯಲ್ಲಿ ಅಥವಾ ಕೊಟ್ಟಿರುವ ಒಂದು ತಿಂಗಳನಲ್ಲಿ, ಕುಟುಂಬಕ್ಕಾಗಿ ಮಾತ್ರ ನಿರ್ದಿಷ್ಟ ಸಮಯಗಳನ್ನು ಇಟ್ಟುಕೊಳ್ಳಬೇಕಾದುದು ಒಳ್ಳೆಯದು. ಹಾಗೂ ಸಾಧ್ಯವಾದಾಗ ನಾವು ವಿಶ್ರಾಂತಿ ಹೊಂದಲು ಹಾಗೂ ಕುಟುಂಬದೊಂದಿಗೆ ಇರಲು ಸೇವೆಯಿಂದ ಹೊರಗುಳಿಯಲು ಸಮಯ ತೆಗೆದುಕೊಳ್ಳಬಹುದು.

ಕೊನೆ ಪಕ್ಷ 3–4 ತಿಂಗಳುಗಳ ಒಂದು ಕಾಲವು, ನಾನು ವೈಯಕ್ತಿಕ ಸವಾಲುಗಳ ಮುಖಾಂತರ ಹಾದು ಹೋದಾಗ, ನಾನು ಆ ಸಮಯದಲ್ಲಿ ಬೋಧಿಸಬಾರದೆಂದು ತೀರ್ಮಾನಿಸಿದ್ದೆನು. ನಾನು ಸೇವೆಯಿಂದ ಒಂದು ಬಿಡುವು ತೆಗೆದುಕೊಂಡಿದ್ದೆನು. ಹಾಗೂ ಅತಿಥಿ ಬೋಧಕರನ್ನು ಕರೆಸಿದ್ದೆನು, ಹಾಗೂ ನಮ್ಮ ಭಾನುವಾರದ ಆರಾಧನೆಗಳಲ್ಲಿ ನಮ್ಮ ಕೆಲವರು ಸಹ ಸಭಾಪಾಲಕರು ಬೋಧಿಸಿದರು.

## ಜನರಿಗೆ ಸೇವೆ ಮಾಡುವ ಸಮಯದಲ್ಲಿ ನಿಮ್ಮ ಕುಟುಂಬವನ್ನು ಕಾಯಿರಿ

ಕ್ರೈಸ್ತೀಯ ಸೇವೆಯಲ್ಲಿ ಇರುವಾಗ, ಒಬ್ಬ ಸೇವಕನಾಗಿ ನಿಮಗೆ ಮಾತ್ರವಲ್ಲ ಆದರೆ ನಿಮ್ಮ ಕುಟುಂಬಕ್ಕೂ ಪರಿಣಾಮ ಬೀರುತ್ತದೆ. ಕುಟುಂಬವು (ಬಾಳ ಸಂಗಾತಿ ಹಾಗೂ ಮಕ್ಕಳೂ) ಜನರ ನಿರೀಕ್ಷೆಗಳನ್ನು ಎದುರಿಸುವುದು ದೊಡ್ಡ ಒತ್ತಡಗಳಲ್ಲಿ ಒಂದಾಗಿದೆ. ಜನರು ಯಾಂತ್ರಿಕವಾಗಿ, ನಿಮ್ಮ ಬಾಳ ಸಂಗಾತಿಯು ಒಂದು ನಿರ್ಧಿಷ್ಟ ರೀತಿಯಲ್ಲಿ ನಡೆಯಬೇಕೆಂದು ನಿರೀಕ್ಷಿಸುತ್ತಾರೆ. ದೇವರ ಸೇವಕನು ಅಭಿಷೇಕ ಹೊಂದಿರಬೇಕೆಂದು ಅವರು ನಿರೀಕ್ಷಿಸುವುದು ಮಾತ್ರವಲ್ಲ. ಆದರೆ ಪತ್ನಿಯೂ ಕೂಡಾ ಅಭಿಷೇಕಿಸಲ್ಪಡಬೇಕು, ವರ ಪಡೆದಿರಬೆಕು, ಒಂದು ರೀತಿಯಲ್ಲಿ ನಡೆಯಬೇಕು ಹಾಗೂ ಕೆಲವು ವಿಷಯಗಳನ್ನು ಮಾಡಬೇಕು ಎಂದು ಕೂಡಾ ನಿರೀಕ್ಷಿಸುತ್ತಾರೆ. ಅದೇ ರೀತಿಯಲ್ಲಿ ಜನರು 'ಬೋಧಕರ' ಕೂಸುಗಳು ಅಥವಾ ಸಭಾ ಪಾಲಕರ ಕೂಸುಗಳನು ಈ ಕೂಸುಗಳು ದೇವದೂತರು ಎಂಬಂತೆ, ಅನುಚಿತವಾದ ಎಲ್ಲಾ ರೀತಿಯ ನಿರೀಕ್ಷೆಗಳನ್ನು ಹೊಂದಲು ಹವಣಿಸುತ್ತಾರೆ. ಇದರಿಂದ ನೀವು ನಿಮ್ಮ ಕುಟುಂಬಗಳನ್ನು

ಜನರ ಅನುಚಿತವಾದ ನಿರೀಕ್ಷೆಗಳಿಂದ ಕಾಪಾಡುವ ಅಗತ್ಯವಾಗಿದೆ. ಹಾಗೂ ದೇವರು ತಮ್ಮನ್ನು ಹೇಗಿರಬೇಕೆಂದು ಸೃಷ್ಟಿಸಿದನು ಎಂಬುದಕ್ಕಾಗಿ, ಜನರ ನಿರೀಕ್ಷೆಗಳನ್ನು ಸಂಧಿಸಲು ಪ್ರಯತ್ನಿಸಿದನು ಎಂಬುದಕ್ಕಾಗಿ ಜನರ ನಿರೀಕ್ಷೆಗಳನ್ನು ಸಂಧಿಸಲು ಪ್ರಯತ್ನಿಸದೆ ನಿಮ್ಮ ಕುಟುಂಬಕ್ಕೆ ಸ್ವಾತಂತ್ರ್ಯವನ್ನು ಕೊಡಿರಿ. ಕೇವಲ ಸಭಿಕರನ್ನು ಹುರಿದುಂಬಿಸಲು ನನ್ನ ಮಕ್ಕಳು "ಸಭೆಯ ಆಟಗಳನ್ನು" ಆಡಲು ನಾನು ಬಯಸುವುದಿಲ್ಲ, ಇದು ಹಲವಾರು ಮಂದಿ "ಸಭಾಪಾಲಕರ ಕೂಸುಗಳು". ಒಮ್ಮೆ ತಾವು ಬೆಳೆದಾಗ ಏಕೆ ಮೊಂಡರಾಗುತ್ತಾರೆಂಬುದಕ್ಕೆ ಕಾರಣವಾಗಬಹುದು. ಬಹುಶಃ ಅವರು ಕೂಸುಗಳಾಗಿದ್ದಾಗ, ತಮಗೆ ನಿಜವಾಗಿ ಬೇಡವಾಗಿದ್ದದ್ದನ್ನು ಮಾಡುವುದರಲ್ಲಿ ಮತ್ತು ಹಾಗೆ ಇರುವುದರಲ್ಲಿ, ಕೇವಲ ಸಭೆಯ ಮುಂದೆ ಕಾಣಿಸಿಕೊಳ್ಳುವುದಕ್ಕೆ ತಂದೆ ತಾಯಿಂದಿರಿಂದ ಬಲಾತ್ಕರಿಸಲ್ಪಟ್ಟಿರಬಹುದು. ಇದರಿಂದ ಜೀವಿತದಲ್ಲಿ ಮುಂದೆ ಅವರು ಸ್ಥಳೀಯ ಸಭೆಯ ಮೇಲೆ ಕೋಪಗೊಂಡು ಅದರೊಂದಿಗೆ ಏನು ಮಾಡಲೂ ಇಷ್ಟವಿಲ್ಲದೆ ಇರಬಹುದು.

ನಿಮ್ಮ ಮನೆಗೆ ಮಾರ್ಗಮಾಡುವುದು ಮತ್ತೊಂದು ಕಾಪಾಡಬೇಕಾದ ಅಂಶವಾಗಿರುತ್ತದೆ. ನಾನು ಹಂಚಿಕೊಳ್ಳಬೇಕಾದುದೇನು ಎಂಬುದನ್ನು ನಾನು ತಿಳಿದಿರುತ್ತೇನೆ. ಬಹುಶಃ ಪ್ರತಿಯೊಬ್ಬರಿಗೆ ಇದು ಅಸಾಧ್ಯವಾಗಬಹುದು; ಇಲ್ಲದಿದ್ದರೆ ಇದು ಆಲೋಚಿಸಲು ಪ್ರಾಮುಖ್ಯವಾದುದು ನಾನು ನನ್ನ ಮನೆಯನ್ನು 'ಮನೆ' ಆಗಿಡಲು ಪ್ರಯತ್ನಿಸಿರುತ್ತೇನೆ. ಹಾಗೂ ಕಛೇರಿಯು, ಜನರು ಒಂದು ಸಭೆ ಅಥವಾ ಸೇವೆಯ ಸಂಬಂಧವಾಗಿ ನನ್ನನ್ನು ಸಂಧಿಸುವ ಒಂದು ಸ್ಥಳವಾಗಿದೆ. ಕೆಲವು ಸಭಾಪಾಲಕರು ಬೋಧಕರು ತಮ್ಮ ಮನೆಗಳನ್ನು ಸಭೆಯ ಪ್ರತಿಯೊಬ್ಬರಿಗಾಗಿ ತೆರೆದಿಟ್ಟಿರುತ್ತಾರೆ. ಇದೊಂದು ಒಳ್ಳೇ ಅಭಿಪ್ರಾಯವೆಂದು ನಾನು ನೆನಸುವುದಿಲ್ಲ—ಇದು ಕೇವಲ ನನ್ನ ವೈಯಕ್ತಿಕ ಅಭಿಪ್ರಾಯವಾಗಿದೆ. ಮನೆಯು ಪತಿ, ಪತ್ನಿ ಹಾಗೂ ಮಕ್ಕಳು ಒಟ್ಟಾಗಿ ಇದ್ದು, ಒಟ್ಟಾಗಿ ಬೆಳೆಯಲು ಸಮಯ ತೆಗೆದುಕೊಳ್ಳುವಂಥದ್ದಾಗಿದೆ. ಆದರೆ, ಮನೆಯು ಇಡೀ ದಿನ ಮತ್ತು ರಾತ್ರಿ, ವಾರದ ಏಳು ದಿನಗಳೂ ಸಭೆಯ ಎಲ್ಲಾ ಸದಸ್ಯರಿಗೆ ಒಂದು ಸಂಧಿಸುವ ಸ್ಥಳವಾದರೆ, ಸಭಾಪಾಲಕರ ಕುಟುಂಬಕ್ಕೆ ವೈಯಕ್ತಿಕ ಸಮಯವಿಲ್ಲದೆ, ಇದು ಸಭಾಪಾಲಕರ ಕುಟುಂಬದ ಮೇಲೆ ಧಕ್ಕೆ ಉಂಟಾಗಬಹುದು. ಮನೆಯಲ್ಲಿ ನಮ್ಮೊಂದಿಗೆ ಸಮಯ ಕಳೆಯಲು ನಮಗೆ ಜನರಿದ್ದಾರೆ, ಹಾಗೂ ನಾವೂ

ಕೂಡಾ ಸಣ್ಣ ಕೂಟಗಳು, ಗುಂಪುಗಳು, ಅನ್ಯೋನ್ಯತೆಗಳನ್ನು ಮನೆಯಲ್ಲಿ ಹೊಂದಿರುತ್ತೇವೆ, ಆದರೆ ಇವು ನಿಗದಿಯಾದ ಕಾರ್ಯಗಳು, ಎಲ್ಲಾ ದಿನ, ಪ್ರತಿದಿನ ನಡೆಯುವ ಏನೋ ಒಂದು ಅಲ್ಲ.

## ಹೊರಗೆ ಹೆಜ್ಜೆ ಇಡಬೇಡಿರಿ, ಒಳಗೆ ಹೆಜ್ಜೆ ಇಡಬೇಡಿರಿ

**"ಈ ಕಾರಣದಿಂದ ಪುರುಷನು ತಂದೆ ತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು; ಅವರಿಬ್ಬರು ಒಂದೇ ಶರೀರವಾಗಿರುವರು" (ಆದಿಕಾಂಡ 2:24).**

ವಿವಾಹದಲ್ಲಿ ಒಂದು ಗೂಡಿದ ಒಬ್ಬ ಪುರುಷ ಮತ್ತು ಮಹಿಳೆಯು ಒಂದಾಗುತ್ತಾರೆ. ಇದನ್ನು ನಾವು ಈ ಪುರುಷನು ಮತ್ತು ಸ್ತ್ರೀ ಮಾತ್ರ ಅನುಮತಿಸಲ್ಪಟ್ಟ ಒಂದು ವಿವಾಹ ವರ್ತುಲದೊಳಗೆ ಇರುವುದನ್ನು ಕಾಣುತ್ತೇವೆ. ಈ ವಿವಾಹ ವರ್ತುಲದೊಳಗೆ ಬೇರೆಯಾವ ಮಾನವ ಜೀವಿಯೂ ಸೇರುವಂತೆ ಅನುಮತಿ ಇಲ್ಲ, ಈ ವಿವಾಹ ವರ್ತುಲವನ್ನು ನಾವು ಗೌರವಿಸಿದರೆ, ವಿವಾಹವನ್ನು ನೆರವೇರಿಸಿದ ದೇವರನ್ನು ನಾವು ಗೌರವಿಸುತ್ತೇವೆ. ಕ್ರೈಸ್ತೀಯ ಸೇವಕರಾದ ನಮಗಾಗಿ, ನಾವು ನಮ್ಮ ಸ್ವಂತ ವಿವಾಹದ ವರ್ತುಲದ ಹೊರಗೆ ಹೆಜ್ಜೆ ಇಡುವುದಿಲ್ಲ ಎಂದು ನಿಶ್ಚಯ ಪಡಿಸುವುದರಿಮ್ದ ಹಾಗೂ ಬೇರೊಬ್ಬರ ವಿವಾಹ ವರ್ತುಲದ ಒಳಗೆ ನಾವು ಹೆಜ್ಜೆ ಇಡುವುದಿಲ್ಲ ಎಂದು ನಿಶ್ಚಯಪಡಿಸುವುದರಿಂದ ದೇವರಿಗೆ ಗೌರವ ಸಲ್ಲಿಸಬೇಕು. ಉದಾಸೀನತೆಯಿಂದ ಯಾವ ಕಾರಣಗಳು ಅಥವಾ ಅಗತ್ಯತೆಗಳಿದ್ದರೂ ಈ ವಿವಾಹದ ವರ್ತುಲದ ಈ ಸರಹದ್ದು ದಾಟಿ ಹೋಗಬಾರದು. ನಾವು ಈ ಸರಹದ್ದಿನೊಳಗಿನಿಂದ ಕಾರ್ಯಾಚರಣೆ ಮಾಡಲು ನಾವು ಕಲಿಯಬೇಕು. ಇದು. ವಿಶೇಷವಾಗಿ ಇತರ ವಿವಾಹವಾದ ದಂಪತಿಗಳಿಗೆ ಅಥವಾ ವಿಭಿನ್ನ ಲಿಂಗದ ಒಂಟಿ ಜನರಿಗೆ ನಾವು ಸೇವೆ ಮಾಡುವಾಗ, ಇದು ಪ್ರಾಮುಖ್ಯವಾಗುತ್ತದೆ.

## ನಿಮಗೆ ಅಗತ್ಯವೆನಿಸಿದ ಕೂಡಲೆ ಸಹಾಯ ಪಡೆಯಿರಿ

**"ಆತನೇ ಶಿರಸ್ಸು, ದೇಹವೆಲ್ಲಾ ಆತನ ದೊರೆತನದಲ್ಲಿದ್ದು ತನ್ನಲ್ಲಿರುವ ಎಲ್ಲ ನರಗಳಿಂದ ಬಿಗಿಯಾಗಿ ಜೋಡಿಸಲ್ಪಟ್ಟು ಪ್ರತಿ ಅಂಗದಿಂದ ಅದರದರ ಶಕ್ತಿಯ ಪ್ರಕಾರ ಸಹಾಯ ಹೊಂದಿ ಪ್ರೀತಿಯಿಂದ ಐಕ್ಯವಾಗಿದ್ದು ಕ್ಷೇಮಾಭಿವೃದ್ಧಿಯನ್ನು ಹೊಂದುತ್ತದೆ" (ಎಫೆಸದವರಿಗೆ 4:16).**

ವಿಷಯದ ಸತ್ಯತೆಯು, ಏನೆಂದರೆ, ಕ್ರೈಸ್ತೀಯ ಸೇವೆಯಲ್ಲಿರುವ ನಾವೂ ಕೂಡಾ ನಮ್ಮ ವಿವಾಹ ಹಾಗೂ ಕುಟುಂಬ ಜೀವಿತಗಳಲ್ಲಿ ಹೋರಾಟ ಮಾಡುತ್ತೇವೆ. ನಾವು ಸವಾಲುಗಳು, ಒತ್ತಡಗಳು, ಶೋಧನೆಗಳು ಹಾಗೂ ಕುಗ್ಗುವಿಕೆ ಪ್ರತಿಯೊಬ್ಬರನ್ನೂ ಒಳಗೊಳಸುತ್ತೇವೆ. ಬಹುಶಃ ಇತರರಿಗಿಂತಲೂ ಹೆಚ್ಚಾಗಿ, ಬಹಳ ಸ್ಥಿತಿಗಳಲ್ಲಿ ಹೀಗೆ ಆಗುತ್ತದೆ. ಕೇವಲ ನಾವು ಕ್ರೈಸ್ತೀಯ ಸೇವೆಯಲ್ಲಿರುವುದರಿಂದ ನಮಗೆ "ಸೇವೆಯ" ಅಗತ್ಯವಿಲ್ಲವೆಂಬುದಾಗಿ ಅರ್ಥಕೊಡುವುದಿಲ್ಲ, ದೇವರು ನಮ್ಮನ್ನು ಕರೆದಿದ್ದಾನೆ, ಅಭಿಷೇಕಿಸಿದ್ದಾನೆ ಹಾಗೂ ಕೆಲವು ನಿರ್ದಿಷ್ಟ ವಲಯಗಳಲ್ಲಿ ವರಗಳನ್ನು ಕೊಟ್ಟಿರುತ್ತಾನೆ. ಆದರೆ, ಆತನು ಹೀಗೆಯೇ ಕರೆದು, ಅಭಿಷೇಕಿಸಲ್ಪಟ್ಟ ಹಾಗೂ ಬೇರೆ ರೀತಿಗಳಲ್ಲಿ ವರಗಳನ್ನು ಹೊಂದಿದವರಿದ್ದಾರೆ. ಉದಾಃ ವಿವಾಹಗಳನ್ನು ಮನೆಗಳನ್ನು ಹಾಗೂ ಕುಟುಂಬಗಳನ್ನು ಬಲಪಡಿಸಲು, ಆರ್ಥಿಕ ಸ್ಥಿತಿ ನಿಭಾಯಿಸಲು, ವ್ಯವಸ್ಥೆಯಲ್ಲಿ ಹಾಗೂ ಮೇಲ್ವಿಚಾರಣೆ ಮಾಡಲು, ಸಹಾಯಮಾಡಲು, ಚಟ ಹಿಡಿಯುವ ನಡವಳಿಕೆಯಿಂದ ಹೊರಬರುವುದಕ್ಕೆ ಸಹಾಯವನ್ನು ಹೀಗೆ ನಾವು ಅವರಿಂದ ಪಡೆದುಕೊಳ್ಳಲು ಕಲಿಯುವ ಅಗತ್ಯವಿದೆ. ನಾವು ಒಂದು ದೇಹದ ಭಾಗವಾಗಿದ್ದೇವೆ. ಇಲ್ಲಿ ಪ್ರತಿಯೊಂದು ಭಾಗವೂ ಮತ್ತೊಬ್ಬರ ಉತ್ತಮತೆಗೆ ಕೊಡುಗೆ ನೀಡುತ್ತದೆ. ಇದರಿಂದ ಇಡೀ ದೇಹವು ಬೆಳೆಯಲು ಹಾಗೂ ತಿಳುವಳಿಕೆ ಹೊಂದಲು ಸಾಧ್ಯವಾಗುತ್ತದೆ. ಇದರ ಅರ್ಥವೇನೆಂದರೆ ನಾವು ಒಬ್ಬರಿಂದ ಒಬ್ಬರು ಪಡೆದುಕೊಳ್ಳಲು ಕಲಿಯುತ್ತೇವೆ.

ಕ್ರೈಸ್ತ ಸೇವಕರಾದ ನಮಗಾಗಿ ಮೊಟ್ಟಮೊದಲು ಸವಾಲು ಎಂದರೆ, ನಮಗೆ ಒಂದು ಅಗತ್ಯವಿದೆ ಎಂಬುದನ್ನು ಒಪ್ಪಿಕೊಳ್ಳುವುದು, ಆಗಾಗ್ಗೆ ನಾವು ಸಮಸ್ಯೆಗಳು ಹಾಗೂ ಸವಾಲುಗಳನ್ನು ಎದುರಿಸುವಾಗ, ನಮ್ಮ ವಿವಾಹಗಳಲ್ಲಾಗಲಿ, ಆರ್ಥಿಕ ವಿಷಯಗಳಲ್ಲಿ ಆಗಲಿ, ಸಂಸ್ಥೆಗಳಲ್ಲಿ, ಚಟ ಹೊಂದುವ ನಡವಳಿಕೆಗಳಲ್ಲಿ ಆಗಲಿ, ಅಥವಾ ಸ್ವಭಾವದ ಕೊರತೆಯಲ್ಲಾಗಲಿ ನಾವು ಸಮಸ್ಯೆಯನ್ನು ಆತ್ಮಿಕತೆಗೆ ತರಲು ಹವಣಿಸುತ್ತೇವೆ. ಪಿಶಾಚನನ್ನು ದೂರುತ್ತೇವೆ ಹಾಗೂ ನಾವು ಆತ್ಮಿಕತೆಯ ದಾಳಿಗೆ ಸಿಕ್ಕಿದ್ದೇವೆ ಎಂದು ತೀರ್ಮಾನಿಸುತ್ತೇವೆ. ನಾವು ಈ ವಲಯಗಳಲ್ಲಿ ಆತ್ಮಿಕತೆಯು ಅಡ್ಡಬರುವ ವಾಸ್ತವತೆಯನ್ನು ಉದಾಸೀನ ಮಾಡಬಾರದಂತಿರುವಾಗ, ಅದೇ

ಸಮಯದಲ್ಲಿನಾವು ಎದುರಿಸುವ ಹಲವಾರು ಸಮಸ್ಯೆಗಳು ನಮ್ಮ ಅಥವಾ ನಮ್ಮ ಸಂಪರ್ಕದಲ್ಲಿರುವವರ, ಸರಿಪಡಿಸಿಕೊಳ್ಳಬೇಕಾದ ತಪ್ಪುಗಳು ಹಾಗೂ ಬಲಹೀನತೆಗಳ ಬಗ್ಗೆ ನಾವು ಜಾಗೃತರಾಗಿರಬೇಕು. ದೇವರಿಂದ ಕರೆಯಲ್ಪಟ್ಟು ಅಭಿಷೇಕ ಹೊಂದಿರುವ ನಾವು ನಮ್ಮ ಸ್ವಂತ ಕೊರತೆಗಳು, ಮಿತಿಗಳು, ಅಶುದ್ಧತೆಯ ನಡುವಳಿಕೆಗಳು ಮುಂತಾದ ತಿಳುವಳಿಕೆ ಹೊಂದಬಹುದಾದ ಅಂಶಗಳ ವಾಸ್ತವ ದೊಂದಿಗೆ, ನಮ್ರತೆಯ ಮಹತ್ವದ ವ್ಯವಹಾರವು ಒಂದಾಗಬೇಕಾಗುತ್ತದೆ.

ಕ್ರೈಸ್ತೀಯ ಸೇವಕರಾದ ನಮಗಾಗಿ ಮುಂದಿನ ದೊಡ್ಡ ಸವಾಲು ನಮಗೆ ಅಗತ್ಯವಾದ ಸಹಾಯವನ್ನು ಹೊಂದುವುದು–ಸಹಾಯವನ್ನು ಎಲ್ಲಿಂದ ಪಡೆಯಬೇಕು ಹಾಗೂ ನಾವು ತೆಗೆದುಕೊಳ್ಳುವ ಸಹಾಯವು ಜೀವಿತದ ಒಂದು ನಿರ್ದಿಷ್ಟ ವಲಯದಲ್ಲಿ ನಮ್ಮ ಸೇವೆಯನ್ನು ಒಂದು ಅಂತ್ಯಕ್ಕೆ ತರುತ್ತದೋ ಏನೋ ಎಂಬುದು ನಮಗೆ ತಿಳಿದಿರುವುದಿಲ್ಲ, ನಮ್ಮ ಸಮಸ್ಯೆಯೊಂದಿಗೆ ನಮಗೆ ಸಹಾಯ ಮಾಡಬಹುದಾದ ಅರ್ಹತೆಯುಳ್ಳ ಜನರ ಬಗ್ಗೆ ನಾವು ಜಾಗೃತರಾಗಿರುವಲ್ಲಿ, ನಾವು ಅವರ ಬಳಿಗೆ ಹೋಗಲು ಹಿಂಜರಿಯುತ್ತೇವೆ. ಏಕೆಂದರೆ, ಅವರು ನಮ್ಮ ಶ್ರೀಮಂತ ವರ್ಗದವರಿರಬಹುದು ಅಥವಾ ನಮ್ಮಂತೆ ಕ್ರೈಸ್ತ ಪ್ರಪಂಚದಲ್ಲಿ ಅಷ್ಟೊಂದು ಪ್ರಮುಖರಲ್ಲದೆ ಇರಬಹುದು. ಸೊಕ್ಕು ಹಾದಿಯಲ್ಲಿ ಬರುತ್ತದೆ. ಮತ್ತೊಂದು ಕಾರಣವೇನೆಂದರೆ, ನಾವು ನಮ್ಮ ಸಮಸ್ಯೆಯನ್ನು ಬೇರೊಬ್ಬರಲ್ಲಿ ಹೇಳಿಕೊಂಡರೆ, ಅವರು ಅದನ್ನು ರಹಸ್ಯವಾಗಿಡಬಲ್ಲರೋ? ಅಥವಾ ಅವರು ಪಟ್ಟಣದ ಎಲ್ಲ ಕಡೆ ಸುತ್ತಾಡಿ ಇದರ ಕುರಿತು ಮಾತಾಡುತ್ತಾ ಕಾಳ್ಗಚ್ಚಿನಂತೆ ಇಡೀ ಕ್ರೈಸ್ತ ಸಮುದಾಯದಲ್ಲಿ ಸುದ್ದಿಯನ್ನು ಹಬ್ಬಿಸುತ್ತಾರೆ.

ಈ ಸವಾಲುಗಳನ್ನು ಹೊಂದಿಕೊಂಡು, ನಾವು ನಮ್ಮ ಖಾಸಗಿ ಸಮಸ್ಯೆಗಳನ್ನು ಅವು ಸುಮ್ಮನೆ ಹೊರಟುಹೋಗುತ್ತವೆ ಎಂಬ ನಿರೀಕ್ಷೆಯಲ್ಲಿ ಉದಾಸೀನ ಮಾಡಲು ಹವಣಿಸುತ್ತೇವೆ ಅಥವಾ ನಾವು ಸಹಾಯಕ್ಕಾಗಿ ಕೇಳಲಾರದಷ್ಟು ಮಟ್ಟಿಗೆ ಪೇಚಾಟ ಹೊಂದುತ್ತೇವೆ. ಬಹಳಷ್ಟು ಪರಿಸ್ಥಿತಿಗಳಲ್ಲಿ, ಸಮಸ್ಯೆಯು ಅಂಚಿನಲ್ಲಿ ಚಳಮಳಸಲಾರಂಭಿಸಿ, ಒಂದು ದಿನ ಆಘಾತಗಳು, ಪೇಚಾಟಗಳು, ಹಾಗೂ ದಿಗ್ಭ್ರಮೆಗಳು ಪ್ರತಿಯೊಬ್ಬರಿಗೂ ಹಿಂಸಾತ್ಮಕ ಸ್ಫೋಟನವಾಗುವವರೆಗೆ

ಮುಂದುವರಿಯುತ್ತದೆ. ಫಲಿತಾಂಶಗಳು ನಮಗೂ ಹಾಗೂ ನಮ್ಮ ಆತ್ಮಿಕ ನಾಯಕತ್ವದ ಕಡೆಗೆ ನೋಡುವವರಿಗೂ ನಾಶಕರವಾಗಿರುತ್ತವೆ. ಇದು ಅನೇಕರನ್ನು ನೋವಿನೊಳಗೆ ಹಾಗೂ ಯಾತನೆಯಲ್ಲಿ ಉಳಿಸುತ್ತವೆ. ನಾವು ನಿಧಾನ ಮಾಡದೆ, ನಮ್ಮ ಅಗತ್ಯತೆಯನ್ನು ನಾವು ಕಂಡಕೂಡಲೆ ಸಹಾಯವನ್ನು ಪಡೆಯಬೇಕಾದುದು ಮುಖ್ಯವಾಗಿದೆ. ನಮ್ಮ ಗರ್ವ ಮತ್ತು ಭಯವನ್ನು ನಾವು ಬದಿಗಿಟ್ಟು, ನಮಗೆ ಸಹಾಯಮಾಡಲು ಅರ್ಹರಾದ ಯಾರೊಬ್ಬರಲ್ಲಿಗಾದರೂ ಪ್ರಾರ್ಥನಾಪೂರ್ವಕವಾಗಿ ಹೋಗಬೇಕು. ಅವರನ್ನು ವಿಶ್ವಾಸದಲ್ಲಿ ತೆಗೆದುಕೊಂಡು, ನಮಗೆ ಅಗತ್ಯವಾದ ಸಹಾಯವನ್ನು ಅವರಿಂದ ತೆಗೆದುಕೊಳ್ಳೋಣ. ಹಿಂದಕ್ಕೆ ಹಿಡಿದಿಟ್ಟುಕೊಳ್ಳದೆ ನಮ್ಮ ಜೀವಿತಗಳಲ್ಲಿ ಅವರು ಮಾತನಾಡುವಂತೆ ಅವಕಾಶ ನೀಡಬೇಕು. ನಾವು ದೇವರ ಮುಂದೆ ಹಾಗೂ ದೇವರ ಸೇವಕರ ಮುಂದೆ ನಮ್ಮನ್ನು ತಗ್ಗಿಸಿಕೊಂಡು ನಮ್ಮ ಜೀವಿತಗಳಲ್ಲಿ ಅವರು ತರಬಹುದಾದ ತಿದ್ದುವಿಕೆಗಳನ್ನು ಪಡೆದುಕೊಳ್ಳೋಣ. ಈ ಸರಿಪಡಿಸುವಿಕೆಯು ನಮ್ಮನ್ನು ಹಾಗೂ ನಮ್ಮ ಜೀವಿತಗಳಿಗೆ ಸಂಬಂಧಿಸಿದ ಇತರ ಅನೇಕರನ್ನು ರಕ್ಷಿಸಲು ಸಾಧ್ಯ. "ಶಿಕ್ಷೆಯನ್ನು ಕೈಕೊಳ್ಳುವವನು ಜೀವದ ಮಾರ್ಗವನ್ನು ತೋರಿಸುವನು ಗದರಿಕೆಯನ್ನು ಕೈಕೊಳ್ಳದವರು ಸನ್ಮಾರ್ಗದಿಂದ ತಪ್ಪಿಸುವನು" (ಜ್ಞಾನೋಕ್ತಿಗಳು 10:17). "ತಿಳುವಳಿಕೆಯನ್ನು ಪ್ರೀತಿಸುವವನು ಶಿಕ್ಷಣವನ್ನು ಪ್ರೀತಿಸುತ್ತಾನೆ. ಪಶುಪ್ರಾಯನು ಗದರಿಕೆಯನ್ನು ದ್ವೇಷಿಸುತ್ತಾನೆ" (ಜ್ಞಾನೋಕ್ತಿಗಳು 12:1).

## ನಿಮ್ಮ ಸೇವೆಯು ಒಂದು "ಕುಟುಂಬ ವ್ಯವಹಾರ"ವಲ್ಲ

**"ನಾನಂತೂ ಅವರೊಂದಿಗೆ ಈ ಒಡಂಬಡಿಕೆಯನ್ನು ಮಾಡಿಕೊಳ್ಳುವೆನು, ನೋಡಿರಿ, ನಿಮ್ಮಲ್ಲಿ ಆವೇಶಿಸಿರುವ ನನ್ನ ಆತ್ಮವೂ ನಿಮ್ಮ ಬಾಯಿಗೆ ನಾನು ಕೊಟ್ಟಿರುವ ಮಾತುಗಳೂ ನಿಮ್ಮ ಬಾಯಿಂದಾಗಲಿ ನಿಮ್ಮ ಸಂತತಿಯ ಬಾಯಿಂದಾಗಲಿ ಇಂದಿನಿಂದ ಎಂದಿಗೂ ತೊಲಗುವುದಿಲ್ಲ ಎಂದು ಯೆಹೋವನು ಅನ್ನುತಾನೆ" (ಯೆಶಾಯ 59:21).**

ಒಂದು ಸಂತತಿಗೆ ನೀಡಲ್ಪಟ್ಟ ನಂಬಿಕೆ, ಪ್ರಕಟನೆ ಹಾಗೂ ಅಭಿಷೇಕವು ಮುಂದಿನ ಸಂತತಿಗೂ ಮುಂದುವರಿದಿರುವುದು ದೇವರ ಯೋಜನೆ ಮತ್ತು ಉದ್ದೇಶವಾಗಿದೆ. ಪ್ರತಿ ಸಂತತಿಯೂ ಹಿಂದಿನ ಸಂತತಿಯ ಅಸ್ತಿವಾರದ ಮೇಲೆ ಕಟ್ಟಲ್ಪಡುವುದೂ ದೇವರ ಉದ್ದೇಶವಾಗಿದೆ. ಆದ

ಕಾರಣ ಎಲ್ಲಾ ಕುಟುಂಬಗಳು ಹಾಗೂ ಜನರ ಸಂತತಿಯೂ ಒಂದು ವಂಶ ವೃಕ್ಷದೊಂದಿಗೆ ಕರ್ತನಿಗೆ ಸೇವೆ ಮಾಡುತ್ತಾ, ಆತನ ಕಾರ್ಯವನ್ನು ನಡಿಸಿಕೊಡುವುದನ್ನು ನೋಡುವುದು ಯಾವಾಗಲೂ ಅದ್ಭುತವಾಗಿರುತ್ತದೆ. ಇದು ಯಾವಾಗಲೂ ಗಮನಿಸಲು ಒಂದು ವಿಸ್ಮಯಕಾರಕ ನೋಟವು, ಸಂತೋಷಿಸಲು ಹಾಗೂ ದೇವರನ್ನು ಸ್ತುತಿಸಲು ಒಂದು ವಿಷಯವೂ ಆಗಿರುತ್ತದೆ. ಪ್ರತಿಯೊಬ್ಬ ಕುಟುಂಬದ ಸದಸ್ಯರೂ ವರಗಳನ್ನು ಹೊಂದಿ, ವಿಭಿನ್ನ ವಲಯಗಳಲ್ಲಿ ಅಭಿಷೇಕ ಹೊಂದಿರಬಹುದು. ಪ್ರತಿಯೊಬ್ಬರೂ ತಮ್ಮ ದೈವಿಕವಾದ ನೇಮಕವಾದ ಸ್ಥಳದಲ್ಲಿದ್ದಾರೆ ಹಾಗೂ ಅವರೆಲ್ಲರೂ ಕೆಲಸ ಮಾಡುತ್ತಾರೆ ಹಾಗೂ ಕ್ರಿಸ್ತನ ದೇಹಕ್ಕಾಗಿ ಒಂದೇ ಮಹಾ ಘಟಕವಾಗಿ ಒಟ್ಟಾಗಿ ಮುಂದೆ ಸಾಗುತ್ತಾರೆ. ಇದು ನಿಜವಾಗಿಯೂ ದೇವರ ಕಾರ್ಯದ ವಿಸ್ಮಯವಾಗಿದೆ.

ಹೇಗಾದರೂ, ಮತ್ತೊಂದು ಕಡೆಯಲ್ಲಿ ನಾವು ದೇವರು ಮಾಡಲು ಬಯಸಿರುವ ಒಂದು ದೈವಿಕ ಸ್ಥಿತಿಯ ತಪ್ಪಾದ ವ್ಯಕ್ತಪಡಿಸುವಿಕೆಯನ್ನು ನಾವು ನೋಡುತ್ತೇವೆ. ಬೇರೆ ಸಭೆಗಳಲ್ಲಿ ಹಾಗೂ ಸೇವೆಗಳಲ್ಲಿ ಕುಟುಂಬದ ಸದಸ್ಯರಿಂದ ತುಂಬಲ್ಪಟ್ಟಿರುವ ಹೊಣೆಗಾರಿಕೆಗಳ ಎಲ್ಲಾ ಆಧಾರ ಸ್ಥಾನಗಳನ್ನು ನಾವು ನೋಡುತ್ತೇವೆ. ಈ ಕುಟುಂಬ ಸದಸ್ಯರಲ್ಲಿ ಅನೇಕರು ಅಗತ್ಯವುಳ್ಳವರ ಹಾಗೂ ತಾವು ವ್ಯಾಪಿಸುವ ಪಾತ್ರವನ್ನು ನೆರವೇರಿಸುವ ಕೃಪೆ ಇಲ್ಲದೆ ಬಹುಶಃ ಅಯೋಗ್ಯರೆನಿಸಿಕೊಳ್ಳುವುದು ಬಹು ಕೆಟ್ಟದಾಗಿರುತ್ತದೆ. ಹೇಗಾದರೂ ಇಡೀ ಸಭೆ ಅಥವಾ ಸೇವೆಯು ಅದು ಒಂದು ಕುಟುಂಬದ ವ್ಯವಹಾರವೋ ಅಥವಾ ಸೇವೆಯು ಅದು ಒಂದು ಕುಟುಂಬದ ವ್ಯವಹಾರವೋ ಎಂಬಂತೆ ಸಾಗುತ್ತದೆ. ಹೊರಗಿನವರಿಗೆ ಜವಾಬ್ದಾರಿಕೆಯ ಅಂಚಿನ ಸ್ಥಳಗಳು ಮಾತ್ರ ಕೊಡಲ್ಪಡುತ್ತವೆ. ಇಂಥಾ ಒಂದು "ಕುಟುಂಬದ ಸಾಗುವಿಕೆ"ಯ ಸೇವೆಯಲ್ಲಿ ಕುಟುಂಬದ ಸದಸ್ಯರು, ದೇವರು ತಮ್ಮನ್ನು ಕರೆಯದೇ ಇರುವ ಸೇವೆಯ ಸ್ಥಾನಗಳಿಗೆ ವ್ಯಾಪಿಸಿಕೊಂಡಾಗ ವಿಷಯಗಳು ತಪ್ಪಾಗಿ ಹೋಗಲು ಆರಂಭಿಸುತ್ತವೆ. ಇದರ ಬಹಳಷ್ಟು ಅಂಶಗಳು ತಪ್ಪಾದ ಕಾರಣಗಳು ಹಾಗೂ ಫಲಿತಾಂಶಗಳಿಗಾಗಿ ಆಗುತ್ತವೆ, ಇದು ನಾಶಕರವಾದ ಏಲಿಯ ಮಕ್ಕಳಿಗಾದಂಥ (1 ಸಮುವೇಲ 2:22–25) ಅಥವಾ ಸಮುವೇಲನ ಮಕ್ಕಳಿಗಾದಂಥ ಪರಿಣಾಮಕ್ಕೆ (1 ಸಮುವೇಲ 8:1–3) ದಾರಿಯಾಗುತ್ತದೆ.

ಹೀಗಾಗಿ ನಮ್ಮ ಮಕ್ಕಳು ಹಾಗೂ ಮೊಮ್ಮಕ್ಕಳು ಮೇಲಕ್ಕೇರಿ, ಕರ್ತನ ಸೇವೆಯಲ್ಲಿ ನಮ್ಮ ಹೆಜ್ಜೆಗಳನ್ನು ಅನುಸರಿಸುವುದನ್ನು ಕಾಣಲು ನಾವು ಎಷ್ಟು ಮಟ್ಟಿಗೆ ಕಾತುರರಾಗಿರುತ್ತೇವೋ ಅಷ್ಟು ಮಟ್ಟಿಗೆ ಅವರು ದೇವರ ಯೋಜನೆಯನ್ನು ತಮ್ಮ ಜೀವಿತಗಳಿಗಾಗಿ ಹಾಗೂ ತಮ್ಮ ಸಂತತಿಯಲ್ಲಿ ಆತನ ಚಿತ್ತವನ್ನು ನೆರವೇರಿಸಲು ಅನುಸರಿಸಬೇಕಾಗಿದೆ ಎಂದು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಪ್ರತಿಯೊಬ್ಬರೂ ದೇವರಿಂದ ನೇಮಕ ಮಾಡಲ್ಪಟ್ಟ ತಮ್ಮ ಸಿದ್ಧಮಾಡಲಾದ ಸ್ಥಳವನ್ನು ವ್ಯಾಪಿಸಲಿ ಹಾಗೂ ಮನುಷ್ಯನ ಭ್ರಾಂತಿ ಮತ್ತು ಕಲ್ಪನೆಗಳಿಂದಲ್ಲ. *"ಆದರೆ ದೇವರು ಆ ಅಂಗಗಳಲ್ಲಿ ಪ್ರತಿಯೊಂದನ್ನು ತನಗೆ ಸರಿಯಾಗಿ ತೋಚಿದ ಪ್ರಕಾರ ಇಟ್ಟಿದ್ದಾನೆ"* (1 ಕೊರಿಂಥದವರಿಗೆ 12:18).



# ಜನರು

"... ನೀವು ದೇವರ ಹೊಲವೂ, ದೇವರ ಕಟ್ಟಡವೂ ಆಗಿದ್ದೀರಿ."

(1 ಕೊರಿಂಥದವರಿಗೆ 3:9)

ಅಧ್ಯಾಯ 3

# ೩

# ಜನರು

ಕ್ರೈಸ್ತ ಸೇವಕರಾಗಿ, ನಾವು ಜಾಗರೂಕರಾಗಿಲ್ಲದಿದ್ದರೆ, ನಾವು ಸಂಪೂರ್ಣವಾಗಿ "ಇಡೀ ಅಂಶವನ್ನು" ಕಳೆದುಕೊಳ್ಳುತ್ತೇವೆ. ನಾವು ಒಂದು ಸಾಹಸ ಕಾರ್ಯವನ್ನು ನಿರ್ಮಿಸುವುದರಲ್ಲಿ ಒಂದು ಅಭ್ಯಾಸದಿಂದ ಸೇವೆಯನ್ನು ಮುಗಿಸಬಹುದು. ಇದಕ್ಕೆ ಅತ್ಯಾಧುನಿಕ ಸಾಧನಗಳು, ಸಲಕರಣೆ ಮತ್ತು ಸಂಪನ್ಮೂಲಗಳೊಂದಿಗೆ ಒಂದು ಸುವ್ಯವಸ್ಥಿತವಾದ ಆಡಳಿತ ಅಥವಾ ಕಾರ್ಯದ ವ್ಯವಸ್ಥಾಪನೆಯಲ್ಲಿ ಒಂದು ಅಭ್ಯಾಸಗಳೊಂದಿಗೆ, ವೈಭವದ ಸಾರ್ವಜನಿಕ ಕೂಟಗಳು, ಉತ್ತಮ ಜಾಹೀರಾತುಗಳು, ಚತುರತೆಯುಳ್ಳ ಬಡ್ತಿಗಳು, ಚಾತುರ್ಯದಿಂದ ಹಣ ಸಂಗ್ರಹಣೆ ಇತ್ಯಾದಿಗಳು, ಸಹಾಯಕವಾಗಿವೆ. ಅಥವಾ ನೆಟ್‌ವರ್ಕ್ ಹಾಗೂ ಸಾರ್ವಜನಿಕ ಸಂಬಂಧಗಳಲ್ಲಿ ಒಂದು ಅಭ್ಯಾಸವು ಅತ್ಯಂತ ಹೆಚ್ಚಿನ ಪ್ರಭಾವಿತರಾದ ಜನರು, ಉನ್ನತರಾದ ಹಾಗೂ ಪ್ರಬಲರಾದವರೊಂದಿಗೆ ಸೌಮ್ಯವಾದ ಮಾತು—ಇದರೊಂದಿಗೆ ಸಂಬಂಧ ಹೊಂದಿ ಅವರು ಹೀಗೆ ನಮ್ಮ ಪ್ರಮುಖ ಪವರ್ತಕರಾಗುತ್ತಾರೆ. ಇವೆಲ್ಲವೂ ಕೇವಲ ಒಂದು ಮಾಂಸಧಾರಿಯಾದ, ಲೌಕಿಕವಾದ "ಕ್ರೈಸ್ತೀಯ ಸೇವೆಯ" ವ್ಯಕ್ತಪಡಿಸುವಿಕೆಯಾಗಿರುತ್ತದೆ, ಇದನ್ನು ನಾನು ದೇವರ ಮುಂದಿನ ಅಸಹನೀಯ ದುರ್ಗಂಧವೆಂದು ಯೋಚಿಸುತ್ತೇನೆ! ನಿತ್ಯತ್ವವು ಹೇಳುತ್ತದೆ! ಕ್ರೈಸ್ತೀಯ ಸೇವೆಯು ಜನರ ಬಗ್ಗೆ—ಜೀವಿತಗಳನ್ನು ದೇವರ ಪ್ರೀತಿ ಹಾಗೂ ಶಕ್ತಿಯೊಂದಿಗೆ ಸ್ಪರ್ಶಿಸಿ, ಅವರು ಸೈತಾನನಿಂದ ಬಿಡುಗಡೆ ಹೊಂದಿ ದೇವರ ಅಸಾಧಾರಣವಾದ ಬೆಳಕಿನೊಳಗೆ ತರಲ್ಪಟ್ಟು ಕ್ರಿಸ್ತನಂತೆ ಪೋಷಿಸಲ್ಪಟ್ಟು, ಜೀವಿತದಲ್ಲಿ ದೈವದತ್ತವಾದ ತಮ್ಮ ಹಣೆಬರಹವನ್ನು ನೆರವೇರಿಸಲು ಬಿಡುಗಡೆ ಹೊಂದಬೇಕೆಂಬ ಇಡೀ ಅಂಶವನ್ನು ನಾವು ಕಳೆದುಕೊಳ್ಳುತ್ತೇವೆ. ಕ್ರೈಸ್ತೀಯ ಸೇವೆಯು ನಾವು ಎಷ್ಟು ಪುಸ್ತಕಗಳನ್ನು ಬರೆದಿದ್ದೇವೆ, ನಾವು ಅತ್ಯಂತ ದೊಡ್ಡದಾದ ಜನರ ಗುಂಪನ್ನು ಹೊಂದಿರುತ್ತೇವೋ, ಸಾಮಾಜಿಕ ಮಾಧ್ಯಮಗಳ ನಿವೇಶನಗಳ ಮೇಲೆ

ಬಹು ದೊಡ್ಡದಾದ ಅನುಸರಿಸುವಿಕೆ ಹೊಂದಿರುತ್ತೇವೋ, ಅಥವಾ ನಾವು ಅತ್ಯಂತ ಹೆಚ್ಚು ಪ್ರಿಯವಾದ ದೂರವಾಣಿ ಜಾಲಬಂಧ ಹೊಂದಿರುತ್ತೇವೋ ಅಥವಾ ಇಂಥಾ ಏನಾದರೂ ಅಂಶಗಳ ಬಗ್ಗೆ ಇರುವಂಥದ್ದಲ್ಲ, ಕ್ರೈಸ್ತೀಯ ಸೇವೆಯು ಇರುವುದು ಎಲ್ಲಾ ಜನರ ಬಗ್ಗೆ ಅವರು ಯೇಸು ಕ್ರಿಸ್ತನನ್ನು ಎದುರಿಸಿ, ಆತನ ಸ್ವರೂಪದಲ್ಲಿ ಅವರು ಬದಲಾವಣೆ ಹೊಂದಿರುವುದನ್ನು ನೋಡುವಂಥ ಅಂಶವಾಗಿದೆ. ಹಾಗೂ ಇನ್ನೂ, ಕೆಲವು ಅತ್ಯಂತ ದೊಡ್ಡ ಸವಾಲುಗಳನ್ನು ನಾವು ಕ್ರೈಸ್ತ ಸೇವೆಯಲ್ಲಿ ಎದುರಿಸುತ್ತೇವೆ. ಇದು ಜನರೊಂದಿಗೆ ವ್ಯವಹರಿಸಿ, ಅವರೊಂದಿಗೆ ಕೆಲಸ ಮಾಡುವುದಾಗಿದೆ ಜನರನ್ನು ಹೇಗೆ ನಿಭಾಯಿಸುವುದು, ನಡೆಸುವುದು, ನಿರ್ವಹಿಸುವುದು, ಮಾರ್ಗದರ್ಶನ ಮಾಡುವುದು, ತಪ್ಪು ತಿದ್ದುವುದು, ಸಜ್ಜುಗೊಳಿಸುವುದು, ಬಲಪಡಿಸುವುದು ಹಾಗೂ ನಂತರ ಜನರ ಹಣೆಬರಹದೊಳಕ್ಕೆ ಬಿಡುಗಡೆ ಮಾಡುವುದು, ಮುಂತಾದವುಗಳನ್ನು ಅರ್ಥಮಾಡಿಕೊಳ್ಳುವುದು. ಕ್ರೈಸ್ತೀಯ ಸೇವೆಯಲ್ಲಿ ನಾವು ಹೊಂದಬಹುದಾದ ಪ್ರಾಮುಖ್ಯವಾದ ಕಲಿಕೆಯ ಅನುಭವಗಳಾಗಿರುತ್ತವೆ. ನಾವು ತಪ್ಪುಗಳನ್ನು ಮಾಡುತ್ತೇವೆ ಹಾಗೂ ಬಹುಶಃ ಈ ದಾರಿಯಲ್ಲಿ ಕೆಲವು "ಕಠಿಣ ಬಡಿತ"ಗಳನ್ನು ಅನುಭವಿಸ್ತುವೆ. ಆದರೆ ಜನರನ್ನು ಕಟ್ಟುವುದರ ಮೇಲೆ ನಾವು ಬಿಟ್ಟು ಬಿಡದಿದ್ದರೆ ನಾವು ಸಿರಿವಂತ ಪ್ರತಿಫಲಗಳನ್ನು ಹೊಂದುತ್ತೇವೆ.

## ಸೇವೆ ಎಂದರೆ ಜನರನ್ನು ಕಟ್ಟುವ ಬಗ್ಗೆ ಇರುವಂಥದ್ದಾಗಿದೆ

**"ನೀವು ದೇವರ ಹೊಲವೂ ದೇವರ ಕಟ್ಟಡ ಆಗಿದ್ದೀರಿ"** (1 ಕೊರಿಂಥದವರಿಗೆ 3:9).

**"ನೀವೇ ನಮ್ಮ ಯೋಗ್ಯತಾ ಪತ್ರ; ಅದು ನಮ್ಮ ಹೃದಯಗಳಲ್ಲೇ ಬರೆದರೆ; ಆ ಪತ್ರವನ್ನು ಎಲ್ಲರೂ ಬಲ್ಲರು, ಎಲ್ಲರೂ ಓದುತ್ತಾರೆ"** (2 ಕೊರಿಂಥದವರಿಗೆ 3:2).

**"ನಮ್ಮ ಕರ್ತನಾದ ಯೇಸು ಪ್ರತ್ಯಕ್ಷನಾಗುವಾಗ ಆತನ ಮುಂದೆ ನಮ್ಮ ಭರವಸವೂ, ನಮ್ಮ ಸಂತೋಷವೂ ನಾವು ಹೊಗಳಿಕೊಳ್ಳುವ ಜಯಮಾಲೆಯೂ ಯಾರು? ನೀವೇ ಅಲ್ಲವೇ. ನಿಜವಾಗಿ ನೀವೇ ನಮ್ಮ ಗೌರವವೂ ಸಂತೋಷವೂ ಆಗಿದ್ದೀರಿ"** (1 ಥೆಸಲೋನಿಕದವರಿಗೆ 2:19–20).

1 ಕೊರಿಂಥದವರಿಗೆ 3 ರಲ್ಲಿ ಅಪೊಸ್ತಲನಾದ ಪೌಲನು ಕೊರಿಂಥದಲ್ಲಿ ಸೇವೆಯ ಘಟನೆಗಳ ಬಗ್ಗೆ ಹೇಳುವಾಗ ವಿಶೇಷವಾಗಿ ಅಪೊಲ್ಲೋಸನು ಹಾಗೂ ತಾನು ಇಬ್ಬರ ಪರಿಚ್ಛೇದದಲ್ಲಿ, "ಜನರು"

ದೇವರ ಹೊಲ, ಹಾಗೂ "ಜನರು" ದೇವರ ಕಟ್ಟಡವಾಗಿರುವುದಾಗಿ ಒತ್ತಿ ಒತ್ತಿ ಹೇಳುತ್ತಾನೆ. ಇವೆಲ್ಲದರ ಕೊನೆಯಲ್ಲಿ ಅಪೊಲ್ಲೋಸನು ಮತ್ತು ಪೌಲ ಇಬ್ಬರೂ ದೇವರ ಕಟ್ಟಡವನ್ನು ಕಟ್ಟುತ್ತಿದ್ದರು—ಅಂದರೆ "ಜನರು" ಅಪೊಲ್ಲೋಸನು ಹಾಗೂ ಪೌಲ ಇಬ್ಬರೂ ದೇವರ ಹೊಲದಲ್ಲಿ ಕೆಲಸ ಮಾಡುತ್ತಿದ್ದರು, ಅಂದರೆ "ಜನರು" ಇದರಿಂದ ನಾವು ಯಾವ ರೀತಿಯ ಸೇವೆಯನ್ನು ಮಾಡುತ್ತಿದ್ದೇವೆಂಬುದನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳದೆ ನಾವು ದೇವರ ಹೊಲದಲ್ಲಿ ಹಾಗೂ ದೇವರ ಕಟ್ಟಡವನ್ನು ಕಟ್ಟುವುದರಲ್ಲಿ ಕೆಲಸ ಮಾಡುತ್ತೇವೆ. ಅಂದರೆ "ಜನರು" ಕ್ರೈಸ್ತ ಸೇವೆಯು ಎಲ್ಲಾ ರೀತಿಯಲ್ಲಿ "ಜನರ" ಸೇವೆ ಮಾಡುವುದು ಹಾಗೂ ಕಟ್ಟುವುದರ ಬಗ್ಗೆ ಆಗಿದೆ.

ದುರದೃಕರವಾಗಿ ನಮ್ಮಲ್ಲಿ ಅನೇಕ ಕ್ರೈಸ್ತ ಸೇವಕರು ತಮ್ಮ ಸ್ವಂತ ಕಾರ್ಯಗಳು ನಡೆಯಬೇಕೆಂಬ ಉದ್ದೇಶದಿಂದ ಜನರನ್ನು ವಸ್ತುಗಳಂತೆ ನಡೆಸಿಕೊಳ್ಳುತ್ತಾರೆ. ಬರಲು ನಮಗೆ ಗುಂಪಾಗಿ ಜನರು ಬೇಕು ಹಾಗೂ ಜನರು ದೊಡ್ಡ ಕೂಟಗಳಲ್ಲಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ನಾವು ಮಾತನಾಡಬೇಕು ನಮಗೆ ಹಣಬೇಕು, ಹಾಗೂ ಜನರು ಹಣಕ್ಕೆ ಮೂಲವಾಗಿರಲುಬೇಕು. ನಾವು ದೇವರಿಂದ ಕರೆಯಲ್ಪಟ್ಟು ಹಾಗೂ ಜನರು ನಮ್ಮ ಸೇವೆ ಮಾಡಲು ಹಾಗೂ ನಮ್ಮ ಕರೆಯ ನೆರವೇರಿಸಲು ಬೇಕು ಎಂದುಕೊಳ್ಳುತ್ತೇವೆ. ವಾಸ್ತವವಾಗಿ ಇದು ಬೇರೆ ಮಾರ್ಗವಾಗಿದೆ ನಾವು ದೇವರ ಸೇವಕರಾಗಿ ಜನರ ಸೇವೆ ಮಾಡಲು ಹಾಗೂ ಜನರಿಗೆ (ದೇವ ಜನರಿಗೆ) ಸಹಾಯ ಮಾಡಲು, ಅವರ ಸೇವೆಯನ್ನು ನೆರವೇರಿಸಲು ಇದ್ದೇವೆ. ನಾವಿಲ್ಲಿ ಅವರಿಗಾಗಿ ಇದ್ದೇವೆ–ಜನರು ನಮ್ಮನ್ನು ಮೇಲಕ್ಕೆತ್ತಲು ಅಲ್ಲ.

ಜನರು ನಮ್ಮ ಹೃದಯಗಳಲ್ಲಿ ಬರೆಯಲ್ಪಡಬೇಕು. ಆಗ ಮಾತ್ರ ಅವರು ತಮಗಾಗಿ ಸೇವೆಮಾಡಲು ನಾವು ಇಲ್ಲಿದ್ದೇವೆ. ಅವರನ್ನು ಬಳಸಿಕೊಳ್ಳಲು ಅಲ್ಲ, ಎಂಬುದನ್ನು ಕಾಣುತ್ತಾರೆ. ನಾವು ಕರ್ತನನ್ನು ಸಂಧಿಸುವಾಗ, ನಾವು ಬರೆದ ಪುಸ್ತಕಗಳು ನಾವು ಬೋಧಿಸಿದ ಬೋಧನೆಗಳು, ನಾವು ಪ್ರಯಾಣಿಸಿದ ಸ್ಥಳಗಳು, ನಾವು ಕಟ್ಟಿದ ಕಟ್ಟಡಗಳು, ನಮ್ಮ ಸಂತೋಷ ಹಾಗೂ ಉಲ್ಲಾಸದ ಕಿರೀಟವು ಆಗಿರುವುದಿಲ್ಲ. ಆದರೆ, ಹೇಗಾದರೂ ನಾವು ಯಾರ ಜೀವಿತಗಳಿಗೆ ಕರ್ತನ ಬಳಿಗೆ ತರುವುದರಿಂದ ಹಾಗೂ ಆತನ

ಸ್ವರೂಪದಲ್ಲಿ ಅವರನ್ನು ಬೆಳೆಸಲು ಸಹಾಯ ಮಾಡುವುದರಿಂದ ನಾವು ಸೇವೆ ಮಾಡಿದೆವೋ ಆ ಜನರೇ ನಮ್ಮ ಸಂತೋಷ ಹಾಗೂ ಉಲ್ಲಾಸ ಪಡುವ ಕಿರೀಟವಾಗಿರುತ್ತಾರೆ.

## ಬೆಳವಣಿಗೆಯ ಹಂತಗಳಲ್ಲಿ ಸಂಭವಿಸುತ್ತದೆ—ಸಹನೆಯಿಂದ ಒಟ್ಟಾಗಿ ಪ್ರಯಾಣ

**"ಕಾಲವನ್ನು ನೋಡಿದರೆ ನೀವು ಇಷ್ಟರೊಳಗೆ ಬೋಧಕರಾಗಿರಬೇಕಾಗಿದ್ದರೂ ಒಬ್ಬನು ನಿಮಗೆ ದೈವೋಕ್ತಿಗಳ ಮೂಲ ಪಾಠಗಳನ್ನು ತಿರಿಗಿ ಕಲಿಸಿಕೊಡಬೇಕಾಗಿದೆ. ನೀವು ಹಾಲು ಕುಡಿಯತಕ್ಕವರೇ ಹೊರತು ಗಟ್ಟಿಯಾದ ಆಹಾರವನ್ನು ತಿನ್ನತಕ್ಕವರಲ್ಲ. ಹಾಲು ಬೇಕಾದವನು ಕೂಸಿನಂತಿದ್ದು ನೀತಿ ವಾಕ್ಯದಲ್ಲಿ ಅನುಭವವಿಲ್ಲದವನಾಗಿದ್ದಾನೆ. ಗಟ್ಟಿಯಾದ ಆಹಾರವು ಪ್ರಾಯಸ್ಥರಿಗೋಸ್ಕರ ಅಂದರೆ ಜ್ಞಾನೇಂದ್ರಿಯಗಳನ್ನು ಸಾಧನೆಯಿಂದ ಶಿಕ್ಷಿಸಿಕೊಂಡು ಇದು ಒಳ್ಳೆದು ಅದು ಕೆಟ್ಟದ್ದು ಎಂಬ ಭೇದವನ್ನು ತಿಳಿದವರಿಗೋಸ್ಕರವಾಗಿದೆ. ಆದದರಿಂದ ನಿರ್ಜೀವ ಕರ್ಮಗಳ ಮೇಲಣ ನಂಬಿಕೆಯನ್ನು ಬಿಟ್ಟು ಬಿಟ್ಟು ದೇವರಲ್ಲಿಯೇ ನಂಬಿಕೆಯಿಡಬೇಕಾದದ್ದು, ಸ್ನಾನ ಹಸ್ತಾರ್ಪಣಗಳ ವಿಷಯವಾದ ಉಪದೇಶ, ಸತ್ತವರಿಗೆ ಪುನರುತ್ಥಾನವೂ ನಿತ್ಯವಾದ ನ್ಯಾಯತೀರ್ಪು ಉಂಟೆಂಬುದು ಇವುಗಳನ್ನು ಪದೇ ಪದೇ ಅಸ್ತಿವಾರವಾಗಿ ಹಾಕದೆ ಕ್ರಿಸ್ತನ ವಿಷಯವಾದ ಪ್ರಥಮ ಭೋಧನೆಯನ್ನು ಕುರಿತು ಇನ್ನೂ ಮಾತಾಡದೆ ಪೂರ್ಣವಾದ ತಿಳುವಳಿಕೆಗೆ ಸಾಗುತ್ತಾ ಹೋಗೋಣ, ಮತ್ತು ದೇವರ ಚಿತ್ತವಾದರೆ ಹೀಗೆ ಸಾಗುತ್ತಾ ಹೋಗುವೆವು"** (ಇಬ್ರಿಯರಿಗೆ 5:12–6:3).

ಇದು ನಮಗೆ ಪ್ರಾಮುಖ್ಯವಾಗಿದೆ, ವಿಶೇಷವಾಗಿ ನಮ್ಮಲ್ಲಿರುವ ಸ್ಥಳೀಯ ಸಭೆಗಳನ್ನು ಪಾಲಿಸಿ ನಡಿಸುವ ನಾವು, ಸಹನೆಯಿಂದ ಜನರೊಂದಿಗೆ ಆತ್ಮಿಕ ಬೆಳವಣಿಗೆ ಹಾಗೂ ಪಕ್ವತೆಯೊಳಗೆ ಪ್ರಯಾಣ ಮಾಡುವ ಅಗತ್ಯವಿದೆ. ನಾವು ಕೂಡಾ ದೇವರು ಸ್ಥಳೀಯ ಸಭೆಗಾಗಿ ನೇಮಕ ಮಾಡಿರುವ, ದರ್ಶನ ಹಾಗೂ ಅದೃಷ್ಟಗಳಲ್ಲಿ ಸಹನೆಯಿಂದ ಪ್ರಯಾಣ ಮಾಡಬೇಕು. ಜನರಿಗೆ ಸೇವೆಮಾಡುವುದು ಅವರು ಎಲ್ಲಿರುತ್ತಾರೋ ಅಲ್ಲಿ ಆರಂಭವಾಗಬೇಕು. ಹಾಗೂ ಬೆಳವಣಿಗೆ ಹಾಗೂ ಪಕ್ವತೆಯ ಉನ್ನತ ಹಂತಗಳಲ್ಲಿ ಸಾಗಲು ಹೆಜ್ಜೆ ತೆಗೆದುಕೊಳ್ಳಲು ಅವರಿಗೆ ಸಹಾಯ ಮಾಡಬೇಕು, ಕರ್ತನಾದ ಯೇಸುವು ಈ ರೀತಿಯಾಗಿ ತನ್ನ ಶಿಷ್ಯರಿಗೆ ಸೇವೆ ಮಾಡಿದನು ಆತನು ಉದ್ದೇಶಪೂರ್ವಕವಾಗಿ ಮಾತನಾಡಿದನು. ಹಾಗೂ ಅವರು ಆ ಕಾಲದಲ್ಲಿ ಪಡೆಯಲು ಸಮರ್ಥರಾಗುವಂತೆ ವಿಷಯಗಳನ್ನು ಹಾಗೂ ತಾವು ಪಡೆಯಲು ಸಿದ್ಧವಾಗಿಲ್ಲದ ಅಂಶಗಳನ್ನು ಹಿಂದಕ್ಕಿಡಲಿಕ್ಕಾಗುವಂತೆ ಮಾತನಾಡಿದನು.

*“ನೀವು ಧೈರ್ಯಗೆಟ್ಟು ಹಿಂಜರಿಯಬಾರದೆಂದು ಇದನ್ನೆಲ್ಲಾ ನಿಮಗೆ ಹೇಳಿದ್ದೇನೆ. ಆ ಕಾಲ ಬಂದಾಗ ಆತನು ನಮಗೆ ಇಂಥದನ್ನು ಹೇಳಿದನಲ್ಲಾ ಎಂದು ನೀವು ನೆನಪಿಗೆ ತರುವಂತೆ ನಿಮ್ಮ ಸಂಗಡ ಈ ಮಾತುಗಳನ್ನು ಆಡಿದ್ದೇನೆ" ನಾನು ನಿಮಗೆ ಹೇಳಬೇಕಾದದ್ದು ಇನ್ನೂ ಬಹಳ ಉಂಟು; ಆದರೆ ಸದ್ಯಕ್ಕೆ ಅದನ್ನು ಹೊರಲಾರಿರಿ”* (ಯೋಹಾನ 16:1,4,12).

ಇದರ ಅರ್ಥವೇನೆಂದರೆ, ನಮ್ಮ ಬೋಧನೆ ಹಾಗೂ ಉಪದೇಶದಲ್ಲಿ ನಾವು ಉದ್ದೇಶಪೂರ್ವಕವಾಗಿರಬೇಕು ಎಂಬುದೇ. ನಾವು ಆರಾಧನೆಯ ಸಮಯದಲ್ಲಿ ಸುಮ್ಮನೆ ಕಾಲವನ್ನು ತುಂಬಲು ನಾವು ಪ್ರಸಂಗಗಳನ್ನು ಮಾಡುವುದಿಲ್ಲ. ಹೇಗಾದರೂ ಪ್ರತಿಯೊಂದು ಪ್ರಸಂಗವೂ ಪ್ರಯಾಣದಲ್ಲಿ ಒಂದು ಹೆಜ್ಜೆಯಾಗಿರುತ್ತದೆ. ಸಹಾಯ ಮಾಡುವುದು ಸಭಿಕರನ್ನು ಆತ್ಮಿಕ ಪಕ್ವತೆ ದೇವರಲ್ಲಿ ನಮ್ಮ ಅದೃಷ್ಟದೊಳಕ್ಕೆ ಮುನ್ನಡಿಸುತ್ತದೆ.

ಜನರು ಎಲ್ಲಿದ್ದಾರೋ ಆತ್ಮಿಕ ಮಟ್ಟವನ್ನು ತಿಳಿದು, ಅವರು ಯಾವ ಮಟ್ಟದಲ್ಲಿದ್ದಾರೋ ಅಲ್ಲಿಂದ ಆರಂಭಿಸಬೇಕು. ಹೇಗಾದರೂ ನಿಮ್ಮ ಬೋಧನೆ ಹಾಗೂ ಉಪದೇಶವು ಮುಂದಿನ ಮಟ್ಟಕ್ಕೆ ತೆಗೆದುಕೊಂಡು ಹೋಗುವಷ್ಟುಮಟ್ಟಿಗೆ ಸಜ್ಜುಗೊಳಿಸಬೇಕು. ಬೆಳವಣಿಗೆಯು ಹಂತಗಳಲ್ಲಿ ಸಂಭವಿಸುತ್ತದೆ. ಇದರಿಂದ ಜನರನ್ನು ಹೊಸಮಟ್ಟಗಳಿಗೆ ಮೇಲಕ್ಕೆ ತೆಗೆದುಕೊಂಡು ಹೋಗಿರಿ, ಹಾಗೇ ಹಂತ ಹಂತವಾಗಿ ಹೋಗಿರಿ—ನೀವು ಬಹುಶಃ ಸ್ವಲ್ಪ ಉನ್ನತ ಮಟ್ಟಕ್ಕೆ ಏರಿರಬಹುದು—ಆದರೆ ನೀವು ನಿಮ್ಮ ಸಭಿಕರೊಂದಿಗೆ ತಾಳೆಯಿಂದ ಕೆಲಸ ಮಾಡುವ ಅಗತ್ಯವಿದೆ. ನೀವು ಇರುವ ಮಟ್ಟಕ್ಕೆ ಅವರು ಬೆಳೆಯುವಂತೆ ಸಹಾಯಿಸಬೇಕು.

ಹಾಗೂ ಸಭೆಯಲ್ಲಿರುವ ಜನರು ಹೇಗಿರುತ್ತರೋ ಹಾಗೆ ನಾವು ಬೋಧಿಸಲಾರೆವು ಎಂಬುದಾಗಿ ನೆನಪುಮಾಡಿಕೊಳ್ಳಿರಿ—ಏಕೆಂದರೆ ವಿಭಿನ್ನ ರೀತಿಯ ಜನರು ವಿಭಿನ್ನ ರೀತಿಯ ವಿಷಯಗಳನ್ನು ಕೇಳಿಸಿಕೊಳ್ಳಲು ಬಯಸುತ್ತಾರೆ. ಕೆಲವರು ಅಂತ್ಯಕಾಲಗಳ' ಬಗ್ಗೆ ಮಾತನಾಡುವುದು ನಾವು ಮಾಡಬೇಕಾದ ಅಗತ್ಯವಾಗಿದೆ ಎಂದು ಭಾವಿಸುತ್ತಾರೆ. ಇತರ ಕೆಲವರು ನಾವು ಶಿಷ್ಯತ್ವ ಹಾಗೂ ಅನ್ಯೋನ್ಯತೆಗಳ ಕುರಿತು ಮಾತನಾಡುವ ಅಗತ್ಯ ನಮಗಿದೆ ಎಂದು ಭಾವಿಸುತ್ತಾರೆ ಇನ್ನೂ ಇತರ ಕೆಲವರು ನಾವು ಸೌವಾರ್ತಿಕತೆ ಹಾಗೂ ಸೇವೆಗಳ ಮೇಲೆ ಒತ್ತಡ

ಹೇರಬೇಕು ಎಂದೆಲ್ಲಾ ಭಾವಿಸುತ್ತಾರೆ. ಒಬ್ಬ ಸ್ಥಳೀಯ ಸಭೆಯ ಸಭಾ ಪಾಲಕನಾಗಿ ಅಥವಾ ನಾಯಕನಾಗಿ ಈ ಎಲ್ಲಾ ಬೇಡಿಕೆಗಳಿಂದ ಹಾಗೂ ವಿಭಿನ್ನ ಜನರಿಂದ ಗ್ರಹಿಸಲ್ಪಟ್ಟ ಆಸಕ್ತಿಗಳಿಂದ ನೀವು ಸ್ಪಂದಿಸಲಾರಿರಿ. ಸಭೆಯು ಎಲ್ಲಿ ಆತ್ಮಿಕವಾಗಿ, ಹಾಗೂ ಸಭೆಯು ಎಲ್ಲಿ ಬೆಳೆಯಬೇಕೆಂದು ದೇವರು ಬಯಸುವುದನ್ನು ನೀವು ನಂಬುವಿರಿ ಹಾಗೂ ಅಲ್ಲಿಗೆ ಅವರನ್ನು ಕೊಂಡೊಯ್ಯಬೇಕೆಂಬುದನ್ನು ನೀವು ಸ್ಪಷ್ಟಪಡಿಸಿಕೊಳ್ಳಬೇಕಾದ ಅಗತ್ಯವಿದೆ. ಕಾಲ ಕಾಲಕ್ಕೆ ಹಂತ ಹಂತವಾಗಿ ಪ್ರಯಾಣ ಮಾಡಿರಿ. ಪ್ರತಿಯೊಂದು ಕಾಲದ ಒತ್ತಡವು, ಮುಂದಿನ ಕಾಲದೊಳಕ್ಕೆ ಇದು ವಿಶ್ವಾಸಿಗಳ ಸ್ಥಳೀಯ ಅಂಗವನ್ನು ಕಾಯುವ ಒಂದು ಮೆಟ್ಟುಗಲ್ಲು ಆಗಿದೆ.

## ಪ್ರತಿಯೊಬ್ಬರನ್ನೂ ಸನ್ಮಾನಿಸಿರಿ

**"ಕ್ರೈಸ್ತ ಸಹೋದರರು ಅಣ್ಣತಮ್ಮಂದಿರೆಂದು ಒಬ್ಬರನ್ನೊಬ್ಬರು ಪ್ರೀತಿಸಿರಿ. ಮಾನಮರ್ಯಾದೆಯನ್ನು ತೋರಿಸುವುದರಲ್ಲಿ ಒಬ್ಬರಿಗಿಂತ ಒಬ್ಬರು ಮುಂದ್ದಾಗಿರಿ"** (ರೋಮಾಪುರದವರಿಗೆ 12:10).

**"ಈ ಚಿಕ್ಕವರಲ್ಲಿ ಒಬ್ಬನಿಗೆ ಯೇಸುವಿನ ಶಿಷ್ಯನೆಂದು ಯಾವನಾದರೂ ಒಂದು ತಂಬಿಗೆ ತಣ್ಣೀರನ್ನಾದರೂ ಕುಡಿಯುವುದಕ್ಕೆ ಕೊಟ್ಟರೆ ಬರತಕ್ಕ ಪ್ರತಿಫಲವು ಅವನಿಗೆ ತಪ್ಪುವುದೇ ಇಲ್ಲವೆಂದು ನಿಮಗೆ ಸತ್ಯವಾಗೆ ಹೇಳುತ್ತೇನೆ ಅಂದನು."** (ಮತ್ತಾಯ 10:42).

ನಾವು ಪ್ರತಿಯೊಬ್ಬರನ್ನೂ, ಅವರ ಲಿಂಗ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಜನಾಂಗೀಯ ಅಥವಾ ಸಾಂಸ್ಕೃತಿಕ ಹಿನ್ನೆಲೆಗಳು ಹೇಗಿದ್ದರೂ, ಗೌರವದಿಂದ ನಡೆಸಿಕೊಳ್ಳಬೇಕು. ನಾವು ಜನರನ್ನು ಸನ್ಮಾನಿಸಬೇಕು, ಅವರ ಸಭೆಯ ಅಂಗಗಳ ಸಂಯೋಜನೆಯಿಂದ ಅವರ ವಿರುದ್ಧವಾಗಿ ಪಕ್ಷಪಾತ ಮಾಡಬಾರದು. ಸೋಲುವಿಕೆಗಳು ಅಸಂಖ್ಯಾತವಾಗಿರಬಹುವು, ನಾವು ಪ್ರತಿಯೊಬ್ಬ ವ್ಯಕ್ತಿಯಲ್ಲೂ ಒಳ್ಳೇದನ್ನು ನೋಡಲು ಕಲಿಯಬೇಕು. ಇದು ಯಾರೋ ಒಬ್ಬ ಚಿಕ್ಕವರಿಗಾಗಲೀ, ಬಡವರಿಗಾಗಲೀ, ಅಥವಾ ಸಾಮಾಜಿಕವಾಗಿ ಮಹತ್ವವಿಲ್ಲದವರಾಗಲೀ, ನಾವು ನಮ್ಮ ಮಾತುಕೊಡುವಾಗ ಮಾತನ್ನು ಉಳಿಸಿಕೊಳ್ಳಬೇಕು. ಕೆಲವು ವೇಳೆ, ನಾವು ಸಾಮಾಜಿಕವಾಗಿ, ಅಥವಾ ಆರ್ಥಿಕವಾಗಿ ಬಲಯುತರೂ ಹಾಗೂ ಪ್ರಭಾವಿತರೂ ಆದ ಜನರನ್ನು ಸನ್ಮಾನಿಸಲು ಹವಣಿಸುತ್ತೇವೆ, ಆಗ ಸಾಮಾಜಿಕವಾಗಿ ಅಥವಾ ಆರ್ಥಿಕವಾಗಿ ಬಲಯುತರೂ ಅಥವಾ

ಪ್ರಭಾವಿತರೂ ಆಗಿಲ್ಲದವರ ಬಗ್ಗೆ ಅರ್ಥಹೀನವಾಗಿ ತಿಳಿಯುತ್ತೇವೆ. ದೇವರ ರಾಜ್ಯದಲ್ಲಿ ಅತ್ಯಂತ ಚಿಕ್ಕವರಲ್ಲಿ ಒಬ್ಬನಿಗೆ ಅತ್ಯಂತ ಸರಳವಾದ ಒಂದು ಸೇವೆ ಮಾಡುವುದಾದರೆ ಅವರು ದೇವರ ಕುಟುಂಬದಲ್ಲಿ ಒಂದು ಭಾಗವಾಗಿದ್ದು ಗಮನಿಸಲ್ಪಡದೆ ಇರುವುದಿಲ್ಲ.

ಯಾರೇ ಆಗಲಿ ಒಬ್ಬನು ಒಬ್ಬ ಸಾರ್ವಜನಿಕ ಸಂಬಂಧಗಳ ಅನುಷ್ಠಾನದ. ಕೇವಲ ಅಲ್ಪನಾದವನೊಂದಿಗೆ ಸಂಬಂಧ ಇರುವುದಾಗಿ ಹೇಳುವುದು ಹಾಗೂ ಯಾರಾದರೂ ಒಬ್ಬರು, ಯೋಗ್ಯವಾಗಿ ಜನರಿಗೆ, ತಮ್ಮ ಆಳವಾದ ಹೃದಯಗಳಿಂದ ಪರಾಂಬರಿಸುವುದರಿಂದ, ಸಂಬಂಧಿ ಎಂದು ಹೇಳುವಾಗ ಅದು ಸುಲಭವಾಗುತ್ತದೆ. ನೀವು ಜನರನ್ನು ಸಂಧಿಸುವಾಗ, ಹಾಗೆ ಮಾಡಿರಿ, ಏಕೆಂದರೆ ನೀವು ನಿಜವಾಗಿಯೂ ಅವರನ್ನು ಪರಾಂಬರಿಸುತ್ತೀರಿ.

## ನಾಯಕರನ್ನು, ಹಿರಿಯರನ್ನು ಹಾಗೂ ತಂದೆಯರನ್ನು ಸನ್ಮಾನಿಸಿರಿ

**"ವಿಧವೆಯರು ನಿಂದೆಗೆ ಗುರಿಯಾಗುವಂತೆ ಈ ಆಜ್ಞೆಗಳನ್ನು ಮಾಡು"** (1ತಿಮೊಥೆಯನಿಗೆ 5:7).

**"ಸಹೋದರರೇ, ಯಾರು ನಿಮ್ಮಲ್ಲಿ ಪ್ರಯಾಸ ಪಟ್ಟು ಕರ್ತನ ಕಾರ್ಯಗಳಲ್ಲಿ ನಿಮ್ಮ ಮೇಲೆ ಮುಖ್ಯಸ್ಥರಾಗಿದ್ದು ನಿಮಗೆ ಬುದ್ಧಿ ಹೇಳುತ್ತಾರೊ ಅವರನ್ನು ಲಕ್ಷಿಸಿ ಅವರ ಕೆಲಸದ ನಿಮಿತ್ತ ಅವರನ್ನು ಪ್ರೀತಿಯಿಂದ ಬಹಳವಾಗಿ ಸನ್ಮಾನ ಮಾಡಬೇಕೆಂದು ನಿಮ್ಮನ್ನು ಬೇಡಿಕೊಳ್ಳುತ್ತೇವೆ. ನಿಮ್ಮ ನಿಮ್ಮೊಳಗೆ ಸಮಾಧಾನವಾಗಿರಿ"** (1 ಥೆಸಲೋನಿಕದವರಿಗೆ 5:12,13).

ನಾವು ನಮ್ಮ ಆತ್ಮಿಕ ನಾಯಕರಿಗೆ, ವಿಶೇಷವಾಗಿ ನಮಗೆ ದೇವರ ವಾಕ್ಯವನ್ನು ಬೋಧಿಸುವುದರಿಂದ ನಮಗೆ ಸೇವೆ ಮಾಡಿದವರಿಗೆ "ಎರಡರಷ್ಟು ಸನ್ಮಾನಿಸಬೇಕೆಂದು," ಕರೆಯಲ್ಪಟ್ಟಿರುತ್ತೇವೆ. ನಾವು ನಮ್ಮ ಆತ್ಮಿಕ ನಾಯಕರು ಹಿರಿಯರು ಹಾಗು ತಂದೆಗಳನ್ನು ಮಹಾಗೌರವದಿಂದ ಹಿಡಿದಿಟ್ಟುಕೊಳ್ಳಬೇಕು. ಸಮಯವು ಬದಲಾದರೂ ಅದರೊಂದಿಗೆ ಮತ್ತಷ್ಟು ಹಲವಾರು ಅಂಶಗಳು ಬದಲಾದರೂ ನಾವು ನಮ್ಮ ಮುಂದೆ ಈ ವಿಶ್ವಾಸ ಪ್ರಯಾಣದಲ್ಲಿ ನಡೆಯುವವರಿಗೆ ಮಹತ್ವವಾದ ಗೌರವದಿಂದ ಮಾನ್ಯತೆ ನೀಡುವುದನ್ನು ಮುಂದುವರಿಸಬೇಕು. ಯುವ ಸೇವಕರು ಹೆಚ್ಚಾಗಿ "ತಾಂತ್ರಿಕ ಕುಶಲತೆಯುಳ್ಳವರಾದುದರಿಂದ ಹಾಗೂ ಹೇಗೆ ವಿಷಯಗಳನ್ನು ಶೀಘ್ರದಲ್ಲಿ ಹೇಗೆ ಮಾಡುವುದೆಂದು ತಿಳಿದಿರುವುದರಿಂದ ಹಾಗೂ ಹಿರಿಯ

ಸೇವಕರಿಗಿಂತ ಹೆಚ್ಚು ದಕ್ಷತೆಯಿಂದ ಮಾಡುತ್ತೇವೆ. ನಾವೆಲ್ಲರೂ ಅವರನ್ನು ಸನ್ಮಾನಿಸಬೇಕು ಹಾಗೂ ಗೌರವಿಸಬೇಕು, ವಿಶೇಷವಾಗಿ ರಾಜ್ಯಕ್ಕಾಗಿ ಅವರು ಈಗಾಗಲೇ ಏನು ಸಾಧಿಸಿದ್ದಾರೆಂಬುದಕ್ಕಾಗಿ ಗೌರವವನ್ನು ಹೊಂದಿರುವುದು ಎಂದರೆ, ಯಾರನ್ನಾದರೂ ಉನ್ನತವಾದ ಗೌರವ ಹೊಂದಿ ಅಥವಾ ಉನ್ನತವಾದ ಒಲವನ್ನು ಹೊಂದಿ ಅವರನ್ನು ಸನ್ಮಾನಿಸಬೇಕಾಗುತ್ತದೆ, ಅಥವಾ ಅವರ ತೀರ್ಮಾನಗಳಿಗೆ ನಮ್ಮ ಸ್ವಂತ ಮಾರ್ಗದಲ್ಲಿ ಒತ್ತಾಯಿಸುವುದಕ್ಕಿಂತಲೂ ಅಭಿಮಾನ ತಾಳಬೇಕಾಗುತ್ತದೆ. ನಾವು ಅವರೊಂದಿಗೆ ನಮ್ಮನ್ನು ಸರಿಸಮಾನರಾಗಿ ಮಾಡುವುದಕ್ಕಿಂತ ಅವರಿಗೆ ಆಯ್ಕೆ ಹಾಗೂ ಆದ್ಯತೆ ಕೊಡಬೇಕಾಗುತ್ತದೆ.

## ಪಕ್ಷಪಾತ ಮಾಡಬೇಡಿರಿ

**"ನೀನು ವಿಚಾರಿಸುವುದಕ್ಕೆ ಮೊದಲೇ ತಪ್ಪು ಹೊರಿಸದೆಯೂ ಪಕ್ಷಪಾತದಿಂದ ಏನೂ ಮಾಡದೆಯೂ ನಾನು ಹೇಳಿರುವ ಮಾತುಗಳ ಪ್ರಕಾರವೇ ನಡೆಯಬೇಕೆಂದು ದೇವರ ಮುಂದೆಯೂ ಕ್ರಿಸ್ತಯೇಸುವಿನ ಮುಂದೆಯೂ ಆಯಲ್ಪಟ್ಟಿರುವ ದೇವರ ದೂತರ ಮುಂದೆಯೂ ಖಂಡಿತವಾಗಿ ಹೇಳುತ್ತೇನೆ"** (1 ತಿಮೊಥೆಯನಿಗೆ 5:21).

**"ನನ್ನ ಸಹೋದರರೇ, ಪ್ರಭಾವವುಳ್ಳ ನಮ್ಮ ಕರ್ತನಾದ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಟ್ಟವರಾದ ನೀವು ಪಕ್ಷಪಾತಿಗಳಾಗಿರಬಾರದು. ಹೇಗೆಂದರೆ ಒಬ್ಬ ಮನುಷ್ಯನು ಚಿನ್ನದ ಉಂಗುರವನ್ನೂ ಶೋಭಾಯಮಾನವಾದ ವಸ್ತ್ರಗಳನ್ನೂ ಹಾಕಿಕೊಂಡು ನಿಮ್ಮ ಸಭಾಮಂದಿರದೊಳಗೆ ಬರಲು ಮತ್ತು ಒಬ್ಬ ಮನುಷ್ಯನು ಹೀನವಾದ ಬಟ್ಟೆ ಹಾಕಿಕೊಂಡು ಬರಲು ನೀವು ಶೋಭಾಯಮಾನವಾದ ವಸ್ತ್ರಗಳನ್ನು ಧರಿಸಿಕೊಂಡಿರುವವನನ್ನು ಮರ್ಯಾದೆಯಿಂದ ನೋಡಿ ಅವನಿಗೆ– ನೀವು ಇಲ್ಲಿ ಈ ಸುಖಾಸನದ ಮೇಲೆ ಕೂತುಕೊಳ್ಳಿರಿ ಎಂತಲೂ ಅ ಬಡ ಮನುಷ್ಯನಿಗೆ–ನೀನು ಅಲ್ಲಿ ನಿಂತುಕೋ, ಇಲ್ಲವೆ ನನ್ನ ಕಾಲ್ಮಣೆಯ ಹತ್ತಿರ ನೆಲದ ಮೇಲೆ ಕೂತುಕೋ ಎಂತಲೂ ಹೇಳಿದರೆ ನೀವು ನಿಮ್ಮಲ್ಲಿ ಬೇಧ ಮಾಡುವವರಾಗಿ ಅನ್ಯಾಯವಾದ ತೀರ್ಪನ್ನು ಮಾಡುವವರಾದಿರಲ್ಲಾ. ನನ್ನ ಪ್ರಿಯ ಸಹೋದರರೇ, ಕೇಳಿರಿ, ದೇವರು ಲೌಕಿಕ ವಿಷಯದಲ್ಲಿ ಬಡವರಾಗಿರುವವರನ್ನು ಆದುಕೊಂಡು ಅವರು ನಂಬಿಕೆಯಲ್ಲಿ ಐಶ್ವರ್ಯವಂತರಾಗಿಯೂ ತನ್ನನ್ನು ಪ್ರೀತಿಸುವವರಿಗೆ ತಾನು ವಾಗ್ದಾನ ಮಾಡಿದ ರಾಜ್ಯಕ್ಕೆ ಬಾಧ್ಯರಾಗಿಯೂ ಇರಬೇಕೆಂದು ನೇಮಿಸಲಿಲ್ಲವೋ? ನೀವಾದರೋ ಬಡವರನ್ನು ಅವಮಾನಪಡಿಸಿದ್ದೀರಿ. ನಿಮ್ಮನ್ನು ಬಾಧಿಸಿ ನ್ಯಾಯಸ್ಥಾನಕ್ಕೆ ಎಳೆದುಕೊಂಡು ಹೋಗುವವರು ಐಶ್ವರ್ಯವಂತರಲ್ಲವೋ? ನೀವು ಕರೆಸಿಕೊಳ್ಳುವ ಶ್ರೇಷ್ಠವಾದ ನಾಮವನ್ನು ದೂಷಿಸುವವರು ಅವರಲ್ಲವೋ? ಆದರೂ ಶಾಸ್ತ್ರಕ್ಕೆ ಸರಿಯಾಗಿ ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕೆಂಬ ರಾಜಾಜ್ಞೆಯನ್ನು ನೀವು ನೆರವೇರಿಸುತ್ತಿದ್ದರೆ ನೀವು ಒಳ್ಳೆದನ್ನು ಮಾಡುವವರು. ಅದನ್ನು ಬಿಟ್ಟು ಪಕ್ಷಪಾತ ತೋರಿಸುವವರಾಗಿದ್ದರೆ ನೀವು ಪಾಪ ಮಾಡುವವರಾಗಿದ್ದು ಅಪರಾಧಿಗಳೆಂದು ಧರ್ಮ ಶಾಸ್ತ್ರದಿಂದ ತೀರ್ಮಾನಿಸಲ್ಪಡುತ್ತೀರಿ"** (ಯಾಕೋಬನು 2:1–9).

ಜನರೊಂದಿಗೆ ಕೆಲಸ ಮಾಡುವಾಗ, ಮತ್ತು ಸಂಬಂಧ ಹೊಂದುವಾಗ, ಇದೊಂದು ಮನಸ್ಸಿನಲ್ಲಿಟ್ಟುಕೊಳ್ಳಬೇಕಾದ ಪ್ರಾಮುಖ್ಯವಾದ ಸೂಚನೆಯಾಗಿರುತ್ತದೆ. ನಮ್ಮ ಎಲ್ಲಾ ತೀರ್ಮಾನ ಮಾಡುವಿಕೆಯಲ್ಲಿ ಜನರಿಗಾಗಿ ಹಾಗೂ ಅವರ ಕಡೆಗೆ, ನಾವು ವೈಯಕ್ತಿಕ ದುರಾಗ್ರಹವಿಲ್ಲದೆ, ಹಾಗೂ ಪಕ್ಷಪಾತವಿಲ್ಲದೆ ಇದನ್ನು ಮಾಡಬೇಕು. ಅಪೊಸ್ತಲನಾದ ಪೌಲನು ದೇವ ಜನರನ್ನು ಈ ರೀತಿಯಲ್ಲಿ ನಡಿಸಲು ಹಾಗೂ ಸೇವೆಮಾಡಲು ಯುವ ಸೇವಕ ತಿಮೊಥೆಯನ್ನು ಎಚ್ಚರಿಸುತ್ತಾನೆ. ತಿಮೊಥೆಯನಿಗೆ ಈ ಜವಾಬ್ದಾರಿಯನ್ನು ಕೊಡುವುದರಲ್ಲಿ ಪೌಲನು ತಿಮೊಥೆಯನಿಗೆ, ದೇವರು ಕರ್ತನಾದ ಯೇಸು ಕ್ರಿಸ್ತನು ಹಾಗೂ ಆರಿಸಲ್ಪಟ್ಟ ಸಾಕ್ಷಿಗಳು ಜನರೊಂದಿಗೆ ನಮ್ಮ ಸಂಬಂಧಕ್ಕೆ ಪ್ರತ್ಯಕ್ಷ ಸಾಕ್ಷಿಗಳಾಗಿರುತ್ತಾರೆ ಎಂದು ನೆನಪು ಮಾಡಿಕೊಡುವುದು ಆಸಕ್ತಿ ಹುಟ್ಟಿಸುತ್ತದೆ. ಬೇರೆ ಮಾತುಗಳಲ್ಲಿ ಇದೊಂದು ಉದಾತ್ತವಾದ ಹಾಗೂ ಪ್ರಾಮುಖ್ಯವಾದ ಸೂಚನೆಯಾಗಿದೆ. ನಾವು ಜನರಿಗೆ ಹೇಗೆ ಸಂಬಂಧ ಹೊಂದಿರುತ್ತೇವೆ ಎಂಬ ರೀತಿಯ ಯಾವುದಾದರೂ ಉಲ್ಲಂಘನೆಗಳಿದ್ದರೆ ಅದನ್ನು ತಡೆಯಬಾರದು ಹಾಗೂ ಅದನ್ನು ನಾವು ಮುಚ್ಚಿಡಲಾರೆವು.

ಸಭಾಪಾಲಕರುಗಳಾಗಿರುವ ನಮ್ಮಂಥವರಿಗೆ ಇದು ಬಹು ಸತ್ಯವಾದುದು. ಹಾಗೂ ನಮ್ಮೊಂದಿಗೆ ಆರಾಧನೆಗೆ ಬರುವ ನಮ್ಮ ಸಭಿಕರೊಳಗೆ ಸೇರುವವರನ್ನು ನಾವು ಹೇಗೆ ನಡೆಸಿಕೊಳ್ಳುತ್ತೇವೆ. ಯಾಕೋಬನು ಇಂಥಾ ಒಂದು ದೃಶ್ಯವಿವರವನ್ನು ತಿಳಿಸುತ್ತಾನೆ ಹಾಗೂ ನಾವು ಜನರ ಸಾಮಾಜಿಕ, ಸಾಂಸ್ಕೃತಿಕ, ಜನಾಂಗೀಯ ಅಥವಾ ಸ್ಥಾನಗಳ ಆಧಾರದ ಮೇಲೆ, ನಾವು ಅವರ ಮೇಲೆ ಪಕ್ಷಪಾತ ಅಥವಾ ಅವರ ವಿಭಿನ್ನವಾದ ನಡೆಸುವಿಕೆಯನ್ನು ತೋರಿದರೆ, ನಾವು ಪಾಪ ಮಾಡುವವರಾಗಿರುತ್ತೇವೆ. ಜನರೊಂದಿಗೆ ಕೆಲಸಮಾಡುವಾಗ ಮತ್ತು ಸಂಬಂಧ ಹೊಂದುವಾಗ ನಾವು ಎಲ್ಲಾ ಜನರಿಗಾಗಿ ಅದೇ ಮಟ್ಟಗಳನ್ನು ನಿಭಾಯಿಸಬೇಕು. ಉದಾಹರಣೆಗೆ, ನಮ್ಮ ಸ್ಥಳೀಯ ಸಭೆಯಲ್ಲಿ ಆರಂಭದ ದಿನಗಳಲ್ಲಿ, ಪ್ರಮುಖ ಜನರನ್ನು, ಅವರು ನಮ್ಮೊಂದಿಗೆ ಆರಾಧಿಸಲು ಬಂದಿದ್ದರೆ, ಸಾರ್ವಜನಿಕವಾಗಿ ಚಪ್ಪಾಳೆ ತಟ್ಟಬಾರದು ಹಾಗೂ ಗುರ್ತಿಸಬಾರದು ಎಂಬುದಾಗಿ ಒಂದು ರೂಢಿ ಮಾಡಿಸಿದ್ದೇನೆ, ಅವರು ಬಂದು ಸಭಿಕರೊಂದಿಗೆ ಕುಳಿತು, ಏನುಮಾಡಲು—ದೇವರನ್ನು

ಆರಾಧಿಸಲು ಹಾಗೂ ಆತನ ವಾಕ್ಯದ ಸೇವೆಯನ್ನು ಪಡೆಯಲು ಅವರಿಗೆ ನಾನು ಅವಕಾಶ ಮಾಡಿಕೊಟ್ಟಿದ್ದೇನೆ. ನಾನು ಅವರನ್ನು ಖಾಸಗಿಯಾಗಿ ಅಂಗೀಕಾರ ಮಾಡುವುದಿಲ್ಲವೆಂಬುದಾಗಿ ಅಲ್ಲ—ಆದರೆ ನಾವು ಎಲ್ಲರೂ ದೇವರ ಮುಂದೆ ಸಮನಾದ ನೆಲದ ಮೇಲೆ ನಿಂತಿರುವಾಗ ನಮ್ಮ ಲೌಕಿಕ ಸ್ಥಾನದಲ್ಲಿ ಇದನ್ನು ಸಭೆಯಲ್ಲಿ ಮಾಡಲು ನಾವು ಬಯಸುವುದಿಲ್ಲ. ನಮ್ಮ ಸಭೆಯ ಸೇವೆಯ ಪಾತ್ರಗಳ ತಂಡದಲ್ಲಿ ನಾನು ಯಾವಾಗಲೂ ಯಾರು ಕರೆಯಲ್ಪಟ್ಟಿದ್ದರೂ ವರಗಳನ್ನು ಹೊಂದಿದ್ದರೂ ಒಂದು ಉತ್ತಮ ಹೃದಯ ಹಾಗೂ ಆ ಸೇವೆಯ ನಿರ್ದಿಷ್ಟ ವಲಯಕ್ಕೆ ಅತ್ಯುತ್ತಮವಾಗಿ, ಯೋಗ್ಯವಾದ ರೀತಿಯಲ್ಲಿ ಗುರುತಿಸುವ ಹಾಗೂ ನೇಮಕಮಾಡುವ ಅಭ್ಯಾಸವನ್ನು ಮಾಡುತ್ತೇನೆ. ಲಿಂಗ, ಸಾಂಸ್ಕೃತಿಕ, ಸಾಮಾಜಿಕ ಅಥವಾ ಇತರ ಅಂಶಗಳ ಆಧಾರದಲ್ಲಿ ಯಾವ ರೀತಿಯ ಭಿನ್ನತೆ ಹಾಗೂ ವ್ಯತ್ಯಾಸ ಇರುವುದಿಲ್ಲ. ಅದೇ ರೀತಿಯಲ್ಲಿ ಶಿಸ್ತನ್ನು ಪಾಲಿಸುವಾಗ, ಹಾಗೂ ತಪ್ಪು ತಿದ್ದುವಾಗ, ನಾವು ಪ್ರತಿಯೊಬ್ಬರನ್ನೂ ಸಮಾನವಾಗಿ ಹಾಗೂ ತಪ್ಪು ತಿದ್ದುವಾಗ, ನಾವು ಪ್ರತಿಯೊಬ್ಬರನ್ನು ಸಮಾನವಾಗಿ ಹಾಗೂ ಉತ್ತಮವಾಗಿ ನೋಡುತ್ತೇವೆ. ನಾವೆಲ್ಲರೂ ಸಮತಟ್ಟಾದ ನೆಲದ ಮೇಲೆ ನಿಲ್ಲುತ್ತೇವೆ.

## ಕೃತಜ್ಞತೆಯುಳ್ಳವರಾಗಿರಿ "ಧನ್ಯವಾದ!" ಹೇಳಿರಿ

**"ಕ್ರಿಸ್ತಯೇಸುವಿನ ಸೇವೆಯಲ್ಲಿ ನನ್ನ ಜೊತೆ ಕೆಲಸದವರಾದ ಪ್ರಿಸ್ಕಳಗೂ ಅಕ್ವಿಲನಿಗೂ ನನ್ನ ವಂದನೆಗಳನ್ನು ಹೇಳಿರಿ. ಅವರು ನನ್ನ ಪ್ರಾಣದ ಸಂರಕ್ಷಣೆಗಾಗಿ ತಮ್ಮ ಪ್ರಾಣಗಳನ್ನು ಅಪಾಯಕ್ಕೆ ಗುರಿಮಾಡಿದರು. ನಾನು ಮಾತ್ರವೇ ಅಲ್ಲ, ಅನ್ಯ ಜನರ ಸಭೆಗಳವರೆಲ್ಲರೂ ಅವರ ಉಪಕಾರವನ್ನು ಸ್ಮರಿಸುತ್ತಾರೆ"** (ರೋಮಾಪುರವರಿಗೆ 16: 3,4).

**"ನಮ್ಮ ಪ್ರಾರ್ಥನೆಗಳಲ್ಲಿ ನಿಮಗೋಸ್ಕರ ವಿಜ್ಞಾಪನೆ ಮಾಡುವಾಗ ನಿಮ್ಮೆಲ್ಲರ ವಿಷಯದಲ್ಲಿ ದೇವರಿಗೆ ಯಾವಾಗಲೂ ಕೃತಜ್ಞತಾ ಸ್ತುತಿ ಸಲ್ಲಿಸುತ್ತೇವೆ"** (1 ಥೆಸಲೋನಿಕದವರಿಗೆ 1:2).

ನಮ್ಮ ಸುತ್ತಲೂ ಜನರನ್ನು ಇರಿಸಿರುವ ಕರ್ತನಿಗೆ ಯಾವಾಗಲೂ ಕೃತಜ್ಞತೆಯುಳ್ಳವರಾಗಿರಲು ಕಲಿತುಕೊಳ್ಳೋಣ. ಕೇವಲ ಕರ್ತನಿಗೆ ವಂದನೆಯನ್ನು ವ್ಯಕ್ತಪಡಿಸುವುದು ನಾವು ಯಾರಾಗಿದ್ದೇವೆ ಎಂಬುದನ್ನು ಅರಿತುಕೊಳ್ಳಲಿಕ್ಕಾಗಿ, ನಮ್ಮ ಸ್ವಂತ ಮಹಾ ಪ್ರಯತ್ನಗಳಿಂದಲ್ಲ, ಆದರೆ ದೇವರ ಕೃಪೆಯ ಕಾರಣವಾಗಿ ಹಾಗೂ ನಮ್ಮೊಂದಿಗೆ ಸಹಾಯವಾಗಿ ನಿಂತವರೆಲ್ಲರ ಕಾರಣವಾಗಿ ಅಲ್ಲದೆ ನಾವು ನಮ್ಮೊಂದಿಗೆ ಜನರು ಏನು

ಮಾಡಿದರೋ ಅದಕ್ಕಾಗಿ ಅವರನ್ನು ಪ್ರಶಂಸಿಸಬೇಕು. ಆಗಾಗ್ಗೆ ನಾವು ಸೇವಕರು, ಜನರು ನಮಗಾಗಿ ಮಾಡುವ ಕಾರ್ಯಗಳನ್ನು "ನಮ್ಮ ಹಕ್ಕಾಗಿ" ಚಲಾಯಿಸುತ್ತೇವೆ. ಜನರ ಸಹಾಯ ಬೆಂಬಲ ಪ್ರೋತ್ಸಾಹಗಳನ್ನು ಪಡೆಯಲು ಇವು ನಮ್ಮ ಹಕ್ಕು ಎಂಬುದಾಗಿ ಭಾವಿಸುತ್ತೇವೆ.

ಯಾವುದೋ ರೀತಿಯಲ್ಲಿ ಸೇವೆ ಮಾಡಿದ ಸಹಾಯ ಮಾಡಿದ ಅಥವಾ ಬೆಂಬಲ ನೀಡಿದ ಯಾರಿಗಾದರೂ ಸರಳವಾದ ಒಂದು "ವಂದನೆಗಳು" ಎಂದು ಹೇಳಲು ಕಲಿಯುವುದು ಬಹಳ ಪ್ರಾಮುಖ್ಯವಾದದ್ದು. ಯಾರಾದರೂ ನಿಮಗೆ ಏನಾದರೂ ಕೊಡುಗೆಯನ್ನು ಕೊಟ್ಟರೆ, ಒಂದು "ವಂದನೆಗಳು" ಎಂದು ಸಂಪರ್ಕಿಸಲು ಮರೆಯಬೇಡಿರಿ ಯಾರಾದರು ನಿಮಗೆ ಯಾವುದಾದರೂ ರೀತಿಯಲ್ಲಿ ಸಹಾಯ ಮಾಡಿದರೆ, ಅವರಿಗೆ ಅದಕ್ಕಾಗಿ ವಂದಿಸಲು ಮರೆಯ ಬೇಡಿ, ಜನರು ನಾವು ಮಾಡಿದವುಗಳಗಾಗಿ ನಾವು ಯೋಗ್ಯವಾಗಿ ಶ್ಲಾಘಿಸುವುದನ್ನು ತಿಳಿಯುವ ಅಗತ್ಯವಿದೆ.

## ರಹಸ್ಯವಾಗಿ ಹಂಚಿಕೊಳ್ಳಲ್ಪಟ್ಟದ್ದು ರಹಸ್ಯವಾಗಿ ಉಳಿಯಬೇಕು

**"ಮಾತಾಳಿಗೆ ಪಾಪತಪ್ಪದು, ಮೌನಿಯು ಮತಿವಂತ"** (ಜ್ಞಾನೋಕ್ತಿಗಳು 10:19).

**ಪ್ರಾಪಂಚಿಕವಾದ ಹರಟೆಮಾತುಗಳಿಗೆ ದೂರವಾಗಿರು, ಅವುಗಳಿಗೆ ಮನಸ್ಸುಕೊಡುವವರು ಹೆಚ್ಚೆಚ್ಚಾಗಿ ಭಕ್ತಿಹೀನರಾಗುವರು"** (2 ತಿಮೊಥೆಯನಿಗೆ 2:16).

ಕ್ರೈಸ್ತ ಸೇವಕರಾದ ಜನರು ಆಗಾಗ್ಗೆ ನಮ್ಮ ಬಳಿಗೆ ತಮ್ಮ ವೈಯಕ್ತಿಕ ಸಮಸ್ಯೆಗಳು ಹಾಗೂ ಹೋರಾಟಗಳೊಂದಿಗೆ, ಬಂದು ದೈವಿಕ ಸಮಾಲೋಚನೆ, ಪ್ರಾರ್ಥನೆ ಹಾಗೂ ಪ್ರೋತ್ಸಾಹವನ್ನು ಹುಡುಕುತ್ತಾರೆ. ಆಗಾಗ್ಗೆ ಅವರು ಬಹಳ ಸ್ವಂತವಾದದ್ದು ಹಾಗೂ ಖಾಸಗಿಯಾದ ಅಂಶಗಳನ್ನು ನಮ್ಮೊಂದಿಗೆ ರಹಸ್ಯವಾಗಿ ಹಂಚಿ ಕೊಳ್ಳುತ್ತಾರೆ. ನಾವು ಇದನ್ನು ಬೇರೊಬ್ಬರೊಂದಿಗೆ ಹೇಳಿಕೊಳ್ಳುವುದು ಅಥವ ಸಾರ್ವಜನಿಕವಾಗಿ ಹಂಚಿಕೊಳ್ಳಬಾರದೆಂಬುದು ಪ್ರಾಮುಖ್ಯವಾದದ್ದು. ಆ ನಿರ್ದಿಷ್ಟವಾದ ದೃಶ್ಯಾವಳಿಯು ಒಂದು ಉದಾಹರಣೆಯಾಗಿ, ಅಥವಾ ನಿದರ್ಶನವಾಗಿ ನಮ್ಮ ಸಂದೇಶದಲ್ಲಿ ಬಳಸಲ್ಪಡುವುದಾದರೆ ಹಾಗೂ ಬಳಸಲ್ಪಡುವಾಗ ಇದರಿಂದ ಇತರರು ಪಾಠಗಳನ್ನು ನಿಜಜೀವಿತದ ಪರಿಸ್ಥಿತಿಗಳಿಂದ ಕಲಿಯಬಹುದು. ಒಂದು ನಿಯಮವಾಗಿ ನಾನು ಜನರ

ವೈಯಕ್ತಿಕ ಅಂಶಗಳ/ ಖಾಸಗಿ ಹೋರಾಟಗಳ ನನ್ನ ತಿಳುವಳಿಕೆಯನ್ನು ಸಂದೇಶಗಳಲ್ಲಿ ನಿದರ್ಶನಗಳಾಗಿ ಬಳಸುವುದಿಲ್ಲ, ಇಂಥ ವಿಷಯಗಳನ್ನು ಬಹಿರಂಗವಾಗಿ ಮಾತನಾಡುವುದು ಒಳ್ಳೆಯದಲ್ಲ. ಏಕೆಂದರೆ, ಅವರು ನಿಮ್ಮ ಬಳಿಗೆ ಸಹಾಯಕ್ಕಾಗಿ ಬಂದಿರುತ್ತಾರೆ, ನೀವು ವಿಷಯಗಳನ್ನು ರಹಸ್ಯವಾಗಿ ಇಟ್ಟುಕೊಂಡಿರುತ್ತೀರಿ ಎಂದು ಅವರು ಭರವಸೆ ಇಟ್ಟಿರುತ್ತಾರೆ.

ಜನರೊಂದಿಗೆ ನಾವು ಪರಸ್ಪರ ಒಡನಾಟಗಳನ್ನು ಉದಾಹರಣೆಗಳಗಾಗಿ ಬಳಸುವಾಗ ಬಹು ಸಾಮಾನ್ಯವಾದ ರೀತಿಗಳಲ್ಲಿ ವ್ಯಕ್ತಿಗಳ ಗುರುತಿಸುವಿಕೆಯನ್ನು ವ್ಯಕ್ತ ಪಡಿಸದೆ ಮಾಡಬೇಕು, ವ್ಯಕ್ತಿಯು ಇಲ್ಲದಿರುವಾಗ, ಇದು ಉತ್ತಮವಾಗಿ ಮಾಡಲು ಸಾದ್ಯವಾಗುತ್ತದೆ, ಇದರಿಂದ ಅವು ಇತರರಿಂದ ಯಾವರೀತಿಯಲ್ಲೂ ಗುರುತಿಸಲ್ಪಡುವುದಿಲ್ಲ, ಇದನ್ನು ನಾವು ನಮ್ಮ “ಹರಟೆ”ಯಲ್ಲಿಯಾಗಲಿ ಅಥವಾ “ಮೂರ್ಖತನದ ಮಾತು”ಗಳಲ್ಲಿ ಇತರ ಸೇವಕರೊಡನೆ ಉಪಯೋಗಿಸಬಾರದು. ರಹಸ್ಯವಾಗಿ ಏನು ಹಂಚಲ್ಪಟ್ಟಿತೋ ಅದು ರಹಸ್ಯವಾಗಿಯೇ ಉಳಿಯಬೇಕು ಈ ರೀತಿ ನಾವು ಜನರ ಭರವಸೆಯನ್ನು ಗಳಿಸಬಹುದು.

## ಪ್ರೀತಿಯಿಂದ ಜನರನ್ನು ತಿದ್ದಿರಿ

**“ನೀವು ಮಾಡುವದನ್ನೆಲ್ಲಾ ಪ್ರೀತಿಯಿಂದ ಮಾಡಿರಿ” (ಕೊರಿಂಥದವರಿಗೆ 16:14).**

**“ಇದಕ್ಕಾಗಿಯೇ ನಾನು ನಿಮ್ಮಲ್ಲಿ ಇಲ್ಲದಿರುವಾಗ ಈ ಮಾತುಗಳನ್ನು ಬರೆದಿದ್ದೇನೆ. ನಿಮ್ಮನ್ನು ಕೆಡವಿ ಹಾಕುವುದಕ್ಕಲ್ಲ, ಕಟ್ಟುವದಕ್ಕಾಗಿ ಕರ್ತನು ನನಗೆ ಕೊಟ್ಟಿರುವ ಅಧಿಕಾರದ ಪ್ರಯೋಗದಲ್ಲಿ ನಿಮ್ಮ ಬಳಿಗೆ ಬಂದಾಗ ಕಾಠಿಣ್ಯವನ್ನು ತೋರಿಸುವುದಕ್ಕೆ ಅವಕಾಶವಿರಬಾರದೆಂದು ಅಪೇಕ್ಷಿಸುತ್ತೇನೆ”** (2 ಕೊರಿಂಥದವರಿಗೆ 13:10).

ಸೇವೆಯಲ್ಲಿ ಜನರನ್ನು ತಿದ್ದುವುದು ಅತ್ಯಂತ ಕಷ್ಟಕರವಾದ ಕಾರ್ಯಗಳಲ್ಲಿ ಒಂದಾಗಿರುತ್ತದೆ ಎಂಬುದನ್ನು ನಾನು ಸ್ವಯಂ ಕಂಡು ಕೊಂಡಿರುತ್ತೇನೆ. ನಾವು ಅವರಿಗೆ ನೇಮಕಮಾಡಿರುವ ಪಾತ್ರಗಳು ಹಾಗೂ ಹೊಣೆಗಾರಿಕೆಗಳಲ್ಲಿ ಜನರು ಬೆಳೆಯುವಾಗ, ಒಂದು ಕಡೆ ನಾವು ಅವರೊಂದಿಗೆ ಸಹನೆಯಿಂದಿರಲು ಪ್ರಯತ್ನಿಸಬೇಕು. ನಾವು ದಯೆ ಪ್ರೀತಿ, ಸೌಮ್ಯತೆಗಳಿಂದ ಇದ್ದು, ಕಾರ್ಯಗಳನ್ನು ತಪ್ಪುಗಳನ್ನು ಮಾಡಲು, ಕಲಿಯಲು ಹಾಗೂ ಬೆಳೆಯಲು ಸಾಕಷ್ಟು ಸಮಯವನ್ನು ಹಾಗೂ ಸ್ಥಳವನ್ನು ಒದಗಿಸಲು ಪ್ರಯತ್ನಿಸಬೇಕು. ಹೇಗಾದರೂ ಒಬ್ಬ

ವ್ಯಕ್ತಿಯು ಒಂದು ತಪ್ಪಾದ ಮಾರ್ಗದಲ್ಲಿ ಕೆಳಕ್ಕಿಳಿದು ಹೋಗುತ್ತಾ ಇದ್ದರೆ, ಅಥವಾ ಬೇಕಾದುದನ್ನು ಮಾಡದೆ ಇರುವಾಗ ತಪ್ಪಾಗುತ್ತಿರುವುದು ಬೆಳೆಯಲು ಮುಂದುವರಿಯುತ್ತದೆ, ಆಗ ಒಡಕು ಮಹತ್ವವಾಗಿ ಇತರ ಅನೇಕರನ್ನು ನೋಯಿಸುತ್ತದೆ, ಇಂಥಾ ಒಂದು ಹಂತದಲ್ಲಿ ತಿದ್ದುವಿಕೆಯು ಅಗತ್ಯವಾಗಿರುತ್ತದೆ. ನಮ್ಮ ಸೇವೆಗಳ ಮೇಲೆ ಆತ್ಮಿಕ ನಾಯಕರಾಗಿ, ಕರ್ತನು ನಮಗೆ ದೃಢತೆಯನ್ನು ನಾವು ಬಳಸುವುದರ ಮೂಲಕ ಅಧಿಕಾರ ಕೊಟ್ಟಿರುತ್ತಾನೆ, ಹಾಗೂ ಹೀಗಿದ್ದರೂ ಪರಿಶೀಲಿಸಿ, ಜನರನ್ನು ನಾಶಮಾಡದೆ ಇರುವ ರೀತಿಯಲ್ಲಿ ಇದು ನಡೆಯಬೇಕಾಗುತ್ತದೆ, ಕೆಲವು ವೇಳೆ ನಾವೆಲ್ಲರೂ ಒಂದು ಸ್ಥಿತಿಯ ಬಗ್ಗೆ ಕೆಲಸ ಮಾಡಿದಾಗ ನಾವು ಮುಂದೆ ಪರಿತಪಿಸುವ ಒಂದು ರೀತಿಯಲ್ಲಿ ವಿಷಯಗಳನ್ನು ನಿಭಾಯಿಸಲು ಹವಣಿಸುತ್ತೇವೆ, ನಾವು ಶಿಸ್ತು ಮತ್ತು ತಿದ್ದುವಿಕೆಯನ್ನು ತರುವಾಗ ಪ್ರೀತಿ ಮತ್ತು ಕರುಣೆಗಳನ್ನು ಹೊಂದಿರುವುದಿಲ್ಲ ನಾನು ಏನುಮಾಡಲು ಕಲಿತಿದ್ದೇನೆಂದರೆ, ಅದು ಎರಡು ಹಂತಗಳ ಪ್ರಯತ್ನವಾಗಿರುತ್ತದೆ ಎಚ್ಚರಿಸುವುದು ಹಾಗೂ ತಿದ್ದುವುದು. ವಿಷಯಗಳು ತಪ್ಪಾಗಿರುವುದನ್ನು ನಾನು ನೋಡುವಾಗ ಮೊದಲನೇ ಹೆಜ್ಜೆಯು, ಸಂಗತಿಗಳು ಸರಿಯಾಗಿ ಆಗುತ್ತಿಲ್ಲ, ವಿಷಯಗಳು ಬದಲಾಗಬೇಕು ಹಾಗೂ ಒಂದು ನಿರ್ದಿಷ್ಟ ದಾರಿಯಲ್ಲಿ ಹೋಗಿ ಎಂದು ಎಚ್ಚರಿಸಬೇಕು, ಹಾಗೂ ಯಾವುದು ನಿರೀಕ್ಷಿಸಲ್ಪಟ್ಟಿದೆ ಹಾಗೂ ಅವರು ತಪ್ಪು ತಿದ್ದುವುದರ ನಡವಳಿಕೆಯನ್ನು ಹೊಂದಬೇಕಾಗುತ್ತದೆ, ನಂತರ ನಾನು ವ್ಯಕ್ತಿಗೆ ಸಾಕಷ್ಟು ಸಮಯ ಹೇಳಿದ ಕೆಲಸಕ್ಕಾಗಿ ಕೊಡುತ್ತೇನೆ. ಅವರಿಗೆ ಬದಲಾವಣೆ ಹೊಂದಲು ಸಾಕಷ್ಟು ಸಮಯ ನೀಡಲ್ಪಟ್ಟಿದ್ದರೂ ವಿಷಯಗಳು ಬದಲಾಗಿಲ್ಲವೆಂಬುದನ್ನು ನಾನು ತಿಳಿದ ನಂತರ ಪ್ರೀತಿಯ ತಿದ್ದುವಿಕೆಯನ್ನು ತರುವ ಮುಂದಿನ ಹೆಜ್ಜೆಯನ್ನು ನಾನು ತೆಗೆದು ಕೊಂಡೆನು ಇದು ದೈವಿಕ ಜ್ಞಾನದ ಅಗತ್ಯ ನಮಗಿರುವ ಕಠಿಣ ಕರವಾದ ಭಾಗವಾಗಿದೆ.

ಅಗತ್ಯವಾದ ತಿದ್ದುವಿಕೆಯು ಯಾವುದು ತಪ್ಪಾಗಿ ಆಗುತ್ತದೋ ಅದು "ಕಾರಣ ಮತ್ತು ಪರಿಣಾಮ"ಗಳ ಮೇಲೆ ಅವಲಂಬಿಸಿರುತ್ತದೆ. ಅಗತ್ಯತೆಗಳನ್ನು ಸಂಧಿಸದ "ಕಾರಣ"ವು ಕುಶಲತೆಯ ಕೊರತೆ, ತರಬೇತಿಯ ಕೊರತೆ ಸರಿಯಾದ ಸಮಯದ ನಿರ್ವಹಣೆಯ ಕೊರತೆಗಳು ಹಾಗೂ ಇತ್ಯಾದಿ ಕಾರ್ಯಗಳೊಂದಿಗೆ ಮಾಡಬೇಕಾಗುತ್ತದೆ, ನಂತರ

ಈ ಕುಶಲತೆಗಳನ್ನು ಬೆಳೆಸಲು ವ್ಯಕ್ತಿಗೆ ಸಹಾಯ ಮಾಡುವ ಪ್ರಯತ್ನ ಮಾಡುವುದರಿಂದ ಪರಿಸ್ಥಿತಿಯ ಸುಧಾರಣೆ ಮಾಡಲು ಪ್ರಯತ್ನಿಸುತ್ತೇವೆ. ಮತ್ತೊಂದು ಕಡೆ "ಕಾರಣವು" ಸೋಮಾರಿತನ, ಕಷ್ಟಪಟ್ಟು ಕೆಲಸಮಾಡಲು ಇಷ್ಟಪಟ್ಟು ಕೆಲಸಮಾಡಲು ಇಷ್ಟವಿಲ್ಲದಿರುವಿಕೆ, ದಂಗೆ ಏಳುವುದು, ಗರ್ವ, ಜನರೊಂದಿಗೆ ಹೋರಾಟಗಳು, ಕೆಟ್ಟ ನಡವಳಿಕೆಗಳು, ಸ್ವಾರ್ಥಪರತೆಗಳು, ಶ್ರೇಷ್ಠ ಆತ್ಮಿಕತೆ ಅಥವಾ ಉನ್ನತ ಮಟ್ಟದ ಮನಸ್ಸಿನ ಪರಿಸ್ಥಿತಿಗಳೊಂದಿಗೆ ಕೆಲಸಮಾಡಬೇಕಾದರೆ, ಆಗ ನಾನು ತರುವ ತಿದ್ದುವಿಕೆಯು ಆಗಾಗ್ಗೆ ಹೊಣೆಗಾರಿಕೆಯ ವಲಯದಿಂದ ವ್ಯಕ್ತಿಯನ್ನು ಬಿಡುಗಡೆ ಮಾಡುವಷ್ಟು ಗಂಭೀರವಾಗಿರುತ್ತದೆ, ಇದರಿಂದ ಅವರು ದೇವರ ಕೆಲಸವನ್ನು ತಮ್ಮ ಜೀವಿತಗಳಲ್ಲಿ ಮಾಡಲು ಆತನಿಗೆ ಅವಕಾಶ ಕೊಡುತ್ತಾರೆ. ತಿದ್ದುವಿಕೆಯನ್ನು ಉಂಟುಮಾಡುವುದರಲ್ಲಿ, ನಾನು ಕೂಡಾ "ಪರಿಣಾಮ"ದ ಕಡೆಗೆ ನೋಡುತ್ತೇನೆ. ವ್ಯಕ್ತಿಯ ಸೋಲುವಿಕೆ ತಪ್ಪು ಕಾರ್ಯ ಮಾಡುವುದರ ಪರಿಣಾಮ ಹಾಗೂ ಫಲ ಏನು? ಪರಿಣಾಮವು ಬಹು ಮಟ್ಟಿಗೆ ಕಡಿಮೆ ಪ್ರಮಾಣದ ಮೇಲೆ ಹೊಂದಿಕೆಯಾಗಿದ್ದರೆ, ಅದು ತಡೆಯಲ್ಪಡುತ್ತದೆ, ಇದರಿಂದ ಹೆಚ್ಚು ಒಡಕುಗಳಾಗಲಾರದು, ಆಗ ಹೆಚ್ಚು ಸಮಯವನ್ನು ಒದಗಿಸಿ ವ್ಯಕ್ತಿಯೊಂದಿಗೆ ಹೆಚ್ಚು ಸಹನೆಯುಳ್ಳವರಾಗಿ ಬದಲಾವಣೆಗೆ ಅನುಕೂಲ ಮಾಡುತ್ತದೆ, ಹೇಗಾದರೂ, ಆ ವ್ಯಕ್ತಿಯ ಸೋಲುವಿಕೆಯ ಪರಿಣಾಮವು ಒಂದು ವಿಶಾಲವಾದ ಪ್ರಮಾಣದಲ್ಲಿದ್ದರೆ ಸೇವೆಯ ಒಂದು ನಿರ್ದಿಷ್ಟ ವಲಯದ ಮೇಲೆ ಪ್ರಭಾವ ಬೀರಿದರೆ, ಬಹಳಷ್ಟು ಜನರಿಗೆ ಕೆಟ್ಟ ನಿದರ್ಶನವಾಗಿ ಸಿದ್ಧಮಾಡುತ್ತದೆ, ಆಗ ತಿದ್ದುವಿಕೆಯು ಸ್ವಲ್ಪ ಮಟ್ಟಿಗೆ ಕಟ್ಟು ನಿಟ್ಟಾದಾಗ ತಕ್ಷಣವೇ ಹಾಗೂ ಮೇಲಿಂದ ಮೇಲೆ, ವ್ಯಕ್ತಿಯನ್ನು ಆ ಸೇವೆಯ ಒಳಗೊಳ್ಳುವಿಕೆಯ ವಲಯದಿಂದ ಬಿಡುಗಡೆ ಮಾಡಲು ಕಾರ್ಯ ಮಾಡುತ್ತದೆ, ಇದರಿಂದ ಹೆಚ್ಚಿನ ಒಡಕು ಉಂಟಾಗದಂತೆ ಗೋಪ್ಯವಾಗಿ ವಿಷಯಗಳನ್ನು ಅವರು ಹೊಂದಿಸುತ್ತಾರೆ.

ತಿದ್ದುವಿಕೆಯಲ್ಲಿನ ಉದ್ದೇಶವು ಯಾವಾಗಲೂ ಆಶೀರ್ವಾದ ನೀಡುವುದಕ್ಕಾಗಿ ಇದೆ. ನಾವು ಜನರ ಆಶೀರ್ವಾದ ಹಾಗೂ ಹಿತವನ್ನು ಬಯಸುತ್ತೇವೆ, ನಾವು ಸುರಕ್ಷಣೆ ನೀಡಲು ಪ್ರಯತ್ನಿಸುತ್ತೇವೆ, ಹಾಗೂ ನಾವು ತಿದ್ದಿ ಸರಿ ಪಡಿಸುವವರಿಗೆ ಆಶೀರ್ವಾದ ಹಾಗೂ ಹಿತವನ್ನು ಬಯಸುತ್ತೇವೆ, ತಿದ್ದುವಿಕೆಯ ಪ್ರಕ್ರಿಯೆಯು ನೋವನ್ನು ಉಂಟು

ಮಾಡಬಹುದು, ತಿದ್ದುವಿಕೆಯನ್ನು ತರುವಾಗ ನಾನು ವ್ಯಕ್ತಿಯೊಂದಿಗೆ ನನ್ನ ಸಂಬಂಧವನ್ನು ನಾಶ ಮಾಡಿಕೊಳ್ಳಲು ನಾನು ಪ್ರಯತ್ನಿಸುವುದಿಲ್ಲ, ದೇವರ ಮುಂದೆ ಯಾವುದು ಸರಿ ಎಂಬುದನ್ನು ತಿಳಿದು ತಿದ್ದುವಿಕೆಯನ್ನು ತರುವಾಗಲೂ ನಾನು ನನ್ನ ಹೃದಯವನ್ನು ಕಾಪಾಡಿ ಕೊಳ್ಳುತ್ತೇನೆ, ಹಾಗೂ ವ್ಯಕ್ತಿಯ ಕಡೆಗೆ ನಾನು ಯಾವುದೇ ರೀತಿಯ ಅಹಿತಕರ ಭಾವನೆಯನ್ನು ವೈಯಕ್ತಿಕವಾಗಿ ಹೊಂದಿಲ್ಲ, ನಾನು ಆ ವ್ಯಕ್ತಿಯ ಕಡೆಯಿಂದ ಒಂದು ಪರಿಶೀಲನಾ ದೃಷ್ಟಿಯಿಂದ ಕೊಡುವ ಮತ್ತು ಪಡೆಯುವುದಕ್ಕೆ ಸಂಬಂಧಿಸಿದಂತೆ ಮುಕ್ತವಾಗಿ ಉಳಿಯುತ್ತೇನೆ,

ದಯವಿಟ್ಟು ಗಮನಿಸಿ, ಜನರನ್ನು ತಿದ್ದುವುದರ ಬಗ್ಗೆ ಚರ್ಚಿಸುವುದರಲ್ಲಿ, ನಾನು ವೈಯಕ್ತಿಕ ಪರಿಣಾಮಗಳ ಬಗ್ಗೆ ಮಾತನಾಡುವುದಿಲ್ಲ– ಅಂದರೆ ನಾವು ಒಬ್ಬ ಸಭಾ ಪಾಲಕರು ಹಾಗೂ ಒಬ್ಬ ಸಭಾಸದಸ್ಯರ ನಡುವಿನ ವೈಯಕ್ತಿಕ ಹೋರಾಟಗಳ ಬಗ್ಗೆ ನಾವು ಮಾತನಾಡುವುದಿಲ್ಲ. ಇಂಥಾರೀತಿಯ ಪರಿಸ್ಥಿತಿಗಳು ವಿಭಿನ್ನವಾಗಿ ನಿರ್ವಹಿಸಲ್ಪಡಬೇಕು ಹಾಗೂ ಪ್ರಕ್ರಿಯೆಯು ವ್ಯತ್ಯಾಸವಾಗಿರುತ್ತವೆ (ಮತ್ತಾಯ 18:15–22, ಮಾರ್ಕ 11:25–26). ನಾನು ಉಲ್ಲೇಖಿಸುವುದೇನೆಂದರೆ, ಜನರು ಸೇವೆಯಲ್ಲಿ ತಮ್ಮ ಪಾತ್ರ ಹಾಗೂ ಹೊಣೆಗಾರಿಕೆಯಲ್ಲಿ ಸೋಲುವುದರಲ್ಲಿ ನಡೆಸಲ್ಪಡುವಾಗ, ಅಥವಾ ಸಭಿಕರಲ್ಲೊಬ್ಬರು ಸ್ಥಳೀಯ ವಿಶ್ವಾಸಿಗಳ ಅಂಗಕ್ಕೆ ತೊಂದರೆ ಉಂಟುಮಾಡುವ ಒಂದು ತಪ್ಪನ್ನು ಮಾಡಿದಾಗ ನಾನು ತಪ್ಪನ್ನು ತಿದ್ದುತ್ತೇನೆ.

## ಗೋಪ್ಯವಾಗಿ ತಪ್ಪು ತಿದ್ದಿರಿ, ಬಹಿರಂಗವಾಗಿ ಚಪ್ಪಾಳೆ ತಟ್ಟಿರಿ (ಶ್ಲಾಘಿಸಿರಿ)

**"ದೋಷವನ್ನು ಮುಚ್ಚಿಡುವವನು ಪ್ರೇಮವನ್ನು ಸೆಳೆಯುವನು. ಎತ್ತಿ ಆಡುತ್ತಿರುವವನು ಸ್ನೇಹವನ್ನು ಕಳೆದು ಕೊಳ್ಳುವನು"** (ಜ್ಞಾನೋಕ್ತಿಗಳು 17:9).

**"ಸಭೆಯ ಹಿರಿಯನ ಮೇಲೆ ಯಾರಾದರೂ ದೂರು ಹೇಳಿದರೆ ಇಬ್ಬರು ಮೂವರು ಸಾಕ್ಷಿಗಳಿದ್ದ ಹೋರತಾಗಿ ಅದನ್ನು ಮನಸ್ಸಿಗೆ ತೆಗೆದುಕೊಳ್ಳಬೇಡ. ಪಾಪದಲ್ಲಿ ನಡೆಯುವವರನ್ನು ಎಲ್ಲರ ಮುಂದೆಯೇ ಗದರಿಸು. ಇವರಿಂದ ಮಿಕ್ಕಾದವರಿಗೂ ಭಯವುಂಟಾಗುವದು"** (1 ತಿಮೊಥೆಯನಿಗೆ 5:19, 20).

ತಪ್ಪಾಗಿರುವ ಯಾವುದರ ತಿದ್ದುವಿಕೆಯನ್ನು ತರುವುದು ಒಂದು ಕಷ್ಟಕರವಾದ ಹಾಗೂ ನೋವಿನ ಪ್ರಕ್ರಿಯೆಯಾಗಿದ್ದು ತಪ್ಪು

ತಿದ್ದುವಿಕೆಯನ್ನು ಪಡೆಯುವ ಹಾಗೂ ತಿದ್ದುವಿಕೆಯನ್ನು ನೀಡುವ ಇಬ್ಬರಿಗೂ ಅನ್ವಯಿಸುತ್ತದೆ. ಇದು ಸುಲಭವಲ್ಲ, ಒಮ್ಮೆ ಅದು ಆದರೆ ನಾವು ಅದನ್ನು ಪಕ್ಕಕ್ಕಿಟ್ಟು, ಇತರರೊಂದಿಗೆ ಅವರ ಬಗ್ಗೆ ಮಾತನಾಡದೆ, ಹರಟದೆ, ಸುಳ್ಳು ಸುದ್ದಿಗಳನ್ನು ಹಬ್ಬಿಸದೆ ಇರಬೇಕು, ಹಾಗೂ ಖಂಡಿತವಾಗಿ, ನಾವು ಜನರ ತಪ್ಪುಗಳನ್ನು ಪ್ರಸಂಗ ಪೀಠದಿಂದ ಬಹಿರಂಗವಾಗಿ ಮಾತನಾಡಬಾರದು. ಒಬ್ಬ "ಹಿರಿಯ"ನನ್ನು ತಿದ್ದುವುದು ಕಾರ್ಯರೂಪಕ್ಕೆ ಬರುವ ಕೆಲವು ಸಂದರ್ಭಗಳಿವೆ, ಅಂದರೆ ಆತ್ಮಿಕ ನಾಯಕತ್ವದಲ್ಲಿರುವ ಯಾರಾದರೂ ಬಹಿರಂಗವಾಗಿ ಸಂಪರ್ಕಮಾಡಬೇಕಾದ ಅಗತ್ಯವಿರುತ್ತದೆ. ತಿದ್ದಲ್ಪಡಬೇಕಾದ ವ್ಯಕ್ತಿಯ ಒಳ್ಳೆ ಸಂಗತಿಗಳನ್ನು ಮನಸ್ಸಿನಲ್ಲಿಟ್ಟುಕೊಂಡು, ಶುದ್ಧವಾದ ಹೃದಯದೊಂದಿಗೆ ಹಾಗೂ ಮನೋಭಾವದೊಂದಿಗೆ, ಸ್ಥಳೀಯ ಅಂಗವನ್ನು ಕಾಪಾಡಲು ಕಾರ್ಯವನ್ನು ಮಾಡಬೇಕು. ಹೇಗಾದರೂ ಅಗತ್ಯವಾದಾಗ ಮಾತ್ರ ಇದನ್ನು ಮಾಡಿರಿ.

ಮತ್ತೊಂದು ಕಡೆ ಜನರು ಬಹಿರಂಗವಾಗಿ ಮಾಡಿರುವ ಒಳ್ಳೇ ಕಾರ್ಯಕ್ಕಾಗಿ ಶ್ಲಾಘಿಸಲು ಸಿದ್ಧರಾಗಿರ್ರಿ ಇದನ್ನು ಆಗಾಗ್ಗೆ ಮಾಡಿರಿ. ಇದು ಇತರರನ್ನು ಒಳ್ಳೇ ಮಾದರಿಯನ್ನು ಅನುಸರಿಸಲು ಪ್ರೇರೇಪಿಸುತ್ತದೆ. ಒಂದು ಮಾರ್ಗ ಸೂಚಿಯಾಗಿ ಜನರನ್ನು ಗೋಪ್ಯವಾಗಿ ತಿದ್ದಿರಿ. ಬಹಿರಂಗವಾಗಿ ಜನರನ್ನು ಶ್ಲಾಘಿಸಿರಿ, ಇದರಿಂದ ಇತರರು ಪ್ರೇರಿಸಲ್ಪಡುತ್ತಾರೆ.

## ಕಷ್ಟಕರ ಸನ್ನಿ ವೇಶಗಳನ್ನು ನಿಭಾಯಿಸುವಾಗ ಒಂದು ವೈಯಕ್ತಿಕ ತಂತ್ರೋಪಾಯವನ್ನು ಹೊಂದಿಕೊಳ್ಳಿರಿ

**"ಬುದ್ಧಿವಾದವನ್ನು ಕೇಳು, ಉಪದೇಶವನ್ನಾಲಿಸು, ಮುಂದೆ ಜ್ಞಾನಿಯಾಗುವಿ"** (ಜ್ಞಾನೋಕ್ತಿಗಳು 19:20).

ಜೀವಿತದಲ್ಲಿ ಹಾಗೂ ಸೇವೆಯಲ್ಲಿ ನಾವು ಎದುರಿಸುವ ಕಷ್ಟಕರ ಸನ್ನಿವೇಶಗಳಿಂದ ನಾವು ಮುಂದುವರಿದು ಕಲಿಯುವುದು ಹಾಗೂ ಅವುಗಳ ಮುಖಾಂತರ ಬೆಳೆಯುವುದು ಮುಖ್ಯವಾದುದು. ಜನರೊಂದಿಗೆ ನಾವು ಹೇಗೆ ಕೆಲಸ ಮಾಡುಬೇಕು, ಜನರೊಂದಿಗೆ ಕಷ್ಟಕರ ಸನ್ನಿವೇಶಗಳೊಂದಿಗೆ ಹೇಗೆ ವ್ಯವಹರಿಸುವುದು ಎಂಬುದನ್ನು ನಾವು ಕಲಿತುಕೊಳ್ಳಬೇಕು, ಸಮಯ ದಾಟಿದಂತೆ, ನಾವು ಜನರೊಂದಿಗೆ ವ್ಯವಹರಿಸುವಾಗ ಹಾಗೂ ಕೆಲಸ ಮಾಡುವಾಗ ನಾವು ಒಂದು ತಂತ್ರೋಪಾಯವನ್ನು

ಬೆಳೆಸಬಹುದು. ಉದಾಹರಣೆಗೆ ನಾನು ಅನುಸರಿಸಬೇಕಾದ ಕೆಲವು ಅಂಶಗಳು ಇಲ್ಲಿವೆ, ನಮ್ಮ ಸಭೆಯ ತಂಡದೊಂದಿಗೆ ದಿನದಿಂದ ದಿನದ ಸಂಪರ್ಕದೊಂದಿಗೆ ನಾನು ಬೇಕಾದಷ್ಟು ಇ-ಮೇಲ್‌ಗಳನ್ನು ಮಾಡುತ್ತೇನೆ, ನಾನು ಪ್ರತಿಯೊಂದು ಚಿಕ್ಕ ವಿಷಯಕ್ಕೂ ಕೂಟಗಳನ್ನು ಕರೆಯುತ್ತಿಲ್ಲ. ಇ-ಮೇಲ್ ಮೂಲಕ ಕೆಲಸ ಮಾಡುವುದರಿಂದ ಬಹಳಷ್ಟು ಕೆಲಸಗಳನ್ನು ಶೀಘ್ರವಾಗಿ ವೇಗವಾಗಿ ಮಾಡಲು ನನಗೆ ಸಹಾಯಗುತ್ತದೆ. ಹಾಗೂ ವಿಷಯಗಳನ್ನು ಬರವಣಿಗೆಯಲ್ಲಿ ಇಡಲು ಸಹಾಯ ಮಾಡುತ್ತದೆ. ಇದರಿಂದ ಏನು ಮಾಡಬೇಕೆಂಬ ಅಗತ್ಯತೆಗಳ ಮೇಲೆ ವಿಷಯಗಳು ಸ್ಪಷ್ಟವಾಗುತ್ತವೆ. ವಿಷಯಗಳು ಮುಖ್ಯವಾದವು ಹಾಗೂ ಚರ್ಚೆ, ಸಂಗ್ರಹಿಸಲ್ಪಟ್ಟ ಮಾಹಿತಿಗಳು, ಹಲವು ಜನರಿಂದ ಅಭಿಪ್ರಾಯಗಳು, ಇವುಗಳ ಅಗತ್ಯವಿರುತ್ತದೆ, ಎಲ್ಲಾರೂ ಒಟ್ಟಾಗಿ ಕುಳಿತು ಚರ್ಚಿಸುವಾಗ ಒಂದು ತಂಡದ ಕೂಟದಲ್ಲಿ ಅತ್ಯುತ್ತಮವಾಗಿ ಆಗುತ್ತದೆ. ಇದರಿಂದ ಯಾವಾಗ ಇದು ಅಗತ್ಯವಾಗಿರುತ್ತದೋ ಆಗ ನಾನು ಅಗತ್ಯವಿರುವವರೊಂದಿಗೆ ಮಾತ್ರ ಕೂಟಕ್ಕಾಗಿ ಆಹ್ವಾನಿಸುತ್ತೇನೆ. ಇದು ಈ ದಿನ ಬರುವ ಒಂದು ಸಾಮಾನ್ಯ ದಿನವಾಗಿರುತ್ತದೆ.

ಹೇಗಾದರೂ, ಏನಾದರೂ ಕಷ್ಟಕರ ಸನ್ನಿವೇಶಗಳು ಉಂಟಾದಾಗ, ಆಗ ಒಂದು ಮಾರ್ಗ ಸೂಚಿಯಾಗಿ ಇ-ಮೇಲ್ ಅಥವಾ ಫೋನ್‌ಗಿಂತ ಮುಖಾಮುಖಿಯಾಗಿ ವಿಷಯಗಳನ್ನು ನಿಭಾಯಿಸಲು ನಾನು ಆಯ್ಕೆ ಮಾಡಿಕೊಂಡೆನು. ಕಷ್ಟಕರ ವಿಷಯಗಳನ್ನು ಇ-ಮೇಲ್ ಅಥವಾ ಫೋನ್ ಕರೆಗಳ ಮುಖಾಂತರ ನಿಭಾಯಿಸಲು ಪ್ರಯತ್ನಿಸುವುದು ವಿಷಯಗಳನ್ನು ಮತ್ತಷ್ಟು ಕಠಿಣಕರವಾಗಿ ಮಾಡುತ್ತದೆ, ಒಂದು ಇ-ಮೇಲನ್ನು ಓದುವಾಗ ಮೊದಲಸ್ಥಾನದಲ್ಲಿ ಭಾವೋದ್ವೇಗಗಳು ಹಾಗೂ ಭಾವಗಳು ಇರುವುದಿಲ್ಲವೆಂದು ಒಪ್ಪಿಕೊಳ್ಳುವುದು ಸುಲಭವಲ್ಲ. ಹೀಗಾಗಿ ಯಾವಾಗಲೂ ಮುಖಾಮುಖಿಯಾಗಿ ವಿಷಯಗಳನ್ನು ಚರ್ಚಿಸುವುದು ಅತ್ಯುತ್ತಮವಾದುದು. ನಾನು ಬಹಳಷ್ಟು ಮಟ್ಟಿಗೆ ಆಲಿಸುತ್ತೇನೆ—ಎಲ್ಲಾ ಕಡೆಗಳಲ್ಲೂ ಹಾಗೂ ದೇವರನ್ನು—ಆಲಿಸುತ್ತೇನೆ ಎಂದು ಅವಶ್ಯಕವಾಗಿ ಅರ್ಥಕೊಡುವ ವಿಷಯಗಳನ್ನು ಕುರಿತು ಮಾತಾನಾಡುವುದು "ಪ್ರಾಮುಖ್ಯವಾಗಿದೆ. ಒಮ್ಮೆ ಇದು ಆದಾಗ ನಾನು ಒಂದು ತೀರ್ಮಾನ ಮಾಡಿಕೊಂಡು ಮುಖಾಮುಖಿಯಾಗಿ ಸಂಪರ್ಕಿಸುತ್ತೇನೆ.

ಮೊದಲು ಈ ಸರಳವಾದ ವಿಷಯಗಳಲ್ಲಿ ಕೆಲವನ್ನು ನಾನು ತಿಳಿದಿರಲಿಲ್ಲ, ಹಾಗೂ ಜನರು ಹಾಗೂ ಸನ್ನಿವೇಶಗಳೊಂದಿಗೆ ವ್ಯವಹರಿಸಿದ ರೀತಿಯಲ್ಲಿ ಹಲವಾರು ತಪ್ಪುಗಳನ್ನು ಮಾಡಿರುತ್ತೇವೆ. ನಾನು ಜನರೊಂದಿಗೆ ಕೆಲಸಮಾಡುವ ಸರಿಯಾದ ರೀತಿಗಳನ್ನು ನಾನು ತಿಳಿದಿದ್ದರೆ, ನಾನು ವಿಷಯಗಳನ್ನು ಬಹು ಜ್ಞಾನದಿಂದ ಮಾಡಿರುತ್ತಿದ್ದೆನು. ಹೇಗಾದರೂ ಇದೊಂದು ಕಲಿಕೆಯ ಪ್ರಕ್ರಿಯೆಯಾಗಿರುತ್ತದೆ. ಹಾಗೂ ನಾನು ನನ್ನ ಹೃದಯವನ್ನು ತೆರೆದಿಟ್ಟುಕೊಂಡು, ಕಷ್ಟಕರ ಜನರ ಹಾಗೂ ಸನ್ನಿ ವೇಶಗಳನ್ನು ನಿಭಾಯಿಸಲು ನೋಡಲು ಪ್ರತಿಬಿಂಬಿಸಲು ಹಾಗೂ ಬೇರೆ ರೀತಿಯ ಉತ್ತಮ ದಾರಿಗಳನ್ನು ಕಂಡು ಕೊಳ್ಳಲು ನಾನು ಮುಂದುವರಿಸುತ್ತೇನೆ.

## ದೇವರ ಜನರ ಮೇಲೆ ಅಧಿಕಾರ ನಡೆಸಬೇಡಿ

**"ಸಭೆಯ ಹಿರಿಯರೇ, ಜೊತೆಹಿರಿಯವನಾದ ನಾನು ಕ್ರಿಸ್ತನ ಬಾಧೆಗಳನ್ನು ಕಣ್ಣಾರೆ ಕಂಡವನೂ ಇನ್ನು ಮುಂದೆ ಪ್ರತ್ಯಕ್ಷನಾಗುವ ಪ್ರಭಾವದಲ್ಲಿ ಪಾಲುಗಾರನೂ ಆಗಿದ್ದು ನಿಮ್ಮನ್ನು ಎಚ್ಚರಿಸಿ ಹೇಳುವುದೇನಂದರೆ ನಿಮ್ಮಲ್ಲಿರುವ ದೇವರ ಮಂದೆಯನ್ನು ಕಾಯಿರಿ. ಬಲಾತ್ಕಾರದಿಂದಲ್ಲ ದೇವರ ಚಿತ್ತದ ಪ್ರಕಾರ ಇಷ್ಟ ಪೂರ್ವಕವಾಗಿಯೂ ನೀಚವಾದ ದ್ರವ್ಯಾಶೆಯಿಂದಲ್ಲ ಸಿದ್ಧಮನಸ್ಸಿನಿಂದಲೂ ಮೇಲ್ವಿಚಾರಣೆ ಮಾಡಿರಿ. ದೇವರು ನಿಮ್ಮ ವಶದಲ್ಲಿಟ್ಟಿರುವ ಸಭೆಗಳ ಮೇಲೆ ದೊರೆತನ ಮಾಡುವವರಂತೆ ನಡೆಯುದೆ ಮಂದೆಗೆ ಮಾದರಿಯಾಗಿಯೇ ನಡೆದುಕೊಳ್ಳಿರಿ. ಹಿರೀ ಕುರುಬನು ಪ್ರತ್ಯಕ್ಷನಾಗುವಾಗ ನೀವು ದೇವಪ್ರಭಾವವೆಂಬ ಎಂದಿಗೂ ಬಾಡದ ಜಯ ಮೂಲೆಯನ್ನು ಹೊಂದುವಿರಿ" (1 ಪೇತ್ರನು 5:1–4)**

ನಾವು ಆತ್ಮಿಕ ಹಿರಿಯರು ಹಾಗೂ ನಾಯಕರಾಗಿದ್ದರೂ, ದೇವಜನರ ಮೇಲೆ ನಾವು, "ಯಜಮಾನರ"ಗಳಾಗಬಾರದೆಂದು ಸತ್ಯವೇದವು ಬಹಳವಾಗಿ ಸ್ಪಷ್ಟ ಪಡಿಸುತ್ತದೆ. ಬದಲಾಗಿ, ನಾಯಕರಾಗಿ ನಾವು ದೇವರ ಮುಂದೆಗೆ ಮಾದರಿಗಳಾಗಿರಬೇಕು. ದುರದೃಷ್ಟಕರವಾಗಿ, ಗೌರವ ನೀಡುವುದು ಹಾಗೂ ನಾಯಕರ ಸೇವೆ ಮಾಡುವುದು ಒಳ್ಳೆಯದು, ಬಹು ವಿಧಗಳಲ್ಲಿ ಇದು ಎಷ್ಟು ದೂರ ಹೋಗಿದೆ ಎಂದು ನಾನು ಭಾವಿಸಿದ್ದೇನೆ, ಒಬ್ಬ ಆತ್ಮಿಕ ನಾಯಕನನ್ನು ಸನ್ಮಾನಿಸುವ ಹೆಸರಿನಲ್ಲಿ, ನಾಯಕನು ತಮಗೆ ಸೇವೆ ಮಾಡುವ ಜನರನ್ನು ದುರುಪಯೋಗ ಪಡಿಸಿಕೊಳ್ಳುತ್ತಾರೆ ಹಾಗೂ ಅನ್ಯಾಯ ಮಾಡುತ್ತಾರೆ. ತಾವು ಮಾಡುತ್ತಿದ್ದ ಅಂಶಗಳನ್ನೇ ಜನರು ಮಾಡುವಂತೆ ಅವರನ್ನು ಉಪಯೋಗಿಸಿಕೊಳ್ಳುತ್ತಾರೆ. ಒಬ್ಬ

ಸಭಾಪಾಲಕರು ರಕ್ಷಕಭಟರಂಥಾ ಒಂದು ಗುಂಪು ಜನರೊಂದಿಗೆ, ಒಬ್ಬರು ಆತನ ಸತ್ಯವೇದವನ್ನು ಮತ್ತೊಬ್ಬರು ಆತನ ಬ್ರೀಫ್‌ಕೇಸನ್ನೂ, ಇನ್ನೊಬ್ಬರು ಆತನ ಮೊಬೈಲ್ ಫೋನ್‌ನನ್ನು ಹಿಡಿದುಕೊಂಡಿರುವಂತೆ ಪ್ರಸಂಗ ಪೀಠದ ಕಡೆಗೆ ನಡೆದು ಬರುತ್ತಿದ್ದುದನ್ನು ನೋಡುವಾಗ ನನಗೆ ಬಹಳ ವಿಸ್ಮಯ ಉಂಟಾಯಿತು. ದೇವರ ಅಭಿಷಿಕ್ತರನ್ನು ನಾನು ಗೌರವಿಸುವಲ್ಲಿ ಸಭಾಪಾಲಕರು ತಮ್ಮ ಸ್ವಂತ ಸತ್ಯವೇದವನ್ನು ತಾವೇ ಹಿಡಿದು, ತಮ್ಮ ಸ್ವಂತ ವಸ್ತುಗಳ ಜವಾಬ್ದಾರಿಯನ್ನು ತಾವೇ ಹೊರುವುದನ್ನು ಕಲಿಯ ಬೇಕೆಂದು ನಾನು ವೈಯಕ್ತಿಕವಾಗಿ ಆಲೋಚಿಸುತ್ತೇನೆ. ಸುತ್ತಲಿನ ಜನರಿಗೆ ಇದನ್ನು ಮಾಡಲು ಅಥವಾ ಅದನ್ನು ಅಂದರೆ ತಮ್ಮಿಂದ ಸುಲಭವಾಗಿ ಮಾಡಲು ಸಾಧ್ಯವಾಗುವ ಕೆಲಸಗಳನ್ನು ಮಾಡಲು ಸಭಾಪಾಲಕರುಗಳು ಅಪ್ಪಣೆ ಕೊಡುವುದನ್ನು ನಾನು ನೋಡುತ್ತೇನೆ. ಈ ದಿನ ಕ್ರೈಸ್ತ ಸಾಮ್ರಾಜ್ಯದಲ್ಲಿ ಇದನ್ನು ಹಾಗೂ ಮತ್ತಷ್ಟು ಹೆಚ್ಚಾದ ಅನ್ಯಾಯಗಳನ್ನು ಮಾಡುವುದನ್ನು ನಾವು ನೋಡುತ್ತೇವೆ, ಇದು ನಾಯಕರುಗಳು ದೇವ ಜನರ ಮೇಲೆ ತಾವು "ಯಜಮಾನರು"ಗಳಂತೆ ಜೀವಿಸುವುದಾಗಿರುತ್ತದೆ. ಹಾಗೂ ಅವರು ದೇವರ ವಾಕ್ಯದ ಉಲ್ಲಂಘನೆಯಲ್ಲಿ ಇರುತ್ತಾರೆ. ಅವರ ಜೀವಿತಗಳು ಕ್ರಿಸ್ತನಂತೆ ಇರುವ ಹಾಗೂ ಕ್ರಿಸ್ತನಂಥ ಸೇವಕತ್ವದ ದೈವಿಕ ಮಾದರಿಯಾಗಿರುವುದಿಲ್ಲ.

## ನಿರ್ಬಂಧಿಸಬೇಡಿ, ಕೈವಾಡ ತೋರಿಸಬೇಡಿ

**"ನಾವು ನಂಬಿಕೆಯ ವಿಷಯದಲ್ಲಿಯೂ ನಿಮ್ಮ ಮೇಲೆ ದೊರೆತನ ಮಾಡುವವರೆಂದು ನನ್ನ ತಾತ್ಪರ್ಯವಲ್ಲ, ನಿಮ್ಮ ಸಂತೋಷಕ್ಕೆ ನಾವು ಸಹಾಯಕರಾಗಿದ್ದೇವೆ; ನಂಬಿಕೆಯ ವಿಷಯದಲ್ಲಿ ದೃಢ ನಿಂತಿದ್ದೀರಿ" (2 ಕೊರಿಂಥರವರಿಗೆ 1:24)**

ಸಭಾಪಾಲಕರುಗಳಾಗಿ, ದೇವ ಜನರನ್ನು ಕಾಪಾಡುವ ಹಾಗೂ ಅಂಕೆಯಲ್ಲಿಡುವ ಅಂಶಗಳ ನಡುವೆ ಒಂದು ಉತ್ತಮವಾದ ರೇಖೆ ಇದೆ. ನಾವು ಇಲ್ಲಿ ಜನರ ಸೇವೆ ಮಾಡಲು ಹಾಗೂ ವಿಶ್ವಾಸದಲ್ಲಿ ಅವರನ್ನೆ ಪೋಷಿಸಲು ಇದ್ದೇವೆ, ಅವರ ವಿಶ್ವಾಸದ ಜೀವಿತವನ್ನು ಅಂಕೆಯಲ್ಲಿ ಇಡುವುದರಿಂದ ಅಧಿಕಾರ ಚಲಾಯಿಸುವುದಕ್ಕಲ್ಲ, ಕೆಲವು ಸಭೆಗಳಲ್ಲಿ ಜನರು ತಮ್ಮೊಂದಿಗೆ ಪರಿಶೀಲನೆ ಮಾಡಿ, ತಮ್ಮ ಉದ್ಯೋಗಗಳು ಮರುವಸತಿ, ವಿವಾಹ, ಪ್ರಮುಖ ಕೊಂಡುಕೊಳ್ಳುವ ಅಂಶಗಳು ಹಾಗೂ

ಮುಂತಾದವುಗಳ ಬಗ್ಗೆ ತೀರ್ಮಾನಗಳನ್ನು ಮಾಡುವ ಮೊದಲು ಅವರ ಒಪ್ಪಿಗೆ ಪಡೆದು ಕೊಳ್ಳಲು ಒತ್ತಾಯ ಹಾಕುತ್ತಾರೆ. ಕೆಲವು ಸಭಾಪಾಲಕರು ತಮ್ಮ ಜನರನ್ನು ಬೇರೆ ಇತರ ಸಭೆಗಳನ್ನು ಸಂದರ್ಶಿಸಲು ಕ್ರೈಸ್ತೀಯ ಕೂಟಗಳಿಗೆ ಹೋಗಲು ಅಥವಾ ಆರ್ಥಿಕವಾಗಿ ಇತರ ಸಭೆಗಳಿಗೆ ಆರ್ಥಿಕ ಸಹಾಯ ಮಾಡಲು ಅಪ್ಪಣೆ ಕೊಡುವುದಿಲ್ಲ ಅವರು ಎಲ್ಲದರಲ್ಲೂ ಸಂಪೂರ್ಣ ಪ್ರಾಮಾಣಿಕತೆ ಹಾಗೂ ಸಮರ್ಪಣೆಯನ್ನು ಬಯಸುತ್ತಾರೆ. ಅವರು ಜನರನ್ನು ಪೀಠದಿಂದ ಬೆದರಿಸುವಿಕೆ, ನಿರ್ದೇಶನ, ಮುಂತಾದುವುಗಳಿಂದ ಅವರ ತೀರ್ಮಾನಗಳನ್ನು ಖಂಡಿಸುತ್ತಾರೆ, ಇವೆಲ್ಲವೂ ಕೇವಲ ದೈವಿಕತ್ವವಿಲ್ಲದ ಹಿಡಿತ, ಹಾಗೂ ಜನರ ಕೈವಾಡ ಹಾಗೂ ಒಂದು ರೀತಿಯ "ಆತ್ಮಿಕ ಮಾಂತ್ರಿಕತೆ"ಯಾಗಿರುತ್ತದೆ, ನಮ್ಮ ಸಭೆಯಲ್ಲಿ ಆರಂಭದಲ್ಲೇ ಜನರಿಗಾಗಿ ನಾನು ತೀರ್ಮಾನಗಳನ್ನು ತೆಗೆದುಕೊಳ್ಳುವುದಿಲ್ಲ ವೆಂದು ನಾನು ಸ್ಪಷ್ಟಪಡಿಸಿದ್ದೆನು. ನಾವು ಅವರಿಗಾಗಿ ಬೋಧಿಸಬಹುದು, ಸಮಾಲೋಚನೆ ಮಾಡಬಹುದು ಹಾಗೂ ವಾಕ್ಯವನ್ನು ಅವರೊಂದಿಗೆ ಹಂಚಿಕೊಳ್ಳಬಹುದು. ಆದರೆ, ಪ್ರತಿಯೊಬ್ಬರೂ ತಮ್ಮ ಸ್ವಂತ ತೀರ್ಮಾನಗಳನ್ನು ಮಾಡಿಕೊಳ್ಳಬೇಕು ಹಾಗೂ ಅದಕ್ಕಾಗಿ ಜವಾಬ್ದಾರಿ ವಹಿಸಬೇಕು, ಹಾಗೂ ನಾವು ಸತ್ಯವೇದ ನಂಬಿಕೆಯ ಇತರ ಸಭೆಗಳಿಗೆ ಭೇಟಿನೀಡಲು ಜನರಿಗೆ ಸಂಪೂರ್ಣ ಸ್ವಾತಂತ್ರ ಕೊಡುತ್ತೇವೆ, ಇತರ ಸಭೆ ಅಥವಾ ಸೇವೆಗಳಿಂದ ಏರ್ಪಡಿಸಲ್ಪಟ್ಟ ಕೂಟಗಳಿಗೆ ಹಾಜರಾಗಲು ಹಾಗೂ ಆರ್ಥಿಕ ಹಾಗೂ ಒತ್ತಾಸೆಯಿಂದ ಇತರ ಸೇವಕರಿಗೆ ಕಾಣಿಕೆ ನೀಡಲು ಸ್ವಾತಂತ್ರ್ಯ ಕೊಡುತ್ತೇವೆ. ನಾವು ಇಂಥಾ ವಿಷಯಗಳ ಬಗ್ಗೆ ಕೇಳುವುದಿಲ್ಲ ಹಾಗೂ ಅದರ ನಡುವೆ ತಲೆ ಹಾಕುವುದೂ ಇಲ್ಲ. ಜನರು ಯಾವಾಗಲು ತಮ್ಮ ಹೃದಯವು ನೆಲೆಸಿರುವ ಸ್ಥಳಕ್ಕೆ ಹಿಂತಿರುಗುತ್ತಾರೆ ಎಂದು ನಾವು ನಂಬುವ ಹಾಗೂ ಕಂಡಿರುವ ಒಂದು ಸಂಗತಿಯಾಗಿದೆ. ಹಾಗೂ ಇದನ್ನು ನಾವು ಆಶಿಸುವವರಾಗಿರುತ್ತೇವೆ, ಅಂದರೆ ಜನರು ಸ್ಥಳೀಯ ಸಭೆಗೆ ಪ್ರತಿಷ್ಠಿತರಾಗಿರುವುದು ಸಭಾಪಾಲಕರ ಹಿಡಿತ ಅಥವಾ ಕೈವಾಡದ ದೆಸೆಯಿಂದಲ್ಲ, ಆದರೆ ಅವರು ತಾವು ಇಲ್ಲಿಗೆ ಸೇರಿರುತ್ತಾರೆಂದು ಭಾವಿಸುವುದರಿಂದಲೇ.

## ವೈಯಕ್ತಿಕ ಅಭದ್ರತೆಗಳನ್ನು ಜಯಿಸಿರಿ

**"ನಾವೇ ನಮ್ಮನ್ನು ತಿರಿಗಿ ಹೊಗಳಿಕೊಳ್ಳುವುದಕ್ಕೆ ಪ್ರಾರಂಭಿಸುತ್ತೇವೋ? ಇಲ್ಲವೆ ಕೆಲವರಿಗೆ ಬೇಕಾಗಿರುವ ಪ್ರಕಾರ ನಿಮಗೆ ತೋರಿಸತಕ್ಕ ಯೋಗ್ಯತಾ ಪತ್ರಗಳು ನಮಗೆ ಅಗತ್ಯವೋ? ಅಥವಾ ಅಂಥ ಪತ್ರಗಳನ್ನು ನಿಮ್ಮಿಂದ ಪಡಕೊಳ್ಳಬೇಕೋ?"**

**"ನಮ್ಮಿಂದಲೇ ಏನಾದರೂ ಉಂಟಾಯಿತೆಂದು ತೀರ್ಮಾನಿಸಿ ಕೊಳ್ಳುವುದಕ್ಕೆ ನಮ್ಮಷ್ಟಕ್ಕೆ ನಾವೇ ಸಮರ್ಥರೆಂತಲ್ಲ ನಮಗಿರುವ ಸಮರ್ಥ್ಯವು ದೇವರಿಂದಲೇ ಬಂದದ್ದು, ಆತನು ಹೊಸ ಒಡಂಬಡಿಕೆಗೆ ಸೇವಕರಾಗಿರುವ ಸಾಮರ್ಥ್ಯವನ್ನು ನಮಗೆ ಅನುಗ್ರಹಿಸಿದ್ದಾನೆ. ಈ ಒಡಂಬಡಿಕೆಯು ಲಿಖಿತ ರೂಪವಾದದ್ದಾಗಿರದೆ ದೇವರಾತ್ಮ ಸಂಬಂಧವಾದದ್ದು ಆಗಿದೆ. ಲಿಖಿತ ರೂಪವಾದ ಒಡಂಬಡಿಕೆಯು ಮರಣವನ್ನುಂಟು ಮಾಡುತ್ತದೆ; ದೇವರಾತ್ಮ ಸಂಬಂಧವಾದದ್ದು ಜೀವವನ್ನುಂಟು ಮಾಡುತ್ತದೆ" (2 ಕೊರಿಂಥದವರಿಗೆ 3:1,5–6).**

ಕೆಲವು ವೇಳೆ, ದೇವ ಸೇವಕರಾದ ನಾವು ಬಹಳಷ್ಟು ವೈಯಕ್ತಿಕ ಅಸುರಕ್ಷತೆಗಳನ್ನು ಹೊತ್ತುಕೊಂಡು ಹೋಗುತ್ತೇವೆ, ಹಾಗೂ ಈ ಅಸುರಕ್ಷತೆಗಳೊಂದಿಗೆ ನಾವು ಸೇವೆಯ ಕಾರ್ಯಾಚರಣೆ ಮಾಡುತ್ತೇವೆ, ನಮ್ಮ ಅಸುರಕ್ಷತೆಗಳು ಹಲವಾರು ರೀತಿಗಳಲ್ಲಿ ಪ್ರಕಟಿಸಲ್ಪಡುತ್ತವೆ,

- ಬೇರೊಬ್ಬ ದೇವ ಸೇವಕರು ಎಲ್ಲಾ ಗಮನವನ್ನು ಸೆಳೆದುಕೊಂಡು ಜನರು ಆತನನ್ನೂ ಹಿಂಬಾಲಿಸುತ್ತಾರೆ ಎಂಬುದರ ಬಗ್ಗೆ ನಾನು ಅಸುರಕ್ಷೆಯುಳ್ಳವನಾದರೆ, ಆಗ ನಾನು ನನ್ನನ್ನು ಮುಂದುವರಿದು ಜನರ ಕಣ್ಣುಗಳಲ್ಲಿ ವೃದ್ಧಿಯಾಗಿ ಕಾಣಿಸಿಕೊಳ್ಳುತ್ತೇನೆ. ನನ್ನ ಸಂದೇಶಗಳು ಎಷ್ಟು ಮಟ್ಟಿಗೆ ಅಭಿಷೇಕಿಸಲ್ಪಟ್ಟವು ಹಾಗೂ ನಾನು ಎಷ್ಟು ಪ್ರಬಲನಾದವನು ಎಂದು ನಿದರ್ಶನಗಳನ್ನು ತರುತ್ತವೆ. ನನ್ನ ಹೆಸರು ಮತ್ತು ಚಿತ್ರಗಳು ಎಲ್ಲಾ ಕಡೆಯಲ್ಲಿ ಸ್ವಾರಸ್ಯ ಹುಟ್ಟಿಸುತ್ತವೆ, ಇದರಿಂದ ಜನರು ನನ್ನನ್ನು ಮರೆಯುವುದಿಲ್ಲ.
- ನನಗಿಂತ ಬೇರೊಬ್ಬರು ಉತ್ತಮವಾಗಿ ಪ್ರಸಂಗಿಸುತ್ತಾರೆಂಬ ಅಸುರಕ್ಷತೆ ನನಗಿದ್ದರೆ, ಆತನನ್ನು ಕೇಳದಂತೆ ನಾನು ಜನರನ್ನು ತಡೆಯುತ್ತೇನೆ.
- ಜನರು ನನ್ನ ಸಭೆಯನ್ನು ಬಿಟ್ಟು ಬೇರೆ ಸಭೆಗೆ ಹೋಗುತ್ತಾರೆಂಬ ಅಸುರಕ್ಷತೆ ನನಗಿದ್ದರೆ, ಇತರ ಯಾವ ಸಭೆಗೂ ಹೋಗದಂತೆ ನಾನು ಜನರಿಗೆ ಸೂಚಿಸುತ್ತೇನೆ, ಅಥವಾ ಅದಕ್ಕಿಂತ ಕೆಟ್ಟದಾಗಿಸಲು ನಾನು

ಪ್ರಸಂಗ ಪೀಠದಿಂದ ಮುಖಾ ಮುಖಿಯಾಗಿ ಅಥವಾ ಕುಶಲತೆಯಿಂದ ಬೇರೊಂದು ಸಭೆಯಲ್ಲಿ ತಪ್ಪು ಇರುವುದಾಗಿ ಜನರಿಗೆ ಹೇಳುತ್ತೇನೆ.

- ದೇವರ ಮಗುವಾಗಿ ನಾನು ನನ್ನ ಬಗ್ಗೆ ಅಸುರಕ್ಷತೆ ಹೊಂದಿದ್ದರೆ ಒಬ್ಬ ಸಭಾಪಾಲಕನಾಗಿ ನನ್ನನ್ನು ನಾನು ಗುರುತಿಸಿ ಕೊಳ್ಳುವಂತೆ ಮಾಡುತ್ತೇನೆ, ನಾನು ಒಬ್ಬ "ದೇವರ ಮನುಷ್ಯನು,"ಎಂದು ಕರೆಯಲ್ಪಡುವ ನಿರೀಕ್ಷೆ ಹೊಂದಿರುತ್ತೇನೆ, ಸಭಾಂಗಣದಲ್ಲಿ ಅತ್ಯಂತ ಮುಂದಿನ ಆಸನಕ್ಕೆ ನಡೆಸಲ್ಪಟ್ಟು, ವೇದಿಕೆಯನ್ನು ಹೊಂದಿ, ಹೀಗೆ ಮುಂತಾಗಿರುವ ನಿರೀಕ್ಷೆಯಲ್ಲಿರುತ್ತೇನೆ. ನಾನು "ದೇವರ ಮನುಷ್ಯ"ನಾಗಿ ಗಮನಿಸಲ್ಪಡದೆ ಅಥವಾ ಗುರುತಿಸಲ್ಪಡದೆ ಇದ್ದರೆ, ನೊಂದುಕೊಳ್ಳಬಹುದು.
- ಸೇವೆಯಲ್ಲಿ ಯಾರಾದರೂ ನನಗಿಂತ ಉತ್ತಮವಾಗಿ ಇದ್ದಾರೆ ಎಂಬ ಅಸುರಕ್ಷತೆ ನನ್ನಲ್ಲಿದ್ದರೆ, ಅವರನ್ನು ನಾನು ನಿಗ್ರಹಿಸುತ್ತೇನೆ ಹಾಗೂ ಸೊಲ್ಲಡಗಿಸುವಂತೆ ಮಾಡುತ್ತೇನೆ ಹಾಗೂ ಅವರ ಪ್ರಬಲತೆಯಲ್ಲಿ ಮುಂದುವರಿಯಬಾರದಂತೆ ಅಡ್ಡಿಪಡಿಸುತ್ತೇನೆ.
- ನನ್ನ ಗುರುತಿಸುವಿಕೆಯಲ್ಲಿ ನಾನು ಅಸುರಕ್ಷನಾಗಿದ್ದರೆ, ನಾನು ನನಗೆ ತಿಳಿದ ಎಲ್ಲಾ ಶ್ರೀಮಂತರ ಹೆಸರು ವಾಸಿಯಾದವರ ಹಾಗೂ ಬಲವಂತರಾದವರ ಬಗ್ಗೆ ಹಾಗೂ ನಾನು ಮುಂದೆ ಇದ್ದೇನೆಂದು ಜನರನ್ನು ಸ್ಫೂರ್ತಿಗೊಳಿಸುವದಕ್ಕಾಗಿ ಅವರೊಂದಿಗೆ ಹೇಗೆ ಒಡನಾಡುತೇನೆ ಎಂಬುದರ ಬಗ್ಗೆ ಮಾತನಾಡುತ್ತೇನೆ.

ದೇವ ಸೇವಕರಾದ ನಮ್ಮಿಂದ ಈ ಎಲ್ಲಾ ನಡವಳಿಕೆಗಳು ಆಳವಾದ ಅಸುರಕ್ಷತೆಯ ಆಸನದಿಂದ ಜನಿಸಿದವುಗಳಾಗಿವೆ ಹಾಗೂ ನಾವು ನಮ್ಮ ಜೀವಿತಗಳಲ್ಲಿ ಈ ರೀತಿಯ ಅಂಶಗಳಿಂದ ಹೊರಬರಲು ಕರ್ತನ ಕೃಪೆಗಾಗಿ ಕೇಳುವ ಅಗತ್ಯವಿದೆ. ಮನುಷ್ಯನ ಶಿಫಾರಸ್ಸು ಅಥವಾ ಅಪರಾಧ ನಿರ್ಣಯಗಳ ಅಗತ್ಯತೆ ಇಲ್ಲದಿದ್ದ ಅಪೊಸ್ತಲನಾದ ಪೌಲನಂತೆ ನಾವು ಒಂದು ಸ್ಥಳಕ್ಕೆ ಬರಬೇಕು, ತನ್ನ ಸೇವೆಯ ಪೂರ್ಣತೆಯು ಹೊಸ ಒಡಂಬಡಿಕೆಯ ಸಮರ್ಥರಾದ ಸೇವಕರಾಗಿ ನಮ್ಮನ್ನು ಮಾಡಿದ ದೇವರಿಂದ ಬಂದದ್ದೆಂದು ಅವನು ತಿಳಿದಿದ್ದನು. ಇದು ಎಲ್ಲವನ್ನೂ

ಸ್ಥಿರಪಡಿಸಿ, ಎಲ್ಲಾ ಅಸುರಕ್ಷತೆಗಳಿಂದ ನಮ್ಮನ್ನು ಬಿಡುಗಡೆಮಾಡಿ ಲಕ್ಷ್ಯಕೊಡುವಂತೆ ಮಾಡುತ್ತದೆ.

## ಒಂದು ವೈಯಕ್ತಿಕ ಕಾರ್ಯ ಪಟ್ಟಿಯೊಂದಿಗಿನ ಜನರಿಗಾಗಿ ವೇದಿಕೆಒದಗಿಸಬೇಡಿರಿ

**"ಕೆಲವರು ಹೊಟ್ಟೆಕಿಚ್ಚು ಪಟ್ಟು ಭೇದ ಹುಟ್ಟಿಸಬೇಕೆಂಬ ಭಾವನೆಯಿಂದ ಬೇರೆ ಕೆಲವರು ಒಳ್ಳೇ ಭಾವದಿಂದ ಕ್ರಿಸ್ತನನ್ನು ಪ್ರಚುರ ಪಡಿಸುತ್ತಾರೆ. ಇವರಂತೂ ನಾನು ಸುವಾರ್ತೆಯ ವಿಷಯದಲ್ಲಿ ಉತ್ತರ ಹೇಳುವುದಕ್ಕೆ ಇಲ್ಲಿ ಬಿದ್ದಿರುತ್ತೇನೆಂದು ತಿಳಿದು ಪ್ರೀತಿಯಿಂದ ಪ್ರಸಿದ್ಧಿಪಡಿಸುತ್ತಾರೆ"** (ಫಿಲಿಪ್ಪಿಯವರಿಗೆ 1:15, 16).

**"ಪಕ್ಷಪಾತದಿಂದಾಗಲಿ ಒಣಹೆಮ್ಮೆಯಿಂದಾಗಲಿ ಯಾವುದನ್ನು ಮಾಡದೆ ಪ್ರತಿಯೊಬ್ಬನು ದೀನಭಾವದಿಂದ ಮತ್ತೊಬ್ಬರನ್ನು ತನಗಿಂತಲೂ ಶ್ರೇಷ್ಟರೆಂದು ಎಣಿಸಲಿ"**. (ಫಿಲಿಪ್ಪಿಯವರಿಗೆ 2:3).

ಸೇವೆಯಲ್ಲಿ ಜನರು ಮಾಡುವ ಪ್ರತಿಯೊಂದು ಶುದ್ಧವಾದ ಉದ್ದೇಶದಿಂದ ಹುಟ್ಟಿರುವುದಿಲ್ಲ ಕೆಲವರು ದೇವಾಲಯಕ್ಕೆ ಬರುತ್ತಾರೆ, ತಮ್ಮ ಸ್ವಂತ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರಲು ಸೇವೆಯಲ್ಲಿ ಸಹಾಯ ಮಾಡಲು ಬಯಸುತ್ತಾರೆ. ಒಬ್ಬ ನಾಯಕನಾಗಿ, ನಿಮ್ಮ ಹೊಣೆಗಾರಿಕೆಯು, ಶುದ್ಧ ಹೃದಯ ಉಳ್ಳವರ ಕುರಿತು ವಿವೇಚನೆಯಿಂದ ನೋಡಿ ಅವರಿಗೆ ಪ್ರೋತ್ಸಾಹ ಪಡಿಸಿರಿ. ಹಾಗೂ ಅಕ್ರಮವಾದ ಉದ್ದೇಶಗಳಿಂದ ಬರುವವರಿಗೆ ಅವಕಾಶಗಳನ್ನು ಕೊಡುವ ಮೊದಲು ಅವರು ತಮ್ಮ ಹೃದಯಗಳನ್ನು ಸರಿಯಾಗಿಟ್ಟು ಕೊಳ್ಳುವಂತೆ ಸಮಯ ಕೊಡಿರಿ. ಒಬ್ಬ ವ್ಯಕ್ತಿಯ ಉದ್ದೇಶಗಳ ಬಗ್ಗೆ ನಾನು ನಿಶ್ಚಯತ್ವ ಹೊಂದದೆ ಇದ್ದರೆ, ನಾನು ಅವರೊಂದಿಗೆ "ಪರೀಕ್ಷೆಯ" ಕಾಲದುದ್ದಕ್ಕೂ ಸಾಮಾನ್ಯವಾಗಿ ನಡೆಯುತ್ತೇನೆ, ಇದು ಒಂದು ಸತ್ಯವೇದಾರಿತವಾದ, ನಾವು ಮಾಡಬೇಕಾದ ಅಂಶವಾಗಿದೆ. ಪೌಲನು ತಿಮೊಥೆಯನಿಗೆ ಸಭಾಧ್ಯಕ್ಷರನ್ನು ನೇಮಿಸುವ ಮೊದಲು ಅವರನ್ನು ಪರೀಕ್ಷಿಸಬೇಕೆಂದು, *"ಅವರು ಮೊದಲು ಪರೀಕ್ಷಿಸಲ್ಪಡಬೇಕು: ತರುವಾಯ ಅವರ ಮೇಲೆ ಯಾರೂ ತಪ್ಪು ಹೊರಿಸದಿದ್ದರೆ ಸಭಾಸೇವಕರ ಉದ್ಯೋಗವನ್ನು ನಡಿಸಲಿ"* (1ತಿಮೊಥೆಯನಿಗೆ 3:10). ಅವರು ಹೇಗೆ ಇತರರೊಂದಿಗೆ ಪರಸ್ಪರ ವ್ಯವಹರಿಸುತ್ತಾರೆಂದು ನಾನು ನೋಡುತ್ತೇನೆ, ಅವರು ಇತರರಿಗೆ ಸೇವೆ ಮಾಡಲು ಬಯಸುತ್ತಾರೋ? ಇತರರೊಂದಿಗೆ ಅವರು ಒಂದು ತಂಡವಾಗಿ

ಕೆಲಸ ಮಾಡಲು ಬಯಸುತ್ತಾರೋ? ತಾವು ಗುರುತಿಸಲ್ಪಡಲಿಲ್ಲ ವೆಂದು ಅವರು ಆರಾಮವಾಗಿರುತ್ತಾರೋ? ಅಥವಾ ಮುಂದೆ ಮಾತನಾಡಲು ಮೇಲಕ್ಕೇರಲು ಬಯಸುತ್ತಾರೋ? ನಾಯಕತ್ವದ ದರ್ಶನ ಮತ್ತು ಮಾರ್ಗದರ್ಶನಕ್ಕೆ ಅವರು ಸಮನಾಗಿದ್ದಾರೋ ಅಥವಾ ಅವರು ತಮ್ಮ ಸ್ವಂತ ವಿಷಯವನ್ನು ಮಾಡಲು ಬಯಸುತ್ತಾರೋ? ಹಾಗೂ ನೀವು ಜನರನ್ನು ನಡಿಸುವ ದಿಕ್ಕಿನಲ್ಲಿ ಹೋಗುವುದಿಲ್ಲವೇ? ದ್ವಿ–ದರ್ಶನವು ವಿಭಾಗಕ್ಕೆ ನಡಿಸುತ್ತದೆ, ಹಾಗೂ ಇದು ತಿದ್ದಲ್ಪಡಬೇಕಾಗುತ್ತದೆ.

ನೀವು ಗಮನಿಸಲೇಬೇಕಾದ ತಪ್ಪಾದ ಎಲ್ಲಾ ರೀತಿಯ ಉದ್ದೇಶಗಳಿರುತ್ತವೆ. ಜನರು ಸೇವೆ ಮಾಡಲು ಬಯಸುವವರಾಗಿರುತ್ತಾರೆ, ಏಕೆಂದರೆ, ಅವರು ತಾವು ಗುರುತಿಸಲ್ಪಡಲು ಹಾಗೂ ಹೆಸರುವಾಸಿಯಾಗಲು ಆನಂದಿಸುತ್ತಾರೆ. ಜನರು ಸೇವೆಮಾಡಲು ಬಯಸಬಹುದು, ಇದರಿಂದ ಅವರು ಗುರುತಿಸಲ್ಪಡುತ್ತಾರೆ ಹಾಗೂ ನಂತರ ಅದನ್ನು ತಮ್ಮ ಸ್ವಂತದ್ದಾದ ಬೇರಾವುದಕ್ಕೋ ಕಾರ್ಯಾಚರಣೆಗಾಗಿ ಬಳಸಿಕೊಳ್ಳುತ್ತಾರೆ, ಉದಾ: ತಮ್ಮ ಸ್ವಂತ ವೈಯಕ್ತಿಕ ಸೇವೆ ಅಥವಾ ವ್ಯವಹಾರ. ಜನರನ್ನು ಮೊದಲು ಪರೀಕ್ಷಿಸುವುದು ಉತ್ತಮ ಹಾಗೂ ಸೇವೆ ಮಾಡಲು ಅವಕಾಶ ದೊರೆಯುವ ಮೊದಲು ಅವರ ಹೃದಯಗಳು ಯೋಗ್ಯವಾಗಿವೆ ಎಂಬುದು ಖಚಿತವಾಗಬೇಕು. ಒಬ್ಬ ನಾಯಕನಾಗಿ, ಜೀವಿತದ ಮಾದರಿಯಿಂದ ಹಾಗೂ ನಿಮ್ಮ ಬೋಧನೆ ಯಲ್ಲಿ ಎಡಬಿಡದೆ, ನಮ್ಮ ಹೃದಯಗಳನ್ನು ಹಾಗೂ ಉದ್ದೇಶಗಳನ್ನು ದೇವರ ಮತ್ತು ಆತನ ಜನರ ಸೇವೆ ಮಾಡುವಾಗ ಶುದ್ಧವಾಗಿಟ್ಟು ಕೊಳ್ಳಬೇಕೆಂಬ ಅಗತ್ಯತೆಯು ಒತ್ತಾಯಿಸಲ್ಪಡಬೇಕು.

## ನೀವು ಅರ್ಥಮಾಡಿಕೊಳ್ಳಲು ಆಗದೆ ಇರುವುದರೊಡನೆ ಹೋರಾಡಬೇಡಿರಿ

**"ಗಾಳಿಯು ಮನಸ್ಸು ಬಂದ ಕಡೆ ಬೀಸುತ್ತದೆ; ಅದರ ಸಪ್ಪಳವನ್ನು ಕೇಳುತ್ತೀ; ಆದರೆ ಅದು ಎಲ್ಲಿಂದ ಬರುತ್ತದೋ ಎಲ್ಲಿಗೆ ಹೋಗುತ್ತದೋ ನಿನಗೆ ತಿಳಿಯದು; ಆತ್ಮನಿಂದ ಹುಟ್ಟಿದವರೆಲ್ಲರು ಅದರಂತೆಯೇ ಅಂದನು"** (ಯೋಹಾನ 3:8)

**"ಆದರೆ ಎಲ್ಲಾ ಜನರಿಂದ ಮಾನಹೊಂದಿದ ನ್ಯಾಯಶಾಸ್ತ್ರಿಯಾದ ಗಮಲಿಯೇಲನೆಂಬ ಒಬ್ಬ ಫರಿಸಾಯನು ಹಿರೀಸಬೇಯಲ್ಲಿ ಎದ್ದು ನಿಂತು ಈ ಮನುಷ್ಯರನ್ನು ಸ್ವಲ್ಪ ಹೊತ್ತು ಹೊರಗೆ ಕಳುಹಿಸಬೇಕೆಂದು ಅಪ್ಪಣೆಕೊಟ್ಟು ಸಭೆಯವರಿಗೆ – ಇಸ್ರಾಯೇಲ್ ಜನರೇ, ನೀವು ಈ**

**ಮನುಷ್ಯರ ವಿಷಯದಲ್ಲಿ ಮಾಡಬೇಕೆಂದಿರುವುದನ್ನು ಕುರಿತು ಎಚ್ಚರಿಕೆಯುಳ್ಳವರಾಗಿರ್ರಿ. ಹೀಗಿರುವುದರಿಂದ ನಾನು ನಿಮಗೆ ಹೇಳುವುದೇನಂದರೆ ನೀವು ಆಮನುಷ್ಯರ ಗೊಡವೆಗೆ ಹೋಗಬೇಡಿರಿ, ಅವರನ್ನು ಬಿಡಿರಿ; ಯಾಕೆಂದರೆ ಈ ಯೋಚನೆಯು ಅಥವಾ ಈ ಕೆಲಸವು ಮನುಷ್ಯರಿಂದಾಗಿದ್ದರೆ ತಾನೇ ಕೆಡುವುದು; ಅದು ದೇವರಿಂದಾಗಿದ್ದರೆ ಅದನ್ನು ಕೆಡಿಸುವುದಕ್ಕೆ ನಿಮ್ಮಿಂದ ಆಗುವುದಿಲ್ಲ ನೀವು ಒಂದು ವೇಳೆ ದೇವರ ಮೇಲೆ ಯುದ್ಧ ಮಾಡುವವರಾಗಿ ಕಾಣಿಸಿಕೊಂಡೀರಿ ಎಂದು ಹೇಳಿದನು" (ಅಪೊಸ್ತಲರ ಕೃತ್ಯಗಳು 5:34, 35, 38, 39)**

ನಮ್ಮ ದೇವರು ಒಂದು ಪೆಟ್ಟಿಗೆಯಲ್ಲಿ ಹಾಕಲ್ಪಡಲಾರನು. ಸತ್ಯವೇದವು ದೇವರನ್ನು ವ್ಯಕ್ತ ಪಡಿಸುತ್ತದೆ, ಆದರೆ ಅದು ದೇವರಿಗಾಗಿ ಗಡಿಗಳನ್ನು ಸಿದ್ಧ ಮಾಡುವುದಿಲ್ಲ. (ಉದಾ: ಮಿತಿ). ದೇವರು, ತನ್ನ ವಾಕ್ಯವನ್ನು ಎಂದಿಗೂ ಉಲ್ಲಂಘಿಸುವುದಿಲ್ಲ, ಆದರೆ ಆತನು ತನ್ನ ವಾಕ್ಯಕ್ಕೆ ಮಿತಿಗೊಳಿಸಿಲ್ಲ. ದೇವರು ನಮಗೆ ಕೊಟ್ಟಿರುವ ಪುಸ್ತಕಕ್ಕಿಂತಲೂ ಅತಿ ದೊಡ್ಡವನು. ಆತನ ಪುಸ್ತಕವು ನಮಗೆ ಆತನು ಅಪರಿಮಿತನಾದವನು ಎಂದು ಹೇಳುತ್ತದೆ. ಹೀಗಾಗಿ ಸ್ಪಷ್ಟವಾಗಿ, ದೇವರು ಸೃಷ್ಟಿಸಿದ ಎಲ್ಲಾ ಹೊಸ ಸಂಗತಿಗಳೂ ನಮ್ಮೆಲ್ಲರನ್ನೂ ಅಚ್ಚರಿಗೊಳಿಸುತ್ತವೆ. ಆಗಾಗ್ಗೆ ನಾವು ದೇವರು ಕೆಲವು ನಿರ್ದಿಷ್ಟ ರೀತಿಗಳ ಜನರನ್ನು ಮಾತ್ರ ಬಳಸುತ್ತಾರೆ ಎಂದು ಅಥವಾ ದೇವರು ಕೇವಲ ಕೆಲವು ನಿರ್ದಿಷ್ಟ ರೀತಿಗಳಲ್ಲಿ ಮಾತ್ರ ಕಾಣಿಸಿಕೊಳ್ಳುತ್ತಾನೆ ಎಂದೆಲ್ಲಾ ನಿರೀಕ್ಷಿಸುತ್ತೇವೆ. ಹಾಗೂ ನಂತರ ದೇವರು ನಮ್ಮ ಅರ್ಥ ಮಾಡಿಕೊಳ್ಳುವ ಸಾಮರ್ಥ್ಯಕ್ಕಿಂತ ಮಿಗಿಲಾಗಿ ಏನನ್ನೋ ಮಾಡುತ್ತಾನೆ. ಅಥವಾ ಆತನು ನಾವು ಎದುರು ನೋಡಲಾರದ ಯಾರನ್ನಾದರೂ ಬಳಸುತ್ತಾನೆ. ನಮ್ಮ ಸಾಮಾನ್ಯ ಪ್ರತಿಕ್ರಿಯೆಯು, "ಇದನ್ನು ಎದುರಿಸು" ಎಂಬುದಾಗಿರುತ್ತದೆ. ಹಾಗೂ ಅದನ್ನು "ತಪ್ಪಾದ" ಅಥವಾ ಆ ಗುಂಪಿನಲ್ಲಿ ಏನೋ ಒಂದು ಆಗಿ ವಿಭಾಗಿಸುವಂತಾಗುತ್ತದೆ. ಇದು ಪ್ರತಿಕ್ರಿಯಿಸಲು ಒಂದು ತಪ್ಪಾದ ದಾರಿಯಾಗಿರುತ್ತದೆ. ನಾವು ನೋಡುವ ಅನಿರೀಕ್ಷಿತವಾದ ಹಾಗೂ ಅಸಾಮಾನ್ಯವಾದ ಪ್ರದರ್ಶನವು ಲೋಕದ ಮೂಲಭೂತಗಳ ಕೇಂದ್ರವನ್ನು ನಿಶೇದಿಸುವುದಿಲ್ಲವಾದರೆ, ಆಗ ನಾವು ಅದನ್ನು ಟೀಕಿಸಬಾರದೆಂಬುದಕ್ಕೆ ಜಾಗರೂಕರಾಗಿರಬೇಕು. ಕೇವಲ ಇದು ನಾವು ಮಾಡುವ ವಿಷಯಗಳ ಹಾದಿಯಲ್ಲಿ ತಕ್ಕದ್ದಾಗಿರುವುದಿಲ್ಲ ಎಂಬುದಕ್ಕಾಗಿ ಆಗುತ್ತದೆ. ಅದನ್ನು ನಾವು ಹೊಂದಿರುವ ರೀತಿಗಳನ್ನು ಉಲ್ಲಂಘಿಸುವಾಗ ಜನರಮುಖಾಂತರ ಆತ್ಮನು ಏನುಮಾಡುತ್ತಾನೋ ಅದರೊಂದಿಗೆ ಹೋರಾಡಬಾರದು ಎಂದು ನಾವು ಕಲಿಯಬೇಕು.

ಕೆಲವು ವೇಳೆ ನಾವು ನೋಡುವ ಯಾವುದಾದರೂ “ಪ್ರದರ್ಶನವು” ಆತ್ಮನು ಕಾರ್ಯಮಗ್ನನಾಗಿದ್ದಾನೆ ಅಥವಾ ಜನರು ಶಾರೀರಿಕ ಹುಮ್ಮಸ್ಸಿನಿಂದ ಪ್ರವರ್ತಿಸುತ್ತಾರೆ ಎಂಬುದಾಗಿದ್ದರೆ, ಇದು ವಿವೇಚಿಸಲು ಸುಲಭವಾಗಿರುವುದಿಲ್ಲ. ಮಾಡಬಹುದಾದ ಅತ್ಯುತ್ತಮವಾದ ಕಾರ್ಯವು ಕೇವಲ ಪಕ್ಕದಲ್ಲಿ ನಿಂತು ಗಮನಿಸುವುದಾಗಿರುತ್ತದೆ. ಇದಕ್ಕೆ ಸ್ವಲ್ಪ ಸಮಯ ಕೊಡಿರಿ. ಫಲಕ್ಕಾಗಿ ನಿರೀಕ್ಷಿಸಿರಿ. ಅದು ಎಲ್ಲಿಂದ ಬಂದಿತೆಂದು ಫಲವು ನಿಮಗೆ ಹೇಳುತ್ತದೆ.

ಮಾಡುವ ಮತ್ತೊಂದು ತಪ್ಪು ಏನಂದರೆ, ಪ್ರಸಂಗ ಪೀಠದಿಂದ ಅಸಾಮಾನ್ಯವಾದ ಸಂಗತಿಯ ಬಗ್ಗೆ ಮಾತನಾಡಲು ಆರಂಭಿಸುವುದು ಉದಾಹರಣೆಗೆ ಪಟ್ಟಣದ ಒಂದು ನಿರ್ದಿಷ್ಟವಾದ ಕ್ರೈಸ್ತೀಯ ಕೂಟದಲ್ಲಿ ಯಾವುದಾದರೂ ವಿಚಿತ್ರವಾದ ಸಂಗತಿಯು ಸಂಭವಿಸಿದರೆ, ಹಾಗೂ ನೀವು ಅದು ನಿಜವಾಗಿಯೂ ದೇವರದೋ ಅಲ್ಲವೋ ಎಂಬ ನಿಶ್ಚಯವಿಲ್ಲದಿದ್ದರೆ ಅಥವಾ ಶಾರೀರಿಕವಾದ ಮಾನವ ನಿರ್ಮಿತ ಪ್ರದರ್ಶನ ಅಥವಾ ಒಂದು ಪೈಶಾಚಿಕ ಪ್ರದರ್ಶನ ವೆಂಬುದಾಗಿ ಇದ್ದರೆ, ಆಗ ಸುಮ್ಮನೆ ಇದ್ದು ಬಿಟ್ಟು ಸ್ವಲ್ಪ ಸಮಯ ಅದಕ್ಕೆ ಕೊಡಿ ಬದಲಾಗಿ, ನೀವು ನಿಮ್ಮ ಪ್ರಸಂಗ ಪೀಠದಿಂದ ಅದರ ಬಗ್ಗೆ ಮಾತನಾಡಲು ಆರಂಭಿಸಿದರೆ ಸಂಭವಿಸುವ ಒಂದು ಸಂಗತಿಯು, ಏನೆಂದರೆ ನೀವು ಅದರ ಬಗ್ಗೆ ಮಾತನಾಡಿದ್ದೀರಿ, ಜನರು ಕಾತುರವಾಗಿರುತ್ತಾರೆ, ಹಾಗೂ ಅದನ್ನು ತಾವಾಗಿಯೇ ಹೋಗಿ ನೋಡಲು ಕುತೂಹಲ ಹೊಂದುತ್ತಾರೆ. ಹೀಗಾಗಿ ನೀವು ಅಜಾಗರೂಕರಾಗಿ ಆ ವಿಸ್ಮಯಕರ ಸಂಗತಿಗೆ ಉಚಿತವಾದ ಜಾಹೀರಾತು ನೀಡಿರುತ್ತೀರಿ ಹಾಗೂ ಅದಕ್ಕಾಗಿ ಎದುರು ನೋಡುವ ಬಹಳ ಜನರಿಗೆ ಕಳುಹಿಸಿರುತ್ತೀರಿ, ಆದರೆ ನಿಜವಾಗಿ ಅದು ದೇವರದಾಗಿದ್ದರೆ, ಅದನ್ನು ಟೀಕಿಸಿರುತ್ತೀರಿ, ನೀವು ದೇವರ ಒಂದು ನಿಜವಾದ ಕೆಲಸಕ್ಕೆ ವಿರೋಧವಾಗಿ ಹೋರಾಟ ಮಾಡುತ್ತಾ ಒಂದು ಸ್ಥಳದಲ್ಲಿರುವುದನ್ನು ಕಂಡು ಕೊಳ್ಳುವಿರಿ. ಇದರಿಂದ ಮಾಡಬೇಕಾದ ಅತ್ಯುತ್ತಮ ಕೆಲಸವೇನೆಂದರೆ ನಿಮಗೆ ಅರ್ಥವಾಗದ ವಿಷಯಕ್ಕಾಗಿ ಹೊರಾಟ ಮಾಡಬೇಡಿರಿ, ಇದು ದೇವರ ವ್ಯವಹಾರವಾಗಿದೆ ಹಾಗೂ ಅವನ್ನು ನಿಭಾಯಿಸಲು ಎಷ್ಟು ಉತ್ತಮವಾಗಿ ಸಾಧ್ಯವೆಂದು ಆತನು ತಿಳಿದಿರುತ್ತಾನೆ.

## ಜನರು ಹೇಳುವ ಹಾಗೂ ಮಾಡುವ ಕೆಲವು ವಿಷಯಗಳು ನಿಮ್ಮ ಸಮಯಕ್ಕೆ ಬೆಲೆಕಟ್ಟುವುದಿಲ್ಲ

**"ಆಡುವ ಮಾತುಗಳನ್ನೆಲ್ಲಾ ಲಕ್ಷ್ಯಕ್ಕೆ ತಾರದಿರು; ನಿನ್ನ ಆಳು ನಿನ್ನನ್ನು ಶಪಿಸುವುದು ಕಿವಿಗೆ ಬಿದ್ದೀತು. ನೀನೂ ಅನೇಕ ವೇಳೆ ಇತರರನ್ನು ಶಪಿಸಿದ್ದೀ ಎಂಬದಕ್ಕೆ ನಿನ್ನ ಮನಸ್ಸೇ ಸಾಕ್ಷಿ"** (ಪ್ರಸಂಗಿ 7:21, 22).

**"ವ್ಯಾಜ್ಯಕ್ಕೆ ದೂರನು ಮಾನಕ್ಕೆ ಯೋಗ್ಯನು; ಜಗಳವು ಪ್ರತಿಯೊಬ್ಬ ಮೂರ್ಖನಿಗೂ ಸಹಜ"** (ಜ್ಞಾನೋಕ್ತಿಗಳು 20:3).

ಜನರ ಸೇವೆ ಮಾಡಲು ನಾವು ಇಲ್ಲಿದ್ದೇವೆ. ಹೇಗಾದರೂ ನಾವು ಹಿಡಿತದಲ್ಲಿಡುವುದಿಲ್ಲ ಹಾಗೂ ಜನರ ನಡವಳಿಕೆಗಳಿಗೆ ನಾವು ಜವಾಬ್ದಾರರಲ್ಲ. ಅವರ ಆಯ್ಕೆಗಳು ಹಾಗೂ ತೀರ್ಮಾನಗಳನ್ನು ನಾವು ಹಿಡಿತದಲ್ಲಿಡಲಾಗುವುದಿಲ್ಲ, ಕೆಲವು ವೇಳೆ, ಸೇವೆಯಲ್ಲಿ ಜನರು ನಾವು ಅವರಿಗೆ ಹೇಗೆ ಸೇವೆ ಮಾಡಿದೆವೆಂಬುದನ್ನು ಸುಲಭವಾಗಿ ಮರೆತು ಹೋಗುತ್ತಾರೆ. ಜನರು ನಮ್ಮ ಬಗ್ಗೆ ತಮ್ಮ ಮನಸ್ಸುಗಳನ್ನು ಇದ್ದಕ್ಕಿದ್ದಂತೆ ಬದಲಾಯಿಸಿಕೊಳ್ಳುತ್ತಾರೆ. ಆರಂಭದಲ್ಲಿ ಅವರು ನಮಗೆ ಬೆಂಬಲ ನೀಡಿ ನಮ್ಮನ್ನು ಪ್ರೋತ್ಸಾಹಿಸುತ್ತಾರೆ, ಹಾಗೂ ಇದ್ದಕ್ಕಿದ್ದಂತೆ ಅವರು ಟೀಕೆಮಾಡಿ ಎಲ್ಲಾ ಲೋಪ ದೋಷಗಳನ್ನು ಹಾಗೂ ಕೊರತೆಗಳನ್ನು ಗುರುತಿಸುತ್ತಾರೆ. ಜನರು ಬಿಟ್ಟು ಹೋಗುತ್ತಾರೆ, ಜನರು ಸೇಡುತೀರಿಸಿಕೊಳ್ಳುತ್ತಾರೆ. ಜನರು ಟೀಕಿಸುತ್ತಾರೆ, ಜನರು ಮರೆಯುತ್ತಾರೆ. ಇವೆಲ್ಲವೂ ಸೇವೆಯ ಒಂದು ಭಾಗವಾಗಿವೆ. ದೇವರ ಸೇವಕರಾಗಿ ನಾವು ಆಂತರ್ಯದಲ್ಲಿ ಬಲಯುತರಾಗಿರಬೇಕು, ಹಾಗೂ ದೇವರ ಕರೆಯ ಮೇಲೆ ಕೇಂದ್ರೀಕರಿಸಬೇಕು ಅಂದರೆ ಇಂಥಾ ಸಂಗತಿಗಳು ಸಂಭವಿಸಿದಾಗಲೂ ನಾವು ಮುಂದುವರಿದು ಬಲವಾಗಬೇಕು.

ನಿಮ್ಮ "ಆಲೋಚಿಸುವ ಸಮಯವನ್ನು" ಇಂಥಾ ವಿಷಯಗಳು ಆಕ್ರಮಿಸದಂತೆ ತಡೆಯಿರಿ, ಅವು ನಿಮ್ಮನ್ನು ಮುಟ್ಟದಂತೆ ಮಾಡಿರಿ. ಮುಯ್ಯಿಗೆ ಮುಯ್ಯಿ ತೀರಿಸಬೇಡಿರಿ, ಹಾಗೂ ನಿಮ್ಮನ್ನು ನೀವು ತಪ್ಪಿಗೆ ಗುರಿ ಮಾಡಿಕೊಳ್ಳಲು ಪ್ರಯತ್ನಿಸಿ ಜಗಳಕ್ಕೆ ಒಳಗಾಗಬೇಡಿ. ಯಾವುದೇ ಮೂರ್ಖನು ಇವನ್ನು ಮಾಡಬಲ್ಲನು, ಬದಲಾಗಿ, ಪ್ರಾರ್ಥಿಸಲು ಕಲಿಯಿರಿ, ಹಾಗೂ ನೋವು ಅಥವಾ ಯಾತನೆಯನ್ನು ಭಾವನೆಗಳನ್ನು ಕರ್ತನಿಗೆ

ಒಪ್ಪಿಸಿ ಬಿಡುಗಡೆ ಹೊಂದಿರಿ. ಹಾಗೂ ದೇವರು ನಿಮ್ಮನ್ನು ಏನುಮಾಡಲು ಕರೆದನೋ ಅದಕ್ಕಾಗಿ ಮುಂದುವರಿಯಿರಿ.

ನಾನು ಹೇಗೆ ಪಸಂಗಿಸುತ್ತೇನೆ, ಯಾವ ಉಡುಪು ಧರಿಸಿದ್ದೆನು, ನನ್ನ ವಿಲಕ್ಷಣ ಸ್ವಭಾವಗಳು, ನನ್ನ ಪ್ರಕೃತಿ ಸ್ವಭಾವ ನಾನು ಜನರನ್ನು ಹೇಗೆ ನಡಿಸುತ್ತೇನೆ ಮುಂತಾದವುಗಳ ಬಗ್ಗೆ ಕ್ರಿಯಾತ್ಮಕ ಪ್ರತ್ಯುತ್ತರಗಳನ್ನು ಜನರು ಕೊಡುವುದನ್ನು ನಾನು ಕೇಳಿಸಿ ಕೊಂಡಿದ್ದೇನೆ ನಾನು ಅವರನ್ನು ಆಲಿಸುತ್ತೇನೆ, ಅವರು ಹೇಳುವುದರಲ್ಲಿ ಏನೋ ಒಂದು ಮೌಲ್ಯತೆ ಇರುವುದಾದರೆ, ನಾನು ಅದನ್ನು ಹೊಂದಿಸಿಕೊಳ್ಳುತ್ತೇನೆ, ಇದು ಟೀಕೆಯಾದರೆ ಅದು ಏನೂ ಪ್ರಯೋಜನವಾದ ಯಾವುದನ್ನೂ ತರುವುದಿಲ್ಲ, ನಾನು ಸುಮ್ಮನೆ ಅದು ಹೋಗುವಂತೆ ಮಾಡುತ್ತೇನೆ, ಸೇವೆಯಲ್ಲಿ, ನಾವು ಬಲಯುತರಾಗಿರಬೇಕು ಹಾಗೂ ಜನರು ಏನು ಹೇಳುತ್ತಾರೋ ಹಾಗೂ ಮಾಡುತ್ತಾರೋ ಅದರಿಂದ ಸುಲಭವಾಗಿ ಸ್ಪಂದಿಸಲಾಗದು.

## ಅಪರಾಧಗಳನ್ನು ಹಿಂದೆ ಬಿಡಿರಿ ಅವುಗಳನ್ನು ನಿಮ್ಮೊಂದಿಗೆ ಕೊಂಡೊಯ್ಯುವುದು ಬೆಲೆಯಿರಲಾರದು

**"ನಾನು ನಿಮಗೋಸ್ಕರ ಪ್ರಯೂಸಪಟ್ಟದ್ದು ನಿಷ್ಫಲವಾಯಿತೋ ಏನೋ ಎಂದು ನಿಮ್ಮ ವಿಷಯದಲ್ಲಿ ಭಯಪಡುತ್ತೇನೆ. ಸಹೋದರರೇ, ನಾನು ನಿಮ್ಮ ಹಾಗೇ ಆದದ್ದರಿಂದ ನೀವು ನನ್ನ ಹಾಗೆ ಆಗಬೇಕೆಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ. ನೀವು ನನಗೇನೂ ಅನ್ಯಾಯ ಮಾಡಲಿಲ್ಲ"** (ಗಲಾತ್ಯದವರಿಗೆ 4:11,12).

ಗಲಾತ್ಯದ ವಿಶ್ವಾಸಿಗಳೊಂದಿಗೆ ಅಪೊಸ್ತಲನಾದ ಪೌಲನು ಬಹು ನಿರಾಶೆಯುಳ್ಳವನೂ ನಿರುತ್ಸಾಹ ಹೊಂದಿದವನೂ ಆಗಿದ್ದಿರಬಹುದು. ಅವರನ್ನು ವಿಶ್ವಾಸದೋಳಗೆ ತರಲು ಅವನು ಬಹಳಷ್ಟು ಶ್ರಮಪಟ್ಟ ನಂತರ ಅವರು ಸುಲಭವಾಗಿ ಬೇರೆ ಕೆಲವು ಜನರಿಂದ ಪ್ರಭಾವಿತರಾದರು. ಇವರು ಕೆಲವು ಹಳೆ ಒಡಂಬಡಿಕೆಯ ಧರ್ಮಶಾಸ್ತ್ರದ ಆಚರಣೆಗಳು ಇನ್ನೂ ಆಚರಿಸಲ್ಪಡಬೇಕೆಂದು ಒತ್ತಾಯಿಸಿದ್ದರು. ಅಲ್ಲಿಗೆ ಪೌಲನ ಶ್ರಮವು ವ್ಯರ್ಥವಾದಂತಾಯಿತು. ಹೇಗಾದರೂ ಇಂಥಾ ಒಂದು ಪರಿಸ್ಥಿತಿಯಲ್ಲಿ, ಪೌಲನು ತನ್ನನ್ನೇ ಅವರಿಗೆ ಒಬ್ಬ ಮಾದರಿಯಾಗಿ ಗುರುತಿಸಿಕೊಂಡನು

ಹಾಗೂ ಅವನು ಧೈರ್ಯವಾಗಿ "ನೀವು ನನ್ನನ್ನು ಎಂದಿಗೂ ನೋಯಿಸಿಲ್ಲ," ಎಂದು ಹೇಳಿದನು. ಗಲಾತ್ಯದವರು ಪೌಲನಿಗೆ ಯಾವ ರೀತಿಯ ಅಪರಾಧ ಹೊರಿಸಲಿಲ್ಲ ಅಥವಾ ಅವನನ್ನು ನೋವಿಗೆ ಗುರಿಮಾಡಲಿಲ್ಲ. ಮಾರ್ಕನೆನಿಸಿಕೊಳ್ಳುವ ಯೋಹಾನ ಹಾಗೂ ಬಾರ್ನಬನ ಪ್ರತ್ಯೇಕಿಸಲ್ಪಟ್ಟ ರೀತಿಗಳ ಬಗ್ಗೆ ಪೌಲನ ವ್ಯತ್ಯಾಸವಾದ ಅಭಿಪ್ರಾಯದ ಕಾರಣವಾಗಿ, ಆರಂಭದಲ್ಲಿ ಪೌಲನು ಬಾರ್ನಬ ಮತ್ತು ಮಾರ್ಕನೆನಿಸಿಕೊಳ್ಳುವ ಯೋಹಾನನೊಂದಿಗೆ ಒಂದು ಪರಿಸ್ಥಿತಿಯನ್ನು ಹೊಂದಿದ್ದನು (ಅಪೊಸ್ತಲರಕೃತ್ಯಗಳು 15:37-39). ನಂತರ ಮಾರ್ಕನೆನಿಸಿಕೊಳ್ಳುವ ಯೋಹಾನನು ಬೆಳೆಯುತ್ತಾ ಪ್ರೌಢನಾಗುತ್ತಿರುವದನ್ನು ಪೌಲನು ನೋಡಿದನು, ಇದರಿಂದ ಅವನು ಅವನನ್ನು ಹಿಂದಕ್ಕೆ ಸ್ವಾಗತಿಸಿದನು, ಅವನನ್ನು ಜೊತೆ ಸೇವಕನನ್ನಾಗಿ ಮಾಡಿಕೊಂಡನು. ಹಾಗೂ ಸೇವೆಯಲ್ಲಿ ಅವನಿಗೆ ಬಡ್ತಿ ನೀಡಿದನು. ಅವನು ಯಾವುದೇ ರೀತಿಯ ದ್ವೇಷ ಅಥವಾ ಅಪರಾಧವನ್ನು ಸಾಧಿಸಲಿಲ್ಲ. ಹಿಂದಿನ ಸಂಗತಿಯು ಹಿಂದಕ್ಕೆ ಉಳಿಯಿತು ಮಾರ್ಕನೆನಿಸಿಕೊಳ್ಳುವ ಯೋಹಾನನ ಬಗ್ಗೆ ಪೌಲನು ತನ್ನ ಪತ್ರಿಕೆಯಲ್ಲಿ ಏನು ಬರೆದಿದ್ದಾನೆಂಬುದನ್ನು ಆಲೋಚಿಸಿರಿ, "ಲೂಕನು ಮಾತ್ರ ನನ್ನ ಜೊತೆಯಲ್ಲಿದ್ದಾನೆ ಮಾರ್ಕನನ್ನು ಸಂಗಡ ಕರೆದುಕೊಂಡು ಬಾ ಅವನು ನನಗೆ ಸೇವೆಗಾಗಿ ಉಪಯುಕ್ತನಾಗಿದ್ದಾನೆ."

**"ಲೂಕನು ಮಾತ್ರ ನನ್ನ ಜೊತೆಯಲ್ಲಿದ್ದಾನೆ. ಮಾರ್ಕನನ್ನು ಸಂಗಡ ಕರಕೊಂಡು ಬಾ, ಅವನು ನನಗೆ ಸೇವೆಗಾಗಿ ಉಪಯುಕ್ತನಾಗಿದ್ದಾನೆ"** (2 ತಿಮೊಥೆಯನಿಗೆ 4:11).

**"ನನ್ನ ಸಹಕಾರಿಗಳಾದ ಮಾರ್ಕ, ಅರಿಸ್ತಾರ್ಕ ದೇಮ ಲೂಕರೂ..."** (ಫಿಲೆಮೋನನಿಗೆ 1:24).

**"ನನ್ನ ಜೊತೆ ಸೆರೆಯವನಾದ ಅರಿಸ್ತಾರ್ಕನೂ ಬಾರ್ನಬನಿಗೆ ದಾಯಾದನಾಗಿರುವ ಮಾರ್ಕನೂ, ಮಾರ್ಕನನ್ನು ಕುರಿತು ಅಪ್ಪಣೆಗಳನ್ನು ಹೊಂದಿದಿರಲ್ಲಾ; ಅವನು ನಿಮ್ಮ ಬಳಿ ಬಂದರೆ ಅವನನ್ನು ಸೇರಿಸಿಕೊಳ್ಳಿರಿ"** (ಕೊಲೊಸ್ಸೆಯವರಿಗೆ 4:10)

ದೇವರ ಸೇವಕರಾಗಿ, ಜನರ ಕೃತ್ಯಗಳು ನಮ್ಮನ್ನು ಅಪರಾಧಕ್ಕೊಳಪಡಿಸದಂತೆ ಕಲಿಯಬೇಕು. ಹಾಗೂ ತಪ್ಪುಗಳು ಬರುವುದಾದರೆ, ನಾವು ಅವುಗಳನ್ನು ಹಿಂದೆ ಬಿಟ್ಟು ಈ ದಿನ ದೇವರು ಮಾಡುವ ಹೊಸ ಸಂಗತಿಯಲ್ಲಿ ನಡೆಯಬೇಕು.

## ಜನರು ಬೆಳೆಯುತ್ತಾರೆ, ಜನರು ಬದಲಾಗುತ್ತಾರೆ—ಆದುದರಿಂದ ಹೋಗಲು ಸಿದ್ಧವಾಗಿರಿ

ದೇವರು ಜನರನ್ನು ನಮ್ಮ ಜೀವಿತಗಳಲ್ಲಿ ಒಂದು ಕಾಲಕ್ಕಾಗಿ ಕಳುಹಿಸುತ್ತಾನೆ. ಜನರು ಬರುತ್ತಾರೆ, ಆದರೆ ಅವರೂ ಹೋಗಲೇಬೇಕು. ಕೆಲವರು ಮಾತ್ರ ಆರಂಭದಿಂದ ಕೊನೆಯವರೆಗೂ ಪ್ರಯಾಣ ಮಾಡುತ್ತಾರೆ. ಬಹಳಷ್ಟು ಮಂದಿ ನಮ್ಮ ಬದಿಯಲ್ಲಿ ಪ್ರಯಾಣದ ಸ್ವಲ್ಪ ಅವಧಿಯಲ್ಲಿ ಮಾರ್ಗದ ಸ್ವಲ್ಪ ಭಾಗ, ಒಂದು ಕಾಲಕ್ಕಾಗಿ ಜೊತೆಗೂಡುತ್ತಾರೆ. ಕೆಲವರು ಚಿಕ್ಕ ಮಕ್ಕಳಾಗಿ ಅಥವಾ ಯೌವನಸ್ಥರಾಗಿ ವಿಶ್ವಾಸದಲ್ಲಿ ಬರುತ್ತಾರೆ. ಅವರು ಬೆಳೆಯುವುದನ್ನು ಪ್ರೌಢರಾಗುವುದನ್ನು ಹಾಗೂ ದೇವರೊಂದಿಗೆ ಹಾಗೂ ಸೇವೆಯಲ್ಲಿ ಅವರ ಪ್ರೌಢರಾಗುವುದನ್ನು ಹಾಗೂ ದೇವರೊಂದಿಗೆ ಹಾಗೂ ಸೇವೆಯಲ್ಲಿ ಅವರ ನಡೆಯುವಿಕೆಯಲ್ಲಿನ ವೃದ್ಧಿಯನ್ನು ನಾವು ಅವಕಾಶವನ್ನು ಹೊಂದಿರುತ್ತೇವೆ. ಹಾಗೂ ನಂತರ ಬಿಂದು ಸಮಯ ಬರುತ್ತದೆ, ಬಹುಶಃ ದೇವರು ಅವರನ್ನು ಪಥಕ್ರಮಣ ಆರಂಭಿಸಲು, ಬೇರೊಂದು ಕೆಲಸದ ಹಾಗೂ ಸೇವೆಯ ಸ್ಥಳಕ್ಕೆ ಬಿಡುಗಡೆ ಹೊಂದಲು ಬಯಸುತ್ತಾನೆ. ಕೆಲವರು ಸ್ಥಳೀಯ ಸಭೆಯ ಗುರಿಯ ಆಚೆ ಸೇವೆಗಳನ್ನು ಹೊಂದಿಕೊಂಡಿರಬಹುದು. ಕೆಲವರು ನಮ್ಮ ಆಚೆ ಸೇವೆಗಳನ್ನು ಹೊಂದಿಕೊಂಡಿರಬಹುದು. ಕೆಲವರು ನಮ್ಮ ಆಚೆ ಪ್ರಭಾವಿತ ಸಾಮ್ರಾಜ್ಯದಲ್ಲಿ ಹೋಗಬಹುದು ಹಾಗೂ ಕೆಲವರು ಆ ಸಮಯದಲ್ಲಿ ಅವರಿಗೆ ಆಸಕ್ತಿಹೊಂದಿರುವ ಯಾವುದಕ್ಕಾದರೂ ಮುಂದುವರಿಯಲು ಆಯ್ಕೆ ಮಾಡಿಕೊಳ್ಳುತ್ತಾರೆ. ಯಾವುದೇ ಪರಿಸ್ಥಿತಿಯಾದರೂ, ನಾವು ಜನರ ಜೀವಿತಗಳಿಗೆ ಅಂಟಿಕೊಳ್ಳಬೇಕು. ನಾವು ಪ್ರೀತಿಯಿಂದ, ಹಾಗೂ ಸಿದ್ಧತೆಯಿಂದ ಅವರನ್ನು ಕೊಳ್ಳಬೇಕು. ನಾವು ಪ್ರೀತಿಯಿಂದ ಹಾಗೂ ಸಿದ್ಧತೆಯಿಂದ ಅವರನ್ನು ಸ್ವಾಗತಿಸುವಂತೆಯೇ, ನಾವೂ ಕೂಡಾ ಅವರನ್ನು ಆಶೀರ್ವದಿಸಲು ಹಾಗೂ ಅವರಿಗಾರಿ ದೇವರು ಏನನ್ನು ಭಂಡಾರದಲ್ಲಿ ಇಟ್ಟಿದ್ದಾನೋ ಅವರೊಳಕ್ಕೆ ಹೋಗಲು ಇಚ್ಛೆಯುಳ್ಳವರಾಗಿರಬೇಕು. ದೇವರು ಅವರನ್ನು ಒಳಗೆ ಕಳುಹಿಸಿರುವುದಾದರೆ, ಆತನು ಅವರನ್ನು ಹೊರಕ್ಕೆ ಕಳುಹಿಸುವಷ್ಟು ಹಕ್ಕನ್ನು ಪಡೆದಿರುತ್ತಾನೆ.

ಕೆಲವು ವೇಳೆ ನಾವು ಜನರ ಮೇಲೆ ಅಂಟಿಕೊಳ್ಳುತ್ತೇವೆ ಹಾಗೂ ಅವರನ್ನು ಹೋಗುವಂತೆ ಬಿಟ್ಟು ಕೊಡಲು ಬಯಸುವುದಿಲ್ಲ, ಒಂದು ಹೊಂದಿಕೆ ರಚಿತವಾಗುತ್ತದೆ, ಹಾಗೂ ನಾವು ತಮ್ಮ "ಜೀವಿತ"ವನ್ನು ಅವರು ನಮಗೆ ಋಣದಲ್ಲಿರಿಸುವುದನ್ನು ಅನುಭವಿಸುತ್ತೇವೆ, ಹಾಗೂ ಇದರಿಂದ ನಾವು ಉಳಿದಿರಬೇಕು ಮತ್ತು ಎಲ್ಲಿಗೂ ಹೋಗುವುದಿಲ್ಲ. ಕೆಲವು ವೇಳೆ ನಾವು ಅವರ ಮುಂದುವರಿಕೆಯಿಂದ ಸೃಷ್ಟಿಯಾಗ ಬಹುದಾದ ಶೂನ್ಯತೆಯ ಬಗ್ಗೆ ಭಯ ಭೀತರಾಗುತ್ತೇವೆ. ಬಹುಶಃ, ಇದು ನಮಗೆ ಸಾಕಾಗದಿರುವ ಅಥವಾ ಅವರ ಸೇವೆಯಲ್ಲಿ ಎಲ್ಲಿಗಾದರೂ ಮುಂದೆ ಹೋಗುವುದರಲ್ಲಿ ಅಸಂತುಷ್ಟವಾಗುವ ಭಾವನೆಯನ್ನು ನಮ್ಮಲ್ಲಿ ಮೂಡಿಸಬಹುದು ಇವೆಲ್ಲವೂ ದೈವಿಕವಲ್ಲದ "ಹೃದಯ ಪೂರಿತ" ಹೊಂದಿಕೆಗಳಾಗಿರುತ್ತವೆ, ಇವು ಒಂದು ರೀತಿಯ ಆತ್ಮಿಕತೆಯನ್ನು ಹೊಂದಿರುತ್ತವೆ, ಆದರೆ ನಿಜವಾಗಿ ದೇವರ ಉದ್ದೇಶಗಳನ್ನು ತೊಂದರೆ ಪಡಿಸುತ್ತವೆ. ನಾವು ನಮ್ಮನ್ನು ಇಂಥ ಸಂಗತಿಗಳಿಂದ ಕಾಪಾಡ ಬೇಕಾಗುತ್ತದೆ, ಹಾಗೂ ಜನರು ಸಂತೋಷ ಹಾಗೂ ಆಶೀರ್ವಾದದೊಂದಿಗೆ, ಕರ್ತನು ಜನರನ್ನು ನಡೆಸುವ ರೀತಿಯಲ್ಲಿ ಹೋಗ ಬಿಡಲು ಕಲಿಯಬೇಕು ಹಾಗೂ ಕರ್ತನು ಅವರನ್ನು ಹಿಂದಕ್ಕೆ ನಡಿಸಿದರೆ, ಅವರನ್ನು ಸ್ವಾಗತಿಸಿರಿ!

## ಮುಖಸ್ತುತಿ ಅದನ್ನು ಅಂಗೀಕರಿಸಬೇಡಿ, ಅದನ್ನು ಕೊಡಬೇಡಿ

**"ಚಾಡಿಕೋರನು ಗುಟ್ಟುರಟ್ಟು ಮಾಡುವನು; ಆದುದರಿಂದ ತುಟಿ ಬಿಗಿ ಹಿಡಿಯದವನ ಗೊಡವೆಗೆ ಹೋಗಬೇಡ"** (ಜ್ಞಾನೋಕ್ತಿಗಳು 20:19).

**"ಮುಖಸ್ತುತಿ ಮಾಡುವವನಿಗಿಂತಲೂ ಗದರಿಸುವವನು ಬಳಿಕ ಹೆಚ್ಚು ದಯಾ ಪಾತ್ರನಾಗುವನು"** (ಜ್ಞಾನೋಕ್ತಿಗಳು 28:23).

**"ನೆರೆಯವನೊಂದಿಗೆ ವಂಚಿಸುವ ಸವಿನುಡಿಗಳನ್ನಾಡುವವನು ಅವನ ಹೆಜ್ಜೆಗೆ ಬಲೆಯನ್ನೊಡ್ಡುವನು"** (ಜ್ಞಾನೋಕ್ತಿಗಳು 29:5).

ನಿಮ್ಮ ಸೇವೆಯ ಮುಖಾಂತರ ಜನರು ನಿಜವಾಗಿಯೂ ಆಶೀರ್ವದಿಸಲ್ಪಟ್ಟಿರುವ ಸಮಯಗಳು ಇವೆ ಎಂಬುದು ನಿಶ್ಚಯ, ಹಾಗೂ ಅವರು ಯಥಾರ್ಥವಾಗಿ ಬಂದು ತಾವು ಸ್ಪಂದಿಸಲ್ಪಟ್ಟಿರುವುದಾಗಿ ಹಾಗೂ ಪ್ರೋತ್ಸಾಹಿಸಲ್ಪಟ್ಟಿರುವುದಾಗಿ ನಿಮಗೆ ತಿಳಿಯ ಪಡಿಸುತ್ತಾರೆ. ಇದು ಉತ್ತಮವಾದದ್ದು ಹೇಗಾದರೂ, ಸರಿಯಾದ ರೀತಿಯಲ್ಲಿ

ಉಪದೇಶಕರನ್ನು ಹೇಗೆ ತಟ್ಟಬಹುದೆಂದು ತಿಳಿದಿರುವ ಜನರನ್ನು ಸಂಧಿಸುವುದು ಸರ್ವೇಸಾಮಾನ್ಯವಾಗಿರುತ್ತದೆ. ಪ್ರತಿಯೊಂದು ಸಂದೇಶದ ನಂತರ ಅವರು ಇದು ಸರಿಯಾದ ನುಡಿ, ಪ್ರಕಟನೆಯೊಂದಿಗೆ ತುಂಬಿದೆ ಹಾಗೂ ಆದಿನ ನೀವು ಎಷ್ಟು ಮಟ್ಟಿಗೆ ಅಭಿಷೇಕ ಹೊಂದಿದಿರಿ ಎಂಬುದನ್ನು ನಿಮಗೆ ತಿಳಿಯ ಪಡಿಸುತ್ತಾರೆ. ನಗರದಲ್ಲಿ ನೀವು ಒಬ್ಬ ಅತ್ಯುತ್ತಮ ಸಂದೇಶಕರು, ಅತ್ಯುತ್ತಮ ಸಭಾಪಾಲಕರು ಅಥವಾ ಅತ್ಯಂತ ಹೆಚ್ಚಿನ ಅಭಿಷಿಕ್ತ ಸೌವಾರ್ತಿಕರು ಮುಂತಾಗಿ ಅವರು ಹೇಳುತ್ತಾರೆ. ಇಂಥಾ "ಮುಖಸ್ತುತಿ"ಗಳಿಗೆ ಬಲಿಬೀಳುವುದು ಸುಲಭವಾದುದು. ನಾವು ಜಾಗರೂಕರಾಗಿಲ್ಲವಾದರೆ, ನಾವು ನಮ್ಮ ಸುತ್ತಲೂ ಇಂಥಾ ಜನರನ್ನು ಹೊಂದಿಕೊಳ್ಳಲು ಇಷ್ಟ ಪಡುತ್ತೇವೆ. ಏಕೆಂದರೆ ಅವರು ನಮ್ಮನ್ನು ಉಬ್ಬಿಸುತ್ತಾರೆ, ಹಾಗೂ ನಾವು ಮುಖ್ಯರಾದವರೆಂದು ಭಾವಿಸುವಂತೆ ಮಾಡುತ್ತಾರೆ. ಶೀಘ್ರದಲ್ಲಿ ನಾವು ಇಂಥಾ ಮಾತಿಗೆ ರೂಢಿಯಾಗಿರುತ್ತೇವೆ, ನಾವು ಯಾರನ್ನಾದರೂ ಅಂದರೆ ನಮ್ಮನ್ನು ಪ್ರಶ್ನಿಸುವವರನ್ನು ಅಥವಾ ನಮ್ಮ ಆಲೋಚನಾ ರೀತಿಯ ವಿರುದ್ಧವಾಗಿ ಹೋಗುವ ಅಭಿಪ್ರಾಯವನ್ನು ಹಂಚಿಕೊಳ್ಳಲು ಬಯಸುವವರನ್ನು ನಿಭಾಯಿಸಲಾರೆವು. ನಾವು ಮುಖಸ್ತುತಿಯ ಒಂದು ಲೋಕದಲ್ಲಿ ನಾಶದ ಬಲೆಯಿಂದ ಬಂಧಿಸಲ್ಪಟ್ಟಿರುತ್ತೇವೆ. ಈ ಬಲೆಯಲ್ಲಿ ನಮ್ಮ ಪಾದಗಳು ಸಿಕ್ಕಿ ಕೊಂಡಿವೆ.

ಯಾವಾಗಲಾದರೂ ಯಾರಾದರೂ ನಿಮ್ಮನ್ನು ಅಭಿನಂದಿಸಿದಾಗ ನಿಮ್ಮ ಹೃದಯದೊಳಗಿಂದ ದೇವರಿಗೆ ಸ್ತೋತ್ರವನ್ನೂ ವಂದನೆಯನ್ನೂ ಸಲ್ಲಿಸಿರಿ. *"ನಮ್ಮನ್ನಲ್ಲ, ಯೆಹೋವನೇ ನಮ್ಮನ್ನಲ್ಲ ನಿನ್ನ ಪ್ರೀತಿ ಸತ್ಯತೆಗಳ ನಿಮಿತ್ತವಾಗಿ ನಿನ್ನ ಹೆಸರನ್ನೇ ಘನಪಡಿಸು"* (ಕೀರ್ತನೆಗಳು 115:1). ನೀವು ಮನುಷ್ಯರಿಂದಾಗುವ ಮಾನವನು ಸ್ವೀಕರಿಸಲು ಇಲ್ಲಿ ಇಲ್ಲ (ಯೋಹಾನ 5:41) ಹಾಗೂ ಪರಲೋಕದ ಶ್ಲಾಘನೆಯು ಮನುಷ್ಯರ ಶ್ಲಾಘನೆಗಳಿಗಿಂತಲೂ ಹೆಚ್ಚು ಪ್ರಾಮುಖ್ಯವಾಗಿದೆ (ಯೋಹಾನ 5:44) ಎಂಬುದನ್ನು ವೈಯಕ್ತಿಕವಾಗಿ ನೆನಪು ಮಾಡಿಕೊಳ್ಳಿರಿ. ನಿಮಗೆ ಮುಖ ಸ್ತುತಿಮಾಡುವವರನ್ನು ವಿವೇಚಿಸುವುದರಲ್ಲಿ ಚುರುಕಾಗಿರ್ರಿ. ಆ ವ್ಯಕ್ತಿಯು ಮಾತನಾಡುವಾಗ, ಅವರು ಹೇಳುವುದನ್ನು ಮನಸ್ಸಿಗೆ ತೆಗೆದು ಕೊಳ್ಳ ಬೇಡಿರಿ. ಬಾತುಕೋಳಿಯ ಬೆನ್ನ ಮೇಲಿನ ನೀರು ಜಾರಿಹೋಗುವಂತೆ,

ಅದು ನಿಮ್ಮಿಂದ ಜಾರಿ ಹೋಗಲಿ. ಮುಖಸ್ತುತಿಯು ಒಂದು ಅಪಾಯಕಾರಕವಾದ ಜೇಡರ ಹುಳುವಿನ ಬಲೆಯಾಗಿದೆ, ಅದು ನಿಮ್ಮನ್ನು ಬಂಧಿಸಿಬಿಡುತ್ತದೆ. ಅದು ನಿಮ್ಮ ಒಳಗೆ ಪ್ರವೇಶಿಸದಂತೆ ನೋಡಿಕೊಳ್ಳಿರಿ. ಹಾಗೂ ಇದೇ ಗುರುತಿಗಾಗಿ ಯಾರನ್ನೂ ಮುಖಸ್ತುತಿಮಾಡಬೇಡಿರಿ. ಅವರನ್ನು ನೀವು ಅಭಿನಂದಿಸಲು ಬಯಸಿದರೆ, ಒಂದು ಕೆಲಸವು ಚೆನ್ನಾಗಿ ಆದದ್ದಕ್ಕಾಗಿ ಪ್ರೋತ್ಸಾಹಿಸಿರಿ ಅಥವಾ ಅಭಿನಂದಿಸಿರಿ ಹಾಗೂ ಅದನ್ನು ಯಥಾರ್ಥತೆಯಿಂದ ಮಾಡಿರಿ.

## ನೀವು ಜನರ ಅಭಿಪ್ರಾಯಗಳನ್ನು ಆಲಿಸಬಹುದು. ಆದರೆ, ನೀವು ಅಂತಿಮ ತೀರ್ಮಾನವನ್ನು ಮಾಡಿರಿ

**"ಅವನವನ ಕೆಲಸವು ವ್ಯಕ್ತವಾಗುವುದು. ಕ್ರಿಸ್ತನು ಬರುವ ದಿನವು ಬೆಂಕಿಯೊಡನೆ ಉದಯವಾಗಿ ಆ ಕೆಲಸವನ್ನು ಸ್ಪಷ್ಟವಾಗಿ ತೋರಿಸುವುದು; ಅವನವನ ಕೆಲಸವೆಂಥದೋ ಆ ಬೆಂಕಿ ಶೋಧಿಸುವುದು. ಒಬ್ಬನು ಆ ಅಸ್ತಿವಾರದ ಮೇಲೆ ಕಟ್ಟಿದ್ದು ಉಳಿದರೆ ಅವನಿಗೆ ಸಂಬಳ ಬರುವುದು"** (1 ಕೊರಿಂಥದವರಿಗೆ 3:13, 14).

**"ಯಾಕೆಂದರೆ ಪ್ರತಿಯೊಬ್ಬನು ತನ್ನ ದೇಹದ ಮೂಲಕ ನಡಿಸಿದ ಒಳ್ಳೇದಕ್ಕಾಗಲಿ ಕೆಟ್ಟದ್ದಕ್ಕಾಗಲಿ ಸರಿಯಾಗಿ ಪ್ರತಿಫಲವನ್ನು ಹೊಂದುವದಕ್ಕೋಸ್ಕರ ನಾವೆಲ್ಲರೂ ಕ್ರಿಸ್ತನ ನ್ಯಾಯಾಸನದ ಮುಂದೆ ಯಥಾಸ್ಥಿತಿಯಲ್ಲಿ ಕಾಣಿಸಿಕೊಳ್ಳಬೇಕು"** (2 ಕೊರಿಂಥದವರಿಗೆ 5:10).

ನಾವು ಮಾಡುವ ಸೇವೆಯಲ್ಲಿ ಜನರು ಒಳಗೊಳ್ಳುವದು ಪ್ರಾಮುಖ್ಯವಾದದ್ದು ಹಾಗೂ ಅವರ ಅಭಿಪ್ರಾಯಗಳನ್ನು ಹಾಗೂ ಸಲಹೆಗಳನ್ನು ದೇವರು ನಮಗೆ ಕೊಟ್ಟಿರುವ ದರ್ಶನವನ್ನು ಕಾರ್ಯರೂಪಕ್ಕೆ ಹೇಗೆತರ ಬಹುದೆಂಬುದರ ಬಗ್ಗೆ ಹಂಚಿಕೊಳ್ಳಲು ಸಾಧ್ಯ, ಮತ್ತೊಂದು ಕಡೆ, ಒಬ್ಬ ಆತ್ಮಿಕ ನಾಯಕನಾಗಿ ಅಂತಿಮವಾಗಿ ದೇವರು ನಿಮ್ಮನ್ನು ನಿಮ್ಮ ಜೀವಿತ ಹಾಗೂ ಸೇವೆಯಲ್ಲಿ ನಡೆದ ಯಾವುದಕ್ಕಾದರೂ ಜವಾಬ್ದಾರರನ್ನಾಗಿ ಮಾಡುತ್ತಾನೆಂದು ತಿಳಿಯುವುದು ಪ್ರಾಮುಖ್ಯವಾದುದು. ಜನರು ಬಹಳಷ್ಟು ಅಭಿಪ್ರಾಯಗಳನ್ನು ಹೊಂದಿರುತ್ತಾರೆ. ಒಂದು ಅಭಿಪ್ರಾಯವನ್ನು ಹಂಚಿಕೊಳ್ಳುವುದು ಮಾಡಲು ಸುಲಭವಾದ ಒಂದು ಕಾರ್ಯವಾಗಿದೆ, ಆದರೆ ನಾವು ಹಿಂಬಾಲಿಸಲು ದೇವರು ಯಾವ ಅಭಿಪ್ರಾಯಗಳನ್ನು ಬಯಸುತ್ತಾನೆ ಹಾಗೂ ಆ ಅಭಿಪ್ರಾಯಗಳನ್ನು ಹೇಗೆ ಜಾರಿಮಾಡುವುದು ಎಂದು ತೀರ್ಮಾನಿಸುವುದನ್ನು ಹಾಗೂ ಕೊನೆಯವರೆಗೂ ಅದನ್ನು

ಕಾರ್ಯಗತಗೊಳಿಸುವುದನ್ನು ಬೇರೊಬ್ಬರು ಮಾಡಬೇಕಾಗುತ್ತದೆ. ಇದು ನಾಯಕತ್ವ ತಂಡದ ಹಾಗೂ ಕೊನೆಯಲ್ಲಿ ಒಂದು ಸ್ಥಳೀಯ ಸಭೆ ಅಥವಾ ಸೇವೆಯ ಪ್ರಮುಖ ನಾಯಕನ ಜವಾಬ್ದಾರಿಯಾಗಿರುತ್ತದೆ. ನಾನು ದೇವರ ಮುಂದೆ ನಿಲ್ಲುವಾಗ, ಇದು ಒಂದು ಒಳ್ಳೆ ಅಭಿಪ್ರಾಯವಾಗಿತ್ತೆಂದು ಯಾರೋ ಆಲೋಚಿಸಿದ್ದರಿಂದ ನಾನು ಇದನ್ನು ಮಾಡಿದೆನು ಎಂದು ಹೇಳಲಿಕ್ಕಾಗುವುದಿಲ್ಲ. ನಾನು ಕರ್ತನಿಗೆ ಯಾರೋ ಒಬ್ಬರು ಇದನ್ನು ನಾನು ಮಾಡಬಾರದು ಎಂದು ಸಲಹೆ ನೀಡಿದ್ದರಿಂದ ಇದನ್ನು ಮಾಡಲಿಲ್ಲ ಎಂದು ಹೇಳಲಾಗುವುದಿಲ್ಲ, ನಾನು ನನಗಾಗಿ ಉತ್ತರ ನೀಡಬೇಕಾಗುತ್ತದೆ ಹಾಗೂ ಏನು ನಡೆದಿದೆ ಹಾಗೂ ನಡೆದಿಲ್ಲ ಎಂಬುದಕ್ಕೆ ನಾನು ಲೆಕ್ಕ ಕೊಡಬೇಕಾಗುತ್ತದೆ. ಆದಕಾರಣ ಎಲ್ಲಾ ಅಭಿಪ್ರಾಯಗಳನ್ನು ಸಲಹೆಗಳನ್ನು ಹಾಗೂ ಶಿಫಾರಸ್ಸುಗಳನ್ನು ಆ ದೃಷ್ಟಿಯಲ್ಲಿ ಜನರಿಂದ ಬರುವಂಥ ಎಲ್ಲವುಗಳನ್ನೂ ಆಲಿಸಿರಿ ಹಾಗೂ ಮೌಲ್ಯಮಾಪನಮಾಡಿರಿ.

## ಯಾವ ವ್ಯಕ್ತಿಯೂ ನಿಮ್ಮನ್ನು ಆಳಲು ಅಪ್ಪಣೆಕೊಡಬೇಡಿರಿ

ನಾನು ಕಲಿತ ವಿಷಯಗಳಲ್ಲಿ ಒಂದು ಏನಂದರೆ ಬಲವಾಗಿರುವುದು ಹಾಗೂ ಸಾಕಷ್ಟು ಸುರಕ್ಷತೆಯುಳ್ಳವರಾಗಿರುವುದು, ಇದರಿಂದ ನಾನು ಯಾವ "ಬಲವುಳ್ಳ" ವ್ಯಕ್ತಿಯನ್ನೂ (ಲೌಕಿಕ ಗ್ರಹಿಕೆಯಲ್ಲಿ) ದೇವರು ನನ್ನನ್ನು ಏನು ಮಾಡಲು ಕರೆದ ಬಗ್ಗೆ ಹೇಗೆ ಮಾಡಬೇಕೆಂದು ನನಗೆ ಆದೇಶಿಸಲು ಬಿಡುವುದಿಲ್ಲ. ಕೆಲವು ವೇಳೆ ಬಲವುಳ್ಳ ಜನರು, ಐಶ್ವರ್ಯವಂತರು, ಪ್ರಸಿದ್ಧ ಜನರು, ಜ್ಞಾನಿಗಳು ನೇರವಾಗಿ ಅಪ್ರತ್ಯಕ್ಷವಾಗಿ ಪ್ರಸಂಗ ಮಾಡಲು, ಸಭಾಪಾಲಕರನ್ನು ಪ್ರಭಾವಿತರಾಗಿ, ಮಾಡಲು ಅವಕಾಶಗಳಗಾಗಿ ಕೇಳಲು ಪ್ರಯತ್ನಿಸುತ್ತಾರೆ, ಅಥವಾ ಸಭಾಪಾಲಕರನ್ನು ಹಿಡಿತದಲ್ಲಿರಿಸಲು ಅಥವಾ ಸಭಾಪಾಲಕರು ಏನು ಮಾಡುತ್ತಿದ್ದಾರೆಂದು ಹೇಳಲು, "ಒಂದು ನಯವಾದ ರೀತಿಯಲ್ಲಿ" ಪ್ರಯತ್ನಿಸುತ್ತಾರೆ. ನಾವು ನಮ್ಮ ಉದ್ದೇಶದ ಮೇಲೆ ನಿಲ್ಲಲು ಕಲಿಯ ಬೇಕು. ಅವರಲ್ಲಿ ಕೆಲವರು ಯಥಾರ್ಥವಾಗಿರುತ್ತಾರೆ ಹಾಗೂ ಚೆನ್ನಾಗಿ ಅರ್ಥಮಾಡಿಕೊಳ್ಳುತ್ತಾರೆ ಆದರೆ ಹೇಗಾದರೂ ಅವರ ಅನುಸಂಧಾನವು ಹಾಗೂ ಪ್ರೇರೇಪಣೆಯು ತಪ್ಪಾಗಿರುತ್ತದೆ, ತಿಳಿಯದೆಯೇ ಅವರು ಹಣ ಪ್ರಭಾವಸ್ಥಾನ ಹಾಗೂ ಅನುಭವಗಳೊಂದಿಗೆ ಪ್ರಪಂಚದಲ್ಲಿ ತಮ್ಮ ಯಶಸ್ಸುನ್ನು ಕುರಿತು ಆಲೋಚಿಸುತ್ತಾರೆ, ಅಂದರೆ

ಸ್ವಯಂ ಪ್ರೇರಿತವಾಗಿ ಅವುಗಳನ್ನು ಪ್ರಸಂಗ ಪೀಠದ ಹಿಂದೆ ಒಂದು ಸ್ಥಳಕ್ಕೆ ಅಥವಾ ಸಭಾ ಪಾಲಕರು ಸಭೆ ಅಥವಾ ಸೇವೆಯನ್ನು ಹಿಡಿತದಲ್ಲಿಡಲು ಅಥವಾ ಪ್ರಭಾವಿತರನ್ನಾಗಿಸಲು ಒಂದು ಪಾತ್ರಕ್ಕೆ ಬಿರುದುಕೊಡುತ್ತಾರೆ. ಆವರು ಇದಕ್ಕಿಂತ ಹೆಚ್ಚು ತಪ್ಪಿಗೊಳಗಾಗುವುದಿಲ್ಲ.

ಸಭಾ ಪಾಲಕರುಗಳಾಗಿ, ನಾವು ಜನರ ಅಭಿಪ್ರಾಯಗಳು / ಮಾಹಿತಿಗಳನ್ನು ಆಲಿಸುವಾಗ, ಅವುಗಳನ್ನು ಎಲ್ಲಿ ನಿಲ್ಲಿಸಬೇಕು ಹಾಗೂ ನಮ್ಮ ಅಧಿಕಾರಸ್ಥಾನ ಎಲ್ಲಿ ಆರಂಭವಾಗುತ್ತದೆ, ನಮ್ಮ ಅಂತಿಮ ನಿರ್ಧಾರವನ್ನು ನಾವು ಮಾಡಬೇಕಾದ ಸ್ಥಳದ ವಲಯ ಹಾಗೂ ದರ್ಶನ, ಸಭೆ ಹಾಗೂ ಸೇವೆಗಾಗಿ ದೇವರಿಗೆ ಲೆಕ್ಕ ಒಪ್ಪಿಸಬೇಕಾದ ವಿಷಯಗಳನ್ನು ತಿಳಿದಿರಬೇಕಾಗುತ್ತದೆ. “ಇಲ್ಲ” ಎಂದು ಹೇಳಲು ನಾವು ಬಲವುಳ್ಳವರೂ ಹಾಗೂ ಸಾಕಷ್ಟು ಭದ್ರತೆಯುಳ್ಳವರೂ ಆಗಿರಬೇಕಾಗುತ್ತದೆ, ಇದರಿಂದ ಅವರು ತಾವು ದಾಟಲಿಕ್ಕಾಗದಂತೆ ಎಲ್ಲಿ ಗೆರೆ ಎಳೆಯಲ್ಪಟ್ಟಿದೆ ಎಂಬುದನ್ನು ತಿಳಿಯಲು ಸಹಾಯವಾಗುತ್ತದೆ.

ಮತ್ತೊಂದು ಕಡೆ ಪ್ರಪಂಚದಲ್ಲಿ ಹಣ ಸ್ಥಾನ ಪ್ರಭಾವ ಮುಂತಾದವುಗಳನ್ನು ಹೊಂದಿದ ವಿಶ್ವಾಸಿಗಳ ಮುಖಾಂತರ ದೇವರು ಏನು ಮಾಡುತ್ತಿದ್ದಾನೆ ಎಂಬುದನ್ನು ನಾವು ಪ್ರೋತ್ಸಾಹಿಸಲು ಹಾಗೂ ಆಚರಣೆ ಮಾಡಲು ಬಯಸುತ್ತೇವೆ. ದೇವರು ಇವುಗಳಿಂದ ಅವರನ್ನು ಆಶೀರ್ವದಿಸಿರುತ್ತಾನೆ. ನಾವು ಅವರನ್ನು ದೇವರ ರಾಜ್ಯಕ್ಕಾಗಿ ಮಹಾಸಾಹಸ ಕಾರ್ಯಗಳನ್ನು ಮಾಡಲು ಬಲಪಡಿಸಬೇಕು ಹಾಗೂ ಸಜ್ಜುಗೊಳಿಸಬೇಕು. ಹಾಗೂ ಹೀಗಿದ್ದರೂ ನಾವು ನಮ್ಮ ಸ್ಥಳ, ನಮಗೆ ನೇಮಕ ಮಾಡಲ್ಪಟ್ಟ ಸೇವೆ, ಹಾಗೂ ನಾವು ಜವಾಬ್ದಾರರಾಗಿರುವ ಅಧಿಕಾರ ಸ್ಥಳಗಳೊಂದಿಗೆ ರಾಜಿಮಾಡಿಕೊಳ್ಳದೆ, ಇದನ್ನು ಮಾಡಬೇಕು, ಲೋಕದಲ್ಲಿ ತಮ್ಮ ಯಶಸ್ಸು ಸ್ವಯಂ ಪ್ರೇರಿತವಾಗಿ ಸ್ಥಳೀಯ ಸಭೆ ಹಾಗೂ ಸೇವೆಯಲ್ಲಿ ಪಾತ್ರ, ಸ್ಥಾನ ಅಥವಾ ಸ್ವರದಲ್ಲಿ ಮಹತ್ವ ಸ್ಥಾನದಲ್ಲಿರಿಸುವುದಿಲ್ಲವೆಂಬುದನ್ನು ವಿಶ್ವಾಸಿಗಳು ತಿಳಿಯುವಂತೆ ಮಾಡಬೇಕು.

ನಾನು ಯಾರಿಗೂ ಲೆಕ್ಕ ಒಪ್ಪಿಸ ಬೇಕಾಗಿಲ್ಲದ ನಾಯಕತ್ವವನ್ನು ಪಕ್ಷೀಕರಣ ಮಾಡುವುದಿಲ್ಲ. ಬೇರೊಂದು ಕಡೆ ನಾನು ದೃಢವಾಗಿ, ನಾಯಕರಾಗಿ ನಾವು ದೇವರಿಗೆ ಹಾಗೂ ನಮ್ಮ ಕುಟುಂಬಗಳಿಗೆ

ಮಾತ್ರವಲ್ಲ, ನಮ್ಮ ಮೇಲಿನ ನಾಯಕರು, ಆಳ್ವಿಕೆ ಮಾಡುವ, ನಿಯಂತ್ರಕ ಅಂಗಗಳಿಗೆ ಹಾಗೂ ನಾವು ನಡೆಸುವ ಮತ್ತು ಸೇವೆಮಾಡುವ ಜನರಿಗೆ ಲೆಕ್ಕ ಒಪ್ಪಿಸುವವರಾಗಿರುತ್ತೇವೆ. ನಮ್ಮ ಜೀವಿತಗಳು ಯಾವುದರ ಬಗ್ಗೆಯಾದರೂ ಯಾರಾದರೂ ನಮ್ಮನ್ನು ಪರೀಕ್ಷೆ ಮಾಡುವಂತಿರಬೇಕು, ಹಾಗೂ ನಾವು ಅವರಿಗೆ ಒಂದು ಸ್ಪಷ್ಟವಾದ ಮನಸ್ಸಾಕ್ಷಿಯೊಂದಿಗೆ ಉತ್ತರ ಕೊಡಲು ಸಮರ್ಥರಾಗಿರಬೇಕು. ನಾವು ಒಂದು ಸುಳ್ಳಿನ ಜೀವಿತ ಮಾಡಬಾರದು. ಇಲ್ಲಿ ನಾನು ಶಿಫಾರಸು ಮಾಡುವುದೇನೆಂದರೆ ಯಾವ ವ್ಯಕ್ತಿಯನ್ನೂ, ಹಣ, ಸ್ಥಾನ, ಬಲ, ಪಾಂಡಿತ್ಯಗಳು ಅಥವಾ ಪ್ರಭಾವ ಮುಂತಾದ ಲೋಕದಲ್ಲಿರಬಹುದಾದವುಗಳಿಂದ ನಿಮ್ಮನ್ನು ಹಿಡಿತಕ್ಕೊಳ ಪಡಿಸಲು ಅವಕಾಶ ಕೊಡಬಾರದು. ನಾಯಕತ್ವಕ್ಕೆ ಹಾಗೂ ಒಬ್ಬರಿಗೊಬ್ಬರು ಅಧೀನರಾಗಿರುವುದು ಅಗತ್ಯವಾದದ್ದು ಹಾಗೂ ಒಂದು ದೈವಿಕ ಅಂಶವಾಗಿರುತ್ತದೆ. ಹೇಗಾದರೂ ಯಾರದೇ ಆದ ಪ್ರಭಾವದಲ್ಲಿ ಅವುಗಳ ಹರಾಜು ಮಾಡುವುದು ಹಾಗೂ ಸೇವೆಯ ಸಂಧಾನ ಮಾಡುವುದು ಅನಾರೋಗ್ಯಕರ ಹಾಗೂ ಬಾಧಕವಾದುದಾಗುತ್ತದೆ.

ಅದೇ ರೀತಿಯಲ್ಲಿ, “ಅಸಾಮಾನ್ಯ ಆತ್ಮಿಕ” ಜನರಿಂದ ನಾವು ಹಿಡಿತಕ್ಕೊಳಗಾಗಿಲ್ಲ ಎಂಬುದನ್ನು ನಾವು ನಿಶ್ಚಯ ಮಾಡಿ ಕೊಳ್ಳಬೇಕು. ಮಧ್ಯಸ್ಥಿಕೆಮಾಡುವವರು ಹಾಗೂ ಪ್ರಾರ್ಥನಾವೀರರು ಹಾಗೂ ಪ್ರವಾದನಾ ಪುರುಷರಿಗಾಗಿ ನಾನು ದೇವರನ್ನು ವಂದಿಸುತ್ತೇನೆ. ಆವರೆ ಕೆಲವು ವೇಳೆ ಇಂಥಾ ಕೆಲವು ಜನರು ತಮ್ಮ ನಾಯಕರನ್ನು ದರ್ಶನಗಳು, ಕನಸುಗಳು ಹಾಗೂ “ಕರ್ತನಿಂದ ಬಂದ ನುಡಿಗಳು” ಇವುಗಳಿಂದ ಹಿಡಿತದಲ್ಲಿಡಲು ಅಥವಾ ಪ್ರಭಾವಕ್ಕೊಳಪಡಿಸಲು ಪ್ರಯತ್ನಿಸುತ್ತಾರೆ, ಸಭಾಪಾಲಕನಾಗಿ, ನಾನು ಜನರು ನನಗೆ ತರುವ “ಕರ್ತನಿಂದ ಬರುವ ನುಡಿಗಳನ್ನು” ಆಲಿಸುತ್ತೇನೆ, ಆದರೆ ಅದು ನಿಜವಾಗಿ ದೇವರಿಂದ ಬಂದ ನುಡಿಎಂಬುದನ್ನು ತಿಳಿಯುವ ಮೊದಲು ನಾನಾಗಿ ಪರೀಕ್ಷಿಸಲು ನಾನು ಜಾಗೃತನಾಗಿರುತ್ತೇನೆ. ಯಾರನ್ನೇ ಆದರೂ ನಿರ್ದಿಷ್ಟವಾಗಿ, “ಮಧ್ಯಸ್ಥಿಕೆ ಮಾಡುವವರು” ಅಥವಾ “ಪ್ರವಾದನಾ ವ್ಯಕ್ತಿ” ಎಂದು ಬಿಡದಂತೆ ನಾನು ಜಾಗೃತನಾಗಿ, ದೇವರು ಮತ್ತು ನನ್ನ ನಡುವೆ ಸ್ವಯಂ ನೇಮಕ ಮಧ್ಯಸ್ಥನಾಗುತ್ತೇನೆ. ಇದರಿಂದ ನಾನು ಮಾತ್ರ ಅವರನ್ನು ಆಲಿಸಬೇಕಾಗುತ್ತದೆ ಹಾಗೂ ಅವರ ಪ್ರವಾದನಾ ಶಬ್ದಗಳು ಅಥವಾ ಪ್ರಕಟನೆಗಳ ಮೇಲೆ ಆಧಾರಗೊಂಡ ತೀರ್ಮಾನಗಳನ್ನು ಮಾಡಬೇಕಾಗುತ್ತದೆ.

## "ಆತ್ಮಿಕ"ವಾದವುಗಳನ್ನು ಎಚ್ಚರಿಕೆಯಿಂದ ನಿಭಾಯಿಸಿರಿ

**"ಕೆಲವರು ಅತಿ ವಿನಯದಲ್ಲಿಯೂ ದೇವದೂತರ ಪೂಜೆಯಲ್ಲಿಯೂ ಆಸಕ್ತರಾಗಿದ್ದಾರೆ, ತಮಗೆ ದರ್ಶನಗಳಾದವೆಂದು ಕೊಚ್ಚಿಕೊಳ್ಳುತ್ತಾರೆ, ಮತ್ತು ಪ್ರಾಪಂಚಿಕ ಬುದ್ಧಿಯಿಂದ ನಿರಾಧಾರವಾಗಿ ಉಬ್ಬಿಕೊಂಡಿದ್ದಾರೆ, ಆದರೆ ಕ್ರಿಸ್ತನೆಂಬ ಶಿರಸ್ಸಿನ ಹೊಂದಿಕೆಯನ್ನು ಬಿಟ್ಟವರಾಗಿದ್ದಾರೆ, ಇಂಥವರು ನಿಮಗೆ ದೊರಕಿರುವ ಬಿರುದನ್ನು ಅಪಹರಿಸುವದಕ್ಕೆ ಅವಕಾಶಕೊಡಬೇಡಿರಿ, ಆ ಶಿರಸ್ಸಿನಿಂದಲೇ ದೇಹವೆಲ್ಲಾ ಕೀಲುನರಗಳ ಮೂಲಕ ಬೇಕಾದ ಸಹಾಯವನ್ನು ಹೊಂದಿ ಒಂದಾಗಿ ಕೂಡಿಸಲ್ಪಟ್ಟು ದೇವರು ಕೊಡುವ ವೃದ್ಧಿಯಿಂದ ಅಭಿವೃದ್ಧಿಯಾಗುತ್ತಾ ಬರುತ್ತದೆ" (ಕೊಲೊಸ್ಸೆಯವರಿಗೆ 2:18,19).**

ಕರ್ತನು ಯಾವಾಗಲೂ ತಮಗೆ ಹೇಳಬೇಕಾಗಿರುವುದನ್ನು ದೇವರ ನೇಮಕವಾದ ನಾಯಕತ್ವವಿಲ್ಲದೆ ಯಾವಾಗಲೂ ಮಾಡಬೇಕೆನ್ನುವ ಕೆಲವು "ಅಸಾಮಾನ್ಯ ಆತ್ಮಿಕ" ವಿಶ್ವಾಸಿಗಳನ್ನು ನೀವು ಸಂಧಿಸುವ ನಿಶ್ಚಯ ಹೊಂದಿರುತ್ತೀರಿ. ನೀವು ಒಬ್ಬ ಸಭಾ ಪಾಲಕರಾಗಿ, ಏನಾದರೂ ಮಾಡಲು ಅಥವಾ ಒಂದು ನಿರ್ದಿಷ್ಟವಾದ ನೀವು ಸಿದ್ಧ ಪಡಿಸಿರುವ ಕಾರ್ಯವಿಧಾನವನ್ನು ಅನುಸರಿಸಲು ಅವರನ್ನು ಕೇಳಿಕೊಂಡಾಗ ಅವರ ಸಾಮಾನ್ಯವಾದ ಪ್ರತಿಕ್ರಿಯೆಯು "ನಾನು ಕರ್ತನು ನಡಿಸಿದಂತೆ ನಡೆಸುತ್ತೇನೆ," ಎಂಬುದಾಗಿರುತ್ತದೆ. ಅವರು ತಮ್ಮ ತೀರ್ಮಾನವನ್ನು, ಮೇಲಿಂದ ಮೇಲೆ "ದೇವರು ನನಗೆ ಹೇಳಿದನು," ಅಥವಾ "ದೇವರು ನನ್ನೊಂದಿಗೆ ಮಾತನಾಡಿದನು..." ಎಂಬುದಾಗಿ ಮೊದಲೇ ಸೇರಿಸಿದಂತೆ ಹೆಳುತ್ತಾರೆ.

ನಾವು ನಿಶ್ಚಯವಾಗಿ ವಿಶ್ವಾಸಿಗಳು ಪ್ರಾರ್ಥನೆಮಾಡಲು ಹಾಗೂ ದೇವರಿಂದ ಆಲಿಸಲು ಅವರನ್ನು ಪ್ರೋತ್ಸಾಹಿಸಲು ಬಯಸುತ್ತೇವೆ. ಈ ಅಸಾಮಾನ್ಯ ಆತ್ಮಿಕರಾದವರು ಕೂಡಾ ಮೊದಲನೇದಾಗಿ ಇವುಗಳನ್ನು ಅರ್ಥಮಾಡಿಕೊಳ್ಳಬೇಕು, ಸಭಾಪಾಲಕರು ಅಥವಾ ನಾಯಕನೂ ದೇವರಿಗೆ ಪ್ರಾರ್ಥಿಸುತ್ತಾರೆ, ಆಲಿಸುತ್ತಾರೆ, ಹಾಗೂ ಇದರಿಂದ ಒಂದು ನಿರ್ದಿಷ್ಟ ರೀತಿಯಲ್ಲಿ, ಒಂದು ನಿರ್ದಿಷ್ಟ ಅಂಶವು ಆಗಬೇಕು ಎಂದು ತೀರ್ಮಾನಿಸಲ್ಪಟ್ಟಿದೆ, ನಾವು ಇಲ್ಲಿ ಏನು ಚರ್ಚಿಸುತ್ತೇವೋ ಅದು ಅಷ್ಟು ಆನಂದದಾಯಕವಾಗಿರುವುದಿಲ್ಲ ಎಂದು ಅರಿತುಕೊಳ್ಳುತ್ತೇನೆ ಆದರೆ ಇದರ ಮೇಲೆ ಕೆಲವು ವಿಮರ್ಶೆಗಳು ಉಂಟಾಗಲು ಹಲವಾರು ಉದಾಹರಣೆಗಳನ್ನು ನಾನು ನೋಡಿರುತ್ತೇನೆಂದು ಆಲೋಚಿಸುತ್ತೇನೆ, ನನ್ನ ವೈಯಕ್ತಿಕ ಅಭಿಪ್ರಾಯ ಮತ್ತು ವೀಕ್ಷಣೆಯಲ್ಲಿ, ಹಲವಾರು

ಅಸಾಮಾನ್ಯ ಆತ್ಮಿಕ ಜನರು, “ದೇವರು ನನ್ನೊಂದಿಗೆ ಮಾತನಾಡಿದನು” ಅಥವಾ “ಕರ್ತನು ನಡಿಸಿದಂತೆ ನಾನು ಮಾಡುತ್ತೇನೆ” ಎಂಬ ನುಡಿಗಳನ್ನು ಬಳಸುತ್ತಾರೆ, ಇದು ಅವರ ಸ್ವಂತ ಆಶೆಗಾಗಿ, ಸ್ವಾತಂತ್ರ್ಯಕ್ಕಾಗಿ ಹಾಗೂ ಎದುರು ಬೀಳುವ ಸ್ಥಿತಿಯನ್ನು ಮುಚ್ಚಲು ಹೀಗೆ ಬಳಸುತ್ತಾರೆ, ನಾವು ಇಂಥಾ ಅಸಾಮಾನ್ಯ ಆತ್ಮಿಕ ಜನರನ್ನು ಎಚ್ಚರಿಕೆಯಿಂದ ನಿಭಾಯಿಸಬೇಕು. ನಾನು ಸಾಮಾನ್ಯವಾಗಿ ಪ್ರಮುಖ ಪಾತ್ರಗಳೊಂದಿಗೆ ಇರುವ ಇಂಥಾ ಜನರಿಗೆ ಒಪ್ಪಿಸಿ ಕೊಡುವುದನ್ನು ನಾನು ತಡೆಯುತ್ತೇನೆ ಏಕೆಂದರೆ ಅವರಲ್ಲಿ ಭರವಸೆ ಇಡಲು ಅಥವಾ ಆತುಕೊಳ್ಳಲು, ದರ್ಶನಕ್ಕೆ ಹಾಗೂ ಮಾರ್ಗ ದರ್ಶನಕ್ಕೆ ಸಮನಾಗಿರಲು, ದೇವರ ಮಾರ್ಗ ದರ್ಶನದ ಅಡಿಯಲ್ಲಿ ನಾವು ಒದಗಿಸುತ್ತೇವೆ. ಯೋಗ್ಯವಾದ ಆತ್ಮಿಕತೆಯ ಹಾಗೂ ದೇವರೊಂದಿಗೆ ನಡೆಯುವ ಒಬ್ಬ ವ್ಯಕ್ತಿಯು ತಾನು “ದೇವರು ನನ್ನೊಂದಿಗೆ ಮಾತನಾಡಿದನು.....” ಎಂದು ಮುಂತಾಗಿ ಬಳಸುತ್ತಾ ದೇವರಿಂದ ಕೇಳುತ್ತಾ ಇರುವುದರಿಂದ ಜನರನ್ನು ಪ್ರಭಾವಿತರನ್ನಾಗಿ ಮಾಡುವ ಅಗತ್ಯ ಹೊಂದಿರುವುದಿಲ್ಲ. ಅವನು ನಮ್ರತೆ ಮತ್ತು ಅಧೀನತೆಯಲ್ಲಿ ನಡೆಯುತ್ತಾನೆ. ಅವನ ಜೀವಿತ ಹಾಗೂ ಫಲ ಇವು ಅವನು ಆತ್ಮನ ಪ್ರಕಾರ ನಡೆಯುವುದನ್ನು ತೋರಿಸುತ್ತವೆ.

## ನಾಯಕರನ್ನು ಎಬ್ಬಿಸಿರಿ

**“ಈ ನಿಮಿತ್ತದಿಂದ ಕರ್ತನಲ್ಲಿ ನನ್ನ ಮಗನಾದ ತಿಮೊಥೆಯನನ್ನು ನಿಮ್ಮ ಬಳಿಗೆ ಕಳುಹಿಸಿಕೊಟ್ಟಿದ್ದೇನೆ. ಅವನು ನನಗೆ ಪ್ರಿಯನೂ ನಂಬಿಗಸ್ತನೂ ಆಗಿದ್ದಾನೆ. ಅವನು ಕ್ರಿಸ್ತನ ಸೇವೆಯಲ್ಲಿರುವ ನನ್ನ ನಡವಳಿಕೆಯನ್ನು ಅಂದರೆ ನಾನು ಎಲ್ಲೆಲ್ಲಿಯೂ ಪ್ರತಿಯೊಂದು ಸಭೆಯಲ್ಲಿಯೂ ಬೋಧಿಸುವ ಕ್ರಮವನ್ನು ನಿಮ್ಮ ನೆನಪಿಗೆ ತರುವನು”** (1 ಕೊರಿಂಥದವರಿಗೆ 4:17).

**“ತಿಮೊಥೆಯನು ಬಂದರೆ ಅವನು ನಿಮ್ಮ ಬಳಿಯಲ್ಲಿ ಭಯವಿಲ್ಲದೆ ಇರುವಂತೆ ನೋಡಿಕೊಳ್ಳಿರಿ; ನನ್ನ ಹಾಗೆಯೇ ಕರ್ತನ ಕೆಲಸವನ್ನು ನಡಿಸುತ್ತಾನೆ;”** (1 ಕೊರಿಂಥದವರಿಗೆ 16:10).

ಅಪೊಸ್ತಲನಾದ ಪೌಲನು, ತನ್ನ ಸೇವೆಯನ್ನು ತಾನಾಗಿ ಸಾಗಿಸಲಿಲ್ಲ ಅವನು ಹಲವು ನಾಯಕರನ್ನು ತನ್ನ ಸುತ್ತ ಎಬ್ಬಿಸಿದನು. ಅವನು ಅವರನ್ನು ಜೊತೆಸೇವಕರು ಅಥವಾ ಜೊತೆಗಾರ ಕೆಲಸದವರು ಎಂದು ಕರೆದನು, ಸೇವೆಯಲ್ಲಿ ಪೌಲನು ಮೇಲಕ್ಕೆತ್ತಿದ ತಿಮೊಥೆಯನು ಒಬ್ಬ ನಾಯಕನಾಗಿ ಒಂದು ಮಾದರಿಯಾಗಿದ್ದಾನೆ, ಪೌಲನು ಅವನನ್ನು ಲುಸ್ತ್ರದ ಒಬ್ಬ

ಯುವಕನಾಗಿ ಕಂಡು ಕೊಂಡನು (ಅಪೊಸ್ತಲರ ಕೃತ್ಯಗಳು.16:1–3), ಹಾಗೂ ಅವನನ್ನು ತಂಡದ ಒಬ್ಬ ಪಾಲುದಾರನಾಗಿ ಕರೆದು ಕೊಂಡನು. ಸಮಯ ದಾಟಿದಂತೆ ಪೌಲನು ತಿಮೊಥೆಯನನ್ನು ದೇವರ ಸೇವಕನಾಗಿ, ಪೌಲನು ಮಾಡಿದ ರೀತಿಯಲ್ಲೇ ಸೇವೆಯಕಾರ್ಯವನ್ನು ಮಾಡುವವನಾಗಿ ಪೊಷಿಸಿದನು. ತಿಮೊಥೆಯನು ಪೌಲನ ಜೊತೆ ಕೆಲಸದವರಲ್ಲಿ ಒಬ್ಬನಾದನು.

ಕ್ರೈಸ್ತೀಯ ಸೇವೆಯಲ್ಲಿ ನಿಮ್ಮ ಸುತ್ತಲೂ, ನಿಮ್ಮೊಂದಿಗೆ ಕೆಲಸ ಮಾಡಬಲ್ಲ ನಾಯಕರನ್ನು ವೃದ್ಧಿಮಾಡುವುದು ಪ್ರಾಮುಖ್ಯವಾದುದು, ನಾಯಕರು ದೇವರ ಮನೆಯ ಸ್ಥಂಭಗಳಂತೆ ಇದ್ದಾರೆ. (ಗಲಾತ್ಯದವರಿಗೆ 2:9). ನೀವು ಒಂದು ದೊಡ್ಡ ಮನೆಯನ್ನು ಕಟ್ಟಲು ಬಯಸಿದರೆ, ಆ ದೊಡ್ಡರಚನೆಗೆ ಆಧಾರವಾಗಿ ಹಲವಾರು ಸ್ಥಂಭಗಳ ಅಗತ್ಯವಿದೆ, ನೀವು ಒಂದು ಬಲವಾದ ಸ್ಥಳೀಯ ಸಭೆಯನ್ನು ಕಟ್ಟಲು ಬಯಸಿದರೆ, ನೀವು ನಿಮ್ಮ ಸುತ್ತಲೂ ಸೇವೆಯ ನಿರ್ದಿಷ್ಟವಾದ ಅಂಶಗಳನ್ನು ಸಾಗಿಸಲು ಕಲಿತ, ತರಬೇತಿ ಹೊಂದಿದ ಹಾಗೂ ಅಧಿಕಾರ ಯುಕ್ತರಾದ ಹಲವಾರು ನಾಯಕರನ್ನು ಎಬ್ಬಿಸಬೇಕು. ಎ.ಪಿ.ಸಿ. ಸಭೆಯಲ್ಲಿ ನಾವು ಎಡೆಬಿಡದೆ, “ಪ್ರತಿಯೊಬ್ಬ ವಿಶ್ವಾಸಿಯೂ ಒಬ್ಬ ಸೇವಕನು,” ಎಂದು ಪದೇ ಪದೇ ಹೇಳುತ್ತಿರುತ್ತೇವೆ. ಸೇವೆಮಾಡಲು ನಾವು ಪ್ರತಿಯೊಬ್ಬರನ್ನೂ ಪ್ರೋತ್ಸಾಹಿಸುತ್ತೇವೆ. ನಾವು ಹೊಸ ವಿಶ್ವಾಸಿಗಳನ್ನು ಶಿಷ್ಯರನ್ನಾಗಿ, ಶಿಷ್ಯರನ್ನು ಸೇವಕರಾಗಿ ಹಾಗೂ ಸೇವಕರು ನಾಯಕರಾಗುವಂತೆಯೂ ತೆಗೆದುಕೊಳ್ಳಲು ಕೆಲಸ ಮಾಡುತ್ತೇವೆ. ಪ್ರತಿಯೊಬ್ಬರೂ ಒಬ್ಬ ನಾಯಕನಾಗಲು ನಾವು ಒತ್ತಡ ಹೇರುತ್ತೇವೆ. ನಾಯಕತ್ವವು ಒಂದು ಅಂತಸ್ತಿನ ಸ್ಥಾನವಲ್ಲ ಅಥವಾ ಜನರಲ್ಲಿ ನಡುವೆ ಉನ್ನತಿಯ ಸ್ಥಳವಲ್ಲ. ನಾಯಕತ್ವವು ಹೆಚ್ಚಿನ ಜವಾಬ್ದಾರಿ ಹಾಗೂ ಹೆಚ್ಚಿನ ಸೇವೆಯ ಮೇಲೆ ತೆಗೆ ದುಕೊಳ್ಳುವಿಕೆಯಾಗಿರುತ್ತದೆ.

ನಾವು ಜನರಿಗಾಗಿ, ನಾಯಕರಾಗಿ ಜನರು ಪೊಷಿಸಲ್ಪಡುವಂತೆ ಅವಕಾಶಗಳನ್ನು ಸೃಷ್ಟಿಸುತ್ತೇವೆ. ಅವರು ಬೆಳೆಯುವಂತೆ ಬಿಡುತ್ತೇವೆ, ನಾವು ಅವರ ಜೀವಿತ ನಿದರ್ಶನವನ್ನು ಹಾಗೂ ಹೃದಯ ಮನೋಭಾವಗಳನ್ನು ಗಮನಿಸುತ್ತೇವೆ. ಅಗತ್ಯ ವಿದ್ದಾಗ ನಾವು ತಪ್ಪುತಿದ್ದುವಿಕೆ, ಹಾಗೂ

ಸಮನಾಗಿರುವ ಕಾರ್ಯಮಾಡುತ್ತೇವೆ. ಇದರಿಂದ ಜನರನ್ನು ನಾವು ಒಳ್ಳೆ ನಾಯಕರಾಗಿ ಪೋಷಿಸುತ್ತೇವೆ. ನಾವು ಅವರನ್ನು ತಮ್ಮ ಸಮಯ ತೆಗೆದುಕೊಳ್ಳುವಂತೆ ಅವಕಾಶ ಕೊಡುತ್ತೇವೆ. ಹಾಗೂ ಅವರನ್ನು ನಾಯಕತ್ವ ಪಾತ್ರಗಳಿಗೆ ಮುನ್ನುಗ್ಗದಂತೆ ಮಾಡುತ್ತೇವೆ, ನಾವು ಜನರನ್ನು ಯಾವುದೇ ಬಿರುದು ಅಥವಾ ಸ್ಥಾನ ವಿಲ್ಲದೆ ಮೊದಲು ಸೇವೆ ಮಾಡುವಂತೆ ಮಾಡುತ್ತೇವೆ ಯಾರಾದರೂ ಬಿರುದು, ಪಾತ್ರ ಅಥವಾ ಗುರುತಿಸುವಿಕೆ ಇಲ್ಲದೆ ಸೇವೆ ಮಾಡಬಹುದಾದರೆ, ಇದು ಅವರ ಕೆಲಸಕ್ಕೆ ಸೇರಿಕೊಳ್ಳುವಾಗ, ಅವರು ನಿಶ್ಚಯವಾಗಿ ಸೇವೆ ಮಾಡುತ್ತಾರೆ, ಪೂರ್ಣವಾಗಿ ತಲಾಂತಿನ ಮೇಲೆ (ಕೌಶಲ್ಯದ ಮೇಲೆ), ಕುಶಲತೆ ಅಥವಾ ದೈವಿಕ ವರ್ಚಸ್ಸಿನ ಆಧಾರದ ಮೇಲೆ ಜನರನ್ನು ಮೇಲಕ್ಕೆತ್ತುವುದಿಲ್ಲ. ದೈವಿಕ ಜೀವಿತ ಮಾದರಿ, ಸರಿಯಾದ ಹೃದಯ ಭಾವ, ಒಳ್ಳೆಯ ಜನರ ಸಂಬಂಧಗಳು, ದರ್ಶನಕ್ಕೆ ಒಂದಾಗುವಿಕೆ, ಇವು ಮುಖ್ಯವಾದ ನಾವು ಎದುರು ನೋಡುವ ಅಂಶಗಳಾಗುತ್ತವೆ, ನಾವು ಉದಾಹರಣೆಯಿಂದ ನಾಯಕತ್ವವನ್ನು ಒತ್ತಿಹೇಳುತ್ತೇವೆ.

ನಿಮ್ಮ ಸುತ್ತಲೂ ಒಳ್ಳೆಯ ನಾಯಕರನ್ನು ಹೊಂದುವುದು, ಒಂದು ಬಲವಾದ ಸೇವೆಯನ್ನು ಹೊಂದುವುದಕ್ಕೆ ಆಧಾರವಾಗಿದೆ. ವಾಸ್ತವವಾಗಿ ಎಲ್ಲಾ ನಾಯಕರೂ ತಮ್ಮ ಉಳಿದ ಜೀವಿತ ಕಾಲಗಳಿಗಾಗಿ ನಿಮ್ಮೊಂದಿಗೆ ಉಳಿಯುವುದಿಲ್ಲ. ದೇವರು ಒಂದು ದೊಡ್ಡ ಕರೆಯನ್ನು ಒಂದು ವಿಭಿನ್ನವಾದ ಸೇವೆಯನ್ನು ಹೊಂದಿರಬಹುದು. ಹಾಗೂ ಇದರಿಂದ ಒಂದು ಸಮಯ ಬಂದಾಗ; ದೇವರು ಏನು ಮಾಡಲು ಕರೆದಿರುತ್ತಾನೋ ಅಲ್ಲಿಗೆ ಮುಂದುವರಿಯಲು ಬಿಡುಗಡೆ ಮಾಡುತ್ತಾನೆ. ನೀವು ನಾಯಕರನ್ನು ಬಿಡುಗಡೆ ಮಾಡುವಾಗ ನೀವು ಕೂಡಾ ಹೆಚ್ಚುಜನರಿಗೆ ಅವಕಾಶಗಳನ್ನು ಸೃಷ್ಟಿಸಿ, ಹೆಚ್ಚು ಜನರು ಮೇಲಕ್ಕೆ ಬರುವಂತೆ ಮಾಡುತ್ತೀರಿ, ಹಾಗೂ ತಮ್ಮ ಸ್ಥಳಗಳನ್ನು ತೆಗೆದು ಕೊಳ್ಳುವಂತೆ ನಾಯಕರಾಗುತ್ತೀರಿ.

## ನಿಮ್ಮ ನಾಯಕರಿಗೆ ಒತ್ತಾಸೆಯಾಗಿ ನಿಲ್ಲಿರಿ

**"ಸಭೆಯ ಹಿರಿಯನ ಮೇಲೆ ಯಾರಾದರೂ ದೂರು ಹೇಳಿದರೆ ಇಬ್ಬರು ಮೂವರು ಸಾಕ್ಷಿಗಳಿದ್ದ ಹೊರತಾಗಿ ಅದನ್ನು ಮನಸ್ಸಿಗೆ ತೆಗೆದುಕೊಳ್ಳಬೇಡ. ಪಾಪದಲ್ಲಿ ನಡೆಯುವವರನ್ನು**

**ಎಲ್ಲರ ಮುಂದೆಯೇ ಗದರಿಸು; ಇವರಿಂದ ಮಿಕ್ಕಿದವರಿಗೂ ಭಯವುಂಟಾಗುವುದು"** (1ತಿಮೊಥೆಯನಿಗೆ 5:19,20).

ಒಬ್ಬ ಆತ್ಮಿಕ ನಾಯಕನಾಗಿರುವುದು, ವಿಶೇಷವಾಗಿ ಅದನ್ನು ಸರಿಯಾಗಿ ಮಾಡಬೇಕಾದರೆ ಸುಲಭವಾದ ಕಾರ್ಯವೆನಿಸುವುದಿಲ್ಲ, ನಿಮ್ಮ ಮತ್ತು ನಿಮ್ಮ ನಾಯಕತ್ವದ ಜೊತೆಯಲ್ಲಿ ಸೇವೆಮಾಡುವ ನಾಯಕರು ತಮಗೆ ನಿಮ್ಮ ಸಂಪೂರ್ಣ ಬೆಂಬಲವಿದೆ ಎಂದು ತಿಳಿದಿರಬೇಕು. ಅವರು ತಮ್ಮ ಜೀವಿತಗಳನ್ನು ತೊಂದರೆಗೆ ಗುರಿಪಡಿಸಿಕೊಳ್ಳುತ್ತಾರೆ ಹಾಗೂ ನಿಮ್ಮೊಂದಿಗೆ ಜವಾಬ್ದಾರಿಕೆಯನ್ನು ಹೊರುತ್ತಾರೆ. ಇದರಿಂದ ಅವರ ಪಕ್ಕದಲ್ಲಿ ನಿಲ್ಲಿರಿ, ವಿಶೇಷವಾಗಿ ಏನಾದರೂ ದೂರು ಅಥವಾ ಅಪವಾದವಾದರೂ ಸಭಿಕರಿಂದ ಇರುವಾಗ ಹಾಗೆ ನಿಲ್ಲಿರಿ .ಎರಡು ಅಥವಾ ಹೆಚ್ಚು ಯೋಗ್ಯಸಾಕ್ಷಿಗಳೊಂದಿಗೆ ಎರಡೂ ಸಾರಿ ಪರಿಶೀಲಿಸಿರಿ. ಯೋಗ್ಯವಾದ ತಪ್ಪು ನಡೆದಿದೆಯೆಂದು ಪರೀಕ್ಷಿಸಿದ ನಂತರ ಮಾತ್ರ ನೀವು ತಪ್ಪು ತಿದ್ದುವಿಕೆಯೊಂದಿಗೆ ಮುಂದರಿಯಿರಿ.

ನಾವೆಲ್ಲರೂ ತಪ್ಪು ಮಾಡುತ್ತೇವೆ. ನಮ್ಮಲ್ಲಿ ಯಾರೂ ಕುಂದುಕೊರತೆ ಇಲ್ಲದವರಲ್ಲ. ಇದರಿಂದ ಒಬ್ಬ ನಾಯಕನು ನೈತಿಕ ಸೋಲುವಿಕೆಯಲ್ಲದ ಅಥವಾ ದೈವಿಕ ಮಟ್ಟಗಳ ಸಂಧಾನ ಮಾಡಲಾರದ ಒಂದು ತಪ್ಪು ಮಾಡಿದ್ದರೂ ಅದನ್ನು ಗೋಪ್ಯವಾಗಿ ಹೇಳಿರಿ, ಹಾಗೂ ತಮ್ಮನ್ನು ತಿದ್ದಿಕೊಳ್ಳುವಂತೆ ಅವರನ್ನು ಪ್ರೋತ್ಸಾಹ ಪಡಿಸಿರಿ ಕೆಲವು ವೇಳೆ ನಾಯಕನು ತಪ್ಪನ್ನು ಮರುಕಳಿಸಿ ಮಾಡಬಹುದು ಹಾಗೂ ನೀವು ಸಹನೆಯಿಂದ ಇರಬೇಕು ಮತ್ತು ಅದನ್ನು ಸರಿ ಪಡಿಸಿಕೊಳ್ಳುವ ಅವರ ಪಯಣದಲ್ಲಿ ಅವರನ್ನು ಪ್ರೋತ್ಸಾಹ ಗೊಳಿಸಿರಿ. ಹೇಗಾದರೂ, ಸಾಕಷ್ಟು ಸಮಯ ಹಾಗೂ ಪ್ರೋತ್ಸಾಹವು ಕೊಡಲ್ಪಟ್ಟನಂತರ, ಹಾಗೂ ವಿಷಯಗಳು ಬದಲಾಗದೆ ಇದ್ದರೆ, ಆಗ ಯಾವುದೇ ಆದರೂ ಪರಿಹಾರ ಯೋಗ್ಯವಾದ ಕಾರ್ಯದ ಅಗತ್ಯವಿರುತ್ತದೆ. ದೈವಿಕ ಮಟ್ಟಗಳ ನೈತಿಕ ಸೋಲುವಿಕೆ ಅಥವಾ ರಾಜಿಯ ಸ್ಥಿತಿಯಲ್ಲಿ, ಯೋಗ್ಯವಾದ ಕ್ರಮಗಳು ತೆಗೆದುಕೊಳ್ಳಲ್ಪಡುವುದು ಹೆಚ್ಚು ಗಂಭೀರವಾಗುತ್ತದೆ. ಇದು ಪ್ರತಿಯೊಬ್ಬರ ಮನಸ್ಸಿನ ಒಳತಿನೊಂದಿಗೆ ನಡೆಯಬೇಕು ಹೇಗಾದರೂ ಇವೆಲ್ಲದರ ಮುಖ್ಯ ಅಂಶವಾಗಿ ನಿಮ್ಮ ತಂಡದವರು ಎಲ್ಲಾ ಕಷ್ಟಗಳ ಸಮಯದಲ್ಲೂ,

ಅವರೊಂದಿಗೆ ನೀವು ನಿಲ್ಲುವಿರಿ ಹಾಗೂ ದೇವರ ರಾಜ್ಯದ ಉಜ್ಜೀವನ ಹಾಗೂ ಮುನ್ನುಗ್ಗುವಿಕೆಯನ್ನು ನೋಡುವಿರಿ ಎಂದು ತಿಳಿಯುತ್ತಾರೆ.

## ಅಲಸ್ಯ ಅಥವಾ ಉದಾಸೀನತೆಗಳು ಹುಟ್ಟಿ ಅಬ್ಷಾಲೋಮನಂತೆ ಆಗಲು ಅವಕಾಶ ಕೊಡಬೇಡಿರಿ

ಇಸ್ರಾಯೇಲಿನಲ್ಲಿ ಅತ್ಯಂತ ಯಶಸ್ವಿಯಾದ ರಾಜರುಗಳಲ್ಲಿ ಅರಸನಾದ ದಾವೀದನು ಒಬ್ಬನಾಗಿದ್ದನು. ಹೆಗಾದರೂ, ಅವನು ಕೊನೇ ಪಕ್ಷ ತನ್ನ ಮಗನಾದ ಸೊಲೊಮೋನನನ್ನುಪಡೆಯುವವರೆಗೂ ತನ್ನ ಸ್ವಂತ ಕುಟುಂಬಕ್ಕೆ ಒಬ್ಬ ಉತ್ತಮ ತಂದೆಯಾಗಲಿಲ್ಲವೆಂದು ತೋರುತ್ತದೆ. ಅವನ ಮಕ್ಕಳ ನಡುವೆ, ಅವನು ಅಣ್ಣ ಮತ್ತು ತಂಗಿಯರಾಗಿದ್ದ ಅಬ್ಷಾಲೋಮನು ಮತ್ತು ತಾಮಾರಳನ್ನು ಹೊಂದಿದ್ದನು ಹಾಗೂ ಅಮ್ನೋನನೆಂಬ ಮಲ ಅಣ್ಣನೂ ಇದ್ದನು. ಅಮ್ನೋನನು ತಾಮಾರಳನ್ನು ಪ್ರೀತಿಸುತ್ತಿದ್ದನು ಹಾಗೂ ಬಹು ಉಪಾಯದಿಂದ ಆಕೆಯ ಕನ್ಯಾವಸ್ಥೇಯನ್ನು ಉಲ್ಲಂಘಿಸಿ, ಗೆದ್ದನು (2 ಸಮುವೇಲನು 13). ಸತ್ಯವೇದದಲ್ಲಿ, *"ಅರಸನಾದ ದಾವೀದನು ಈ ಸಂಗತಿಯನ್ನು ಕೇಳಿ ಬಹಳವಾಗಿ ಕೋಪಗೊಂಡನು"* (2 ಸಮುವೇಲನು 13:21)ಎಂದು ಬರೆದಿದೆ. ಹಾಗೂ ಹೀಗಿದ್ದರೂ ಅರಸನಾದ ದಾವೀದನು ನಡೆದ ವಿಷಯಕ್ಕೇ ಏನೂ ಮಾಡಲಿಲ್ಲ. ಊಹಿಸುವುದಾದರೆ, ಅಬ್ಷಾಲೋಮನು ಅಮ್ನೋನನ ಮೇಲೆ ತಾಮಾರಳಿಗೆ ಅವನು ಮಾಡಿದ ವಿಷಯಕ್ಕಾಗಿ ಬಹಳವಾಗಿ ಕೋಪಗೊಂಡನು. ಬಹುಶಃ ಅವನ ಕೋಪವು ಬೆಳೆಯುತ್ತಾ ಬಂತು, ಏಕೆಂದರೆ ಈ ಘಟನೆಯ ಬಗ್ಗೆ ದಾವೀದನು ಎರಡು ವರ್ಷಗಳು ಪೂರ್ತಿಯಾಗಿ ಏನೂ ಮಾತನಾಡಲಿಲ್ಲ. ನಂತರ ಅಬ್ಷಾಲೋಮನು ವಿಷಯಗಳನ್ನು ತನ್ನ ಕೈಯಲ್ಲಿ ತೆಗೆದುಕೊಂಡು ಅಮ್ನೋನನ್ನು ಕೊಲ್ಲಲು ತೀರ್ಮಾನಿಸಿದನು. ಅಬ್ಷಾಲೋಮನು ಓಡಿ ಹೋಗಿ ಮೂರು ವರ್ಷಗಳ ಕಾಲ ಬಚ್ಚಿಟ್ಟುಕೊಂಡನು. ಅನಂತರ ದಾವೀದನು ಅಮ್ನೋನನ ನಾಶಕ್ಕಾಗಿ ದುಃಖಿಸಿದನು, ಅಬ್ಷಾಲೋಮನಿಗಾಗಿ ಹಂಬಲಿಸಿದನು. *"ಅರಸನಾದ ದಾವೀದನು ಅಮ್ನೋನನ ಮರಣದ ವಿಷಯ ಆದರಣೆ ಹೊಂದಿ ತನ್ನ ಮಗನಾದ ಅಬ್ಷಾಲೋಮನನ್ನು ತಿರುಗಿ ನೋಡುವುದಕ್ಕೆ ಬಹಳ ಆತುರ ಪಟ್ಟನು"* (2 ಸಮುವೇಲನು 13:39). ಇಲ್ಲಿ ಮತ್ತೆ ಮೂರು ವರ್ಷಗಳ ಕಾಲ ದಾವೀದನು ಏನೂ ಮಾಡಲಿಲ್ಲ.

ಅವನು ಅಬ್ಷಾಲೋಮನನ್ನು ಸಂಪರ್ಕಿಸಲಿಲ್ಲ. ಈಗ ಆಲೋಚಿಸಿರಿ, ಐದು ವರ್ಷಗಳ ಕಾಲ ಅಬ್ಷಾಲೋಮನು ತನ್ನ ತಂಗಿಗೆ ಆದ ಅನ್ಯಾಯದ ನೋವನ್ನು ತನ್ನೊಳಗೆ ಇಟ್ಟುಕೊಂಡಿದ್ದನು, ಹಾಗೂ ತಂದೆಯಾಗಿ ದಾವೀದನು ಐದು ವರ್ಷಗಳಲ್ಲಿ ಅವನನ್ನು ಸಂಧಿಸಲು ಏನೂ ಮಾಡಲಿಲ್ಲ. ಕೊನೆಯಲ್ಲಿ ದಾವೀದನ ನಾಯಕರಲ್ಲಿ ಒಬ್ಬನಾದ ಯೋವಾಬನು ದಾವೀದನನ್ನು ಸಮಾಲೋಚಿಸಿ. ಒಳ ಸಂಚು ಮತ್ತೆ ಎರಡು ವರ್ಷಗಳ ಕಾಲ ಮುಂದುವರಿಯಿತು. *"ಅಬ್ಷಾಲೋಮನು ಅರಸನ ಮೋರೆಯನ್ನು ನೋಡದೆ ಎರಡು ವರುಷ ಯೆರುಸಲೇಮಿನಲ್ಲಿ ವಾಸವಾಗಿದ್ದನು"* (2 ಸಮುವೇಲನು 14:28). ಕೊನೆಗೆ ಅಬ್ಷಾಲೋಮನು ಯೋವಾಬನನ್ನು ಸಮಾಲೋಚಿಸಿ, ತನ್ನ ತಂದೆಯಾದ ದಾವೀದನೊಂದಿಗೆ ಸಂಧಾನಕ್ಕಾಗಿ ಸಮಯ ಗೊತ್ತು ಮಾಡುವಂತೆ ಕೇಳಿದನು. *"ಯೋವಾಬನು ಹೋಗಿ ಇದನ್ನು ಅರಸನಿಗೆ ತಿಳಿಸಿದಾಗ ಅರಸನು ಅಬ್ಷಾಲೋಮನನ್ನು ಕರಿಸಿದನು. ಅವನು ಅರಸನ ಬಳಿಗೆ ಬಂದು ಸಾಷ್ಟಾಂಗ ನಮಸ್ಕಾರ ಮಾಡಿದನು. ಅರಸನು ಅವನನ್ನು ಮುದ್ದಿಟ್ಟನು"* (2 ಸಮುವೇಲನು 14:33). ಅನ್ಯಾಯದ ಘಟನೆಯ ಏಳು ವರ್ಷಗಳ ನಂತರ ಅಬ್ಷಾಲೋಮನು ಕೊನೆಗೂ ತನ್ನ ತಂದೆಯನ್ನು ಸಂಧಿಸಿದ್ದರೂ, ಆ ಗಾಯಗಳನ್ನು ಸ್ವಸ್ಥ ಮಾಡಲು ದಾವೀದನು ಏನನ್ನಾದರೂ ಮಾಡಿದ್ದಾನೆಂಬುದಕ್ಕೆ ಯಾವ ಗುರುತೂ ಇಲ್ಲ. ಇದಕ್ಕೆ ನಂತರದಲ್ಲಿ ನ್ಯಾಯವನ್ನು ನಿಭಾಯಿಸುವ ಈ ವಿಷಯವನ್ನು ನಿಭಾಯಿಸುವಲ್ಲಿ, ಅಬ್ಷಾಲೋಮನು ಜನರ ಹೃದಯಗಳಲ್ಲಿ ಈ ರೀತಿ ಕೆಲಸ ಮಾಡಿದನು, *"ಅರಸರ ಬಳಿಗೆ ವ್ಯಾಜ್ಯಕ್ಕಾಗಿ ಬರುವ ಎಲ್ಲ ಇಸ್ರಾಯೆಲ್ಯರಿಗೆ ಅಬ್ಷಾಲೋಮನು ಹೀಗೆಯೇ ಮಾಡಿ ಎಲ್ಲರ ಮನಸ್ಸುಗಳನ್ನು ತನ್ನ ಕಡೆಗೆ ತಿರುಗಿಸಿಕೊಂಡನು"* (2 ಸಮುವೇಲನು 15:6). ಇದನ್ನು ಮಾಡಿ, ಅಬ್ಷಾಲೋಮನು, ತನ್ನ ಸ್ವಂತ ತಂದೆಯಾದ ಅರಸನಾದ ದಾವೀದನಿಗೆ ವಿರುದ್ಧವಾಗಿ ಬಲವಾದ ದಂಗೆಯನ್ನು ನಡೆಸಿದನು. ದಾವೀದನು ಯೆರೂಸಲೇಮಿನಿಂದ ಓಡಿ ಹೋಗಬೇಕಾಯಿತು, ಹಾಗೂ ಬಹುಮಟ್ಟಿಗೆ ತನ್ನ ಸಿಂಹಾಸನವನ್ನು ಕಳೆದುಕೊಂಡನು.

ಅನ್ಯಾಯದ ಘಟನೆ ಯಾವಾಗ ನಡೆಯಿತೋ, ಅದರ ಆರಂಭದಲ್ಲೇ ಅಬ್ಬಾಲೋಮನನ್ನು ದಾವೀದನು ಸಂಧಿಸಿದ್ದಿದ್ದರೆ,

ಅಬ್ಷಾಲೋಮನ ಹೃದಯದ ನೋವು ಹಾಗೂ ಪರಿಣಾಮಗಳೊಂದಿಗೆ ನಿಭಾಯಿಸಲಾಗುತ್ತಿತ್ತೋ? ದಂಗೆಯು ಎಂದಿಗೂ ಘಟಿಸುತ್ತಿರಲಿಲ್ಲ ಎಂಬುದು ಸಾಧ್ಯವಾಗಿತ್ತು. ಏಳು ವರ್ಷಗಳ ಕಾಲ, ದಾವೀದನು ನೋವು ಮತ್ತು ಪರಿಣಾಮಗಳನ್ನು ಪರಿಹರಿಸಲು ಏನೂ ಮಾಡಲಿಲ್ಲ ಹಾಗೂ ಇದು ಕೊನೆಗೆ ದಂಗೆ ನಡೆಸಿತು.

ನಾವು ಇದರಿಂದ ಒಂದು ಸೇವೆಯ ತಂಡವನ್ನು ನಡೆಸುವ ಮೂಲಕ ಒಂದು ಪ್ರಮುಖ ಪಾಠವನ್ನು ಕಲಿಯಲು ಸಾಧ್ಯ. ನೀವು ನಿಮ್ಮ ಸೇವೆಯ ತಂಡದಲ್ಲಿ ಒಬ್ಬ ಸದಸ್ಯನನ್ನು ಕಂಡುಕೊಂಡರೆ ಸಮಸ್ಯೆಗಳು ಮತ್ತು ಪರಿಣಾಮಗಳನ್ನು ಹೊಂದಿದ್ದರೂ ಅದನ್ನು ಅಸಡ್ಡೆ ಮಾಡಬೇಡಿರಿ. ಇದನ್ನು ಕಂಡು ಕೊಂಡ ತಕ್ಷಣ ಹೃದಯದಿಂದ ಹೃದಯದವರೆಗೆ ಮನಬಿಚ್ಚಿ ಮಾತನಾಡಿರಿ. ಅವರ ಹೋರಾಟಗಳು ಹಾಗೂ ನಿರುತ್ಸಾಹದ ಕಾರಣಗಳನ್ನು ಆಲಿಸಿರಿ. ನಿಮ್ಮ ಹೃದಯವನ್ನು ಅವರು ಅರ್ಥಮಾಡಿಕೊಳ್ಳುವಂತೆ ಅವರಿಗೆ ಸಹಾಯ ಮಾಡಿರಿ. ಸಾಧ್ಯವಾದಷ್ಟು ಮಟ್ಟಿಗೆ ಅಷ್ಟು ಉನ್ನತ ಮಟ್ಟಕ್ಕೇ ಮಾಡಿರಿ. ಸಾಧ್ಯವಾದಷ್ಟು ಮಟ್ಟಿಗೆ ಅಷ್ಟು ಉನ್ನತ ಮಟ್ಟಕ್ಕೆ ಮಾಡಿರಿ. ಅವರು ಸಂಗತಿಗಳನ್ನು ನಿರ್ಧರಿಸಲು ಆಗದಿದ್ದರೆ, ಆಗ ಪ್ರೀತಿಯಿಂದ ಅವರನ್ನು ಬಿಡುಗಡೆ ಮಾಡಿರಿ. ಆಗ ಅವರು ತಂಡದಲ್ಲಿ ಉಳಿದು ಒಳಗೇ ಕುದಿಯುತ್ತಾ ಇರುವುದಕ್ಕಿಂತ ಸೇವೆಯ ತಂಡದಿದ ಬೇರೆ ಯಾವುದಕ್ಕಾದರೂ ಹೊರಟು ಹೋಗುತ್ತಾರೆ. ಇದು ಇಡೀ ತಂಡ ಹಾಗೂ ವ್ಯಕ್ತಿಗತವಾಗಿ ಎರಡೂ ಕಡೆ ನಾಶಕರವಾಗಿರುತ್ತದೆ. ಹಾಗೂ ವಾಸ್ತವವಾಗಿ ನೀವು ಮುಂದೆ ಕೊನೆಯಲ್ಲಿ ನಿಮ್ಮ ಸ್ವಂತ ಸೇವೆಯಲ್ಲಿ ಒಂದು "ದಂಗೆಕೋರತನ"ವನ್ನು ನಡೆಸುವ ಒಬ್ಬ ಅಬ್ಷಾಲೋಮನನ್ನು ಎಬ್ಬಿಸಲು ನೀವು ಬಯಸುವುದಿಲ್ಲ. ಆದುದರಿಂದ ಅವುಗಳನ್ನು ಕಂಡುಕೊಂಡ ಕೂಡಲೇ. ಆದ ಘಟನೆಗಳೊಂದಿಗೆ ವ್ಯವಹರಿಸಿರಿ. ಅದನ್ನು ನಂದಿಸಬೇಡಿರಿ. ನಿಮ್ಮ ಆಲಸ್ಯ ಹಾಗೂ ನಿರ್ಲಕ್ಷ್ಯತನಗಳು, ನಿಮ್ಮ ಸ್ವಂತ ಸೇವೆಯ ತಂಡದಲ್ಲಿ ಅಬ್ಷಾಲೋಮರನ್ನು ಎಬ್ಬಿಸದಂತೆ ನೋಡಿಕೊಳ್ಳಿರಿ.

## ಇತರ ಜನರ ಪಾಪಗಳ ಪಾಲುದಾರರಾಗಬೇಡಿರಿ

**"ಅವಸರದಿಂದ ಯಾರ ತಲೆಯ ಮೇಲೆಯಾದರೂ ಹಸ್ತವನ್ನಿಟ್ಟು ಸಭೆಯ ಉದ್ಯೋಗಕ್ಕೆ ನೇಮಿಸಬೇಡ. ಹಾಗೆ ನೇಮಿಸಿದರೆ ಮತ್ತೊಬ್ಬರು ಮಾಡಿದ ಪಾಪದಲ್ಲಿ ನೀನು**

**ಪಾಲುಗಾರನೆಂದು ತೋರಿಬಂದೀತು, ನೀನು ಶುದ್ಧನಾಗಿರುವ ಹಾಗೆ ನೋಡಿಕೋ"** (1 ತಿಮೊಥೆಯನಿಗೆ 5:22).

**"ಒಬ್ಬನು ದಾರಿಯಲ್ಲಿ ಹೋಗುತ್ತಾ ಪರರ ವ್ಯಾಜ್ಯಕ್ಕೆ ಸೇರಿ ರೇಗಿಕೊಳ್ಳುವುದು ನಾಯಿಯನ್ನು ಕಿವಿಹಿಡಿದ ಹಾಗೆ"** (ಜ್ಞಾನೋಕ್ತಿಗಳು 26:17).

ಒಬ್ಬ ಕ್ರೈಸ್ತ ಸೇವಕನಾಗಿ, ವಿಶೇಷವಾಗಿ, ನೀವು ಒಂದು ಸಭೆಯ ಸಭಾಪಾಲಕರಾಗಿದ್ದರೆ, ಸಾಕಷ್ಟು ಮಟ್ಟಿಗೆ ನೀವು ಪ್ರತಿಯೊಂದು ರೀತಿಯಲ್ಲಿಯೂ ಜನರಿಗೆ ಸಹಾಯ ಹಾಗೂ ಸಹಕಾರ ನೀಡಲು ಬಯಸುತ್ತೀರಿ. ಕ್ರೈಸ್ತೀಯ ಸೇವೆಯ ವಿಷಯದಲ್ಲಿ, ಯಾವುದು ತಪ್ಪೋ ಅದರಲ್ಲಿ ಒಳಗೊಳ್ಳಲು ಬೇಡಿಕೆಗಳಿರಬಹುದು, ಎಂಬುದು ಅಲ್ಪ ಮಟ್ಟಿಗೆ ವಿಸ್ಮಯಕರವಾಗಿರುತ್ತದೆ. ಒಂದು ನಿರ್ದಿಷ್ಟ ಕ್ರೈಸ್ತ ಸಂಸ್ಥೆಯು, ಆಲ್ ಪೀಪಲ್ಸ್ ಚರ್ಚ್‌ಗೆ ಸ್ವಲ್ಪ ಹಣವನ್ನು, ಕಾರ್ಯಕ್ರಮದ ನಂತರ ಹಿಂತಿರುಗಿಸಬೇಕಾಗಿದ್ದ ಒಂದು ಸಂದರ್ಭವನ್ನು ನಾನು ನೆನಪುಮಾಡಿಕೊಳ್ಳುತ್ತೇನೆ. ಆ ಸಂಸ್ಥೆಗಾಗಿ ಕೆಲಸ ಮಾಡಿದ ಒಬ್ಬ ವ್ಯಕ್ತಿಯು ನನ್ನನ್ನು "ಯಾರ ಹೆಸರಿನಲ್ಲಿ ನಿಮಗೆ ಚೆಕ್ ಕೊಡಬೇಕೆಂದು ಬಯಸುತ್ತೀರಿ?" ಎಂದು ಕೇಳಿದರು. ಇದು ನನ್ನನ್ನು ಸಂಪೂರ್ಣವಾಗಿ ಎಚ್ಚರ ತಪ್ಪುವಂತೆ ಮಾಡಿತು. ನನಗಾಗಿ ಈ ಉತ್ತರವು ಸ್ಫುಟವಾಗಿತ್ತು ಹಾಗೂ ಈ ಪ್ರಶ್ನೆಯು ವಿಶೇಷವಾಗಿ ಒಂದು ಕ್ರೈಸ್ತ ಸಂಸ್ಥೆಗಾಗಿ ಸೇವೆ ಮಾಡುವ ಒಬ್ಬರಿಂದ ನನಗೆ ಕೇಳಲ್ಪಡುವುದು ನನ್ನನ್ನು ಬೆಚ್ಚುವಂತೆ ಮಾಡಿತು. ನನ್ನ ಉತ್ತರವು ಸ್ವಲ್ಪ ಸರಳವಾಗಿತ್ತು. "ಹಣವು ಆಲ್ ಪೀಪಲ್ಸ್ ಚರ್ಚ್‌ನಿಂದ ಕೊಡಲ್ಪಟ್ಟಿದೆ ಹಾಗೂ ಅದು ಆಲ್ ಪೀಪಲ್ಸ್ ಚರ್ಚ್‌ಗೇ ಹಿಂತಿರುಗಿಸಲ್ಪಡಬೇಕು." ಹಾಗೂ ಇದೇ ಆಯಿತು. ಹೇಗಾದರೂ ಇದು ಮುಂದೆ ಆಗಬಹುದಾದ ಇತರ ವಿಷಯಗಳನ್ನು ನಾನು ಆಲೋಚಿಸುವಂತೆ ಮಾಡಿತು. ಅಂದರೆ ಹಣವು ಎಲ್ಲಿ ದುರ್ಬಳಕೆಯಾಗುತ್ತಿದೆ ಎಂಬುದನ್ನು ಆಲೋಚಿಸುವಂತೆ ಮಾಡಿತು. ಉದಾಹರಣೆಗೆ, ಕೆಲವು ತಿಂಗಳುಗಳ ಕಾಲ ಆಲ್ ಪೀಪಲ್ಸ್ ಚರ್ಚ್‌ಗೆ ಆರಾಧನೆಗೆ ಹಾಜರಾಗುತ್ತಿದ್ದ ಒಬ್ಬ ಯುವಕನು ನನ್ನ ಬಳಿಗೆ ಒಂದು ಭಾನುವಾರದ ಆರಾಧನೆಯ ನಂತರ ಬಂದನು, ಅವನು ತಾನು ಅಮೇರಿಕಾದಲ್ಲಿ ಸತ್ಯವೇದ ಕಾಲೇಜಿಗೆ ವ್ಯಾಸಂಗಕ್ಕಾಗಿ ಹೋಗಲು ಅರ್ಜಿ ಹಾಕುತ್ತಿರುವುದಾಗಿ ಹೇಳಿದನು. ತಾನು ಈ ಸಭೆಯಲ್ಲಿ ಸಿಬ್ಬಂದಿಯಾಗಿದ್ದು ಇಂಥಿಂಥಾ ರೀತಿಯಗಳಲ್ಲಿ

ಸೇವೆ ಮಾಡುತ್ತಿರುವುದಾಗಿ ಒಂದು ಪತ್ರಕ್ಕಾಗಿ ಕೇಳಿದನು. ನಾನು ಒಂದು ನೇರವಾದ ಸುಳ್ಳನ್ನು ಬರೆದು ಒಂದು ಪತ್ರವನ್ನು ಕೊಡಬೇಕೆಂದು ನನ್ನನ್ನು ಅವನು ಕೇಳುತ್ತಿದ್ದುದು ನನಗೆ ವಿಸ್ಮಯಕಾರಕವಾಗಿತ್ತು! ಅದಕ್ಕೆ ನನ್ನ ಉತ್ತರವೂ ಕೂಡಾ ಸರಿಯಾಗಿ ಸರಳವಾಗಿತ್ತು. “ಇಲ್ಲ!” ಎಂದೆನು. ಅವನು ಯಥಾರ್ಥವಾಗಿ ಸಭೆಯನ್ನು ಬಿಟ್ಟು ಹೋದನು, ಹಾಗೂ ಅಂದಿನಿಂದ ಮುಂದೆ ಎಂದೂ ಅವನು ಆರಾಧನೆಗೆಗಳಲ್ಲಿ ಕಾಣಿಸಲಿಲ್ಲ.

ತಪ್ಪು ಮತ್ತು ಸರಿಗಳು ಅಷ್ಟೊಂದು ಸ್ಫುಟವಾಗಿಲ್ಲದ ಸ್ಥಿತಿಗಳು ಈಗ ಇರುತ್ತವೆ ಹಾಗೂ ನೀವು ಬಹು ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಉದಾಹರಣೆಗೆ, ಯಾರ ಸಂಗತಿಗಳು ಸಂಪೂರ್ಣವಾಗಿ ನಿಜವಾಗಿಯೂ ಯೋಗ್ಯವಾಗಿಯೂ ಇರುವ ವ್ಯಕ್ತಿಯ ಬಗ್ಗೆ ಪತ್ರ ಕೊಡುವಂತೆ ನಿಮಗೆ ಕೇಳಲ್ಪಟ್ಟಾಗ, ಆದರೆ ತಪ್ಪಾಗಿರುವ ಯಾವುದಕ್ಕಾದರೂ ಬೆಂಬಲ ನೀಡಲು ಇದು ಬಳಸಲ್ಪಡುತ್ತಿರುವುದು ಎಂದು ನಿಮಗೆ ತಿಳಿದಿರುವಾಗ, ನೀವೇನು ಮಾಡುವಿರಿ. ಪತ್ರವು ಯಾವುದಕ್ಕಾಗಿ ಬಳಸಲ್ಪಡುತ್ತಿದೆಯೆಂದು ನಿಮಗೆ ತಿಳಿಯದೆ ಇದ್ದು, ಅದು ಒಬ್ಬ ಸಭೆಯ ಸದಸ್ಯನಿಂದ ತೆಗೆದುಕೊಳ್ಳಲ್ಪಟ್ಟು ತಪ್ಪಾದ ಒಬ್ಬರಿಗೆ ಬೆಂಬಲವಾಗಿ ಬಳಸಲ್ಪಡುವಾಗ ಇದು ವಾಸ್ತವವಾಗಿ ನಿಮ್ಮ ಅಂಕೆಗೆ ಮೀರಿದ್ದಾಗಿರುತ್ತದೆ. ಆದರೆ ಇದು ನಿಮಗೆ ಒಂದು ಸುಳ್ಳನ್ನು ಬೆಂಬಲಿಸಲ್ಪಟ್ಟಿದ್ದು ಎಂಬುದಾಗಿ ನಿಮಗೆ ತಿಳಿಯಲ್ಪಟ್ಟರೆ, ಆಗ ಆ ಪಾಪದಲ್ಲಿ ಪಾಲುದಾರರಾಗಬಾರದೆಂಬುದು ಬಹು ಮುಖ್ಯವಾದುದು. ಇದೇ ರೀತಿ, ಒಬ್ಬ ಸಭಾಪಾಲಕರಾಗಿ, ನೀವು ನಿಮ್ಮ ಸಭೆಯ ಸದಸ್ಯರಿಗಾಗಿ ಹೇಳಿಕೆಗಳನ್ನು ಉಲ್ಲೇಖಿತ ಪರಿಶೀಲನೆಗಳಲ್ಲಿ ಕೊಡಲು ಕರೆಯಲ್ಪಟ್ಟಿರುತ್ತೀರಿ, ಇದು ಒಡೆತನದ ದೃಷ್ಟಿಯಿಂದ, ವಿವಾಹದ ಪ್ರಸ್ತಾಪ ಮುಂತಾದ ವಿಷಯಗಳಲ್ಲಿ ಆಗಬೆಕು. ಇಂಥಾ ರೀತಿಗಳಲ್ಲಿ ನೀವು ಒಂದು ಅತಿ ಉತ್ತಮ ವರದಿಯನ್ನು ಕೊಡುವುದರ ನಡುವೆ ಎಳೆಯಲ್ಪಡುವಂತೆ ಭಾವಿಸುತ್ತೀರಿ, ಇದರಿಂದ ವ್ಯಕ್ತಿಯು ಒಂದು ಉತ್ತಮ ಭವಿಷ್ಯ ಹಾಗೂ ವಾಸ್ತವ ಸತ್ಯಗಳ ವಿರುದ್ಧ ಭಾಸ ಹೊಂದುತ್ತಾನೆ. ನಾನು ಯಾವಾಗಲೂ ಆ ಸತ್ಯತೆಗಳನ್ನು ತಿಳಿಸುವ ಒಂದು ರೂಢಿಯನ್ನು ಮಾಡಿಕೊಂಡಿರುತ್ತೇನೆ. ನಾನು ಬೇಕೇನು ಮಾಡಲಿಕ್ಕಾಗದು.

## ‘ಇಲ್ಲ’ ಎಂದು ಹೇಳುವುದು ಪಾಪವಲ್ಲ

**“ಜೇನು ಸಿಕ್ಕಿತೋ? ಮಿತವಾಗಿ ತಿನ್ನು, ಹೊಟ್ಟೆ ತುಂಬ ತಿಂದರೆ ಕಾರಿ ಬಿಟ್ಟೀಯೆ”** (ಜ್ಞಾನೋಕ್ತಿ 26:17).

ಜೀವಿತ ಹಾಗೂ ಕ್ರೈಸ್ತೀಯ ಸೇವೆಯಲ್ಲಿ ಒಳ್ಳೆಯ ಮತ್ತು ಹಾನಿಕರವಲ್ಲದ ಹಲವಾರು ವಿಷಯಗಳಿವೆ. ಹೇಗಾದರೂ ಇವರ ಹೆಚ್ಚಿನವುಗಳು ಹಾನಿಕರಕವಾಗಿವೆ. ಆಹ್ವಾನಗಳನ್ನು ವಿವಿಧ ಸ್ಥಳಗಳಲ್ಲಿ ಸೇವೆಗಾಗಿ ಪಡೆಯುವುದು ಒಳ್ಳೆಯದು. ಆದರೆ ನೀವು ಯಾವುದಕ್ಕೆ “ಹೌದು” ಎನ್ನಬೇಕು, ಯಾವುದಕ್ಕೆ “ಇಲ್ಲ” ಎನ್ನಬೇಕು ಎಂಬುದನ್ನು ತಿಳಿಯುವ ಅಗತ್ಯವಿದೆ. ಸಭಾಪಾಲಕರಾಗಿ ನೀವು ತಮ್ಮ ಸಭೆಗಳಲ್ಲಿ ಸಂದೇಶ ನೀಡಬೇಕೆಂದು ಬಯಸುವ ಹಲವಾರು ಜನರನ್ನು ನೀವು ಹೊಂದಿರುತ್ತೀರಿ. ಇಲ್ಲಿ ಮತ್ತೆ ಯಾವ ಜನರಿಗೆ ನೀವು “ಹೌದು” ಎನ್ನಬೇಕು, ಹಾಗೂ ಯಾರಿಗೆ “ಇಲ್ಲ” ಎನ್ನಬೇಕು ಎಂದು ತಿಳಿದಿರಬೇಕು. ನಿಮ್ಮ ಸಭೆಯ ಜನರು ತಮ್ಮ ಮನೆಗಳಲ್ಲಿ ನಡೆಯುವ ಪ್ರತಿ ವಿವಾಹ, ಪ್ರತಿ ಜನ್ಮದಿನ, ಪ್ರತಿ ವಾರ್ಷಿಕೋತ್ಸವ, ಪ್ರತಿ ಗೃಹ ಪ್ರವೇಶ, ಮುಂತಾದ ಪ್ರತಿಯೊಂದರಲ್ಲಿಯೂ ನೀವು ಪಾಲು ತೆಗೆದುಕೊಳ್ಳಬೇಕೆಂದು ಬಯಸಬಹುದು. ಮತ್ತೊಮ್ಮೆ ನೀವು ಯಾವಾಗ “ಹೌದು” ಎನ್ನಬೇಕು, ಯಾವಾಗ “ಇಲ್ಲ” ಎನ್ನಬೇಕು ಎಂದು ತಿಳಿದಿರಬೇಕು.

ಕ್ರೈಸ್ತ ಸೇವಕರಾಗಿ ಪ್ರತಿಯೊಂದಕ್ಕೂ ನಾವು “ಹೌದು” ಎನ್ನಲು ಒತ್ತಡ ಹೊಂದುತ್ತೇವೆ. ಆದರೆ ಪ್ರಾಯೋಗಿಕವಾಗಿ ಇದು ಸಾಧ್ಯವಾಗದು. ನಾವು ನಮ್ಮ ಜೀವಿತಗಳನ್ನು—ಆರೋಗ್ಯ, ಕುಟುಂಬ ಮುಂತಾದವುಗಳನ್ನು—ಎಲ್ಲ ವಿಷಯಗಳಿಗೆ “ಹೌದು” ಎಂದು ಹೇಳುವುದರಿಂದ ಹಾಳು ಮಾಡಿಕೊಳ್ಳುತ್ತೇವೆ. “ಇಲ್ಲ” ಎಂದು ಹೇಳುವುದು ಒಂದು ಪಾಪವಲ್ಲ ಎಂದು ನಾನು ಕಲಿತುಕೊಂಡಿರುತ್ತೇನೆ. ಯಾರಿಗಾದರೂ ನಾನು “ಇಲ್ಲ ಎಂದಾಗ, ವ್ಯಕ್ತಿಗತವಾಗಿ ನಾನು ಅವರನ್ನು ತಿರಸ್ಕರಿಸುವುದಿಲ್ಲ, ಪ್ರಸ್ತಾಪಿಸಲ್ಪಟ್ಟ ವಿಷಯಕ್ಕೆ ನಾನು “ಇಲ್ಲ” ಎಂದು ಮಾತ್ರ ಹೇಳುತ್ತೇನೆ—ಆಹ್ವಾನ ಅಥವಾ ಅಭಿಪ್ರಾಯವು ಆಲೋಚಿಸಲ್ಪಡಬೇಕಾಗುತ್ತದೆ. ನಾನು “ಇಲ್ಲ” ಎಂದು ಹೇಳಲು ಸಾಧ್ಯ ಹಾಗೂ ವ್ಯಕ್ತಿಗತವಾಗಿ ಅವರನ್ನು ಇನ್ನೂ ಪ್ರೀತಿಸುತ್ತೇನೆ. ಹಾಗೂ ಅವರೊಂದಿಗೆ ಪೂರ್ಣ ಹೃದಯದಿಂದ ಬೇರೆ ವಿಷಯಗಳಲ್ಲಿ, ಬೇರೆ ಸಮಯಗಳಲ್ಲಿ ಕೆಲಸ ಮಾಡುತ್ತೇನೆ. ಇದರಿಂದ

ಪ್ರತಿಯೊಂದಕ್ಕೂ "ಹೌದು" ಎಂದು ಹೇಳುವ ಒತ್ತಡ ನೀಡುವುದಕ್ಕಿಂತ, ನೀವು ಪಾಲು ತೆಗೆದುಕೊಳ್ಳಲು ಅಸಾಧ್ಯವಾದ ಅಂಶಗಳಿಗೆ "ಇಲ್ಲ" ಎಂದು ಹೇಳುವುದನ್ನು ಕಲಿತುಕೊಳ್ಳಿರಿ. ಅದರೆ ಇದನ್ನು ಸೌಮ್ಯವಾಗಿ ಹಾಗೂ ಹಾಗೆ ಮಾಡುವುದಕ್ಕೆ ಅಪರಾಧಿ ಭಾವನೆ ಹೊಂದಬೇಡಿ.

## ನಿಮ್ಮನ್ನು ದೋಷಾರೋಪಣೆಗೆ ಗುರಿ ಮಾಡುವವರ ಮಟ್ಟಕ್ಕೆ ಬಾಗಬೇಡಿರಿ

**"ಯಾರಿಗೂ ಅಪಕಾರಕ್ಕೆ ಅಪಕಾರವನ್ನು ಮಾಡಬೇಡಿರಿ. ಎಲ್ಲರ ದೃಷ್ಟಿಯಲ್ಲಿ ಯಾವುದು ಗೌರವವಾದದ್ದೋ ಅದನ್ನೇ ಯೋಚಿಸಿ ಸಾಧಿಸಿರಿ. ಸಾಧ್ಯವಾದರೆ ನಿಮ್ಮಿಂದಾಗುವ ಮಟ್ಟಿಗೆ ಎಲ್ಲರ ಸಂಗಡ ಸಮಾಧಾನದಿಂದಿರಿ. ಕೆಟ್ಟತನಕ್ಕೆ ಸೋತುಹೋಗದೆ ಒಳ್ಳೇ ತನದಿಂದ ಕೆಟ್ಟತನವನ್ನು ಸೋಲಿಸು"** (ರೋಮಾಪುರದವರಿಗೆ 12:17,18,21).

**"ಸಭೆಯಲ್ಲಿ ಭೇದ ಹುಟ್ಟಿಸುವ ಮನುಷ್ಯನನ್ನು ಎರಡು ಸಾರಿ ಬುದ್ಧಿ ಹೇಳಿದ ಮೇಲೆ ಬಿಟ್ಟುಬಿಡು"** (ತೀತನಿಗೆ 3:10).

ನಾವು ಬೆಂಗಳೂರಿಗೆ ಹಿಂತಿರುಗುವ ಮುಂಚೆ, ಮೂರು ವರ್ಷಗಳ ಕಾಲ ಚಿಕಾಗೋನಲ್ಲಿ ಸಭೆ ಮತ್ತು ವ್ಯಾಪಾರ ಆರಂಭಿಸಲಿಕ್ಕೆ ಇದ್ದೆವು. ಈ ಸಮಯದಲ್ಲಿ ನಾವು ಸುಮಾರು 20–25 ಮಂದಿಯೊಂದಿಗೆ ಒಂದು ಪುಟ್ಟ ಸ್ಥಳೀಯ ಸಭೆಯಲ್ಲಿ ಭಾಗವಹಿಸಿದ್ದೆವು. ನಾವು ಈ ಸಭೆಯಲ್ಲಿ ನಮಗೆ ಸಾಧ್ಯವಿದ್ದಷ್ಟು ಮಟ್ಟಿಗೆ ಯಾವ ರೀತಿಯಲ್ಲಾದರೂ ಸಹಾಯ ಮಾಡಿದೆವು. ನಾವು ಸಭಾಪಾಲಕರ ಹೆತ್ತವರಾದ ಜಿಮ್ ಮತ್ತು ಲೊರೈನ್ ನ್ಯಾಗಲ್‌ರವರೊಂದಿಗೆ ಸಮಯ ಕಳೆಯುವ ಅವಕಾಶ ಹೊಂದಿದ್ದೆವು. ಆ ಸಮಯದಲ್ಲಿ ಜಿಮ್ ತನ್ನ ಹೆಚ್ಚು ಕಡಿಮೆ 60ನೇ ವರ್ಷದ ಅಂತ್ಯದಲ್ಲಿದ್ದರು ಅವರು 17 ವರ್ಷಗಳ ಕಾಲ ಒಂದು ದೊಡ್ಡ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಹೆಸರು ವಾಸಿಯಾದ ಸೇವಾ ಸಂಸ್ಥೆಯಲ್ಲಿ ಕೆಲಸ ಮಾಡಿದ್ದರು, ಹಾಗೂ ಹಲವಾರು ಹೆಸರು ವಾಸಿಯಾದ ಕ್ರೈಸ್ತ ಸೇವಕರುಗಳನ್ನು ಕಂಡಿದ್ದರು ಮತ್ತು ಕೇಳಿದ್ದರು. ಅವರ ಕ್ರೈಸ್ತ ಸೇವೆಯಲ್ಲಿನ ಕಥೆಗಳು ಹಾಗೂ ಅನುಭವಗಳನ್ನು ಆಲಿಸಲು ನಾನು ಸಂತೋಷ ಪಟ್ಟೆನು. ನಾನು ಆಗಾಗ್ಗೆ ನೆನಪು ಮಾಡಿಕೊಳ್ಳುತ್ತಿದ. ಎರಡು ಪ್ರಮುಖ ವಿಷಯಗಳನ್ನು ಅವರು ನನಗೆ ಕಲಿಸಿದರು. ಇವೆರಡೂ ಈ ಕ್ರೈಸ್ತ ಸೇವೆಯಲ್ಲಿ ಅವರ ಅನುಭವಗಳ ಮೇಲೆ ಆಧಾರ ಹೊಂದಿದ್ದವು, ನಿರ್ದಿಷ್ಟ ಸೇವಾ ಸಂಸ್ಥೆಯಲ್ಲಿ 17 ವರ್ಷಗಳ ಕಾಲ

ತಾನು ಲೆಕ್ಕಾಚಾರದ ಹಾಗೂ ಹಣಕಾಸಿನ ವಿಭಾಗದಲ್ಲಿ ಸೇವೆ ಮಾಡಿದ ನಂತರ ಒಂದು ದಿನ ಇದ್ದಕ್ಕಿದ್ದಂತೆ ತನ್ನ ಕೆಲಸ ಬಿಡುವಂತೆ ಸರಿಯಾದ ಕಾರಣವಿಲ್ಲದೆ ಹೇಳಲ್ಪಟ್ಟಿತೆಂಬುದನ್ನು ಹಂಚಿಕೊಂಡರು. ಅವರು ಅದನ್ನು ನಂಬಲಿಲ್ಲ ಅವರು ದಿಗ್ಭ್ರಮೆಗೊಂಡರು. ಈ ನೋವಿನ ಸ್ಥಿತಿಯನ್ನು ತನ್ನ ಜೀವಿತದಲ್ಲಿ ಹಾದುಹೋದಂತೆ, ತನಗೆ ಕ್ರೈಸ್ತ ಸಹೋದರರಿಂದ ಆದ ಅನ್ಯಾಯಕ್ಕೆ ತಿರುಗಿ ಬೀಳುವಂತೆ ಆಗಾಗ್ಗೆ ಶೋಧನೆ ಉಂಟಾಗುತ್ತಿತ್ತು. ಅವರು ಶಕ್ತಿಗಾಗಿ ಕರ್ತನ ಕಡೆಗೆ ನೋಡುತ್ತಿದ್ದಂತೆ, ಕರ್ತನು ಅವರೊಡನೆ ಮಾತನಾಡಿ, ಬೇರೆ ಸಹೋದರರು ಕಾರ್ಯ ನಡೆಸುತ್ತಿರುವ ಮಟ್ಟಕ್ಕೆ ಬಾಗದಂತೆ ಅವರಿಗೆ ಸವಾಲಾದನು. ಅದರ ಮೇಲೆ ಜೀವಿಸುವಂತೆ ಹಾಗೂ ತಾನು ವ್ಯವಹರಿಸುತ್ತಿರುವ ತಪ್ಪಿಗಿಂತ ದೊಡ್ಡವನಾಗುವಂತೆ ದೇವರು ಅವರಿಗೆ ಹೇಳಿದನು. ಇದರಿಂದ ಜಿಮ್‌ರವರು. ಹಾಗೆಯೇ ಮಾಡಲು ನಿರ್ಧರಿಸಿದರು. ತಮ್ಮ ವ್ಯವಹಾರದಲ್ಲಿ ಅನ್ಯಾಯ ಹಾಗೂ ಅಸಂತುಷ್ಟವಾದದ್ದನ್ನು ಮಾಡುವ ಸಹೋದರರ ಮಟ್ಟಕ್ಕೆ ಇಳಿಯುವುದನ್ನು ಅವರು ನಿರಾಕರಿಸಿದರು ಅವರು ಕ್ಷಮೆಯ ಹಾಗೂ ದೇವರಲ್ಲಿ ಭರವಸೆಯ ಉನ್ನತ ಮಟ್ಟಕ್ಕೆ ನಡೆಯಲು ತೀರ್ಮಾನಿಸಿದರು. ಇದರಿಂದ ಶ್ರೀ ಜಿಮ್ ಮೇಲಿಂದ ಮೇಲೆ ನನಗೆ, "ಆಶಿಶ್, ನೀನು ಜನರೊಂದಿಗೆ ಏನು ಎದುರಿಸಿದರೂ, ಅವರ ತಪ್ಪಾದ ಕಾರ್ಯದ ಮಟ್ಟಕ್ಕೆ ಎಂದೂ ಇಳಿಯಬೇಡ. ಯಾವಾಗಲೂ ದೇವರು ನಿನ್ನನ್ನು ಎಲ್ಲಿ ಜೀವಿಸಲು ಬಯಸುತ್ತಾನೋ ಅಲ್ಲಿ ಜೀವಿಸು," ಎಂದು ಹೇಳುತ್ತಿರುತ್ತಾರೆ.

ಕ್ರೈಸ್ತ ಸೇವಕರಾಗಿ, ನಾವು ಬಹಳಷ್ಟು ದೋಷರೋಪಣೆಗಳು, ಟೀಕೆಗಳು, ಹರಟೆ, ಸುಳ್ಳುಸುದ್ದಿ ಹಬ್ಬಿಸುವುದು ಮುಂತಾದ ನಮಗೆ ಅಥವಾ ನಮ್ಮ ಬಗ್ಗೆ ಮಾತಾಡುವಂಥವುಗಳನ್ನು ಎದುರಿಸುವುದು ಸತ್ಯ. ಜನರು ಏನು ಹೇಳುತ್ತಾರೋ ಹಾಗೂ ಮಾಡುತ್ತಾರೋ, ಅದರ ಮೇಲೆ ನಮಗೆ ಹಿಡಿತವಿರುವುದಿಲ್ಲ. ಕೆಟ್ಟದ್ದು ಯಾವುದೆಂದರೆ, ಆಗಾಗ್ಗೆ ಈ ವಿಷಯಗಳು ಇತರ ಸಹೋದರರಿಂದ ಬರುತ್ತವೆ. ದುಃಖಕರವೇನೆಂದರೆ, ಹಲವು ರೀತಿಗಳಲ್ಲಿ ನಮ್ಮ ಎದುರಾಳಿಗಳು ನಮ್ಮ ಮನೆಯವರೇ ಆಗಿರುತ್ತಾರೆ. (ಮತ್ತಾಯ 10:36). ಆದರೆ ನಾವು ಯಾವಾಗಲೂ

ಕೇಡಿಗೆ ಕೇಡನ್ನು ಸಾಧಿಸದೆ ಇರುವುದನ್ನೇ ಆಯ್ಕೆ ಮಾಡಿಕೊಳ್ಳಬೇಕಾಗಿದೆ. ನಾವು ಯಾವಾಗಲೂ ನಮ್ಮನ್ನು ವಿರೋಧಿಸುವವರ ಮೇಲ್ಮಟ್ಟದಲ್ಲಿ ಜೀವಿಸುವುದನ್ನು ಆಯ್ಕೆ ಮಾಡಿಕೊಳ್ಳಬೇಕು.



# ನಡತೆ

"ಸಭಾಧ್ಯಕ್ಷನ ಉದ್ಯೋಗವನ್ನು ಪದಕೊಳ್ಳಬೇಕೆಂದಿರುವವನು ಒಳ್ಳೇ ಕೆಲಸವನ್ನು ಅಪೇಕ್ಷಿಸುವವನಾಗಿದ್ದಾನೆಂಬ ಮಾತು ನಂಬತಕ್ಕದಾಗಿದೆ. ಸಭಾಧ್ಯಕ್ಷನು.........."

(1 ತಿಮೊಥೆಯನಿಗೆ 3:1–2)

ಅಧ್ಯಾಯ 4

# 4

# ನಡತೆ

ಈ ದಿನ ಸಭೆಯಲ್ಲಿ ದುರದೃಷ್ಟಕರವಾಗಿ, ಸಂದೇಶಕರು ಪ್ರಸಂಗ ಪೀಠದಿಂದ ದೂರವಾಗಿ ಜೀವಿಸುವ ಜೀವಿತಕ್ಕಿಂತಲೂ, ಪ್ರಸಂಗ ಪೀಠದ ಹಿಂದೆ ಒಂದು ಗಂಟೆಯ ಕಾಲ ಏನು ಮಾಡುತ್ತಾರೆಂದು ಜನರು ಮೌಲ್ಯ ಮಾಪನ ಮಾಡಲು ಪ್ರೇರೇಪಿಸಲ್ಪಡುತ್ತಾರೆ. ಪ್ರಸಂಗ ಪೀಠದ ಹಿಂದೆ ಇರುವಾಗ ಒಂದು "ಯೋಗ್ಯವಾದ ಕಾರ್ಯ"ವನ್ನು ಮಾಡುವುದಕ್ಕಾಗಿ ಮಾತ್ರ ಕೇಂದ್ರೀಕರಿಸುವ ಸಂದೇಶಕರನ್ನು ಇದು ಎಬ್ಬಿಸುತ್ತದೆ. ಆದರೆ ಅವರು ಪ್ರಸಂಗ ಪೀಠದ ಹೊರಗಿದ್ದಾಗ ತಾವು ಹೇಗೆ ಬಾಳುತ್ತಾರೆ ಎಂಬುದರ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಹೇಗಾದರೂ ದೇವರ ವಾಕ್ಯದಿಂದ ಸಿದ್ಧವಾದ ಮಟ್ಟವು ಬಹು ಸ್ಪಷ್ಟವಾಗಿರುತ್ತದೆ. ಒಬ್ಬ ಕ್ರೈಸ್ತ ನಾಯಕನು ನಿರ್ದೋಷಿಯಾಗಿರಬೇಕು ಹಾಗೂ ಅವನ ಜೀವಿತವು ಇತರ ವಿಶ್ವಾಸಿಗಳಿಗಾಗಿ ಒಂದು ಮಾದರಿಯಾಗಿ ಇರಬೇಕು. ಇದು ಒಬ್ಬ ಕ್ರೈಸ್ತ ಸೇವಕನಾಗಲು (ಸಭಾ ಪಾಲಕನು, ಸಂದೇಶಕನು, ಶಿಕ್ಷಕನು, ಪ್ರವಾದಿ, ಅಪೊಸ್ತಲನು, ಸೌವಾರ್ತಿಕನು ಹಾಗೂ ಇತ್ಯಾದಿ) ಅರ್ಹತೆ ನೀಡುತ್ತದೆ. ಈ ಅಧ್ಯಾಯವು ನಡತೆಯ ಬಗ್ಗೆ—ನಾವು ಜನರಿಗೆ ಬೋಧಿಸಲು ವೇದಿಕೆಯ ಮೇಲೆ ಇಲ್ಲದೆ ಇದ್ದಾಗ ಜೀವಿಸುವ ಜೀವಿತದ ಬಗ್ಗೆ ಕೆಲವು ಆಧಾರ ಸೂಚನೆಗಳನ್ನು ತಿಳಿಯಪಡಿಸುತ್ತದೆ.

## ಮಾದರಿಯಾಗಿರು, ಒಂದು ಪ್ರಯಾಣ (ಮಟ್ಟ)ವನ್ನು ಸಿದ್ಧ ಮಾಡು

**"ನಾನು ಕ್ರಿಸ್ತನನ್ನು ಅನುಸರಿಸುವಂತೆಯೇ ನೀವು ನನ್ನನ್ನು ಅನುಸರಿಸುವವರಾಗಿರಿ"** (1 ಕೊರಿಂಥದವರಿಗೆ 11:1).

**"ಯೌವನಸ್ಥನೆಂದು ನಿನ್ನನ್ನು ಅಸಡ್ಡೆಮಾಡುವುದಕ್ಕೆ ಯಾರಿಗೂ ಅವಕಾಶಕೊಡದೆ ನಂಬುವವರಿಗೆ ನಡೆ ನುಡಿ ಪ್ರೀತಿ ನಂಬಿಕೆ ಶುದ್ಧತ್ವ ಇವುಗಳ ವಿಷಯದಲ್ಲಿ ನೀನೇ ಮಾದರಿಯಾಗಿರು"** (1 ತಿಮೊಥೆಯನಿಗೆ 4:12).

ಒಬ್ಬ ದೇವರ ಮನುಷ್ಯನಾಗಿ ಅಪೊಸ್ತಲನಾದ ಪೌಲನ ಜೀವಿತ ಮಾದರಿಯು ಅತ್ಯುನ್ನತವಾದ ಪ್ರಾಮುಖ್ಯತೆ ಹೊಂದಿತ್ತೆಂಬುದು ಬಹುಮಟ್ಟಿಗೆ ಸ್ಪಷ್ಟತೆಯನ್ನು ನೀಡುತ್ತದೆ. ಹಾಗೂ ಇದರಿಂದ ಅವನು ತನ್ನ ಜೀವಿತ ಮಾದರಿಯನ್ನು ಅನುಸರಿಸಲು ಜನರಿಗೆ ಸವಾಲು ಹಾಕಿದ್ದಾನೆ. ನನ್ನ ಮಾದರಿಯನ್ನು ಅನುಸರಿಸಿರಿ ಹಾಗೂ ನಾನು ಪ್ರಸಂಗ ಪೀಠದ ಹಿಂದೆ ಇಲ್ಲದಿದ್ದಾಗ ನಾನು ಹೇಗೆ ಜೀವಿಸುತ್ತೇನೆಂಬಂತೆಯೇ ಮಾಡಿರಿ ಎಂದು ಜನರಿಗೆ ಹೇಳಲು ನಮ್ಮಲ್ಲಿ ಎಷ್ಟು ಮಂದಿ ಸಂದೇಶಕರು ಇದ್ದೇವೆ ಎಂದು ನಾನು ಆಲೋಚಿಸುತ್ತೇನೆ.

ಯೌವ್ವನಸ್ಥನಾದ ತಿಮೊಥೆಯನ್ನು ಎಫೆಸದಲ್ಲಿರುವ ಸಭೆಯನ್ನು ವಿಶ್ವಾಸಿಗಳಿಗೆ ಒಬ್ಬ ಮಾದರಿಯಾಗಿ ನಡಿಸುವಂತೆ ಅಪೊಸ್ತಲನಾದ ಪೌಲನು ಹಾಕಿರುತ್ತಾನೆ. ಒಬ್ಬ ಕ್ರೈಸ್ತ ನಾಯಕನು ಮಟ್ಟವನ್ನು (ಪ್ರಮಾಣ) ಹಾಗೂ ಮಾದರಿಯನ್ನು ಸಿದ್ಧಪಡಿಸಬೇಕು.

- ಮಾತಿನಲ್ಲಿ—ನಾವು ಹೇಗೆ ಮಾತನಾಡುತ್ತೇವೆ, ನಾವು ಯಾವ ವಿಷಯಗಳ ಬಗ್ಗೆ ಮಾತನಾಡುತ್ತೇವೆ.
- ನಡತೆಯಲ್ಲಿ—ಜೀವಿತವನ್ನು ನಾವು ಹೇಗೆ ಜೀವಿಸುತ್ತೇವೆ, ನಮ್ಮ ಸಮಯ ಹಣ ಮತ್ತು ಸಂಬಂಧಗಳನ್ನು ನಾವು ಹೇಗೆ ನಿಭಾಯಿಸುತ್ತೇವೆ.
- ಪ್ರೀತಿಯಲ್ಲಿ—ಇತರ ಜನರನ್ನು ಹೇಗೆ ಪ್ರೀತಿಸುತ್ತೇವೆ ಹಾಗೂ ಪರಾಂಬರಿಸುತ್ತೇವೆ.
- ಆತ್ಮದಲ್ಲಿ—ಹೃದಯಕ್ಕೆ ಸಂಬಂಧಿಸಿದ ವಿಷಯಗಳಲ್ಲಿ, ನಮ್ಮ ಉದ್ದೇಶಗಳು ಹಾಗೂ ಮನೋಭಾವಗಳ ಶುದ್ಧತೆ.
- ವಿಶ್ವಾಸದಲ್ಲಿ—ಕರ್ತನ ಮೇಲೆ ನಮ್ಮ ಭರವಸೆ ಹಾಗೂ ಆತುಕೊಳ್ಳುವಿಕೆಯಲ್ಲಿ ಆತನ ವಾಕ್ಯಕ್ಕೆ ವಿಧೇಯರಾಗುವ ನಮ್ಮ ಧೈರ್ಯದಲ್ಲಿ
- ಶುದ್ಧತ್ವದಲ್ಲಿ—ದೈನಂದಿನ ವಿಷಯಗಳಲ್ಲಿ ನಮ್ಮ ಜೀವಿತದ ಪವಿತ್ರತೆ ಹಾಗೂ ದೈವಿಕತೆ.

ನಾವು ಏನನ್ನು ನೆನಪು ಮಾಡಿಕೊಳ್ಳಬೇಕೆಂದರೆ, ನಾವು ಮಾಡುವ ಅತಿ ಚಿಕ್ಕ ವಿಷಯಗಳೂ ಕೂಡಾ ಗಮನಿಸಲ್ಪಡುತ್ತವೆ ಹಾಗೂ ನಾವು ಪ್ರತಿನಿಧಿಸುವ ಕರ್ತನ ಮೇಲೆ ಪ್ರತಿಬಿಂಬಿಸುತ್ತವೆ. ನಾನು ಒಂದು ಕ್ರೈಸ್ತೀಯ ಕೂಟದಲ್ಲಿ ಹಾಜರಿದ್ದಾಗ, ವೇದಿಕೆಯ ಮೇಲೆ ಕುಳಿತಿದ್ದ ಒಬ್ಬ ಗೌರವಾನ್ವಿತ ಕ್ರೈಸ್ತನಾಯಕರು. ಕೂಟವು ಪ್ರಗತಿಯಲ್ಲಿದ್ದಾಗ, ತನ್ನ ಮೊಬೈಲ್ ಫೋನನ್ನು ಬಳಸಿ, ಸಂದೇಶಗಳನ್ನು ರವಾನಿಸುತ್ತಾ, ಕರೆಗಳಿಗೆ ಉತ್ತರ ನೀಡುತ್ತಿದ್ದುದು ನನ್ನ ನೆನಪಿಗೆ ಬರುತ್ತದೆ! ನಾವು ಗಡಿಬಿಡಿಯ ಲೋಕದಲ್ಲಿದ್ದೇವೆಂದು ನನಗೆ ಗೊತ್ತು  ಆದರೆ ಇದನ್ನು ಯೋಚಿಸುವಾಗ ಘೋರವಾದುದಾಗಿತ್ತು. ಅಂದರೆ, ಪ್ರಗತಿಯಲ್ಲಿರುವ ಕೂಟಕ್ಕೆ ಅವನು ಗೌರವ ನೀಡಲಿಲ್ಲ. ತನ್ನನ್ನು ಗಮನಿಸುತ್ತಿದ್ದ ಉಳಿದ ಜನರಿಗೆ ಇದು ಎಂಥಾ ರೀತಿಯ ಮಾದರಿಯಾಗಿರುತ್ತದೆ! ಇದು ಒಂದು ವೇಳೆ ಕ್ಷುಲ್ಲಕವಾದ ವಿಷಯವಾಗಿರಬಹುದು ಆದರೆ, ಸೇವೆಯಲ್ಲಿರುವ ಜನರಾಗಿ, ನಮ್ಮ ನಡತೆಯು ಮಾದರಿಯುಳ್ಳದ್ದಾಗಿರಬೇಕೆಂದು ನಾನು ಆಲೋಚಿಸುತ್ತೇನೆ! *"ನಿಂದೆಗೆ ಅವಕಾಶ ಕೊಡದೆ ಎಲ್ಲಾ ಸಂಗತಿಗಳಲ್ಲಿ ದೇವರ ಸೇವಕರೆಂದು ನಮ್ಮನ್ನು ಸಮ್ಮತರಾಗಿ ಮಾಡಿಕೊಳ್ಳುತ್ತೇವೆ"* (2 ಕೊರಿಂಥದವರಿಗೆ 6:4).

ಅಪೊಸ್ತಲನಾದ ಪೌಲನು ಫಿಲಿಪ್ಪಿಯವರಿಗೆ ಬರೆಯುವಾಗ *"ಸಹೋದರರೇ, ನೀವೆಲ್ಲರು ನನ್ನನ್ನು ಅನುಸರಿಸುವವರಾಗಿರಿ ಮತ್ತು ನಾವು ನಿಮಗೆ ತೋರಿಸಿದ ಮಾದರಿಯ ಪ್ರಕಾರ ನಡೆದುಕೊಳ್ಳುವವರನ್ನು ಲಕ್ಷ್ಯಕ್ಕೆ ತಂದುಕೊಳ್ಳಿರಿ. ನೀವು ಯಾವುದನ್ನು ನನ್ನಿಂದ ಕಲಿತು ಹೊಂದಿದಿರೋ ಮತ್ತು ಯಾವುದನ್ನು ನನ್ನಲ್ಲಿ ಕೇಳಿ ಕಂಡಿರೋ ಅದನ್ನೇ ಮಾಡುತ್ತ ಬನ್ನಿರಿ. ಹೀಗೆ ಮಾಡಿದರೆ ಶಾಂತಿದಾಯಕನಾದ ದೇವರು ನಿಮ್ಮೊಂದಿಗಿರುವನು"* (ಫಿಲಿಪ್ಪಿಯರಿಗೆ 3:17, 4:9).

## ನಿಮ್ಮ ಜೀವಿತ ಮಾದರಿಯು ಅತ್ಯಂತ ಗಟ್ಟಿಯಾಗಿ ಮಾತನಾಡುತ್ತದೆ

**"ಅವನು ಮಿಲೇತದಿಂದ ಎಫೆಸಕ್ಕೆ ಹೇಳಿ ಕಳುಹಿಸಿ ಅಲ್ಲಿಯ ಸಭೆಯ ಹಿರಿಯರನ್ನು ಕರಿಸಿದನು. ಅವರು ಅವನ ಬಳಿಗೆ ಬಂದಾಗ ಅವರಿಗೆ ಅವನು ಹೇಳಿದ್ದೇನೆಂದರೆ– ನಾನು ಆಸ್ಯ ಸೀಮೆಯಲ್ಲಿ ಕಾಲಿಟ್ಟ ಮೊದಲನೆಯ ದಿವಸದಿಂದ ದಿವಸದಿಂದ ನಿಮ್ಮ ಮಧ್ಯೆ ಎಲ್ಲಾ ಕಾಲದಲ್ಲಿಯೂ ಹೇಗೆ ನಡಕೊಂಡೆನೆಂಬದನ್ನು ನೀವೇ ಬಲ್ಲಿರಿ. ನಾನು**

**ಬಹು ನಮ್ರತೆಯಿಂದಲೂ ಕಣ್ಣೀರಿನಿಂದಲೂ ಕರ್ತನ ಸೇವೆ ಮಾಡುತ್ತಿದೇನು. ಇದರಲ್ಲಿ ಯೆಹೂದ್ಯರ ಒಳಸಂಚುಗಳಿಂದ ಸಂಭವಿಸಿದ ಕಷ್ಟಗಳನ್ನು ಸಹಿಸುತ್ತಿದ್ದೆನು"** (ಅಪೊಸ್ತಲರ ಕೃತ್ಯಗಳು 20:17–19).

**"ನಂಬಿಕೆಯಿಂದಲೇ ಹೇಬೇಲನು ಕಾಯಿನನ ಯಜ್ಞಕ್ಕಿಂತ ಶ್ರೇಷ್ಠವಾದ ಯಜ್ಞವನ್ನು ದೇವರಿಗೆ ಸಮರ್ಪಿಸಿದನು. ಅದರ ಮೂಲಕ ತಾನು ನೀತಿವಂತನೆಂದು ಸಾಕ್ಷಿ ಹೊಂದಿದನು. ದೇವರು ಅವನ ಕಾಣಿಕೆಗಳನ್ನು ಅಂಗೀಕಾರ ಮಾಡಿದ್ದೇ ಆ ಸಾಕ್ಷಿ. ಅವನು ಸತ್ತಿದ್ದರೂ ಅವನ ನಂಬಿಕೆಯ ಮೂಲಕ ಇನ್ನೂ ಮಾತಾಡುತ್ತಾನೆ"** (ಇಬ್ರಿಯರಿಗೆ 11:14).

ಎಫೆಸದ ನಾಯಕರಿಗೆ ಪ್ರಬೋಧನೆ ಮಾಡಿದ ತನ್ನ ಅಂತಿಮ ನುಡಿಗಳಲ್ಲಿ ಅಪೊಸ್ತಲನಾದ ಪೌಲನು, ಅವರು ನೆನಪಿಟ್ಟುಕೊಂಡು ಅನುಸರಿಸಬೇಕಾದ ತನ್ನ ಜೀವಿತದ ಮಾದರಿಯನ್ನು ತೋರಿಸಿದನು. ದೇವರ ವಾಕ್ಯದ ಬೋಧನೆ ಹಾಗೂ ಉಪದೇಶವು ಖಂಡಿತವಾಗಿಯೂ ಪ್ರಾಮುಖ್ಯವಾದದ್ದು. ಆದರೆ ದೇವರ ವಾಕ್ಯವು ಬೋಧಿಸುವುದೇನೆಂದು ಒಳಪಡಿಸುವುದರಲ್ಲಿ ನಾವು ಜೀವಿಸಿದ ಜೀವಿತವೇ  ಜನರ ಮನಸ್ಸುಗಳಲ್ಲಿ ಸಿಕ್ಕಿಕೊಂಡಿರುತ್ತದೆ. ಜನರು ಒಳ್ಳೆಯ ಪ್ರಸಂಗಗಳನ್ನು ಸುಲಭವಾಗಿ ಮರೆಯುತ್ತಾರೆ. ಆದರೆ ಅವರು ನೋಡಿರುವ ನಮ್ಮ ಜೀವಿತ ಹಾಗೂ ನಾವು ಸಿದ್ಧಪಡಿಸಿರುವ ಮಾದರಿಯು ದೀರ್ಘಕಾಲದವರೆಗೆ ನೆನಪಿನಲ್ಲಿರುತ್ತವೆ. ದೇವರ ದೃಷ್ಟಿಯಲ್ಲಿ ದೀರ್ಘಕಾಲದವರೆಗೆ ನೆನಪಿನಲ್ಲಿರುತ್ತವೆ. ದೇವರ ದೃಷ್ಟಿಯಲ್ಲಿ ಯಾವುದು ಅಂಗೀಕರಿಸಲ್ಪಟ್ಟಿತೋ ಅದನ್ನು ಹೇಬೇಲನು ಮಾಡಿದನು ಹಾಗೂ ಅವನು ಸತ್ತು ಹೋಗಿದ್ದರೂ ಅವನು ಇನ್ನೂ ಮಾತನಾಡುತ್ತಾನೆ—ಅವನ ಕಾರ್ಯಗಳ ನೆನಪು ಮುಂದುವರಿದಿದೆ ಎಂದು ಸತ್ಯವೇದವು ಹೇಳುತ್ತದೆ.

## ಶ್ರಮಪಟ್ಟು ಕೆಲಸ ಮಾಡಿರಿ

**"ಆದರೆ ನಾನು ಎಂಥವನಾಗಿದ್ದೇನೋ ದೇವರ ಕೃಪೆಯಿಂದಲೇ ಅಂಥವನಾಗಿದ್ದೇನೆ. ನನಗುಂಟಾದ ಅತನ ಕೃಪೆಯು ನಿಷ್ಫಲವಾಗಲಿಲ್ಲ. ನಾನು ಅವರೆಲ್ಲರಿಗಿಂತಲೂ ಹೆಚ್ಚಾಗಿ ಪ್ರಯಾಸಪಟ್ಟೆನು. ಆದರೆ ಪ್ರಯಾಸ ಪಟ್ಟವನು ನಾನಲ್ಲ, ನನ್ನೊಂದಿಗಿರುವ ದೇವ ಕೃಪೆಯೇ"** (1 ಕೊರಿಂಥದವರಿಗೆ 15:10).

ದೇವರು ನಮಗೆ ವರಗಳು ಹಾಗೂ ಕೃಪೆಯನ್ನು ಕೊಡುತ್ತಾನೆ, ಆದರೆ ಇದು ನಮಗೆ, ನಾವು ಹೇಗೆ ನಮಗೆ ವಿಸ್ತರಿಸಲ್ಪಟ್ಟಿರುವ ವರಗಳು ಮತ್ತು ಕೃಪೆಯನ್ನು ಬಳಸುತ್ತೇವೆಂಬುದರ ಮೇಲೆ ಹೊಂದಿಕೊಂಡಿದೆ.

ಕ್ರೈಸ್ತ ಸೇವೆಯಲ್ಲಿ ಫಲಭರಿತವಾಗಿರಲು, ಒಬ್ಬನು ಶ್ರಮಪಟ್ಟು ದುಡಿಯಲು ಯಾವುದು ಸುಲಭವೋ ಹಾಗೂ ಅನುಕೂಲಕರವೋ ಅದರಾಚೆಗೆ ಚಾಚಬೇಕು. ಒಬ್ಬ ದೇವರ ಸೇವಕನು ವಿಸ್ತರಿಸಿ, ರಾಜ್ಯಕ್ಕಾಗಿ ನಿಜವಾಗಿ ಕಷ್ಟಪಟ್ಟು ದುಡಿಯುವುದನ್ನು ನೋಡುವುದು, ಹಾಗೂ ಯಾರಾದರೂ ಕೇವಲ ಕನಿಷ್ಟವಾದದ್ದನ್ನು ಕ್ಷೇಮಕಾರ್ಯ ಮಾಡಲಿಕ್ಕಾಗಿ ಮಾಡುವುದು ಸುಲಭ. ಅಪೊಸ್ತಲನಾದ ಪೌಲನು ತಾನು ಬೇರೆ ಇತರ ಅಪೊಸ್ತಲರಿಗಿಂತಲೂ ಹೆಚ್ಚಾಗಿ ಹೇರಳವಾಗಿ ಕಾರ್ಯಮಾಡಿರುವುದನ್ನು ಸ್ಪಷ್ಟ ಪಡಿಸುತ್ತಾನೆ. ದೇವರು ಅವನನ್ನು ಆದಿ ಸಭೆಯ ಗಡಿಗಳನ್ನು ವಿಸ್ತರಿಸಲು ಯಾಕೆ ಇಷ್ಟು ಬಲವಾಗಿ ಉಪಯೋಗಿಸಿದನು ಎಂಬ ಕಾರಣಗಳಲ್ಲಿ ಒಂದಾಗಿದೆ. ಯಾರೋ ಒಬ್ಬರು ಕ್ರೈಸ್ತ ಸೇವೆಯನ್ನು ಸುಲಭವಾದ ಹಾಗೂ ಸೋಮಾರಿತನದ ಜೀವಿತಕ್ಕಾಗಿ ಬಳಸುವುದನ್ನು ನೋಡುವಾಗ ದುಃಖಕರವಾದದ್ದಾಗಿರುತ್ತದೆ. ಕೆಲವರು ಕ್ರೈಸ್ತೀಯ ಸೇವೆಯನ್ನು ಆಯ್ಕೆ ಮಾಡಿಕೊಳ್ಳುತ್ತಾರೆ, ಏಕೆಂದರೆ ಅವರು ಒಂದು ಕ್ರಮಬದ್ಧವಾದ ಸಂಯುಕ್ತ ಕೆಲಸಮಾಡಲು ಬಯಸುವುದಿಲ್ಲ. ಒಮ್ಮೆ ಕ್ರೈಸ್ತ ಸೇವೆಯಲ್ಲಿ ಅವರು ವಿಷಯಗಳನ್ನು ಸುಲಭವಾಗಿ ತೆಗೆದುಕೊಳ್ಳುತ್ತಾರೆ. ಕೇವಲ ಕನಿಷ್ಟವಾದದ್ದನು ಮಾಡುತ್ತಾರೆ ಹಾಗೂ ಕೇವಲ ಸಾಗಿ ಹೋಗುತ್ತಾರೆ. ಅವರು ಪ್ರತಿಯೊಂದು ಕೆಲಸದುದ್ದಕ್ಕೂ ಅವರು ಅವಿರತವಾಗಿ ದುಡಿಯುತ್ತಾರೆ. ಸಹೋದರರೇ, ನಾವು ಅಂಥಾ ಸೇವಕರಾಗಬಾರದು ಆದರೆ ಬದಲಾಗಿ ನಮ್ಮ ಶೇ. 100ರಷ್ಟು ಹಾಗೂ ಅದಕ್ಕಿಂತ ಹೆಚ್ಚಾಗಿ ಕರ್ತನಿಗೆ ಕೊಡೋಣ.

## ನಮ್ರತೆಯಿಂದ ನಡೆಯಿರಿ

**“ಶಾಂತರು ಧನ್ಯರು, ಅವರು ಭೂಮಿಗೆ ಬಾಧ್ಯರಾಗುವರು”** (ಮತ್ತಾಯ 5:5).

**“ಹೀಗಿರುವುದರಿಂದ ದೇವರ ತ್ರಾಣವುಳ್ಳ ಹಸ್ತದ ಕೆಳಗೆ ನಿಮ್ಮನ್ನು ತಗ್ಗಿಸಿಕೊಳ್ಳಿರಿ. ಆತನು ತಕ್ಕ ಕಾಲದಲ್ಲಿ ನಿಮ್ಮನ್ನು ಮೆಲಕ್ಕೆ ತರುವನು”** (1 ಪೇತ್ರನು 5:6).

ನಮ್ರತೆಯು, ನಾವು ದೇವರಿಗೂ ಮತ್ತು ಮನುಷ್ಯನಿಗೂ ಅಧೀನರಾಗುವ ನಡೆಯಲ್ಲಿ ಹೃದಯದ ಮನೋಭಾವವಾಗಿರುತ್ತದೆ. ಯಾರೂ ತನ್ನ ಯೋಗ್ಯತೆಗೆ ಮೀರಿ ತನ್ನನ್ನು ಭಾವಿಸಿಕೊಳ್ಳದೆ ಇರುವುದೇ ಹೃದಯ ಮನೋವೃತ್ತಿಯಾಗಿರಬೇಕು (ರೋಮಾಪುರದವರಿಗೆ 12:3).

ಇದು ನಮ್ಮನ್ನು ಯಾವ ವ್ಯತ್ಯಾಸವನ್ನೂ ಮಾಡದೆ. ಐಶ್ವರ್ಯವಂತರು ಹಾಗೂ ಬಡವರನ್ನು ಸಮನಾಗಿ ಕಾಣುವಂತೆ ನಮ್ಮನ್ನು ಇದು ಶಕ್ತರಾಗುವಂತೆ ಮಾಡುತ್ತದೆ. ನಾವು ನಮ್ಮನ್ನು "ಕೇವಲ ಒಬ್ಬ ಮನುಷ್ಯನಂತೆ ಕಾಣಲು ಹಾಗೂ ಎಲ್ಲಾ ಮಹತ್ವವೂ ದೇವರಿಗೆ ಸೇರಿದ್ದೆಂದು ಕಾಣಲು ನಮ್ಮನ್ನು ಶಕ್ತರಾಗುವಂತೆ ಮಾಡುತ್ತದೆ. ನಾವು ನಮ್ಮ ಸೇವೆಗಳಲ್ಲಿ ನಮ್ಮ ಜೀವಿತಗಳುದ್ದಕ್ಕೂ ರೂಪಿಸಲ್ಪಟ್ಟ ವಿಷಯಗಳು ಎಷ್ಟೇ ಮಹತ್ವವಾಗಿದ್ದರೂ, ಇತರ ಎಲ್ಲ ವಿಶ್ವಾಸಿಗಳೊಂದಿಗೆ ನೆಲದ ಮಟ್ಟಕ್ಕೆ ನಿಲ್ಲಲು ನಮ್ಮನ್ನು ಶಕ್ತರಾಗುವಂತೆ ಮಾಡುತ್ತದೆ.

ಹೀಗೆ ನೀವು ಕ್ರೈಸ್ತ ಕೂಟಗಳಲ್ಲಿ ಅತ್ಯಂತ ಹೆಚ್ಚಿನ ಪ್ರಾಮುಖ್ಯವಾದ ಆಸನವನ್ನು ಹುಡುಕಬೇಡಿರಿ. ನೀವು ಸಾರ್ವಜನಿಕವಾಗಿ ಗುರುತಿಸಲ್ಪಡಲು ಹಾಗೂ ಶ್ಲಾಘಿಸಲ್ಪಡಲು ಬಯಸಬೇಡಿರಿ. ಇಂಥಾ ರೀತಿಯಲ್ಲಿ ನೀವು ನಡೆಯುವಾಗ ನೀವು ನಮ್ರತೆಯಲ್ಲಿ ನಡೆಯುತ್ತಿದ್ದೀರಿ. ನಮ್ರತೆಯು ಆತ್ಮ ಪದೋನ್ನತಿಯಲ್ಲಿ ಒಂದಾಗುವುದಿಲ್ಲ ಹಾಗೂ ದೇವರಿಗಾಗಿ ಕಾದಿರಲು ಆತನ ಸಮಯದಲ್ಲಿ ಘನವನ್ನು ತರಲು ತೃಪ್ತಿಹೊಂದುತ್ತದೆ. ನಮ್ರತೆಯು ನಿಜವಾದ ಶಕ್ತಿಯಾಗಿದೆ. ಇದು ದೇವರು ಮತ್ತಷ್ಟು ಕೃಪೆಯನ್ನು ಬಿಡುಗಡೆ ಮಾಡುವ ಸ್ಥಳವಾಗಿದೆ.

## ಸಮಾಧಾನವನ್ನು ಅನುಸರಿಸಿರಿ

**"ಮೂಢರ ಬುದ್ಧಿಯಿಲ್ಲದ ವಿಚಾರಗಳು ಜಗಳಗಳಿಗೆ ಕಾರಣವಾಗಿವೆ ಎಂದು ತಿಳಿದು ಅವುಗಳ ಗೊಡವೆಗೆ ಹೋಗಬೇಡ. ಕರ್ತನ ದಾಸನು ಜಗಳವಾಡದೆ ಎಲ್ಲರ ವಿಷಯದಲ್ಲಿ ಸಾಧುವೂ ಬೋಧಿಸುವುದರಲ್ಲಿ ಪ್ರವೀಣನೂ ಕೇಡನ್ನು ಸಹಿಸಿಕೊಳ್ಳುವವನೂ ಎದುರಿಸುವವರನ್ನೂ ನಿಧಾನದಿಂದ ತಿದ್ದುವವನೂ ಆಗಿರಬೇಕು"** (2 ತಿಮೊಥೆಯನಿಗೆ 2:23,24).

**"ಸಾಧ್ಯವಾದರೆ ನಿಮ್ಮಿಂದಾಗುವ ಮಟ್ಟಿಗೆ ಎಲ್ಲರ ಸಂಗಡ ಸಮಾಧಾನದಿಂದಿರಿ"** (ರೋಮಾಪುರದವರಿಗೆ 12:18).

**"ಎಲ್ಲರ ಸಂಗಡ ಸಮಾಧಾನದಿಂದಿರುವುದಕ್ಕೂ ಪರಿಶುದ್ಧತೆಯನ್ನು ಹೊಂದುವುದಕ್ಕೂ ಪ್ರಯತ್ನ ಮಾಡಿರಿ; ಪರಿಶುದ್ಧತೆಯಿಲ್ಲದೆ ಯಾವನೂ ಕರ್ತನನ್ನು ಕಾಣುವುದಿಲ್ಲ"** (ಇಬ್ರಿಯರಿಗೆ 12:14).

ಜನರೊಂದಿಗೆ ಚರ್ಚೆಗಳು, ವಾದ ವಿವಾದಗಳು ಹಾಗೂ ಕಚ್ಚಾಟಗಳನ್ನು ತಡೆಗಟ್ಟಿರಿ. ಕಚ್ಚಾಟದಿಂದ ನಿಮ್ಮನ್ನು ದೂರವಾಗಿಟ್ಟುಕೊಳ್ಳಿರಿ. ಕೆಲವು ಕ್ರೈಸ್ತ

ಸೇವಕರು ಕಚ್ಚಾಟದೊಂದಿಗೆ ಕಳೆಯುತ್ತಾರೆ. ಅವರು ತಮ್ಮ ಸಭೆಯಲ್ಲಿ ವಿಶ್ವಾಸಿಗಳೊಂದಿಗೆ ಕಚ್ಚಾಟ, ಸಭೆಯ ಹೊರಗೆ ಜನರೊಂದಿಗೆ ಕಚ್ಚಾಟ, ಹೀಗೆ ಮುಂತಾದವುಗಳಲ್ಲಿ ಇರುತ್ತಾರೆ. ಕಚ್ಚಾಟವು ಎಲ್ಲಾ ವಿಧವಾದ ಕೆಡುಕುಗಳಿಗೆ ಬಾಗಿಲನ್ನು ತೆರೆಯುತ್ತದೆ. ಕಚ್ಚಾಟವು ನಿಮ್ಮ ಸಮಯ, ಶಕ್ತಿಯನ್ನು ಹಾಳು ಮಾಡುತ್ತದೆ ಹಾಗೂ ಹೆಚ್ಚು ಪ್ರಾಮುಖ್ಯವಾದ ಕಾರ್ಯಗಳನ್ನು ಮಾಡುವುದರಿಂದ ನಿಮ್ಮನ್ನು ಕಸಿದುಕೊಳ್ಳುತ್ತದೆ. ಕೊನೆಗೆ ನಾವು ವಿಷಯ ಲಂಪಟ ವ್ಯಕ್ತಿಯಂತೆ ನಡೆದುಕೊಳ್ಳುತ್ತೇವೆ. ದೇವರ ಸೇವಕರಂತಲ್ಲ *"ಯಾಕೆಂದರೆ ಇನ್ನೂ ಶರೀರಾಧೀನ ಸ್ವಭಾವವುಳ್ಳವರಾಗಿದ್ದೀರಿ. ನಿಮ್ಮೊಳಗೆ ಹೊಟ್ಟೆಕಿಚ್ಚು ಜಗಳಗಳು ಇರುವಲ್ಲಿ ನೀವು ಶರೀರಾಧೀನ ಸ್ವಭಾವವುಳ್ಳವರಾಗಿದ್ದು ಕೇವಲ ನರಪ್ರಾಣಿಗಳಂತೆ ನಡೆಯುತ್ತೀರಲ್ಲವೇ"* (1 ಕೊರಿಂಥದವರಿಗೆ 3:3).

ಯಾರಾದರೂ ನಿಮ್ಮನ್ನು ನಿಂದಿಸಿದಾಗ, ನಿಮ್ಮನ್ನು ಟೀಕಿಸಿದಾಗ, ನಿಮಗೆ ಕೋಪವೆಬ್ಬಿಸಿದಾಗ, ನಿಮ್ಮನ್ನು ಯಾವ ರೀತಿಯಲ್ಲಾದರೂ ಘಾಸಿಗೊಳಿಸಿ ಅಥವಾ ನೋವುಂಟು ಮಾಡಿದಾಗ, ವಿಷಯವು ನಿಮ್ಮ ಕಾಲಕ್ಕೆ ಬೆಲೆಯುಳ್ಳದ್ದಾಗಿದೆಯೋ ಎಂದು ನಿಮ್ಮನ್ನು ಕೇಳಿಕೊಳ್ಳಿರಿ, ಯಾವುದಾದರೂ ತಪ್ಪು ಅಭಿಪ್ರಾಯವನ್ನು ನೀವು ಸ್ಪಷ್ಟೀಕರಿಸಲು ನಿಮಗೆ ಅಗತ್ಯವಿದ್ದರೆ, ಯಾವ ರೀತಿಯಲ್ಲಾದರೂ ಕ್ಷಮೆ ಬೇಡುತ್ತೀರೋ ಅಥವಾ ಯಾವ ರೀತಿಯಲ್ಲೂ ಗಮನ ಹರಿಸದೆ ಸುಮ್ಮನೆ ಇದ್ದುಬಿಡುತ್ತೀರೋ? ಯಾವ ರೀತಿಯಲ್ಲಾದರೂ ಪ್ರತಿಕ್ರಿಯಿಸಲು ನಿಮಗೆ ಅಗತ್ಯವಿದ್ದರೆ, ಒಂದು ಸಮಾಧಾನಕರ ತೀರ್ಮಾನಕ್ಕೆ ಬರುವ ರೀತಿಯಲ್ಲಿ ಮಾಡಿರಿ. ಸಮಾಧಾನವನ್ನು ಯಾವುದು ವೃದ್ಧಿ ಮಾಡುತ್ತದೋ ಅದನ್ನು ಮಾಡಿರಿ. ಯಾರೊಬ್ಬರೊಂದಿಗಾದರೂ ಒಂದು—ಗೂಡ ಬೇಕೆಂದಿದ್ದರೆ, ಆಗ ಅದು ಕೇವಲ ಚರ್ಚೆ ಹಾಗೂ ಕಲಹಗಳ ಬೆಂಕಿಯ ಜ್ವಾಲೆಯನ್ನು ಹೆಚ್ಚಿಸುತ್ತದೆ. ಅದನ್ನು ಸುಮ್ಮನೆ ಬಿಡಿರಿ. ವಿಷಯದ ಹತ್ತಿರಕ್ಕೂ ಸುಳಿಯಬೇಡಿರಿ. ನೆಹೆಮಿಯನು ತನ್ನ ಜೀವಿತದಲ್ಲಿ ದೇವರ ಕರೆಯನ್ನು ನೆರವೇರಿಸಲು ಹೋದಂತೆ ಅವನ ವಿರೋಧಿಗಳು ಅವನ ಕೆಲಸಕ್ಕೆ ತೊಂದರೆ ಮಾಡಬೇಕೆಂದಿದ್ದರೂ ಅವನು ಒಂದು ದೊಡ್ಡ ಮಾದರಿಯನ್ನು ನಮಗಾಗಿ ಇಟ್ಟನು. *"ನಾನು ಗೋಡೆಯನ್ನು ಕಟ್ಟಿಸಿ ತೀರಿಸಿ ಬಾಗಿಲುಗಳಿಗೆ ಕದಗಳನ್ನು ಇನ್ನೂ ಹೆಚ್ಚಿಸದಿದ್ದರೂ ಎಲ್ಲಾ ಸಂದುಗಳನ್ನು ಕೂಡಿಸಿದ ಸಂಗತಿಯು*

*ಸನ್ಬಲ್ಲಟ್, ಟೋಬೀಯ, ಅರಬಿಯನಾದ ಗೆಷೆಮ್ ಇವರಿಗೂ ನಮ್ಮ ಬೇರೆ ವಿರೋಧಿಗಳಿಗೂ ಗೊತ್ತಾದಾಗ ಅವರಲ್ಲಿ ಸನ್ಬಲ್ಲಟ್ ಗೆಷೆಮರು ನನಗೆ— ಒನೋ ತಗ್ಗಿನ ಹಕ್ಕೆಫಿರೀಮಿನಲ್ಲಿ ಒಬ್ಬರನ್ನೊಬ್ಬರು ಎದುರುಗೊಳ್ಳೋಣ ಬಾ ಎಂದು ಹೇಳಿ ಕಳುಹಿಸಿದರು. ಅವರು ನನಗೆ ಕೇಡು ಬಗೆಯುವವರು ಎಂದು ತಿಳಿದು ನಾನು ದೂತರ ಮುಖಾಂತರವಾಗಿ ಅವರಿಗೆ—ನನಗೆ ದೊಡ್ಡ ಜಂಬರವುಂಟು; ಅದನ್ನು ಬಿಟ್ಟು ನಿಮ್ಮ ಬಳಿಗೆ ಬಂದರೆ ಕೆಲಸವು ನಿಂತು ಹೋಗುವುದು; ನಾನು ಬರಲಾರೆನು ಎಂದು ಹೇಳಿಸಿದೆನು. ಅವರು ನಾಲ್ಕು ಸಾರಿ ನನಗೆ ಅದೇ ಪ್ರಕಾರ ಹೇಳಿ ಕಳುಹಿಸಿದರೂ ನಾನು ಅದೇ ಉತ್ತರಕೊಟ್ಟೆನು"* (ನೆಹೆಮಿಾಯ 6:1–4). ದೇವರು ನಿಮ್ಮನ್ನು ಯಾವುದಕ್ಕಾಗಿ ಕರೆದನೋ ಆ ಮಹಾಕಾರ್ಯದ ಮೇಲೆ ನಿಮ್ಮನ್ನೂ ಕೇಂದ್ರೀಕರಿಸಿಕೊಳ್ಳಿರಿ. ಕಲಹಕ್ಕಾಗಿ ನಿಮಗೆ ಸಮಯವಿಲ್ಲ. ವಿಷಯಗಳನ್ನು ಶೀಘ್ರವಾಗಿ ಹಾಗೂ ಸಮಾಧಾನವಾಗಿ ಸರಿಪಡಿಸಿಕೊಳ್ಳಿರಿ, ಹಾಗೂ ದೇವರ ಕಾರ್ಯದೊಂದಿಗೆ ಮುಂದುವರಿಯುತ್ತಾ ಇರ್ರಿ. *"ಸಮಾಧಾನ ಪಡಿಸುವವರು ಸಮಾಧಾನ ಹೊಂದುವರು, ಅವರುದೇವರ ಮಕ್ಕಳು ಅನ್ನಿಸಿಕೊಳ್ಳುವರು"* (ಮತ್ತಾಯ 5:9). ಸಮಾಧಾನ ಪಡಿಸುವವರಾಗಿರಿ!

## ಯಾವಾಗಲೂ ಬೋಧನೆಗೆ ಒಳಗಾಗಿರಿ

**"ಇಂಥಿಂಥದನ್ನು ತಿಳುಕೊಂಡಿದ್ದೇನೆಂದು ನೆನಸಿದವನು ತಾನು ತಿಳಿಯಬೇಕಾದ ರೀತಿಯಿಂದ ಇನ್ನೂ ತಿಳಿದುಕೊಳ್ಳಲಿಲ್ಲ"** (1 ಕೊರಿಂಥದವರಿಗೆ 8:2).

ಯಾವಾಗಲೂ ಕಲಿಯಲು ಸಿದ್ಧವಾಗಿರಿ. ಯಾವಾಗಲೂ ಕಲಿಯುತ್ತಾ ಇರಿ. ದೇವರು ನಿಮಗೆ ಏನು ಹೇಳಲಿಕ್ಕಿದ್ದಾನೆಂಬುದನ್ನು ಕಾಣಲು ಎಲ್ಲಾ ಸಮಯದಲ್ಲಿ ನಿಮ್ಮ ಆತ್ಮಿಕ ಕಣ್ಣುಗಳನ್ನು ಮತ್ತು ಕಿವಿಗಳನ್ನು ತೆರೆದುಕೊಂಡಿರ್ರಿ. ನಮ್ಮಲ್ಲಿ ಕೆಲವು ಕ್ರೈಸ್ತ ಸೇವಕರು, ನಾವು ಇವೆಲ್ಲವನ್ನೂ ತಿಳಿದಿರುವುದಾಗಿ ನಟನೆ ಮಾಡುತ್ತಾರೆ—ಅಥವಾ ಕೊನೇ ಪಕ್ಷ ನಮ್ಮ ನಡವಳಿಕೆಯು ಹಾಗೆ ತೋರಿಸುತ್ತದೆ. ನಾವು ಕುಳಿತು ಮತ್ತೊಬ್ಬ ಬೋಧಕರನ್ನು ಆಲಿಸುವುದಿಲ್ಲ. ವಿಶೇಷವಾಗಿ ಆ ಬೋಧಕರು ನಮ್ಮಷ್ಟು "ದೊಡ್ಡವರು" ಆಗಿರುವುದಿಲ್ಲ ಅಥವಾ ಸೇವೆಯಲ್ಲಿ ಆ ಬೋಧಕರು ನಮಗಿಂತ ಚಿಕ್ಕವರಾಗಿರುತ್ತಾರೆ. ನಮಗಾಗಿ ಸರಿಯಾದ ವಾಕ್ಯವನ್ನು ಅಥವಾ ಸಮಾಲೋಚನೆಯನ್ನು ಹೊಂದಿರುವ, ವಿಶೇಷವಾಗಿ

ಅವರು, "ಅನಭಿಷಿಕ್ತ"ರಾಗಿದ್ದರೆ, ಹಾಗೂ ನಮ್ಮಂತೆ "ಅಭಿಷಿಕ್ತ'ರಾಗಿ ಕಾಣಿಸದಿದ್ದರೆ ನಾವು ಅವರನ್ನು ಅಗತ್ಯವಾಗಿ ಆಲಿಸುವುದಿಲ್ಲ. ದೇವರು ನಮ್ಮ ಜೀವಿತಗಳಲ್ಲಿ ಯಾರನ್ನಾದರೂ, ಒಂದು ಪುಟ್ಟ ಮಗುವಾಗಿದ್ದರೂ, "ಕಾಲಕ್ಕೆ ತಕ್ಕಂತೆ ಒಂದು ವಾಕ್ಯ"ವನ್ನು ಮಾತನಾಡಲು ಬಳಸುತ್ತಾನೆಂದು ನಾವು ಅರ್ಥಮಾಡಿಕೊಳ್ಳಬೇಕು ಯಾರೇ ಒಬ್ಬ ಬೋಧಕನು ಚಿಕ್ಕವನೇ ಆಗಿರಲಿ, ನಾವು ಕುಳಿತು ಕರ್ತನಿಗಾಗಿ ನಮ್ಮ ಹೃದಯವನ್ನು ತಿರುಗಿಸಿದರೆ, ಆತನು ನಮ್ಮೊಂದಿಗೆ ಮಾತನಾಡಿ, ಏನನ್ನಾದರೂ ಕಲಿಸುತ್ತಾನೆ. *"ಶಿಕ್ಷೆಯನ್ನೊಲ್ಲದವನು ತನ್ನನ್ನೇ ನಿರಾಕರಿಸುವನು, ಗದರಿಕೆಯನ್ನು ಕೇಳುವವನು ಬುದ್ಧಿಯನ್ನು ಪಡೆಯುವನು"* (ಜ್ಞಾನೋಕ್ತಿಗಳು 15:32).

## ಸಾಧ್ಯವಾದಷ್ಟು ಮಟ್ಟಿಗೆ—ನಿಮ್ಮ ಮಾತು ಉಳಿಸಿಕೊಳ್ಳಿರಿ ಅಥವಾ ಅದಕ್ಕೆ ವಾಗ್ದಾನ ಮಾಡಲೇಬೇಡಿ

**"ಯೆಹೋವನೇ ನಿನ್ನ ಗುಡಾರದಲ್ಲಿ ಇಳುಕೊಂಡಿರುವುದಕ್ಕೆ ಯೋಗ್ಯನು ಯಾವನು? ನಿನ್ನ ಪರಿಶುದ್ಧ ಪರ್ವತದಲ್ಲಿ ವಾಸಿಸತಕ್ಕವನು ಎಂಥವನಾಗಿರಬೇಕು? ಅವನು ಸಜ್ಜನನೂ ನೀತಿವಂತನೂ ಮನಃಪೂರ್ವಕವಾಗಿ ಸತ್ಯವಚನವನ್ನಾಡುವವನೂ ಆಗಿರಬೇಕು. ಅವನು ಚಾಡಿಯನ್ನು ಹೇಳದವನೂ ಮತ್ತೊಬ್ಬರಿಗೆ ಅನ್ಯಾಯ ಮಾಡದವನೂ, ಯಾರನ್ನೂ ನಿಂದಿಸದವನೂ ಆಗಿರಬೇಕು. ಅವನು ಭ್ರಷ್ಟರನ್ನು ಜರಿದುಬಿಟ್ಟವನೂ ಯೆಹೋವನಲ್ಲಿ ಭಯಭಕ್ತಿಯುಳ್ಳವರನ್ನು ಸನ್ಮಾನಿಸುವವನೂ ನಷ್ಟವಾದರೂ ಪ್ರಮಾಣತಪ್ಪದವನೂ ಆಗಿರಬೇಕು. ಅವನು ಸಾಲಕ್ಕೆ ಬಡ್ಡಿ ಕೇಳದವನೂ ನಿರಪರಾಧಿಯ ಕೇಡಿಗಾಗಿ ಲಂಚ ತೆಗೆದುಕೊಳ್ಳದವನೂ ಆಗಿರಬೇಕು, ಇಂಥವನು ಎಂದಿಗೂ ಕದಲುವುದಿಲ್ಲ" (ಕೀರ್ತನೆಗಳು 15:1–5).**

**"ನಷ್ಟವಾದರೂ ಪ್ರಮಾಣ ತಪ್ಪದವನೂ ಆಗಿರಬೇಕು" (ಕೀರ್ತನೆಗಳು 15:4).**

ನಮ್ಮ ಪರಲೋಕದ ತಂದೆಯಂತೆಯೇ, ನಾವು ನಮ್ಮ ಸ್ವಂತ ಮಾತುಗಳನ್ನು ಗಂಭೀರವಾಗಿ ತೆಗೆದುಕೊಳ್ಳಬೆಕು. ನಮ್ಮ ಮಾತು ನಮ್ಮ ಪ್ರತಿಜ್ಞೆಯಾಗಿರಬೇಕು, ನಾವು ಉಳಿಸಿಕೊಳ್ಳುವ ಒಂದು ಪ್ರಮಾಣವಾಗಿರಬೇಕು. ನಾವು ಮಾನವರಾಗಿರುವುದರಿಂದ ನಾವು ಸೋಲುವ ಸಂದರ್ಭಗಳಿರುವುದನ್ನು ನಾವು ಅರಿತುಕೊಳ್ಳುತ್ತೇವೆ ಹಾಗೂ ನಮ್ಮ ಅತ್ಯುತ್ತಮ ಉದ್ದೇಶಗಳು ಬಹುಶಃ ಪ್ರಾಯೋಗಿಕ ಕೊರತೆಗಳಿಂದ ಅಡ್ಡಿಗಳನ್ನು ಹೊಂದುತ್ತವೆ. ಹೇಗಾದರೂ ನಮ್ಮ ಸಾಮರ್ಥ್ಯಗಳ. ಅತ್ಯುತ್ತಮ ಸ್ಥಿತಿಗೆ ನಾವು ನಮ್ಮ ಮಾತಿನ ಜನರಾಗಿರಬೇಕು. ನಾವು

ಏನನ್ನಾದರೂ ಮಾಡಲು ಪ್ರಮಾಣ ಮಾಡಿದರೆ, ಅದನ್ನು ಉತ್ತಮವಾಗಿ ಮಾಡಲು ನಾವು ಅತ್ಯಂತ ಉತ್ತಮವಾಗಿ ಮಾಡೋಣ. ಕೆಲವು ವೇಳೆ ಇದು ನಮ್ಮ ಕ್ರೈಸ್ತ ಸೇವಕರಿಗೆ ಬಹಳಷ್ಟು ಸಮಸ್ಯೆಗಳನ್ನು ಸೃಷ್ಟಿಸುವ ವಲಯವಾಗಿರುತ್ತದೆ. "ಇಲ್ಲ" ಎಂದು ಹೇಳುವುದು ಹೇಗೆ ಎಂದು ನಮಗೆ ತಿಳಿಯದು. ಕೇವಲ ಜನರನ್ನು ಸಂತೋಷಪಡಿಸಲು, ಅಥವಾ ಜನರ ಮುಂದೆ ಚೆನ್ನಾಗಿ ಕಾಣಿಸಲು ನಾವು ನಮಗೆ ಮಾಡಲು ಅಸಾಧ್ಯವೆಂದು ತಿಳಿದಿರುವಂಥವುಗಳನ್ನು ಮಾಡಲು ಪ್ರಮಾಣ ಮಾಡುತ್ತೇವೆ. ಕೊನೆಗೆ ನಾವು ಮಾತು ಉಳಿಸಿಕೊಳ್ಳಲಾಗುವುದಿಲ್ಲ ಹಾಗೂ ಇದು ನಮ್ಮನ್ನು ನಿರೀಕ್ಷಿಸುವ ನಾವು, ಮಾಡುತ್ತೇವೆಂದು ಪ್ರಮಾಣ ಮಾಡಿರುವವರನ್ನು ಬಹಳಷ್ಟು ನಿರಾಶೆಗೆ ಒಳಪಡಿಸುತ್ತೇವೆ. ನಮ್ಮ ವಿಶ್ವಾಸಾರ್ಹತೆಯನ್ನು ಕಳೆದುಕೊಳ್ಳುತ್ತೇವೆ ಹಾಗೂ ಇದು ಕೊನೆಗೆ ಸೇವೆಯ ಮೇಲೆ ಪ್ರತಿಬಿಂಬಿಸುತ್ತದೆ. ಜನರು ಭರವಸೆ ಕಳೆದುಕೊಳ್ಳುತ್ತಾರೆ, ನೊಂದುಕೊಳ್ಳುತ್ತಾರೆ. ಕುಸಿಯುವಿಕೆಯ ಭಾವ ಹೊಂದುತ್ತಾರೆ. ಒಂದು ವೇಳೆ ಸ್ಥಳೀಯ ಸಭೆಯಿಂದಲೇ ಹೊರಕ್ಕೆ ಹೋಗಿ ಬಿಡುತ್ತಾರೆ. ಅಪೊಸ್ತಲನಾದ ಪೌಲನು ಇದನ್ನು ತನ್ನ ಸೇವೆಯಲ್ಲಿ ಗಂಭೀರವಾಗಿ ತೆಗೆದುಕೊಂಡಿರುತ್ತಾನೆ. ಕೊರಿಂಥದವರಿಗೆ ಬರೆಯುತ್ತಾ ಅವನು, *"ಇದನ್ನು ಯೋಚಿಸಿದಾಗ ಚಪಲ ಚಿತ್ತನಾಗಿದ್ದೆನೋ? ನಾನು ಯೋಚಿಸುವುದನ್ನು ಕೇವಲ ಮಾನುಷ ಬುದ್ಧಿಯಿಂದ ಯೋಚಿಸಿ ಹೌದು ಹೌದು ಅಂದ ಮೇಲೆ ಅಲ್ಲ ಅಲ್ಲ ಅನ್ನುವವನಾಗಿದ್ದೇನೋ?"* (2 ಕೊರಿಂಥದವರಿಗೆ 1:17).

ಈ ವಲಯದಲ್ಲಿ ನಾವು ಪರಿಪೂರ್ಣರಾಗಿರಲಿಕ್ಕಿಲ್ಲ ಎಂಬುದು ಸತ್ಯ. ನಾವು ಏನನ್ನೋ ಪ್ರಮಾಣ ಮಾಡುತ್ತೇವೆ, ಹಾಗೂ ಅದನ್ನು ಪಾಲಿಸಲು ಸೋತು ಹೋಗುತ್ತೇವೆ. ಇಂಥಾ ಪರಿಸ್ಥಿತಿಗಳಲ್ಲಿ ನಾವು ಜನರಲ್ಲಿ ಕ್ಷಮೆ ಕೇಳಲು ಚುರುಕಾಗಿರಬೇಕು, ಹಾಗೂ ಇದನ್ನು ನಾವು ಕಲಿಯಲು, ಹಾಗೂ ನಮ್ಮ ಸ್ವಂತ ಕೊರತೆಗಳ ವಲಯವನ್ನು ತಿಳಿದುಕೊಳ್ಳಲು ಒಂದು ಪಾಠವನ್ನಾಗಿ ಬಳಸಬೇಕು, ಇದರಿಂದ ನಾವು ಇದನ್ನು ಮತ್ತೆ ಪುನರಾವರ್ತಿಸುವುದಿಲ್ಲ.

ಕರ್ತನಾದ ಯೇಸುವು, *"ಆದರೆ ನಿಮ್ಮ ಮಾತು ಹೌದಾದರೆ ಹೌದು, ಅಲ್ಲವಾದರೆ ಅಲ್ಲ ಎಂದಿರಲಿ; ಇದಕ್ಕಿಂತ ಹೆಚ್ಚಾದದ್ದು ಸೈತಾನನಿಂದ ಬಂದದ್ದು"* (ಮತ್ತಾಯ 5:37) ಎಂದು ನಮಗೆ ಕಲಿಸಿದ್ದಾನೆ.

## ಇತರರ ಸಮಯವನ್ನು ಗೌರವಿಸಿರಿ—ಯಾವಾಗಲೂ ಕಾಲನಿಷ್ಠೆಯುಳ್ಳವರಾಗಿರಿ

**"ಆದ ಕಾರಣ ನೀವು ನಡಕೊಳ್ಳುವ ರೀತಿಯನ್ನು ಕುರಿತು ಚೆನ್ನಾಗಿ ನೋಡಿಕೊಳ್ಳಿರಿ. ಜ್ಞಾನವಿಲ್ಲದವರಾಗಿರದೆ ಜ್ಞಾನವಂತರಾಗಿರ್ರಿ. ಈ ದಿನಗಳು ಕೆಟ್ಟವುಗಳಾಗಿವೆ, ಆದ್ದರಿಂದ ಕಾಲವನ್ನು ಸುಮ್ಮನೆ ಕಳಕೊಳ್ಳದೆ ಅದನ್ನು ಬೆಲೆಯುಳ್ಳದ್ದೆಂದು ಉಪಯೋಗಿಸಿಕೊಳ್ಳಿರಿ" (ಎಫೆಸದವರಿಗೆ 5:15,16).**

ಕ್ರೈಸ್ತ ಸೇವಕರಾದ ನಾವು ಸುಧಾರಿಸಿಕೊಳ್ಳಬೇಕಾದ ವಲಯಗಳಲ್ಲಿ ಒಂದು ಯಾವುದೆಂದರೆ, ಕಾಲ ನಿಷ್ಠೆಯ ವಲಯವಾಗಿರುತ್ತದೆ. ಕೆಲವು ವರ್ಷಗಳ ಹಿಂದೆ ಸ್ಥಳೀಯ ಕ್ರೈಸ್ತ ಸಭೆಯೊಂದರ ಜಾಹಿರಾತಿನ ಪತ್ರಿಕೆಯಲ್ಲಿ ನಾನು ಪೂರ್ಣ ಪುಟವನ್ನು ಓದಿದ್ದು ನನಗೆ ನೆನಪಿದೆ. ಅದರಲ್ಲಿದ್ದುದೇನೆಂದರೆ ನಮ್ಮ ನಗರದಲ್ಲಿನ ಒಂದು ದೊಡ್ಡ ಸಭಾಂಗಣದಲ್ಲಿ ಇಡೀ ದಿನದ ಪ್ರಾರ್ಥನಾಕೂಟವನ್ನು ಏರ್ಪಡಿಸಲಾಗಿತ್ತು. ಪ್ರಾರ್ಥನೆಯು ಮುಂಜಾನೆ 9 ಗಂಟೆಗೆ ಆರಂಭವಾಗುವುದಾಗಿ ಅದರಲ್ಲಿ ತಿಳಿಸಲ್ಪಟ್ಟಿತ್ತು—ಈ ಕೂಟವು ಒಂದು ದೊಡ್ಡ ಸಭೆಯ ಆತಿಥ್ಯದಲ್ಲಿ ನಡೆಯುವುದಿತ್ತು ಹಾಗೂ ಸಭೆಯ ಮತ್ತು ಅದರ ಸಭಾಪಾಲಕರುಗಳ ಹೆಸರುಗಳು ಆ ಜಾಹೀರಾತಿನ ಪ್ರದರ್ಶನದಲ್ಲಿ ದೊಡ್ಡ ಅಕ್ಷರಗಳಲ್ಲಿ ಹಾಕಲ್ಪಟ್ಟಿದ್ದವು. ಇತರ ವಿಶ್ವಾಸಿಗಳೊಂದಿಗೆ ಒಂದುಗೂಡಿ ಪ್ರಾರ್ಥನೆ ಮಾಡುವುದು ತುಂಬಾ ಒಳ್ಳೆಯ ಸಂಗತಿಯೆಂದು ನಾನು ತೀರ್ಮಾನಿಸಿದೆನು. ಇದರಿಂದ ನಾನು ಪ್ರಾರ್ಥನಾ ಕೂಟದ ಆ ದಿನವನ್ನು ಪ್ರತ್ಯೇಕಿಸಿಟ್ಟುಕೊಂಡೆನು. ಆ ಪ್ರಾರ್ಥನೆ ನಡೆಯುವ ಸ್ಥಳಕ್ಕೆ 9 ಗಂಟೆಗೆ ಕೆಲವು ನಿಮಿಷಗಳ ಮೊದಲೇ ಬಂದೆನು. ನನಗೆ ನಿರಾಶೆ ಹುಟ್ಟಿಸಿದ್ದೇನೆಂದರೆ ಆ ಸ್ಥಳದಲ್ಲಿ ಯಾರೊಬ್ಬರೂ ಇರಲಿಲ್ಲ, ಅಲ್ಲದೆ ಆ ಸಭಾಂಗಣದ ಬಾಗಿಲೂ ತೆರೆಯಲ್ಪಟ್ಟಿರಲಿಲ್ಲ. ನಾನು ಅಲ್ಲಿನ ಭದ್ರತಾ ಸಿಬ್ಬಂದಿಯನ್ನು ಸಂಧಿಸಿ, ಯಾರಾದರೂ ಬಂದಿದ್ದಾರೋ ಎಂದು ಮುಂತಾಗಿ ಪ್ರಶ್ನಿಸಿದೆನು. ನಂತರ ಸಭೆಯ ಕಛೇರಿಗೆ ಸಂಪರ್ಕಿಸಿ ಕೂಟದ ಬಗ್ಗೆ ವಿಚಾರಿಸಿದೆನು. ಇದೊಂದು ತತ್ತರಿಸುವ ಕ್ಷಣವಾಗಿತ್ತು. ನಾನು ಪಡೆದ ಉತ್ತರವೇನೆಂದರೆ, ದಯವಿಟ್ಟು ಅಲ್ಲಿ ಕಾಯಬೇಕೆಂದೂ ಹಾಗೂ ಸಭಾಪಾಲಕರು 10 ಅಥವಾ 11 ಗಂಟೆಗೆ ಬರುತ್ತಾರೆ ಎಂಬುದೇ, ನಾನು ನಿರಾಶೆಯಿಂದ ಪ್ರಾಮಾಣಿಕವಾಗಿ ಆ ಸ್ಥಳವನ್ನು ಬಿಟ್ಟುಹೊರಟೆನು.

ಭಾರತದಲ್ಲಿ ಒಂದು ಕ್ರೈಸ್ತಕೂಟವು ಅಥವಾ ಆರಾಧನೆಯು ಒಂದು ನಿರ್ದಿಷ್ಟ ಸಮಯದಲ್ಲಿ ಆರಂಭವಾಗುತ್ತದೆ ಎಂದು ಪ್ರಕಟನೆ ಆಗುವುದು ಒಂದು ಪದ್ಧತಿಯಾಗುತ್ತದೆ. ಆದರೆ ವ್ಯವಸ್ಥಾಪಕರು ಪ್ರಕಟಿಸಲ್ಪಟ್ಟ ಸಮಯಕ್ಕಿಂತ 30 ನಿಮಿಷ ತಡವಾಗಿ ಆರಂಭಿಸುವ ಪೂರ್ಣ ಉದ್ದೇಶಹೊಂದಿರುತ್ತಾರೆ. ಇದೊಂದು ಕೆಟ್ಟ ರೂಢಿಯಾಗಿದೆ. ಮೊದಲನೇದಾಗಿ, ನಾವು ಜನರಿಗೆ ಆರಂಭದ ಸಮಯದ ಬಗ್ಗೆ ಸುಳ್ಳು ಹೇಳುತ್ತಿದ್ದೇವೆ. ಎರಡನೇದಾಗಿ, ಸಮಯಕ್ಕೆ ಸರಿಯಾಗಿ ಬರುವವರಿಗೆ ನಾವು ಅನ್ಯಾಯ ಮಾಡುತ್ತಿದ್ದೇವೆ. ಅಂದರೆ ಅವರು 30 ನಿಮಿಷಗಳು ಕಾಯುವಂತೆ ಮಾಡುತ್ತೇವೆ. ಮೂರನೇದಾಗಿ ಒಂದು ಸಮಯವನ್ನು ಪ್ರಕಟಿಸಿ ಮತ್ತೆ 30 ನಿಮಿಷಗಳ ಕಾಲ ಕಾಯುವಂತೆ ಮಾಡಿ ನಮ್ಮ ಸ್ವಂತ ಜನರ ಒಂದು ಕೆಟ್ಟ ಅಭ್ಯಾಸವು ಬೆಳೆಯುವಂತೆ ಮಾಡುತ್ತೇವೆ. ಅವರೂ ಕೂಡಾ ಅದೇ ಕೆಲಸಮಾಡುತ್ತಾರೆ ಹಾಗೂ ಈ ಸಮಸ್ಯೆಯು ಮುಂದುವರಿಯುತ್ತದೆ. ಒಂದು ಕೂಟಕ್ಕಾಗಿ ನಾವು ಒಂದು ಆರಂಭ ಸಮಯವನ್ನು ಪ್ರಕಟಮಾಡಿದಾಗ ನಾವು ನಮ್ಮ ಸಿದ್ಧತೆಗಳನ್ನು ನಾವು ಸಮಯಕ್ಕೆ ಸರಿಯಾಗಿ ಆರಂಭಿಸುವ ರೀತಿಯಲ್ಲಿ ಎಲ್ಲವನ್ನೂ ಮಾಡಲು ತೀರ್ಮಾನಿಸಬೇಕು. ಸಭಾಂಗಣದಲ್ಲಿ ಎಷ್ಟು ಮಂದಿ ಇದ್ದಾರೆಂಬುದು ಗಣನೆಗೆ ಬಾರದಿದ್ದರೂ, ನಮ್ಮ ಜವಾಬ್ದಾರಿ ಏನೆಂದರೆ ನಮ್ಮ ಮಾತನ್ನು ಉಳಿಸಿಕೊಂಡು, ಸಮಯಕ್ಕೆ ಸರಿಯಾಗಿ ಆರಂಭಿಸುವುದು. ಇದನ್ನು ನಾವು ಕೆಲವು ಸಮಯ ಸ್ಥಿರವಾಗಿ ಮಾಡಿದರೆ, ಜನರು ತಾವು ಸಮಯಕ್ಕೆ ಸರಿಯಾಗಿ ಇರಬೇಕು, ಇಲ್ಲವಾದರೆ ತಾವು ಆರಾಧನೆಯ ಭಾಗಗಳನ್ನು ಕಳೆದುಕೊಳ್ಳುವುದನ್ನು ಅರ್ಥಮಾಡಿಕೊಳ್ಳುತ್ತಾರೆ. ಹೌದು ಕಷ್ಟಕರ ಸನ್ನಿವೇಶಗಳಿಂದ ನಾವು ವಿಳಂಬವಾಗಿರುವ ಅಪರೂಪದ ಸಂದರ್ಭಗಳೂ ಇರುತ್ತವೆ. ಅಂಥಾ ಸ್ಥಿತಿಗಳಲ್ಲಿ ನಾವು ಜನರನ್ನು ಕ್ಷಮೆಯಾಚಿಸಬೇಕು ಹಾಗೂ ಮುಂದಿನ ದಿನಗಳಲ್ಲಿ ಇದನ್ನು ತಡೆಗಟ್ಟಲು ನಾವು ಏನುಮಾಡಬೇಕೆಂಬುದನ್ನು ನಿಶ್ಚಯಿಸಬೇಕು.

ಇದೇ ರೀತಿ, ನಾವು ಯೋಜನೆ ಮಾಡುವ ವೈಯಕ್ತಿಕ ಕೂಟಗಳಿಗೂ ಆಗುತ್ತದೆ. ನಾವು ನಮ್ಮನ್ನು ಸಂಧಿಸಲು ಒಬ್ಬ ವ್ಯಕ್ತಿಗೆ ಒಂದು ನಿರ್ದಿಷ್ಟ ಸಮಯವನ್ನು ನೀಡಿದ್ದರೆ,ಆಗ ನಾವು ಸಿದ್ಧಪಡಿಸಿದ ಸಮಯದಲ್ಲಿ ಆ ವ್ಯಕ್ತಿಯನ್ನು ಸಂಧಿಸಲು ಅಲ್ಲಿ ಇದ್ದು, ಆ ವ್ಯಕ್ತಿಯನ್ನು ಸಂಧಿಸಬೇಕು. ಆ

ವ್ಯಕ್ತಿಯನ್ನು ಕಾಯುವಂತೆ ಮಾಡುವುದು – ಆ ವ್ಯಕ್ತಿಯಾರು, ಅಥವಾ "ಬಹಳಷ್ಟು ಗಡಿಬಿಡಿ"ಯಲ್ಲಿ ಇದ್ದರೋ ಇಲ್ಲವೋ ಎಂಬುದರ ಗಣನೆ ಇಲ್ಲದೆ, ಆ ವ್ಯಕ್ತಿಯನ್ನು ಸಂಧಿಸಬೇಕು. ನಾವು ನಮ್ಮ ಸಮಯವನ್ನು ಉಳಿಸಿಕೊಳ್ಳಲು ಅಸಮರ್ಥರಾದ ಸಂದರ್ಭವಿದ್ದರೆ, ಆಗ ನಾವು ಆ ವ್ಯಕ್ತಿಗೆ ಸಾಧ್ಯವಾದಷ್ಟು ಶೀಘ್ರವಾಗಿ ವಿಷಯ ತಿಳಿಸಬೇಕು, ಆಗ ತಮ್ಮ ಯೋಜನೆಯಂತೆಯೇ ಬೇರೆ ಸಮಯಕ್ಕೆ ಬದಲಾಯಿಸಿಕೊಳ್ಳುತ್ತಾರೆ.

## ದೇವರು ಹಾಗೂ ಮನುಷ್ಯನ ಮುಂದೆ ನಿರ್ದೋಷಿಯಾಗಿರಿ

**"ನಿಂದೆಗೆ ಅವಕಾಶಕೊಡದೆ ಎಲ್ಲಾ ಸಂಗತಿಗಳಲ್ಲಿ ದೇವರ ಸೇವಕರೆಂದು ನಮ್ಮನ್ನು ಸಮ್ಮತರಾಗ ಮಾಡಿಕೊಳ್ಳುತ್ತೇವೆ"** (2 ಕೊರಿಂಥದವರಿಗೆ 6:3,4).

**"ಯಾಕೆಂದರೆ ಕರ್ತನ ದೃಷ್ಟಿಯಲ್ಲಿ ಮಾತ್ರವಲ್ಲದೆ ಮನುಷ್ಯರ ದೃಷ್ಟಿಯಲ್ಲಿಯೂ ಗೌರವವಾದದ್ದನ್ನು ಯೋಚನೆಗೆ ತಂದುಕೊಳ್ಳುವವರಾಗಿದ್ದೇವೆ"** (2 ಕೊರಿಂಥದವರಿಗೆ 8:21).

ಸಾಧ್ಯವಾದಷ್ಟು ಮಟ್ಟಿಗೆ ಅತ್ಯುತ್ತಮವಾಗಿ ನಾವು ದೇವರ ಹಾಗೂ ಮನುಷ್ಯರ ಮುಂದೆ ನಿರ್ದೋಷಿಗಳಾಗಿ ನಡೆದುಕೊಳ್ಳಬೇಕು. ನಮ್ಮ ವೈಯಕ್ತಿಕ ಜೀವಿತಗಳಲ್ಲಿ ಹಾಗೂ ಸೇವೆಯಲ್ಲಿ ನಾವು ಮಾಡುವ ವಿಷಯಗಳಲ್ಲಿ ನಾವು ನಿರ್ದೋಷಿಗಳಾಗಿರಬೇಕಾದುದು ನಮ್ಮ ಗುರಿಯಾಗಿರಬೇಕು. ನಾವು ಬಚ್ಚಿಡಲು ಏನೂ ಇಲ್ಲ ಎಂಬ ರೀತಿಯಲ್ಲಿ ನಾವು ಜೀವಿಸಬೇಕು. ಹೌದು, ನಾವು ತಪ್ಪು ಮಾಡುತ್ತೇವೆ. ಹಾಗೂ ಕರ್ತನ ಕ್ಷಮೆ ಮತ್ತು ತಿದ್ದುಪಾಟನ್ನು ಪಡೆದುಕೊಳ್ಳುತ್ತೇವೆ. ಹಾಗೂ ಇದರಿಂದ ನಾವು ಈ ವಿಷಯಗಳನ್ನು ನಮ್ಮ ಹಿಂದೆ ಹಾಕಿ ಮುಂದೆ ಸಾಗುತ್ತೇವೆ. ನಾವು ತಪ್ಪಾದ ವಿಷಯಗಳಲ್ಲಿ ಮುಂದುವರಿಯುವುದನ್ನು ಆರಿಸಿಕೊಳ್ಳುವುದಿಲ್ಲ. ಎಲ್ಲಾ ವಿಷಯಗಳಲ್ಲಿ ನಾವು ಮನೆಯಲ್ಲಿ ನಮ್ಮ ಬಾಳ ಸಂಗಾತಿ ಮತ್ತು ಮಕ್ಕಳೊಂದಿಗೆ ಇರುವ ರೀತಿ, ನಮ್ಮ ಹಣ ಮತ್ತು ಸಮಯವನ್ನು ನಾವು ಬಳಸುವ ರೀತಿ, ನಾವು ಸೇವೆ ಮಾಡುವ ರೀತಿ ಹಾಗೂ ಮುಂತಾಗಿದವು. ಇವುಗಳಲ್ಲಿ ನಾವು ಕರ್ತನ ನಿಜವಾದ ಸೇವಕರೆಂದು ನಮ್ಮನ್ನು ತೋರಿಸಿಕೊಳ್ಳಬೇಕು. ನಾವು ಕೇವಲ ದೇವರ ದೃಷ್ಟಿಯಲ್ಲಿ ಮಾತ್ರ ಯೋಗ್ಯವಾಗಿರುವುದಿಲ್ಲ, ಆದರೆ ಸಾಧ್ಯವಾದಷ್ಟು ಮಟ್ಟಿಗೆ ಮನುಷ್ಯನ ದೃಷ್ಟಿಯಲ್ಲೂ ಕೂಡಾ ಇರಬೇಕು.

## ಜೀವಿತದಲ್ಲಿ ಆನಂದಿಸಿರಿ, ಆದರೆ ಅಸಹ್ಯವಾದ ಮಾತು ಹಾಗೂ ಮೂರ್ಖ ತನದ ಪರಿಹಾಸ್ಯವನ್ನು ತಡೆಗಟ್ಟಿರಿ

**"ನಿಮ್ಮ ಬಾಯೊಳಗಿಂದ ಯಾವ ಕೆಟ್ಟ ಮಾತೂ ಹೊರಡಬಾರದು; ಭಕ್ತಿಯನ್ನು ವೃದ್ಧಿಮಾಡುವಂಥ ಕಾಲೋಚಿತವಾದ ಮಾತು ಇದ್ದರೆ ಕೇಳುವವರ ಹಿತಕ್ಕಾಗಿ ಅದನ್ನು ಆಡಿರಿ. ಜಾರತ್ವ ಯಾವ ವಿಧವಾದ ಬಂಡುತನ ದ್ರವ್ಯಾಶೆ ಇವುಗಳ ಸುದ್ಧಿಯಾದರೂ ನಿಮ್ಮಲ್ಲಿ ಇರಬಾರದು; ಇವುಗಳಿಗೆ ದೂರವಾಗಿರುವುದೇ ದೇವ ಜನರಿಗೆ ಯೋಗ್ಯವಾದದ್ದು. ಹೊಲಸು ಮಾತು ಹುಚ್ಚು ಮಾತು, ಕುಚೋದ್ಯ ಮಾತು ಇವು ಬೇಡ, ಅಯುಕ್ತವಾಗಿವೆ; ಇವುಗಳನ್ನು ಬಿಟ್ಟು ದೇವರಿಗೆ ಉಪಕಾರ ಸ್ತುತಿ ಮಾಡುವುದು ಉತ್ತಮ" (ಎಫೆಸದವರಿಗೆ 4:29 ಮತ್ತು 5:3,4).**

## ಅನುಕೂಲತೆಗಳು ಹಾಗೂ ಸುಖಭೋಗಗಳಿಗಾಗಿ ಹಾತೊರೆಯಬೇಡಿರಿ

**"ಸರ್ವವಿಧದಲ್ಲಿಯೂ ನಮಗೆ ಇಕ್ಕಟ್ಟು ಇದ್ದರೂ ನಾವು ಅತಿ ಸಂಕಟ ಪಡುವವರಲ್ಲ; ನಾವು ದಿಕ್ಕು ಕಾಣದವರಾಗಿದ್ದರೂ ಕೇವಲ ದೆಸೆಗೆಟ್ಟವರಲ್ಲ; ಕೆಡವಲ್ಪಟ್ಟವರಾಗಿದ್ದರೂ ಪ್ರಾಣ ನಷ್ಟ ಪಡುವವರಲ್ಲ; ಯೇಸುವಿನ ಜೀವವು ನಮ್ಮ ದೇಹದಲ್ಲಿ ಉಂಟೆಂದು ತೋರಿಬರುವುದಕ್ಕಾಗಿ ಯೇಸುವಿನ ಮರಣಾವಸ್ಥೆಯನ್ನು ನಾವು ಯಾವಾಗಲೂ ದೇಹದಲ್ಲಿ ಅನುಭವಿಸುತ್ತಾ ತಿರುಗಾಡುತ್ತೇವೆ" (2 ಕೊರಿಂಥದವರಿಗೆ 4:8–10).**

**"ಇದಲ್ಲದೆ ನಾವು ಕ್ರಿಸ್ತನ ಅಪೊಸ್ತಲರಾಗಿರುವುದರಿಂದ ನಮಗೆ ಗೌರವವನ್ನು ಕೊಡಬೇಕೆಂದು ಹೇಳಬಹುದಾಗಿದ್ದರೂ ಮನುಷ್ಯರಿಂದ ಬರುವ ಮಾನವನ್ನು ನಿಮ್ಮಿಂದಾಗಲಿ ಇತರರಿಂದಾಗಲಿ ಹೊಂದಲಪೇಕ್ಷಿಸುವವರಾಗಿಲ್ಲ. ಸಹೋದರರೇ, ನಾವು ನಿಮ್ಮಲ್ಲಿ ಯಾರ ಮೇಲೆಯೂ ಭಾರಹಾಕಬಾರದೆಂದು ಹಗಲಿರುಳು ದುಡಿದು ಜೀವನ ಮಾಡಿಕೊಳ್ಳುತ್ತಾ ದೇವರ ಸುವಾರ್ತೆಯನ್ನು ನಿಮಗೆ ಸಾರಿದೆವು; ಆ ನಮ್ಮ ಕಷ್ಟವೂ ಪ್ರಯಾಸವೂ ನಿಮ್ಮ ನೆನಪಿನಲ್ಲಿರುವುದಷ್ಟೆ. ನಂಬುವವರಾದ ನಿಮ್ಮ ವಿಷಯದಲ್ಲಿ ನಾವು ಎಷ್ಟೋ ಶುದ್ಧರಾಗಿಯೂ ನೀತಿವಂತರಾಗಿಯೂ ನಿರ್ದೋಷಿಗಳಾಗಿಯೂ ನಡೆದುಕೊಂಡೆವೆಂಬುದಕ್ಕೆ ನೀವು ಸಾಕ್ಷಿಗಳು, ದೇವರೂ ಸಾಕ್ಷಿ, ತಂದೆಯು ತನ್ನ ಮಕ್ಕಳಿಗೆ ಹೇಗೋ ಹಾಗೆಯೇ ನಾವು ನಿಮ್ಮಲ್ಲಿ ಪ್ರತಿಯೊಬ್ಬನಿಗೆ ಬುದ್ಧಿಹೇಳುತ್ತಾ ಧೈರ್ಯಪಡಿಸುತ್ತಾ ತನ್ನ ರಾಜ್ಯ ಪ್ರಭಾವಗಳಲ್ಲಿ ಪಾಲುಗಾರರಾಗುವುದಕ್ಕೆ ಕರೆಯುವ ದೇವರಿಗೆ ಯೋಗ್ಯರಾಗಿ ನೀವು ನಡೆಯಬೇಕೆಂದು ಖಂಡಿತವಾಗಿ ಹೇಳುತ್ತಾ ಇದ್ದೇವೆಂಬುದು ನಮಗೆ ತಿಳಿದಿದೆ" (2 ಥೆಸಲೋನಿಕದವರಿಗೆ 2:6, 9–12).**

ಈ ದಿನ ಸಾಮಾನ್ಯವಾದ ಒಂದು ಪ್ರವೃತ್ತಿಯು, ವಿಶೇಷವಾಗಿ "ಮಹತ್ವ ಹಾಗೂ ಶಕ್ತ" ದೇವರ "ಅಭಿಷಿಕ್ತ" ಸೇವಕರುಗಳ ಉನ್ನತ ವ್ಯವಸ್ಥೆಯೊಂದಿಗೆ ದೊಡ್ಡ ಗಾತ್ರದಲ್ಲಿ ಕಾಣಿಕೆಗಳು ವಿಸ್ತಾರವಾದ ಏರ್ ಕಂಡಿಶನ್ ಹೊಂದಿದ ವಾಹನಗಳು ಸಂಚಾರಕ್ಕಾಗಿ, ಫೈವ್ ಸ್ಟಾರ್

ಹೋಟೆಲಿನ ವಸತಿ ವ್ಯವಸ್ಥೆ, ಸೂಪರ್ ಹೀರೋಗಳಿಗೆ ದೊರೆಯುವಂಥ ಉಪಚಾರ,—ಮುಂತಾದವುಗಳನ್ನು ಆರಾಧನೆ ಅಥವಾ ಕೂಟದಲ್ಲಿ ಸೇವೆಗಾಗಿ ಕರೆದಾಗ ಕೋರಿಕೆ ಇಡುವುದು ವ್ಯಕ್ತ ವಾಗುತ್ತದೆ. ದೊಡ್ಡ ಕೊಡುಗೆಗಳಿಗಾಗಿ ನಾನು ವಿರೋಧವಾಗಿಲ್ಲದಿದ್ದಾಗ ಅಥವಾ ಪ್ರಯಾಣ ಮಾಡಲು ಉತ್ತಮ ವಾಹನಗಳು, ಅಥವಾ ಫೈವ್‌ಸ್ಟಾರ್ ಹೋಟೆಲ್‌ಗಳಲ್ಲಿ ಇಳುಕೊಳ್ಳುವುದು—ಇವುಗಳು, ಸೇವಕರಿಗೆ ಅವರು ಸೇವೆಗಾಗಿ ಹೊರಗೆ ಹೋಗಲು ಇಂಥಾ ಪೂರ್ವಾಪೇಕ್ಷಿತವಾದವುಗಳು ನಿಜವಾಗಿಯೂ ತಪ್ಪಾಗುತ್ತದೆ ಎಂಬುದು ನನ್ನ ಆಲೋಚನೆಯಾಗಿದೆ. ಆತಿಥೇಯರು ನಿಮಗೆ ತಮ್ಮಿಚ್ಛೆಯಿಂದ ಇಂಥಾ ವಿಷಯಗಳನ್ನು ಒದಗಿಸಿಕೊಟ್ಟರೆ ಆಗ ಅದು ಒಳ್ಳೆಯದು ಹಾಗೂ ಉತ್ತಮ.

ಆದರೆ ಒಬ್ಬ ದೇವರ ಸೇವಕನು ಇಂಥಾ "ರಾಜಭೋಗ"ದ ಉಪಚಾರವನ್ನು ಕೋರುವ ಹಾಗೂ ನಿರೀಕ್ಷಿಸುವ, ಮತ್ತು ಒಂದು ಆಹ್ವಾನವನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವುದರಿಂದ ಈ ಅಳತೆಗೋಲನ್ನು ಮಾಡುವುದು ಕ್ರಿಸ್ತನಂತಿರುವುದಕ್ಕೆ ಎಲ್ಲಿಯೂ ಸಮೀಪವಾಗಿರಲು ಸಾಧ್ಯವಿಲ್ಲ! ದೇವರು ನಮ್ಮನ್ನು ಹೋಗಿ ಸೇವೆ ಮಾಡಲು ಬಯಸಿದರೆ, ನಾವು ಉಳಿದುಕೊಳ್ಳಲು ಒಂದು ಫೈವ್ ಸ್ಟಾರ್ ಹೋಟೆಲಿನಲ್ಲಿ ಇರಲಿ ಅಥವಾ ಎಲ್ಲೋ ಯಾರದೋ ಮನೆಯಲ್ಲಿ ಮಲಗಲಿ, ಅದಕ್ಕೆ ನಾವು ಸಿದ್ಧವಾಗಿರಬೇಕು. ನಮ್ಮ ಕರೆಯು ದೇವರಿಗೆ ವಿಧೇಯರಾಗುವುದು, ಸುಖಭೋಗ ಹಾಗೂ ಅನುಕೂಲಗಳ ಹಿಂದೆ ಹೋಗಿ ಹುಡುಕುವುದಲ್ಲ.

ಇಂಥಾ ಸೇವಕರು ಸಂತೋಷವಾಗಿ ಬೇರೊಬ್ಬರ ಹಣವನ್ನು ಖರ್ಚು ಮಾಡಿ, ಇಂಥಾ ಅನುಕೂಲತೆಗಳಲ್ಲಿ ಆನಂದಿಸುತ್ತಾರೆಂಬುದನ್ನು ನಾನು ಗಮನಿಸಿರುತ್ತೇನೆ, ಆದರೆ ಅದಕ್ಕೆ ತಾವೇ ಕ್ರಯವನ್ನು ಕೊಡಬೇಕೆಂದು ಕೇಳಿದಾಗ, ಅವರು ತಕ್ಷಣವೇ ಪ್ರತಿಯೊಂದನ್ನು ಕೇವಲ ಮೂಲಭೂತವಾದವುಗಳಿಗೆ ಕೀಳಾದ ರೀತಿಯಲ್ಲಿ ವರ್ಗೀಕರಿಸಿದರು. ಇಂಥಾ ವಿಷಯಗಳನ್ನು ನಾವು ಮಾಡಬಾರದು. ದೇವರು ನಮಗೆ ನೀಡಿರುವ ಸಂಪನ್ಮೂಲಗಳನ್ನು ಅವು ನಮ್ಮ ಕೈಗಳಲ್ಲಿರಲಿ ಅಥವಾ ಬೇರೊಬ್ಬರ ಕೈಯಲ್ಲಿರಲಿ ನಾವು ಮೌಲ್ಯತೆಯನ್ನು ನೀಡೋಣ.

ಈಗ ಮತ್ತೊಂದು ಕಡೆಯಲ್ಲಿ ನೀವು ಒಬ್ಬ ಸಭಾಪಾಲಕರು ಅಥವಾ ಒಂದು ಸಮ್ಮೇಳನ/ಕೂಟವನ್ನು ವ್ಯವಸ್ಥಿತಗೊಳಿಸುವವರು ಆಗಿದ್ದರೆ, ಹಾಗೂ ದೇವರ ಒಬ್ಬ ಪುರುಷ / ಮಹಿಳೆಯನ್ನು ಆಹ್ವಾನಿಸಲು ಇಷ್ಟವಿದ್ದರೆ, ನೀವು ಅದಕ್ಕಾಗಿ ಹೇಗೆ ಹೋಗುವಿರಿ? ಇದಕ್ಕಾಗಿ ನಿಮ್ಮ ಸಂಸ್ಥೆಯು, ದೇವ ಸೇವಕರು ಬಂದು, ನಿಮ್ಮ ಸಮ್ಮೇಳನದಲ್ಲಿ ಸೇವೆ ಮಾಡಿ ಹೋಗುವಂತೆ ಅವರ ಪ್ರಯಾಣ, ವಸತಿ ಹಾಗೂ ಊಟಕ್ಕಾಗಿ ಖರ್ಚು ಮಾಡಲು ಏನು ಮಾಡುವುದು ಎಂಬದನ್ನು ನೀವು ತಿಳಿದಿರಬೇಕು. ಎಂದು ನಾನು ಆಲೋಚಿಸುತ್ತೇನೆ. ಆಗ ಆಹ್ವಾನದೊಂದಿಗೆ ನೀವು ಏನು ಒದಗಿಸುವಿರಿ ಎಂಬುದನ್ನು ಸ್ಪಷ್ಟಪಡಿಸಿರಿ. ಉದಾಃ ಇಂಥಿಂಥ ವಿಮಾನಯಾನಗಳಲ್ಲಿ ಸುತ್ತಾಡುವ ಪ್ರವಾಸದ ಆರ್ಥಿಕ ಮಟ್ಟದ ವಿಮಾನ ಪ್ರಯಾಣ, ಇಷ್ಟು ದಿನಗಳಿಗಾಗಿ ಇಂಥಿಂಥ ಸ್ಥಳಗಳಲ್ಲಿ ಉಳಿಯುವುದು ಹಾಗೂ ಸೇವೆಗಾಗಿ ಇಂತಿಷ್ಟು ಕಾಣಿಕೆಯ ಹಣ, ಹೀಗೆ ಮುಂತಾದವನ್ನು ಬಯಸುವುದು. ಅವರು ಈ ವ್ಯವಸ್ಥೆಗಳಲ್ಲಿ ಉತ್ತಮವಾಗಿದ್ದರೆ, ಅವರು ಅಂಗೀಕರಿಸಲು ಸಿದ್ಧ, ಅಥವಾ ಆಹ್ವಾನವನ್ನು ತಿರಸ್ಕರಿಸಲೂ ಸಿದ್ಧರಾಗಿರಬೇಕು. ಈ ರೀತಿ ನೀವು ಯಾವುದೇ ತಪ್ಪಾದ ನಿರೀಕ್ಷೆಗಳನ್ನು ತಡೆಯಬಹುದು ಹಾಗೂ ನಿಮಗೆ ಕೊಡಲ್ಪಟ್ಟ ಹಣದ ವ್ಯವಸ್ಥೆಯ ಒಳ್ಳೆಯ ಮನೆ ವಾರ್ತೆಯವರಾಗಿ, ಕೆಲವು ದೇವಸೇವಕರು ಬಯಸುವ ಅತಿರೇಕತೆ ಹಾಗೂ ವೈಭೋಗಗಳಿಗೆ ತಲೆ ಹಿಡುಕರಾಗದೆ ಸೇವೆಮಾಡಬಹುದು.

ಅಪೊಸ್ತಲನು ದೇವರ ರಾಜ್ಯಕ್ಕಾಗಿ ಬಹಳಷ್ಟು ಮಾಡಿದನು ಹಾಗೂ ಅವನು ಬೋಧಿಸಲು ಸುತ್ತಾಡುವಾಗ, ಸಭೆಗಳನ್ನು ಸ್ಥಾಪಿಸುವಾಗಿ ಹಾಗೂ ವಿಶ್ವಾಸಿಗಳನ್ನು ಬಲಪಡಿಸುವಾಗ ಬಹಳಷ್ಟು ಕಷ್ಟಗಳನ್ನು ಎದುರಿಸಿದನು. ಅವನು ಹೆಚ್ಚಿನ ಸುಖ ಭೋಗಗಳನ್ನು ಅಥವಾ ವಿಶೇಷ ಉಪಚಾರವನ್ನು ತಾನು ಸೇವೆಗಾಗಿ ಹೋಗುವ ಸಭೆಗಳು ಹಾಗೂ ವಿಶ್ವಾಸಿಗಳಿಂದ ಕೇಳಲು ಹೆಚ್ಚಿನ ಪ್ರಯಾಣ ಅಥವಾ ಬಹಳಷ್ಟು ಕಾರ್ಯ ಮಗ್ನತೆಗಳ ನೆಪಗಳನ್ನು ಬಳಸಲಿಲ್ಲ, ಈ ಮಾದರಿಯನ್ನು ನಾವು ಅನುಸರಿಸಬೇಕು.

ಪೌಲನು ಫಿಲಿಪ್ಪಿಯರಿಗೆ, *"ನಿಮ್ಮ ಸೈರಣೆಯು ಎಲ್ಲಾ ಮನುಷ್ಯರಿಗೆ ಗೊತ್ತಾಗಲಿ, ಕರ್ತನು ಹತ್ತಿರವಾಗಿದ್ದಾನೆ"* ಎಂದು ಸೂಚನೆ ನೀಡುತ್ತಾನೆ (ಫಿಲಿಪ್ಪಿಯವರಿಗೆ 4:5). "ನಿಗ್ರಹ" ಎಂಬ ಪದವು ಅನುರಾಗ

ಜೀವಿತದ ಸಾಮನ್ಯ ಶಾಂತತೆ, ಎಲ್ಲಾ ಮಿತಿಮೀರುವಿಕೆಗಳಿಂದ ಬಿಡುಗಡೆಯಾಗಿರುವುದು ಇವುಗಳ ಮೇಲೆ ಹತೋಟಿ ಇಟ್ಟುಕೊಳ್ಳುವುದು ಎಂಬುದಕ್ಕೆ ಉಲ್ಲೇಖವಾಗಿದೆ. ಈ ಪದವು ಸಾಧಾರರಣವಾಗಿ ಸರಿಯಾದ ಅಥವಾ ಯೋಗ್ಯವಾದ ಹಾಗೂ ಯುಕ್ತತೆ, ಕೋಮಲತೆ ಹಾಗೂ ಮೃದುತ್ವಗಳಿಗೆ ಅರ್ಥಕೊಡುತ್ತದೆ. ಹೆಚ್ಚಿನ ಅನುರಾಗ ಅಥವಾ ಉಡುಪು ಅಥವಾ ತಿನ್ನುವಿಕೆ ಅಥವಾ ಕುಡಿಯುವಿಕೆ ಮಿತಿಮೀರುವಿಕೆಯಿಲ್ಲದೆ ಅವರು ತೃಪ್ತಿಪಡೆಯಬೇಕಾಗುತ್ತದೆ. ಅವರು ತಮ್ಮ ಹಸಿವನ್ನು. ಹತೋಟಿಯಲ್ಲಿಟ್ಟುಕೊಳ್ಳಬೇಕು, ತಮ್ಮ ಕೋಪವನ್ನು ಮಿತಗೊಳಿಸಬೇಕು, ಹಾಗೂ ಕರ್ತನು ಶೀಘ್ರದಲ್ಲೇ ಬರುತ್ತಾನೆ ಎಂಬ ನಿರೀಕ್ಷೆಯ ದೃಷ್ಟಿಯಲ್ಲಿ ಜನರಿಗಾಗಿ ಯೋಗ್ಯ ಮಾದರಿಗಳಾಗಿರಬೇಕು.



# ಬೋಧಿಸುವುದು

"ಸತ್ಕಾರ್ಯ ಮಾಡುವುದರಲ್ಲಿ ನೀನೇ ಮಾದರಿಯಾಗು. ನೀನು ಮಾಡುವ ಉಪದೇಶದಲ್ಲಿ ಯಥಾರ್ಥತ್ವವೂ ಗೌರವವು ಆಕ್ಷೇಪಣೆಗೆ ಆಸ್ಪದವಿಲ್ಲದಂಥ ಸ್ವಸ್ಥ ಬುದ್ಧಿಯೂ ಇರಬೇಕು ಆಗ ನಮ್ಮನ್ನು ಎದುರಿಸುವವರು ನಮ್ಮ ವಿಷಯದಲ್ಲಿ ಕೆಟ್ಟದ್ದೇನೂ ಹೇಳುವುದಕ್ಕೆ ಅವಕಾಶವಿಲ್ಲದೆ ನಾಚಿಕೊಳ್ಳುವರು."

(ತೀತನಿಗೆ 2:7–8)

## ಅಧ್ಯಾಯ 5

# ಅಧ್ಯಾಯ 5

# ಬೋಧಿಸುವುದು

ಜೀವಿತಗಳು ಸ್ಪರ್ಶಿಸಲ್ಪಡುವಂತೆ ತನ್ನ ವಾಕ್ಯವು ಬೋಧಿಸಲ್ಪಡಬೇಕೆಂದು ದೇವರು ಕಟ್ಟಳೆ ಮಾಡಿರುತ್ತಾನೆ. ದೇವರ ಸೇವಕರಾಗಿ, ನಾವು ಉತ್ತಮ ಬೋಧನೆ ಹಾಗೂ ಉಪದೇಶವು ಜನರು ಮೇಲೆ ಬೀರುವ ಪರಿಣಾಮವನ್ನು ನಾವು ತಿಳಿದಿರುತ್ತೇವೆ. ಜನರು ತಿಳುವಳಿಕೆಹೊಂದುತ್ತಾರೆ, ಬಲಹೊಂದುತ್ತಾರೆ ಹಾಗೂ ಪ್ರೋತ್ಸಾಹಿಸಲ್ಪಡುತ್ತಾರೆ. ದೇವರ ವಾಕ್ಯವು ಬಲದಲ್ಲಿ ಸಾರಲ್ಪಡುವಾಗ ಆತ್ಮಗಳು ರಕ್ಷಿಸಲ್ಪಡುತ್ತವೆ, ಪಾಪಿಗಳು ಮಾನಸಾಂತರ ಹೊಂದುತ್ತಾರೆ ಹಾಗೂ ಜನರು ಸ್ವಸ್ಥತೆ ಹೊಂದುತ್ತಾರೆ ಹಾಗೂ ಬಿಡುಗಡೆ ಹೊಂದುತ್ತಾರೆ. ಎಂಬುದನ್ನು ನಾವು ನೋಡುತ್ತೇವೆ. ಅದರಲ್ಲಿ ಒಂದು ಭಾಗವಾಗುವುದು ಅದ್ಭುತವಾದದ್ದು.

ಮತ್ತೊಂದು ಕಡೆ, ದೇವರ ವಾಕ್ಯವು ಯಾವಾಗ ಬೋಧಿಸಲ್ಪಡಬೇಕು ಹಾಗೂ ಉಪದೇಶಿಸಲ್ಪಡಬೇಕು ಎಂಬುದರ ಬಗ್ಗೆ ಜಾಗರೂಕರಾಗಿರಬೇಕಾದ ಅಗತ್ಯತೆಯ ವಲಯಗಳು ಇವೆ. ಈ ದಿನ ಹಲವಾರು ಸಭೆಗಳಲ್ಲಿ ಪ್ರಸಂಗವು ಬೇಸರ ಹುಟ್ಟಿಸುವ ಧರ್ಮೋಪದೇಶಕ್ಕಿಂತ ಹೆಚ್ಚಿನದಾಗಿರುವುದಿಲ್ಲ, ಅಂದರೆ ಒಂದು ನಿರ್ಜೀವಭಾಷಣ ಹಾಗೂ ಕೆಲವು ವೇಳೆ ಯಾರೋ ಒಬ್ಬರು ಪ್ರಸಂಗ ಪೀಠದಿಂದ ತರಬಯಸುವ ಕೆಲವು ಕಾರ್ಯಕ್ರಮಕ್ಕಾಗಿ ರಾಜಕೀಯ ಒತ್ತಡದಂತೆ ಇರುತ್ತದೆ. ಬೇರೆ ಕೆಲವು ಸ್ಥಳಗಳಲ್ಲಿ ಪ್ರಸಂಗವು ಮತ್ತೆ ಮತ್ತೆ ಹೇಳುವ "ಹಲ್ಲೆಲೂಯಾ" ಹಾಗೂ "ಸ್ತೋತ್ರ ಕರ್ತನಿಗೆ" ಎಂಬುದರೊಂದಿಗೆ ಅಲ್ಲಲ್ಲಿ ಸಮ್ಮಿಶ್ರಗೊಳಿಸುವ ಅಸಂಬದ್ಧ ಕತೆಗಳು ಸೇರಿ, ಎಲ್ಲವೂ ಆತ್ಮಿಕ ಭಾವೋದ್ವೇಗಗಳು ಮತ್ತು ಆವೇಶದೊಂದಿಗೆ ಆಳಿಕೆಯ ಚಾಲನೆ ಮಾಡುವ ಕರ್ಕಶ ಶಬ್ದಕ್ಕಿಂತ ಹೆಚ್ಚಿನದಾಗಿರುವುದಿಲ್ಲ, ಇದರ ಕೊನೆಯಲ್ಲಿ, ಸಂದೇಶಕರು ಏನು ಹೇಳಲು ಪ್ರಯತ್ನಿಸುತ್ತಿದ್ದರು, ಅಥವಾ ಬೋಧನೆಯ ಮುಖಾಂತರ ನಾನು ದೇವರ ಬಗ್ಗೆ ಏನು ಕಂಡುಕೊಂಡೆನು ಎಂಬುದನ್ನು ನೀವು ಯೋಚಿಸುವಿರಿ. ಇತರ ಕೆಲವು ಸ್ಥಳಗಳಲ್ಲಿ ನಾವು ಆರಾಧನೆಗಳು ಹಾಗೂ ಸಂದೇಶವು "ಮೆಗಾ

ಪ್ರದರ್ಶನದಂತೆ," ಒಂದು ರೀತಿಯಲ್ಲಿ "ಕ್ರೈಸ್ತತ್ವವಾಗಿ ಮಾರ್ಪಡಿಸಲ್ಪಟ್ಟ"ಂತೆ ಅಂದರೆ ಒಂದು ಸಿನಿಮಾ ಮಂದಿರದಲ್ಲಿ ಒಂದು ಚಲನಚಿತ್ರಕ್ಕೆ ಪ್ರರ್ಯಾಯವಾಗಿ ಇದ್ದಂತೆ ಅನ್ನಿಸುವುದನ್ನು ನಾವು ನೋಡುತ್ತೇವೆ. ಬೋಧಕರು, ರಕ್ಷಿಸಲ್ಪಡದ ಒಬ್ಬದೂರದರ್ಶನ ಆತಿಥೇಯನ ಅಥವಾ ಪ್ರಚೋದಕ ಸಂದೇಶಕನ ಮಾತಿಗಿಂತ ವ್ಯತ್ಯಾಸವಿಲ್ಲದ ರೀತಿಯಲ್ಲಿ ಅಂಥಾ ಭಾಷೆಯನ್ನು ಬಳಸಿ "ಸಮಕಾಲೀನ ಶೈಲಿ"ಯಲ್ಲಿ. ಉಪದೇಶಿಸಿ ತನ್ನ ಸಭಿಕರನ್ನು ಪ್ರಭಾವಿತರನ್ನಾಗಿ ಮಾಡಿ ಮನರಂಜಿಸಲಿಕ್ಕಾಗಿ ಚಾಲನೆ ಮಾಡುತ್ತಾನೆ. "ಶಿಲುಬೆ"ಯು ಸಾರಲಡುವುದಿಲ್ಲ. "ಪಾಪ" "ಪರಲೋಕ", "ನರಕ" "ಮಾನಸಾಂತರ" ಈ ಪದಗಳು ದಾಟಿಹೋದ ದಿನಗಳದ್ದಾಗಿವೆ. ಸೂಚನೆಗಳು, ಸ್ವಸ್ಥತೆಗಳು, ಅದ್ಭುತ ಕಾರ್ಯಗಳು, ಹಾಗೂ ಆತ್ಮನವರಗಳು ಇವೆಲ್ಲವೂ ಹೊಳಪು ಬೆಳಕುಗಳು, ಪ್ರತಿಭಾನ್ವಿತ ವಿಖ್ಯಾತರು ಹಾಗೂ ನಟರು ಹಾಗೂ ಶೃಂಗರಿಸಲ್ಪಟ್ಟ ವೇದಿಕೆಗಳಿಂದ ಸ್ಥಾನ ಪಲ್ಲಟವಾಗಿವೆ. ಯೇಸುಕ್ರಿಸ್ತನ ಸುವಾರ್ತೆಯ ಬೋಧನೆಗೆ, ಹಾಗೂ ದೇವರ ರಾಜಿಯಾಗದ ವಾಕ್ಯದ ಬೋಧನೆಗೆ ಏನಾದರೂ ಸಂಭವಿಸಬಹುದು!

ದೇವರ ವಾಕ್ಯದ ಒಬ್ಬ ಭೋಧಕನಾಗಿರುವುದು ಯಾವರೀತಿಯ ಭ್ರಾಂತಿಯ ಸ್ಥಾನ, ಅಥವಾ ಪಾತ್ರವಲ್ಲ. ಇದು ಒಂದು ಉನ್ನತ ಕರೆಯ ಒಂದು ಪ್ರತಿ ಕ್ರಿಯೆಯಾಗಿರುತ್ತದೆ. ಇದು ಉನ್ನತ ಮಟ್ಟಗಳಿಂದ ಜೀವಿಸಲು ಹಾಗೂ ಕಟ್ಟುನಿಟ್ಟಿನ ಮಾನಗಳಿಂದ ತಿರ್ಪುಮಾಡಲ್ಪಡಲು ಇಚ್ಛೆ ಪಡುವಂಥದ್ದಾಗಿದೆ. *"ನನ್ನ ಸಹೋದರರೇ ಬೋಧಕರಾದ ನಮಗೆ ಕಠಿಣ ತೀರ್ಪು ಆಗುವುದೆಂದು ತಿಳಿದುಕೊಂಡು ಬಹುಮಂದಿ ಬೋಧಕರಾಗ ಬೇಡಿರಿ"* (ಯೋಕೋಬನು 3:1). ಇದಕ್ಕೆ ನಾವು ಸಿದ್ಧರಾಗಿಲ್ಲದಿದ್ದರೆ, ಆಗ ನಾವು ಬೋಧಿಸುವುದು ಅಗತ್ಯವಿಲ್ಲ!

## ದೇವರ ವಾಕ್ಯದಲ್ಲಿ ಜನರನ್ನು ಸ್ಥಿರಪಡಿಸಿರಿ

**"ನಾನೀಗ ನಿಮ್ಮನ್ನು ಕರ್ತನಿಗೂ ಆತನ ಕೃಪಾವಾಕ್ಯಕ್ಕೂ ಒಪ್ಪಿಸಿಕೊಡುತ್ತೇನೆ. ಆತನು ನಿಮ್ಮಲ್ಲಿ ಭಕ್ತಿವೃದ್ಧಿಯನ್ನುಂಟು ಮಾಡುವದಕ್ಕೂ ಪವಿತ್ರರಾದವರೆಲ್ಲರಲ್ಲಿ ನಿಮಗೆ ಹಕ್ಕನ್ನು ಅನುಗ್ರಹಿಸುವದಕ್ಕೂ ಶಕ್ತನಾಗಿದ್ದಾನೆ"**... (ಅಪೊಸ್ತಲರ ಕೃತ್ಯಗಳು 20:32).

**"ನಾವು ಇನ್ನು ಮೇಲೆ ಕೂಸುಗಳಾಗಿರಬಾರದು; ದುರ್ಜನರ ವಂಚನೆಗೂ ದುರ್ಬೋಧಕರ ಕುಯುಕ್ತಿಗೂ ಒಳಬಿದ್ದು ನಾನಾ ಉಪದೇಶಗಳಿಂದ ಕಂಗೆಟ್ಟು ಗಾಳಿಯಿಂದ ಅತ್ತಿತ್ತ ನೂಕಿಸಿಕೊಂಡು ಹೋಗುವವರ ಹಾಗಿರಬಾರದು"** (ಎಫೆಸದವರಿಗೆ 4:14).

ಎಫೆಸ ಸಭೆಯ ಹಿರಿಯರಿಗೆ ಪೌಲನ ಅಂತಿಮ ಬುದ್ಧಿವಾದದಲ್ಲಿ ಅವನು ದೇವರ ಕಡೆಗೆ ಹಾಗೂ ದೇವರ ವಾಕ್ಯದ ಕಡೆಗೆ ಅವರಿಗೆ ತೋರಿಸಿದನು, ಏಕೆಂದರೆ, ಇದು ಅವರನ್ನು ಕಟ್ಟಲು ಸಮರ್ಥವಾಗಿತ್ತು. ಈ ದಿನವೂ ಕೂಡಾ ದೇವ ಸೇವಕರಾಗಿ ನಮ್ಮ ಉದ್ದೇಶಗಳಲ್ಲಿ ಒಂದು ಯಾವುದೆಂದರೆ, ದೇವರ ವಾಕ್ಯದಲ್ಲಿ ಜನರನ್ನು ಸ್ಥಿರ ಪಡಿಸುವುದಾಗಿದೆ. ವಾಕ್ಯವು ಅವರನ್ನು ಬೆಳೆಸುತ್ತದೆ, ಹಾಗೂ ಅವರನ್ನು ಅವರ ಬಾಧ್ಯತೆಯೊಳಕ್ಕೆ ಬರುವಂತೆ ಸಮರ್ಥರನ್ನಾಗಿಸುತ್ತದೆ. ನಾವು ಮನರಂಜನೆ ಮಾಡಲು, ವಿನೋದ ಉಂಟು ಮಾಡಲು ಹಾಗೂ ಜನರು ಚೆನ್ನಾಗಿರುವ ಭಾವನೆ ಹೊಂದುವಂತೆ ಮಾಡಲು ಅಥವಾ ನಮ್ಮ ಉತ್ತಮ ಭಾಷಣಗಳಿಂದ ಪ್ರಭಾವಿತರನ್ನಾಗಿ ಮಾಡಲು, ಇಲ್ಲಿ ಇಲ್ಲ. ನಾವು ನಮ್ಮ ನಿದರ್ಶನಗಳು ಹಾಗೂ ಕತೆಗಳಿಂದ ಮನಸ್ಸುಗಳನ್ನು ಉತ್ತೇಜಿಸಲು ಇಲ್ಲಿ ಇಲ್ಲ. ಇವೆಲ್ಲವೂ ವ್ಯರ್ಥವಾದವುಗಳೇ, ಇದರ ಅಂತ್ಯ ಆಗಿದ್ದರೆ, ಜನರು ದೇವರ ವಾಕ್ಯದಲ್ಲಿ ಸ್ಥಿರವಾಗಿರಲಾರರು. ಜನರು ದೇವರ ವಾಕ್ಯದಲ್ಲಿ ಸ್ಥಿರವಾಗಿದ್ದರೆ ಮಾತ್ರ ಅವರು ದೃಢವಾಗಿ ಭದ್ರವಾಗಿರಲು ಸಮರ್ಥರಾಗಿರುತ್ತಾರೆ, ಬೀಸುವ ಪ್ರತಿಯೊಂದು ವಂಚನೆಯ ಸಿದ್ಧಾಂತದ ಗಾಳಿಯಿಂದ ಅತ್ತಿತ್ತ ನೂಕಿಸಿಕೊಳ್ಳುವುದಿಲ್ಲ.

## ಶುದ್ಧವಾಗಿರಿ, ಪೂಜ್ಯ ಭಾವವುಳ್ಳವರಾಗಿರಿ, ನಿಷ್ಕಪಟರಾಗಿರಿ, ಹಿತಕರವುಳ್ಳವರಾಗಿರಿ

**"ಸತ್ಕಾರ್ಯ ಮಾಡುವುದರಲ್ಲಿ ನೀನೇ ಮಾದರಿಯಾಗಿರು. ನೀನು ಮಾಡುವ ಉಪದೇಶದಲ್ಲಿ ಯಥಾರ್ಥತ್ವವೂ ಗೌರವವೂ ಆಕ್ಷೇಪಣೆಗೆ ಆಸ್ಪದವಿಲ್ಲದಂಥ ಸ್ವಸ್ಥ ಬುದ್ಧಿಯೂ ಇರಬೇಕು; ಆಗ ನಮ್ಮನ್ನು ಎದುರಿಸುವವರು ನಮ್ಮ ವಿಷಯದಲ್ಲಿ ಕೆಟ್ಟದ್ದೇನೂ ಹೇಳುವುದಕ್ಕೇ ಅವಕಾಶವಿಲ್ಲದೆ ನಾಚಿಕೊಳ್ಳುವರು"** (ತಿತನಿಗೆ 2:7–8).

ಅಪೊಸ್ತಲನಾದ ಪೌಲನು ದೇವರ ವಾಕ್ಯದ ಸೇವೆಯಲ್ಲಿ ನಾವು ನಿಭಾಯಿಸುವ ಮಟ್ಟವನ್ನು ಸ್ಪಷ್ಟ ಪಡಿಸುತ್ತಾನೆ. ಅವನು ಇದಕ್ಕಾಗಿ ಕರೆಯುತ್ತಾನೆ;

- ಪ್ರಾಮಾಣಿಕತೆ—ಶುದ್ಧತ್ವ ಹಾಗೂ ತಪ್ಪಿಲ್ಲದೆ ಇರುವುದು. ನಾನು ಸುಳ್ಳನ್ನು ಬೋಧಿಸಬಾರದು ಹಾಗೂ ಉಪದೇಶಿಸಬಾರದು. ನಾನು ಕಟ್ಟುಕತೆ ಹಾಗೂ ಮಾನವ ನಿರ್ಮಿತ ಕತೆಗಳನ್ನು ಸಾರಬಾರದು ಸತ್ಯ ವೇದದ ವಿರುದ್ಧವಾಗಿರುವ ಯಾವುದೇ ಆದರೂ ಅಸತ್ಯವೇ.

- ಪೂಜ್ಯ ಭಾವನೆ—ಗೌರವ, ಸಂದೇಶವು ಯಾವರೀತಿಯಲ್ಲಿ ತಿಳಿಸಲ್ಪಡುತ್ತದೋ, ಅದು ಗೌರವದೊಂದಿಗೆ ಆಗಬೇಕು, ಹಾಗೂ ಪ್ರೇಕ್ಷಕರಿಂದ (ಸಭಿಕರಿಂದ) ಗೌರವವು ಹೊರಬರಬೇಕು, ನಾನು ಅಗ್ಗವಾದ ಮಾತುಗಳನ್ನು ಬಳಸಬಾರದು ಅಥವಾ ನಾನು ದೇವರ ವಾಕ್ಯ ಸೇವೆ ಮಾಡುವಾಗ ಏನು ಮಾಡುತ್ತೇನೋ ಅದನ್ನು ಬೆಳಕಿಗೆ ತರಬಾರದು. ನಾನು ಶಾಂತವಾಗಿರಲು", ಚೆನ್ನಾಗಿ ಕಾಣಲು, ಹಾಗೂ ನನ್ನ ಸಭಿಕರಿಂದ ಅಂಗೀಕರಿಸಲ್ಪಡುಡುವ ಭಾವನೆ ಹೊಂದಲು ಪ್ರಯತ್ನಿಸುವದಕ್ಕೆ ಇಲ್ಲಿ ಇಲ್ಲ. ನಾನು ಒಂದು ಪೂಜ್ಯ ಭಾವನೆಯ ಹಾಗೂ ದೇವರ ಮತ್ತು ಆತನ ವಾಕ್ಯದ ಭಯಭರಿತ ಸ್ಥಿತಿಯ ಗ್ರಹಿಕೆಯನ್ನು ನಾನು ಸೇವೆಮಾಡುತ್ತಿದ್ದಂತೆ ಸಾಗಿಸ ಬೇಕು.

- ಲಂಚಕ್ಕೆ ವಶವಾಗದೆ ಇರುವುದು—ನಿಷ್ಕಪಟತೆ, ನಾನು ನಂಬದೆ ಇರುವ ಏನನ್ನಾದರೂ ಬೋಧಿಸಲು ನನಗೆ ಸಾಧವಿಲ್ಲ. ನಾನು ಜೀವಿಸದೆ ಇರುವ ಹಾಗೂ ನನ್ನ ಸ್ವಂತ ಜೀವಿತದಲ್ಲಿ ರೂಢಿ ಮಾಡದೆ ಇರುವ ಯಾವುದನ್ನೂ ನಾನು ಬೋಧಿಸಲಾರೆನು, ನಾನು ಕೇವಲ "ಒಳ್ಳೇ ಭಾವನೆ ಹೊಂದಿರುವ" ಸಂದೇಶವನ್ನು ಮಾತ್ರ ಕೊಡಲಾರೆನು; ಅಂದರೆ, ಹೇಗಾದರೂ ಸಂಪೂರ್ಣವಾಗಿ ಯೋಗ್ಯವಾದ ಹಾಗೂ ಆಶ್ರಯ ಹೊಂದದೆ ಇರುವ ಒಂದು ಉತ್ತಮ ಅಭಿಪ್ರಾಯವನ್ನು ಬೋಧಿಸಲಾರೆನು.

- ಆರೋಗ್ಯಕರವಾದ ಮಾತು ದೋಷಾರೋಪಣೆಗೊಳಗಾಗುವದಿಲ್ಲ—ಹಿತಕರವಾದ ನುಡಿಗಳು, ನಾನು ಬಳಸುವ ನುಡಿಗಳು ಹಾಗೂ ನಾನು ಮಾತನಾಡುವ ರೀತಿಯು ದೋಷಮುಕ್ತವಾಗಿರಬೇಕು. ಜನರು ಅದರಲ್ಲಿ ತಪ್ಪು ಕಂಡುಕೊಳ್ಳಲಾರರು.

## ತಿಳಿಸಲು ಉಪದೇಶಿಸಿರಿ, ಪ್ರಭಾವ ಬೀರುವುದಕ್ಕಾಗಿ ಅಲ್ಲ

**"ಆದರೆ ನಾವು ದೇವರ ವಾಕ್ಯವನ್ನು ಕಲಬೆರಿಕೆ ಮಾಡುವವರಾದ ಹೆಚ್ಚು ಪಾಲನ ಜನರ ಹಾಗಿರದೆ ನಿಷ್ಕಪಟಿಗಳಾಗಿ ದೇವರಿಂದ ಉಪದೇಶಹೊಂದಿದವರಿಗೆ ತಕ್ಕ ಹಾಗೆ ಕ್ರಿಸ್ತನ ಅನ್ಯೋನ್ಯತೆಯಲ್ಲಿದ್ದುಕೊಂಡು ದೇವರ ಸಮಕ್ಷಮದಲ್ಲಿಯೇ ಮಾತಾಡುತ್ತೇವೆ"** (2 ಕೊರಿಂಥದವರಿಗೆ 2:17).

**"ನಾಚಿಕೆಯನ್ನು ಹುಟ್ಟಿಸುವ ಗುಪ್ತ ಕಾರ್ಯಗಳನ್ನು ನಾವು ಬಿಟ್ಟು ಬಿಟ್ಟು ತಂತ್ರದಲ್ಲಿ ನಡೆಯದೆ ದೇವರ ವಾಕ್ಯವನ್ನು ಕೆಡಿಸದೆ ಸತ್ಯವನ್ನು ಪರಿಷ್ಕಾರವಾಗಿ ಬೋಧಿಸುತ್ತಾ ನಾವು ಸಜ್ಜನರೆಂದು ಪ್ರತಿ ಮನುಷ್ಯನ ಮನಸ್ಸು ದೇವರ ಮುಂದೆ ಒಪ್ಪಬೇಕಾದ ರೀತಿಯಲ್ಲಿ ನಡೆಯುತ್ತೇವೆ"** (2 ಕೊರಿಂಥದವರಿಗೆ 4:2).

ದೇವರ ವಾಕ್ಯವನ್ನು ನಾವು ಬೋಧಿಸುವುದರಲ್ಲಿ ಹಾಗೂ ಸೇವೆಮಾಡುವುದರಲ್ಲಿ ನಮ್ಮ ಪ್ರಚೋದನೆಯು ಜೀವಿತದ ರೂಪಾಂತರದಲ್ಲಿ ಸತ್ಯವನ್ನು ಹಾಗೂ ಪ್ರಕಟಣೆಯಲ್ಲಿ ಪಾಲುಕೊಡುವುದು ಆಗಿರುತ್ತದೆ. ಮೊದಲಾಗಿ ನಮ್ಮ ಪ್ರಚೋದನೆಯು ಜನರನ್ನು ಪ್ರಭಾವಕ್ಕೊಳಪಡಿಸುವುದಾದರೆ, ಅವರು ನಮ್ಮನ್ನು ಒಂದು ಉತ್ತಮ ಸಂದೇಶವೆಂದು ಬೆನ್ನನ್ನು ಚಪ್ಪರಿಸುತ್ತಾರೆ, ಆಗ ನಾವು "ದೇವರ ವಾಕ್ಯದ ಸೇವೆ ಮಾಡುವ ಇಡಿ ಉದ್ದೇಶವನ್ನು ಕಳೆದುಕೊಳ್ಳುತ್ತೇವೆ.

"ದೇವರ ವಾಕ್ಯವನ್ನು ಸ್ಥಳದಿಂದ ಸ್ಥಳಕ್ಕೆ" ಕೊಂಡೊಯ್ಯುವುದರಿಂದ ನಾವು ದೂರವಾಗಿರಬೇಕು ಇಲ್ಲಿನ ಅಭಿಪ್ರಾಯವೇನೆಂದರೆ, ಒಬ್ಬ ದ್ರಾಕ್ಷಾರಸದ ಅಂಗಡಿಯಾತನು ದ್ರಾಕ್ಷಾರಸವನ್ನು ತೆಳ್ಳಗೆ ಮಾಡಿ ಅಥವಾ ಯೋಗ್ಯವಾದ ದ್ರಾಕ್ಷಾರಸದ ಬದಲು ಬೇರೆ ಇತರ ಪದಾರ್ಥಗಳನ್ನು ಬೆರಸುತ್ತಾನೆ. ಹೀಗೆ ದೇವರ ವಾಕ್ಯದ ಸೇವೆಯಲ್ಲಿ ಎರಡು ವಿಷಯಗಳು ಪ್ರಾಮುಖ್ಯವಾದವುಗಳಾಗಿವೆ; ತೆಳ್ಳಗೆ ಮಾಡುವಂತಿಲ್ಲ ಹಾಗೂ ಬೆರಕೆ ಮಾಡುವಂತಿಲ್ಲ. ವಿಷಯಗಳನ್ನು ಸ್ಪಷ್ಟವಾಗಿ ತಿಳಿಸದೆ ಇರುವುದರಿಂದ ದೇವರ ವಾಕ್ಯವನ್ನು ತೆಳ್ಳಗೆ ಮಾಡಬೇಡಿರಿ. ಮನುಷ್ಯನ ಅಭಿಪ್ರಾಯಗಳು ದೇವರ ವಾಕ್ಯದೊಂದಿಗೆ ಬೆರಕೆಮಾಡಬೇಡಿರಿ. ರಾಜಿಯಾಗದ, ತೆಳ್ಳಗಾದ ದೇವರ ವಾಕ್ಯದ ಸೇವೆಗೆ ಸತ್ಯವಾಗಿ ಉಳಿಯಿರಿ.

## ಕಷ್ಟಕರ ವಿಷಯಗಳನ್ನು ಸಂಬೋಧಿಸಿರಿ, ಅದನ್ನು ಪ್ರೀತಿಯಿಂದ ಮಾಡಿರಿ

**"ನಾವೆಲ್ಲರೂ ನಂಬಿಕೆಯಿಂದಲೂ ದೇವಕುಮಾರನ ವಿಷಯವಾದ ಜ್ಞಾನದಿಂದಲೂ ಉಂಟಾಗುವ ಐಕ್ಯವನ್ನು ಹೊಂದಿ ಪ್ರವೀಣತೆಗೆ ಬಂದವರಾಗಿ ಕ್ರಿಸ್ತನ ಪರಿಪೂರ್ಣತೆಯೆಂಬ ಪ್ರಯಾಣವನ್ನು ಮುಟ್ಟುವತನಕ; ನಾವು ಇನ್ನು ಮೇಲೆ ಕೂಸುಗಳಾಗಿರಬಾರದು; ದುರ್ಜನರ ವಂಚನೆಗೂ ದುರ್ಬೋಧಕರ ಕುಯುಕ್ತಿಗೂ ಒಳಬಿದ್ದು ನಾನಾ ಉಪದೇಶಗಳಂದ ಕಂಗೆಟ್ಟು ಗಾಳಯಿಂದ ಅತ್ತಿತ್ತ ನೂಕಿಸಿಕೊಂಡು ಹೋಗುವವರ ಹಾಗಿರಬಾರದು. ಪ್ರೀತಿಯಿಂದ ಸತ್ಯವನ್ನನುಸರಿಸುತ್ತಾ ಬೆಳೆದು ಎಲ್ಲಾ ವಿಷಯಗಳಲ್ಲಿಯೂ ಕ್ರಿಸ್ತನ ಐಕ್ಯವನ್ನು ಹೊಂದುತ್ತಾ ಬರಬೇಕು—ಆತನೇ ಶಿರಸ್ಸು"** (ಎಫೆಸದವರಿಗೆ 4:13–15).

**"ಎಲೈ ಮನುಷ್ಯನೇ, ಅಂಥವುಗಳನ್ನು ನಡಿಸುವವರಲ್ಲಿ ದೋಷವೆಣಿಸಿ ಅವುಗಳನ್ನೇ ಮಾಡುತ್ತಿರುವ ನೀನು ದೇವರ ದಂಡನೆಯ ತೀರ್ಪಿಗೆ ತಪ್ಪಿಸಿಕೊಂಡೇನೆಂದು ಯೋಚಿಸುತ್ತೀಯಾ? ಆತನ ಅಪಾರವಾದ ದಯಾ ಸಹನ ದೀರ್ಘಶಾಂತಿಗಳನ್ನು ಅಸಡ್ಡೆ ಮಾಡುತ್ತೀಯೋ? ಮನಸ್ಸನ್ನು ಬೇರೆ ಮಾಡಿಕೊಳ್ಳುವದಕ್ಕೆ ದೇವರ ಉಪಕಾರವು ಬೇರೆ ಮಾಡಿಕೊಳ್ಳುವದಕ್ಕೆ ದೇವರ ಉಪಕಾರವು ನಿನ್ನನ್ನು ಪ್ರೇರಿಸುತ್ತದೆಂಬದು ನಿನಗೆ ಗೊತ್ತಿಲ್ಲವೇ?** (ರೋಮಾಪುರದವರಿಗೆ 2:3–4).

ಪ್ರತಿಯೊಬ್ಬರೂ ಒಂದು ಉತ್ತಮವಾದ, ಸಮರ್ಪಕವಾದ ಮೇಲೆತ್ತುವ ಸಂದೇಶವನ್ನು ನಿರೀಕ್ಷೆ ಅಥವಾ ನಂಬಿಕೆ ಅಥವಾ ಯಶಸ್ಸು ಅಥವಾ ಆಶೀರ್ವಾದದ ಮೇಲೆ ಆನಂದಿಸುವಾಗ, ನಾವೂ ಕೂಡಾ ವೈಯಕ್ತಿಕ ಸ್ವಭಾವ, ಲೈಂಗಿಕ ಶುದ್ಧತೆ, ವಿವಾಹದಲ್ಲಿ ನಿಷ್ಠೆ, ಆರ್ಥಿಕ ವಿಷಯಗಳಲ್ಲಿ ಯಥಾರ್ಥತೆ, ಇತರರನ್ನು ಕ್ಷಮಿಸುವುದು, ತ್ಯಾಗ, ಮುಂತಾದ ಇತರ ಅಂಶಗಳನ್ನು ಸಂಬೋಧಿಸಬಹುದು. ಇವುಗಳಲ್ಲಿ ಕೆಲವು ಪ್ರಸಂಗ ಪೀಠದಿಂದ ಮಾತನಾಡಲು ಕಷ್ಟವಾಗಬಹುದು. ಹೇಗಾದರೂ ನಾವು ಪ್ರೀತಿಯಿಂದ ಸತ್ಯವನ್ನು ಮಾತನಾಡಬೇಕು, ಇದರಿಂದ ನಾವು ಎಲ್ಲರೂ ಯೇಸುವಿನ ರೀತಿಯಲ್ಲಿ ಆಗಲು ಎಲ್ಲಾ ವಿಷಯಗಳಲ್ಲಿ ಬೆಳೆಯಲು ಸಾಧ್ಯ, ಆಧಾರವೇನೆಂದರೆ, ಇದನ್ನು ನಾವು ಪ್ರೀತಿಯಿಂದ ಮಾಡಬೇಕು, ತೀರ್ಪಿನ ರೀತಿಯಲ್ಲಲ್ಲ. ಈ ತಪ್ಪನ್ನು ನಾನು ಹಲವಾರು ಸಾರಿ ಮಾಡಿರುತ್ತೇನೆ, ನನ್ನ ಉದ್ದೇಶವು ದೈವಿಕ ಮಟ್ಟಗಳ ಬೋಧನೆ ಮಾಡಬೇಕೆಂದಿರುವಾಗ, ನಾನು ಸಂಪರ್ಕಿಸಿದ ರೀತಿಯು ತೀರ್ಪು ಮಾಡುವ ರೀತಿಯಾಗಿದ್ದು, ಜನರ ಮೇಲೆ ದೋಷಾರೋಪಣೆ ಉಂಟಾಗುವಂತಾಗಿತ್ತು. ಆದುದರಿಂದ ಸಮಯದಾಟಿದಂತೆ, ನಾನು ಜಾಗರೂಕನಾಗಿರಲು ಕಲಿತೆನು

ಹಾಗೂ ಕಷ್ಟದ ವಲಯಗಳ ಕುರಿತಾಗಿ ನಾನು ಸತ್ಯವನ್ನು ಆಡಿದೆನು ಎಂಬುದನ್ನು ದೃಢ ಪಡಿಸಲು ಪ್ರಯತ್ನಿಸಿದೆನು, ಆದರೆ, ಇದನ್ನು ದೇವರ ಒಳ್ಳೇತನದೊಂದಿಗೆ ಮಾಡಿದೆನು. ಬೆಂಕಿ ಹಾಗೂ ಗಂಧಕವನ್ನು ಕಕ್ಕುವುದರಿಂದ ಜನರನ್ನು ದೂರಕ್ಕೆ ತಳ್ಳುವವರಾಗುತ್ತೇವೆ. ಜನರನ್ನು ಮಾನಸಾಂತರಕ್ಕೆ ನಡಿಸುವುದು ದೇವರ ಒಳ್ಳೇತನವಾಗಿರುತ್ತದೆ.

ಇಂಥಾ ವಿಷಯಗಳನ್ನು ಸಂಬೋಧಿಸುವಾಗ, ನಾವು ಇಂಥ ಸಂಗತಿಗಳೊಂದಿಗೆ ಹೋರಾಡುತ್ತೇವೆ, ಹಾಗೂ ನಾವೇ ಪರಿಪೂರ್ಣರಾಗಿಲ್ಲ ಎಂದು ಜನರು ತಿಳಿಯುವಂತೆ ಮಾಡುವುದು ಪ್ರಾಮುಖ್ಯವಾದದ್ದು. ನಾವು ಅದೇ ಪಿಶಾಚನನ್ನು, ಅದೇ ಶೋಧನೆಗಳನ್ನು ಹಾಗೂ ಅದೇ ಸವಾಲುಗಳನ್ನು ಎದುರಿಸುತ್ತೇವೆ. ನಾವು ಇನ್ನೂ ಪರಿಪೂರ್ಣರಾಗಿ ಮಾಡಲ್ಪಟ್ಟಿಲ್ಲ, ಆದರೆ ಪರಿಪೂರ್ಣತೆಯ ಕಡೆಗೆ ಹೆಣಗುತ್ತಿದ್ದೇವೆ ಹಾಗೂ ಕ್ರಿಸ್ತನಂತೆ ಆಗುವಕಡೆಗೆ ನಮ್ಮ ಈ ಪ್ರಯಾಣದಲ್ಲಿ ನಮ್ಮೊಂದಿಗೆ ಕೂಡಿಕೊಳ್ಳಲು ಇತರರನ್ನು ನಾವು ಪ್ರೋತ್ಸಾಹಿಸುತ್ತಿದ್ದೇವೆ. ನಾವು ಪರಿಪೂರ್ಣರಂತೆ ಕಾಣಿಸಿಕೊಳ್ಳುವ ರೀತಿಯಲ್ಲಿ ಮಾಡಲು, ಅವೆಲ್ಲವನ್ನೂ ಒಟ್ಟಾಗಿ ಹೊಂದಿದ್ದೇವೆಂಬಂತೆ ಹಾಗೂ ಸಹಾಯದ ಅಗತ್ಯತೆ ಇರುವವರಾದ ಅಲ್ಪಾಯುಷಿಗಳೊಡನೆ ನಾವು ಮಾತನಾಡುತ್ತೇವೆ. ಇಲ್ಲಿ ಮತ್ತೆ ನಾನು ವಿಷಯಗಳನ್ನು ಸಂಪರ್ಕಿಸುವೆನೆಂಬ ರೀತಿಯಲ್ಲಿ ತಪ್ಪುಗಳನ್ನು ಮಾಡಿರುತ್ತೇನೆ ಹಾಗೂ ತಿಳುವಳಿಕೆ ಹೊಂದುವ ಮತ್ತು ನಮ್ರತೆ ತಾಳದ ರೀತಿಯಲ್ಲಿ ಹೇಗೆ ಮಾತನಾಡಬೇಕೆಂದು ಕಲಿಯಬೇಕಾಗಿದೆ. ಜ್ಞಾನೋಕ್ತಿಗಳಲ್ಲಿ ಹೇಳುವಂತೆ, *"ಜ್ಞಾನ ಹೃದಯರಿಗೆ ಜಾಣರೆಂಬ ಬಿರುದು ಬರುವುದು, ಸವಿತುಟಿಯವರಿಗೆ ಉಪದೇಶ ಶಕ್ತಿಯು ಹೆಚ್ಚುವುದು"* (ಜ್ಞಾನೋಕ್ತಿಗಳು 16:21).

## ವಾಕ್ಯವನ್ನು ಸರಿಯಾಗಿ ವಿಭಾಗಿಸಿರಿ ಸ್ವಸ್ಥ ಬೋಧನಾ ಸಿದ್ಧಾಂತವನ್ನು ನಿಭಾಯಿಸಿರಿ

**"ನೀನು ಕ್ರಿಸ್ತಯೇಸುವಿನಲ್ಲಿ ನಂಬಿಕೆಯೂ ಪ್ರೀತಿಯೂ ಉಳ್ಳವನಾಗಿ ನನ್ನಿಂದ ಕೇಳಿದ ಸ್ವಸ್ಥ ಬೋಧನಾ ವಾಕ್ಯಗಳನ್ನು ಮಾದರಿಮಾಡಿಕೊಂಡು ಅನುಸರಿಸು. ನಿನ್ನ ವಶಕ್ಕೆ ಕೊಡಲ್ಪಟ್ಟಿರುವದನ್ನು ಶ್ರೇಷ್ಠವೆಂದು ತಿಳಿದು ನಮ್ಮಲ್ಲಿ ವಾಸವಾಗಿರುವ ಪವಿತ್ರಾತ್ಮನ ಮೂಲಕ ಕಾಪಾಡು"** (2 ತಿಮೊಥೆಯನಿಗೆ 1:13–14).

**"ನೀನು ದೇವರ ದೃಷ್ಟಿಗೆ ಯೋಗ್ಯನಾಗಿ ಕಾಣಿಸಿಕೊಳ್ಳುವದಕ್ಕೆ ಪ್ರಯಾಸಪಡು. ಅವಮಾನಕ್ಕೆ ಗುರಿಯಾಗದ ಕೆಲಸದವನೂ ಸತ್ಯವಾಕ್ಯವನ್ನು ಸರಿಯಾಗಿ ಉಪದೇಶಿಸುವವನೂ ಆಗಿರು"** (2 ತಿಮೊಥೆಯನಿಗೆ 2:15).

**"ನಿನ್ನ ವಿಷಯದಲ್ಲಿಯೂ ನಿನ್ನ ಉಪದೇಶದ ವಿಷಯದಲ್ಲಿಯೂ ಎಚ್ಚರಿಕೆಯಾಗಿರು. ನೀನು ಈ ಕಾರ್ಯಗಳಲ್ಲಿ ನಿರತನಾಗಿರು; ಹೀಗಿರುವದರಿಂದ ನಿನ್ನನ್ನೂ ನಿನ್ನ ಉಪದೇಶ ಕೇಳುವವರನ್ನೂ ರಕ್ಷಿಸುವಿ"** (1 ತಿಮೊಥೆಯನಿಗೆ 4:16).

**" ನೀನಾದರೋ ಸ್ವಸ್ಥ ಬೋಧನೆಗೆ ಅನುಗುಣವಾಗಿ ಉಪದೇಶ ಮಾಡು."** (ತೀತನಿಗೆ 2:1).

ಸತ್ಯ ವಾಕ್ಯವನ್ನು ಸರಿಯಾಗಿ ವಿಭಾಗಿಸುವ ದೇವರ ವಾಕ್ಯದ ಸೇವಕರಾದ ನಾವು ಹೊಂದಿರುವ ಗಂಭೀರವಾದ ಹೊಣೆಗಾರಿಕೆ ಇದಾಗಿದ್ದು, ಸರಿಯಾಗಿ ವಿಷಯಗಳನ್ನು ಮುರಿದು ಹಾಕಲು, ಭಾಷಾಂತರಿಸಿ ಜನರಿಗೆ ಅರ್ಥವಾಗುವಂತೆ, ತೆಳ್ಳಗೆ ಅಥವಾ ಇತರ ವಿಷಯಗಳನ್ನು ಬೆರೆಸದೆ ಮಾಡುವಂಥದ್ದಾಗಿದೆ. ನಾವು ಅಭಿಪ್ರಾಯಗಳನ್ನು ಹಾಗೂ ಸತ್ಯ ವೇದದಲ್ಲಿ ನಾವು ಓದುವ ಕತೆಗಳ ಆಧಾರದ ಮೇಲಿನ ವಿಷಯಗಳನ್ನು ಮಾಟಮಾಡದೆ ನಮ್ಮ ಸ್ವಂತ ಊಹೆಗಳ ಮೇಲೆ ಬೋಧಿಸುತ್ತೇವೆ ಎಂಬುದು ಮುಖ್ಯವಾದುದು. ಸತ್ಯವೇದದ ಭಾಷಾಂತರಕ್ಕೆ ಸರಿಯಾದ ನಿಯಮಗಳನ್ನು ಅನುಸರಿಸುವುದು ಮುಖ್ಯವಾದದ್ದು ಹಾಗೂ ಸತ್ಯವೇದದ ಪರಿಪೂರ್ಣತೆಯ ಬೆಳಕಿನಲ್ಲಿ ವಿಷಯಗಳನ್ನು ನೋಡುವುದು, ಆದರೆ ಪ್ರತ್ಯೇಕವಾದ ಉಲ್ಲೇಖಗಳ ಮೇಲೆ ಆಧಾರಗೊಳ್ಳದಿರುವುದು ಮುಖ್ಯವಾದದ್ದು. ಸತ್ಯವೇದವೇ, ಸತ್ಯ ವೇದವನ್ನು ಭಾಷಾಂತರಿಸಲು ನಾವು ಬಿಡಬೇಕು. ನಾವು ನಮ್ಮ ಸ್ವಂತ ಜೀವಿತಗಳ ಮೇಲೆ ನಾವು ಏನು ಬೋಧಿಸುತ್ತೇವೆಂಬುದರ ಮೇಲೆ ಎಡೆಬಿಡದೆ ನಿಗಾವಹಿಸಬೇಕು. ನಾವು ಬೋಧಿಸುವ ಹಾಗೂ ಉಪದೇಶಿಸುವಂಥದ್ದು ಸ್ಫುಟವಾಗಿಯೂ, ಹಿತಕರವಾಗಿಯೂ ನಾವು ಹೀಗೆ ಮಾಡುವುದನ್ನು ಮುಂದುವರಿಸಿದರೆ, ನಾವು ನಮ್ಮ ಸ್ವಂತಿಕೆಯನ್ನು ಹಾಗೂ ನಮ್ಮನ್ನು ಕೇಳುವ ಜನರನ್ನು ರಕ್ಷಿಸಿಕೊಳ್ಳಲು ಸಾಧ್ಯ. ಯಾವುದಾದರೂ ಸ್ವಸ್ಥ ಬೋಧನಾ ಸಿದ್ಧಾಂತವೆಂಬುದರ ಬಗ್ಗೆ ನೀವು ನಿಶ್ಚಯವಾಗಿಲ್ಲದಿದ್ದರೆ, ಆಗ ದೇವರ ಒಬ್ಬ ಪ್ರೌಢ ಸೇವಕನೂ ವಾಕ್ಯದಲ್ಲಿ ಬಲವಾಗಿರುವವನೂ ಆದವನೊಂದಿಗೆ ಚರ್ಚಿಸಿರಿ. ನೀವು ಬೋಧಿಸುವ ಹಾಗೂ ಉಪದೇಶಿಸುವ ವಿಷಯಗಳ ಮೇಲೆ ನಿಗಾ ಇಡಿರಿ.

# ನಿಯಮದ ಮೇಲೆ ನಿಯಮವನ್ನು ನಿರ್ಮಿಸಿರಿ

**"ಇವನು ಹರಟಿಕೊಳ್ಳುವುದೇನಂದರೆ—ಇವನು ಯಾರಿಗೆ ಜ್ಞಾನವನ್ನು ಬೋಧಿಸುತ್ತಾನೆ? ಇವನು ಯಾರಿಗೆ ಯೆಹೋವನ ಮಾತನ್ನು ತಿಳಿಯಪಡಿಸುತ್ತಾನೆ? ಮೊಲೆ ಬಿಟ್ಟ ಕೂಸುಗಳಿಗೋ? ಎದೆ ಬಿಟ್ಟ ಮಕ್ಕಳಿಗೋ? ಆಜ್ಞೆಯ ಮೇಲೆ ಆಜ್ಞೆ, ಆಜ್ಞೆಯ ಮೇಲೆ ಆಜ್ಞೆ, ಸೂತ್ರದ ಮೇಲೆ ಸೂತ್ರ, ಸೂತ್ರದ ಮೇಲೆ ಸೂತ್ರ, ಇಲ್ಲಿ ಸ್ವಲ್ಪ, ಅಲ್ಲಿ ಸ್ವಲ್ಪ, ಪ್ರಕಟಿಸುತ್ತಾನಲ್ಲಾ ಇತ್ಯಾದಿ"** (ಯೆಶಾಯ 28: 9–10).

ದೇವರು ನಮ್ಮೊಂದಿಗೆ ಸಣ್ಣಮಕ್ಕಳನ್ನು ನಡೆಸಿಕೊಳ್ಳುವ ನಡೆಸಿಕೊಳ್ಳುವ ರೀತಿಯಲ್ಲಿ ನಡೆಸಿಕೊಳ್ಳುತ್ತಾ, ನಿಯಮದ ಮೇಲೆ ನಿಯಮ, ಸಂತತಿಯ ಮೇಲೆ ಸಂತತಿಕರನ್ನು ನೀಡುತ್ತಾನೆ. ಆತನು ನಮಗೆ ಸತ್ಯದ ಅಲ್ಪ ತಿಳುವಳಿಕೆಯನ್ನು ನೀಡುತ್ತಾನೆ. ಹಾಗೂ ಅದಕ್ಕೆ ಮತ್ತೆ ಸೇರಿಸುತ್ತಾನೆ, ಹಾಗೂ ಆ ಸತ್ಯದಲ್ಲಿ ನಮ್ಮ ತಿಳುವಳಿಕೆ ಹಾಗೂ ಅನುಭವ ಬೆಳೆದಂತೆ ಮುಂದುವರಿಸುತ್ತಾನೆ. ಇದು ನಮಗಾಗಿ ಕಲಿಯಲು ಒಂದು ಉತ್ತಮವಾದ ಪಾಠವಾಗಿರುತ್ತದೆ. ನಾವು ಸಂತತಿ ಸಂತತಿಯಾಗಿ, ಸ್ವಲ್ಪ ಸ್ವಲ್ಪವಾಗಿ, ಸತ್ಯವನ್ನು ನಾವು ಪ್ರತ್ಯೇಕಿಸುವ ಅಗತ್ಯವಿದೆ, ಇದರಿಂದ, ಜನರು ಆ ಸತ್ಯದಲ್ಲಿ ಬೆಳೆಯಲು ಸಾಧ್ಯ. ಇದು ನಾವು ಒಟ್ಟಾಗಿ, ಆಳವಾದ, ಸ್ಪಷ್ಟವಾದ, ಸತ್ಯದ ಪ್ರಕಟನೆಯೊಳಕ್ಕೆ ಮಾಡುವ ಒಂದು ಪ್ರಯಾಣವಾಗಿದೆ.

ನಮ್ಮ ಸಭಾಪಾಲಕನ ಸೇವೆಯಲ್ಲಿ ನಮ್ಮಲ್ಲಿ ಹಲವರು ಇದನ್ನು ಅನುಭವಿಸಿರುವುದು ನಿಶ್ಚಯ ಒಂದು ನಿರ್ದಿಷ್ಟವಾದ ವಿಷಯದ ಮೇಲೆ ನಾವು ಮೊದಲ ಸಾರಿ ಹಂಚಿ ಕೊಂಡಾಗ, ಜನರು ಅರ್ಥ ಮಾಡಿಕೊಳ್ಳಲು ಕಷ್ಟ ಪಡುತ್ತಾರೆ. ಇದರಲ್ಲಿ ಬಹಳಷ್ಟು ಪ್ರಶ್ನೆಗಳು ಮತ್ತು ಸಂದೇಹಗಳಿರುತ್ತವೆ. ಸ್ವಲ್ಪ ಸಮಯದನಂತರ, ಅದೇ ವಿಷಯಕ್ಕೆ ನಾವು ಮರು ಭೇಟಿ ಮಾಡುವಾಗ, ಹಾಗೂ ಮುಂದಿನ ಹಂತಕ್ಕೆ ನಾವು ವಿಷಯಗಳನ್ನು ತೆಗೆದು ಕೊಂಡಾಗ, ಜನರು ಸ್ವಲ್ಪ ಮಟ್ಟಿಗೆ ಉತ್ತಮವಾಗಿ ಸತ್ಯವನ್ನು ಗ್ರಹಿಸಿಕೊಳ್ಳಲು ಸಮರ್ಥರಾಗುತ್ತಾರೆ, ಹಾಗೂ ನೀವು ಹಿಂತಿರುಗಿ ಬಂದು ಅಧ್ಯಯನ ಮಾಡುತ್ತಾ ಕಲಿಯುತ್ತಾ, ಸತ್ಯದ ಒಂದು ನಿರ್ದಿಷ್ಟವಲಯದ ಅನುಭವ ಹೊಂದುವಾಗ, ಬೆಳಕು ಪ್ರದೇಶಮಾನವಾಗಿ ಬೆಳಗುತ್ತಾ ಹೋಗುತ್ತದೆ. ವಿಷಯಗಳು ಸ್ಪಷ್ಟವಾಗುತ್ತವೆ. ದೇವರು ಆಸತ್ಯಕ್ಕೆ ಸಂಬಂಧವಾಗಿ ಏನು ಮಾಡಲು ಜನರಿಂದ ಬಯಸುತ್ತಾನೋ,

ಅದನ್ನು ಹೆಚ್ಚಾಗಿ ಉತ್ಪಾದಿಸಲು ಜನರು ಸಮರ್ಥರಾಗುತ್ತಾರೆ. ನಾವು ಅದರಲ್ಲಿ ಮೆಟ್ಟಿಲು ಮೆಟ್ಟಿಲಾಗಿ ಮೇಲಕ್ಕೆ ಬೆಳೆಸುತ್ತೇವೆ.

## ದೇವರ ವಾಕ್ಯವನ್ನು ತಕ್ಕ ರೀತಿ ಸಾರಿರಿ

**"ಬಳಲಿ ಹೋದವರನ್ನು ಮಾತುಗಳಿಂದ ಸುಧಾರಿಸುವುದಕ್ಕೆ ನಾನು ಬಲ್ಲವನಾಗುವಂತೆ ಕರ್ತನಾದ ಯೆಹೋವನು ಶಿಕ್ಷಿತರ ನಾಲಿಗೆಯನ್ನು ನನಗೆ ದಯಪಾಲಿಸಿದ್ದಾನೆ; ಬೆಳಬೆಳಗೂ ನನ್ನನ್ನು ಎಚ್ಚರಿಸಿ ಶಿಕ್ಷಿತರಂತೆ ನಾನು ಕೇಳುವ ಹಾಗೆ ನನ್ನ ಕಿವಿಯನ್ನು ಜಾಗರಗೊಳಿಸುತ್ತಾನೆ"** (ಯೆಶಾಯ 50:4)

**"ಸಮಯೋಚಿತವಾದ ಮಾತುಗಳು ಬೆಳ್ಳಿಯನ ಕಾಸಿಯಲ್ಲಿ ಖಚಿತವಾದ ಬಂಗಾರದ ಹಣ್ಣುಗಳಿಗೆ ಸಮಾನ."** (ಜ್ಞಾನೋಕ್ತಿ 25:11).

ಪ್ರತಿಯೊಂದು ಕಾಲದಲ್ಲಿ ದೇವರು ತನ್ನ ಜನರಿಗೆ ಯಾವ "ನುಡಿ"ಯನ್ನು ಬಿಡುಗಡೆ ಮಾಡಲು ಬಯಸುತ್ತಾನೋ ಅದು ಮುಖ್ಯವಾದುದು. ನೀವೊಬ್ಬ ಸಂಚಾರೀ ಬೋಧಕರಾಗಿದ್ದರೆ ಇದು ಸತ್ಯವಾಗಿರುತ್ತದೆ, ವಿಶೇಷವಾಗಿ, ಒಂದು ಸ್ಥಳೀಯ ಸಭೆಯ ಸಭಾ ಪಾಲಕರಾಗಿ ನೀವಿದ್ದರೆ, ಇದು ನಿಜವಾಗಿರುತ್ತದೆ. ನಾವು ಕೇಂದ್ರೀಕರಿಸಲು ದೇವರು ನಮ್ಮನ್ನು ಯಾವ ವಲಯಗಳಿಗೆ ಬಯಸುತ್ತಾನೋ, ಯಾವ ವಲಯಗಳಲ್ಲಿ ಕಟ್ಟಲು ಹಾಗೂ ಜನರನ್ನು ಬಲಪಡಿಸಲು ಬಯಸುತ್ತಾನೋ ಅದಕ್ಕೆ ನಾವು ಸೂಕ್ಷ್ಮಗ್ರಹಿಗಳಾಗಿರಬೇಕು. ನಾವು ದೇವರನ್ನು ಆಲಿಸಿದರೆ, ಸಕಾಲದಲ್ಲಿ ಆತನು ನಮ್ಮನ್ನು ಒಂದು ನುಡಿಯನ್ನು ತರಲು ಬಲಪಡಿಸುತ್ತಾನೆ. ಜನರು ನಿಮ್ಮ ಬಳಿಗೆ ಆಲಿಸಲು ಬರುವಾಗ ಕರ್ತನು ತಮ್ಮೊಂದಿಗೆ ಮಾತನಾಡುವುದನ್ನು ನಿರೀಕ್ಷಿಸುತ್ತಾರೆ, ಪ್ರತಿಯೊಬ್ಬರಿಗೂ ಅದರಲ್ಲಿ ಏನಾದರೂ ಇರುತ್ತದೆ.

## ನೀವು ನಿಮ್ಮ "ಪ್ರಕಟನೆ"ಗಳನ್ನು ಬೋಧಿಸುವ ಮೊದಲು ಅದನ್ನು ಸ್ಥಿರೀಕರಿಸಿರಿ

**"ನಾನಾ ವಿಧವಾದ ಅನ್ಯೋಪದೇಶಗಳ ಸೆಳವಿಗೆ ಸಿಕ್ಕ ಬೇಡಿರಿ. ದೇವರ ಕೃಪೆಯನ್ನು ಆತುಕೊಂಡು ಮನಸ್ಸನ್ನು ಧೃಡಮಾಡಿಕೊಳ್ಳುವದು ಉತ್ತಮವೇ. ಭೋಜನ ಪದಾರ್ಥಗಳನ್ನು ವಿಶೇಷಿಸುವದರಿಂದ ಅದು ಆಗುವದಿಲ್ಲ. ಭೋಜನ ಪದಾರ್ಥಗಳನ್ನು ವಿಶೇಷಿಸಿ ನಡೆದವರು ಏನೂ ಪ್ರಯೋಜನ ಹೊಂದಲಿಲ್ಲ"** (ಇಬ್ರಿಯರಿಗೆ 13:9).

**“ಆಗ ಆತನು ಅವರಿಗೆ—ಹೀಗಿರಲಾಗಿ ಪರಲೋಕರಾಜ್ಯದ ವಿಷಯವಾಗಿ ಉಪದೇಶ ಹೊಂದಿ ಶಿಕ್ಷಿತನಾದ ಪ್ರತಿಯೊಬ್ಬ ಶಾಸ್ತ್ರೋಪದೇಶಕನು ಮನೇ ಯಜಮಾನನಿಗೆ ಹೋಲಿಕೆಯಾಗಿದ್ದಾನೆ. ಅವನು ತನ್ನ ಬೊಕ್ಕಸದೊಳಗಿಂದ ಹೊಸ ವಸ್ತುಗಳನ್ನೂ ಹಳೇ ವಸ್ತುಗಳನ್ನೂ ಹೊರಗೆ ತರುತ್ತಿರುವನು ಎಂದು ಹೇಳಿದನು”** (ಮತ್ತಾಯ 13: 52)

ವಾಕ್ಯದ ಸೇವಕರಾಗಿ ನಾವು ಕೆಲವು ವೇಳೆ ಹೊಸ ಮತ್ತು ತಾಜಾ ಪ್ರಕಟನೆಗಳನ್ನು ತರಲು “ಒತ್ತಡ”ದಲ್ಲಿರುವುದಾಗಿ ನಮ್ಮನ್ನು ಕಂಡುಕೊಳ್ಳುತ್ತೇವೆ. ಜನರು ತಾವು ಹಿಂದೆ ಕೇಳಿರದ ವಿಷಯಗಳನ್ನು ಕೇಳಲು ಬಯಸುತ್ತಾರೆ. ಇದರಿಂದ ಒತ್ತಡದಲ್ಲಿ, ಯಾವುದಾದರೂ ಹೊಸ-ಕೆಲವು ತಾಜಾ ಆದ ಪ್ರಕಟನೆಯೊಂದಿಗೆ ಬರುವುದರಲ್ಲಿ ಕಾರ್ಯಮಾಡುತ್ತೇವೆ. ಕೆಲವು ವೇಳೆ, ನಾವು ಸರಿಯಾಗಿರಬಹುದು ಹಾಗೂ ದೇವರ ವಾಕ್ಯದಲ್ಲಿ ತಾಜಾ ಆದ ಕೆಲವು ಅಂತರ್ದೃಷ್ಟಿಗಳನ್ನು ತರಲು ಸಮರ್ಥರಾಗುತ್ತೇವೆ. ಇವು ನಾವು ಮೊಟ್ಟ ಮೊದಲು ನೋಡಿ, ಜನರೊಂದಿಗೆ ಸಂಪರ್ಕಿಸಲು ವಾಕ್ಯದಲ್ಲಿ ಅಡಗಿರುವ ನಿಧಿಗಳಾಗಿರುತ್ತವೆ. ಹೇಗಾದರೂ ನಾವು ಒಂದು ‘‘ಪ್ರಕಟನೆ’’ ಇದೆಯೆಂದು ಯೋಚಿಸಿದರೆ, ನಾವು ಇದರ ಸೈದ್ಧಾಂತಿಕ ಹಾಗೂ ಸತ್ಯವೇಧಾರಿತ ಖಚಿತತೆಯ ಬಗ್ಗೆ ನಾವು ಅನಿಶ್ಚಿತರಾಗಿರುತ್ತೇವೆ.

ಅದನ್ನು ಬೋಧಿಸುವ ಮೊದಲು ನಾವು ಅದನ್ನು ಸ್ಥಿರೀಕರಿಸಬೇಕು.” ದೇವರ ಸ್ಥಿರತೆ ಹೊಂದಿದ ಇತರ ನೀವು ಹೊಂದಿರುವದನ್ನು ಒಪ್ಪಿಕೊಂಡಿರುತ್ತಾರೋ ಎಂಬದನ್ನು ನೋಡಿರಿ. ಆ “ಪ್ರಕಟನೆಯು ಸತ್ಯವೇದದ ಸಂಪೂರ್ಣತೆಯ ಬೆಳಕನ್ನು ಹೊಂದಿದೆಯೋ ಎಂಬುದನ್ನು ಪರಿಶೀಲಿಸಿರಿ. ಇದರಿಂದ ಆತ್ಮ ಮತ್ತು ವಾಕ್ಯವನ್ನು ಒಪ್ಪಿಕೊಳ್ಳುತ್ತಾರೆ (1 ಯೋಹಾನ 5:7) ಇದರಿಂದ ವ್ಯಕ್ತವಾದ ದೇವರ ವಾಕ್ಯಕ್ಕೆ (ಸತ್ಯವೇದ) ವಿರೋಧವಾಗಿ ಹೋಗುವ ಯಾವುದನ್ನೂ ಹಾಗೂ ರುಜುವಾತಾದ ದೇವರ ವಾಕ್ಯಕ್ಕೆ (ಯೇಸುಕ್ರಿಸ್ತನಾಗಿ ವ್ಯಕ್ತಿ) ವಿರುದ್ಧವಾಗಿರುವುದನ್ನೂ ಪವಿತ್ರಾತ್ಮನು ವ್ಯಕ್ತಪಡಿಸುವುದಿಲ್ಲ. ಆ “ಪ್ರಕಟನೆಗೆ ಇದು ಖಚಿತವಾದುದು ಹಾಗೂ ದೇವ ಜನರಿಗೆ ಬಿಡುಗಡೆ ಮಾಡಬಹುದು ಎಂದು ನೀವು ಭಾವಿಸುವವರೆಗೆ, ಆ ಪ್ರಕಟನೆಗೆ ಅಂಟಿಕೊಂಡಿರ್ರಿ. ಏಕೆಂದರೆ, ಒಂದು ವೇಳೆ ಏನಾದರೂ ಬಿಡುಗಡೆಯಾದರೆ ಹಾಗೂ ನಾವು ಇದು ಸರಿಯಾದುದಲ್ಲ ಎಂದು ಕಂಡುಕೊಂಡರೆ, ಆಗ ಇದನ್ನು ಹಿಂತೆಗೆದು ಕೊಳ್ಳುವುದು ಬಹಳ ಕಷ್ಟಕರವಾಗಿರುತ್ತದೆ.

ಮತ್ತೊಂದು ಕಡೆಯಲ್ಲಿ ಜನರಿಗೆ ಬೋಧಿಸಲು ಹಳೆಯ ನಿಧಿಗಳನ್ನು ತರಲು ಭಯ ಪಡಬೇಡಿರಿ. ಈ ದಿನ ನಾನು ಬೋಧಿಸುವ ಹಲವಾರು ಸತ್ಯಗಳು ನನ್ನ ಹದಿಹರೆಯದ ಆರಂಭದ ವರ್ಷಗಳಿಂದಲೂ—30 ವರ್ಷಗಳಿಗಿಂತ ಹೆಚ್ಚಾಗಿ ಬೋಧಿಸಿರುತ್ತೇನೆ. ಇದು ಅದೇ ಸತ್ಯವಾಗಿರುತ್ತದೆ. ಸತ್ಯವು ಬದಲಾವಣೆಯಾಗಿಲ್ಲ. ನನ್ನ ತಿಳುವಳಿಕೆಯ ಆಳವು, ಆ ಸತ್ಯತೆಯಲ್ಲಿ ನನ್ನ ಅನುಭವವು, ಆ ಸತ್ಯ ಮತ್ತು ನನ್ನ ಸಾಮರ್ಥ್ಯದಲ್ಲಿ ನನ್ನ ವಿಶ್ವಾಸ ಮತ್ತು ಸ್ಪಷ್ಟತೆಯು, ಸಂಪರ್ಕಿಸಲು ವಾಸ್ತವವಾಗಿ ವರ್ಷಗಟ್ಟಲೆ ಆಯಿತು. ಆದರೆ ಇದು "ಅದೇ ಹಳೆಯ ನಿಧಿಗಳು", “ಅಂದರೆ ನಾನು ಬೋಧಿಸುತ್ತಿರುವುದು ಇದೇ ಆಗಿದೆ. ಇದರಿಂದ ಯಾವ ತಪ್ಪೂ ಆಗುವುದಿಲ್ಲ. ಇವು ಸಮಯವಿಲ್ಲದ ಸತ್ಯಗಳು! ಹಾಗೂ ಅಲ್ಲಿ ಯಾವಾಗಲೂ ಈ ಸಮಯವಿಲ್ಲದ ಸತ್ಯಗಳಲ್ಲಿ ಉಳಿಯಲು ಅಗತ್ಯತೆ ಹೊಂದಿರುವ ಹೊಸ ಜನರಿರುತ್ತಾರೆ.

## ಪ್ರಚಲಿತವಾಗಿ ಉಳಿಯಿರಿ—ಆದರೆ ದೈವಜ್ಞಾನ ಶಾಸ್ತ್ರ ಬಿಟ್ಟು ದಾರಿತಪ್ಪಿಹೋಗಬೇಡಿ

**“ಆದುದರಿಂದ ನೀವು ಈ ಸಂಗತಿಗಳನ್ನು ತಿಳಿದವರಾಗಿ ನಿಮಗೆ ದೊರಕಿರುವ ಸತ್ಯದಲ್ಲಿ ಸ್ಥಿರವಾಗಿದ್ದರೂ ಅವುಗಳನ್ನು ನಿಮಗೆ ಜ್ಞಾಪಕಕೊಡುವದಕ್ಕೆ ನಾನು ಯಾವಾಗಲೂ ಸಿದ್ಧವಾಗಿರುವೆನು”** (2 ಪೇತ್ರ 1:12).

ಸತ್ಯದ ತಿಳುವಳಿಕೆ ಹಾಗೂ ಸತ್ಯದ ಅನ್ವಯವು ಪ್ರಗತಿಯಲ್ಲಿದೆ. ಕ್ರಿಸ್ತನ ದೇಹವು ಪ್ರೌಢತೆಗೆ ಏರುತ್ತಿರುವಂತೆಯೇ, ನಮ್ಮ ಸತ್ಯತೆಯ ತಿಳುವಳಿಕೆ ಹಾಗೂ ದೈನಂದಿನ ಜೀವಿತದಲ್ಲಿ ಇದರ ಅನ್ವಯವನ್ನು ಕಾಣಲು ಸಮರ್ಥತೆಯು ವೃದ್ಧಿಯೊಗುತ್ತಾ ಬರುತ್ತದೆ. ಹಾಗೂ ದೇವ ಸೇವಕರಾಗಿ, ನಾವು ‘‘ಪ್ರಸ್ತುತ ಸತ್ಯತೆಯಲ್ಲಿ” ಪ್ರಚಲಿತವಾಗಿ ಉಳಿಯ ಬೇಕಾಗುತ್ತದೆ. ಉದಾಹರಣೆಗೆ, ಪವಿತ್ರಾತ್ಮನ ದೀಕ್ಷಾಸ್ನಾನದ ಬಗ್ಗೆ ಸತ್ಯವು ಯಾವಾಗಲೂ ಸತ್ಯವೇದದದಲ್ಲಿರುತ್ತದೆ. ಆದರೆ ಅಂಧಕಾರದ ಯುಗಗಳಲ್ಲಿ ಅದು, 1900ನೇ ವರ್ಷಗಳ ಆರಂಭದಲ್ಲಿ ಅಜೂಸಾ ಸ್ಟ್ರೀಟ್ ರಿವೈವಲ್‌ದೊಂದಿಗೆ ಜನರು ಪವಿತ್ರಾತ್ಮನು ದೊಡ್ಡ ಮಟ್ಟದಲ್ಲಿ ಸುರಿಯುತ್ತಿದ್ದ ಅನುಭವ ಹೊಂದಲಾರಂಭಿಸಿದರು. ಇದು ಪಂಚಾಶತ್ತಮ ಕಾಲದಲ್ಲಿ ಉದಯವಾಯಿತು ಹಾಗೂ ಇತ್ಯಾದಿ. ಪಂಚಾಶತ್ತಮ ಕಾಲದ

ಆರಂಭದ ದಿನಗಳಲ್ಲಿ ಪವಿತ್ರಾತ್ಮನಲ್ಲಿ ದೀಕ್ಷಾಸ್ನಾನ ಪಡೆಯಲು ಹಾಗೂ ಅನ್ಯಭಾಷೆಗಳಲ್ಲಿ ಪ್ರಾರ್ಥಿಸಲು ಜನರು ಗಂಟೆಗಟ್ಟಳೆ, ಕೆಲವು ವೇಳೆ ದಿನಗಟ್ಟಳೆ "ವಿಳಂಬ" ಕ್ಕೊಳಗಾಗುತ್ತಿದ್ದರು. ಸಮಯದೊಂದಿಗೆ ಜನರು ಪವಿತ್ರಾತ್ಮನಲ್ಲಿ ಪ್ರಾರ್ಥಿಸುವುದು ಹಾಗೂ ದೀಕ್ಷಾಸ್ನಾನ ಹೊಂದುವುದು ಹಾಗೂ ಅನ್ಯಭಾಷೆಗಳಲ್ಲಿ ಪ್ರಾರ್ಥಿಸುವುದು ಎಷ್ಟು ಸುಲಭ ಹಾಗೂ ಸರಳವಾದುದು ಎಂದು ಅರಿತುಕೊಂಡರು. ಈ ದಿನ ದೇವರ ವಾಕ್ಯವನ್ನು ಸಾರುವುದು ಮತ್ತು ಒಂದೇ ತಾಸಿನಲ್ಲಿ ಪವಿತ್ರಾತ್ಮನಲ್ಲಿ ದೀಕ್ಷಾಸ್ನಾನ ಮಾಡಿಸಿ ಕೊಳ್ಳುವುದರ ಮೂಲಕ ಜನರಿಗೆ ಸಹಾಯ ಮಾಡುವುದು ಒಂದು ಕ್ರಮವಾದ ಲಕ್ಷಣವಾಗಿದೆ. ಇಲ್ಲಿ ನಾವು ಏನನ್ನು ಗಮನಿಸುತ್ತೇವೆ—ಅಂದರೆ, ಕ್ರಿಸ್ತನ ದೇಹವು ತನ್ನ ಸತ್ಯದ ತಿಳುವಳಿಕೆಯಲ್ಲಿ ಹಾಗೂ ಸತ್ಯವನ್ನು ಹೇಗೆ ಅನ್ವಯಿಸುವುದು ಎಂಬುದರಲ್ಲಿ ಬೆಳೆಯುತ್ತಿದೆ.

ಅಪೊಲ್ಲೋಸನು ವಾಕ್ಯದ ಒಬ್ಬ ಬಲವಾದ ಸೇವಕನಾಗಿದ್ದನು. ಹೇಗಾದರೂ ಅವನು ಸ್ನಾನಿಕನಾದ ಯೊಹಾನನ ದೀಕ್ಷಾಸ್ನಾನದವರೆಗೆ ಸತ್ಯವನ್ನು ಮಾತ್ರ ತಿಳಿದಿದ್ದನು. ಇದರಿಂದ ಅವನು ಅಕ್ವಿಲ್ಲ ಮತ್ತು ಪ್ರಿಸ್ಕಿಲ್ಲಳನ್ನು ಸಂಧಿಸಿದಾಗ, ಅವರು ಅವನನ್ನು ಶಿಲುಬೆಯ ಮೇಲೆ ಕ್ರಿಸ್ತನ ಕಾರ್ಯವು ಮುಗಿಯುವ ವರೆಗೆ, ಪ್ರಚಲಿತನನ್ನಾಗಿ ಮಾಡಿದರು. ಆಗ ಅಪೊಲ್ಲೋಸನು ಹೊಸ ಒಡಂಬಡಿಕೆಯ ಒಬ್ಬ ಬಲವಾದ ಬೋಧಕನಾಗಿ, ಕೊರಿಂಥದ ಸಭೆಯ ಒಂದು ಸ್ಥಂಭವಾದನು. *"ಅಷ್ಟರೊಳಗೆ ಅಲೆಕ್ಸಾಂದ್ರಿಯದಲ್ಲಿ ಹುಟ್ಟಿದ ಅಪೊಲ್ಲೋಸನೆಂಬ ಒಬ್ಬ ಯೆಹೂದ್ಯನು ಎಫೆಸಕ್ಕೆ ಬಂದನು. ಅವನು ವಾಕ್ಚಾತುರ್ಯವುಳ್ಳವನು, ಶಾಸ್ತ್ರಗಳಲ್ಲಿ ಪ್ರವೀಣನು. ಅವನು ಕರ್ತನ ಮಾರ್ಗದ ವಿಷಯದಲ್ಲಿ ಉಪದೇಶ ಹೊಂದಿದವನಾಗಿದ್ದನು; ಮತ್ತು ಆಸಕ್ತ ಮನಸ್ಸುಳ್ಳವನಾಗಿದ್ದು ಯೋಹಾನನು ಮಾಡಿಸಿದ ದೀಕ್ಷಾಸ್ನಾನವನ್ನು ಮಾತ್ರ ಬಲ್ಲವನಾದಾಗ್ಯೂ ಯೇಸುವಿನ ಸಂಗತಿಗಳನ್ನು ಸೂಕ್ಷ್ಮವಾಗಿ ಹೇಳಿ ಉಪದೇಶಿದನು. ಅವನು ಸಭಾಮಂದಿರದಲ್ಲಿ ಧೈರ್ಯದಿಂದ ಮಾತಾಡುವದಕ್ಕೆ ಪ್ರಾರಂಭಿಶಿಸಿದನು. ಅವನ ಮಾತುಗಳನ್ನು ಪ್ರಿಸ್ಕಿಲ್ಲಳೂ ಅಕ್ವಿಲನೂ ಕೇಳಿ ಅವನನ್ನು ತಮ್ಮ ಮನೆಗೆ ಕರೆದು ಕೊಂಡು ಹೋಗಿ ದೇವರ ಮಾರ್ಗವನ್ನು ಅವನಿಗೆ ಇನ್ನೂ ಸ್ಕೂಕ್ಷ್ಮವಾಗಿ ವಿವರಿಸಿದರು"* (ಅಪೊಸ್ತಲರ ಕೃತ್ಯಗಳು 18:24–26). ಪೌಲನು ಅದೇ ಕಾರ್ಯವನ್ನು ಎಫೆಸದ ವಿಶ್ವಾಸಿಗಳೊಂದಿಗೆ ಮಾಡಿದನು (ಅಪೊಸ್ತಲರ ಕೃತ್ಯಗಳು 19:1–6).

ಹೀಗಿದ್ದರೂ ದೇವರ ಸೇವಕರಾಗಿ ಬೆಳವಣಿಗೆಯೊಂದಿಗೆ ಪ್ರಚಲಿತರಾಗಿ ಉಳಿಯುವುದು ನಮಗೆ ಪ್ರಾಮುಖ್ಯವಾಗಿದೆ. "ನೀವು ಕೃಪೆಯಲ್ಲಿಯೂ ನಮ್ಮ ಕರ್ತನೂ ರಕ್ಷಕನೂ ಆಗಿರು ಯೇಸುಕ್ರಿಸ್ತನ ವಿಷಯವಾದ ಜ್ಞಾನದಲ್ಲಿಯೂ ಅಭಿವೃದ್ಧಿಯನ್ನು ಹೊಂದುತ್ತಾ ಇರ್ರಿ" (2 ಪೇತ್ರನು 3:18). ಇದು ಕ್ರಿಸ್ತನ ದೇಹದಲ್ಲಿ ಅನುಭವ ನೀಡಿದೆ. ನಾವು ಪ್ರಚಲಿತರಾಗಿ ಉಳಿಯಬೇಕು ಹಾಗೂ ಲೋಕದೆಲ್ಲಾ ಕಡೆಯಲ್ಲಿ ದೇವರು ದೇಹಕ್ಕೆ ಏನು ಬಿಡುಗಡೆ ಮಾಡುತ್ತಾನೋ ಅದರಿಂದ ಕಲಿಯ ಬೇಕು.

ಹೇಗಾದರೂ, ಹೀಗೆ ಮಾಡುವುದರಿಂದ, ನಾವು "ದೈವಜ್ಞಾನ ಶಾಸ್ತ್ರದಿಂದ ದಾರಿ ಬಿಟ್ಟು ಹೋಗುವುದನ್ನು ತಡೆಯುವ" ಅಗತ್ಯವಿದೆ. ಕೆಲವು ಅಂತರ ರಾಷ್ಟ್ರೀಯ ಮಟ್ಟದ, ಪ್ರಖ್ಯಾತರಾದ ಅತ್ಯುನ್ನತ ಗೌರವಾನ್ವಿತ ಬೋಧಕರು ಸ್ಪರ್ಶ ರೇಖೆಯನ್ನೂ ದಾಟಿ ಬೋಧಿಸಲು ಆರಂಭಿಸಿ, ಸತ್ಯವೇದದ ಅಸ್ತಿವಾರಗಳ ಮೇಲೆ ಸಂಪೂರ್ಣ ಆಧಾರ ವಿಲ್ಲದ ರೀತಿಯ ವಿಷಯಗಳನ್ನು ಬೋಧಿಸುತ್ತಾರೆ. ಅವರು ಸತ್ಯವೇದದ ಕೆಲವಾರು ಮೂಲಭೂತ ಬೋಧನೆಗಳನ್ನು ಅಲ್ಲಗಳೆಯುತ್ತಾರೆ. ಜನರು ಸತ್ಯದಿಂದ ದೂರವಾಗಿದ್ದಾಗ, ಹೊಸ ಒಡಂಬಡಿಕೆಯ ಕಾಲದಲ್ಲಿಯೂ ಇಂಥಾ ಸಂಗತಿಗಳು ನಡೆದವು.

**"ಮನುಷ್ಯನಾಗಿ ಬಂದಿರುವ ಯೇಸು ಕ್ರಿಸ್ತನನ್ನು ಒಪ್ಪದೆ ಇರುವ ಮೋಸಗಾರರು ಅನೇಕ ಮಂದಿ ಹೋರಟು ಲೋಕದೊಳಗೆ ಹೋಗಿದ್ದಾರೆ. ಯೇಸುವನ್ನು ಒಪ್ಪದವನು ಮೋಸಗಾರನೂ ಕ್ರಿಸ್ತವಿರೋಧಿಯೂ ಆಗಿದ್ದಾನೆ"** (2 ಯೋಹಾನ 1:7).

**"ಅವರ ಮಾತು ಕೊಳಕು ಹುಣ್ಣಿನಂತೆ ಹರಡಿಕೊಳ್ಳುವದು. ಅವರಲ್ಲಿ ಹುಮೆನಾಯನೂ ಫಿಲೇತನೂ ಇದ್ದಾರೆ; ಅವರು ಪುನರುತ್ಥಾನವು ಆಗಿಹೋಯಿತೆಂದು ಹೇಳುತ್ತಾ ಸತ್ಯಭ್ರಷ್ಟರಾಗಿ ಕೆಲವರ ನಂಬಿಕೆಯನ್ನು ಕೆಡಿಸುವವರಾಗಿದ್ದಾರೆ"** (2 ತಿಮೊಥೆಯನಿಗೆ 2:17–18).

ದೈವ ಜ್ಞಾನ ಶಾಸ್ತ್ರದ ಹೊರಗೆ ಬರುವಂಥದ್ದು ಅನೇಕ ರೀತಿಗಳಲ್ಲಿ ಬರಬಹುದು. ನಾನು ಒಂದು ಅಸಮತೋಲನ ರೀತಿಯಲ್ಲಿ, ಸತ್ಯವೇದದಲ್ಲಿ ಒಳಗೊಂಡಿರುವ ಉಳಿದ ಸತ್ಯಗಳಿಗೆ ಸಮನಾದ ಪ್ರಾಮುಖ್ಯತೆಯನ್ನು ನೀಡದೆ ಬೋಧಿಸಿ, ಉಪದೇಶಿಸಿದರೆ, ಇದು ಜನರನ್ನು ದಾರಿತಪ್ಪಿಸಬಹುದು. ಸತ್ಯ ವೇದವು ಮಾಡುವುದಕ್ಕಿಂತ ಹೆಚ್ಚು ಪ್ರಾಮುಖ್ಯತೆಯನ್ನು ಒಂದು ಸತ್ಯಕ್ಕೆ ಹೆಚ್ಚಾದ ಒತ್ತಡ ನೀಡಿದರೆ,

ಅದೂ ಕೂಡಾ ಅಪಾಯಕರವಾದದ್ದಾಗಿರುತ್ತದೆ. ಉದಾಹರಣೆಗೆ, ತ್ಯಾಗ, ಕೊಡುವುದು, ತೃಪ್ತಿಯಿಂದಿರುವುದು ಇವುಗಳೊಂದಿಗೆ ಸಮತೋಲನ ಮಾಡದೆ, ಆಶೀರ್ವಾದ ಮತ್ತು ಸಮೃದ್ಧಿಗಳ ಮೇಲೆ ನಾನು ಒತ್ತಡ ಹೇರುವುದಾದರೆ, ಜನರನ್ನು ದಾರಿ ತಪ್ಪಿಸುತ್ತೇನೆ, ನಾನು ದೈವಿಕ ಜೀವಿತ, ಶುದ್ಧತ್ವ ಹಾಗೂ ಹೊಣೆಗಾರಿಕೆಗಳ ಮೇಲೆ ಒತ್ತಡ ಹಾಕದೆ ಕೃಪೆಯ ಮೇಲೆ ಒತ್ತಡ ಹಾಕಿದರೆ, ನಾನು ಆಗ ಅತಿಯಾದ ಕೃಪೆಯ ಸುವಾರ್ತೆಯೊಂದಿಗೆ ಮುಕ್ತಾಯ ಮಾಡಿ, ಜನರನ್ನು ದಾರಿ ತಪ್ಪಿಸುತ್ತೇನೆ. ನಾನು ದೇವರ ವಾಕ್ಯವು ಏನು ಹೇಳುತ್ತದೋ ಅದಕ್ಕೆ ಸವಾಲು ಹಾಕಿ, ವಾಸ್ತವವಾದ ಪರಲೋಕ ಹಾಗೂ ವಾಸ್ತವವಾದ ನರಕದ ಅಸ್ತಿತ್ವವನ್ನು ಅಲ್ಲಗಳೆದರೆ, ನಾನು ಜನರನ್ನು ದಾರಿ ತಪ್ಪಿಸುತ್ತೇನೆ. ನಾನು ದೇವರವಾಕ್ಯವನ್ನು ಅಳ್ಳಕಮಾಡಿದರೆ, ಹಾಗೂ ಕ್ರಿಸ್ತನಲ್ಲಿ ನಂಬಿಕೆಯಿಂದ ಮಾತ್ರ ರಕ್ಷಣೆ ಎಂದು ಸ್ಪಷ್ಟವಾಗಿ ಹೇಳುವುದರ ಬದಲಾಗಿ ದೇವರ ಕಡೆಗೆ ಹಲವಾರು ದಾರಿಗಳಿವೆ ಎಂದು ಹೇಳಿದರೆ, ನಾನು ಜನರನ್ನು ದಾರಿತಪ್ಪಿಸುತ್ತೇನೆ.

ವಾಕ್ಯದ ಸೇವಕರಾಗಿ ನಾವು ಇಂಥ ಸಂಗತಿಗಳ ವಿರೋಧವಾಗಿ ಕಾವಲಾಗಿರುವ ಅಗತ್ಯತೆ ಇದೆ. ಹಾಗೂ ನಾನು ಅದರಲ್ಲಿ ಸಿಕ್ಕಿಕೊಳ್ಳದಿರಲು ನಿಶ್ಚಯಹೊಂದಬೇಕು, ನಾನು ಸತ್ಯವೇದದ ಪ್ರವಾದನೆಯಲ್ಲಿ ನಂಬಿಕೆಯಿಡುತ್ತೇವೆ, ಆದರೆ ನಾವು ಎಂದಿಗೂ ಪವಾಡ ಸೂಚನೆಗಳು ಅಥವಾ ದಿನಾಂಕ ಹೊಂದಿಸುವುದು ಇವುಗಳಲ್ಲಿ ಸಿಕ್ಕಿಕೊಳ್ಳಬಾರದು. ನಾವು ನಮ್ಮ ರಾಷ್ಟ್ರದ ನೈತಿಕ ಹಾಗೂ ಸಾಮಾಜಿಕ ಜವಾಬ್ದಾರಿಯಲ್ಲಿ ನಂಬಿಕೆಯಿಡಬೇಕು. ಹೀಗಿದ್ದರೂ ನಾವು ಎಂದಿಗೂ ಸಾಮಾಜಿಕ ಅಥವಾ ರಾಜಕೀಯ ಕಾರಣದೊಂದಿಗೆ ಸಿಕ್ಕಿ ಹಾಕಿಕೊಳ್ಳದೆ, ದೇವರ ವಾಕ್ಯದ ಸೇವಕರಾಗಿರುವುದರಿಂದ ನಮ್ಮನ್ನು ನಾವು ಮೊದಲು ಚಿತ್ತಭ್ರಮಣೆಗೊಳಪಡಿಸಿಕೊಳ್ಳಬಾರದು. ಹಾಗೂ ಸುವಾರ್ತೆಯ ಬೋಧನೆಗೆ ಜೊತೆಗೂಡುವ ಸೂಚನೆಗಳು ಹಾಗೂ ಅದ್ಭುತಗಳು ಹಾಗೂ ಚಮತ್ಕಾರಗಳಲ್ಲಿ ವಿಶ್ವಾಸವಿಡುತ್ತೇವೆ. ಆದರೆ ನಾವು ಎಂದಿಗೂ ಚಮತ್ಕಾರಗಳ ಮೇಲೆ ಕೇಂದ್ರೀಕರಿಸಲ್ಪಟ್ಟು ಆತನೊಂದಿಗೆ ಒಡನಾಟದಲ್ಲಿ ಹಾಗೂ ಆತ್ಮಗಳ ರಕ್ಷಣೆಯಲ್ಲಿ ದೂರವಾಗಿರುವುದು ಬೇಡ. ನಾವು ಪ್ರವಾದನೆ ಹಾಗೂ ದೇವರ ಸ್ವರವನ್ನು ಕೇಳಿಸಿಕೊಳ್ಳುವುದರಲ್ಲಿ ನಂಬಿಕೆ ಇಟ್ಟಿರುತ್ತೇವೆ. ಆದರೆ ನಾವು ಎಂದಿಗೂ ವಿವಿಧವಾದ ಹಾಗೂ

ಅಪರೂಪವಾದ "ಪ್ರವಾದನೆ"ಗಳೊಂದಿಗೆ ಕೊಚ್ಚಿಕೊಂಡು ಹೋಗಬಾರದು. ಬದಲಾಗಿ ನಮ್ಮ ಹೃದಯಗಳು ದೇವರ ನಿಶ್ಚಿತವಾದ ಕೃಪೆಯ ವಾಕ್ಯದ ನಿತ್ಯತ್ವದ ಸತ್ಯತೆಯಲ್ಲಿ ಸ್ಥಾಪಿಸಲ್ಪಡಲಿ.

## ಜಯ ಹೊಂದಲು ಸತ್ಯವನ್ನು ವಿಸ್ತರಿಸಿರಿ

**"ಆ ಬೆಳಕು ಕತ್ತಲಲ್ಲಿ ಪ್ರಕಾಶಿಸುತ್ತದೆ ಕತ್ತಲು ಅದನ್ನು ಮುಸುಕಲಿಲ್ಲ"** (ಯೋಹಾನ 1:5).

**"ದೇವರ ವಾಕ್ಯವನ್ನು ಸಾರು, ಅನುಕೂಲವಾದ ಕಾಲದಲ್ಲಿಯೂ ಅನುಕೂಲವಿಲ್ಲದ ಕಾಲದಲ್ಲಿಯೂ ಅದರಲ್ಲಿ ಆಸಕ್ತನಾಗಿರು; ಪೂರ್ಣ ದೀರ್ಘಶಾಂತಿಯಿಂದ ಉಪದೇಶಿಸುತ್ತಾ ಖಂಡಿಸು, ಗದರಿಸು, ಎಚ್ಚರಿಸು, ಯಾಕೆಂದರೆ ಜನರು ಸ್ವಸ್ಥಬೋಧನೆಯನ್ನು ಸಹಿಸಲಾರದ ಕಾಲವು ಬರುತ್ತದೆ; ಅದರಲ್ಲಿ ಅವರು ತೀಟೇ ಕಿವಿಗಳುಳ್ಳವರಾಗಿ ತಮ್ಮ ದುರಾಶೆಗಳಿಗೆ ಅನುಕೂಲರಾದ ಅನೇಕ ಉಪದೇಶಕರನ್ನು ಇಟ್ಟು ಕೊಳ್ಳುವರು. ಅವರು ಸತ್ಯ ಬೋಧನೆಗೆ ಕಿವಿಗೊಡದೆ ಕಲ್ಪನಾ ಕಥೆಗಳನ್ನು ಕೇಳುವುದಕ್ಕೆ ಹೋಗುವರು"** (2 ತಿಮೊಥೆಯನಿಗೆ 4: 2-4).

ಅಂಧಕಾರವನ್ನು ಓಡಿಸಲು ಅತ್ಯುತ್ತಮವಾದ ಒಂದು ದಾರಿ ಏನೆಂದರೆ, ಬೆಳಕನ್ನು ಹೊತ್ತಿಸುವುದು. ಅಂಧಕಾರದ ಎಲ್ಲಾ ಕುರುಹುಗಳೂ ಕಾಣೆಯಾಗುವವರೆಗೆ ನಿಜವಾದ ಹೊಳಪಿಗೆ ಅದನ್ನು ತಿರುಗಿಸುತ್ತಾ ಇರಿ. ಅದೇ ರೀತಿ, ತಪ್ಪಿನಿಂದ ಹೊರಬರಲು ಅತ್ಯುತ್ತಮ ಮಾರ್ಗವೆಂದರೆ, ಸತ್ಯವನ್ನು ವಿಶದವಾಗಿ ಹೊರಗೆ ತರುವುದು. ಸತ್ಯವನ್ನು ಸಾಧಾರಣವಾಗಿ ಸರಳವಾಗಿ, ಸಶಬ್ದವಾಗಿ ಹಾಗೂ ಸ್ಪಷ್ಟವಾಗಿ ಮಾಡಿರಿ ಹಾಗೂ ಎಲ್ಲಾ ತಪ್ಪುಗಳೂ ನಿವಾರಣೆಯಾಗುತ್ತವೆ.

ದೇವರ ವಾಕ್ಯದ ಸಭಾಪಾಲಕರೂ ಹಾಗೂ ಸೇವಕರೂ ಆಗಿ, ನಮಗೆ ಒಪ್ಪಿಸಲ್ಪಟ್ಟ ಜನರನ್ನು ಸೈದ್ಧಾಂತಿಕ ತಪ್ಪು, ಕಟ್ಟು ಕತೆಗಳು ಹಾಗೂ ಜನರನ್ನು ಸತ್ಯದಿಂದ ದೂರಮಾಡುವ ಎಲ್ಲಾ ಅಂಶಗಳಿಂದ ಸಂರಕ್ಷಿಸುವುದು ನಮ್ಮ ಜವಾಬ್ದಾರಿಕೆಯಾಗಿರುತ್ತದೆ. ಜನರು ಸತ್ಯದಲ್ಲಿ ನೆಲೆಯೂರುವಂತೆ ಹಾಗೂ ತಪ್ಪಿನಿಂದ ದೂರವಾಗಿರುವಂತೆ ಮಾಡಲು, ಅತ್ಯುತ್ತಮ ಮಾರ್ಗವೆಂದರೆ, ಅನುಕುಲತೆಯಲ್ಲಿ ಅನುಕೂಲವಿಲ್ಲದಿರುವಾಗಲೂ ವಾಕ್ಯವನ್ನು ಸಾರುವುದು. ಸತ್ಯವನ್ನು ಬೋಧಿಸಿರಿ, ಸತ್ಯವನ್ನು ವಿಶದ ಪಡಿಸಿರಿ, ಸತ್ಯದ ಜನರಿಗೆ ಸಮಾಲೋಚನೆ ಮಾಡಿರಿ. ಗದರಿಸು, ಇದರ ಅಕ್ಷರಶಃ ಅರ್ಥವೇನೆಂದರೆ, "ಸತ್ಯದ ಸಮಾಲೋಚನೆ ಮಾಡಲು, ಒಪ್ಪಿಸುವ

ವಾದಗಳನ್ನು ಹೊಂದುವುದು. (ಆಲ್ಬರ್ಟ್ ಬಾರ್ನ್ಸ್, ಸತ್ಯವಾದದ ಮೇಲಿನ ಟಿಪ್ಪಣಿಗಳು, (1768–1870). ಸತ್ಯವನ್ನು ಹಿಂಬಾಲಿಸಲು ಜನರಿಗೆ ಎಚ್ಚರಿಕೆ ನೀಡುವುದು ಅಥವಾ ಪ್ರೋತ್ಸಾಹಿಸುವುದು ತಪ್ಪನ್ನು ವಿವರಿಸಲು ಸುಮ್ಮನೆ ವಿವರಿಸುತ್ತಾ ಸಮಯ ವ್ಯರ್ಥಮಾಡಬೇಡಿರಿ. ಬದಲಾಗಿ, ಸತ್ಯವನ್ನು ವಿವರಿಸಿರಿ, ಸತ್ಯವು ತಪ್ಪನ್ನು ಹೊರಕ್ಕೆ ಹಾಕುತ್ತದೆ.

## ಮುಖಸ್ತುತಿ ಬೇಡ, ಸುಲಿಗೆ ಬೇಡ, ಆತ್ಮ ಅಭಿವೃದ್ಧಿಬೇಡ

**"ಯಾಕೆಂದರೆ ನಮ್ಮ ಬೋಧನೆಯು ಅಬದ್ಧವಲ್ಲ, ಅಶುದ್ಧವಲ್ಲ, ಮೋಸವಲ್ಲ; ದೇವರು ನಮ್ಮನ್ನೂ ಯೋಗ್ಯರೆಂದೆಣಿಸಿ ಸುವಾರ್ತೆಯನ್ನು ನಮ್ಮ ವಶಕ್ಕೆ ಒಪ್ಪಿಸಿದನಲ್ಲಾ ಎಂದು ಯೋಚಿಸುವವರಾಗಿ ಮುನುಷ್ಯರನ್ನು ಮೆಚ್ಚಿಸಬೇಕೆನ್ನದೆ ಹೃದಯವನ್ನು ಪರಿಶೋಧಿಸುವ ದೇವರನ್ನೇ ಮೆಚ್ಚಿಸಬೇಕೆಂದು ಮಾತಾಡುತ್ತೇವೆ. ನಿಮಗೆ ತಿಳಿದಿರುವ ಪ್ರಕಾರ ನಾವು ಎಂದಿಗೂ ಮುಖಸ್ತುತಿಯನ್ನು ಮಾಡುವವರಾಗಿ ಕಾಣ ಬಂದಿಲ್ಲ, ಮತ್ತು ದ್ರವ್ಯಾಶೆಯನ್ನು ಮರೆಮಾಡುವುದಕ್ಕಾಗಿ ವೇಷವನ್ನು ಹಾಕಿಕೊಂಡವರಾಗಿಲ್ಲ; ಇದಕ್ಕೆ ದೇವರೇ ಸಾಕ್ಷಿ. ಇದಲ್ಲದೆ ನಾವು ಕ್ರಿಸ್ತನ ಅಪೊಸ್ತಲರಾಗಿರುವದರಿಂದ ನಮಗೆ ಗೌರವವನ್ನು ಕೊಡಬೇಕೆಂದು ಹೇಳ ಬಹುದಾಗಿದ್ದರೂ ಮನುಷ್ಯರಿಂದ ಬರುವ ಮಾನವನ್ನು ನಿಮ್ಮಿಂದಾಗಲಿ ಇತರರಿಂದಾಗಲಿ ಹೊಂದಲಪೇಕ್ಷಿಸುವವರಾಗಿಲ್ಲ"** (1 ಥೆಸಲೋನಿಕದವರಿಗೆ 2: 3–6).

**"ತನ್ನನ್ನು ತಾನೇ ಹೊಗಳಿಕೊಳ್ಳುವವನು ಯೋಗ್ಯನಲ್ಲ; ಕರ್ತನು ಯಾರನ್ನು ಹೊಗಳುತ್ತಾನೋ ಅವನೇ ಯೋಗ್ಯನು"** (2 ಕೊರಿಂಥದವರಿಗೆ 10:18).

ಅತ್ಯಂತ ಹೆಚ್ಚಿನ ರೀತಿಯಲ್ಲಿ ಹೃದಯ ಕುಗ್ಗಿಸುವ ವಿಷಯಗಳಲೋಂದು ಏನೆಂದರೆ, ಬೋಧಕನು ಮುಖಸ್ತುತಿಗಾಗಿ, ಎಚ್ಚರಿಸಲು ಹಾಗೂ ಆತ್ಮೋನ್ನತಿಗಾಗಿ ಹೀಗೆ ಇಂಥ ವಿಷಯಗಳಿಗಾಗಿ ಪ್ರಸಂಗ ಪೀಠವನ್ನು ಬಳಸುತ್ತಾರೆ. ಪೌಲನು ತನ್ನ ಬೋಧನೆಯಲ್ಲಿ ಬಹು ಸ್ಪಷ್ಟವಾಗಿದ್ದನು. ಇವು ತಪ್ಪಾಗುವುದಿಲ್ಲ ಅಶುದ್ಧವಾದುದಲ್ಲ, ಜನರನ್ನು ಸಂತೋಷಪಡಿಸುವುದಲ್ಲ. ಮುಖಸ್ತುತಿಯಲ್ಲ, ದುರಾಶೆಯಲ್ಲ ಅಥವಾ ಎಚ್ಚರಿಸುವುದಲ್ಲ, ತನ್ನ ಬೋಧನೆಯಲ್ಲಿ ಆತ್ಮ ಪ್ರಶಂಸೆ ಹುಡುಕುವುದಲ್ಲ.

ಮುಖ ಸ್ತುತಿ—ಒಬ್ಬ ಬೋಧಕನು ಪ್ರಸಂಗ ಪೀಠದ ಹಿಂದೆ ಇದ್ದು, ಕುಳಿತಿರುವ ಸಭಿಕರಲ್ಲಿ ಬಹುಶಃ ಪ್ರಸಿದ್ಧನಾದ, ರಾಜಕೀಯ ವ್ಯಕ್ತಿ ಅಥವಾ ಕ್ರೀಡಾ ಪಟು, ಮುಂತಾದ ಒಬ್ಬ ದೊಡ್ಡ ವ್ಯಕ್ತಿಯ ಆಹಂ ಅನ್ನು ಬಗ್ಗು ಬಡಿಯುವಂತೆ, ಅವರು ಎಷ್ಟು ಅದ್ಭುತರಾದವರು ಎಂದು ಹೇಳುತ್ತಾ ಮುಖ ಸ್ತುತಿ ಮಾಡಲಾರಂಭಿಸುತ್ತಾರೆ! ಹೀಗೆ ಮಾಡಬೇಡಿ. ಸಭಿಕರಲ್ಲಿ

ಕುಳಿತಿರುವ ಯಾರಾದರೂ ದೊಡ್ಡ ವ್ಯಕ್ತಿಗಳಿದ್ದರೆ, ಅವರು ಇರಲಿ. ನೀವು ಅವರ ಹೆಸರುಗಳನ್ನು ಕೂಗಿ ಕರೆದು ಅವರನ್ನು ಉಬ್ಬಿಸಬೇಕಾಗಿಲ್ಲ. ಅವರು ಯಥಾರ್ಥವಾಗಿ ಕರ್ತನನ್ನು ಆರಾಧಿಸಲು ಬಂದಿರುವುದಾದರೆ, ನೀವು ಅವರ ಹೆಸರನ್ನು ಪ್ರಸಂಗ ಪೀಠದಿಂದ ಕೂಗಲಿಲ್ಲ ಎಂಬ ದೂರನ್ನು ನೀವು ಹೊಂದುವುದಿಲ್ಲ ಅವರು ಗಮನಿಸಲ್ಪಡುವುದಿಲ್ಲ. ಅವರು ಆರಾಧನೆಗೆ ಹಾಗೂ ಪ್ರಾರ್ಥನೆಗಾಗಿ ಬಂದಿರುತ್ತಾರೆ.

ಎಚ್ಚರಿಕೆ ನೀಡು—ಒಬ್ಬ ಬೋಧಕನು ಪ್ರಸಂಗಪೀಠದ ಹಿಂದೆ ಇದ್ದು ಜನರಿಗೆ ಪ್ರಕಟಣೆ ಮಾಡುವುದರಿಂದ ಹಣವನ್ನು ಸೆಳೆಯುವಾಗ, "ಕರ್ತನು ನನಗೆ ಹೀಗೆ ಹೇಳುತ್ತಾನೆ, ಇಲ್ಲಿರುವ 10 ಮಂದಿ, ಪ್ರತಿಯೊಬ್ಬರೂ 10000 ರೂಗಳನ್ನು ಕೊಡಬೇಕು, ಆ 10 ಜನರು ನಿಂತುಕೊಳ್ಳಿ," ಅಥವಾ "ನಿಮ್ಮ ಕೈ ಚೀಲದಲ್ಲಿ ನೀವು ಹೊಂದಿರುವ ಅತಿದೊಡ್ಡದಾದ ನೋಟುಗಳನ್ನು ತೆಗೆಯಿರಿ," ಅಥವಾ "ನಿಮ್ಮ ಕೈಚೀಲದಲ್ಲಿರುವ ಎಲ್ಲವನ್ನೂ ತೆಗೆದು ಕಾಣಿಕೆಯ ಚೀಲದಲ್ಲಿ ಹಾಕಿರಿ," ಹೀಗೆ ಆತನು ಎಚ್ಚರಿಕೆಯಲ್ಲಿ ಕಾರ್ಯನಿರತನಾಗಿದ್ದಾನೆ! ಕಾಣಿಕೆಯಲ್ಲಿ ಹಣವನ್ನು ಕೊಡುವಂತೆ ಜನರನ್ನು ಬಲಾತ್ಕಾರ ಪಡಿಸಬಾರದು. ಕರ್ತನಿಗೆ ಕೊಡುವಂತೆ ಸುಮ್ಮನೆ ಜನರನ್ನು ಆಹ್ವಾನಿಸಿರಿ, ಅವರು ತಮ್ಮ ಹೃದಯಗಳು ತುಂಬಿದಂತೆ ಏನನ್ನು ಬೇಕಾದರೂ ಕೊಡ ಬಯಸಿದ್ದನ್ನು ಕೊಡಲಿ ಹಾಗೂ ನಿಮ್ಮ ಅಗತ್ಯತೆಗಳನ್ನು ಸಂಧಿಸಲಿ ದೇವರಲ್ಲಿ ನಂಬಿಕೆಯಿಡಿರಿ! ನೀವು ಜನರಿಂದ ಹಣವನ್ನು ಸೆಳೆಯಬೇಕಾಗಿಲ್ಲ!

ಆತ್ಮೋನ್ನತಿ—ಒಬ್ಬ ಬೋಧಕರು ಪ್ರಸಂಗ ಪೀಠದ ಹಿಂದೆ ಇದ್ದು ಹಾಗೂ ತನ್ನ ಬಗ್ಗೆಯೇ ಜಂಭಕೊಚ್ಚಿಕೊಳ್ಳುವಾಗ, ತಾನು ಪ್ರಯಾಣ ಮಾಡಿದ ಎಷ್ಟೋ ಸ್ಥಳಗಳ ಬಗ್ಗೆ, ತಾನು ಬೋಧನೆ ಮಾಡಿದ ದೊಡ್ಡ ಗುಂಪುಗಳ ಬಗ್ಗೆ ಜಂಭ ಕೊಚ್ಚಿಕೊಳ್ಳುವಾಗ, ತಾನು ತನ್ನ ಸಭಿಕರನ್ನು ಪ್ರಭಾವಿತರನ್ನಾಗಿ ಮಾಡಿ ದೇವರಿಗೆ ಯೋಗ್ಯತೆಯಿಂದ ಮಹಿಮೆ ಪಡಿಸದೆ ಇರುವಾಗ ಹೀಗೆ ಮಾಡುತ್ತಾನೆ, ಹೀಗೆ ಅವನು ಆತ್ಮೋನ್ನತಿಯಲ್ಲಿ ನಿಶ್ಚಯ ಮಾಡಿಕೊಂಡಿದ್ದಾನೆ! ಹೀಗೆ ಮಾಡಬೇಡಿ. ಏನು ನಡೆಯಿತೆಂಬುದರ ಬಗ್ಗೆ ಒಂದು ಸಂಕ್ಷಿಪ್ತವಾದ ವರದಿಯನ್ನು ಹಂಚಿಕೊಳ್ಳಿ ಹಾಗೂ ದೇವರ ವಾಕ್ಯವನ್ನು ಪ್ರಸಂಗಿಸಲು ಹಾಗೂ ಉಪದೇಶಿಸಲು ಮತ್ತು ಕರ್ತನನ್ನು ಉಜ್ವಲಗೊಳಿಸಲು ಮುಂದುವರಿಯಿರಿ. ನೀವು ನಿಮ್ಮ ಪ್ರತಿ ಫಲವನ್ನು

ಪರಲೋಕದಲ್ಲಿ ಪಡೆಯುವಿರಿ. ಇದು ಜನರ ಶ್ಲಾಘನೆಗಿಂತಲೂ ಉತ್ತಮವಾದುದಾಗಿದೆ! ನೀವು ಒಂದು ಸಾಕ್ಷಿಯನ್ನು ಅಥವಾ ನಡೆದ ಒಂದು ಘಟನೆಯನ್ನು ಹಂಚಿಕೊಳ್ಳುವಾಗ ನೀವು ಏಕೆ ಇದನ್ನು ಮಾಡುವುದು ಎಂದು ನಿಮ್ಮನ್ನು ನೀವೆ ಕೇಳಿಕೊಳ್ಳಿರಿ "ನಾನು" ಮತ್ತು "ನನ್ನನ್ನು" "ನನ್ನ" ಎಂಬುದರ ವೈಯಕ್ತಿಕ ಸರ್ವನಾಮಗಳನ್ನು ನೀವು ಹೇಗೆ ಬಳಸುತ್ತೀರಿ ಎಂಬುದನ್ನು ಪರಿಶೀಲಿಸಿರಿ. ನಿಮ್ಮ ಪ್ರಚೋದನೆಯು ನಿಮ್ಮನ್ನು, ಜನರ ಕಣ್ಣುಗಳಲ್ಲಿ ಒಳ್ಳೇ ರೀತಿಯಲ್ಲಿ ಕಾಣುವಂತೆ ಮಾಡುವುದಾದರೆ– ದೇವರು ನಿಮ್ಮ ಹೃದಯವನ್ನು ತಿಳಿದಿರುತ್ತಾನೆ ನೀವು ಆತ್ಮೋನ್ನತಿಯಲ್ಲಿ ನಿಶ್ಚಯಿಸಿಕೊಂಡಿರುತ್ತೀರಿ. ಸಾಕ್ಷಿಯಲ್ಲಿ "ನಾನು" ಎಂಬುದು ನಾಯಕತ್ವ ಹೊಂದಿದ್ದರೆ, ನೀವು ಆತ್ಮೋನ್ನತಿಯನ್ನು ನಿಶ್ಚಯಿಸಿ ಕೊಂಡಿರುತ್ತೀರಿ. ನೀವು ಜಾಗರೂಕರಾಗಿರಿ. ಒಂದು ಸಾಕ್ಷಿ ಅಥವಾ ಘಟನೆಯನ್ನು ಹಂಚಿ ಕೊಳ್ಳುವಾಗ, ದೇವರನ್ನು ಮಹಿಮೆ ಪಡಿಸುವ ಶುದ್ಧವಾದ ಹೃದಯದೊಂದಿಗೆ ಇದನ್ನು ಮಾಡಿರಿ, ದೇವರು ಏನು ಮಾಡುತ್ತಿದ್ದಾನೆ. ಏನು ಬೋಧಿಸುತ್ತಿದ್ದಾನೆ ಎಂಬುದನ್ನು ಆಚರಿಸಲು, ಜನರೊಂದಿಗೆ ನಿಜವಾದ ಜೀವಿತ ಕತೆಗಳನ್ನು ಪ್ರೋತ್ಸಾಹಿಸಿ, ಹಂಚಿಕೊಳ್ಳಿರಿ.

## ಪ್ರಸಂಗ ಪೀಠದ ಸಮಯವನ್ನು ಸೈತಾನನಿಗೆ ಕೊಡಬೇಡಿ

**"ಧರ್ಮೋಪದೇಶಕನಾದ ಎಜ್ರನು ಪಾರಾಯಣಕ್ಕಾಗಿ ಮಾಡಲ್ಪಟ್ಟ ಮರದ ಪೀಠದ ಮೇಲೆ ನಿಂತನು. ಅವನ ಬಲಗಡೆಯಲ್ಲಿ ಮತ್ತಿತ್ಯ, ಶೆಮ, ಅನಾಯ, ಊರಿಯ, ಹಿಲ್ಕೀಯ, ಮಾಸೇಯ ಎಂಬವರೂ ಎಡಗಡೆಯಲ್ಲಿ ಪೆದಾಯ, ಮೀಷಾಯೇಲ್, ಮಲ್ಕೀಯ, ಹಾಷುಮ್, ಹಷ್ಬದಾನ, ಜೆಕರ್ಯ, ಮೇಷುಲ್ಲಾಮ್ ಎಂಬವರೂ ನಿಂತರು. ಸರ್ವ ಸಮೂಹಕ್ಕಿಂತಲೂ ಎತ್ತರವಾದ ಸ್ಥಳದಲ್ಲಿ ನಿಂತಿದ್ದ ಎಜ್ರನು ಜನರ ಸಮಕ್ಷದಲ್ಲಿ ಗ್ರಂಥವನ್ನು ತೆರೆದ ಕೂಡಲೇ ಎಲ್ಲರೂ ಎದ್ದು ನಿಂತರು. ಎಜ್ರನು ಪರಾತ್ಪರ ದೇವರಾದ ಯೆಹೋವನನ್ನು ಸ್ತುತಿಸಿದ್ದಕ್ಕೆ ಸರ್ವಜನರೂ ತಮ್ಮ ಕೈಗಳನ್ನೆತ್ತಿ ಆಮೆನ್, ಆಮೆನ್ ಎಂದು ಹೇಳಿ ನೆಲದ ಮಟ್ಟಿಗೂ ತಲೆಬಾಗಿ ಯೆಹೋವನನ್ನು ಆರಾಧಿಸಿದರು" (ನೆಹೆಮೀಯ 8:4–6).**

ಜನರು ಧರ್ಮಶಾಸ್ತ್ರ ಗ್ರಂಥವನ್ನು ಓದುವುದಕ್ಕೆ ಜನರು ನೀಡಿದ ಭಯಭಕ್ತಿಯನ್ನು ಆಲೋಚಿಸಿರಿ. ಎಜ್ರನು ಗ್ರಂಥವನ್ನು ಓದಲು ತೆರೆದಾಗ, ಎಲ್ಲಾ ಜನರು ನಿಂತು ಕೊಂಡಿದ್ದರು. ಅವರು ತಮ್ಮ ಕೈಗಳನ್ನೆತ್ತಿ, ತಮ್ಮ ತಲೆಗಳನ್ನು ಬಾಗಿಸಿ ಹಾಗೂ ತಮ್ಮ ಮುಖಗಳನ್ನು ನೆಲಕ್ಕೆ ಹಚ್ಚಿ ಸಾಷ್ಟಾಂಗ ನಮಸ್ಕಾರ ಮಾಡಿದರು.

ಪ್ರಸಂಗ ಪೀಠವು ದೇವರ ವಾಕ್ಯವು ಸಾರಲ್ಪಡುವ ಒಂದು ಪವಿತ್ರ ಸ್ಥಳವಾಗಿದೆ. ನಾವು ಪ್ರಸಂಗ ಪೀಠದ ಪವಿತ್ರತೆಯನ್ನು ಕಾಪಾಡಬೇಕು ಪಿಶಾಚನಿಗೆ ಯಾವ ಪ್ರಸಂಗ ಪೀಠ ಸಮಯವನ್ನೂ ಕೊಡಬೇಡಿ!. ಒಬ್ಬ ಬೋಧಕರು ಮತ್ತೊಬ್ಬ ಬೋಧಕರ ವಿರುದ್ಧವಾಗಿ ಜಗಳ ಮಾಡಲು ಅಥವಾ ಕೆಟ್ಟದಾಗಿ ಮಾತನಾಡಲು ಪ್ರಸಂಗ ಪೀಠವನ್ನೂ ಬಳಸುವುದಾದರೆ, ಅವನು ಆ ಸ್ಥಳದ ಪವಿತ್ರತೆಯನ್ನು ಅಪವಿತ್ರಗೊಳಿಸುತ್ತಾನೆ. ಬೋಧಕನು ಒಬ್ಬ ರಾಜಕೀಯ ವ್ಯಕ್ತಿಯನ್ನು ಅಥವಾ ರಾಜಕೀಯ ಕಾರ್ಯಕ್ರಮವನ್ನು ವೃದ್ಧಿ ಪಡಿಸಲು ಪ್ರಸಂಗ ಪೀಠವನ್ನು ಬಳಸುವುದಾದರೆ, ಅವನು ಆ ಸ್ಥಳದ ಪವಿತ್ರತೆಯನ್ನು ಅಪವಿತ್ರಗೊಳಿಸುತ್ತಾನೆ ಒಬ್ಬ ಬೋಧಕನು ಒಂದು ವ್ಯವಹಾರದ ಅಭಿಪ್ರಾಯವನ್ನು (ತನ್ನ ಸ್ವಂತದ ಅಥವಾ ತನ್ನೊಂದಿಗೆ ಪಾಲುದಾರರಾಗಿರುವ ಯೊರೋಬ್ಬರ) ವೃದ್ಧಪಡಿಸಲು ಪ್ರಸಂಗ ಪೀಠವನ್ನು ಬಳಸಿದರೆ, ಅವನು ಆ ಸ್ಥಳದ ಪವಿತ್ರತೆಯನ್ನು ಅಪವಿತ್ರಗೊಳಿಸುತ್ತಾನೆ, ಹಾಗೂ  ಇದೇ ರೀತಿಯಲ್ಲಿ ಇದರಲ್ಲಿ ದೇವರ ವಾಕ್ಯವು ಪವಿತ್ರಾತ್ಮನ ಶಕ್ತಿಯಲ್ಲಿ ಪ್ರಸಂಗಿಸಲ್ಪಡ ಬೇಕಾದ ಪ್ರಸಂಗಪೀಠವು ಬಹಳಷ್ಟು ಅನ್ಯಾಯ ಹಾಗೂ ದುರುಪಯೋಗಕ್ಕೆ ಒಳಗಾಗುತ್ತದೆ ದೇವರ ಸೇವಕರಾದ ನಾವು ಇಂಥಾ ಪ್ರಸಂಗ ಪೀಠದ ದುರುಪಯೋಗಗಳನ್ನು ಒಳಸದೆ ದೂರವಾಗಿರಬೇಕು ಹಾಗೂ ಆರಂಭದ ಕೆಲಸಗಳ ಮೇಲೆ ಕೇಂದ್ರೀಕರಿಸಿರಿ.

## ಜನರನ್ನು ನಿಮ್ಮ ಕಡೆಗೆ ಸೆಳೆದುಕೊಳ್ಳಬೇಡಿರಿ

**"ದೇವರು ಸ್ವರಕ್ತದಿಂದ ಸಂಪಾದಿಸಿಕೊಂಡ ಸಭೆಯನ್ನು ಪರಿಪಾಲಿಸುವದಕ್ಕಾಗಿ ಪವಿತ್ರಾತ್ಮನು ನಿಮ್ಮನ್ನೇ ಆ ಹಿಂಡಿನಲ್ಲಿ ಅಧ್ಯಕ್ಷರಾಗಿ ಇಟ್ಟಿರುವದರಿಂದ ನಿಮ್ಮ ವಿಷಯದಲ್ಲಿಯೂ ಎಲ್ಲಾ ಹಿಂಡಿನ ವಿಷಯದಲ್ಲಿಯೂ ಎಚ್ಚರಿಕೆಯಾಗಿರಿ. ನಾನು ಹೋದ ಮೇಲೆ ಕ್ರೂರವಾದ ತೋಳಗಳು ನಿಮ್ಮೊಳಗೆ ಬರುವವೆಂದು ನಾನು ಬಲ್ಲೆನು; ಅವು ಹಿಂಡನ್ನು ಕನಿಕರಿಸುವುದಿಲ್ಲ. ಇದಲ್ಲದೆ ನಿಮ್ಮಲ್ಲಿಯೂ ಕೆಲವರು ಎದ್ದು ವ್ಯತ್ಯಾಸ ಬೋಧನೆಗಳನ್ನು ಮಾಡಿ ಯೇಸುವಿನ ಶಿಷ್ಯರನ್ನು ತಮ್ಮ ಹಿಂದೆ ಎಳಕೊಳ್ಳುವರು. ಆದಕಾರಣ ನಾನು ಕಣ್ಣೀರು ಸುರಿಸುತ್ತಾ ಮೂರು ವರುಷ ಹಗಲಿರುಳು ಎಡೆಬಿಡದೆ ಪ್ರತಿಯೊಬ್ಬನಿಗೆ ಬುದ್ಧಿ ಹೇಳಿದೆನೆಂದು ನೀವು ಜ್ಞಾಪಕ ಮಾಡಿಕೊಂಡು ಎಚ್ಚರವಾಗಿರಿ" (ಅಪೊಸ್ತಲರ ಕೃತ್ಯಗಳು 20: 28–31).**

**"ಕಲ್ಪಿಸಿ ಹೇಳುವವರು ತನಗೆ ಮಾನ ಬರಬೇಕೆಂದು ಅಪೇಕ್ಷಿಸುತ್ತಾನೆ, ತನ್ನನ್ನು ಕಳುಹಿಸಿದವನಿಗೆ ಮಾನ ಬರಬೇಕೆಂದು ಅಪೇಕ್ಷಿಸುವವನು ಸತ್ಯವಂತನು, ಅಧರ್ಮವು ಅವನಲ್ಲಿ ಇಲ್ಲ" (ಯೋಹಾನ 7: 18).**

ದೇವರ ವಾಕ್ಯದ ಸೇವಕನಾಗಿರುವುದು ಕೀರ್ತಿಯನ್ನು ಕಟ್ಟುವ ಒಂದು ವ್ಯಾಯಾಮವಲ್ಲ. ನೀವು ಎಷ್ಟು ಮಂದಿ ಅಭಿಮಾನಿಗಳನ್ನು ಅಂದರೆ ನಿಮ್ಮ ಬೋಧನೆಯ ಶೈಲಿಯನ್ನು ಇಷ್ಟ ಪಡುವಂಥವರನ್ನು ಹೊಂದಿರುತ್ತೀರಿ? ನೀವು ಎಷ್ಟು ಹೃದಯಗಳನ್ನು ಕದಿಯ ಬಹುದು ಎಂಬುದರ ಬಗ್ಗೆ ಅಲ್ಲ, ಇದರಿಂದ ಅವರು ನಿಮ್ಮ ಬೆಂಬಲಿಗರಾಗಿ ನಿಮ್ಮೊಂದಿಗೆ ನಿಲ್ಲುತ್ತಾರೆ. ನೀವು ದೇವರ ವಾಕ್ಯವನ್ನು ಬೋಧಿಸಿ, ಉಪದೇಶಿಸುವಾಗ ನೀವು ನಿಮ್ಮನ್ನು ಚಿತ್ರಣದ ಹೊರಗೆ ಇಡಿರಿ, ಹೌದು, ನೀವು ನಿಮ್ಮ ಜೀವಿತದ ಮಾದರಿಗಳು ಹಾಗೂ ಅನುಭವಿಗಳನ್ನು; ನಿದರ್ಶನಗಳಾಗಿ ಬಳಸಿ, ದೇವರ ವಾಕ್ಯವನ್ನು ಹೇಗೆ ಅನ್ವಯಿಸಿರುವಿರೆಂದು ತೋರಿಸಬಹುದು. ಆದರೆ ಜನರು ನಿಮ್ಮ ಕಡೆಗೆ ಸೆಳೆಯಲ್ಪಡದ ರೀತಿಯಲ್ಲಿ ಇದನ್ನು ಮಾಡಿರಿ, ಆದರೆ ದೇವರು ಹಾಗೂ ಆತನ ವಾಕ್ಯದ ಕಡೆಗೆ ಹೋಗಲು ಒತ್ತಾಯ ಉಂಟಾಗುತ್ತದೆ, ನಿಮ್ಮ ಬೋಧನೆ ಹಾಗೂ ಉಪದೇಶದ ಮುಖಾಂತರ ಜನರು ನಿಮ್ಮನ್ನು ನೋಡದಿರಲಿ, ಆದರೆ ಯೇಸುವನ್ನು ನೋಡಲಿ. ದೇವರ ಒಬ್ಬ ನಿಜವಾದ ಸೇವಕರಾಗಿರಿ—ಅಂದರೆ, ಕರ್ತನು ಮಾತ್ರ ಮಹಿಮೆ ಹೊಂದಲ್ಪಡಲಿ ಹಾಗೂ ಸ್ವಯಂ ಪ್ರೇರಣೆಗೆ ಯಾವುದೂ ಮುಂದೆ ಬರಬೇಕೆಂಬ ಆಶೆ ಹೊಂದದೆ ಇರುವವರಾಗಿರಿ.

## ದೇಹದಲ್ಲಿ (ಸಭೆಯಲ್ಲಿ) ಭೇದಗಳನ್ನೂ ಹಾಗೂ ವಿಘ್ನಗಳನ್ನೂ ಉಂಟು ಮಾಡಬೇಡಿರಿ

**"ಸಹೋದರರೇ, ನೀವು ಹೊಂದಿದ ಉಪದೇಶಕ್ಕೆ ವಿರುದ್ಧವಾಗಿ ಬೇದಗಳನ್ನೂ ವಿಘ್ನಗಳನೂ ನಿಮ್ಮಲ್ಲಿ ಉಂಟು ಮಾಡುವವರನ್ನು ಗುರುತಿಟ್ಟು ಅವರನ್ನು ಬಿಟ್ಟು ತೊಲಗಿ ಹೋಗಿರಿ ಎಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ. ಅಂಥವರು ನಮ್ಮ ಕರ್ತನಾದ ಕ್ರಿಸ್ತನ ಸೇವೆಯನ್ನು ಮಾಡದೆ ತಮ್ಮ ಹೊಟ್ಟೆಯ ಸೇವೆಯನ್ನೇ ಮಾಡುವವರಾಗಿ ನಯದ ನುಡಿಗಳಿಂದಲೂ ಹೊಗಳಿಕೆಯ ಮಾತುಗಳಿಂದಲೂ ನಿಷ್ಕ ಪಟಿಗಳ ಹೃದಯಗಳನ್ನು ಮೋಸಗೊಳಿಸುತ್ತಾರೆ"**(ರೋಮಾಪುರದವರಿಗೆ 16: 17–18).

**"ಯೆಹೊದ್ಯರಿಗಾಗಲಿ ಗ್ರೀಕರಿಗಾಗಲಿ ದೇವರ ಸಭೆಗಾಗಲಿ ವಿಘ್ನವಾಗ ಬೇಡಿರಿ. ನಾನಂತೂ ಸ್ವಪ್ರಯೋಜನಕ್ಕಾಗಿ ಚಿಂತಿಸದೆ ಮನುಷ್ಯರೆಲ್ಲರೂ ರಕ್ಷಣೆ ಹೊಂದಬೇಕೆಂದು ಅವರ ಪ್ರಯೋಜನಕ್ಕಾಗಿ ಚಿಂತಿಸಿ ಎಲ್ಲರನ್ನೂ ಎಲ್ಲಾ ವಿಷಯಗಳಲ್ಲಿ ಮೆಚ್ಚಿಸುವವನಾಗಿದ್ದೇನೆ"** (1 ಕೊರಿಂಥದವರಿಗೆ 10:32–33).

ದೇವರ ವಾಕ್ಯದ ಸೇವಕರಾಗಿ, ನಾವು ಬೋಧಿಸುವುದು ತಿಳುವಳಿಕೆ ನೀಡಿ, ದೇಹವನ್ನು (ಸಭೆಯನ್ನು) ಕಟ್ಟುತ್ತದೆ ಅಥವಾ ದೇವ ಜನರ ನಡುವೆ ವಿಘ್ನವನ್ನು ಮಾಡಿ ವ್ಯತ್ಯಾಸವನ್ನು ಉಂಟುಮಾಡುತ್ತದೆ. ನಾವು ಬೇರೊಬ್ಬ ಕ್ರೈಸ್ತ ಪಂಗಡದ ಬೋಧನೆ ಹಾಗೂ ರೂಢಿಗಳೊಂದಿಗೆ ಒಪ್ಪಿಕೊಳ್ಳದಿರಬಹುದು, ಇತರ ಪಂಗಡಗಳ ಬಗ್ಗೆ ಅಲ್ಲಗಳೆಯುವ ರೀತಿಯಲ್ಲಿ ಟೀಕೆಗಳನ್ನು ಮಾಡಿ, ಒಳ್ಳೆಯದಕ್ಕಿಂತಲೂ ತೊಂದರೆಯನ್ನೇ ಆಗಾಗ್ಗೆ ಹೆಚ್ಚಾಗಿ ಮಾಡಬಹುದು. ನಾನು ಈ ತಪ್ಪುಗಳನ್ನು ನಾನಾಗಿಯೇ ಮಾಡಿರುತ್ತೇನೆ, ಹಾಗೂ ನನ್ನನ್ನು ಎಡೆಬಿಡದೆ ಗಮನಿಸಿಕೊಳ್ಳುತ್ತಾ ಹಗುರವಾಗಿ ಮಾತನಾಡದೆ, ಒಂದು ರೀತಿಯಲ್ಲಿ ಇತರ ಕ್ರೈಸ್ತ ಪಂಗಡಗಳ ಬಗ್ಗೆ ವಿನೋದವಾಗಿ ಮಾತನಾಡದಂತೆ ನಿಗಾ ಇಡುತ್ತೇನೆ. ನಾನು ನನಗೆ, ದೇವರವಾಕ್ಯದ ಬೋಧನೆ ಹಾಗೂ ಉಪದೇಶದೊಂದಿಗೆ ಉಳಿಯುವಂತೆ ನೆನಪು ಹುಟ್ಟಿಸಬೇಕಾಗಿದೆ.



# ಅಭಿಷೇಕಿಸುವುದು

"ನಮ್ಮನ್ನು ಅಭಿಷೇಕಿಸಿ, ಕ್ರಿಸ್ತನ ಅನ್ಯೋನ್ಯತೆಯಲ್ಲಿ ಸೇರಿಸಿ, ನಮ್ಮನ್ನು ನಿಮ್ಮೊಂದಿಗೆ ಸ್ಥಿರಪಡಿಸುವವನು ದೇವರೇ."

(2 ಕೊರಿಂಥದವರಿಗೆ 1:21)

ಅಧ್ಯಾಯ 6

# 6

# ಅಭಿಷೇಕಿಸುವುದು

ಸೇವೆಯಲ್ಲಿ ವಿಷಯಗಳು ಸಂಭವಿಸುವಂತೆ ಮಾಡುವ ಮಣ್ಣಿನ ಪಾತ್ರೆಗಳಾದ ನಮ್ಮ ಮೇಲೆ ದೇವರಾತ್ಮನ ಅಭಿಷೇಕ ಉಂಟಾಗುತ್ತದೆ. ನಮ್ಮ ಜೀವಿತಗಳ ಮುಖಾಂತರ ಪವಿತ್ರಾತ್ಮನ ಕಾರ್ಯದಿಂದ ಜನರು ರಕ್ಷಿಸಲ್ಪಡುತ್ತಾರೆ. ಸ್ವಸ್ಥರಾಗುತ್ತಾರೆ, ಬಿಡುಗಡೆ ಹೊಂದುತ್ತಾರೆ ಹಾಗೂ ಅದ್ಭುತಗಳು ನಡೆಯುತ್ತವೆ. ಆತ್ಮನ ಕಾರ್ಯಗಳು ಬಹು ಶ್ರೇಷ್ಠವಾದದ್ದು. ವರಗಳ ತೋರ್ಪಡಿಸುವಿಕೆಗಳು ಹಾಗೂ ವಿಶ್ವಾಸಿಗಳನ್ನು ನೋಡುವುದರ ಫಲಗಳು ತಿಳುವಳಿಕೆ ನೀಡುತ್ತವೆ ಹಾಗೂ ಅಚ್ಚರಿ ಹುಟ್ಟುಸುತ್ತವೆ ಹಾಗೂ ಕರ್ತನಾದ ಯೇಸುಕ್ರಿಸ್ತನ ಹೆಸರಿನ ಮೇಲೆ ತೆಗಳಿಕೆಯನ್ನು ತರುವ ದೇವರ ಸೇವಕರಿಂದ ಹಲವಾರು ದುರುಪಯೋಗಗಳನ್ನು ಉಂಟುಮಾಡುತ್ತದೆ. ಈ ಅಧ್ಯಾಯವು, ಪವಿತಾತ್ಮನ ಕೈಗಳಲ್ಲಿ ಗೌರವ ಸೂಚಿಸುವ ಪಾತ್ರೆಗಳಾಗಿ ನಾವು ಉಳಿಯುವ ಒಂದು ಸ್ಥಳಕ್ಕೆ ನಮ್ಮನ್ನು ಕರೆಯುತ್ತದೆ.

## ಜನರ ಸೇವೆಮಾಡಲು ಅಭಿಷೇಕ ಹಾಗೂ ವರಗಳು ಕೊಡಲ್ಪಟ್ಟಿವೆ

**"ಆದರ ಪ್ರತಿಯೊಬ್ಬನಲ್ಲಿ ತೋರಿಬರುವ ದೇವರಾತ್ಮನ ವರಗಳು ಸರ್ವರ ಪ್ರಯೋಜನಾರ್ಥವಾಗಿ ಕೊಡಲ್ಪಟ್ಟಿವೆ"** (1 ಕೊರಿಂಥದವರಿಗೆ 12:7).

**"ಹಾಗೆಯೇ ನೀವೂ ಆತ್ಮ ಪ್ರೇರಿತವಾದ ನುಡಿಗಳನ್ನಾಡುವುದಕ್ಕೆ ಅಪೇಕ್ಷಿಸುವವರಾಗಿರುವುದರಿಂದ ಸಭೆಗೆ ಭಕ್ತಿವೃದ್ಧಿ ಉಂಟಾಗುವ ಹಾಗೆ ಅದಕ್ಕಿಂತಲೂ ಹೆಚ್ಚಾದದ್ದನ್ನು ಮಾಡುವುದಕ್ಕೆ ಪ್ರಯತ್ನಿಸಿರಿ"** (1 ಕೊರಿಂಥವರಿಗೆ 14:12).

**"ನಮ್ಮನ್ನೇ ಪ್ರಸಿದ್ಧಿ ಪಡಿಸಿಕೊಳ್ಳದೆ ನಮ್ಮನ್ನು ಯೇಸುವಿನ ನಿಮ್ಮಿತ್ತ ನಿಮ್ಮ ದಾಸರೆಂತಲೂ ಕ್ರಿಸ್ತೇಸುವನ್ನೇ ಕರ್ತನೆಂತಲೂ ಪ್ರಸಿದ್ಧಿಪಡಿಸುತ್ತೇವೆ"** (2 ಕೊರಿಂಥದವರಿಗೆ 4:5).

ಆತ್ಮನ ಫಲಗಳು ವಿಶ್ವಾಸಿಗಳ ಸಾಮಾನ್ಯವಾದ ಒಳಿತಿಗಾಗಿ ಹಾಗೂ ದೇಹವನ್ನು ಕಟ್ಟಲು ಕೊಡಲ್ಪಟ್ಟಿದೆ. ವರಗಳು ಹಾಗೂ ಅಭಿಷೇಕವು ಒಬ್ಬ

ವ್ಯಕ್ತಿಯು ಇತರರ ಮುಂದೆ ಮೇಲಕ್ಕೆತ್ತಲ್ಪಡಲು ಆದರೆ ದೇವ ಜನರ ಸೇವೆಗಾಗಿ ಕಾಲುವೆಯಾಗಿರಲು ಕೊಡಲ್ಪಟ್ಟಿವೆ.

ದೇವರು ನಮ್ಮ ಜೀವಿತಗಳಲ್ಲಿ ಇಟ್ಟಿರುವ ವರಗಳು ಹಾಗೂ ಅಭಿಷೇಕದಲ್ಲಿ ನಾವು ಮುಂದುವರಿದು ಕಾರ್ಯಮಾಡುವಾಗ, ಈ ಸತ್ಯತೆಯನ್ನು ಸ್ಪಷ್ಟವಾಗಿ ಇರಿಸಿಕೊಂಡು ಇದನ್ನು ನಮ್ಮ ದೇವ ಜನರ ಸೇವೆ ಮಾಡಲು ನಮ್ಮ ಉದ್ದೇಶವಾಗಿ ಮಾಡಿಕೊಳ್ಳಬೇಕು. ನಮಗೆ ಕೊಡಲ್ಪಟ್ಟ ವರಗಳನ್ನು ನಾವು ದೇವ ಜನರನ್ನು ಕಟ್ಟಲು ಹಾಗೂ ಆತನ ರಾಜ್ಯವನ್ನು ವಿಸ್ತರಿಸಲು ಅಭ್ಯಾಸ ಮಾಡಿಕೊಳ್ಳಬೇಕು.

ಬಹಳಷ್ಟು ಮಂದಿ ನಾವು ಮಾಡುವ ತಪ್ಪು, ದೇವರ ಅಭಿಷೇಕ ಮತ್ತು ವರಗಳನ್ನು ನೀಡುವುದನ್ನು ಕಾರ್ಯಚರಣೆ ಮಾಡಲು ಆರಂಭಿಸುವಾಗ, ನಾವು ಈಗ ವಿಶೇಷವಾದವರು ಹಾಗೂ ಈಗ ನಮಗೆ "ಸೇವೆ" ಮಾಡಬೇಕು ಎಂದು ಭಾವಿಸುತ್ತೇವೆ. ಇದರಿಂದ ನಮ್ಮ ಸೇವೆಯು ವಿಸ್ತರಿಸಲ್ಪಡುತ್ತದೆ. ಅತ್ಯಂತ ಹೆಚ್ಚಾಗಿ ಅಭಿಷೇಕಿಸಲ್ಪಟ್ಟ ಹಾಗೂ ಅತ್ಯಂತ ಹೆಚ್ಚಿನ ವರಗಳನ್ನು ಹೊಂದಿದ ಒಬ್ಬಾತನು ಅಂದರೆ ಕರ್ತನಾದ ಯೇಸು ತಾನು "ಸೇವೆ ಮಾಡಿಸಿಕೊಳ್ಳಲು ಬರಲಿಲ್ಲ ಆದರೆ ಸೇವೆ ಮಾಡುವುದಕ್ಕಾಗಿ ಬಂದವನು" ಎಂದು ಹೇಳಿದನು. (ಮತ್ತಾಯ 20:28). ನಾವು ಆತನ ಮಾದರಿಯನ್ನು ಅನುಸರಿಸಬೇಕಲ್ಲವೇ? ಹೆಚ್ಚಾಗಿ ಅಭಿಷೇಕಿಸಲ್ಪಟ್ಟ ವರಗಳನ್ನು ಹೊಂದಿರುವವರು ನಾವು, ಹೆಚ್ಚಾಗಿ, ಒಬ್ಬ ಸೇವಕನಂತೆ ಆಗಬೇಕು.

## ನಿಜವಾದ ನೀನು ಯಾರಂದರೆ, ನಿನಗಿರುವ ವರ ಮತ್ತು ಅಭಿಷೇಕದ ಹೊರಗೆ ಯಾವ ರೀತಿ ಇದ್ದೀಯೋ ಅದೇ

ನಾವು ಅಭಿಷೇಕದ ಒಳಗೆ ಇರುವಾಗ ನಾವು ಜನರ ಕಣ್ಣುಗಳಲ್ಲಿ ಅದ್ಭುತವಾಗಿ ಕಾಣುತ್ತೇವೆ. ವಾಕ್ಯವು ಬಲವಾಗಿ ಬರುವಾಗ, ವರಗಳು ಸುರಿಯುತ್ತವೆ. ಅದ್ಭುತಗಳು ಸಂಭವಿಸುತ್ತವೆ ಹಾಗೂ ಇದು ಬಹು ಅದ್ಭುತವಾದದ್ದು. ನಾವು ವೇದಿಕೆಯ ಮೇಲೆ, ಉನ್ನತದಲ್ಲಿದ್ದಾಗ, ಏನು ನಡೆಯಿತೋ ಅದರಿಂದ ಜನರು ನಮ್ಮನ್ನು ಬಹು ಉನ್ನತ ಸ್ಥಿತಿಯಲ್ಲಿ ಯೋಚಿಸುತ್ತಾರೆ. ದೇವರ ಅಭಿಷೇಕದಿಂದಲೇ ಎಲ್ಲವೂ ಆಗುತ್ತದೆ. ಅದು

ನಮ್ಮನ್ನಲ್ಲ ಜನರು ಏನು ನಡೆಯುತ್ತದೆಂದು ನೋಡುವುದರೊಂದಿಗೆ ನಮ್ಮೊಡನೆ ಸಂಗಾತಿಗಳಾಗಲು ಪ್ರೋತ್ಸಾಹಿಸಲ್ಪಡುತ್ತಾರೆ. ನಮ್ಮ ವರ ಅಭಿಷೇಕದಿಂದ ನಮ್ಮ ಗುರುತಿಸುವಿಕೆಯ ಮೇಲೆ ಆಧಾರ ಹೊಂದಿರುತ್ತಾರೆ. ಅವರ ಅನಿಸಿಕೆ, ತಪ್ಪು. ಅದೂ ನಮ್ಮನ್ನಲ್ಲ. ಇದು ದೇವರೇ ಕೆಲಸದಲ್ಲಿದ್ದಾನೆಂದರ್ಥ.

ನಿಜವಾದ "ನಮ್ಮನ್ನು" ಅಂದರೆ ನಾವು ವೇದಿಕೆಯಿಂದ ಇಳಿದು ಸಮನಾದ ನೆಲದ ಮೇಲೆ ನಡೆಯುವಾಗ ಆ ರೀತಿ ಆಗುತ್ತೇವೆ. ನಾವು ನಮ್ಮನ್ನು ನೋಡಲು, ನಾವು ನಿಜವಾಗಿ ಯಾರಾಗಿದ್ದೇವೋ ಆ ಮಣ್ಣಿನ ಪಾತ್ರೆಗಳಾಗಿ, ನಮ್ಮಲ್ಲಿ ಜನರು ನಾವು ಸೇವೆಯಲ್ಲಿರುವಾಗ ನೋಡುತ್ತಾರೋ ಅದರ ಕಪಟ ಗುರುತಿಸುವಿಕೆಯನ್ನು ಹೊಂದದೆ ಇರುವುದನ್ನು ನೋಡಲು ಕಲಿಯಬೇಕು. ನಿಜವಾಗಿ "ನನಗೆ" ಎಂಬುದು ನಾನು ಬೋಧಿಸುತ್ತಾ ಸೇವೆ ಮಾಡುತ್ತಾ ನಾನು ಮೇಲೆ ಇಲ್ಲದೆ ಇದ್ದಾಗ, ಆಗಿರುತ್ತದೆ. ದೇವರು ನನ್ನ ಮೂಲಕ ಕೆಲಸ ಹೇಗೆ ಮಾಡಿದರೂ ಸರಿ ನಾನು ಒಂದು ಮಣ್ಣಿನ ಪಾತ್ರೆ ಎಂಬುದನ್ನು ನಾನು ಅರಿತುಕೊಳ್ಳಬೇಕು. ನಾನು ದೇವರೊಂದಿಗೆ ವಿಧೇಯನಾಗಿ ಹಾಗೂ ದೇವರ ಮತ್ತು ಮನುಷ್ಯನ ಮುಂದೆ ನಮ್ರತೆಯಿಂದ ನಡೆದುಕೊಳ್ಳುವ ಅಗತ್ಯವಿದೆ. ನಾನು ನನ್ನ ದೇಹವನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವ ನನ್ನ ಮನಸ್ಸನ್ನು ಕಾಯುವ ಹಾಗೂ ನನ್ನ ನುಡಿಗಳ ಮೇಲೆ ನಿಗಾ ಇಡುವ ಅಗತ್ಯವಿದೆ. ನಾನು ಜೀವಿತದುದ್ದಕ್ಕೂ ಯೇಸು ಕ್ರಿಸ್ತನಲ್ಲಿರುವ ಬೇರೆ ಯಾರೋ ಒಬ್ಬ ಬೇರೆ ಯಾರೇ ಒಬ್ಬ ವಿಶ್ವಾಸಿಯಂತೆ ನಡೆಯಬೇಕಾಗಿದೆ.

## ನಿನ್ನ ನಿಜವಾದ ಆತ್ಮಿಕ ಗುರಿತಿಸುವಿಕೆಯು ನೀವು ಕ್ರಿಸ್ತನಲ್ಲಿ ಯಾರು ಎಂಬುದಾಗಿರುತ್ತದೆ

**"ನಾವು ಆತನ ನಿರ್ಮಾಣ, ಸತ್ಕಾರ್ಯಗಳನ್ನು ಮಾಡುವುದಕ್ಕಗಿಯೇ ಕ್ರಿಸ್ತ ಯೇಸುವಿನಲ್ಲಿ ಸೃಷ್ಟಿಸಲ್ಪಟ್ಟೆವು. ನಾವು ಸತ್ಕಾರ್ಯಗಳನ್ನು ನಡಿಸುವವರಾಗಿ ಬದುಕಬೇಕೆಂದು ದೇವರು ನಮ್ಮನ್ನು ಮೊದಲೇ ನೇಮಿಸಿದನು"** (ಎಫೆಸದವರಿಗೆ 2:10).

ಆಗಾಗ್ಗೆ ದೇವರ ಸೇವಕರಾಗಿ, ನಮ್ಮ ಗುರುತಿಸುವಿಕೆಯನ್ನು ನಮ್ಮ ಆತ್ಮಿಕ ಕರೆಯುವಿಕೆ, ವರ ಪಡೆಯುವಿಕೆ, ಅಭಿಷೇಕಿಸಲ್ಪಡುವುದು ಹಾಗೂ ಪೂರೈಸಲ್ಪಟ್ಟಿರುವ ಒಳ್ಳೆ ಕಾರ್ಯಗಳ ಮೇಲೆ ಆಧಾರ ಮಾಡಿಕೊಳ್ಳುತ್ತೇವೆ.

ನಾವು ಸೃಷ್ಟಿಸಲ್ಪಟ್ಟಿರುವ "ಸ್ವರೂಪ"ದಲ್ಲಿ ಆನಂದಿಸುತ್ತೇವೆ. ಇದು ನಾವು ಹೊಂದಿದ ಸೇವೆಯಿಂದಲೇ ಆಗಿದೆ ಹೇಗಾದರೂ ಇದು ಅಲ್ಲಾಡುವ ನೆಲವಾಗಿದೆ, ಏಕೆಂದರೆ ಇವೆಲ್ಲವೂ ಒಂದೇ ರಾತ್ರಿಯಲ್ಲಿ ಬದಲಾಗಲು ಸಾಧ್ಯ. ನಮ್ಮ ಮೇಲೆ ಜನರದೃಷ್ಟಿಯು, ನಮ್ಮ ಅಭಿಷೇಕವು ಹಾಗೂ ನನ್ನ ಸೇವೆಯೂ ಬದಲಾಗಬಹುದು, ಇದರಿಂದ ನಾವು ನಮ್ಮ ಗುರುತಿಸುವಿಕೆಯನ್ನು ಯೇಸು ಕ್ರಿಸ್ತನಲ್ಲಿ. ನಾವು ಯಾರಾಗಿದ್ದೇವೋ ಅದರ ಮೇಲೆ ರಚಿಸಬೇಕು. ನಾವು ಕ್ರಿಸ್ತನಲ್ಲಿ ಯಾರು–ರಕ್ತವು ಕೊಂಡು ಕೊಂಡಂತೆ, ರಕ್ತದಿಂದ ತೊಳೆಯಲ್ಪಟ್ಟ ದೇವ ಜನರು—ಬದಲಾವಣೆಯಾಗುವುದಿಲ್ಲ. ಇದು ನಮ್ಮ ನಿಜವಾದ ಗುರುತಿಸುವಿಕೆಯಾಗುತ್ತದೆ. ನಿಮ್ಮನ್ನೇ, ನಿಮ್ಮ ವರ, ಕರೆ ಅಥವಾ ಅಭಿಷೇಕದ ರೀತಿಯಲ್ಲಲ್ಲದೆ ನೀವು ಕ್ರಿಸ್ತಯೇಸುವಿನಲ್ಲಿ ಏನಾಗಿದ್ದೀರಿ ಎಂಬಂತೆ ನೋಡಿ. ನಿಮ್ಮ ಜೀವಿತವನ್ನು ನೀವು ಕ್ರಿಸ್ತನಲ್ಲಿ ಯಾರಾಗಿದ್ದೀರೆಂದು ಜೀವಿಸಿರಿ, ಸವಾಲುಗಳನ್ನು ಎದುರಿಸಿರಿ, ಹಾಗೂ ಅಡಚಣೆಗಳನ್ನು ಕ್ರಿಸ್ತನಲ್ಲಿ ನೀವೂ ಯಾರಾಗಿದ್ದೀರೋ ಹಾಗೆ ಜಯಿಸಿರಿ.

## ಯೋಗ್ಯವಾದುದನ್ನು ಬಯಸಿರಿ, ಅನುಕರಣೆಗಳನ್ನು ಸ್ವೈರಿಸಿಕೊಳ್ಳಬೇಡಿರಿ

**"ನೀನು ಇಸ್ರಾಯೇಲರಿಗೆ ಆಜ್ಞಾಪಿಸತಕ್ಕದ್ದೇನೆಂದರೆ—ನೀವು ನಿಮ್ಮ ಸಂತತಿಯವರೂ ಈ ತೈಲವನ್ನು ನನ್ನ ಸೇವೆಗೆ ನೇಮಕವಾದ ಅಭಿಷೇಕ ತೈಲವೆಂದು ತಿಳಿದುಕೊಳ್ಳಬೇಕು. ಮೈಗೆ ಹಚ್ಚಿಕೊಳ್ಳುವುದಕ್ಕೆ ಇದನ್ನು ಉಪಯೋಗಿಸಬಾರದು. ಇದರಲ್ಲಿರುವ ಜೀನಸುಗಳ ಮೇರೆಗೆ ಬೇರೆ ಕೆಲಸಕ್ಕೆ ತೈಲವನ್ನು ಮಾಡಲೇಬಾರದು. ಇದು ದೇವರ ವಸ್ತು, ಇದನ್ನು ಮೀಸಲೆಂದು ನೀವು ತಿಳಿದುಕೊಳ್ಳಬೇಕು" (ವಿಮೋಚನಕಾಂಡ 30:31,32).**

ಹಳೆ ಒಡಂಬಡಿಕೆಯಲ್ಲಿ ಪವಿತ್ರವಾದ ಅಭಿಷೇಕ ತೈಲವು ಹೊಸ ಒಡಂಬಡಿಕೆಯಲ್ಲಿನ ಆತ್ಮನ ಅಭಿಷೇಕದ ರೀತಿಯನ್ನು ಹೊಂದಿದೆ. ಪವಿತ್ರವಾದ ಅಭಿಷೇಕ ತೈಲವು ಸಾಧಾರಣವಾದ ಶಾರೀರಿಕ ಉದ್ದೇಶಗಳಗಾಗಿ ಬಳಸಲ್ಪಡುತ್ತಿರಲಿಲ್ಲ. ಹಾಗೂ ಅದನ್ನು ತಯಾರು ಮಾಡಲು ಯಾವ ಅನುಕರಣೆಗಳೂ ಇರಲಿಲ್ಲ. ಇದು ಭಯ ಭಕ್ತಿಯೊಂದಿಗೆ ನಡೆಸಿಕೊಳ್ಳಲ್ಪಡಬೇಕಾಗಿತ್ತು. ಇದು ಪರಿಶುದ್ಧವಾದುದಾಗಿತ್ತು. ಇದರಂತೆಯೇ ಹೊಸ ಒಡಂಬಡಿಕೆಯಲ್ಲಿ ಪವಿತ್ರಾತ್ಮನ ಅಭಿಷೇಕವೂ ಇರುತ್ತಿತ್ತು.

ಅಭಿಷೇಕವು ಶುದ್ಧತ್ವ ಹೊಂದಿತ್ತು. ಆದರೆ ಅದು ಮಾನವ ಪಾತ್ರೆಗಳ ಮುಖಾಂತರ ವ್ಯಕ್ತಪಡಿಸಲ್ಪಡಬೇಕಾಗುತ್ತಿತ್ತು. ಅದು ಅಲ್ಲ, ಅಭಿಷೇಕವು

ಪರಿಪೂರ್ಣವಾದುದಾಗಿತ್ತು ಆದರೆ ಪಾತ್ರೆಗಳಲ್ಲ. ಇದರಿಂದ ಮಾನವ ಪಾತ್ರೆಗಳಾದ ನಮ್ಮ ಮೂಲಕ ದೇವರ ಅಭಿಷೇಕವನ್ನು ನಮ್ಮ ಶಾರೀರಿಕ ಕಾರ್ಯಗಳಿಂದ ನಾವು ಮಲಿನಗೊಳಿಸುತ್ತೇವೆ. ಅಥವಾ ಕೆಲವು ವೇಳೆ ಶರೀರದೊಳಕ್ಕೆ ಅಭಿಷೇಕಮಾಡಲು, ಆತನ ಆತ್ಮನು ಕಾಣಿಸಿಕೊಳ್ಳದೆ ಇದ್ದರೂ ಕೂಡಾ ಅನುಕರಣೆ ಮಾಡಲು ಪ್ರಯತ್ನಿಸುತ್ತೇವೆ. ಇಲ್ಲಿಯೇ ನಾವು ಆತ್ಮ ಸಮಯವನ್ನು ಅಭ್ಯಾಸಮಾಡಿಕೊಳ್ಳಬೇಕು. ಇದು ಸೋಲುವ ಭಯದಿಂದಲ್ಲ. ಆದರೆ ಕರ್ತನಿಗಾಗಿ ಭಯಭಕ್ತಿಯಿಂದ ಮಾಡಬೇಕು. ನಾವು ಭಯವನ್ನು ತೊಲಗಿಸಬೇಕು. ಹಾಗೂ ಪೌಲನು ತಿಮೊಥೆಯನಿಗೆ ಪ್ರೋತ್ಸಾಹಿಸಿದಂತೆ ನಮ್ಮೊಳಗಿನ ದೇವರ ವರಗಳನ್ನು ಕಲಕಿ (2 ತಿಮೊಥೆಯನಿಗೆ 1:6–7). ನಮ್ಮ ಶರೀರ ಮತ್ತು ಮಾಂಸದಾರಣೆಗಳನ್ನು ಹಾಗೂ ಮಾಂಸಮಯವಾದ ಉತ್ಕಂಟತೆಯನ್ನು ದಾರಿ ತಪ್ಪಿಸಬೇಕು. ಇದರಿಂದ ನಮ್ಮ ಮೂಲಕ ಏನು ಪ್ರತ್ಯಕ್ಷವಾಗುತ್ತದೋ ಅದು ಆತ್ಮನ ಹಾಗೂ ಆತನ ಚಿತ್ತವನ್ನು ನಡಿಸುವಂತೆ ಶುದ್ಧವಾದ ಕಾರ್ಯವಾಗಿರುತ್ತದೆ.

ಇದು ದೇವರಿಗೆ ಮಾತ್ರ ಮಹಿಮೆ ಉಂಟುಮಾಡುವ ಹಾಗೂ ಎಲ್ಲಾ ಯಥಾರ್ಥತೆಯಿಂದ ಎಲ್ಲಾ ಯಥಾರ್ಥತೆಯಿಂದ ದೇವ ಜನರ ಸೇವೆಮಾಡುವಂಥದನ್ನು ಹುಡುಕುವ ಒಂದು ಹೃದಯ ಮನೋಭಾವದ ಅಗತ್ಯತೆ ಹೊಂದಿರುತ್ತದೆ. ಆತನು ಏನು ಮಾಡುತ್ತಾನೋ ಅದನ್ನು ನೋಡಿ ಅದನ್ನು ಮಾತ್ರ ಮಾಡಲು ಇಚ್ಚೆಯ ಅಗತ್ಯವಿರುತ್ತದೆ. ಆತನೊಂದಿಗೆ ಮುಂದುವರಿಯಲು ಆತನು ಸಾಗುವಾಗ ಹಾಗೂ ತಾನು ಸ್ಪಷ್ಟಪಡಿಸಿದ್ದನ್ನು ಮಾತ್ರ ಮಾತನಾಡುವಂಥದ್ದಾಗಿರುತ್ತದೆ. ಇಲ್ಲಿಯೆ ನಿಜವಾದ ಫಲವು ಹುಟ್ಟುತ್ತದೆ. “ಬದುಕಿಸುವಂಥದು ಆತ್ಮವೇ, ಮಾಂಸವು ಯಾವುದಕ್ಕೂ ಬರುವುದಿಲ್ಲ” (ಯೋಹಾನ 6:63 a).

## ಕ್ರೈಸ್ತ ಪ್ರಪಂಚದಲ್ಲಿ ಇತ್ತೀಚಿನ "ಕಲ್ಪನೆ"ಯ ಹಿಂದೆ ಓಡಬೇಡಿರಿ

**“ಬದುಕಿಸುವಂಥದು ಆತ್ಮವೇ, ಮಾಂಸವು ಯಾವುದಕ್ಕೂ ಬರುವುದಿಲ್ಲ, ನಾನು ನಿಮಗೆ ಹೇಳಿರುವ ಮಾತುಗಳೇ ಆತ್ಮವಾಗಿಯೂ ಜೀವವಾಗಿಯೂ ಅವೆ” (ಯೋಹಾನ 6:63).**

ಕೆಲವು ಕಾರಣಕ್ಕಾಗಿ, ನಾವು ಕ್ರೈಸ್ತೀಯ ಸೇವೆಯಲ್ಲಿ ಮತ್ತೆ ಮತ್ತೆ ಬರುವ ಮತ್ತು ಹೋಗುವ “ಭ್ರಮೆ”ಗಳು ಅಥವಾ ಕಲ್ಪನೆ ಕಥೆಗಳ ಎಲ್ಲಾ

ರೀತಿಗಳನ್ನೂ ಆಚರಿಸುತ್ತೇವೆ. ಇವುಗಳಲ್ಲಿ ಕೆಲವು ಕ್ರೈಸ್ತ ಸಾಮ್ರಾಜ್ಯದ ಎಲ್ಲಾ ಕಡೆಗಳಲ್ಲಿ, ಒಳ್ಳೆಯ ವ್ಯಾಪಾರ, ಮಾಧ್ಯಮಗಳ ವೃದ್ಧಿಗಳು ಮುಂತಾದವುಗಳ ಮುಖಾಂತರ "ಗುಂಪಿನ ಬೇಡಿಕೆ"ಯನ್ನು ಪಡೆದು ನಂತರ ನಂದಿಹೋಗುತ್ತದೆ. ಅಭಿಷೇಕದ ಅಭ್ಯಾಸದಲ್ಲಿಯೂ, ನಾವು ಒಬ್ಬರ ಕೋಟನ್ನು ಬಿಸಾಡುವುದು, ಮೈಕ್‌ನಲ್ಲಿ ಊದುವುದು, ಜನರನ್ನು ನೆಲದ ಮೇಲೆ ನೂಕುವುದು ಇತ್ಯಾದಿ, ಅಂಶಗಳ ಸೇವೆಯ "ಕಾದಂಬರಿ" ಮಾರ್ಗಗಳ ಎಲ್ಲಾ ರೀತಿಗಳನ್ನು ನಾವು ನೋಡುತ್ತೇವೆ. ದೇವರ ಆತ್ಮನು ನಿಜವಾಗಿಯೂ ಕೆಲವು ರೀತಿಯ ವ್ಯಕ್ತಪಡಿಸುವಿಕೆಯಲ್ಲಿ ಇದ್ದರೆ ಹಾಗೂ ನಿರ್ದಿಷ್ಟವಾಗಿ ಇದನ್ನು ಮಾಡಲು  ನಿಮ್ಮನ್ನು ನಡಿಸಿದರೆ, ಇದು ಸರಿಯಾದದ್ದು ಮತ್ತು ಒಳ್ಳೆಯದು. ಹೇಗಾದರೂ ಮಾಡಲು ಇದು ಕೇವಲ ಮತ್ತೊಂದು "ಕಾದಂಬರಿ"ಯ ವಿಷಯವಾಗಿದ್ದರೆ, ದೇವರ ಅಭಿಷೇಕದ ಆಲೋಚನೆಯಾಗಿರುವುದಾಗಿದ್ದರೆ. ಆಗ ಅದನ್ನು ಮಾಡಬೇಡಿ. ಸುಮ್ಮನೆ ಯಾರನ್ನೋ ನಕಲು ಮಾಡಬೇಡಿರಿ. ನಿಜವಾದ ಪರೀಕ್ಷೆಯು ಹುಟ್ಟಿರುವ ಫಲದಲ್ಲಿವೆ. ಶರೀರಕ್ಕೆ ಸಂಬಂಧಿಸಿದ್ದು ಏನೇ ಆಗಿದ್ದರೂ,—ಅಂದರೆ ಮಾನವನ ಅನ್ವೇಷಣೆ—ಯೋಗ್ಯವಾದ ಹಾಗೂ ಕೊನೆಯವರೆಗೂ ಇರುವ ರೂಪಾಂತರವನ್ನು ತರುವುದಿಲ್ಲ. ಯಾವುದೇ ಅಂಶವು ದೇವರ ಆತ್ಮನಿಗೆ ನಿಜವಾದದ್ದಾಗಿದ್ದರೆ, ಯೋಗ್ಯವಾದ ಫಲವನ್ನು—ಜೀವಿತ ರೂಪಾಂತರ ನೀಡುವ ಫಲಿತಾಂಶ ನೀಡುವ ಫಲವನ್ನು, ಯೇಸುವನ್ನು ಮಹಿಮೆಪಡಿಸುವ ಫಲವನ್ನು ಹಾಗೂ ಉಳಿಯುವ ಫಲವನ್ನು ಕೊಡುತ್ತದೆ.

## ನೀವು ದೇವರಿಂದ ಪಡೆಯದೆ ಹೋದ ಹೊರತು ನೀವು ಯಾವುದನ್ನೂ ಹೊಂದಲು ಸಾಧ್ಯವಿಲ್ಲ

**"ಯೋಹಾನನು ಪರಲೋಕದಿಂದ ಅನುಗ್ರಹಿಸೋಣವಾದದ್ದನ್ನೇ ಹೊರತು ಮನುಷ್ಯನು ಹೆಚ್ಚೇನೂ ಹೊಂದಲಾರನು"** (ಯೋಹಾನ 3:27).

ಅಭಿಷೇಕದ ಸತ್ಯತೆಯು ಒಬ್ಬರಿಂದ ಮತ್ತೊಬ್ಬರಿಗೆ ಪ್ರತ್ಯೇಕವಾಗಿರುತ್ತದೆ ಹಾಗೂ ವರಗಳು ಯಾವ ಪ್ರಶ್ನೆಯೂ ಇಲ್ಲದೆ, ಕೈಗಳನ್ನು ಇಡುವುದರ ಮುಖಾಂತರ ಕಾರ್ಯರೂಪಕ್ಕೆ ಬರುತ್ತವೆ. ಹೇಗಾದರೂ ಇದು ಇಚ್ಛಾನುಸಾರವಾಗಿ ಆಗುವುದಿಲ್ಲ. ಒಬ್ಬ ದೇವರ ಸೇವಕರಿಂದ "ಎರಡರಷ್ಟು ಭಾಗ" ಅಭಿಷೇಕವನ್ನು ಪಡೆಯಲು ಅಥವಾ

ಅಭಿಷೇಕದ ಭಾಗ ನೀಡುವ "ಅದೇ ಅಳತೆಯನ್ನು ಪ್ರತ್ಯೇಕಿಸುವುದಾದರೆ, ಅದೇನೂ ಸಣ್ಣ ವಿಷಯವಲ್ಲ. ಇದು ಒಬ್ಬರ ಜೀವಿತದಲ್ಲಿ ದೇವರ ನೇರವಾದ ಹಾಗೂ ದೇವರ ಕರೆಯಲ್ಲಿ ಸಮನಾಗಿರುವಂತೆ ಸಂಭವಿಸುತ್ತದೆ. ನಿಮ್ಮಲ್ಲಿ ಯಾರಾದರೂ ಎಷ್ಟು ಸಂಖ್ಯೆಯ ಜನರಿದ್ದರೂ ಪ್ರತ್ಯೇಕತೆಗಾಗಿ ಅವರು ನಿಮ್ಮ ಮೇಲೆ ಕೈಗಳನ್ನಿಡಬಹುದು. ಆದರೆ ಒಂದು ನಿರ್ದಿಷ್ಟ ಸೇವೆಗಾಗಿ ನೀವು ಕರೆಯಲ್ಪಡದೆ, ವರಗಳನ್ನು ಹೊಂದದರೆ ಇರುವುದಾದರೆ ನೀವು ಆ ಸೇವೆಗಾಗಿ ಅಭಿಷೇಕ ಹೊಂದುವುದಿಲ್ಲ. ಅಭಿಷೇಕವು, ಒಂದು ಸಂತತಿಯಲ್ಲಿ ಕರೆಯಲ್ಪಟ್ಟು ನಿಮ್ಮ ಜೀವಿತದಲ್ಲಿ ವರಗಳನ್ನು ಹೊಂದುತ್ತದೆ. ಎಲ್ಲದರ ಅಂತ್ಯದಲ್ಲಿ ಹೇಳಲ್ಪಟ್ಟು ಮಾಡಲ್ಪಟ್ಟಾಗ, ದೇವರಿಂದ ನಿಮಗೆ ಕೊಡಲ್ಪಡದ ಹೊರತು ನೀವು ಏನನ್ನೂ ಪಡೆದುಕೊಳ್ಳಲಾರಿ. ಇದರಿಂದ ಅಂತ್ಯದಲ್ಲಿ, ಇದು ದೇವರೊಂದಿಗೆ ಆಪ್ತತೆ ಹಾಗೂ ಆತನೊಂದಿಗೆ ನಮ್ಮ ನಡೆಯ ಮೇಲೆ ಆತುಕೊಳ್ಳುತ್ತದೆ. ಇದರಿಂದ ಕೈಗಳನ್ನು ನಮ್ಮ ಮೇಲೆ ಪ್ರತ್ಯೇಕತೆಗಾಗಿ ಇಡಿಸಿಕೊಳ್ಳುವುದು ಪ್ರಯೋಜನಕರವಾದದ್ದು, ನಮ್ಮ ಕೇಂದ್ರೀಕರಣವು ದೇವರೊಂದಿಗೆ ಆಪ್ತತೆಯ ಮಹತ್ವವುಳ್ಳ ಆಳದೊಳಕ್ಕೆ ಮುಂದುವರಿಯಬೇಕು. ಇದೇ ಅಭಿಷೇಕದ ಸ್ಥಳವಾಗಿರುತ್ತದೆ.

## ತೀರ್ಪುಮಾಡಲು ನಿಮ್ಮನ್ನು ಒಪ್ಪಿಸಿಕೊಡಿರಿ

**"ಪ್ರವಾದಿಗಳು ಇಬ್ಬರಾಗಲಿ ಮೂವರಾಗಲೀ ಮಾತಾಡಲಿ, ಮಿಕ್ಕಾದವರು ಕೇಳಿ ವಿವೇಚನೆ ಮಾಡಲಿ"** (1 ಕೊರಿಂಥದವರಿಗೆ 14:29).

**"ಪ್ರವಾದನೆಗಳನ್ನು ಹೀನೈಸಬೇಡಿರಿ, ಆದರೆ ಎಲ್ಲವನ್ನೂ ಪರಿಶೋಧಿಸಿ ಒಳ್ಳೇದನ್ನೇ ಭದ್ರವಾಗಿ ಹಿಡಿದುಕೊಳ್ಳಿರಿ** (1 ಥೆಸಲೋನಿಕದವರಿಗೆ 5:20–21)

ದೇವರಾತ್ಮನು ಪರಿಪೂರ್ಣವಾಗಿದ್ದರೂ, ಆತನು ಕಾರ್ಯಮಾಡುವ ಸಾಧನಗಳು ಅಪರಿಪೂರ್ಣವಾಗಿರುತ್ತದೆ. ಆದ ಕಾರಣ, ಅಪರಿಪೂರ್ಣವಾದ ಪಾತ್ರೆಯ ಮುಖಾಂತರ ರುಜುವಾತಾಗುವುದು ಏನೇ ಇದ್ದರೂ ಅದು ತೀರ್ಪಿಗೆ (ವಿವೇಚನೆ) ಒಳಪಡಬೇಕು, ನಾವು ದೇವರನ್ನು ತೀರ್ಪು ಮಾಡುವುದಿಲ್ಲ ಆದರೆ ಮಾನವ ಪಾತ್ರೆಯ ಮುಖಾಂತರ ರುಜುವಾತಾಗುತ್ತದೆ. ಇದು ಸತ್ಯವೇದಾಧಾರಿತವಾದುದು. ಇದು ವಿಶ್ವಾಸಿಗಳಿಗಾಗಿ ಆತ್ಮಿಕವಾದ ರುಜುವಾತುಗಳನ್ನು ತೀರ್ಪು ಮಾಡುತ್ತದೆ. ಹೇಗಾದರೂ ನಮ್ಮಲ್ಲಿ ಕೆಲವರು, ನಮ್ಮ ಪ್ರವಾದನೆಗಳಲ್ಲಿ ಯಾವಾಗಲೂ

ಪರಿಪೂರ್ಣರು, ವರಗಳನ್ನು ವ್ಯಕ್ತಪಡಿಸುವುದರಲ್ಲಿ ಯವಾಗಲೂ ಸರಿಯಾಗಿದ್ದೇವೆ, ಎಂದು ಆಲೋಚಿಸುವುದರಿಂದ, ಜನರು ಅಭಿಷೇಕದಲ್ಲಿ ನಾವು ಏನನ್ನು ಹೊರಹಾಕಿದ್ದೇವೆ ಎಂಬುದನ್ನು ಮೌಲ್ಯಮಾಪನ ಮಾಡುವುದಕ್ಕಾಗಿ ತಾವು ಸಮಯ ತೆಗೆದುಕೊಳ್ಳುವ ಅಗತ್ಯವಿದೆ ಎಂದು ಹೇಳುತ್ತಾರೆ. ಇದಕ್ಕೆ ಎದುರಾಗಿ, ನಾವು ಇಂಥಾ ವಿಶ್ವಾಸಿಗಳಗಾಗಿ ಸಂತೋಷವಾಗಿರಬೇಕು, ಅಂದರೆ ನಾವು ಈಗ ದೇವರನ್ನು ಪ್ರವಾದನ ವಾಕ್ಯ ಹಾಗೂ ಹೊರಪಟ್ಟ ರುಜುವಾತುಗಳನ್ನು ಹುಡುಕಲು ಜವಾಬ್ದಾರಿ ಹೊಂದಿರುತ್ತಾರೆ. ವಾಸ್ತವವಾಗಿ, ದೇವ ಸೇವಕರಲ್ಲಿ ಒಬ್ಬ ಪ್ರೌಢವ್ಯಕ್ತಿಯ ಸೂಚನೆಯು, ಅವನು / ಆಕೆಯು ಪ್ರವಾದನಾ ಹಾಗೂ ಇತರ ಆತ್ಮಿಕ ರುಜುವಾತುಗಳನ್ನು ಅಂದರೆ ಅವನು ಆಕೆಯ ಹೊರಪಡಿಸುವ ರುಜುವಾತುಗಳನ್ನು ಪರೀಕ್ಷಿಸಲು ವಿಶ್ವಾಸಿಗಳನ್ನು ಪ್ರೋತ್ಸಾಹಿಸುತ್ತಾನೆ/ಳೆ. ಇದು ದೇವರಲ್ಲಿ ಉನ್ನತವಾದ ಆತ್ಮಿಕ ನಿಲುವು ಆಗಿರುತ್ತದೆ.

## ಭಾವಪ್ರಧಾನವಾದ ಹಾಗೂ ಅತಿ ಹೆಚ್ಚಾದ ಭಾವೋದ್ವೇಗಗಳನ್ನು ತಡೆಗಟ್ಟಿರಿ

ನಾವೆಲ್ಲರೂ ವಿಭಿನ್ನವಾದ ಪ್ರಕೃತಿ ಸ್ವಭಾವಗಳು, ಶೈಲಿಗಳು ಹಾಗೂ ಕ್ರಮಗಳನ್ನು ಸೇವೆಯಲ್ಲಿ ಹೊಂದಿರುತ್ತೇವೆಂದು ನಾವು ಅರಿತುಕೊಳ್ಳುತ್ತೇನೆ. ನಾವೆಲ್ಲರೂ ಒಂದೇ ರೀತಿಯಾಗಿಲ್ಲ, ಭಾವನೆಗಳ ವಿಶಾಲ ವ್ಯಾಪ್ತಿಯ ಮತ್ತೊಂದು ಕೊನೆಯಲ್ಲಿ ಕೆಲವರು—ಜೋರಾದ (ಸಶಬ್ದ), ವೈಭವಯುತ, ನಾಟಕೀಯ ಹಾಗೂ ಪೂರ್ಣ ಶಕ್ತಿ ತುಂಬಿದವರಾಗಿರುವಾಗ ನಮ್ಮಲ್ಲಿ ಕೆಲವರು ಬಹುಮಟ್ಟಿಗೆ ನಿರುದ್ವೇಗ ಸ್ಥಿತಿ, ಸೇವೆಯಲ್ಲಿ ಶಾಂತಚಿತ್ತರೂ ಆಗಿರುತ್ತಾರೆ. ಕರ್ತನು ನಮ್ಮೆಲ್ಲರನ್ನೂ ವಿಭಿನ್ನವಾಗಿ ಉಂಟುಮಾಡಿರುತ್ತಾನೆ ಹಾಗೂ ನಮ್ಮ ಮುಖಾಂತರ ಕೆಲಸ ಮಾಡುತ್ತಾನೆ.

ಹೇಗಾದರೂ ಒಬ್ಬ ಬೋಧಕರು ಹುರುಳಿಲ್ಲದೆ ಇರುವಾಗ, ಹಾಗೂ ಸುಮ್ಮನೆ ಭಾವೋದ್ವೇಗಗಳ ಉದ್ರೇಕ ಹೊಂದುತ್ತಾರೆ ಮತ್ತು ಜನರ ಕುತೂಹಲವು ಹೆಚ್ಚುತ್ತದೆ ಎಂದು ಹೇಳುವುದು ಬಹು ಸುಲಭ. ನಾವು ಬಾಯಿಮಾತಿನ ಉತ್ಪ್ರೇಕ್ಷೆಗಳಿರುವಾಗ, ಉನ್ನತ ನಾಟಕೀಯ ಸ್ಥಿತಿ

ಹಾಗೂ ಭಾವ ಪ್ರಧಾನತಾವಾದ—ಇವು ಇರುತ್ತವೆ. ಇದರ ಅಂತ್ಯದಲ್ಲಿ ಇವೆಲ್ಲವೂ ಜನರಿಗೆ ಯಾವ ಒಳಿತನ್ನು ಮಾಡುತ್ತವೆ? ಜನರು ಕರ್ತನನ್ನು ಯೋಗ್ಯವಾದ ರೀತಿಯಲ್ಲಿ ಅನುಭವಿಸಿ, ಅವರ ಜೀವಿತಗಳು ಬದಲಾಗುವುದನ್ನು ಕಾಣಲು ಇವೆಲ್ಲವೂ ನಿಜವಾಗಿ ಸಹಾಯ ಮಾಡುತ್ತವೋ? ಭಾವೋದ್ವೇಗದಿಂದ ನೀವು ಬೋಧಿಸುವ ಸಂದೇಶಕ್ಕೆ ನೀವು ಬಲ ಹೊಂದುವುದು ಒಳ್ಳೆಯದು ಆದರೆ, ನೀವು ಕೇವಲ ಏನನ್ನಾದರೂ ಭಾವಿಸುವಂತೆ ಮಾಡುವುದಕ್ಕಾಗಿ ಜನರ ಭಾವನೆಗಳನ್ನು ಉದ್ರೇಕಿಸುವುದು ಯಾರಿಗಾದರೂ ಒಳ್ಳೆಯದಲ್ಲ. ನಾವು ಆತನಿಗಾಗಿ ಪವಿತ್ರಾತ್ಮನ ಕಾರ್ಯವನ್ನು ಮಾಡಬೇಕಾಗಿಲ್ಲ. ಜನರ ಹೃದಯಗಳ ಮೇಲೆ ಸಾಗುವುದು, ಅದನ್ನು ಗುರುತಿಸದೆ ಇದ್ದರೂ ಸರಿ, ಆತನಿಗೆ ತಿಳಿದಿದೆ!

ಬೇರೊಂದು ರೀತಿಯಲ್ಲಿ ನಾವು ಅತಿಗಹನವಾದ ಬೌದ್ಧಿಕತೆಯ ಮುಖಾಂತರ ಭಾವನಾತ್ಮಕರಾಗಲು ಪ್ರಯತ್ನಿಸುವುದನ್ನು ತಡೆಯಬೇಕು, ಇಲ್ಲಿ ನಾವು ಏನು ಹೇಳುತ್ತೇವೆ ಅಥವಾ ನಮ್ಮ ಬೋಧನೆಯು ಎಲ್ಲಿ ಸುರುಳಿಯಂತೆ ಸುತ್ತಿಕೊಂಡಿದೆ ಎಂಬುದನ್ನು ಯಾರೂ ಅರ್ಥಮಾಡಿಕೊಳ್ಳುವುದಿಲ್ಲ, ಆಗ ಜನರು ಗೊಂದಲಕ್ಕೆ ಒಳಗಾಗುತ್ತಾರೆ. ನಾವು ನೇರವಾಗಿ, ಸರಳವಾಗಿ ಹಾಗೂ ಪ್ರೀತಿಯಿಂದ ಮಾತನಾಡಬೇಕು. ನಮ್ಮ ಗುರಿಯು ಜನರು ಯೇಸುವನ್ನು ಅನುಭವಿಸುವಂತೆ ಹಾಗೂ ನಂಬಿಕೆಯಲ್ಲಿ ಬೆಳೆಯುವಂತೆ ಮಾಡುವಂತಾಗಬೇಕು.

## ಮಿತಿ (ಎಲ್ಲೆ)ಗಳಿಲ್ಲ, ಆದ್ದರಿಂದ ಅಂಚಿನಿಂದ ಬೀಳಬೇಡಿರಿ

**"ನೀನು ಪ್ರತ್ಯಕ್ಷವಾಗಿ ನಮ್ಮ ನಿರೀಕ್ಷೆಗೆ ಮೀರಿದ ಭಯಂಕರ ಕೃತ್ಯಗಳನ್ನು ನಡಿಸಿ ನಿನ್ನ ನಾಮ ಮಹತ್ತನ್ನು ನಿನ್ನ ಶತ್ರುಗಳಿಗೆ ತಿಳಿಯಪಡಿಸಿ ಜನಾಂಗಗಳನ್ನು ನಿನ್ನ ದರ್ಶನದಿಂದ ನಡುಗಿಸಬಾರದೇ!"** (ಯೆಶಾಯ 64:3).

ದೇವರ ಶಕ್ತಿಗೆ, ಆತನು ಕಾರ್ಯ ಮಾಡುವ ರೀತಿಗಳಿಗೆ ತಾನು ತನ್ನನ್ನು ರುಜುವಾತುಪಡಿಸಿಕೊಳ್ಳುವ ಹೊಸ ಸೃಷ್ಟಿಯ ಮಾರ್ಗಗಳಿಗೆ ಮಿತಿಗಳಿಲ್ಲ. ದೇವರು ಖಂಡಿತವಾಗಿಯೂ ತಾಜಾ ಆದ ಮತ್ತು ಹೊಸ ವಿಷಯಗಳನ್ನು ಮಾಡುತ್ತಾನೆ. ಪವಿತ್ರಾತ್ಮನ ಅಭಿಷೇಕವು ತಾಜಾ ಆದ ರೀತಿಗಳಲ್ಲಿ ಖಂಡಿತವಾಗಿ ರುಜುವಾತಾಗುತ್ತದೆ. ನಾವು ಮೊದಲು ಎಂದೂ

ನೋಡಿರದ ವಿಷಯಗಳು ಸಂಭವಿಸುತ್ತವೆ. ನಾವು ಎದುರು ನೋಡಿದ ವಿಷಯಗಳು ಸಂಭವಿಸುತ್ತವೆ. ನಾವು ಎದುರು ನೋಡದ ವಿಷಯಗಳೂ ಕೂಡಾ ಅಸಾಧಾರಣ ರೀತಿಗಳಲ್ಲಿ ಪವಿತ್ರಾತ್ಮನು ನಮ್ಮ ಮಧ್ಯದಲ್ಲಿ ಸಂಚರಿಸುವಾಗ ರುಜುವಾತಾಗಲು ಆರಂಭವಾಗುತ್ತವೆ. ಅಲ್ಲಿ ಪುಸ್ತಕವಿಲ್ಲ, ಅಲ್ಲಿ ಪ್ರಸಂಗವಿಲ್ಲ ಹಾಗೂ ಆತನು ತನ್ನ ಪ್ರಸನ್ನತೆಯನ್ನು ರುಜುವಾತು ಪಡಿಸುವ ಮಾರ್ಗಗಳನ್ನು ಗ್ರಹಿಸಲು ಯಾವ ಮಾನವ ಹೃದಯವೂ ಇಲ್ಲ. ಆತನು ಅನಂತವಾದಾತನು ಹಾಗೂ ಆತನ ರುಜುವಾತು ಪಡಿಸುವ ಮಾರ್ಗಗಳೂ ಆತನ ಅಭಿಷೇಕವೂ ನಮ್ಮ ನಡುವೆ ಇದೆ. ಆತನನ್ನು ಹಿಂಬಾಲಿಸಲು ಆಧಾರವು ನಮಗಾಗಿ ಇದೆ. ಹಾಗೂ ಈ ಗಂಭೀರತಮ ವಿಷಯಗಳು, ಅಂದರೆ ನಾವು ಎದುರು ನೋಡದ ಅಂಶಗಳು ಆತನ ಅಧಿಕಾರ ಯುಕ್ತತೆಯಲ್ಲಿ ನಮ್ಮ ನಡುವೆ ನಡೆಯುತ್ತವೆ. ನಾವು ಆತನನ್ನು ಹಿಂಬಾಲಿಸೋಣ ಹಾಗೂ ರುಜುವಾತು ಪಡಿಸಲು ಆತನ ಪ್ರಸನ್ನತೆಗಾಗಿ ಆಶೆ ಪಡೋಣ ಆದರೆ ಆತನು ನಮ್ಮ ನಡುವೆ ತನ್ನನ್ನು ರುಜುವಾತು ಪಡಿಸುವಂತಾಗಲಿ!



# ಫಲಿತಾಂಶಗಳು

"ನಾನು ಸಸಿಯನ್ನು ನೆಟ್ಟೆನು, ಅಪೊಲ್ಲೋಸನು ನೀರು ಹೊಯಿದನು, ಆದರೆ ಬೆಳೆಸುತ್ತಾ ಬಂದವನು ದೇವರು ಹೀಗಿರಲಾಗಿ ನೆಡುವವನಾಗಲಿ, ನೀರು ಹೊಯ್ಯುವವನಾಗಲಿ ವಿಶೇಷವಾದವನಲ್ಲ, ಬೆಳೆಸುವ ದೇವರೇ ವಿಶೇಷವಾದವನು."

(1 ಕೊರಿಂಥದವರಿಗೆ 3:6–7)

## ಅಧ್ಯಾಯ 7

# 7

# ಫಲಿತಾಂಶಗಳು

ಕರ್ತನಾದ ಯೇಸುವು ನಮ್ಮನ್ನು ಕರೆದನು ಹಾಗೂ ಆತನೇ ನಮಗೆ ದೀಕ್ಷೆ ಕೊಟ್ಟನು. ಇದರಿಂದ ನಾವು ನಿಲ್ಲುವಂಥ ಫಲವನ್ನು ಕೊಡುತ್ತೇವೆ (ಯೋಹಾನ 15:16). ಇದರಿಂದ ಇದು ಫಲಕ್ಕಾಗಿ ಫಲಿತಾಂಶಗಳು ಹಾಗೂ ಉತ್ಪನ್ನಗಳಾಗಿ ಎದುರು ನೋಡುವುದು ಸರಿಯಾದುದಾಗಿದೆ. ನಾವು ಹೆಚ್ಚು ಫಲ ಕೊಡುವಾಗ ತಂದೆಯು ಮಹಿಮೆ ಹೊಂದುತ್ತಾನೆ (ಯೋಹಾನ 15:8). ಈ ಅಧ್ಯಾಯದಲ್ಲಿ ನಾವು ಫಲ ಕೊಡುವ ಹಾಗೂ ಕ್ರೈಸ್ತ ಸೇವಕರಾಗಿ ನಾವು ಮಾಡುವ ಕೆಲಸದ ಮೂಲಕ ಬಂದ ಫಲದ ಪ್ರಕಟಣೆಯ ಅಂತದೃಷ್ಟಿಗಳನ್ನು ನಾವು ಹಂಚಿಕೊಳ್ಳುತ್ತೇವೆ.

## ಕಸಿಮಾಡುವುದು ಅಥವಾ ಕತ್ತರಿಸುವುದು

**"ನಾನೇ ನಿಜವಾದ ದ್ರಾಕ್ಷೇ ಬಳ್ಳಿ. ನನ್ನ ತಂದೆ ತೋಟಗಾರನು. ನನ್ನಲ್ಲಿದ್ದು ಫಲಕೊಡದಿರುವ ಪ್ರತಿಯೊಂದು ಕೊಂಬೆಯನ್ನು ಆತನು ತೆಗೆದು ಹಾಕುತ್ತಾನೆ: ಫಲಕೊಡುವ ಪ್ರತಿಯೊಂದು ಕೊಂಬೆಯು ಹೆಚ್ಚು ಫಲಕೊಡುವ ಹಾಗೆ ಅದನ್ನು ಶುದ್ಧಿಮಾಡುತ್ತಾನೆ"** (ಯೋಹಾನ 15:1,2).

ನಾವು ಫಲ ತುಂಬಿದವರಾಗಬೇಕೆಂದು ದೇವರು ನಮ್ಮನ್ನು ರೂಪಿಸಿದ್ದಾನೆ. ಫಲಭರಿತವಾಗಿರುವುದು ಸಾಧಾರಣವಾದುದು. ದೇವರು ತಾನೇ, ನಾವು ಫಲ ನೀಡುತ್ತೇವೋ ಇಲ್ಲವೋ ಎಂದು ನೋಡುತ್ತಾನೆ. ದೇವರು ನಮ್ಮ ಕ್ರೈಸ್ತ ನಡೆಯಲ್ಲಿ ಹೇಗೆ ಫಲಭರಿತರಾಗಬೇಕೆಂದು ನಮಗೆ ಬೋಧಿಸುತ್ತಾನೆ (2 ಪೇತ್ರನು 1:5–8). ಕರ್ತನಾದ ಯೇಸುವು, ಫಲರಹಿತ ಸ್ಥಿತಿಯು ನಮ್ಮಲ್ಲಿ ಕತ್ತರಿಸಿ ಹಾಕುವ ಸ್ಥಿತಿಯನ್ನು ತರುತ್ತದೆ ಎಂಬ ಒಂದು ವಿದ್ಯುಕ್ತವಾದ ಹೇಳಿಕೆಯನ್ನು ನಮಗೆ ನೀಡಿದ್ದಾನೆ. ಫಲಭರಿತವಾಗಿರುವುದಕ್ಕೆ ಪ್ರತಿಫಲವು ಏನೆಂದರೆ, ನಮ್ಮನ್ನು ತರಿದು ಹಸನು ಮಾಡುವುದು. ಆತನು ಅನಗತ್ಯವಾದವುಗಳನ್ನು ತೆಗೆದು ಹಾಕುತ್ತಾನೆ. ಅಂಥಾ ಯಾವುದೇ ಆದರೂ ಸತ್ತು ಹೋಗಿರುತ್ತದೆ ಹಾಗೂ ನಿರ್ಜೀವವಾಗಿದ್ದು, ಫಲನೀಡುವುದಕ್ಕೆ ತೊಂದರೆ ಉಂಟು ಮಾಡುತ್ತದೆ.

ಆತನು ನಮ್ಮನ್ನು ತರಿದು ಹಸನು ಮಾಡುತ್ತಾನೆ. ಇದರಿಂದ ನಾವು ಇನ್ನೂ ಹೆಚ್ಚು ಫಲಕೊಡುತ್ತೇವೆ. ಹೀಗೆ ದೇವರು ನಮ್ಮಲ್ಲಿ ಕಾರ್ಯ ಮಾಡುತ್ತಾನೆ. ನಮ್ಮಲ್ಲಿ ಫಲಭರಿತ ಸ್ಥಿತಿಯ ಮಟ್ಟವನ್ನು ಹೀಗೆ ಹೆಚ್ಚಿಸುತ್ತಾನೆ. ಆತನು ನಮ್ಮನ್ನು ಒಂದು ಮಟ್ಟದಿಂದ ಮುಂದಿನ 3 ಉನ್ನತ ಫಲಭರಿತ ಸ್ಥಿತಿಯ ಮಟ್ಟಕ್ಕೆ ಏರಿಸುತ್ತಾನೆ.

## ವರಗಳು ಹೆಚ್ಚಳವಾಗಬೇಕು

**"ಐದು ತಲಾಂತು ಹೊಂದಿದವನು ಮುಂದೆ ಬಂದು ಇನ್ನೂ ಐದು ತಲಾಂತು ತಂದು— ಸ್ವಾಮೀ ನೀನು ಐದು ತಲಾಂತನ್ನು ನನಗೆ ಕೊಟ್ಟಿದಿಯಲ್ಲಾ. ಇಗೋ, ಇನ್ನು ಐದು ತಲಾಂತು ಸಂಪಾದಿಸಿದ್ದೇನೆ ಅಂದನು. ಅವನ ಧಣಿಯು—ಭಲಾ, ನಂಬಿಗಸ್ತನಾದ ಒಳ್ಳೇ ಆಳು ನೀನು, ಸ್ವಲ್ಪ ಕೆಲಸದಲ್ಲಿ ನಂಬಿಗಸ್ತನಾಗಿದ್ದಿ, ದೊಡ್ಡ ಕೆಲಸದಲ್ಲಿ ನಿನ್ನನ್ನು ಇಡುತ್ತೇನೆ; ನಿನ್ನ ಧಣಿಯ ಸೌಭಾಗ್ಯದಲ್ಲಿ ಸೇರು ಅಂದನು"** (ಮತ್ತಾಯ 25:20,21).

ಈ ಸಾಮ್ಯದಲ್ಲಿ ಕರ್ತನಾದ ಯೇಸುವು ನಮಗೆ ನಿದರ್ಶನ ನೀಡುವುದೇನೆಂದರೆ, ದೇವರು ನಮಗೆ ತಲಾಂತುಗಳನ್ನು ಅಂದರೆ, ವರಗಳು, ಸಂಪನ್ಮೂಲಗಳು, ಹಾಗೂ ಕರೆಯುವಿಕೆಗಳನ್ನು ಕೊಟ್ಟಿರುತ್ತಾನೆ. ಹಾಗೂ ಆತನು ನಮ್ಮನ್ನು, ಇವು ವೃದ್ಧಿಯಾಗಬೇಕು ಅಥವಾ ಹೆಚ್ಚಬೇಕು, ದೇವರು ನಮಗೆ ಕೊಟ್ಟಿರುವುದರಲ್ಲಿ ನಂಬಿಗಸ್ತಿಕೆಯು, ಅಂದರೆ ಇದು ಕೇವಲ ಈ ವಿಷಯಗಳನ್ನು ನಿರ್ವಹಿಸುವುದರ ಬಗ್ಗೆ ಅಲ್ಲ. ಆದರೆ ಅವು ಹೆಚ್ಚಾಗಿವೆಯೋ ಹಾಗೂ ವೃದ್ಧಿಯಾಗಿವೆಯೋ ಎಂದು ನೋಡಲು ಪ್ರತಿಯೊಂದು ಪ್ರಯತ್ನವನ್ನು ಮಾಡುತ್ತಾನೆ. ದೇವರು ನಮಗೆ ಏನು ಕೊಟ್ಟಿರುತ್ತಾನೋ ಅದನ್ನು ವೃದ್ಧಿಪಡಿಸಿ, ಹೆಚ್ಚಿಸುವುದರಲ್ಲಿ ಕೆಲಸ ಮಾಡುವಾಗ ನಾವು "ಒಳ್ಳೆಯ ಹಾಗೂ ನಂಬಿಗಸ್ತ" ಸೇವಕರಾಗುತ್ತೇವೆ.

## ಫಲವು ತಕ್ಕ ಕಾಲದಲ್ಲಿ ಬರುತ್ತದೆ, ಅದಕ್ಕಾಗಿ ಕಾಯಿರಿ

**"ಅವನು ನೀರಿನ ಕಾಲಿವೆಗಳ ಬಳಿ ಬೆಳೆದಿರುವ ಮರದ ಹಾಗಿರುವನು. ಅಂಥ ಮರವು ತಕ್ಕ ಕಾಲದಲ್ಲಿ ಫಲಕೊಡುತ್ತದಲ್ಲಾ; ಅದರ ಎಲೆ ಬಾಡುವುದೇ ಇಲ್ಲ. ಅದರಂತೆ ಅವನ ಕಾರ್ಯವೆಲ್ಲವೂ ಸಫಲವಾಗುವುದು"** (ಕೀರ್ತನೈಗಳು 1:3).

ವಿಭಿನ್ನವಾದ ಬೀಜಗಳು ತಾವು ಬೆಳೆದು ಫಲ ಕೊಡಲು ವಿಭಿನ್ನ ಕಾಲದ ಅವಧಿಯನ್ನು ತೆಗೆದುಕೊಳ್ಳುತ್ತದೆ. ಎಲ್ಲಾ ರೀತಿಯ ಹಣ್ಣುಗಳಿಗೂ ಒಂದೇ ರೀತಿಯೊದಂಥ ಸಮಯವಿರುವುದಿಲ್ಲ. ಕ್ರೈಸ್ತ ಸೇವೆಯಲ್ಲಿ

ನಾವು ಶ್ರಮ ವಹಿಸಿ ನಮಗೆ ಏನು ಮಾಡಲು ಕರೆದಿದ್ದಾನೋ ಅದನ್ನು ದುಡಿಯುವಾಗ, ನಾವು ಸಹನೆಯಿಂದ ಅದನ್ನು ಮಾಡಬೇಕು. ಫಲವು ಅದರ ಕಾಲದಲ್ಲಿ ಬರುತ್ತದೆ. ಹಾಗೂ ಫಲವು ತಕ್ಕಕಾಲದಲ್ಲಿ ಬರುತ್ತದೆ ಹಾಗೂ ನಾವು ಅದರ ಕಡೆಗೆ ನಂಬಿಕೆಯಿಂದ ಹಾಗೂ ಸಹನೆಯಿಂದ ಕೆಲಸ ಮಾಡಬೇಕು.

ನಾವು ಫಲವನ್ನು ಕಾಣದೆ ಇದ್ದರೆ, ಆಗ ನಾವು ಸರಿಯಾದ ಕಾರ್ಯ ಮಾಡುತ್ತಿದ್ದೇವೋ ಎಂಬುದನ್ನು ಸರಿಯಾದ ಸ್ಥಳದಲ್ಲಿ ಸರಿಯಾದ ಸಮಯದಲ್ಲಿದ್ದೇವೋ, ದೇವರು ನಮ್ಮಿಂದ ಬಯಸಿದಂತೆ ಇದ್ದೇವೋ ಎಂದು ಪರೀಕ್ಷಿಸಿಕೊಳ್ಳಬೇಕು. ದೇವರು ಬಯಸಿದಂತಹ ರೀತಿಯಲ್ಲಿ ಕೆಲಸವನ್ನು ಮಾಡುತ್ತಿದ್ದೇವೋ ಅಥವಾ ನಾವು ಮಾಡಬೇಕಾದುದನ್ನು ತಪ್ಪಿಸುತ್ತಿದ್ದೇವೋ, ತಿಳುವಳಿಕೆಯ ಕೊರತೆ ಅಥವಾ ನಿರ್ಲಕ್ಷ್ಯತನ ತೋರಿಸುತ್ತೇವೋ? ನಾವು ಯಾವ ಕಾಲದಲ್ಲಿ ಇದ್ದೇವೆ? ಭೂಮಿಯನ್ನು ಅಗೆಯುವ ಕಾಲ, ಬೀಜ ಬಿತ್ತುವ ಕಾಲ, ಬಿತ್ತಿದ್ದಕ್ಕೆ ನೀರು ಹಾಕುವ ಕಾಲ, ಅಥವಾ ಫಲಿಸಿದ ಹಣ್ಣಿನ ಸುಗ್ಗೀ ಕಾಲವೋ? ನಾವು ಸರಿಯಾದ ಸ್ಥಳಗಳಲ್ಲಿ ಫಲವನ್ನು ಎದುರು ನೋಡುತ್ತೇವೋ ಸರಿಯಾದ ಸಮಯದಲ್ಲಿ ನಾವು ಫಲಕ್ಕಾಗಿ ಎದುರು ನೋಡುತ್ತೇವೋ ಫಲಭರಿತರಾಗಿರುವುದರಿಂದ ನಮ್ಮನ್ನು ಇತರ ಅಂಶಗಳು ತಡೆಯುತ್ತೇವೆಯೋ? ಇವು ಕಠಿಣವಾದ ಪ್ರಶ್ನೆಗಳಾಗಿವೆ, ಆದರೆ ಕೇಳಲ್ಪಡಲೇಬೇಕು ಏಕೆಂದರೆ ನಾವು ಕರ್ತನಿಗಾಗಿ ನಮ್ಮ ಕೆಲಸದಲ್ಲಿ ಫಲ ನೀಡಲು ಕರೆಯಲ್ಪಟ್ಟಿರುತ್ತೇವೆ. ಫಲವು ಅದರ ಕಾಲದಲ್ಲಿ ಬರುತ್ತದೆ. ಆದರೆ ನಾವು ಅದರ ಕಾಲದ ಕಡೆಗೆ ಶ್ರಮದ ದುಡಿತ ಹಾಗೂ ಸಹನೆಯಿಂದ ಮುಂದೆ ಸಾಗುವ ಅಗತ್ಯವಿದೆ.

## ಸಾಕ್ಷಿಗಳನ್ನು ಉತ್ಪ್ರೇಕ್ಷೆ ಮಾಡಬೇಡಿ, ಅದು ನಡೆದ ರೀತಿಯಲ್ಲಿಯೇ ಹೇಳಿರಿ

**"ಕಲ್ಪಿಸಿ ಹೇಳುವವನು ತನಗೆ ಮಾನ ಬರಬೇಕೆಂದು ಅಪೇಕ್ಷಿಸುತ್ತಾನೆ; ತನನ್ನು ಕಳುಹಿಸಿದವನಿಗೆ ಮಾನ ಬರಬೇಕೆಂದು  ಅಪೇಕ್ಷಿಸುವವನು ಸತ್ಯವಂತನು ಅಧರ್ಮವು ಅವನಲ್ಲ ಇಲ್ಲ"** (ಯೋಹಾನ 7:18).

ಉತ್ಪ್ರೇಕ್ಷೆಯ ಸಾಕ್ಷಿಗಳ ವರದಿಗಳನ್ನು ಕೇಳಲು ಹಾಗೂ ಊಹಿಸಿದಂತೆ ಸಂಭವಿಸಿದ ವಿಷಯಗಳನ್ನು ಕೇಳಲು ಹೃದಯ

ಒಡೆದಂತಾಗುತ್ತದೆ. ಕೆಲವು ವರ್ಷಗಳ ಹಿಂದೆ ಒಂದು. ಧಾರ್ಮಿಕ ಸಮ್ಮೇಳನವು ನಮ್ಮ ನಗರದಲ್ಲಿ, ಒಂದು ಅಂತರಾಷ್ಟ್ರೀಯ ಸೇವೆಯ ವತಿಯಿಂದ ನಡೆಯಿತು, ಇದು ನಿಜವಾಗಿ ಒಂದು ದೊಡ್ಡ ಅಳತೆಯಲ್ಲಿ ವ್ಯವಸ್ಥಿತವಾಗಿತ್ತು, ಹಾಗೂ ಬಹಳಷ್ಟು ದೊಡ್ಡ ಮೊತ್ತದಲ್ಲಿ ಹಣವು ಮೂರು ದಿನಗಳ ಕೂಟಗಳಿಗಾಗಿ ಖರ್ಚಾಯಿತು. ಆ ಸೇವಾ ಸಂಸ್ಥೆಯಿಂದ ಬಂದ ವರದಿಗಳ ಮುಖ್ಯಾಂಶಗಳನ್ನು ನಾನು ಗಮನಿಸಿದಾಗ ಅದು ಭಾರತದ ಒಂದು ಬಾವುಟವು ಹಾರಾಡುತಾ, "ಭಾರತ, ಎಂದೆಂದಿಗೂ ಬದಲಾದ ರಾಷ್ಟ್ರ" ಎಂದು ಅದರ ಮೇಲೆ ಕಂಡಿತು. ಈಗ ಇದು ನಿಜವಾದದ್ದು ಅಂದರೆ ಬಹಳಷ್ಟು ಅಂಶಗಳು ಸಂಭವಿಸಿ, ಕಣ್ಣನ್ನು ಸಂಧಿಸುವಷ್ಟು ದೂರದಾಚೆಗೆ ದಾಟಿತು. ಆದರೆ ಈ ಮೂರು ದಿನಗಳ ಕಡೆಗೆ ನಾನು ಉದ್ದೇಶ ಸಹಿತವಾಗಿ ನೋಡಿದರೆ, ನಾನು ಗಮನಿಸಿದ್ದು ಏನೆಂಬುದು ಇಲ್ಲದೆ. ಆ ಕೂಟಕ್ಕೆ ಬಂದ ಹಲವಾರು ಮಂದಿ ಈಗಾಗಲೇ ವಿಶ್ವಾಸಿಗಳಾಗಿದ್ದರು. ಪ್ರಾರ್ಥನಾ ಕೂಟದ ನಂತರ ಕೂಡಿಸಬೇಕಾಗಿದ್ದ ತೀರ್ಮಾನದ ಕಾರ್ಡುಗಳು ಏನಾದವು ಹಾಗೂ ಎಷ್ಟು ಹೊಸ ತೀರ್ಮಾನಗಳು ಸ್ಥಳೀಯ ಸಭೆಗಳಲ್ಲಿ ಸಮರೂಪವಾಗಿವೆ ಎಂಬುದು ಯಾರಿಗೂ ತಿಳಿಯದು. ಆ ಕೂಟಕ್ಕಾಗಿ ಖರ್ಚಾದ ದೊಡ್ಡ ಮೊತ್ತದ ಹಣಕ್ಕೆ ಹೋಲಿಸಿದಂತೆ, ಅಂದಾಜು ಮಾಡಿದ ಫಲವು ಸ್ವಲ್ಪಮಟ್ಟಿಗೆ ನಿರಾಶಾದಾಯಕವಾಗಿತ್ತು. ಕೂಟವು ಮುಗಿದ ನಂತರ ಮರುದಿನವೇ, ಮತ್ತೊಂದು ಅಕ್ರೈಸ್ತ ಧಾರ್ಮಿಕ ಕೂಟವು ಅಕ್ಕ ಪಕ್ಕದ ಹಳ್ಳಿಗಳ ಜನರೊಂದಿಗೆ ಆ ಸ್ಥಳದ ಪಕ್ಕದಲ್ಲೇ ಏರ್ಪಾಡಾಗಿತ್ತು. ಇದರಿಂದ ಕೇವಲ ಆ ಸ್ಥಳದ ಸುತ್ತಮುತ್ತಲಿನ ಹಳ್ಳಿಯ ಮೇಲೆ ಪರಿಣಾಮ ಬೀರಿಲ್ಲ, ಕೂಟ ನಡೆದ ಸ್ಥಳದ ನಗರದ ಸ್ವಲ್ಪ ಭಾಗವೂ ಪರಿಣಾಮಕ್ಕೊಳಗಾಯಿತು ಹಾಗೂ ನಿಜವಾಗಿ ರಾಷ್ಟ್ರವು ಒಂದಾಗಿಲ್ಲ. ಇದರಿಂದ ಆ ಸೇವೆಗಾಗಿ ಒಂದು ರಾಷ್ಟ್ರವಾಗಿ ಭಾರತವು ಮೂರು ದಿನಗಳ ಕೂಟದ ಅಂತ್ಯದಲ್ಲಿ ಶಾಶ್ವತವಾಗಿ ಬದಲಾಗಿದೆ ಎಂಬುದು ಸ್ವಲ್ಪಮಟ್ಟಿಗೆ ಉತ್ಪ್ರೇಕ್ಷೆಯಾಗಿರುತ್ತದೆ ಎಂಬ ವರದಿಯನ್ನು ಆ ಸೇವೆಯ ಬೆಂಬಲಿಗರಿಗೆ ನೀಡಬೇಕಾಗಿರುತ್ತದೆ! ಸರಿ, ಈ ಎಲ್ಲಾ ವಿಷಯಗಳನ್ನು ದೇವರು ಕಡೆಗಣಿಸುತ್ತಾನೆ, ಹಾಗೂ ನಾವೂ ಕೂಡಾ ಹಾಗೇ ಇರಬೇಕು. ಆದರೆ ನಾವು ವರದಿ ಕೊಡುವ ಹಾಗೂ ಸತ್ಯತೆಗಳು ನಡೆದ ರೀತಿಯಲ್ಲೇ ತಿಳಿಸಲ್ಪಡಲು ಸರಿಯಾದ

ರೀತಿಯಲ್ಲಿ ನಮ್ಮನ್ನು ಕೊನೇ ಪಕ್ಷ ಗಣನೆಗೆ ಬರುವಂತೆ ಇಟ್ಟುಕೊಳ್ಳಲು ಸಾಧ್ಯವಲ್ಲವೇ?

ಇದರಂತೆಯೇ ಉತ್ತೇಜಕವಾದ ಹಾಗೂ ಉತ್ಪ್ರೇಕ್ಷಕವಾದ ಹಲವಾರು ಕತೆಗಳಿವೆ, ಇಲ್ಲಿ ಕರ್ತನು ಮಾಡಿದ ಒಳ್ಳೇ ಕಾರ್ಯವು ತಪ್ಪಾಗಿ ತಿಳಿಸಲ್ಪಡುತ್ತದೆ. ಯಾವ ಉದ್ದೇಶಕ್ಕಾಗಿ? ಜನರ ಮೇಲೆ ಪ್ರಭಾವ ಬೀರಲು ದೇವರಿಗೆ ನಮ್ಮ ಸಹಾಯದ ಅಗತ್ಯವಿದೆಯೋ? ನಾನು ಹಾಗೆ ಯೋಚಿಸಲಾರೆ. ನಾವು ಪರಿಣಾಮಗಳನ್ನು ಅವು ನಡೆದ ರೀತಿಯಲ್ಲಿಯೇ ಹಾಗೂ ಅವು ನಿಜವಾಗಿ ಕರ್ತನನ್ನು ಮಹಿಮೆ ಪಡಿಸುವ ರೀತಿಯಲ್ಲಿ ವರದಿ ಒಪ್ಪಿಸಲು ನಾವು ತೀರ್ಮಾನಿಸೋಣ. ದೇವರ ಮುಂದೆ ಹಾಗೂ ಮನುಷ್ಯನ ಮುಂದೆ ಪ್ರಮಾಣಿಕ ವರದಿಗಾರರಾಗಿರಿ.

## ನಿಶ್ಚಯವಾದದ್ದು ಅಥವಾ ಅಂದಾಜು–ನಿರ್ದಿಷ್ಟವಾದದ್ದನ್ನೇ ದಯವಿಟ್ಟು ತಿಳಿಯಪಡಿಸಿರಿ

**“ನಿಂದೆಗೆ ಅವಕಾಶ ಕೊಡದೆ ಎಲ್ಲಾ ಸಂಗತಿಗಳಲ್ಲಿ ದೇವರ ಸೇವಕರೆಂದು ನಮ್ಮನ್ನು ಸಮ್ಮತರಾಗ ಮಾಡಿಕೊಳ್ಳುತ್ತೇವೆ”** (2 ಕೊರಿಂಥದವರಿಗೆ 6:3–4).

ಒಬ್ಬ ಬೋಧಕನು ಉದ್ರೇಕ ಹೊಂದಿದಾಗ, ಕೇವಲ 50 ಮಂದಿ ಪ್ರಾರ್ಥನೆಗಾಗಿ ಮುಂದೆ ಬಂದಿದ್ದರೆ ಅದನ್ನು ನೀವು “ಒಂದು ಪುನರುಜ್ಜೀವನದ ಹೊರ ಬೀಳುವಿಕೆ,” ಎಂದು ವರದಿ ಸಲ್ಲಿಸಬಹುದು. “ಬಹಳಷ್ಟು ಮಂದಿ ಮುಂದೆ ಬಂದರು” ದೇವರ ಒಂದು ಬಲವಾದ ಚಲಿಸುವಿಕೆಯು ಆ ಸ್ಥಳದಲ್ಲಿದ್ದು, ಜನರು ವೇದಿಕೆಯ ಬಳಿ ಅಳುತ್ತಾ ಪ್ರಲಾಪಿಸುತ್ತಾ ಇದ್ದರು” ಇತ್ಯಾದಿ ಹಾಗೂ ಅಲ್ಲಿ ವಾಸ್ತವವಾಗಿ ಏನು ಸಂಭವಿಸಿತು ಎಂಬುದನ್ನು ಜನರು ಊಹಿಸುವಂತೆ ಅವರಿಗೆ ಬಿಡಿರಿ, ಕೆಟ್ಟ ಪರಿಸ್ಥಿತಿಗಳಲ್ಲಿ, ವಾಸ್ತವವಾಗಿ 50 ಮಂದಿ ಮುಂದೆ ಬಂದವರಾಗಿದ್ದು ಉಳಿದವರು ಸಹಾಯಕರು, ಸ್ವಯಂ ಸೇವಕರು, ಪ್ರಾರ್ಥನಾ ತಂಡದವರು, ಪ್ರತಿಕ್ರಿಯೆ ನೀಡಿದವರ, ಜೊತೆ ಬಂದಿದ್ದರೆ ಬೋಧಕರು ಇದನ್ನು, “ನೂರಾರು ಮಂದಿ ಮುಂದೆ ಬಂದರು, ಎಂದು ವರದಿ ನೀಡುತ್ತಾರೆ, ಇದರಿಂದ ಗುಂಪು ದೊಡ್ಡದಾಗಿ ಕಂಡಿರುತ್ತದೆ. ಎಷ್ಟು ಮಂದಿ ಪ್ರತಿಕ್ರಿಯಿಸಿದರು ಎಂದು ನಾವು ಖಚಿತವಾಗಿ ತಿಳಿದಿದ್ದರೆ, ಆಗ ನಾವು ಒಂದು ನಿರ್ದಿಷ್ಟ ಸಂಖ್ಯೆಯನ್ನು ನೀಡಬಹುದು. ಹಾಗಿಲ್ಲವಾದರೆ, “ನಾವು

ಸುಮಾರು ಬಹಳಷ್ಟು ಮಂದಿ ಬಂದಿದ್ದರೆಂದು ಅಂದಾಜು ಮಾಡುತ್ತೇವೆಂದು ಹೇಳಬಹುದು ಹಾಗೂ ಸಾಧ್ಯವಾದಷ್ಟು ಮಟ್ಟಿಗೆ ವಾಸ್ತವಕ್ಕೆ ಸಮೀಪವಾಗಿ ಉಳಿಯಬೇಕು. ನಾವು ಫಲಿತಾಂಶಗಳನ್ನು ವರದಿ ಮಾಡುವಾಗ ನಮ್ಮ ಮಾತಿನಲ್ಲಿ ನಿಖರವಾದ ರೀತಿಯ ಶಿಸ್ತನ್ನು ಬೆಳೆಸೋಣ.

## ಬೇರೊಬ್ಬ ವ್ಯಕ್ತಿಯ ಕೆಲಸವನ್ನು ಒಪ್ಪಿಕೊಳ್ಳಿರಿ

**“ನಾವು ಮೇರೆದಪ್ಪಿ ಮತ್ತೊಬ್ಬರ ಪ್ರಯಾಸದ ಫಲಗಳನ್ನು ತಕ್ಕೊಂಡು ಇವು ನಮ್ಮವು ಎಂದು ಹಿಗ್ಗುವವರಲ್ಲ; ಆದರೆ ನಿಮ್ಮ ನಂಬಿಕೆಯು ಹೆಚ್ಚಿದ ಹಾಗೆಲ್ಲಾ ನಿಮ್ಮ ಮೂಲಕ ನಮ್ಮ ಮೇರೆಯೊಳಗೆ ಇನ್ನೂ ಅಭಿವೃದ್ಧಿ ಹೊಂದಿ...”** (2 ಕೊರಿಂಥದವರಿಗೆ 10:15).

**"ಪ್ರತಿಯೊಬ್ಬನು ತಾನು ಮಾಡಿದ ಕೆಲಸವನ್ನು ಪರಿಶೋಧಿಸಲಿ; ಆಗ ಅವನು ತನ್ನ ನಿಮಿತ್ತದಿಂದ ಹೆಚ್ಚಳ ಪಡುವುದಕ್ಕೆ ಆಸ್ಪದವಾಗುವುದೇ ಹೊರತು ಮತ್ತೊಬ್ಬರ ನಿಮಿತ್ತದಿಂದಾಗುವುದಿಲ್ಲ”** (ಗಲಾತ್ಯದವರಿಗೆ 6:4).

**“ಹಾಗಾದರೆ ಅಪೊಲ್ಲೋಸನು ಏನು? ಪೌಲನು ಎನು? ಅವರು ಸೇವಕರು; ಅವರ ಮುಖಾಂತರ ನೀವು ಕ್ರಿಸ್ತನನ್ನು ನಂಬುವವರಾದಿರಿ; ಕರ್ತನು ಒಬ್ಬೊಬ್ಬನಿಗೆ ದಯಪಾಲಿಸಿದ ಪ್ರಕಾರ ಅವರು ಸೇವೆ ಮಾಡುವವರಾಗಿದ್ದಾರೆ. ನೆಡುವವನೂ ನೀರು ಹೊಯ್ಯುವವನೂ ಒಂದೇ ಆಗಿದ್ದಾರೆ. ಆದರೂ ಪ್ರತಿಯೊಬ್ಬನಿಗೆ ಅವನವನ ಕಷ್ಟಕ್ಕೆ ತಕ್ಕ ಹಾಗೆ ಕೂಲಿ ದೊರೆಯುವುದು”** (1 ಕೊರಿಂಥದವರಿಗೆ 3:5,8).

ಯಾರೇ ಆದರೂ ಪ್ರತಿಯೊಂದನ್ನೂ ತನ್ನ ಸ್ವಂತವಾಗಿ ಮಾಡುತಾನೇ ಎಂಬುದು ಬಹು ಅಪರೂಪವಾದದ್ದು. ಸಾಮಾನ್ಯವಾಗಿ ನಾವು ತಂಡಗಳಲ್ಲಿ ಕೆಲಸ ಮಾಡುತ್ತೇವೆ ಹಾಗೂ ನಾವು ನಮ್ಮ ಮುಂದೆ ದುಡಿದ ಬಹಳಷ್ಟು ಮಂದಿಯನ್ನು ಹೊಂದಿರುತ್ತೇವೆ, ಕೆಲವರು ನಮ್ಮ ಜೊತೆಯಲ್ಲೇ ದುಡಿದಿದ್ದಾರೆ ಹಾಗೂ ಕೆಲವರು ದೃಶ್ಯಗಳ ಹಿಂದೆ ದುಡಿದಿರುತ್ತಾರೆ. ಯಾರಿಗೆ ಸನ್ಮಾನ ನೀಡಬೇಕಾದದ್ದು ಪ್ರಾಮುಖ್ಯವಾದದ್ದು, ನಾವು ಅನುಭವಿಸುತ್ತಿರುವ ಫಲವನ್ನು ನೀಡಿದವರನ್ನು ಗುರುತಿಸುವುದು ಮುಖ್ಯವಾದ್ದು, ಬದಲಾಗಿ ಕೇವಲ ನಮ್ಮಿಂದ ಮಾತ್ರ ಎಲ್ಲವೂ ಆಯಿತು ಎಂದು ಕಣಿಸಿಕೊಳ್ಳುವಂತೆ ಮಾಡುವುದು ಸರಿಯಲ್ಲ. ಬಾಕಿ ನೀಡಬೇಕಾದ ಯಾರೋ ಒಬ್ಬರಿಗೆ ಸನ್ಮಾನವನ್ನು ನಾವು ಕಸಿದುಕೊಳ್ಳುವುದು ಬೇಡ. ನಮ್ಮ ತಿಳುವಳಿಕೆಗೆ ಮೀರಿದಂತೆ, ಸುಗ್ಗಿಯಲ್ಲಿ ನಮಗೆ ಕೊಡುಗೆ ನೀಡುವವರನ್ನು ನಾವು ಗುರುತಿಸಿ ಸನ್ಮಾನಿಸೋಣ!

## ದೇವರಿಗೆ ಎಲ್ಲ ಮಹಿಮೆಯನ್ನೂ ಸಲ್ಲಿಸಿರಿ—ಆತನಿಂದಲೇ ಅದೆಲ್ಲ ನಡೆಯಿತು

**ನಮ್ಮನ್ನಲ್ಲ, ಯೆಹೋವನೇ, ನಮ್ಮನ್ನಲ್ಲ, ನಿನ್ನ ಪ್ರೀತಿ ಸತ್ಯತೆಗಳ ನಿಮಿತ್ತವಾಗಿ ನಿನ್ನ ಹೆಸರನ್ನೇ ಘನಪಡಿಸು"** (ಕೀರ್ತನೆ 115:1).

ನಾವು ಹೇಗೆ ಸಾಕ್ಷಿಗಳನ್ನು ಹಾಗೂ ವರದಿಯ ಫಲಿತಾಂಶವನ್ನು ನೀಡುತ್ತೇವೋ ಅದು ಪ್ರಾಮುಖ್ಯವಾದುದು, ಜನರು ನಿಂತು ಮುಕ್ತವಾದ ಹೇಳಿಕೆಯನ್ನು, "ದೇವರಿಗೆ ಮಹಿಮೆಯಾಗಲಿ, ಎಲ್ಲವೂ ಆತನಿಂದಲೇ ಆಯಿತು" ಎಂದು ಹೇಳುವುದನ್ನು ನೋಡುವಾಗ ವಿಸ್ಮಯವಾಗುತ್ತದೆ. ನಂತರ ಮುಂದಿನ 30 ನಿಮಿಷಗಳನ್ನು ತಮ್ಮ ಬಗ್ಗೆ ಮಾತನಾಡಲು, ತಾವು ಏನು ಮಾಡಿದರು, ತಾವು ಹೇಗೆ ಮುಂದುವರಿದರು, ಇತ್ಯಾದಿಯನ್ನು ಮಾತನಾಡುತ್ತಾರೆ. ಸಾಕ್ಷಿಯ ಕೊನೆಯಲ್ಲಿ ನೀವು ಅವರೊಂದಿಗೆ ಬಹಳ ಪ್ರಭಾವಕ್ಕೊಳಗಾಗಿರುತ್ತೀರಿ, ಹಾಗೂ ದೇವರ ಬಗ್ಗೆ ನೀವು ಬಹಳ ಕಡಿಮೆಯಾಗಿ ಕೇಳಿಸಿಕೊಳ್ಳುತ್ತೀರಿ! ಸಾಕ್ಷಿ ಹೇಳುವುದು ಹಾಗೋ ಸೇವೆಯ ವರದಿಗಳನ್ನು ಹಂಚಿಕೊಳ್ಳುವ ನಮ್ಮ ಉದ್ದೇಶವು ಶುದ್ಧವಾಗಿರಬೇಕು. ನಾವು ಯಾರೋ "ಒಬ್ಬರು ವಿಶೇಷವಾದವರು", "ಯಾರೋ ಮಹತ್ತಾದ ಅಭಿಷೇಕ ಹೊಂದಿದವರು", ಎಂಬಂತೆ ನಮ್ಮನ್ನು ನಾವು ಉತ್ತೇಜನಗೊಳಿಸಿಕೊಳ್ಳುವಂತೆ ಇದು ಆದರೆ, ಆಗ ನಮ್ಮ ಉದ್ದೇಶಗಳು ಸರಿಯಾಗಿರುವುದಿಲ್ಲ ಸೇವಾ ವರದಿಗಳು ಹಾಗೂ ಜನರು ರಕ್ಷಿಸಲ್ಪಟ್ಟ, ಸ್ವಸ್ಥತೆ ಹೊಂದಿದ ಹಾಗೂ ಬಿಡುಗಡೆಹೊಂದಿದ ಸಾಕ್ಷಿಗಳನ್ನು ಹಂಚಿಕೊಳ್ಳುವುದು ದೇವರಿಗೆ ಮಹಿಮೆಯಾಗುವಂತೆ, ಜನರ ಹೃದಯಗಳಲ್ಲಿ ಪ್ರೋತ್ಸಾಹ, ನಂಬಿಕೆಗಳನ್ನು ತರುವಂತಿರಬೇಕು.

## ಹೋಲಿಕೆ ಮಾಡಬೇಡಿರಿ, ಸ್ಪರ್ಧಿಸಬೇಡಿರಿ

**"ತಮ್ಮನ್ನು ತಾವೇ ಹೊಗಳಿಕೊಳ್ಳುವ ಕೆಲವರಲ್ಲಿ ನಮ್ಮನ್ನು ಸೇರಿಸಿಕೊಳ್ಳುವುದಕ್ಕಾಗಲಿ ಅವರಿಗೆ ಹೋಲಿಸಿಕೊಳ್ಳುವುದಕ್ಕಾಗಲಿ ನಮಗೆ ಧೈರ್ಯ ಸಾಲದು; ಅವರಂತೂ ತಮ್ಮ ತಮ್ಮೊಳಗೆ ತಮ್ಮನ್ನು ಅಳತೆಮಾಡಿಕೊಂಡು ತಮತಮಗೆ ಹೋಲಿಸಿಕೊಂಡು ವಿವೇಕವಿಲ್ಲದವರಾಗಿದ್ದಾರೆ"** (2 ಕೊರಿಂಥದವರಿಗೆ 10:12).

ಸೇವೆಯ ಫಲಿತಾಂಶ, ಅಳತೆ, ಬೆಳವಣಿಗೆ ಹಾಗೂ ಪ್ರಮಾಣಗಳ ನೋಡುವಾಗ ನಿಮ್ಮನ್ನು ಇತರರೊಂದಿಗೆ ಹೋಲಿಸಿಕೊಳ್ಳಬೇಡಿರಿ. ನೀವು ಎಷ್ಟು ಮಂದಿ ಜನರನ್ನು ತಲುಪುತ್ತೀರಿ, ಅಥವಾ ನಿಮ್ಮ ಸ್ಥಳೀಯ ಸಭೆ ಎಷ್ಟು ದೊಡ್ಡದಾಗಿದೆ ಎಂಬುದರ ಬಗ್ಗೆ ಇತರರೂಂದಿಗೆ ಸ್ಫರ್ಧಿಸಬೇಡಿರಿ, ಈ ಸಂಗತಿಗಳು ಕರ್ತನ ಕಣ್ಣುಗಳಲ್ಲಿ ಲೆಕ್ಕಕ್ಕೆ ಬರುವುದಿಲ್ಲ. ಕರ್ತನು ನಮ್ಮಿಂದ ಬಯಸುವುದೇನೆಂದರೆ, ಆತನು ನಮ್ಮನ್ನು ಯಾವುದನ್ನು ಮಾಡಲು ಕರೆದಿದ್ದಾನೋ ಅದರಲ್ಲಿ ನಂಬಿಗಸ್ತಿಕೆಯಿಂದಿರುವುದು. ನಾವು ಅತ್ಯುತ್ತಮವಾದದ್ದನ್ನು ಕೊಡುತ್ತೇವೋ? ದೇವರು ಯಾವ ವಿಷಯಕ್ಕೆ ನಮ್ಮ ಜೀವಿತಗಳನ್ನು ಪ್ರತಿಷ್ಟಿಸಿದ್ದಾನೋ ಅದರಲ್ಲಿ ನಾವು ಬೆಳೆಯುತ್ತೇವೋ? ಕರೆಗೆ ನಾವು ನಂಬಿಗಸ್ತರಾಗಿ ಉಳಿದಿರುತ್ತೇವೋ? ಇವೇ ನಿಜವಾಗಿಯೂ ಗಣನೆಗೆ ಬರುತ್ತವೆ. ನೀವು ಯಾವ ಫಲವನ್ನು ಹೊಂದಲು ದೇವರು ಬಯಸುತ್ತಾನೋ ಅದರ ಮೇಲೆ ಕೇದ್ರೀಕರಿಸಿರಿ ಉಳಿಯಿರಿ. ದೇವರು ಎದುರು ನೋಡುವ ಫಲಗಳ ಮೇಲೆ ನಿಮ್ಮ ಜೀವಿತ ಹಾಗೂ ಸೇವೆಯ ಮುಖಾಂತರ ಕೇಂದ್ರೀಕರಿಸಿರಿ.

**"ಅದು ಹೇಗೆಂದರೆ ಪರಲೋಕರಾಜ್ಯವು ಒಬ್ಬ ಮನೆಯ ಯಜಮಾನನಿಗೆ ಹೋಲಿಕೆಯಾಗಿದೆ. ಅವನು ತನ್ನ ದ್ರಾಕ್ಷೇ ತೋಟಕ್ಕೆ ಕೂಲೀ ಆಳುಗಳನ್ನು ಕರೆಯುವುದಕ್ಕೆ ಬೆಳಗ್ಗೆ ಹೊರಟನು. ಆಳಿಗೆ ದಿನಕ್ಕೆ ಒಂದು ಪಾವಲಿಯಂತೆ ಕೂಲಿ ಗೊತ್ತು ಮಾಡಿ ಅವರನ್ನು ದ್ರಾಕ್ಷೇ ತೋಟಕ್ಕೆ ಕಳುಹಿಸಿದನು. ತರುವಾಯ ಹೆಚ್ಚು ಕಡಿಮೆ ಒಂಭತ್ತು ಗಂಟೆಗೆ ಹೋಗಿ ಪೇಟೆಯಲ್ಲಿ ಸುಮ್ಮನೆ ನಿಂತಿದ್ದ ಇನ್ನು ಕೆಲವರನ್ನು ಕಂಡು—ನೀವು ಸಹ ನನ್ನ ದ್ರಾಕ್ಷೇ ತೋಟಕ್ಕೆ ಹೋಗಿರಿ; ನಿಮದೆ ಸರಿಯಾದ ಕೂಲಿಯನ್ನು ಕೊಡುತ್ತೇನೆ ಅನ್ನಲು ಅವರು ತೋಟಕ್ಕೆ ಹೋದರು. ಅವನು ತಿರಿಗಿ ಹೆಚ್ಚು ಕಡಿಮೆ ಹನ್ನೆರಡು ಗಂಟೆಗೆ ಮತ್ತು ಮೂರು ಗಂಟೆಗೆ ಹೋಗಿ ಅದೇ ಪ್ರಕಾರ ಮಾಡಿದನು. ತಿರಿಗಿ ಹೆಚ್ಚು ಕಡಿಮೆ ಸಾಯಂಕಾಲ ಐದು ಗಂಟೆಗೆ ಹೋಗಿ ಬೇರೆ ಕೆಲವರು ನಿಂತಿರುವುದನ್ನು ಕಂಡು ಅವರನ್ನು—ದಿನವೆಲ್ಲಾ ಇಲ್ಲಿ ಯಾಕೆ ಸುಮ್ಮನೆ ನಿಂತಿದ್ದೀರಿ ಎಂದು ಕೇಳಲು ಅವರು ಯಾರೂ ನಮ್ಮನ್ನು ಕೂಲಿಗೆ ಕರೆಯಲಿಲ್ಲ ಅಂದಾಗ ಅವನು—ನೀವು ಸಹ ನನ್ನ ದ್ರಾಕ್ಷೇ ತೋಟಕ್ಕೆ ಹೋಗಿರಿ ಅಂದನು. ಸಂಜೇ ಹೊತ್ತಿಗೆ ದ್ರಾಕ್ಷೇ ತೋಟದ ಯಜಮಾನನು ತನ್ನ ಪಾರುಪತ್ಯಗಾರನಿಗೆ—ಆ ಆಳುಗಳನ್ನು ಕರೆದು ಕಡೆಗೆ ಬಂದವರನ್ನು ಮೊದಲು ಮಾಡಿಕೊಂಡು ಮೊದಲು ಬಂದವರ ತನಕ ಅವರಿಗೆ ಕೂಲಿಕೊಂಡು ಎಂದು ಹೇಳಿದನು. ಆಗ ಸಾಯಂಕಾಲ ಐದು ಗಂಟೆಗೆ ಬಂದವರಿಗೆ ಒಂದೊಂದು ಪಾವಲಿ ಸಿಕ್ಕಿತು. ತರುವಾಯ ಮೊದಲಿನವರು ಬಂದು ತಮಗೆ ಹೆಚ್ಚು ದೊರೆಯುವದೆಂದು ನೆನಸಿದರು; ಆದರೆ ಇವರಿಗೆ ಸಹಾ ಒಂದೊಂದು ಪಾವಲಿಯೇ ಸಿಕ್ಕಿತು. ಅದನ್ನು ತೆಗೆದುಕೊಂಡು ಮನೆಯ ಯಜಮಾನನ ಮೇಲೆ ಗುಣಗುಟ್ಟಿ—ಕಡೆಗೆ ಬಂದ ಇವರು ಒಂದು ತಾಸು ಹೊತ್ತು ಮಾತ್ರ ಕೆಲಸ ಮಾಡಿದ್ದಾರೆ; ನಾವು ದಿನವೆಲ್ಲಾ ಬಿಸಿಲಿನಲ್ಲಿ ಕೆಲಸ ಮಾಡಿ ಕಷ್ಟಪಟ್ಟಿದ್ದೇವೆ; ಇವರನ್ನು**

**ನಮಗೆ ಸಮಮಾಡಿದ್ದೀಯೆ ಅಂದರು. ಅದಕ್ಕೆ ಅವನು ಅವರಲ್ಲಿ ಒಬ್ಬನಿಗೆ—ಏನಪ್ಪಾ, ನಾನು ನಿನಗೆ ಅನ್ಯಾಯ ಮಾಡಲಿಲ್ಲ; ನೀನು ನನ್ನ ಸಂಗಡ ಒಂದು ಪಾವಲಿಗೆ ಒಡಂಬಟ್ಟಿಯಲ್ಲಾ; ನಿನ್ನ ಕೂಲಿ ತಕ್ಕೊಂಡು ಹೋಗು; ನಿನಗೆ ಕೊಟ್ಟಂತೆ ಕಡೆಗೆ ಬಂದ ಇವನಿಗೂ ಕೊಡುವುದಕ್ಕೆ ನನಕೆ ಮನಸ್ಸುಂಟು. ನನ್ನ ಬದುಕನ್ನು ನಾನು ಬೇಕಾದ ಹಾಗೆ ಮಾಡಬಹುದಲ್ಲವೋ? ನಾನು ಒಳ್ಳೆಯವನಾಗಿರುವುದು ನಿನ್ನ ಕಣ್ಣನ್ನು ಒತ್ತುತ್ತದೋ ಎಂದು ಹೇಳಿದನು. ಈ ಪ್ರಕಾರ ಕಡೆಯವರು ಮೊದಲಿನವರಾಗುವರು, ಮೊದಲಿನವರು ಕಡೆಯವರಾಗುವರು ಎಂದು ಹೇಳಿದನು"** (ಮತ್ತಾಯ 20:1–16).

ಯಾರನ್ನು ಕರೆಯಬೇಕೆಂದು ದೇವರು ತೀರ್ಮಾನಿಸುತ್ತಾನೆ, ಯಾತಕ್ಕಾಗಿ ಅವರನ್ನು ಕರೆಯುತ್ತಾನೆ, ಹಾಗೂ ಹೇಗೆ ಆತನು ಕರೆದವರನ್ನು ಆಶೀರ್ವದಿಸುತ್ತಾನೆ ಎಂಬುದನ್ನು ನಿರ್ಧರಿಸುತ್ತಾನೆ.

**"ಮತ್ತೊಬ್ಬನ ಸೇವಕನ ವಿಷಯವಾಗಿ ತೀರ್ಪು ಮಾಡುವುದಕ್ಕೆ ನೀನು ಯಾರು? ಅವನು ನಿರ್ದೋಷಿಯಾಗಿ ನಿಂತರೂ ದೋಷಿಯಾಗಿ ಬಿದ್ದರೂ ಅದು ಅವನ ಯಜಮಾನನಿಗೇ ಸೇರಿದ್ದು. ಅವನು ನಿರ್ದೋಷಿಯಾಗಿ ನಿಲ್ಲಿಸಲ್ಪಡುವನು; ಅವನನ್ನು ನಿಲ್ಲಿಸುವುದಕ್ಕೆ ಕರ್ತನು ಶಕ್ತನಾಗಿದ್ದಾನೆ"** (ರೋಮಾಪುರದವರಿಗೆ 14:4).



# ಅನ್ಯೋನ್ಯತೆ

"ಆಹಾ ಸಹೋದರರು ಒಂದಾರುವುದು ಎಷ್ಟೋ ಒಳ್ಳೇದು, ಎಷ್ಟೋ ರಮ್ಯವಾದದ್ದು! ಅದು ಆರೋನನ ತಲೆಯ ಮೇಲೆ ಹಾಕಲ್ಪಟ್ಟು ಅವನ ಗಡ್ಡದ ಮೇಲೆಯೂ ಅಲ್ಲಿಂದ ಅವನ ಅಂಗಿಗಳ ಕೊರಳ ಪಟ್ಟಿಯವರೆಗೂ ಹರಿದು  ಹರಿದು ಬರುವ ಶ್ರೇಷ್ಠ ತೈಲದಂತೆಯೂ ಹೆರ್ಮೋನ್ ಪರ್ವತದಲ್ಲಿ ಹುಟ್ಟಿ ಚಿಯೋನ್ ಪರ್ವತದ ಮೇಲೆ ಬೀಳುವ ಮಂಜಿನಂತೆಯೂ ಇದೆ. ಅಲ್ಲಿ ಆಶೀರ್ವಾದವೂ ಜೀವವೂ ಸದಾಕಾಲ ಇರಬೇಕೆಂದು ಯೆಹೋವನು ಆಜ್ಞಾಪಿಸಿದ್ದಾನೆ."

( ಕೀರ್ತನೆ 133:1–3)

## ಅಧ್ಯಾಯ ೮

# ೮

# ಅನ್ಯೋನ್ಯತೆ

ಕರ್ತನಾದ ಯೇಸು ಕ್ರಿಸ್ತನ ಸೇವಕರಾಗಿ; ನಮ್ಮ ಅಪೂರ್ವವಾದ ವರಗಳು ಹಾಗೂ ಕರೆಯನ್ನು, ಹಾಗೂ ನಮ್ಮ ಸ್ವಂತ ಸೇವೆಗಳಲ್ಲಿ ನಾವು ಪಾಲ್ಗೊಂಡಿದ್ದರೂ, ನಾವೆಲ್ಲಾ ಇನ್ನೂ ಒಂದು ದೇಹದ—ಕ್ರಿಸ್ತನ ದೇಹದ ಭಾಗವಾಗಿರುತ್ತೇವೆ. ನಾವೆಲ್ಲರೂ ಅದೇ ರಕ್ತದಿಂದ ತೊಳೆಯಲ್ಪಟ್ಟಿರುತ್ತೇವೆ, ದೇವರ ಅದೇ ಕೃಪೆಯಿಂದ ರಕ್ಷಿಸಲ್ಪಟ್ಟಿರುತ್ತೇವೆ, ಅದೇ ಪವಿತ್ರಾತ್ಮನಿಂದ ಅಭಿಷೇಕ ಹೊಂದಿರುತ್ತೇವೆ, ಅದೇ ದೇವರ ವಾಕ್ಯವನ್ನು ಬೋಧಿಸುತ್ತೇವೆ, ಅದೇ ದೇವರ ರಾಜ್ಯದ ಭಾಗವಾಗಿದ್ದೇವೆ; ಅದೇ ಕ್ರಿಸ್ತನ ದೇಹವನ್ನು ಕಟ್ಟಲು ಎಲ್ಲರೂ ಕಾರ್ಯ ಮಾಡುತ್ತಿದ್ದೇವೆ. ಇದರ ದೃಶ್ಯದಲ್ಲಿ ನಾವು ಜೋಡಣೆ ಹೊಂದಲು, ಅನ್ಯೋನ್ಯತೆ ಪಡೆಯಲು, ಸಂಬಂಧ ಕಲ್ಪಿಸಲು ಹಾಗೂ ಒಟ್ಟಾಗಿ ಕೆಲಸ ಮಾಡಲು ಕಲಿಯಬೇಕಾಗಿದೆ. ನಾವು ದೃಷ್ಟಿಕೋನಗಳಲ್ಲಿ ಅತ್ಯಲ್ಪ ವ್ಯತ್ಯಾಸಗಳನ್ನು ಹೊಂದಿರುವ ವಿಭಿನ್ನವಾದ ಕ್ರೈಸ್ತೀಯ ಪಂಗಡಗಳಿಗೆ ಸೇರಿದವರಾಗಿರಬಹುದು, ಆದರೆ ನಾವೆಲ್ಲರೂ ದೇವರ ವಾಕ್ಯದ ಮೂಲಭೂತ ಸತ್ಯಗಳಲ್ಲಿ ಅಂಗೀಕಾರ ಹೊಂದಿರುತ್ತೇವೆ. ಹಾಗೂ ಇದರಿಂದ ನಾವು ಒಬ್ಬರಿಗೊಬ್ಬರು ಒಪ್ಪಿಕೊಳ್ಳುವ ವಿಷಯದಲ್ಲಿ ಅನ್ಯೋನ್ಯತೆ ಹೊಂದಲು ಸಾಧ್ಯ ಎಂದು ನಾನು ಅರಿತುಕೊಂಡಿರುತ್ತೇನೆ. ನಾವೆಲ್ಲರೂ ತುಂಬಾ ಗಡಿಬಿಡಿಯಲ್ಲಿರುತ್ತೇವೆ, ದೇವರು ನಮ್ಮ ಜೀವಿತಗಳಲ್ಲಿ ಒಪ್ಪಿಸಿರುವ ಕಾರ್ಯ ಮಾಡುವುದರಲ್ಲಿ ಪಾಲ್ಗೊಂಡಿರುತ್ತೇವೆ, ಎಂದು ಅರಿತಿದ್ದೇನೆ. ಹೀಗಾಗಿ ಇತರ ಜೊತೆಯ ಸೇವಕರೊಂದಿಗೆ ಉದ್ದೇಶ ಪೂರ್ವಕವಾಗಿ ಸಮಯ ತೆಗೆದುಕೊಂಡು ಗುಣಧರ್ಮವುಳ್ಳ ಸಂಬಂಧಗಳನ್ನು ಕಟ್ಟುವುದು ಒಂದು ಸುಲಭವಾದ ಕಾರ್ಯವಲ್ಲ. ಹಾಗೂ, ಹೀಗಿದ್ದರೂ ನಾವು ಹಾಗೆ ಮಾಡಬೇಕಾಗಿದೆ ಎಂದು ನಂಬಿದ್ದೇನೆ. ನಾವು ಒಬ್ಬರಿಗೊಬ್ಬರ ಅಗತ್ಯತೆ ಹೊಂದಿರುತ್ತೇವೆ, ಹಾಗೂ ಇದು ನಗರ ಭಾಗದ ಸಭೆಯು ಒಂದುಗೂಡಿ ಬಲವಾದಾಗ ಮಾತ್ರ ಒಂದು ನಗರವು

ಬದಲಾವಣೆ ಹೊಂದಲು ಸಾಧ್ಯ. ಒಂದು ನಗರವನ್ನು ತಲುಪಲು ಒಂದು ನಗರ ಭಾಗದ ಸಭೆಯ ಅಗತ್ಯತೆ ಹೊಂದಿದೆ.

## ಒಂದು ರಾಜ್ಯವನ್ನು ಕಟ್ಟುವವರಾಗಿರಿ

**"ಒಂದು ರಾಜ್ಯದಲ್ಲಿ ಭೇದ ಹುಟ್ಟಿದರೆ, ಆ ರಾಜ್ಯವು ಉಳಿಯಲಾರದು"** (ಮಾರ್ಕ3:24).

ಸೇವೆಯಲ್ಲಿ, ನಾವು ಏನು ಮಾಡುತ್ತೇವೋ ಅದರ ಮೇಲೆ ನಾವು ಹೆಚ್ಚು ಕೇಂದ್ರೀಕರಿಸುವಾಗ. ಕೊನೆಯಲ್ಲಿ ಆತನ ಬರಲಿರುವ ರಾಜ್ಯವನ್ನು ಎದುರುನೋಡಬೇಕು. ಆತನ ಚಿತ್ತವು ಪರಲೋಕದಲ್ಲಿ ನೆರವೇರುವಂತೆ ಭೂಮಿಯಲ್ಲಿಯೂ ನೆರವೇರುತ್ತದೆ, ದೇವರ ರಾಜ್ಯವು ನಮ್ಮ ವೈಯಕ್ತಿಕ ಸೇವೆಗಳ ಉದ್ದೇಶಕ್ಕಿಂತಲೂ ಹೆಚ್ಚು ದೊಡ್ಡದಾಗಿರುತ್ತದೆ. ಆದಕಾರಣ ಅದು ರಾಜ್ಯದ ನಿರ್ಮಾಣಕ್ಕೆ ತಕ್ಕ ನಿಯಮಗಳಲ್ಲಿ ನಾವು ಏನುಮಾಡುತ್ತೇವೋ ಅದನ್ನು ನಾವು ಮೌಲ್ಯ ಮಾಪನ ಮಾಡುವುದು ಮುಖ್ಯವಾದದ್ದು ನಾನು ಮಾಡುತ್ತಿರುವ, ಸೇವೆಯು ದೇವರರಾಜ್ಯದ ಬೆಳವಣಿಗೆಯಲ್ಲಿ ಫಲಕೊಡುತ್ತದೋ ಅಥವಾ ಕೇವಲ ನನ್ನ ಸ್ವಂತ ಹೆಸರು ಹಾಗೂ ಕೆಲಸದ ಉನ್ನತಿಗಾಗಿಯೋ? ಕರ್ತನ ನಿಯಮ ಹಾಗೂ ಚಕ್ರಾಧಿಪತ್ಯವು, ನಾನು ಒಳಗೊಂಡಿರುವ ಸಮುದಾಯಗಳು ಹಾಗೂ ನಗರಗಳಲ್ಲಿ ಜನರ ಹೃದಯ ಹಾಗೂ ಜೀವಿತಗಳಲ್ಲಿ ಸ್ಥಾಪಿಸಲ್ಪಡುತ್ತದೋ? ನಾನು ದೇವ ಜನರ ನಡುವೆ ಒಮ್ಮತವನ್ನು ಮುಂದುವರಿಸಲು, ಇದರಿಂದ ದೇವರ ರಾಜ್ಯವು ಬಲಹೊಂದುವಂತೆ ಕೆಲಸ ಮಾಡುತ್ತೇನೋ? ಅಥವಾ ನಾನು ಪ್ರತ್ಯೇಕವಾಗಿ ಕೆಲಸ ಮಾಡುತ್ತಿರುವ, ಕೆಲಸವು, ಇತರ ಸಭೆಗಳು ಹಾಗೂ ಸೇವೆಗಳನ್ನು ಬಲಪಡಿಸುತ್ತಿವೆಯೋ?

ರಾಜ್ಯದ ನಿರ್ಮಾಣಿಕನೊಬ್ಬನು ತನ್ನ ಸ್ವಂತ ವೈಯಕ್ತಿಕ ದರ್ಶನ, ಸಭೆ ಮತ್ತು ಸೇವೆಗಳ ಆಚೆ ನೋಡುತ್ತಾನೆ ಹಾಗೂ ಇತರ ದರ್ಶನಗಳು, ಸೇವಕರು, ಸಭೆಗಳು ಹಾಗೂ ಸೇವಕರನ್ನು ಆಶೀರ್ವದಿಸಲು ಪ್ರಯತ್ನಿಸುತ್ತಾನೆ, ಇದರಿಂದ ದೇವರ ನಿಯಮ ಹಾಗೂ ಆಳ್ವಿಕೆಯು ಜನರ ಜೀವಿತಗಳಲ್ಲಿ ವಿಸ್ತರಿಸಲ್ಪಡುತ್ತವೆ.

ರಾಜ್ಯದ ನಿರ್ಮಾಣಿಕನೊಬ್ಬನು, ಇತರ ಜನರ ದರ್ಶನಗಳೊಳಗೆ ಹೆಜ್ಜೆ ಇಡಲು ಹಾಗೂ ಯಾವ ಗುರುತಿಸುವಿಕೆ ಅಥವಾ ಆತ್ಮೋನ್ನತಿಗಾಗಿ

ಅವಕಾಶಗಳನ್ನು ಎದುರು ನೋಡದೆ ಇತರರೊಂದಿಗೆ ಪಾಲುಗಾರನಾಗಲು ಬಯಸುತ್ತಾನೆ. ಯೇಸು ಮಹಿಮೆ ಹೊಂದುವ ವರೆಗೂ ಒಬ್ಬ ರಾಜ್ಯ ನಿರ್ಮಾಣಿಕನಿಗಾಗಿ "ನಾನು ಇದರಿಂದ ಏನು ಹೊರ ತೆಗೆಯುತ್ತೇನೆ? ಅಥವಾ ನನಗಾಗಿ ಇದರಲ್ಲಿ ಏನಿದೆ?" ಎಂಬ ಪ್ರಶ್ನೆಗಳು ಕೇಳಲ್ಪಡದವು ಹಾಗೂ ಯಾವ ಗಣನೆಗೂ ಒಳಗಾಗದವು.

ದೇವರ ಸೇವಕರುಗಳಾಗಿ ನಾವು ಒಂದು "ರಾಜ್ಯದ ಮನೋಸ್ಥಿತಿ"ಯನ್ನು ನಿಭಾಯಿಸಬೇಕು, ಇದರಿಂದ ನಾವು ವಿಷಯಗಳಕಡೆಗೆ, " ಇದರಿಂದ ನಾನು ಏನು ಪಡೆಯುತ್ತೇನೆ?" ಎಂಬುದರಿಂದ ನೋಡುವುದಿಲ್ಲ, ಆದರೆ, ನಾವು "ದೇವರ ರಾಜ್ಯವು ಹೇಗೆ ಇದರಿಂದ ಪ್ರಯೋಜನ ಹೊಂದುತ್ತದೆ?" ಎಂಬ ರೀತಿಯಲ್ಲಿ ಆಲೋಚಿಸುತ್ತೇವೆ. ದೇವರ ರಾಜ್ಯವು ಮುಂದೆ ಸಾಗುವುದಾದರೆ, ನಾನು ಸಂತೋಷವಾಗಿ ಸೇವೆ ಮಾಡುತ್ತೇನೆ. ಇದು ಒಬ್ಬ ನಿಜವಾದ ರಾಜ್ಯ ನಿರ್ಮಾಣಿಕನ ಸ್ಥಿತಿಯಾಗಿರುತ್ತದೆ.

## ಇತರ ದೇವ ಸೇವಕರೊಟ್ಟಿಗೆ ಸಂಬಂಧ ಕಲ್ಪಿಸಿರಿ

**"ಇನ್ನು ನಾಲ್ಕು ತಿಂಗಳಿಗೆ ಸುಗ್ಗಿ ಬರುವದೆಂದು ನೀವು ಹೇಳುವುದುಂಟಷ್ಟೆ. ನಿಮ್ಮ ಕಣ್ಣೆತ್ತಿ ಹೊಲಗಳನ್ನು ನೋಡಿರಿ ಅವು ಬೆಳ್ಳಗಾಗಿ ಕೊಯ್ಲಿಗೆ ಬಂದವೆಂದು ನಿಮಗೆ ಹೇಳುತ್ತೇನೆ. ಕೊಯ್ಯುವವನಿಗೆ ಈಗಲೇ ಕೂಲಿ ದೊರೆಯುತ್ತದೆ; ಅವನು ನಿತ್ಯಜೀವನಕ್ಕೆ ಫಲವನ್ನು ಕೂಡಿಸಿಡುತ್ತಾರೆ; ಹೀಗೆ ಬಿತ್ತುವವನಿಗೂ ಕೊಯ್ಯುವವನಿಗೂ ಕೂಡ ಸಂತೋಷವಾಗುವುದು. ಬಿತ್ತುವವನೊಬ್ಬ, ಕೊಯ್ಯುವವನೊಬ್ಬ ಎಂಬ ಗಾದೆಯಂತೆ ಆಯಿತು. ನೀವು ಕಷ್ಟ ಮಾಡದಂಥ ಬೆಳೆಯನ್ನು ಕೊಯ್ಯುವುದಕ್ಕೆ ನಾನು ನಿಮ್ಮನು ಕಳುಹಿಸಿದೆನು; ಬೇರೊಬ್ಬರು ಕಷ್ಟ ಮಾಡಿದ್ದಾರೆ; ನೀವು ನಡುವೆ ಅವರ ಕಷ್ಟದಲ್ಲಿ ಸೇರಿದ್ದೀರಿ?" ಎಂದು ಹೇಳಿದನು** (ಯೋಹಾನ 4:35-38).

ಸೇವೆಯಲ್ಲಿ ನಾವು ಎಲ್ಲವನ್ನೂ ಮಾಡುತ್ತೇವೆ ಹಾಗೂ ಪ್ರತಿಯೊಂದನ್ನೂ ಒಂಟಿಯಾಗಿ ಮಾಡುತ್ತೇವೆಂಬುದು ಬಹು ಅಪರೂಪ, ಯಾರೋ ಒಬ್ಬರು ಮೊದಲೇ ನಮಗಿಂತ ಮುಂದೆ ಹೋಗಿ ಬೀಜ ಬಿತ್ತಿರುತ್ತಾರೆ ಎಂಬುದು ಆದರ್ಶವಾಗಿದೆ ದೇವರು ನಮ್ಮನ್ನು ಅವರ ದುಡಿತಗಳಲ್ಲಿ ಪ್ರವೇಶಿಸುವಂತೆ ಕಳುಹಿಸಿರುತ್ತಾನೆ. ನಾವು ಒಂದು ನಗರದಲ್ಲಿ ಸೇವೆ ಮಾಡುತ್ತಿದ್ದರೂ ಕೂಡಾ, ಆ ನಗರದಲ್ಲಿ ಇದೇ ರೀತಿಯಲ್ಲಿ ಸಭೆಗಳು ಹಾಗೂ ಸೇವೆಗಳು ಈಗಾಗಲೇ ಸೇವೆಮಾಡುತ್ತಿವೆ.

ನಾವು ಆ ನಗರದ ಇತರ ದೇವ ಪುರುಷರು, ಸ್ತ್ರೀಯರು ಇವರೊಂದಿಗೆ ಜೋಡಣೆ ಹೊಂದಿ, ಪರಸ್ಪರ ಕಾರ್ಯಮಾಡಿ, ಸಂಬಂಧ ಹೊಂದಿಸಿ ಕೊಂಡು ಕೆಲಸ ಮಾಡಲು ಕಲಿಯಬೇಕು. ಆದರ್ಶವಾಗಿ, ನಾವು ಆ ನಗರದ ತರ ಪ್ರತಿಯೊಬ್ಬರ ಸೇವೆಯನ್ನೂ ಪ್ರಶಂಸಿಸುವುದಾದರೆ ಅದು ಮಹತ್ವವುಳ್ಳದ್ದಾಗಿರುತ್ತದೆ; ಹಾಗೂ ಸಾಧ್ಯವಾದ ಮಟ್ಟಿಗೆ ನಗರದಲ್ಲಿ ಪಾಲುದಾರರೂ ಇದೇ ಗುರಿಗಳ ಕಡೆಗೆ ಆಗಬೇಕು.

ಇತರ ದೇವರ ಸೇವಕರುಗಳೊಂದಿಗೆ ಸ್ನೇಹ ಹಾಗೂ ಸಂಬಂಧಗಳನ್ನು ಕಟ್ಟುವುದು ಸಮಯ ಹಾಗೂ ಪ್ರಯತ್ನವನ್ನು ತೆಗೆದು ಕೊಳ್ಳುತ್ತದೆ. ಸಂಬಂಧಗಳನ್ನು ಕಟ್ಟುವುದರಲ್ಲಿ ನಾವು ಒಟ್ಟಾಗಿ ಸೇರಿ ಬರುವುದು ಪ್ರಾಮುಖ್ಯವಾದದ್ದು, ಹಾಗೂ ಇದು ಕೇವಲ ಸೇವೆಯ ಸಂಬಂಧದ ಚಟುವಟಿಕೆಯಲ್ಲ. ನಾವು ನಮ್ಮ ಹೃದಯಗಳು, ನಮ್ಮ ಯಶಸ್ಸುಗಳು ನಮ್ಮ ಹೋರಾಟಗಳು, ನಮ್ಮ ಸವಾಲುಗಳನ್ನು ಸುಮ್ಮನೆ ಹಂಚಿ ಕೊಳ್ಳುವಾಗ ಹಾಗೂ ಒಬ್ಬರಿಗೋಸ್ಕರ ಒಬ್ಬರು ಪ್ರಾರ್ಥಿಸುವಾಗ ಅತಿಶಯವಾದ ಕಾರ್ಯಗಳು ನಡೆಯುತ್ತವೆ. ನಮ್ಮ ತಪ್ಪು ಅಭಿಪ್ರಾಯಗಳೇನಾದರೂ ಇದ್ದರೆ, ಅದನ್ನು ಪರಿಹರಿಸಿ ಕೊಳ್ಳಬಹುದು; ಮುರಿದ ಸಂಬಂಧಗಳಿಗೆ ಸ್ವಸ್ಥತೆ ತರಬಹುದು ಹಾಗೂ ಒಬ್ಬರನ್ನೊಬ್ಬರು ಹರಸಬಹುದು. "ಹೀಗಿರಲು ನೀವು ಸ್ವಸ್ಥವಾಗಬೇಕಾದರೆ ನಿಮ್ಮ ಪಾಪಗಳನ್ನು ಒಬ್ಬರಿಗೊಬ್ಬರು ಅರಿಕೆ ಮಾಡಿ ಒಬ್ಬರಿಗೋಸ್ಕರ ಒಬ್ಬರು ದೇವರನ್ನು ಪ್ರಾರ್ಥಿಸಿರಿ" (ಯಾಕೋಬ 5:16). ಸಂಬಂಧಗಳ ಬಲದಲ್ಲಿ ಒಂದು ಯಾವುದೆಂದರೆ, ನಾವು ಸೇವೆಯಲ್ಲಿ ಭಾಗಿಯಾಗುವ ಸಾಧ್ಯತೆ ಇದೆ. ನಾವು ವಾಸ್ತವವಾಗಿ ಇದನ್ನು ಮಾಡಿದರೆ, ನಾವು ದೇವರ ಬಲದ ಮಹಾ ಬಿಡುಗಡೆಯನ್ನು ಹಾಗೂ ನಮ್ಮ ಪಟ್ಟಣಗಳು ಹಾಗೂ ನಗರಗಳ ಮೇಲೆ ಅಭಿಷೇಕವು ಸುರಿಯುತ್ತದೆಂದು ನಾನು ನಂಬುತ್ತೇನೆ.

## ಇತರ ಪಂಗಡಗಳ ಜತೆ ಅನ್ಯೋನ್ಯತೆ ಬೆಳೆಸಿರಿ

**"ನಾವು ದೇವ ಸ್ತೋತ್ರ ಮಾಡಿ ಪಾಲುಗಾರರಾಗಿದ್ದೇವೆಂಬುದನ್ನು ಸೂಚಿಸುತ್ತದಲ್ಲವೇ. ನಾವು ರೊಟ್ಟಿಯನ್ನು ಮುರಿದು ತಿನ್ನುವದು ಕ್ರಿಸ್ತನ ದೇಹದಲ್ಲಿ ಪಾಲುಗಾರರಾಗಿದ್ದೇವೆಂಬದನ್ನು ಸೂಚಿಸುವೆವಲ್ಲವೇ ರೊಟ್ಟಿಯು ಒಂದೇಯಾಗಿರುವುದರಿಂದ ಅನೇಕರಾಗಿರುವ ನಾವು ಒಂದೇ ದೇಹದಂತಿದ್ದೇವೆ; ಯಾಕೆಂದರೆ ನಾವೆಲ್ಲರೂ ಆ ಒಂದೇ ರೊಟ್ಟಿಯಲ್ಲಿ ಪಾಲು ತಕ್ಕೊಂಡು ತಿನ್ನುತ್ತೇವೆ"** (1 ಕೊರಿಂಥದವರಿಗೆ 10: 16–17).

ರಾಜ್ಯವನ್ನು ಕಟ್ಟುವುದರಲ್ಲಿ ನಾವು ಎದುರಿಸುವ ಸವಾಲುಗಳಲ್ಲಿ ಒಂದು ಯಾವುದೆಂದರೆ, ಪಂಗಡದ ಗೋಡೆಗಳು ಹಾಗೂ ಪಂಗಡದ ಮನೋಸ್ಥಿತಿಗಳು. ಹೆಚ್ಚಿನ ಸಮಯ ನಾವು ಅದೇ ಪಂಗಡ ಅಥವಾ ಹತ್ತಿರ ಸಂಬಂಧ ಹೊಂದಿದ ಪಂಗಡಕ್ಕೆ ಸೇರಿದವರು ನಾವು ಹಿತಕರ ಭಾವನೆಯನ್ನು ಹೊಂದಿರುತ್ತೇವೆ. ಆತ್ಮನಿಂದ ತುಂಬಲ್ಪಟ್ಟ, ಸ್ವತಂತ್ರ ಸಭೆಗಳು ಒಂದರೊಡನೊಂದು ಹಿತಕರ ಭಾವನೆ ಹೊಂದಿರುತ್ತಾರೆ. ಮುಖ್ಯ ವಾಹಿನಿಯಲ್ಲಿರುವ ಸೌವಾರ್ತಿಕ ಪಂಗಡಗಳ ಸಭಾ ಪಾಲಕರು ಒಬ್ಬರಿಗೊಬ್ಬರು ಹಿತಕರಭಾವ ಹೊಂದಿರುತ್ತಾರೆ. ಈ ಸಾಲುಗಳು ಅಡ್ಡವಾಗಿರುವುದು ಅಪರೂಪ ಎಂದು ನಾವು ನೋಡುತ್ತೇವೆ, ಹಾಗೂ ಪಂಗಡಗಳ ಅಡ್ಡಸಾಲುಗಳಿಗೆ ಸಂಬಂಧಿಸಿದ ಸಭಾ ಪಾಲಕರು ಹಾಗೂ ಕ್ರೈಸ್ತ ಸೇವಕರು ಕೇವಲ ಅನ್ಯೋನ್ಯತೆ ಹಾಗೂ ಸಂಬಂಧ ನಿರ್ಮಾಣಕ್ಕಾಗಿ ಮಾತ್ರ.

ಪಂಗಡಗಳ ಅಡ್ಡಲಾಗಿ ಸೈದ್ಧಾಂತಿಕ ವ್ಯತ್ಯಾಸಗಳಿವೆ, ಎಂದು ನಾನು ಅರಿತುಕೊಂಡಿದ್ದೇನೆ. ಹೇಗಾದರೂ, ನಾವು ಸಾಮಾನ್ಯ ನೆಲೆ ಹಾಗೂ ಕಾರಣಗಳನ್ನು ನಾವೇಕೆ ಅನ್ಯೋನ್ಯತೆ ಹಾಗೂ ಒಬ್ಬರಿಗೊಬ್ಬರಿಗೆ ಸಂಬಂಧ ಉಂಟುಮಾಡುವುದು ಎಂದು ಕಂಡುಕೊಳ್ಳ ಬಹುದೆಂದು ನಾನು ನಂಬುತ್ತೇನೆ. ಮತೆ ಹುಟ್ಟಿದ ವಿಶ್ವಾಸಿಗಳಾಗಿ, ನಾವೆಲ್ಲರೂ ಅದೇ ಶಿಲುಬೆಯ ಮುಖಾಂತರ ಹಾದು ಹೋಗಿದ್ದೇವೆ, ಅದೇ ರಕ್ತದಿಂದ ತೊಳೆಯಲ್ಪಟ್ಟಿರುತ್ತೇವೆ ಹಾಗೂ ಅದೇ ದೇಹಕ್ಕೆ ಸೇರಲ್ಪಟ್ಟಿರುತ್ತೇವೆ. ಒಬ್ಬರಿಂದ ಒಬ್ಬರು ಭಯಪಡುವುದರ ಬದಲಾಗಿ ನಾವು ಅನ್ಯೋನ್ಯತೆಯಿಂದ ಒಬ್ಬರನ್ನೊಬ್ಬರು ಸೇರಿಸೋಣ.

## ಜೊತೆ ದೇವ ಸೇವಕರಿಂದ ಕಲಿಯಿರಿ

**"ಕಬ್ಬಿಣವು ಕಬ್ಬಿಣವನ್ನು ಹೇಗೋ ಮಿತ್ರನು ಮಿತ್ರನ ಬುದ್ಧಿಯನ್ನು ಹಾಗೆ ಹರಿತ ಮಾಡುವನು"** (ಜ್ಞಾನೋಕ್ತಿಗಳು 27:17).

ಇತರ ಬೋಧಕರೊಂದಿಗೆ ಸಂಬಂಧ ನಿರ್ಮಿಸುವುದರ ಭಾಗವಾಗಿ ನಾವು ಒಬ್ಬರಿಂದ ಒಬ್ಬರು ಕಲಿಯಲು ಸಮರ್ಥರಾಗಿರಬೇಕು. ನಾವು ಆಲಿಸಲು ಇಚ್ಛೆಯುಳ್ಳವರಾಗಿದ್ದು, ಎಲ್ಲಾ ಸಮಯದಲ್ಲೂ ಮಾತನಾಡಲು

ಬಯಸಬಾರದು. ಪ್ರಶ್ನೆಗಳನ್ನು ಕೇಳಿರಿ, ಅವರ ಅಭಿಪ್ರಾಯಗಳನ್ನು ಆಲೋಚನೆಗಳನ್ನು ಹಾಗೂ ಅನುಭವಗಳನ್ನು ಆಲಿಸಿರಿ. ತಮ್ಮ ಹೃದಯಗಳನ್ನು ಹಂಚಿಕೊಳ್ಳಲು ಅವರಿಗೆ ಅವಕಾಶ ಕೊಡಿರಿ. ಪ್ರಗತಿಯಲ್ಲಿ ನಾವು ಬಹಳಷ್ಟು ಕಲಿಯಬಹುದು. ಕಬ್ಬಿಣವು ಕಬ್ಬಿಣವನ್ನು ಹರಿತ ಮಾಡುವಂತೆ ನಮ್ಮ ಜೀವಿತಗಳು ಒಬ್ಬರನ್ನೊಬ್ಬರನ್ನು ಹರಿತ ಮಾಡುತ್ತದೆ. ಇಂಥಾ ಸಂವಾದಗಳಲ್ಲಿ ನಾವು ಕೆಲವು ವಿಷಯಗಳನ್ನು ಕಲಿಯುತ್ತೇವೆ, ಏನೆಂದರೆ, ಅವು ಮೌಲ್ಯವಾದವುಗಳಲ್ಲ ಬಹುಶ: ಅವು ನಮ್ಮ ಜೀವಿತಗಳು ಮತ್ತು ಸೇವೆಗಳನ್ನು ಬಹಳಷ್ಟು ತೊಂದರೆ ಹಾಗೂ ಹೃದಯ ಬೇನೆಗಳಿಂದ ಸಂರಕ್ಷಿಸ ಬಹುದು, ಕರ್ತನು ಇಂಥ ಸರಳವಾದ ಸಂಭಾಷಣೆಗಳನ್ನು ನಮ್ಮನ್ನು ನಡೆಸಲು ಹಾಗೂ ಹೊಸವಲಯಗಳಲ್ಲಿ ನಮಗೆ ದಾರಿ ತೋರಿಸಲು ಬಳಸುತ್ತಾನೆ.

ಇತರ ದೇವ ಸೇವಕರೊಂದಿಗೆ ನಾವು ರಚಿಸುವ ಸಂಬಂಧಗಳ ಮೂಲಕ ನಾವು ಕೆಲವರನ್ನು ಮಿತ್ರರಾಗಿ, ಕೆಲವರನ್ನು ನಾಯಕರಾಗಿ ನಾವು ಮಾದರಿಯಾಗಿ ಹೊಂದಿರುತ್ತೇವೆ, ಇನ್ನೂ ಕೆಲವರು ಸಲಹೆಗಾರರಾಗಿ ವೈಯಕ್ತಿಕ ಮಟ್ಟದಲ್ಲಿ ನಮ್ಮ ಜೀವಿತಗಳನ್ನು ಪ್ರತ್ಯೇಕಿಸುತ್ತಾರೆ, ಇದಕ್ಕೆ ಪ್ರತಿಯಾಗಿ ನಾವು ಇತರರಿಗೆ ಸ್ನೇಹಿತರಾಗಿರುವ ಅವಕಾಶ ಹೊಂದಲು ಸಾಧ್ಯ. ಇತರರು ಮಾದರಿ ಪಾತ್ರಧಾರಿಗಳನ್ನಾಗಿ ಕಾಣುವಂತೆ ನಾವು ನಾಯಕರಾಗಬಹುದು. ನಾವು ಇತರರಿಗೆ ಸಲಹೆ ನೀಡುವಂತೆ ಹಾಗೂ ಅವರು ದೇವರ ರಾಜ್ಯದಲ್ಲಿ ಮತ್ತು ತಮ್ಮ ಸೇವೆಗಳಲ್ಲಿ ಬೆಳೆಯುವುದನ್ನು ನೋಡಲಿಕ್ಕಾಗುವಂತೆ ಅವಕಾಶ ಹೊಂದುತ್ತೇವೆ.

## ಒಬ್ಬ ಅನುಯಾಯಿಯಾಗಿದ್ದು ಆರಾಮಾಗಿರಿ-ಸೂಚನೆಗಳನ್ನು ಅನುಸರಿಸಿರಿ.

**ನಿಮ್ಮಲ್ಲಿ ಹಾಗಿರಬಾರದು; ಆದರೆ ನಿಮ್ಮಲ್ಲಿ ದೊಡ್ಡವನಾಗಬೇಕೆಂದಿರುವವನು ನಿಮ್ಮ ಸೇವಕನಾಗಿರಬೇಕು; ನಿಮ್ಮಲ್ಲಿ ಮೊದಲನೆಯವನಾಗಬೇಕೆಂದಿರುವವನು ನಿಮ್ಮ ಆಳಾಗಿರಬೇಕು"** (ಮತ್ತಾಯ 20:26–27).

ನಮ್ಮಲ್ಲಿ ಹಲವು ಮಂದಿ ಮಾರ್ಗ ತೋರಿಸುವ, ಅಧಿಕಾರನಡೆಸುವ, ಅಧಿಕಾರನಡೆಸುವ, ಮುಂದೆ ಇರುವ ಹಾಗೂ ಇತರರು ಅನುಸರಿಸುವಂತೆ

ಸೂಚನೆಗಳನ್ನುನೀಡುವಸ್ವಾಭಾವಿಕಪ್ರವೃತ್ತಿಹೊಂದಿರುತ್ತೇವೆ.ಹೇಗಾದರೂ ನಾವು ತಮ್ಮ ಸ್ವಂತದೃಷ್ಟಿಯಲ್ಲಿ ನಾಯಕರಾಗಿದ್ದೇವೆಂದುಕೊಳ್ಳುವ ಒಂದು ಜೊತೆ ಸೇವಕರ ಗುಂಪಿನ ನಡುವೆ ಇರುವಾಗ, ನಾವು ಬೇರೆ ಯಾರನ್ನೋ ಅನುಸರಿಸಲು ಇಚ್ಛೆಯುಳ್ಳವರಾಗಬೇಕು.

ಇದು ಸ್ವಲ್ಪ ಮಟ್ಟಿಗೆ, ಕೆಲವು "ಮಹಾ" ನಾಯಕರು ಬಲಹೀನರಾದ ಶಿಷ್ಯರಾಗಿರುವುದನ್ನು ನೋಡುವಾಗ ಹೃದಯ ಕುಸಿಯುವಂತೆ ಮಾಡುತ್ತದೆ, ಒಂದು ಹಟಮಾರಿತನದ, ಸಹಕರಿಸಲು ಹಾಗೂ ಸೂಚನೆ ಅನುಸರಿಸದ ಇಚ್ಛೆಯಿಲ್ಲದ ಸ್ಥಿತಿಯನ್ನು ನಾವು ನೋಡಲು ಆರಂಭಿಸುತ್ತೇವೆ, ಏಕೆಂದರೆ, ಅವರು ಅಧಿಕಾರ ಹೊಂದಿಲ್ಲ, ಹಾಗೂ ಬೇರೆ ಯಾರೋ ಇರುತ್ತಾರೆ, ನಿಜವಾದ ಮಹತ್ವದ ಸೂಚನೆಯು ನಡೆಸಲು ನಮ್ಮ ಸಮರ್ಥನೆಯಲ್ಲಿ ಇರುವುದಿಲ್ಲ, ಆದರೆ ಯೋರೋ ಒಬ್ಬರು ನಡಿಸುವಾಗ ತಾವು ನಡೆಸುವ ಇಚ್ಛೆಹೊಂದಿರುತ್ತಾರೆ.

ನಾವು ನಮ್ಮ ಸ್ವಂತ ಸೇವೆಗಳಲ್ಲಿ ನಾಯಕರಾಗಿರಬಹುದು, ಆದರೆ ನಾಯಕರ ಗುಂಪಿನಲ್ಲಿರುವಾಗ, ಯಾರೇ ನಡಿಸಿದರೂ ನಾವು ಪೂರ್ಣ ಹೃದಯದಿಂದ ಅನುಸರಿಸಬೇಕು. ನಮ್ಮನ್ನು ಅವರು ನಿಲ್ಲಲು ಹೇಳುವಾಗ, ನಾವು ನಿಲ್ಲಬೇಕು. ನಮಗೆ ಕುಳಿತು ಕೊಳ್ಳಲು ಹೇಳುವಾಗ ನಾವು ಕುಳಿತು ಕೊಳ್ಳುತ್ತೇವೆ. ಇದು ಹೀಗೆ ಇರುತ್ತದೆ. ನಾವು ಅನುಸರಿಸುತ್ತೇವೆ. ನಾವು 10 ನಿಮಿಷಗಳಷ್ಟು ಮಾತನಾಡಲು ಕೇಳಲ್ಪಟ್ಟಾಗ, ನಾವು 10 ನಿಮಿಷ ಮಾತಾಡ ಬೇಕು, ನಂತರ ಮೌನವಾಗಬೇಕು. ನಾವು ನಮ್ಮ "ತೂಕ"ವನ್ನು ಸುತ್ತಲೂ ಹೊರಿಸಬಾರದು, ಹಾಗೂ ನಾವು 15, 20, ಅಥವಾ 30 ನಿಮಿಷಗಳ ಕಾಲ ಮಾತಾಡುತ್ತಲೇ ಇರುತ್ತೇವೆ.

## ಗುರುತಿಸಲ್ಪಡದೆ ಇರುವುದರೊಂದಿಗೆ ಆರಾಮವಾಗಿರಿ

**ನಾವೇ ನಮ್ಮನ್ನು ತಿರಿಗಿ ಹೊಗಳಕೊಳ್ಳುವುದಕ್ಕೆ ಪ್ರಾರಂಭಿಸುತ್ತೆವೋ? ಇಲ್ಲವೆ ಕೆಲವರಿಗೆ ಬೇಕಾಗಿರುವ ಪ್ರಕಾರ ನಿಮಗೆ ತೋರಿಸತಕ್ಕ ಯೋಗ್ಯತಾ ಪತ್ರಗಳು ನಮಗೆ ಅಗತ್ಯವೋ? ಅಥವಾ ಅಂಥ ಪತ್ರಗಳನ್ನು ನಿಮ್ಮಿಂದ ಪಡಕೊಳ್ಳ ಬೇಕೋ**" (2 ಕೊರಿಂಥದವರಿಗೆ 3:1).

ನಾವು ಯಾವಾಗಲೂ ಸಂಬೋಧಿಸಿ, ಹಾಗೂ ನಮ್ಮ ಸೇವಕ ಸ್ಥಾನಗಳಲ್ಲಿರುವುದರಿಂದ, ಜನರು ಯಾವಾಗಲೂ ನಮ್ಮನ್ನು

"ಸಭಾಪಾಲಕರು", "ಸಹೋದರರು", "ಅಪೊಸ್ತಲರು", "ರೆವರೆಂಡ್", ಅಥವಾ ಯಾವುದೇ ಹೆಸರನ್ನು ನಾವು ಹೊತ್ತು ಕೊಂಡಿರುತ್ತೇವೋ ಹಾಗೆ ಸಂಬೋಧಿಸುತ್ತಾರೆ, ನಾವು ತಕ್ಷಣವೇ ಆ ರೀತಿ ಗುರುತಿಸಲ್ಪಟ್ಟಾಗ ಒಂದು ರೀತಿಯ ದಾರಿ ತಪ್ಪಿದ ಭಾವನೆ ಹೊಂದುತ್ತೇವೆ. ನಾವು ಮೊಟ್ಟ ಮೊದಲನೇದಾಗಿ, ದೇವರ ದೃಷ್ಟಿಯಲ್ಲಿ ಸಾಧಾರಣವಾದ ವಿಶ್ವಾಸಿಗಳು ಎಂದು ಅರ್ಥ ಮಾಡಿಕೊಳ್ಳಬೇಕು. ನಾವು ಒಂದು ಗುಂಪಿನಲ್ಲಿ ಹಾಜರಿದ್ದಾಗ, ನಾವು ನೆಮ್ಮದಿಯಿಂದ, ಗುಂಪಿನಲ್ಲಿ ಕುಳಿತುಕೊಂಡು, ದೇವರನ್ನು ಆರಾಧಿಸಬೇಕು, ವಾಕ್ಯವನ್ನು ಆಲಿಸುತ್ತಾ ಇತರ ಎಲ್ಲಾ ವಿಶ್ವಾಸಿಗಳು ಏನು ಮಾಡುತ್ತಾರೋ ಅದನ್ನು ಮಾಡಬೇಕು. ನಮ್ಮಲ್ಲಿ ಹೆಚ್ಚು ಮಂದಿ, ವೇದಿಕೆಯ ಮೇಲಕ್ಕೆ ಕರೆಯಲ್ಪಡುವ ಅಥವಾ ಪ್ರತೀಹಾರಿಗಳಾಗಿ ಮುಂದಿನ ಸಾಲುಗಳಲ್ಲಿರುವ ಅಭ್ಯಾಸ ಹೊಂದಿರುತ್ತಾರೆ, ಮತ್ತು ದೇವರ ಸೇವಕರೆಂದು ಗುರುತಿಸಲ್ಪಟ್ಟು ನಾವು "ಗುಂಪಿನಲ್ಲಿ" ಸಾಧಾರಣ ವಿಶ್ವಾಸಿಗಳಂತೆ ಇರುವುದಕ್ಕಾಗುವುದಿಲ್ಲ ಎಂಬಂತೆ ಇರುತ್ತಾರೆ, ಆ ರೀತಿ ಆಗುವಾಗ ನಾವು ದಿಕ್ಕೆಟ್ಟಂತೆ ಆಗುತ್ತೇವೆ! ನಾವು ಗುರುತಿಸಲ್ಪಡದೆ ಹೋದಾಗ ನಾವು ನೆಮ್ಮದಿ ಕಳೆದು ಕೊಂಡರೆ ನಮ್ಮ ಗುರುತಿಸುವಿಕೆಯ ತಿಳುವಳಿಕೆಯಲ್ಲಿ ಏನೋ ಒಂದು ತಪ್ಪು ಆಗಿರುತ್ತದೆ.

## ಇತರರ ವರಗಳನ್ನು ಅಭಿಷೇಕವನ್ನು, ಸೇವೆಯನ್ನು ಗೌರವಿಸಿರಿ.

**"ವರಗಳಲ್ಲಿ ಬೇರೆ ಬೇರೆ ವಿಧಗಳುಂಟು, ದೇವರಾತ್ಮನು ಒಬ್ಬನೇ; ಸೇವೆಗಳಲ್ಲಿ ಬೇರೆ ಬೇರೆ ವಿಧಗಳುಂಟು, ಕರ್ತನು ಒಬ್ಬನೇ; ಕಾರ್ಯಗಳಲ್ಲಿ ಬೇರೆ ಬೇರೆ ವಿಧಗಳುಂಟು, ಸರ್ವರಲ್ಲಿಯೂ ಸರ್ವಕಾರ್ಯಗಳನ್ನೂ ಸಾಧಿಸುವ ದೇವರು ಒಬ್ಬನೇ"** (1 ಕೊರಿಂಥದವರಿಗೆ 12: 4–6).

ದೇವರು ತನ್ನ ಸೇವಕರಾದ ನಮ್ಮಲ್ಲಿ ಪ್ರತಿಯೊಬ್ಬರ ಮುಖಾಂತರ ಬಗೆ ಬಗೆಯ ರೀತಿಗಳಲ್ಲಿ ಕಾರ್ಯ ಮಾಡುತ್ತಾನೆ. ನಾವೆಲ್ಲರೂ ಒಂದೇ ರೀತಿಯಾಗಿ ಭೋಧಿಸುವುದಿಲ್ಲ ಪ್ರಾರ್ಥಿಸುವುದಿಲ್ಲ, ಪ್ರವಾದನೆ ಹೇಳುವುದಿಲ್ಲ ಹಾಗೂ ಹಾಡುವುದಿಲ್ಲ. ನಾವು ಒಬ್ಬರನ್ನೊಬ್ಬರು ಗೌರವಿಸಬೇಕು, ಅಂದರೆ ನಾವು ಸೇವೆ ಮಾಡುವ ರೀತಿಯು ಬೇರೆಯಾಗಿದ್ದರೂ ಇದನ್ನು ನೆನೆಪಿಡಬೇಕು. ದೇವರ ಕಾರ್ಯಗಳು ವಿವಿಧ ವಾಗಿವೆ, ಆದರೆ ನಮ್ಮೊಬ್ಬೊಬ್ಬರ ಮುಖಾಂತರವೂ ಕೆಲಸ ಮಾಡುವ ದೇವರು ಆತನೇ ಆಗಿರುತ್ತಾನೆ. ಯಾರ ಸೇವೆಯ ರೀತಿಯೂ

ಇನ್ನೊಬ್ಬರಿಗಿಂತ ಶ್ರೇಷ್ಠವಾದುದಲ್ಲ. ಹೌದು, ಕೆಲವರ ಸೇವೆಯ ರೀತಿಗಳು ಹೆಚ್ಚು ನಾಟಕೀಯವಾಗಿ, ಹೆಚ್ಚು ಶಬ್ದದಿಂದ ಕೂಡಿ, ಇತರರಿಗಿಂತ ಹೆಚ್ಚು ಗಮನ ಸೆಳೆಯುವಂತೆ ಇರುತ್ತದೆ, ಆದರೆ, ಹೀಗೆ ಹೆಚ್ಚು ಶಕ್ತಿ ಅಥವಾ ಹೆಚ್ಚು ಫಲವನ್ನು ಸೂಚಿಸುವುದಿಲ್ಲ, ನಾವು ದೇವರ ಸೇವೆಯಲ್ಲಿ ಆತನು ತನ್ನ ದೇಹದಲ್ಲಿ ನಮ್ಮನ್ನು ಎಲ್ಲಿಟ್ಟಿದ್ದಾನೋ ಆ ಎಲ್ಲಾ ವೈವಿಧ್ಯತೆ ಮತ್ತು ಏಕತೆಯನ್ನೂ ಆಚರಿಸೋಣ ದೇವರು ಪ್ರತಿಯೊಬ್ಬರಲ್ಲಿರುವುದನ್ನೂ ಆಚರಿಸೋಣ.

## ಮತ್ತೊಬ್ಬ ವ್ಯಕ್ತಿಯ ಸೇವಕನನ್ನು ತೀರ್ಪು ಮಾಡಬೇಡಿ

"**ತೀರ್ಪು ಮಾಡಬೇಡಿರಿ, ಹಾಗೆ ನಿಮಗೂ ತೀರ್ಪಾಗುವುದಿಲ್ಲ. ನೀವು ಮಾಡುವ ತೀರ್ಪಿಗೆ ಸರಿಯಾಗಿ ನಿಮಗೂ ತೀರ್ಪಾಗುವುದು, ನೀವು ಅಳೆಯುವ ಅಳತೆಯಿಂದಲೇ ನಿಮಗೂ ಅಳೆಯುವರು. ನೀನು ನಿನ್ನ ಕಣ್ಣಿನಲ್ಲಿರುವ ತೊಲೆಯನ್ನು ಯೋಚಿಸದೆ ನಿನ್ನ ಸಹೋದರನ ಕಣ್ಣಿನಲ್ಲಿರುವ ರವೆಯನ್ನು ಯೋಚಿಸುವುದೇಕೆ? ನೀನು ನಿನ್ನ ಸಹೋದರನಿಗೆ–ನಿನ್ನ ಕಣ್ಣಿನೊಳಗಿಂದ ರವೆಯನ್ನು ತೆಗೆಯುತ್ತೇನೆ ಬಾ ಎಂದು ಹೇಳುವುದು ಹೇಗೆ? ನಿನ್ನ ಕಣ್ಣಿನಲ್ಲಿ ತೊಲೆಯಿದೆಯಲ್ಲಾ, ಕಪಟಿಯೇ, ಮೊದಲು ನಿನ್ನ ಕಣ್ಣಿನೊಳಗಿಂದ ತೊಲೆಯನ್ನು ತೆಗೆದು ಹಾಕಿಕೋ; ಆ ಮೇಲೆ ನಿನ್ನ ಸಹೋದರನ ಕಣ್ಣಿನೊಳಗಿಂದ ರವೆಯನ್ನು ತೆಗೆಯುವುದಕ್ಕೆ ಚೆನ್ನಾಗಿ ಕಾಣಿಸುವದು**" (ಮತ್ತಾಯ 7: 1–5).

"**ಕಣ್ಣಿಗೆ ತೋರಿದ್ದರ ಮೇಲೆ ತೀರ್ಪು ಮಾಡಬೇಡಿರಿ, ನ್ಯಾಯವಾದ ತೀರ್ಪು ಮಾಡಿರಿ**" (ಯೋಹಾನ 7:24).

"**ಮತ್ತೊಬ್ಬ ಸೇವಕನ ವಿಷಯವಾಗಿ ತೀರ್ಪುಮಾಡುವುದಕ್ಕೆ ನೀನು ಯಾರು? ಅವನು ನಿರ್ದೋಷಿಯಾಗಿ ನಿಂತರೂ ದೋಷಿಯಾಗಿ ಬಿದ್ದರೂ ಅದು ಅವನ ಯಜಮಾನನಿಗೆ ಸೇರಿದ್ದು. ಅವನು ನಿರ್ದೋಷಿಯಾಗಿ ನಿಲ್ಲಿಸಲ್ಪಡುವನು." ಅವನನ್ನೂ ನಿಲ್ಲಿಸುವುದಕ್ಕೆ ಕರ್ತನು ಶಕ್ತನಾಗಿದ್ದಾನೆ. ತಿನ್ನದವನೇ, ನಿನ್ನ ಸಹೋದರನ ವಿಷಯವಾಗಿ ನೀನು ತೀರ್ಪುಮಾಡುವುದೇನು? ತಿನ್ನುವವನೇ, ನಿನ್ನ ಸಹೋದರನನ್ನು ನೀನು ಹಿನೈಸುವುದೇನು? ನಾವೆಲ್ಲರೂ ದೇವರ ನ್ಯಾಯಾಸನದ ಮುಂದೆ ನಿಲ್ಲಬೇಕಲ್ಲಾ. ನನ್ನ ಜೀವದಾಣೆ, ಎಲ್ಲರೂ ನನಗೆ ಅಡ್ಡಬೀಳುವರು, ಎಲ್ಲರೂ ನನ್ನನ್ನು ದೇವರೆಂದು ಪ್ರತಿಜ್ಞೆ ಮಾಡುವರು ಎಂಬುದಾಗಿ ಕರ್ತನು ಹೇಳಿದ್ದಾನೆ" ಎಂದು ಬರೆದದೆ. ಹೀಗಿರಲಾಗಿ ನಮ್ಮಲ್ಲಿ ಪ್ರತಿಯೊಬ್ಬನು ತನ್ನ ತನ್ನ ವಿಷಯವಾಗಿ ದೇವರ ಮುಂದೆ ಉತ್ತರ ಕೊಡಬೇಕು**" (ರೋಮಾಪುರದವರಿಗೆ 14:4,10–12).

ನಾವು ತೀರ್ಪು ಮಾಡದಿರಲು ಹಾಗೂ ಒಬ್ಬ ಜೊತೆ ಸೇವಕನನ್ನು ಅವನ ತಪ್ಪುಗಳು ಮತ್ತು ಸೋಲುವಿಕೆಗಾಗಿ ಅಪರಾಧಿ ಮಾಡ ಬೇಡಿರಿ, ಯಾವುದು ಸರಿ ಹಾಗೂ ತಪ್ಪು, ಎಂಬುದನ್ನು ಗುರುತಿಸುವಾಗ, ಹಾಗೂ

ಬೇರೊಬ್ಬನ ಸೋಲುವಿಕೆಯಿಂದ ಪಾಠಗಳನ್ನು ಕಲಿಯುವಾಗ, ಮತ್ತೊಬ್ಬ ವ್ಯಕ್ತಿಯ ಮೇಲೆ ತೀರ್ಪು ಮಾಡಲು ನಾವು ಇಲ್ಲಿ ಇಲ್ಲ, ಒಬ್ಬ ಜೊತೆ ಸೇವಕನು ಒಂದು ತಪ್ಪು ಮಾಡುವಾಗ ಅಥವಾ ಏನೋ ತಪ್ಪನ್ನು ಮಾಡುವಾಗ, ನಾವು ತೀರ್ಪು ಮಾಡುವುದು, ಟೀಕಿಸುವುದು ಹಾಗೂ ಅವರನ್ನು ಹೀನೈಸುವುದು ಬೇಡ, ನಾವು ಒಂದು ಗಂಭೀರವಾದ ರೀತಿಯಲ್ಲಿ ಸಾರ್ವಜನಿಕವಾಗಿ ಅವರ ಬಗ್ಗೆ ಮಾತನಾಡುವುದನ್ನು ತಡೆಯಿರಿ, ನಮಗೆ ಅವರು ಉತ್ತರ ಕೊಡುವವರಲ್ಲ, ಆದರೆ ಒಡೆಯನಾದ ಕರ್ತನಿಗೆ ಉತ್ತರ ಕೊಡಬೇಕು. ನಾವು ತಪ್ಪು ಮಾಡುವುದನ್ನು ಗುರುತಿಸಬೇಕು, ನಾವು ಅವರ ತಪ್ಪುಗಳಿಂದ ಕಲಿಯುತ್ತೇವೆ, ಇದರಿಂದ ನಾವು ಅದೇ ವಿಷಯಗಳನ್ನು ನಾವಾಗಿ ಮಾಡುವುದಿಲ್ಲ. ಅವರ ಬಗ್ಗೆ ಕೇಳಲ್ಪಡುವಾಗ, ಯಾವುದು ತಪ್ಪು ಎಂದು ನಾವು ಅಂಗೀಕರಿಸಬೇಕು, ಹಾಗೂ ಅವರ ಜೀವಿತಗಳಲ್ಲಿ ಕೃಪೆ ಹಾಗೂ ದಯೆಯ ಬಗ್ಗೆ ಉಜ್ಜೀವನ ಹಾಗೂ ನೀತಿಯು ಸ್ಥಾಪಿಸಲ್ಪಡುವುದನ್ನು ನೋಡುವ ಆಶೆಯೊಂದಿಗೆ ಮಾತನಾಡಬೇಕು ನಾವು ಅವರನ್ನು ದೇವರ ಸೇವಕರೆಂಬುದಾಗಿಯೇ ನೋಡಲು ಮುಂದುವರಿಯಬೇಕು, ಹಾಗೂ ಅವರ ಜೀವಿತಗಳಲ್ಲಿರುವ ಅಭಿಷೇಕವನ್ನು ಗೌರವಿಸಬೇಕು. ಕೆಲವು ವೇಳೆ ನಾವು ಒಬ್ಬ ಸೇವಕನ ಜೀವಿತದಲ್ಲಿ ಸ್ಪಷ್ಟವಾದ ಕೊರತೆಗಳಿರುವುದನ್ನು ನೋಡುತ್ತೇವೆ, ಹಾಗೂ ದೇವರು ಆತನ ಅಥವಾ ಆಕೆಯನ್ನು ಇನ್ನೂ ಯಾಕೆ ಬಳಸುತ್ತಾನೆಂದು ಅಚ್ಚರಿಗೊಳ್ಳುತ್ತೇವೆ. ಉತ್ತರವು ಸ್ವಲ್ಪಮಟ್ಟಿಗೆ ಸರಳವಾದುದು. ದೇವರು ಅವರನ್ನು ಇನ್ನೂ ಬಳಸುವ ಕಾರಣವೇನೆಂದರೆ, ಅದೇ ಕಾರಣದಿಂದಲೇ ದೇವರು ನಮ್ಮನ್ನೂ ಬಳಸುತ್ತಾನೆ. ಇದು ಆತನ ಕೃಪೆ.

## ಹರಟಬೇಡಿರಿ–ನಿಮ್ಮ ಸಹೋದರನನ್ನು ಕಾಯುವವರಾಗಿರಿ

**"ಚಾಡಿಕೋರನು ಗುಟ್ಟುರಟ್ಟು ಮಾಡುವನು; ನಂಬಿಗಸ್ತನು ಸಂಗತಿಯನ್ನು ಗುಪ್ತಪಡಿಸುವನು"** (ಜ್ಞಾನೋಕ್ತಿಗಳು 11:13).

**"ದೋಷವನ್ನು ಮುಚ್ಚಿಡುವವನು ಪ್ರೇಮವನ್ನು ಸೆಳೆಯುವನು; ಎತ್ತಿ ಆಡುತ್ತಿರುವವನು ಸ್ನೇಹವನ್ನು ಕಳೆದು ಕೊಳ್ಳುವನು" (ಜ್ಞಾನೋಕ್ತಿಗಳು 17:9).**

**"ಪ್ರತಿಯೊಬ್ಬನು ತನ್ನ ಹಿತವನ್ನು ಚಿಂತಿಸದೆ ಪರಹಿತವನ್ನು ಚಿಂತಿಸಲಿ"** (1 ಕೊರಿಂಥದವರಿಗೆ 10:25).

ಜೊತೆ ಸೇವಕರಾಗಿ, ನಾವು ಒಬ್ಬರನ್ನೊಬ್ಬರು, ಅಂದರೆ, ನಾವು ಒಬ್ಬರೊಂದಿಗೆ ಒಬ್ಬರು ಇರುವಾಗ, ಹಾಗೂ ಒಬ್ಬರಿಂದೊಬ್ಬರು ನಾವು ದೂರ ಇರುವಾಗ, ನೋಡಬೇಕು. ನಾವು ಕಟ್ಟುವ ಅನ್ಯೋನ್ಯತೆಯ ಬಂಧನದಲ್ಲಿ, ಒಂದು ಪರಸ್ಪರ ಹೊಂದಿರುವ ಭರವಸೆಯಿರುತ್ತದೆ. ನಾವು ನಮ್ಮ ಹೋರಾಟಗಳನ್ನು ಸೇವಕರಾಗಿ ಒಬ್ಬರಿಗೊಬ್ಬರು ಹಂಚಿಕೊಳ್ಳುವಾಗ, ಅದನ್ನು ಗೋಪ್ಯವಾಗಿ ಇಡಲು ನಿರೀಕ್ಷಿಸುತ್ತೇವೆ. ಬೇರೆ ಸೇವಕರು ಇದನ್ನು ಗೊಡ್ಡು ಹರಟೆಯಾಗಿ ಮಾಡಿ, ಪಟ್ಟಣದ ಸುತ್ತಲೂ ಮಾತನಾಡುವಂತಿರಬಾರದು. ಭರವಸೆಯು ಕಳೆದುಹೋದರೆ ಅದು ಒಂದು ತೆರೆದ ಹೃದಯದೊಂದಿಗೆ ಬೆರೆಯಲು ಕಷ್ಟವಾಗುತ್ತದೆ.

ದೇವರ ಒಬ್ಬ ಸೇವಕನಾಗಿ ನಾವು ಬೇರೊಬ್ಬರ ಬಲಹೀನತೆಗಳು ಮತ್ತು ಸೋಲುವಿಕೆಗಳ ಬಗ್ಗೆ ಗೊಡ್ಡು ಹರಟೆ ಮಾಡಬಾರದು ಎಂದು ಕಲಿಯಬೇಕು. ದೇವರು ಬೇರೊಬ್ಬ ವ್ಯಕ್ತಿಯ ಸೇವೆಯ ಮುಖಾಂತರ ಮಾಡುವ ಒಳ್ಳೇ ಸಂಗತಿಗಳ ಬಗ್ಗೇ ಮಾತನಾಡಿರಿ. ಅದನ್ನು ಆಚರಣೆ ಮಾಡಿರಿ ಆದರೆ ಆ ವ್ಯಕ್ತಿಯ ಸೋಲುವಿಕೆಗಳ ಬಗ್ಗೆ ಮೌನವಾಗಿರಿ. ನೀವು ಇದರ ಬಗ್ಗೆ ಮಾತನಾಡಲು ಅಥವಾ ಬೋಧಿಸಲು ಅಥವಾ ಬೇರೊಬ್ಬರಿಗೆ ಸೂಚಿಸಬೇಕಾಗಿದ್ದರೆ, ಆವ್ಯಕ್ತಿಯ ಗುರುತಿಸುವಿಕೆಯನ್ನು ಮರೆಮಾಡಿರಿ. ಹೀಗೆ ಮಾಡುವುದರಿಂದ ನಾವು ನಮ್ಮ ಸ್ನೇಹವನ್ನು ಕಾಪಾಡುತ್ತೇವೆ, ಹಾಗೂ ಬೇರೊಬ್ಬರ ಒಳಿತಿಗಾಗಿ ಎದುರು ನೋಡಿರಿ.

ಕೆಲವು ವೇಳೆ ನಮ್ಮ ಜೊತೆ ಸೇವಕರಲ್ಲಿ ಒಬ್ಬರು ನೈತಿಕ ಸೋಲುವಿಕೆ ಹೊಂದಿದ್ದು ಉಜ್ಜೀವನದ ಅಗತ್ಯತೆ ಇರುತ್ತದೆ. ನಾವು ಒಂದು ಸ್ನೇಹ ಹಾಗೂ ಸಂಬಂಧದ ಬಂಧನವನ್ನು ಆ ವ್ಯಕ್ತಿಯೊಂದಿಗೆ ಹೊಂದಿದ್ದರೆ, ನಾವು ಆಗ ಮುಂದೆ ಹೋಗಿ ಸಹಾಯ ಮಾಡಿ, ಜೊತೆ ಸೇವಕನು ತನ್ನ ಕಾಲಮೇಲೆ ತಾನೇ ಮತ್ತೆ ನಿಲ್ಲುವಂತೆ ಮಾಡಬೇಕು. ಇದನ್ನು ನಾವು ಪ್ರೀತಿ ಮತ್ತು ಸೌಮ್ಯತೆಯಿಂದ ಇದನ್ನು ಮಾಡಬೇಕು. "ಸಹೋದರರೇ ನಿಮ್ಮಲ್ಲಿ ಯಾರಾದರೂ ಯಾವುದೋ ಒಂದು ದೋಷದಲ್ಲಿ ಸಿಕ್ಕಿದರೆ ಅಂಥವನನ್ನು ಆತ್ಮನಿಂದ ನಡಿಸಿಕೊಳ್ಳುವ ನೀವು ಶಾಂತಭಾವದಿಂದ ತಿದ್ದಿ ಸರಿಮಾಡಿರಿ. ನೀನಾದರೂ ದುಷ್ಪ್ರೇರಣೆಗೆ ಒಳಗಾಗದಂತೆ ನಿನ್ನ ವಿಷಯದಲ್ಲಿ ಎಚ್ಚರಿಕೆಯಾಗಿರು. ಒಬ್ಬರು ಮತ್ತೊಬ್ಬರ ಭಾರವನ್ನು ಹೊತ್ತುಕೊಳ್ಳಲಿ, ಹೀಗೆ ಕ್ರಿಸ್ತನ ನಿಯಮವನ್ನು ನೆರವೇರಿಸಿರಿ" (ಗಲಾತ್ಯದವರಿಗೆ 6: 1–2).

## ವೈಷಮ್ಯವನ್ನು ಬಿತ್ತಬೇಡಿರಿ

**“ಯೆಹೋವನು ಹಗೆಮಾಡುವ ವಸ್ತುಗಳು ಆರು ಇವೆ. ಹೌದು, ಏಳು ಆತನಿಗೆ ಅಸಹ್ಯಗಳಾಗಿ ತೋರುತ್ತವೆ. ಯಾವುವೆಂದರೆ, ಹೆಮ್ಮೆಯ ಕಣ್ಣು ಸುಳ್ಳಿನ ನಾಲಗೆ, ನಿರ್ದೋಷ ರಕ್ತವನ್ನು ಸುರಿಸುವ ಕೈ, ದುರಾಲೋಚನೆಗಳನ್ನು ಕಲ್ಪಿಸುವ ಹೃದಯ, ಕೇಡುಮಾಡಲು ತ್ವರೆಪಡುವ ಕಾಲು, ಅಸತ್ಯವಾಡುವ ಸುಳ್ಳುಸಾಕ್ಷಿ, ಒಡಹುಟ್ಟಿದವರಲ್ಲಿ ಜಗಳಗಳನ್ನು ಬಿತ್ತುವವನು, ಈ ಏಳೇ”** (ಜ್ಞಾನೋಕ್ತಿಗಳು 6:16–19).

ವೈಷಮ್ಯವನ್ನು ಸಹೋದರರ ನಡುವೆ ಬಿತ್ತುವುದು ಒಂದು ಅತಿ ಜಿಗುಪ್ಸೆಯಾದುದು—ಪೂರ್ಣವಾಗಿ ಕರ್ತನ ಕಣ್ಣುಗಳಿಗೆ ಅಸಹ್ಯವಾದುದಾಗಿದೆ. ಆತನು ಇದನ್ನು ದ್ವೇಷಿಸುತ್ತಾನೆ. ನಾವು ಇತರ ಸೇವಕರ ಬಗ್ಗೆ ಮಾತನಾಡುವಾಗ, ನಾವು ವಿಷಯಗಳನ್ನು ಮಾತನಾಡುವಾಗ ಅಥವಾ ಮಾಡುವಾಗ ದೇವ ಸೇವಕರ ನಡುವೆ ಕಡು ಮಾತ್ಸರ್ಯವನ್ನು ಉತ್ತೇಜಿಸಬಾರದು. ನಾವು ವೈಷಮ್ಯವನ್ನು ಬಿತ್ತುವುದನ್ನು ನಾವು ನಿಲ್ಲಿಸಬೇಕು. ನಾನು ಒಬ್ಬ ದೇವ ಸೇವಕರ ಬಳಿಗೆ ಹೋಗಿ ಬೇರೊಬ್ಬ ದೇವರ ಸೇವಕ ಅಥವಾ ಸೇವಕಿ ಇಂಥಿಂಥಾ ನಕಾರಾತ್ಮಕವಾದ ವಿಷಯಗಳನ್ನು ಅವರ ಬಗ್ಗೆ ಹೇಳಿರುವುದಾಗಿ ಹೇಳಿದರೆ, ನಾನು ವೈಷಮ್ಯ ಮತ್ತು ಕಲಹಗಳ ಸಾಧನಾತ್ಮಕವಾಗುತ್ತೇನೆ. ನಾನು ಒಬ್ಬ ಸಹೋದರನೊಂದಿಗೆ ಒಂದು ಘಟನೆ ಅಥವಾ ಆಪಾದನೆ ಹೊಂದಿದ್ದರೆ, ಹಾಗೂ ಇದರ ಬಗ್ಗೆ ನೇರವಾಗಿ ತೀರ್ಮಾನಮಾಡುವ ಬದಲಾಗಿ ನಾನು ಹೋಗಿ ಆತನ ಬಗ್ಗೆ ಕೆಟ್ಟದಾಗಿ ಬೇರೊಬ್ಬ ವ್ಯಕ್ತಿಯೊಂದಿಗೆ ಮಾತನಾಡಿದರೆ, ನಾನು ವೈಷಮ್ಯವನ್ನು ಬಿತ್ತುತ್ತೇನೆ ಆ ಸಹೋದರನ ಬಗ್ಗೆ ಎರಡನೇ ವ್ಯಕ್ತಿಯ ಅಭಿಪ್ರಾಯವು ನಾನು ಏನು ಹೇಳಿದ್ದೇನೋ ಅದರಿಂದ ಯಾಂತ್ರಿಕವಾಗಿ ಪ್ರಭಾವಿತವಾಗುತ್ತದೆ. ಕರ್ತನು ಸಂಭವಿಸುವ ಎಲ್ಲದಕ್ಕೂ ಸಾಕ್ಷಿಯಾಗಿರುತ್ತಾನೆ. ಆತನು ಪ್ರತಿ ಸಂಭಾಷಣೆಯನ್ನು ಮೌನವಾಗಿ ಆಲಿಸುವಾತನು, ಹಾಗೂ ಒಂದು ವಿಷಯವು ನಿಶ್ಚಯ. ನಾವು ಅಂಥಾ ಸಂಗತಿಗಳನ್ನು ಮಾಡುವಾಗ ಅದನ್ನು ದ್ವೇಷಿಸುತ್ತಾನೆ!

## ಅನ್ಯೋನ್ಯತೆಯು ಜೀವಿತ ಬದಲಾವಣೆಗಾಗಿ ಇದೆ

ಹಲವಾರು “ಸಭಾಪಾಲಕರ ಅನ್ಯೋನ್ಯತೆಗಳು,” ಅಥವಾ ಕ್ರೈಸ್ತ ಸೇವಕರುಗಳ ಕೂಟಗಳಲ್ಲಿ ನಾವು ಎಲ್ಲಾ ಇತರ ಕಾರಣಗಳಿಗಾಗಿ

ಜೀವಿತಕ್ಕೆ ಜೀವಿತವನ್ನು ಹಂಚಿಕೊಳ್ಳುವುದಕ್ಕಿಂತ ಅಲ್ಲಿಗೆ ಹೋಗುವುದನ್ನು ನಿಲ್ಲಿಸುತ್ತೇವೆ. ನಾನು ಗಮನಿಸಿರುವುದೇನೆಂದರೆ, ಹೆಚ್ಚಿನ ಮಟ್ಟಿಗೆ ಜನರು ಇಂಥಾ ಅನ್ಯೋನ್ಯತೆಗಳಿಗೆ, ಕೆಲವು ಕೂಟಗಳು ಅಥವಾ ಸಮ್ಮೇಳನಕ್ಕೆ ಉತ್ತೇಜನಕೊಡಲು ಹೋಗುತ್ತಾರೆ, ಅಂದರೆ ಅವರ ಸೇವೆಯು ಮುಂದಿನ ಭವಿಷ್ಯದಲ್ಲಿ ಆತಿಥ್ಯವಹಿಸುವ ಸೂಚನೆಯಾಗಿರುತ್ತದೆ. ಅವರು ಆ ಕೂಟಗಳಿಗೆ ತಮ್ಮ ಒಳಗೊಳ್ಳುವಿಕೆಯ ಬೇಡಿಕೆಗಳಿಗಾಗಿ ಬರುತ್ತಾರೆ. ಇತರ ಸೇವಕರೊಂದಿಗೆ ಅನ್ಯೋನ್ಯತೆಯು ಒಂದು ಸಾರ್ವಜನಿಕ ಸಂಬಂದದ ಅಭ್ಯಾಸವಲ್ಲ. ಇತರ ಸೇವಕರೊಂದಿಗೆ ಅನ್ಯೋನ್ಯತೆಗೆ ಪ್ರಚೋದಿಸುವುದಾದರೆ ನಾವು ಪ್ರತಿ ಇತರರ "ಒಳ್ಳೆ ಪುಸ್ತಕಗಳಲ್ಲಿ" ಸಹಾಯಕ್ಕಾಗಿ ಇತರರನ್ನು ಕರೆಯಲು, ಈ ಸಂಬಂಧವನ್ನು ನಮ್ಮನ್ನು ನಾವು ಉತ್ತೇಜಿಸಲು ಹಾಗೂ ಇತರ ಬೇರೆ ರಾಜಕೀಯ ಕಾರ್ಯಕ್ರಮಗಳಿಗಾಗಿ, ಇರಲು ಸಾಧ್ಯ, ಆಗ ನಾವು ಒಟ್ಟಾಗಿ ಸೇರುವ ಪೂರ್ಣವಾದ ಉದ್ದೇಶವನ್ನು ಕಳೆದುಕೊಳ್ಳುತ್ತೇವೆ. ಯೋಗ್ಯವಾದ ಅನ್ಯೋನ್ಯತೆಯು "ಸಹಭೋಗ" ಅಂದರೆ ಜೀವಿತದ ರೂಪಾಂತರದ ಬಗ್ಗೆ ತರುವ ಒಟ್ಟಾಗಿ ಹಂಚಿಕೊಳ್ಳುವಿಕೆಯಾಗುತ್ತದೆ. ನಾವು ಇತರ ದೇವ ಸೇವಕರೊಂದಿಗೆ ಯೋಗ್ಯವಾದ ಅನ್ಯೋನ್ಯತೆಯನ್ನು ಹಂಚಿಕೊಳ್ಳಲು ಕಲಿತುಕೊಳ್ಳೋಣ. ನಮ್ಮ ಸ್ವಂತ ಜೀವಿತಗಳೂ ಉತ್ತಮವಾಗಲು ರೂಪಾಂತರಗೊಳ್ಳುತ್ತವೆ!

## ಯಾವ ಶ್ರೇಷ್ಠನಾದ ಖಳನಾಯಕನೂ ಇಲ್ಲ

**"ನಿಮ್ಮ ನಿಮ್ಮೊಳಗೆ ಏಕಮನಸ್ಸುಳ್ಳವರಾಗಿರ್ರಿ. ದೊಡ್ಡಸ್ತಿಕೆಯ ಮೇಲೆ ಮನಸ್ಸಿಡದೆ ದೀನರ ಸಂಗಡ ಬಳಕೆಯಾಗಿರ್ರಿ. ನಿಮ್ಮನ್ನು ನೀವೇ ಬುದ್ಧಿವಂತರೆಂದು ಎಣಿಸಿಕೊಳ್ಳಬೇಡಿರಿ"** (ರೋಮಾಪುರದವರಿಗೆ 12:16).

ನಮ್ಮ ಸೇವೆಯ ಗಾತ್ರ, ನಮ್ಮ ಸಾಧನೆಗಳ ಮಹತ್ವ, ನಮ್ಮ ಕೀರ್ತಿ ಅಥವಾ ಹಿಂಬಾಲಿಸುವ ಅಭಿಮಾನಿಗಳ ಸಂಖ್ಯೆ ಇವುಗಳಿಂದ ದೇವರು ಪ್ರಭಾವಿತನಾಗುವುದಿಲ್ಲ. ದೇವರು ಬಿರುದುಗಳು, ಪದವಿಗಳು ಹಾಗೂ 'ಸರ್' ಪದವಿಗಳು ನಾವು ಪಡೆದಿರುವ ಇಂಥವುಗಳೂ ಕರ್ತನನ್ನು ಪ್ರಭಾವಿತನನ್ನಾಗಿ ಮಾಡಲಾರವು. ಅತ್ಯಂತ ಚಿಕ್ಕವರಿಂದ ಅತ್ಯಂತ ಹೆಚ್ಚು ಪ್ರಸಿದ್ಧರಾದವರಿಗೆ ನಾವೆಲ್ಲರೂ ಕ್ರಿಸ್ತನ ಅದೇ ದೇಹದ ಭಾಗವಾಗಿರುತ್ತೇವೆ.

ಆತನ ದೇಹದಲ್ಲಿ ನಾವು ಸಮನಾಗಿ ಪ್ರಾಮುಖ್ಯರಾಗಿರುತ್ತೇವೆ. ನಾವು ಆತನ ಕೃಪೆಯಲ್ಲಿ ನಿಂತಿರುತ್ತೇವೆ ಹಾಗೂ ನಾವು ಇಲ್ಲಿ ಒಬ್ಬರಿಗೊಬ್ಬರ ಜೀವಿತಗಳನ್ನು ಹಂಚಿಕೊಳ್ಳಲು, ಕೊಡಲು ಹಾಗೂ ಬಲ ಪಡಿಸಲು ಇದ್ದೇವೆ. ನಿಜವಾದ ಅನ್ಯೋನ್ಯತೆಯು ಇಂಥ ಒಂದು ಪರಿಸರದಲ್ಲಿ ಪೋಷಿಸಲ್ಪಡುತ್ತದೆ, ಅಲ್ಲಿ ಜನರೆಲ್ಲರೂ ಸಮತಟ್ಟಾದ ನೆಲದಲ್ಲಿ ನಿಂತಿರುತ್ತಾರೆ. ನಾವು ಒಟ್ಟಾಗಿ ಇತರ ದೇವಸೇವಕರೊಡನೆ ಅನ್ಯೋನ್ಯತೆಯ ಸಮಯಗಳಿಗಾಗಿ ಸೇರಿದಾಗ, ನಾವು ನಮ್ಮ "ಸೇವೆಯ ಮುಖವಾಡ"ಗಳನ್ನು ತೆಗೆದುಹಾಕಬಹುದು, ನಾವು ನಮ್ಮ ಬಿರುದುಗಳನ್ನು ಪಕ್ಕಕ್ಕೆ ಹಾಕೋಣ. ನಾವು ನಮ್ಮ ಸುಳ್ಳು ನೆಪಗಳು ಹಾಗೋ ಸೇವೆಯ ಸ್ಥಾನಮಾನಗಳನ್ನು ಪಕ್ಕಕ್ಕಿಡೋಣ. ನಾವು ಪಾರದರ್ಶಕವಾಗಿರೋಣ. ಯಾರೋ ಶ್ರೇಷ್ಠ ಕಳನಾಯಕರಲ್ಲ. ಆತನ ಕೃಪೆಯೂ ಶಕ್ತಿಯೂ ಹರಿಯುವುದರ ಮುಖಾಂತರ ನಾವೆಲ್ಲರೂ ಮಣ್ಣಿನ ಪಾತ್ರೆಗಳಾಗಿದ್ದೇವೆ.



# ಹಣ

“ಹಣದಾಸೆಯು ಸಕಲ ವಿಧವಾದ ಕೆಟ್ಟತನಕ್ಕೆ ಮೂಲವಾಗಿದೆ. ಕೆಲವರು ಅದಕ್ಕಾಗಿ ಆತುರಪಟ್ಟು ಅದರಿಂದ ಕ್ರಿಸ್ತನಂಬಿಕೆಯನ್ನು ಬಿಟ್ಟು ಅಲೆದಾಡಿ ಅನೇಕ ವೇದನೆಗಳಿಂದ ತಮ್ಮನ್ನು ತಿವಿಸಿಕೊಳ್ಳುತ್ತಾರೆ. ಎಲೈ, ದೇವರ ಮನುಷ್ಯನೇ, ನೀನಾದರೋ ಇವುಗಳಿಗೆ ದೂರವಾಗಿರು; ನೀತಿ ಭಕ್ತಿ ನಂಬಿಕೆ ಪ್ರೀತಿ ಸ್ಥಿರಚಿತ್ತ ಸಾತ್ವಿಕತ್ವ ಇವುಗಳನ್ನು ಸಂಪಾದಿಸುವುದಕ್ಕೆ ಪ್ರಯಾಸಪಡು."

(1 ತಿಮೊಥೆಯನಿಗೆ 6:10,11)

ಅಧ್ಯಾಯ ೯

# 9

# ಹಣ

ಕ್ರೈಸ್ತಸೇವೆಯಲ್ಲಿ ಹಣವು ಒಂದು ಪ್ರಮುಖ ಪಾತ್ರವನ್ನು ಹೊಂದಿದೆ. ನಾವು ಧನ ಸಂಗ್ರಹಮಾಡಬೇಕು ಹಾಗೂ ಸಂಗ್ರಹವಾದ ನಿಧಿಯನ್ನು ಹೇಗೆ ಬಳಸಬೇಕೆಂಬುದನ್ನು ಕಲಿಯಬೇಕು. ಕೆಲವು ವೇಳೆ ಕ್ರೈಸ್ತ ಸೇವಕರಾಗಿ ನಾವು "ಹಣದಾಶೆ"ಯುಳ್ಳವರಾಗಿ ಅಂತ್ಯವಾಗುತ್ತೇವೆ, ಎಡೆಬಿಡದೆ ಹಣದ ಬಗ್ಗೆ ಯೋಚಿಸುತ್ತಿರುತ್ತೇವೆ. ನಮ್ಮಲ್ಲಿ ಹೆಚ್ಚಾಗಿ ಏನೂ ಇಲ್ಲದವರಾದಾಗ, ವಿಷಯಗಳು ಸಾಗಬೇಕಾದರೆ ಹೇಗೆ ನಾವು ಅಲ್ಪ ಸಂಗ್ರಹವನ್ನು ಹೆಚ್ಚು ಮಾಡುವುದು ಎಂದು ಆಲೋಚಿಸುತ್ತೇವೆ. ನಮ್ಮ ಸೇವೆಗಳು ದೊಡ್ಡದಾಗಿರುವಾಗ ಹಾಗೂ ಎಲ್ಲವೂ ಸಾಗುತ್ತಿದೆ ಎಂದುಕೊಂಡಾಗ, ನಾವು ಇನ್ನೂ "ಹಣದ ದಾಹ"ವುಳ್ಳವರಾಗಿರುತ್ತೇವೆ, ಅಂದರೆ ಹೆಚ್ಚು ಹಣವನ್ನು ಸಂಗ್ರಹಿಸಲು ಬಹಳಷ್ಟು ಮಾರ್ಗಗಳಾಗಿ ಪ್ರಯತ್ನಿಸುತ್ತೇವೆ. ಕ್ರೈಸ್ತಸೇವೆಯಲ್ಲಿ ನಾವು ಕ್ರಿಸ್ತನ ಮೇಲೆ ಹಾಗೂ ಆತನ ಕರೆಯ ಮೇಲೆ ನಮ್ಮ ಕೇಂದ್ರೀಕರಣ ಮಾಡುವುದು. ಒಂದು ಸವಾಲಾಗಿದ್ದು ಹಣದ ಕಡೆಯಿಂದ ನಮ್ಮ ಗಮನವನ್ನು ಹೊರತರಬೇಕು. ಈ ಅಧ್ಯಾಯವು ಹಣಕ್ಕೆ ಸಂಬಂಧಪಟ್ಟಂತೆ ಕ್ರೈಸ್ತಸೇವೆಯಲ್ಲಿ ನಾವು ಎದುರಿಸುವ ಕೆಲವು ಸಾಮಾನ್ಯ ಹೋರಾಟಗಳೊಂದಿಗೆ ವ್ಯವಹರಿಸುತ್ತದೆ.

## ಹಣಕ್ಕಾಗಿ ಪ್ರೀತಿ

**"ಹಣದಾಸೆಯು ಸಕಲ ವಿಧವಾದ ಕೆಟ್ಟತನಕ್ಕೆ ಮೂಲವಾಗಿದೆ. ಕೆಲವರು ಅದಕ್ಕಾಗಿ ಆತುರಪಟ್ಟು ಅದರಿಂದ ಕ್ರಿಸ್ತನಂಬಿಕೆಯನ್ನು ಬಿಟ್ಟು ಅಲೆದಾಡಿ ಅನೇಕ ವೇದನೆಗಳಿಂದ ತಮ್ಮನ್ನು ತಿವಿಸಿಕೊಳ್ಳುತ್ತಾರ್ರೆ. ಎಲೈ, ದೇವರ ಮನುಷ್ಯನೇ, ನೀನಾದರೋ ಇವುಗಳಿಗೆ ದೂರವಾಗಿರು; ನೀತಿ ಭಕ್ತಿ ನಂಬಿಕೆ ಪ್ರೀತಿ ಸ್ಥಿರಚಿತ್ತ ಸಾತ್ವಿಕತ್ವ ಇವುಗಳನ್ನು ಸಂಪಾದಿಸುವುದಕ್ಕೆ ಪ್ರಯಾಸಪಡು"** (1 ತಿಮೊಥೆಯನಿಗೆ 6:10,11).

ನಮ್ಮ ಆಲೋಚನೆಯ ಬಹುಭಾಗವನ್ನು ಹಣವು ಆಕ್ರಮಿಸಿಕೊಂಡಾಗ—ನಾವು ಹಣದ ಕೊರತೆ ಹೊಂದಿರುವುದರಿಂದ

ಹಾಗೂ ನಮಗೆ ಅಗತ್ಯವಾದುದನ್ನು ಪಡೆಯುವುದು ಹೇಗೆಂದು ಅಥವಾ ನಮಗೆ ಬಹಳವಿದೆ ಆದರೆ ಇನ್ನೂ ಹೆಚ್ಚುಬೇಕು ಎಂದು ಆಲೋಚಿಸುತ್ತಾ ನಾವು ಎಲ್ಲಿ ಹಣವನ್ನು ವಾಸ್ತವವಾಗಿ "ಪ್ರೀತಿ"ಸುತ್ತೇವೆ ಎಂದು ಅಂದುಕೊಳ್ಳುವಾಗ ಆ ಸ್ಥಳಕ್ಕೆ ನಾವು ಜಾರಿಕೊಳ್ಳುವುದು ಸುಲಭವಾಗಿರುತ್ತದೆ. ನಾನು ಹಣದೊಂದಿಗೆ "ಪ್ರೀತಿ" ಹೊಂದಿದ್ದರೆ, ಹಾಗೂ ಅದರ ಹಿಡಿತದಲ್ಲಿದ್ದರೆ, ಅದನ್ನು ನಾನು ಹೇಗೆ ಹೇಳಿಕೊಳ್ಳುತ್ತೇನೆ?

- ನಾನು ಹೇಗೆ ಹಣವನ್ನು ಸಂಪಾದಿಸುವುದರ ಬಗ್ಗೆ ಎಡೆಬಿಡದೆ ಆಲೋಚಿಸುತ್ತಿದ್ದರೆ—ಆಗ ನಾನು ಹಣದ ಹಿಡಿತಕ್ಕೆ ಸಿಕ್ಕಿಕೊಂಡಿರುತ್ತೇನೆ.
- ನನ್ನ ತೀರ್ಮಾನವು ನಾನು ಎಲ್ಲಿ ಸೇವೆ ಮಾಡುತ್ತೇನೆ ಎಂಬುದರ ಮೇಲೆ ಆಧಾರಗೊಂಡಿದೆ—ನಾನು ಕಾಣಿಕೆಯಾಗಿ ಎಷ್ಟು ಹಣವನ್ನು ಪಡೆದುಕೊಳ್ಳುತ್ತೇನೆ ಎಂಬುದು ಅರಿವಾದಾಗ, ಆಗ ನಾನು ಹಣದಿಂದ ಹಿಡಿತದಲ್ಲಿರುತ್ತೇನೆ.
- ನಾನು ಎಷ್ಟು ಮಟ್ಟಿಗೆ ನಾನು ಹೊಂದುವ ಕಾಣಿಕೆಗೆ ಭಾಗವಾಗಿ ದೇವರನ್ನು ಎಷ್ಟುಮಟ್ಟಿಗೆ ಸ್ತುತಿಸಿ ಆರಾಧಿಸುತ್ತೇನೋ ಆಗ ನಾನು ಹಣದ ಹಿಡಿತದಲ್ಲಿರುತ್ತೇನೆ.
- ದೊಡ್ಡ ಮೊತ್ತದಲ್ಲಿ ಕಾಣಿಕೆ ನೀಡುವ ಜನರಿಗೆ ನಾನು ಪ್ರಾಮುಖ್ಯತೆ ನೀಡಿದರೆ ಆದರೆ ಇಲ್ಲದವರಿಗೆ ಇಂಥಾ ಪ್ರಾಮುಖ್ಯತೆ ನೀಡದಿದ್ದರೆ—ಆಗ ನಾನು ಹಣದ ಹಿಡಿತದಲ್ಲಿದ್ದೇನೆ.
- ನಾನು ಸ್ವಲ್ಪಮಟ್ಟಿಗೆ ಭಾವೈಕ್ಯತೆಯ ಮೇಲೆ ರಾಜಿಯಾಗಲು ಹಾಗೂ ಸೇವೆಗಾಗಿ ಹಣ ಸಂಗ್ರಹಮಾಡಲು ವಿವೇಚನೆ ಇಲ್ಲದೆ ಕಾರ್ಯಗಳನ್ನು ಮಾಡಲು, ಬಯಸಿದರೆ, ಆಗ ನಾನು ಹಣದಿಂದ ಹಿಡಿತದಲ್ಲಿ ಇಡಲ್ಪಟ್ಟಿದ್ದೇನೆ.
- ನಾನು ಪ್ರಖ್ಯಾತ ವ್ಯಕ್ತಿಗಳು, ಶ್ರೀಮಂತ ವ್ಯವಹಾರ ತಜ್ಞರು ಹಾಗೂ ದೊಡ್ಡ ದೊಡ್ಡ ವ್ಯಕ್ತಿಗಳೊಂದಿಗೆ ಅವರಿಂದ ನಾನು ನನ್ನ ಸೇವೆಗೆ ಹೆಚ್ಚಿನ ಕೊಡುಗೆಗಳನ್ನು ಪಡೆಯಬಹುದೆಂಬ ಭಾವನೆಯಲ್ಲಿ, ಒಳ್ಳೆಯದೆಂದು ಭಾವಿಸಿ ನಡೆದರೆ, ನಾನು ಹಣದ ಹಿಡಿತದಲ್ಲಿದ್ದೇನೆ.

## ಹಣಕ್ಕಾಗಿ ಇದರೊಳಗೆ ಇರಬೇಡಿರಿ

**“ಸಭೆಯ ಹಿರಿಯರೇ, ಜೊತೆ ಹಿರಿಯವನಾದ ನಾನು ಕ್ರಿಸ್ತನ ಬಾಧೆಗಳನ್ನು ಕಣ್ಣಾರೆ ಕಂಡವನೂ ಇನ್ನು ಮುಂದೆ ಪ್ರತ್ಯಕ್ಷವಾಗುವ ಪ್ರಭಾವದಲ್ಲಿ ಪಾಲುಗಾರನೂ ಆಗಿದ್ದು ನಿಮ್ಮನ್ನು ಎಚ್ಚರಿಸಿ ಹೇಳುವದೇನೆಂದರೆ–ನಿಮ್ಮಲ್ಲಿರುವ ದೇವ ಮಂದೆಯನ್ನು ಕಾಯಿರಿ. ಬಲಾತ್ಕಾರದಿಂದಲ್ಲ, ದೇವರ ಚಿತ್ತದ ಪ್ರಕಾರ ಇಷ್ಟಪೂರ್ವಕವಾಗಿಯೂ ನೀಚವಾದ ದ್ರವ್ಯಾಶೆಯಿಂದಲ್ಲ, ಸಿದ್ಧ ಮನಸ್ಸಿನಿಂದಲೂ ಮೇಲ್ವಿಚಾರಣೆ ಮಾಡಿರಿ. ದೇವರು ನಿಮ್ಮ ವಶದಲ್ಲಿಟ್ಟಿರುವ ಸಭೆಗಳ ಮೇಲೆ ದೊರೆತನ ಮಾಡುವವರಂತೆ ನಡೆಯದೆ ಮಂದೆಗೆ ಮಾದರಿಯಾಗಿಯೇ ನಡೆದುಕೊಳ್ಳಿರಿ. ಹಿರೀ ಕುರುಬನು ಪ್ರತ್ಯಕ್ಷನಾಗುವಾಗ ನೀವು ದೇವ ಪ್ರಭಾವವೆಂಬ ಎಂದಿಗೂ ಬಾಡದ ಜಯಮಾಲೆಯನ್ನು ಹೊಂದುವಿರಿ”** (1 ಪೇತ್ರನು 5:1–4).

**“ನಾನು ಯಾರ ಬೆಳ್ಳಿಬಂಗಾರವನ್ನಾಗಲಿ, ಉಡಿಗೆ ತೊಡಿಗೆಗಳನ್ನಾಗಲಿ ಬಯಸಲಿಲ್ಲ”** (ಅಪೊಸ್ತಲರ ಕೃತ್ಯಗಳು 20:33).

ಇದೊಂದು ಅಪರೂಪವಾದ ಹೇಳಿಕೆಯಾಗಿದೆ, ಆದರೆ ಕೆಲವು ಜನರು ಕ್ರೈಸ್ತಸೇವೆಯನ್ನು ಹಣಮಾಡಲು ಒಂದು ಸುಲಭವಾದ ಮಾರ್ಗವೆಂದು ಕಾಣುತ್ತಾರೆ. ಅವರು ನೀವು ಮಾಡುವುದೆಲ್ಲವೂ ಒಂದೆರಡು ಬೋಧನೆಗಳನ್ನು ವಾರಕ್ಕೊಮ್ಮೆ ಮಾಡಿ, ಜನರ ಮನೆಗಳನ್ನು ಸಂಧಿಸಿ, ನಿಮಗಾಗಿ ಸುಲಭವಾದ ಆದಾಯ ಪಡೆದುಕೊಳ್ಳಿರಿ” ಎಂದು ಆಲೋಚಿಸುತ್ತಾರೆ. ಈ ಪ್ರೇರೇಪಣೆಯು ತಪ್ಪಾದದ್ದು, ಕೆಲವು ಜನರು ಸಮುದ್ರದಾಚೆಯ ಸೇವೆಗಳಿಂದ ಆರ್ಥಿಕ ಬೆಂಬಲ ಪಡೆಯಲು ಸಭೆಗಳನ್ನು ಸರಿಮಾಡಿಕೊಂಡಿರುತ್ತಾರೆ. ಕೆಲವರು ಸಮುದ್ರದಾಚೆಯ ಬೋಧಕರನ್ನು ಆಹ್ವಾನಿಸುವ ಹಾಗೂ ತಮಗಾಗಿ ತಮ್ಮ ಸಮ್ಮೇಳನಗಳು ಅಥವಾ ಧಾರ್ಮಿಕ ಕೂಟಗಳನ್ನು ದಾನ ಮಾಡುವುದಾದರೆ ವ್ಯವಸ್ಥೆ ಮಾಡಲು ಪ್ರಸ್ತಾಪ ಮಾಡುತ್ತಾರೆ. ಪ್ರಕ್ರಿಯೆಯಲ್ಲಿ ಅವರು ಮರೆಯುವ ಸ್ವಭಾವದ ಸಮುದ್ರದಾಚೆಯ ಸೇವಕರ ದೊಡ್ಡ ಮೊತ್ತದ ಹಣವನ್ನು ಲಾಳಿಕೆಯಿಂದೆಂಬಂತೆ ಎಳೆದುಕೊಳ್ಳುವವರಾಗುತ್ತಾರೆ. ಕೆಲವು ಜನರು ಹಣ ಸಂಗ್ರಹ ಮಾಡುವ ಕಾರಣವಾಗಿ ದಾನ ಶೂರ ಕ್ರೈಸ್ತ ಸಂಸ್ಥೆಗಳನ್ನು ಸಿದ್ಧಮಾಡಿ, ನಂತರ ತಾವೇ ಅದರಲ್ಲಿ ಬಹಳಷ್ಟು ಭಾಗ ಖರ್ಚು ಮಾಡಿಕೊಳ್ಳುತ್ತಾರೆ. ಕೇವಲ ಸ್ವಲ್ಪಭಾಗವನ್ನು ನಿಜವಾದ ದಾನಕ್ಕಾಗಿ ಖರ್ಚು ಮಾಡುತ್ತಾರೆ, ಇವರೆಲ್ಲರೂ “ಕ್ರೈಸ್ತ ಸೇವೆ”ಯ ನೆಪವೊಡ್ಡಿ ಹಣಮಾಡುತ್ತಾರೆ. ಇದು ಅಪ್ರಾಮಾಣಿಕವಾದದ್ದು! ನಾವು ಇಲ್ಲಿ ಅಪ್ರಾಮಾಣಿಕತೆ ಗಳಿಸಲು ಇಲ್ಲ.

## ಆತ್ಮೀಕವಾಗಿ ಬಿತ್ತಿರಿ, ಜನರು-ಭೌತಿಕವಾಗಿ (ಶರೀರ ಸಂಬಂಧವಾಗಿ) ಕೊಡಲಿ

**"ದೇವರ ವಾಕ್ಯದಲ್ಲಿ ಉಪದೇಶ ಹೊಂದುವವನು ಉಪದೇಶಮಾಡುವವನಿಗೆ ತನಗಿರುವ ಎಲ್ಲಾ ಒಳ್ಳೆಯವುಗಳಲ್ಲಿ ಪಾಲುಕೊಡಲಿ"** (ಗಲಾತ್ಯದವರಿಗೆ 6:6).

**"ನಾವು ನಿಮಗೋಸ್ಕರ ಆತ್ಮ ಸಂಬಂಧವಾದ ಬೀಜವನ್ನು ಬಿತ್ತಿದ ಮೇಲೆ ನಿಮ್ಮಿಂದ ಶರೀರ ಸಂಬಂಧವಾದ ಪೈರನ್ನು ಕೊಯ್ಯುವದು ದೊಡ್ಡದೋ? ಅದೇ ರೀತಿಯಾಗಿ ಕರ್ತನು ಸಹ. ಸುವಾರ್ತೆಯನ್ನು ಸಾರುವವರು ಸುವಾರ್ತೆಯಿಂದಲೇ ಜೀವನ ಮಾಡಬೇಕೆಂದು ನೇಮಿಸಿದನು"** (1 ಕೊರಿಂಥದವರಿಗೆ 9:11,14).

ನಾವು ಆತ್ಮಿಕ ರೀತಿಯಲ್ಲಿ ಜನರ ಜೀವಿತಗಳಲ್ಲಿ ನಾವು ತೊಡಗಿಸಿದರೆ, ಅವರು ಹಿಂತಿರುಗಿ ನಮ್ಮ ಜೀವಿತಗಳಿಗೆ ಆರ್ಥಿಕವಾಗಿ ಸಹಾಯ ಮಾಡಲು ಹಾಗೂ ನಮ್ಮ ಶರೀರ ಸಂಬಂಧವಾದ ಅಗತ್ಯಗಳನ್ನು ಹೊಣೆಹೊರುವಂತೆ ಮಾಡುತ್ತವೆ. ಈ ಪಠ್ಯ ವಸ್ತುವಿನಲ್ಲಿ ನಾವು ಮೊದಲು ಆತ್ಮಿಕವಾಗಿ ಬಿತ್ತಲು ಕಲಿಯಬೇಕು, ಆ ಮೇಲೆ ಜನರು ದೇವರಿಂದ ನಡೆಸಲ್ಪಟ್ಟು ಆರ್ಥಿಕವಾಗಿ ಹಿಂತಿರುಗಿ ಕೊಡಲಿ. ನಂಬಿಗಸ್ತರಾಗಿ ಬಿತ್ತಿರಿ. ಸ್ಥಿರವಾಗಿ ಬಿತ್ತಿರಿ, ಜನರು ಆತ್ಮಿಕವಾಗಿ ಪಡೆದುಕೊಳ್ಳಲು ಸ್ವಲ್ಪ ಸಮಯ ಕೊಡಿ; ದೇವರ ರಾಜ್ಯಕ್ಕಾಗಿ ಕೊಡುವಂತೆ ಅವರಿಗೆ ಕಲಿಸಿರಿ. ನಾವು ಯಾರಿಗೆ ಆತ್ಮಿಕವಾಗಿ ಸೇವೆಮಾಡಿದೆವೋ ಆ ಜನರು, ನಾವು ರಾಜ್ಯಕ್ಕಾಗಿ ಇತರರನ್ನು ತಲುಪುವಂತೆ ಸಹಾಯ ಮಾಡುತ್ತಾರೆ" (2 ಕೊರಿಂಥದವರಿಗೆ 10:15,16).

ಎಲ್ಲಾ ಸ್ಥಿತಿಗಳಲ್ಲಿ ವಿಶೇಷವಾಗಿ, ಬಹಳ ಬಡವರಾಗಿರುವವರ ನಡುವೆ ಕೆಲಸ ಮಾಡುವಾಗ ಯಾರು ಸೇವೆ ಮಾಡಿಸಿಕೊಂಡರೋ ಅವರು ಬಹುಶಃ ತನ್ನ ಸೇವೆ ಮಾಡಿದವರಿಗೆ ಆರ್ಥಿಕವಾಗಿ ಹಿಂತಿರುಗಿಸಲು ಅಸಾಧ್ಯವಾಗುವ ಸ್ಥಿತಿ ಇರಬೇಕು. ನಾವು ಆತ್ಮಿಕವಾಗಿ ಇತರರಲ್ಲಿ ಬಂಡವಾಳ ಹಾಕಿರುವಾಗ, ಈ ಸ್ಥಿತಿಯಲ್ಲಿ ಸಾಂಕೇತಿಕವಾಗಿ ನಾವು ಆರ್ಥಿಕವಾಗಿ ಪರಾಂಬರಿಸಲು ಇತರ ವಿಶ್ವಾಸಿಗಳ, ಒಂದು ಸ್ಥಳೀಯ ಸಭೆ, ಅಥವಾ ಸೇವೆಯ ಅಗತ್ಯತೆ ಹೊಂದಿರುತ್ತೇವೆ. ಇದು ಸತ್ಯವೇದಾಧಾರಿತವಾದುದು (ಫಿಲಿಪ್ಪಿಯವರಿಗೆ 4:14-16, 2 ಕೊರಿಂಥ 11:8).

## ನಿಮ್ಮ ಹಣ ಸಂಗ್ರಹವನ್ನು ಶುದ್ಧವಾಗಿ, ಪಾರದರ್ಶಕವಾಗಿ, ಹಾಗೂ ಗೌರವಾನ್ವಿತವಾಗಿಯೂ ಇಟ್ಟುಕೊಳ್ಳಿರಿ

**"ಯಾಕೆಂದರೆ ಕರ್ತನ ದೃಷ್ಟಿಯಲ್ಲಿ ಮಾತ್ರವಲ್ಲದೆ ಮನುಷ್ಯರ ದೃಷ್ಟಿಯಲ್ಲಿಯೂ ಗೌರವವಾದದ್ದನ್ನು ಯೋಚನೆಗೆ ತಂದುಕೊಳ್ಳುವವರಾಗಿದ್ದೇವೆ"** (2 ಕೊರಿಂಥದವರಿಗೆ 8:21).

ಧನಸಂಗ್ರಹವು ಶುದ್ಧವಾಗಿ, ಪಾರದರ್ಶಕವಾಗಿ ಹಾಗೂ ಪ್ರಾಮಾಣಿಕವಾಗಿಡಲ್ಪಡಬೇಕು. ನೀವು ಹಿಂಬಾಲಿಸಲು ಕರೆಯಲ್ಪಟ್ಟಾಗ ಹೊಂದಿದ ದರ್ಶನವನ್ನು ಹಂಚಿಕೊಳ್ಳಬೇಕು, ನಂತರ ಜನರು ಕೊಡಲು ಬರುವಂತೆ ಆಹ್ವಾನಿಸಿರಿ, ಜನರು ಕೊಡಲಿಕ್ಕಾಗುವಂತೆ, ಮುಂದೆ ಬರಲು ಕರ್ತನಲ್ಲಿ ಭರವಸೆ ಇಡಿರಿ.

ನಿಮ್ಮ ಹೃದಯದಲ್ಲಿ ಕರ್ತನು ಇಟ್ಟಿರುವ ದರ್ಶನಕ್ಕಾಗಿ ಸಾಕಷ್ಟು ಒದಗಿಸುವಿಕೆಯಾಗಲು ಜನರ ಹೃದಯಗಳು ನಡಿಸಲ್ಪಡುವಂತೆ ಕರ್ತನಲ್ಲಿ ಭರವಸೆ ಇಡಿರಿ. ನಿಮಗೆ ಕೊಡಲ್ಪಟ್ಟ ಹಣ ಎಷ್ಟೆಂಬುದಕ್ಕಾಗಿ ಲೆಕ್ಕವಿಡಿರಿ. ಹಾಗೂ ಹಣವು ಹೇಗೆ ಉಪಯೋಗಿಸಲ್ಪಟ್ಟಿತು ಎಂಬುದಾಗಿಯೂ ಲೆಕ್ಕ ಬರೆಯಿರಿ. ಇದನ್ನು ನೀನು ಒಮ್ಮೆ ಆರಂಭಿಸಿದರೆ, ನೀವು ಮತ್ತು ನಿಮ್ಮ ಸಭೆ/ಸೇವೆಗಳು ಚಿಕ್ಕದಾಗಿದ್ದರೂ, ಅದು ನಿಮ್ಮ ಅಭ್ಯಾಸ ಬೆಳೆದಂತೆ ನಿಮ್ಮ ಸಭೆಯೂ ಮುಂದುವರಿಸಲು ಸುಲಭವಾಗುತ್ತವೆ.

ಆರಂಭದಿಂದ ನಾವು 10 ಮಂದಿಯನ್ನು ಹೊಂದಿದ್ದಾಗ, ನಾವು ದಶಮಾಂಶ ಭಾಗ ಮತ್ತು ಕಾಣಿಕೆಯ ಲೆಕ್ಕ ಇಡುತ್ತಿದ್ದೆವು. ಈ ಲೆಕ್ಕವು 'ಹೇಗೆ' ಖರ್ಚುಮಾಡಲ್ಪಡುತ್ತದೆ ಎಂದು ಕೂಡಾ ಬರೆಯಲ್ಪಡುತ್ತಿತ್ತು. ಈ ದಿನ ಒಂದು ದೊಡ್ಡ ಸಭೆಯಾಗಿ, ನಾವು ಇದೇ ಅಭ್ಯಾಸವನ್ನು ಮುಂದುವರಿಸುತ್ತಾ ಪ್ರತಿಯೊಂದು ಅಂದರೆ ಬರುವ ಮತ್ತು ಹೋಗುವ ಹಣದ ಯೋಗ್ಯವಾದ ಲೆಕ್ಕವನ್ನು ಇಟ್ಟುಕೊಳ್ಳುತ್ತಿದ್ದೇವೆ, ನಮಗೆ ಅರ್ಹವಾದ ಲೆಕ್ಕಿಗರಿದ್ದಾರೆ. ಇವರು ನಮಗೆ ಹಣದ ಲೆಕ್ಕಾಚಾರವನ್ನು ಮಾಡಿಕೊಟ್ಟು ಹಣದ ವಿಷಯವೇನು ಮಾಡಬೇಕು, ಏನು ಮಾಡಬಾರದು ಎಂಬುದರ ತಿಳುವಳಿಕೆ ಕೊಡುತ್ತಾರೆ. ನಮ್ಮೆಲ್ಲಾ ಲೆಕ್ಕಾಚಾರಗಳು ವಾರ್ಷಿಕ ಶೋಧನೆಗಳಾಗುತ್ತವೆ. ನಾವು ಮುಕ್ತರಾಗಿದ್ದೇವೆ, ಇದರಿಂದ ಸಭೆಯ ಯಾವುದೇ ಸದಸ್ಯರು ನಮ್ಮ ಲೆಕ್ಕಾಚಾರವನ್ನು ಯಾವ ಸಮಯದಲ್ಲಾದರೂ ಅವರು ಬಯಸಿದಾಗ ಬಂದು ನೋಡಬಹುದು.

ಇಲ್ಲಿ ಮಾಡಬಾರದ ಕೆಲವು ವಿಷಯಗಳಿವೆ:

- "ನಂಬಿಕೆಯಲ್ಲಿ ಜೀವಿಸಿರಿ" ಎಂಬುದಕ್ಕೆ ಹಕ್ಕು ಸಾಧಿಸಬಾರದು, ಹಾಗೂ ಎಲ್ಲಾ ಕಡೆ ಹೋಗಿ ಪ್ರತ್ಯಕ್ಷ್ಯವಾಗಿ ಅಥವಾ ಪರೋಕ್ಷವಾಗಿ ಜನರನ್ನು ಕೊಡುವಂತೆ ಸೂಚಿಸುವುದು ಅಥವಾ ಬಲವಂತ ಮಾಡುವುದು ಇರಬಾರದು.
- ನಿಮಗೆ ಒಂದು ನಿರ್ದಿಷ್ಟವಾದ ಲೆಕ್ಕದಲ್ಲಿ ಹಣದ ಅಗತ್ಯ ಇದೆ ಎಂದು ಜನರಿಗೆ ಹೇಳಲು "ಪ್ರಾರ್ಥನಾ ಬೇಡಿಕೆಗಳನ್ನು" ಪರೋಕ್ಷ ಮಾರ್ಗವಾಗಿ ಬಳಸಬಾರದು.
- ದೊಡ್ಡದೊಡ್ಡ ವ್ಯವಹಾರ ವ್ಯಕ್ತಿಗಳು, ರಾಜಕೀಯ ವ್ಯಕ್ತಿಗಳು ಮುಂತಾದವರ ಬಳಿ ಹೋಗಿ ದೊಡ್ಡ ದೊಡ್ಡ ಲೆಕ್ಕದಲ್ಲಿ ಹಣವನ್ನು ಕೇಳಬಾರದು.
- ಹಣಕೊಡುವಂತೆ ಜನರನ್ನು ಒತ್ತಾಯಿಸಬಾರದು.
- ಜನರನ್ನು ಹಣಕೊಡುವಂತೆ ಭಾವನಾತ್ಮಕವಾಗಿ ಕುಶಲತೆಯನ್ನು ಮಾಡಬಾರದು.

ಮಾಡಬಾರದ ಮತ್ತಷ್ಟು ಕೆಲವು ವಿಷಯಗಳು, ಹಣ ಸಂಗ್ರಹಿಸುವ ಬಗ್ಗೆ ಕೆಳಗೆ ತಿಳಿಸಲ್ಪಟ್ಟಿದೆ.

## ವಿದೇಶದ ಸಹಾಯದ ಮೇಲೆ ಆತುಕೊಳ್ಳಬೇಡಿರಿ

**"ದೇವರು ಸಕಲವಿಧವಾದ ದಾನಗಳನ್ನು ನಿಮಗೆ ಧಾರಾಳವಾಗಿ ಅನುಗ್ರಹಿಸುವುದಕ್ಕೆ ಶಕ್ತನಾದ್ದರಿಂದ ನೀವು ಯಾವಾಗಲೂ ಎಲ್ಲಾ ವಿಷಯಗಳಲ್ಲಿ ಪರಿಪೂರ್ಣತೆಯುಳ್ಳವರಾಗಿ ಸಕಲ ಸತ್ಕಾರ್ಯಗಳನ್ನು ಹೇರಳವಾಗಿ ಮಾಡುವವರಾಗಿರಬೇಕು"** (2 ಕೊರಿಂಥದವರಿಗೆ 9:8).

ಹಲವಾರು ದಶಕಗಳಲ್ಲಿ ಈಗ ಶತಮಾನಗಳಷ್ಟು ದಾಟಿರುವಾಗ, ಭಾರತದಲ್ಲಿ ಸಭೆಯು ಬಹಳಷ್ಟು ಮಟ್ಟಿಗೆ ವಿದೇಶಗಳ ಸೇವಾಸಂಸ್ಥೆಗಳ ಹಾಗೂ ವಿದೇಶ ಬೆಂಬಲದ ಮೇಲೆ ಸೇವೆಗಾಗಿ ಆತುಕೊಂಡಿತ್ತು. ಸಮಯ ಈಗ ಬದಲಾಗಿದೆ. ನಾವು ನಮ್ಮ ರಾಷ್ಟ್ರವನ್ನು ತಲುಪುವ ಕಾರ್ಯವನ್ನು ಪೂರೈಸಲು ನಾವು ಅಗತ್ಯಕ್ಕಿಂತ ಹೆಚ್ಚು ಸಂಪತ್ತನ್ನು ಹೊಂದಿರುತ್ತೇವೆಂದು ನಾನು ನಂಬಿದ್ದೇನೆ. ನಾವು ಮಾಡಬೇಕಾದುದೇನೆಂದರೆ, ಕಾರ್ಯ ಮಾಡಿ

ಮುಗಿಸಲು ತಟ್ಟಿ ಎಬ್ಬಿಸಿ, ಹಣವು ಯೋಗ್ಯವಾದ ಜನರಿಗೆ ಯೋಗ್ಯವಾಗಿ ತಲುಪುವಂತೆ ಮಾಡಲು ಯೋಗ್ಯವಾದ ಹೃದಯ ಮತ್ತು ಮನೋಸ್ಥಿತಿ ಹೊಂದಬೇಕಾಗುತ್ತದೆ. ನಗರಗಳು ಶಕ್ತಿಯುಳ್ಳ ಕೇಂದ್ರಗಳೂ ಸಂಪದ್ಭರಿತ ಸ್ಥಳಗಳೂ ಆಗಿರುತ್ತವೆ. ಇದು ಸಣ್ಣ ಪಟ್ಟಣಗಳು ಅಥವಾ ಗ್ರಾಮಗಳಲ್ಲಿ ಸಂಪತ್ತಿಲ್ಲ ಎಂದು ಹೇಳಲಿಕ್ಕಾಗಿ ಅಲ್ಲ. ಅಲ್ಲಿಯೂ ಇದೆ. ಅದರೆ ನಾನು ಯೋಚಿಸುವುದೇನೆಂದರೆ, ಬಹಳಷ್ಟು ಆರ್ಥಿಕ ಕೊಡುಗೆಗಳನ್ನು ಪಡೆಯುವ ನಗರಗಳ ಸಭೆಗಳು ಸೇವೆಯ ಸ್ಥಾನಗಳಾಗಿದ್ದು, ಚಿಕ್ಕ ಪಟ್ಟಣಗಳು ಮತ್ತು ಗ್ರಾಮಗಳಲ್ಲಿ ಸೇವೆ ಮಾಡುವವರಿಗೆ ಬೆಂಬಲ ನೀಡಬೇಕು, ನಾವು ಕ್ರೈಸ್ತ ಸೇವಕರು ತಮ್ಮ ಸಭಿಕರಿಗೆ ಬಹಳಷ್ಟು ಹಣ ಸಂಗ್ರಹ ಮಾಡುವ ಆಯ್ಕೆಗಳ ಬಗ್ಗೆ ಆಲೋಚಿಸಿ ಕಲಿಸಲು ನಾವು ಸಹಾಯ ಮಾಡಬೇಕು, ಇದರಿಂದ ಸ್ಥಳೀಯ ಸಭೆಯ ಸ್ವಯಂ—ಬೆಂಬಲಿಗರಾಗಲು ಸಾಧ್ಯ ದೇವರು ಎಲ್ಲಾ ಕಡೆಗಳಲ್ಲಿ ಸಂಪನ್ಮೂಲ ಗಳನ್ನು ಹಾಗೂ ಅವಕಾಶಗಳನ್ನು ಇಟ್ಟಿದ್ದಾನೆಂದು ನನ್ನ ನಂಬಿಕೆ, ಹಾಗೂ ಇದು ನಮ್ಮ ಜವಾಬ್ದಾರಿಯಾಗಿದ್ದು ಇದರೊಳಗೆ ನಾವು ಬುದ್ಧಿವಂತಿಕೆಯಿಂದ ಹಾಗೂ ಗೌರವಾನ್ವಿತವಾಗಿ ಮೃದುವಾಗಿ ತಟ್ಟಬಹುದು, ಇದರಿಂದ ನಾವು ಆತನ ಒದಗಿಸುವಿಕೆಯನ್ನು ಪ್ರತಿಯೊಂದು ಒಳ್ಳೇ ಕೆಲಸದಲ್ಲಿ ಸಮೃದ್ಧಿಕರವಾಗಿ ಪಡೆಯಲು ಸಾಧ್ಯ.

ಹೊರದೇಶಗಳಿಂದ ಬೆಂಬಲ ಪಡೆಯುವುದು ತಪ್ಪಲ್ಲವಾಗಿದ್ದರೂ, ಯಾರೇ ಆದರೂ ಅದರ ಮೇಲೆ ಆತುಕೊಳ್ಳುವುದು ಸರಿಯಲ್ಲ ಎಂಬುದು ನನ್ನ ಅನಿಸಿಕೆಯಾಗಿದೆ. ನೀವು ಸಮುದ್ರದಾಚೆ ಮಿತ್ರರು ಹಾಗೂ ದಾನಿಗಳನ್ನು ಹೊಂದಿದ್ದರೆ, ನಿಮ್ಮ ಸೇವೆಗೆ ಅವರು ಕೊಡುಗೆ ನೀಡಲು ಇಷ್ಟ ಪಟ್ಟರೆ, ನೀವು ಆ ದಾನವನ್ನು ನ್ಯಾಯವಾಗಿ ಪಡೆಯಬಹುದು. ಅದರಲ್ಲಿ ಯಾವ ತಪ್ಪೂ ಇಲ್ಲ. ಹೇಗಾದರೂ ಈ ರೀತಿಯಲ್ಲಿ ನಿಮ್ಮ ಸೇವೆಯನ್ನು ವೃದ್ಧಿಪಡಿಸಿರಿ, ಅದು ಈ ಕೊಡುಗೆಗಳನ್ನು ಯಾವುದೇ ಕಾರಣಕ್ಕೆ ನಿಲ್ಲಿಸಿ, ನಿಮ್ಮ ಸೇವೆಯು ಮುಂದುವರಿಯುವ ರೀತಿಯಲ್ಲಿ ಆಗುವಂತಿರಬೇಕು.

ಆಲ್ ಪೀಪಲ್ಸ್ ಚರ್ಚನ್ನು ಬೆಂಗಳೂರಿನಲ್ಲಿ ನಾವು ಆರಂಭಿಸಿದ ಸಮಯದಿಂದ ನಮ್ಮ ಹೃದಯಗಳಲ್ಲಿ ಆರ್ಥಿಕ ಬೆಂಬಲಕ್ಕಾಗಿ ಯಾವ ಹೊರದೇಶಗಳ ಸಂಸ್ಥೆಗಳ ಮೇಲೆ ಆತು ಕೊಳ್ಳಬಾರದೆಂದು ಉದ್ದೇಶ ಹೊಂದಿದೆವು, ಶೇಕಡಾ ತೊಂಭತ್ತು ಭಾಗ ಈ ದಿನ ನಾವು ಒಂದು ಸ್ಥಳೀಯ

ಸಭೆಯಾಗಿ ಹಾಗೂ ನಮ್ಮ ರಾಷ್ಟ್ರದ ಉದ್ದಕ್ಕೂ, ಭಾರತದಲ್ಲಿ ಮಾತ್ರ ನಾವು ಪಡೆಯುವ ದಶಮಾಂಶಗಳು ಹಾಗೂ ಕಾಣಿಕೆಗಳ ಮುಖಾಂತರ ಸೇವೆ ಮಾಡುತ್ತಿದ್ದೇವೆ. ಹೊರದೇಶದ ಭಾರತೀಯ ನಿವಾಸಿಗಳಿಂದ ಸ್ವಲ್ಪ ಮಟ್ಟಿಗೆ ಮಾತ್ರ ಹಣವು ಬರುತ್ತದೆ.

## ನಿಮ್ಮ ಯೋಜನೆಗಳನ್ನು "ಬೆಲೆ ಪಟ್ಟಿಯನ್ನು ದ್ವಿಗುಣ"ಗೊಳಸಬೇಡಿರಿ

ಒಂದು ನಿಜವಾದ ಗಂಭೀರವಾದ ಕ್ರೈಸ್ತ ಸೇವೆಯಲ್ಲಿ ಬರುವ ಸಮಸ್ಯೆ ಏನೆಂದರೆ, ಕ್ರೈಸ್ತ ಸೇವಕರು ಅತಿ ಹೆಚ್ಚಿನ ಸಂಯೋಜನೆ ಹೆಚ್ಚಿನ ಸಂಸ್ಥೆಗಳಿಂದ ಒಂದುಗೂಡುವ ಬೆಂಬಲ, ತಮ್ಮ ಯೋಜನೆಗಳಿಗೆ ದ್ವಿಗುಣವಾದ ಬಿಲ್ ಮಾಡುವುದು,–ಹಾಗೂ ಇವೆಲ್ಲವುಗಳನ್ನೂ ವಂಚನೆಯ ರೀತಿಯಲ್ಲಿ ಮಾಡುವುದು, ಆಗಿರುತ್ತವೆ. ಹೆಚ್ಚಿನ ಸಂಯೋಜನೆಗಳು, ಅಥವಾ ಹೆಚ್ಚಿನ ದಾನಿಗಳು ನಿಮ್ಮ ಸೇವೆಗೆ ಕೊಡುವುದರಲ್ಲಿ ಯಾವ ತಪ್ಪೂ ಇಲ್ಲ. ಸಮಸ್ಯೆಯು ಬರುವುದು ಯಾವಾಗ ಎಂದರೆ, ಇದು ವಂಚನೆಯಿಂದ ಹಾಗೂ ದಾನಿಗಳ ತಿಳುವಳಿಕೆಯಿಲ್ಲದೆ ಮಾಡುವಾಗ ಈ ರೀತಿ ಆಗುತ್ತದೆ. ಇದರಿಂದ ಉದಾಹರಣೆಗೆ, ಒಬ್ಬ ಬೋಧಕನು ಒಂದು ಸಂಸ್ಥೆಯನ್ನು ಸಂಪರ್ಕಿಸಿ ತಾನು ತನ್ನ ಸೇವೆಯನ್ನು ಆ ಸಂಸ್ಥೆಯೊಂದಿಗೆ ಸಂಯೋಜನೆ ಹೊಂದಿಸಿಕೊಳ್ಳುವುದಾಗಿ ಮತ್ತು ಆ ಸಂಸ್ಥೆಯಿಂದ ಆರ್ಥಿಕ ಮತ್ತು ಆತ್ಮಿಕ ಬೆಂಬಲಪಡೆಯುವುದಾಗಿ ಹೇಳುತ್ತಾನೆ. ತಾನು ಅವರಿಗೆ ಹೇಳದೆ ಇರುವುದೇನೆಂದರೆ, ತಾನು ಈಗಾಗಲೇ ಬೇರೊಂದು ಸಂಸ್ಥೆಯೊಂದಿಗೆ ಸಂಯೋಜನೆ ಹೊಂದಿರುವುದು, ಹಾಗೂ ಆರ್ಥಿಕ ಮತ್ತು ಬೆಂಬಲವನ್ನು ಅವರಿಂದ ತಾನು ಮಾಡುವ ಕೆಲಸಕ್ಕಾಗಿ ಪಡೆಯುವುದು. ಇದರಿಂದ ಅವನು ತಾನು ಎರಡು ವಿಭಿನ್ನ ಸಂಸ್ಥೆಗಳ ಮೇಲೆ ತಾನು "ಪೂರ್ಣವಾದ ದಾನ ಹೊಂದಿರುವನು" ಎಂಬ ಅಭಿಪ್ರಾಯವನ್ನು ಬಿಟ್ಟು ಕೊನೆಗೊಳಿಸುತ್ತಾನೆ ಹಾಗೂ ಅವರ ಸಂಸ್ಥೆಗೆ ಭಾಗವಾಗಿರುತ್ತಾನೆ. ವಾಸ್ತವದಲ್ಲಿ ಅವನು ಎರಡು ಸಂಸ್ಥೆಗಳೊಂದಿಗೆ ಆಟ ಆಡಿಸುತ್ತಾನೆ. ಅದೇ ರೀತಿ ಒಬ್ಬ ಬೋಧಕನು ಒಂದು ಸಂಸ್ಥೆಯಿಂದ ಬೆಂಬಲವನ್ನು ಪಡೆಯುವುದಾದರೆ ಅದೇ ಸಮಯದಲ್ಲಿ ಒಂದು ಕೆಲಸಮಾಡುತ್ತಾ ಒಂದು ವ್ಯವಹಾರ ಮಾಡುತ್ತಾ ಹೆಚ್ಚಿನ ಹಣ ಗಳಿಸಲು ಪ್ರಯತ್ನಿಸಿದರೆ, ಅದು ಅವನ ಇದು ಅವನ

ದಾನಿಗೆ ಅವನು ಖಂಡಿತವಾಗಿ ಮಾಡುತ್ತಿರುವ ವಿಷಯ ತಿಳಿಯುವುದಿಲ್ಲ. ಇಲ್ಲಿನ ಆಧಾರವು ಏನೆಂದರೆ, ಶುದ್ಧವೂ ಪಾರದರ್ಶಕವಾಗಿಯೂ ಹಾಗೂ ಪ್ರಾಮಾಣಿಕರಾಗಿಯೂ ನಮಗೆ ಆರ್ಥಿಕ ಬೆಂಬಲವನ್ನು ಒದಗಿಸುವವರೊಂದಿಗೆ ಇರುವುದು.

## ದಾನಿಯ ಅಪ್ಪಣೆ ಇಲ್ಲದೆ, ನಿಧಿಯನ್ನು ಒಂದು ಯೋಜನೆಯಿಂದ ಇನ್ನೊಂದು ಯೋಜನೆಗೆ ತಿರುಗಿಸಬಾರದು

ಕ್ರೈಸ್ತ ಸೇವೆಯಲ್ಲಿ ಹಣದ ಉಪಯೋಗ ಕಾರ್ಯಕ್ಕೆ ಬಂದಾಗ ದುರುಪಯೋಗ ಆಗುವ ಇನ್ನೊಂದು ವಲಯವು ಏನೆಂದರೆ, ಒಂದು "ಯೋಜನೆ"ಗಾಗಿ ಅಥವಾ ಕಾರಣಕ್ಕಾಗಿ ಹಣ ಸಂಗ್ರಹ ಮಾಡುವುದು ಹಾಗೂ ನಂತರ ಅದನ್ನು ವಾಸ್ತವವಾಗಿ ಬೇರೊಂದು ವಿಷಯಕ್ಕಾಗಿ ಬಳಸುವುದೇ ಆಗಿದೆ. ಉದಾಹರಣೆಗೆ ಒಬ್ಬ ಬೋಧಕನು ಅನಾಥ ಮಕ್ಕಳಿಗೆ ಸಹಾಯ ಮಾಡಲು ಹಣ ಸಂಗ್ರಹ ಮಾಡಬಹುದು, ಆದರೆ ಆಮೇಲೆ ಅದರಲ್ಲಿ ಸ್ವಲ್ಪ ಹಣವನ್ನು ಒಂದು ಸೌವಾರ್ತಿಕ ಧಾರ್ಮಿಕ ಕೂಟ ನಡೆಸಲು ಅದರ ಕಡೆಗೆ ತಿರುಗಿಸುತ್ತಾನೆ. ಈಗ ಅವನು ಈ ಕಾರ್ಯವನ್ನು ಸಮರ್ಥಿಸಲು ಈ ರೀತಿಗಳಲ್ಲಿ ಹಲವಾರು ಅಂಶಗಳನ್ನು ಹೇಳಬಹುದು. "ಕರ್ತನು ನನಗೆ ಇದನ್ನು ಮಾಡಲು ಹೇಳಿದನು", "ನಮ್ಮ ಮಕ್ಕಳ ಸಂಗೀತ ಮೇಳವು ಈ ಧಾರ್ಮಿಕ ಕೂಟದಲ್ಲಿ ಹಾಡುವುದು, ಅವರಿಂದ ಇದು ಇನ್ನೂ ನಮ್ಮ ಮಕ್ಕಳ ಸೇವೆಯ ಭಾಗವಾಗಿದೆ" ಇತ್ಯಾದಿ. ಇದು ತಪ್ಪು . ಬೋಧಕರು ತಮ್ಮ ನಿಧಿಯ ಒಂದು ಭಾಗವನ್ನು ಸೌವಾರ್ತಿಕ ಧಾರ್ಮಿಕ ಕೂಟಕ್ಕಾಗಿ ಆಗ ಅವನು ಮೊಟ್ಟ ಮೊದಲನೇದಾಗಿ ದಾನಿಗಳಿಗೆ ತಮ್ಮ ನಿಧಿಯ ಒಂದು ಭಾಗವು ಇಂಥಾ ಕಾರಣಕ್ಕಾಗಿ ಬಳಸಲ್ಪಡುತ್ತದೆ ಹಾಗೂ ಇದು ನ್ಯಾಯವಾಗಿ ಒಂದು ಯೋಜನೆಗಾಗಿ ಪಡೆದುಕೊಂಡಿರುವುದು ಅಂಗೀಕಾರಾರ್ಹವಾದುದು (ಸಂಸ್ಥೆಯ ಸಂವಿಧಾನ ಮತ್ತು ದೇಶದ ಕಾನೂನಿನ ಮೇಲೆ ಆತುಕೊಂಡಿರುವುದಾಗಿದೆ).

## ವಿದೇಶಿ (ಸಮುದ್ರದಾಚೆಯ) ಸೇವೆಗಳನ್ನು ಕಳವು ಮಾಡಬೇಡಿರಿ

**"ಮೋಸದಿಂದ ಸಿಕ್ಕಿದ ಆಹಾರವು ಮನುಷ್ಯನಿಗೆ ರುಚಿ, ಆ ಮೇಲೆ ಅವನ ಬಾಯಿ ಮರಳಿನಿಂದ ತುಂಬುವದು"** (ಜ್ಞಾನೋಕ್ತಿಗಳು 20:17).

ನಾವು ಗಮನಿಸಿರುವ ಮತ್ತೊಂದು ಸಾಮಾನ್ಯವಾದ, ಸಮಸ್ಯೆಯು ಕೆಲವು ಸ್ಥಳೀಯ ಕ್ರೈಸ್ತ ಸೇವಕರು, ಭಾರತದಲ್ಲಿ ಸೇವೆ ಮಾಡಲು ಬಯಸುವ ವಿದೇಶಿ (ಸಮುದ್ರದಾಚೆಯ) ಸೇವಕರನ್ನು ಮೋಸದಿಂದ "ದೋಚುತ್ತಾರೆ". ಬೇರೆ ದೇಶಗಳಿಂದ ಭಾರತಕ್ಕೆ ಬರುವ ಬೋಧಕರು ಹಾಗೂ ಸೇವಕರು ಸಿದ್ಧಮಾಡಲ್ಪಡುವ ವಸ್ತುಗಳಿಗೆ ನಿಜವಾದ ಬೆಲೆಗಳನ್ನು ತಿಳಿಯದೆ ಇರುತ್ತಾರೆ. ಅದರಿಂದ ಸ್ಥಳೀಯ ಸಂಸ್ಥೆಗಳು ಬಹು ದೊಡ್ಡಗಾತ್ರದ ಹಣವನ್ನು ಪಡೆದುಕೊಂಡು, ಯಥಾರ್ಥವಾದ ಬೆಲೆಗಳಿಗೆ ಮೂರು ಅಥವಾ ನಾಲ್ಕು ಪಟ್ಟು ಹೆಚ್ಚಾಗಿ ಪಡೆದುಕೊಂಡು ಈ ನಿಧಿಗಳನ್ನು ತಮ್ಮ ಸ್ವಂತ ಉಪಯೋಗಕ್ಕಾಗಿ ಸೆಳೆದುಕೊಳ್ಳುತ್ತಾರ. ಸ್ಥಳೀಯ ಸಂಸ್ಥೆಯವನು ಒಬ್ಬ ಸುಳ್ಳುಗಾರನೂ, ಒಬ್ಬ ಕಳ್ಳನೂ ಆಗಿ, ಕ್ರೈಸ್ತ ಸೇವಕನ ವೇಷದಲ್ಲಿ ಬದಲಾಗುತ್ತಾರೆ. *"ಯಾಕೆಂದರೆ ಅನೇಕರು ಕ್ರಿಸ್ತನ ಶಿಲುಬೆಗೆ ವಿರೋಧಿಗಳಾಗಿ ನಡೆಯುತ್ತಾರೆ: ಅವರ ವಿಷಯದಲ್ಲಿ ನಿಮಗೆ ಎಷ್ಟೋ ಸಾರಿ ಹೇಳಿದೆನು, ಈಗಲೂ ಅಳುತ್ತಾ ಹೇಳುತ್ತೇನೆ. ನಾಶನವೇ ಅವರ ಅಂತ್ಯಾವಸ್ಥೆ, ಹೊಟ್ಟೆಯೇ ಅವರ ದೇವರು ನಾಚಿಕೆ ಕೆಲಸಗಳಲ್ಲಿಯೇ ಅವರ ಗೌರವವು, ಅವರು ಪ್ರಪಂಚದ ಕಾರ್ಯಗಳ ಮೇಲೆ ಮನಸ್ಸಿಡುವವರು"* (ಫಿಲಿಪ್ಪಿಯವರಿಗೆ 3:18,19).

## ಸೇವೆ ಮತ್ತು ವ್ಯವಹಾರವನ್ನು ಬೆರೆಸಬೇಡಿರಿ

**"ನಿಂದೆಗೆ ಅವಕಾಶಕೊಡದೆ ಎಲ್ಲಾ ಸಂಗತಿಗಳಲ್ಲಿ ದೇವರ ಸೇವಕರೆಂದು ನಮ್ಮನ್ನು ಸಮ್ಮತರಾಗ ಮಾಡಿಕೊಳ್ಳುತ್ತೇವೆ"** (2 ಕೊರಿಂಥದವರಿಗೆ 6:3).

ಮೂರನೇ ಅಧ್ಯಾಯದ ಅಂತಿಮ ಭಾಗದಲ್ಲಿ ನಾನು ತಿಳಿಸಿರುವ ಶ್ರೀ ಜೇಮ್ಸ್ ನಾಗೆಲ್, ಸುಮಾರು 17 ವರ್ಷಗಳ ಕಾಲ ಸಂಯುಕ್ತ ಸಂಸ್ಥಾನಗಳ ಒಂದು ದೊಡ್ಡ ಕ್ರೈಸ್ತ ಸೇವೆಗಾಗಿ ಲೆಕ್ಕಾಚಾರದ ವಿಭಾಗದ ಒಂದು ಭಾಗವಾಗಿ ಸೇವೆ ಮಾಡಿದ್ದರು. ನಾನು ಬೆಂಗಳೂರಿನಲ್ಲಿ ಒಂದು ಸಭೆಯ ಸ್ಥಾಪನೆಗಾಗಿ ಭಾರತಕ್ಕೆ ಹಿಂತಿರುಗಲು ಯೋಚನೆ ಮಾಡುತ್ತಿದ್ದೇನೆಂದು, ಹಾಗೂ ವ್ಯವಹಾರದಲ್ಲಿಯೂ ಕೆಲಸ ಮಾಡಬೇಕೆಂದು ಕೂಡಾ ಆಲೋಚಿಸಿರುವುದಾಗಿ ಹೇಳಿದಾಗ, ಅವರು ತಕ್ಷಣ ಈ ತಿಳುವಳಿಕೆಯನ್ನು ನನಗೆ ಕೊಟ್ಟರು. "ಆಶಿಶ್ ಎಂದಿಗೂ ಸೇವೆಯ ಹಾಗೂ ವ್ಯವಹಾರದ ವಿಧಿಯನ್ನು ಬೆರೆಸಬಾರದು.

ಯಾವಾಗಲೂ ಅವುಗಳನ್ನು ಪ್ರತ್ಯೇಕವಾಗಿಯೇ ಇಟ್ಟುಕೊಳ್ಳಬೇಕು" ಎಂದರು ಅವರು ತಾನು ನೋಡಿದ, ಸ್ಥಳೀಯ ಸಭೆಗಳು ಹಾಗೂ ಕ್ರೈಸ್ತ ಸೇವೆಗಳು ಸೇವೆಯ ಹಣವನ್ನು ವ್ಯವಹಾರದ ಕಾರ್ಯಗಳಲ್ಲಿ ತೊಡಗಿಸಿಕೊಂಡು ಹಾಗೂ ವಿಭಿನ್ನ ರೀತಿಯ ಬಂಡವಾಳಗಳನ್ನು ಈ ಫಂಡ್‌ಗಳು ಬೆಳೆಯುವಂತೆ ಮಾಡಿಕೊಂಡಿದ್ದ ಹಲವಾರು ಆರ್ಥಿಕ ಅಚಾತುರ್ಯಗಳನ್ನು ಕುರಿತು ಹಲವು ಉದಾಹರಣೆಗಳನ್ನು ಹೇಳಿದರು. ಈ ರೀತಿ ದೊಡ್ಡ ನಷ್ಟಕ್ಕೊಳಗಾಗಿರುವ ಬಹಳಷ್ಟು ಸೇವಕರು ಸೇವೆಗೆ ಬಳಸಲಿಕ್ಕಾಗದೆ, ಹಲವು ಜನರಿಂದ ತ್ಯಾಗವಾಗಿ ಪಡೆದದ್ದಲ್ಲದೆ, ಹಲವರ ಭರವಸೆ ಹಾಗೂ ಆತ್ಮ ವಿಶ್ವಾಸವನ್ನು ಕಳೆದುಕೊಂಡಿರುತ್ತಾರೆ.

ಒಬ್ಬ ಸಭಾಪಾಲಕರು ಹಾಗೂ ಕ್ರೈಸ್ತ ಸೇವಕರಾಗಿ, ನೀವು ಬಹಳ ಜಾಗರೂಕರಾಗಿದ್ದು, ಸೇವೆಯ ನಿಧಿಯನ್ನು ವ್ಯವಹಾರದ ಕಾರ್ಯದಲ್ಲಿ ತೊಡಗಿಸದೆ, ಖಾಸಗಿ ವ್ಯವಹಾರಗಳಲ್ಲಿ ಸಾಹಸಗಳಿಗೆ ಬಳಸದೆ ನಿಮ್ಮ ಸಂಸ್ಥೆಯ ಸಂವಿಧಾನದಿಂದ ಅನುಮತಿ ದೊರೆಯುವ ಬಂಡವಾಳಗಳಿಗೆ ಬಳಸದೆ ಇರಬೇಕು. ನಿಮ್ಮ ಬಾಳ ಸಂಗಾತಿ ಅಥವಾ ಯಾರಾದರೂ ನಿಮ್ಮ ಕುಟುಂಬ ಸದಸ್ಯರು ಯಾವುದಾದರೂ ವ್ಯವಹಾರ ಸಾಹಸಕ್ಕೆ ಪ್ರವೇಶಿಸಲು ಬಯಸಿದರೆ, ಅದನ್ನು "ಕ್ರೈಸ್ತತ್ವ"ವೆಂದು ಪರಿಗಣಿಸದೆ, ಅವರ ಆಸಕ್ತಿಗಳಂತೆ ನಿಧಿಯ "ಆಧಾರ" (ಬೀಜ)ವಾಗಿ ಸೇವೆಯ ಹಣವನ್ನು ಬಳಸಬಾರದು.

ಒಬ್ಬರು ಜಾಗರೂಕರಾಗಿರಲು ಅಗತ್ಯವಾದದ್ದೆಲ್ಲಿ ಎಂದು ಸೂಚಿಸುವ ಮತ್ತೊಂದು ವಲಯವು ಯಾವುದೆಂದರೆ, ಸಭೆಯ ಸದಸ್ಯರೊಂದಿಗೆ ವ್ಯವಹಾರ ಸಾಹಸಗಳಿಗೆ ಪ್ರವೇಶಿಸುವುದು, ಇದೂ ತಪ್ಪು ಎಂದು ನಾನು ಹೇಳಲಾರೆ, ಆದರೆ ನಾನು ಖಂಡಿತವಾಗಿ ಹೇಳುವುದೇನೆಂದರೆ, ಇದು ತೊಂದರೆಗೆ ಒಳಗಾಗುವಂತೆ ಆಗುತ್ತದೆ, ವಿಷಯಗಳು ತಪ್ಪಾಗಿ ಹೋದರೆ, ನೀವು ವ್ಯವಹಾರದಲ್ಲಿ ಹಣ ಕಳೆದುಕೊಳ್ಳುವುದು ಮಾತ್ರವಲ್ಲ, ಆದರೆ ಆ ಸಭಾ ಸದಸ್ಯರೊಂದಿಗೆ ನಿಮ್ಮ ಸಂಬಂಧವು ಕೆಟ್ಟು ಹೋಗುತ್ತದೆ, ಹಾಗೂ ಪರಿಣಾಮವಾಗಿ ನಿಮ್ಮ ಸೇವೆ/ಸಭೆಯು ಕೂಡಾ ಇದಕ್ಕೆ ಒಳಗಾಗುತ್ತದೆ. ಇದರಿಂದ ಅತ್ಯುತ್ತಮವಾದದ್ದೇನೆಂದರೆ. ಬಹಳ ಎಚ್ಚರಿಕೆಯಾಗಿರಬೆಕು, ಹಾಗೂ ಸಂದೇಹವಿದ್ದರೆ, ದೂರ ಉಳಿದು ಬಿಡಿ.

ಕ್ರೈಸ್ತ ಸೇವಕರಾಗಿದ್ದು, ಕರ್ತನು ನಿಮ್ಮನ್ನು ಒಂದು ವ್ಯವಹಾರ ಆರಂಭಿಸುವ ಪ್ರಯತ್ನಕ್ಕೆ ನಿಮ್ಮನ್ನು ಕರೆದರೆ, ಇದು ದಾನಿಗಳ ಹಣವನ್ನು ವ್ಯಯ ಮಾಡಬೇಕಾಗಿದ್ದರೆ, ಉದಾ: ಒಂದು ಶಾಲೆ, ಕಾಲೇಜು/ ವಿಶ್ವವಿದ್ಯಾಲಯ, ಸೇವೆಗೆ ಸಂಬಂಧಿಸದ ಔದ್ಯೋಗಿಕವಾದ ಒಂದು ತರಬೇತಿ ಸಂಸ್ಥೆ, ಯಾವುದನ್ನಾದರೂ ಆರಂಭಿಸಬೇಕೆನಿಸಿದರೆ, ಆಗ ಇದು ಗುರುತಿಸಲ್ಪಟ್ಟು ಆಡಳಿತ ಹಾಗೂ ಆರ್ಥಿಕ ಅಂಶಗಳು ಸಭೆ ಅಥವಾ ಸೇವೆಯಿಂದ ಪ್ರತ್ಯೇಕವಾಗಿ ನಿಭಾಯಿಸಲ್ಪಡಬೇಕು.

ನನ್ನ ಸ್ವಂತ ವೈಯಕ್ತಿಕ ಅನುಭವದಲ್ಲಿ ನಾನು ಒಂದು ಸಾಫ್ಟ್‌ವೇರ್ ಕಂಪೆನಿಯನ್ನು ಜನವರಿ 2001 ರಲ್ಲಿ ಆರಂಭಿಸಿದೆನು, ಹಾಗು ಫೆಬ್ರುವರಿ 2001ರಲ್ಲಿ ನಾವು ಆಲ್ ಪೀಪಲ್ಸ್ ಚರ್ಚನ್ನು ಆರಂಭಿಸಿ, ಎರಡೂ ಬೆಂಗಳೂರಿನಲ್ಲಿ ನೆಲೆಗೊಂಡವು. ಆರಂಭದಿಂದಲೂ ಈ ಎರಡೂ ಸಂಸ್ಥೆಗಳು ಪ್ರತ್ಯೇಕವಾಗಿಯೇ ಇಡಲ್ಪಟ್ಟವು. ವ್ಯವಹಾರವು ಸಭೆಗೆ ಕೊಡುಗೆ ನೀಡಬಹುದು, ಆದರೆ ಸಭೆಯ ನಿಧಿಯ ವ್ಯವಹಾರದ ಕಡೆಗೆ ಹೋಗುವಂತಿಲ್ಲ.

## ದೇವರ ಮನೆಯು ವ್ಯಾಪಾರದ ಸ್ಥಳವಲ್ಲ—ದೇವಾಲಯದ 'ಕಳ್ಳರಾಗಬೇಡಿ'

**"ಬಳಿಕ ಯೇಸು ದೇವಾಲಯಕ್ಕೆ ಹೋಗಿ ಅದರಲ್ಲಿ ಮಾರುವ ಕೊಳ್ಳುವ ಎಲ್ಲರನ್ನೂ ಹೊರಡಿಸಿಬಿಟ್ಟು ಚಿನಿವಾರರ ಮೇಜುಗಳನ್ನೂ ಪಾರಿವಾಳ ಮಾರುವವರ ಕಾಲ್ಮಣೆಗಳನ್ನೂ ಕೆಡವಿ ಅವರಿಗೆ–ನನ್ನ ಆಲಯವು ಪ್ರಾರ್ಥನಾಲಯವೆನಿಸಿಕೊಳ್ಳುವುದು ಎಂದು ಬರೆದದೆ; ಆದರೆ ನೀವು ಅದನ್ನು ಕಳ್ಳರ ಗವಿ ಮಾಡುತ್ತೀರಿ ಎಂದು ಹೇಳಿದನು. ಆಗ ಕುರುಡರೂ ಕುಂಟರೂ ದೇವಾಲಯದಲ್ಲಿ ಆತನ ಬಳಿಗೆ ಬರಲು ಅವರನ್ನು ಸ್ವಸ್ಥ ಮಾಡಿದನು"** (ಮತ್ತಾಯ 21:12–14).

ಸಭೆ ಅಥವಾ ಸೇವೆಯು ಒಂದು ಸಂಸ್ಥೆಯಾಗಿದ್ದು ಕಾರ್ಯಾಚರಣೆ ಮಾಡಲು ಆರ್ಥಿಕ ಸೌಲಭ್ಯಗಳ ಅಗತ್ಯವಿದೆ. ಇದರಿಂದ ಬಹಳಷ್ಟು ಸೇವಕರು ತಮ್ಮ ಡಿವಿಡಿಗಳು, ನಿಯತಕಾಲಿಕಗಳು, ರೆಕಾರ್ಡಿಂಗ್‌ಗಳು ಹಾಗೂ ಇತರ ಸಂಪನ್ಮೂಲಗಳನ್ನು ಮಾರಾಟಮಾಡುತ್ತಾರೆ. ಇವೆಲ್ಲವೂ ಸರಿ, ಏಕೆಂದರೆ ಈ ಸಂಪನ್ಮೂಲಗಳನ್ನು ಉತ್ಪತ್ತಿ ಮಾಡುವುದರಲ್ಲಿ ಬಹಳ ಬೆಲೆ ಇರುತ್ತದೆ. ಆದಕಾರಣ, ಈ ಬೆಲೆಗಳನ್ನು ಸಂಧಿಸಿ,

ಮುಂದುವರಿಯುವ ಕಾರ್ಯಾಚರಣೆಗಳಿಗಾಗಿ ಸ್ವಲ್ಪ ಹೆಚ್ಚಾಗಿ ಹಣ ಸಂಪಾದನೆ ಮಾಡಬೇಕಾಗುವುದು ಪರಿಪೂರ್ಣವಾಗಿ ಸರಿ, ಹೇಗಾದರೂ ವಿಷಯಗಳು ಇದಕ್ಕೂ ಮೀರಿ ಹೋದರೆ ಹಾಗೂ ಸೇವೆಗಳು "ಕ್ರೈಸ್ತೀಯ ಸಂಬಂಧದಲ್ಲಿ ಒಂದು "ಧಾರ್ಮಿಕ ವ್ಯವಹಾರವನ್ನು" ಆರಂಭಿಸಿ, ಎಲ್ಲಾ ರೀತಿಯ ವಸ್ತುಗಳನ್ನೂ ಬಹುದೊಡ್ಡ ಮಾನದಲ್ಲಿ ಮಾರಾಟ ಮಾಡಿ ಅಥವಾ ಒಂದು "ಸಲಹೆ ನೀಡುವ ದಾನ"ಕ್ಕಾಗಿ ಒಂದು ಸಂಖ್ಯೆಯ ನೇಮಕ ಮಾಡಿ ಅದು ವಸ್ತುವಿನ ಬೆಲೆಗಿಂತ ಅಧಿಕ ಪಟ್ಟು ಹೆಚ್ಚಾಗುವಂತೆ ಮಾಡಿದರೆ ಅದು ದುರುಪಯೋಗದ ಮೇಲೆ ಪರಿಣಾಮ ಬೀರುತ್ತದೆ. ಇದು ವಸ್ತುಗಳನ್ನು ತಂದು, ದೇವಾಲಯದಲ್ಲಿ ಮಾರಾಟಮಾಡಿದವರಿಗೆ ಬಹುಮಟ್ಟಿಗೆ ಹೋಲಿಕೆಯಾಗುತ್ತದೆ. ಅವರು ನ್ಯಾಯಸಮ್ಮತವಾದ ಹಣ ವಿನಿಮಯಮಾಡಿ ಬಲಿಯಾಗುವ ಪಕ್ಷಿಗಳನ್ನು ಪಶುಗಳನ್ನು ಪಟ್ಟಣದ ಹೊರಭಾಗದಿಂದ ಬರುವ ಜನರಿಗೆ ಮಾರಾಟ ಮಾಡುತ್ತಿದ್ದರು. ಇದು ದೂರದ ಸ್ಥಳಗಳಿಂದ ಪ್ರಯಾಣ ಮಾಡಿ, ತಮ್ಮ ಬಲಿಕೊಡಬೇಕಾದ ವಸ್ತುಗಳನ್ನು ತಮ್ಮೊಂದಿಗೆ ತರಲಾರದವರಿಗಾಗಿ ಅನುಕೂಲಕರವಾಗಿತ್ತು. ಹೇಗಾದರೂ ಈ ದೇವಾಲಯದ ವ್ಯಾಪಾರಿಗಳು ಸಾಂಕೇತಿಕವಾಗಿ ತಮ್ಮ ವಸ್ತುಗಳನ್ನು ಸೇವೆಗಳನ್ನು ದೊಡ್ಡ ಮೊತ್ತಕ್ಕೆ ಆರಾಧಕರ ಮೂಲಕ ಲಾಭ ಪಡೆದುಕೊಂಡು ಮಾರಾಟ ಮಾಡುತ್ತಿದ್ದರು. ಇದರಿಂದ ಕರ್ತನು ಅವರನ್ನು ಕಳ್ಳರೆಂದು ಕರೆದಿರಬಹುದು. ಕರ್ತನಾದ ಯೇಸುವು ಈ "ವ್ಯಾಪಾರದ ಸರಕು"ಗಳನ್ನು ಈ ದಿನ ದೇವರ ಸೇವಕರಲ್ಲಿ ಕೆಲವರು ಬಳಸುವ ರೀತಿಯಿಂದ ಹೇಗೆ ಪ್ರತಿಕ್ರಿಯಿಸಿರಬಹುದು. ನಾವು "ಆಲಯದ ಕಳ್ಳ"ರಾಗದೆ ಕರ್ತನ ನಿಜಸೇವಕರಾಗೋಣ.

## ದುರಾಶೆಯ ವಿರುದ್ಧ ಕಾವಲಾಗಿರಿ, ನೀವು ನಿಧಾನವಾಗಿ ಅದರೊಳಗೆ ಜಾರುತ್ತೀರಿ

**"ಸೂರೆ ಮಾಡುವವರೆಲ್ಲರ ದಾರಿಯೂ ಹೀಗೆಯೇ ಸರಿ; ಕೊಳ್ಳೆಯು ಕೊಳ್ಳೆಗಾರರ ಜೀವವನ್ನೇ ಕೊಳ್ಳೆಮಾಡುವದು"** (ಜ್ಞಾನೋಕ್ತಿಗಳು 1:9).

**"ಅದಕ್ಕೆ ಬಿಳುಮನು-ಬಾಲಕನು ತನ್ನ ಮನೇ ತುಂಬುವಷ್ಟು ಬೆಳ್ಳಿ ಬಂಗಾರ ಕೊಟ್ಟರೂ ನಾನು ನನ್ನ ದೇವರಾದ ಯೆಹೋವನ ಆಜ್ಞೆಯನ್ನು ಮೀರಿ ಸಣ್ಣ ಕೆಲಸವನ್ನಾಗಲಿ, ದೊಡ್ಡ ಕೆಲಸವನ್ನಾಗಲಿ ಮಾಡಲಾರೆನು"** (ಅರಣ್ಯಕಾಂಡ 22:18).

**"ಇವರು ಕಾಯಿನನ ಮಾರ್ಗವನ್ನು ಹಿಡಿದವರೂ ದ್ರವ್ಯ ಸಂಪಾದನೆಗೋಸ್ಕರ ಬಿಳಾಮನ ಭ್ರಾಂತಿಯಲ್ಲಿ ಪೂರ್ಣವಾಗಿ ಮುಣುಗಿದವರೂ ಕೋರಹನಂತೆ ಎದುರು ಮಾತುಗಳನ್ನಾಡಿ ನಾಶವಾಗಿ ಹೋಗತಕ್ಕವರೂ ಆಗಿದ್ದಾರೆ"** (ಯೂದನು 1:11).

ಸಾಧಾರಣವಾಗಿ ನಾವು ನಮ್ಮ ಹೃದಯಗಳಲ್ಲಿ ದುರಾಶೆಯೊಂದಿಗೆ ಆರಂಭಿಸುವುದಿಲ್ಲ. ಕ್ರೈಸ್ತ ಸೇವೆಯ ಆರಂಭದಲ್ಲಿ, ನಮ್ಮಲ್ಲಿ ಹಲವರು ಬಹು ಯಥಾರ್ಥವಾಗಿ ಆರಂಭಿಸುತ್ತೇವೆ. ನಮ್ಮ ರಕ್ಷಣೆಯನ್ನು ಮೇಲಿಟ್ಟು, ನಮ್ಮ ಉದ್ದೇಶಗಳನ್ನು ಕಾಯ್ದು, ನಮಗೆ ಯಾವ ಕಾಣಿಕೆ ಕೊಡಲ್ಪಟ್ಟರೂ ಅದರಲ್ಲಿ ಸಂತೃಪ್ತರಾಗಿ, ನಮ್ಮ ಹೃದಯಗಳನ್ನು ಹಣದ ಮೇಲಿನ ಪ್ರೀತಿಯಿಂದ ಕಾಯುತ್ತಾ ಕಾಪಾಡಿಕೊಳ್ಳುತ್ತೇವೆ. ಆದರೆ ಸಮಯ ಕಳೆದಂತೆ ಸೇವೆಯು ಬೆಳೆಯಲು ಆರಂಭಿಸಿದಾಗ, ಎಲ್ಲಾ ಕಡೆಯಿಂದಲೂ ಒತ್ತಡಗಳು ಉಂಟಾಗಿ, ನಿಧಾನವಾಗಿ ನಾವು ದೇವ ಸೇವಕರಾಗಿ ನಮ್ಮ "ಮುಗ್ಧತ್ವವನ್ನು" ಕಳೆದುಕೊಳ್ಳುತ್ತೇವೆ. ಹಣವು ಮುಗ್ಧತೆಯನ್ನು ಬಹು ಸುಲಭವಾಗಿ ಕಳೆದುಕೊಳ್ಳುವ ಒಂದು ವಲಯವಾಗಿರುತ್ತದೆ. ನಮಗೆ ಕಾಣಿಕೆ ಕೊಡಲ್ಪಟ್ಟಿರುವುದರಲ್ಲಿ ತೃಪ್ತರಾಗಿರುವುದರಿಂದ ಮುಂದುವರಿದು ನಮಗೆ ಅಗತ್ಯವಾದ ದೊಡ್ಡ ಮೊತ್ತದ ಹಣಕ್ಕಾಗಿ ಕೇಳಿಕೊಳ್ಳುವ ರೀತಿಗೆ ತಿರುಗುತ್ತೇವೆ. ನಾವು ಹಣದ ಬಗ್ಗೆ ಕಾಳಜಿ ಇಲ್ಲದ ರೀತಿಯಿಂದ ನಾವು ಇನ್ನೂ ಹೆಚ್ಚಾಗಿ ಹೇಗೆ ಪಡೆಯಬಹುದು ಎಂದು ಎಡಬಿಡದೆ ಯೋಚಿಸುತ್ತೇವೆ. ನಾವು ಸಿರಿವಂತ ಸ್ಥಿತಿಯನ್ನು ಹಾಗೂ ಹೆಚ್ಚು ಬೆಲೆಬಾಳುವ ವಸ್ತುಗಳನ್ನು ಬಳಸಲು ಬಯಸುವುದರಲ್ಲಿ ನಮ್ಮ ಸಂತೋಷವನ್ನು ಕಳೆದು ಕೊಳ್ಳುತ್ತೇವೆ. ಬಿಳಾಮನು ಆರಂಭದಲ್ಲಿ ಯಾವುದೇ ಮೊತ್ತದ ಬೆಳ್ಳಿ ಬಂಗಾರಗಳನ್ನು ಅನುಮತಿಸದಂತೆ ನಾವು ಕೂಡಾ ತೀರ್ಮಾನಿಸಿ, ಅದರಿಂದ ನಾವು ಮುಂದೆ ಹೋಗಿ ಲಾಭದ ನಂತರ ತಪ್ಪನ್ನು ಹೊಂದುವ ದುರಾಶೆಗೆ ಬಲಿಯಾಗುತ್ತೇವೆ. ಹೃದಯದ ಈ ಬದಲಾವಣೆಯು ಸಾಧಾರಣವಾಗಿ ಬಹು ತಂತ್ರಯುತವಾಗಿ, ಬಹು ನಿಧಾನವಾಗಿ ನಾವು ತಿಳಿಯದೆಯೇ ಆಗುತ್ತದೆ, ಹಾಗೂ ನಾವು ಇದರೊಳಗೆ ಜಾರಿಕೊಳ್ಳುತ್ತೇವೆ. ಈ ನಿಧಾನವಾಗಿ ಜಾರುವಿಕೆಯನ್ನು ತಡೆಯುವ ಒಂದೇ ಒಂದು ದಾರಿ ಎಂದರೆ, ನಮ್ಮ ಹೃದಯಗಳ ಮೇಲೆ ಪ್ರತಿದಿನವೂ ಪರಿಶೀಲಿಸಬೇಕು. ದುರಾಶೆಗೆ ವಿರುದ್ಧವಾಗಿ ಕಾಯುವ ಸರಳವಾದ ಕಾರ್ಯಗಳನ್ನು ಮಾಡಿರಿ.

ಆಗೀಗ ಪ್ರತಿಸಾರಿ ಜನರು ನನಗೆ ಕಾಣಿಕೆ ಕೊಡುವಾಗ ವಿಶೇಷವಾಗಿ ಅದು ಒಂದು ದೊಡ್ಡ ಮೊತ್ತವೆಂದು ನಾನು ತಿಳಿದಾಗ, ಅದನ್ನು ಪೂರ್ಣವಾಗಿ, ಅದರಿಂದ ಆಶೀರ್ವದಿಸಲ್ಪಟ್ಟ ಯಾರಾದರೂ ದೇವರ ಸೇವಕರಿಗೆ ಕೊಟ್ಟುಬಿಡುವ ಆಯ್ಕೆ ಮಾಡುತ್ತೇನೆ. ಕೆಲವು ವೇಳೆ, ಜನರು ನನಗೆ ಕಾಣಿಕೆ ತಂದಾಗ ನಾನು ಅದನ್ನು ತೆಗೆದುಕೊಳ್ಳಲು ನಿರಾಕರಿಸುತ್ತೇನೆ. ಹಾಗೂ ಇಡೀ ಹಣದ ಮೊತ್ತವನ್ನು ಸಭೆಯ ಕಾಣಿಕೆಯಲ್ಲಿ ಹಾಕಲು ಕೇಳಿಕೊಳ್ಳುತ್ತೇನೆ. ಅಷ್ಟಲ್ಲದೆ ನಾನು ಆ ಹಣದ ಬಳಕೆಯನ್ನು ಹೊಂದಿರುವುದಿಲ್ಲ. ಆದರೆ ನಾನು ಸಮಯಾನುಸಾರ ನನ್ನ ಸ್ವಂತ ಒಳಿತಿಗಾಗಿ ಈ ಕಾರ್ಯಗಳನ್ನು ಮಾಡುತ್ತೇನೆ, ಇದು ನನ್ನ ಹೃದಯವನ್ನು ಕಾಯುವುದಕ್ಕಾಗಿ. ನಾನು ತಪ್ಪಾದ ಪ್ರಚೋದನೆ, ಉದ್ದೇಶ, ಮನೋಭಾವನೆ ಅಥವಾ ಅನುರಾಗಗಳು ನನ್ನ ಹೃದಯದಲ್ಲಿ ವೃದ್ಧಿಯಾದರೆ, ಹಣದ ಕಡೆಗೆ ಅಥವಾ ಯಾವುದಕ್ಕಾದರೂ ತಿರುಗಿದರೆ, ನಾನು ತಕ್ಷಣ ದೇವರಿಗೆ ಅರಿಕೆ ಮಾಡುತ್ತೇನೆ, ಶುದ್ಧತ್ವವನ್ನು ಪಡೆದುಕೊಂಡು ದೇವರ ವಾಕ್ಯವು ನನಗೆ ಏನು ಹೇಳುತ್ತದೆಂಬುದನ್ನು ನಾನೇ ನೆನಪುಮಾಡಿಕೊಳ್ಳುತ್ತೇನೆ. ಹಾಗೂ ಇದು ಅಗತ್ಯವಾಗಿದ್ದರೆ, ನಾನೂ ಕೂಡಾ ಆ ಮನೋಭಾವವನ್ನು ಎದುರಿಸಲು ಏನಾದರೂ ಮಾಡಬೇಕು. ನಿಮ್ಮ ಹೃದಯವನ್ನು ಕಾಯಿರಿ! ನಿನ್ನ ಹೃದಯವನ್ನು ಬಹು ಜಾಗರೂಕತೆಯಿಂದ ಕಾಪಾಡಿಕೋ. ಅದರೊಳಗಿಂದ ಜೀವಧಾರೆಗಳು ಹೊರಡುವವು" (ಜ್ಞಾನೋಕ್ತಿಗಳು 4:23).

## ಇತರ ಸೇವೆಗಳಲ್ಲಿ ಆರ್ಥಿಕವಾಗಿ ನೀಡಿರಿ

**"ಆದರೆ ಸ್ವಲ್ಪವಾಗಿ ಬಿತ್ತುವವನು ಪೈರನ್ನು ಸ್ವಲ್ಪವಾಗಿ ಕೊಯ್ಯುವನು; ಹೆಚ್ಚಾಗಿ ಕೊಯ್ಯುವನು" (2 ಕೊರಿಂಥದವರಿಗೆ 9:6).**

**"ನಿನ್ನ ಆಹಾರವನ್ನು ನೀರಿನ ಮೇಲೆ ಚೆಲ್ಲು, ಬಹು ದಿನದ ಮೇಲೆ ಅದು ನಿನಗೆ ಸಿಕ್ಕುವದು" (ಪ್ರಸಂಗಿ 11:1).**

ನಮ ಹೃದಯಗಳನ್ನು ಶುದ್ಧವಾಗಿಟ್ಟುಕೊಳ್ಳುವ ಹಾಗೂ ಹಣದ ಮೇಲಿನ ವ್ಯಾಮೋಹದಿಂದ ಬಿಡುಗಡೆ ಮಾಡಿಕೊಳ್ಳುವ ಹಾಗೂ ಅದರಿಂದ ಹತೋಟಿಯಲ್ಲಿರಲು ಅತ್ಯುತ್ತಮ ಮಾರ್ಗಗಳಲ್ಲಿ ಒಂದು ಯಾವುದೆಂದರೆ, ಇತರ ಜೀವಿತಗಳಿಗೆ, ಇತರ ಸ್ಥಳೀಯ ಸಭೆಗಳಿಗೆ ಹಾಗೂ ಕ್ರೈಸ್ತ ಸೇವೆಗಳಿಗೆ ಕೊಡುವುದು. ಹೆಚ್ಚು ಸಮಯ ಕ್ರೈಸ್ತ ಸೇವಕರು ಹಾಗೂ ಸ್ಥಳೀಯ ಸಭೆಗಳಾಗಿ ನಾವು "ಸಂಗ್ರಹಮಾಡುವ" ಗುಂಗಿನಲ್ಲಿ ಇರುತ್ತೇವೆ.

ಜನರು ಕೊಡಲೆಂದು ಆಹ್ವಾನಿಸುವುದರಲ್ಲಿ ಗಡಿಬಿಡಿಯಾಗಿರುತ್ತೇವೆ. ಆದರೆ ಹಣವು ಮಾತ್ರ ಸುರಿಯುತ್ತದೆ. ನಾವು ಸರೋವರವವಾಗಿ, ಶೀಘ್ರದಲ್ಲಿ ನಾವು ಮಲಿನಗೊಳಿಸಲ್ಪಟ್ಟು ತೊಂದರೆಗೊಳಗಾಗುತ್ತೇವೆ, ಹಾಗೂ ಎಲ್ಲಾ ತಪ್ಪಾದ ಕಾರ್ಯಗಳಿಗೆ ಪೋಷಕ ಸ್ಥಾನವಾಗುತ್ತವೆ. ಒಂದು ಸರೋವರವಾಗದಿರಲು, ಆದರೆ ಒಂದು ನದಿಯಾಗಿರಲು ಒಂದು ಅತ್ಯುತ್ತಮ ಮಾರ್ಗವೆಂದರೆ, ಒಳ ಹರಿಯುವಿಕೆಯಂತೆಯೇ ಹೊರಹರಿಯುವಿಕೆಯೂ ಇರಬೇಕು. ಇತರ ದೇವ ಸೇವಕರಿಗೆ ಕೊಡಿರಿ. ಬಹಳ ಮೊದಲ ಆರಂಭದಿಂದಲೇ, ನಾವು ಇದನ್ನು ಅಭ್ಯಾಸ ಮಾಡಲು ಪ್ರಯತ್ನಿಸಿರುತ್ತೇವೆ. ಈ ದಿನದವರೆಗೆ, ನಾವು ನಮ್ಮ ಸ್ವಂತ ಭೂಮಿ ಅಥವಾ ಕಟ್ಟಡವನ್ನು ಹೊಂದಿಲ್ಲ, ಆದರೆ ನಾವು ಇಲ್ಲಿ ಹಲವಾರು ಸಭೆಗಳನ್ನು ಸ್ಥಾಪಿಸಿರುತ್ತೇವೆ. ಹಾಗೂ ಸೇವೆಗಳನ್ನು ಸ್ಥಾಪಿಸಿ, ಅವರು ತಮ್ಮ ಸ್ವಂತ ಭೂಮಿ ಮತ್ತು ಆಸ್ತಿಯನ್ನು ತೆಗೆದುಕೊಳ್ಳಲು ಸಹಾಯ ಮಾಡುತ್ತೇವೆ. ನಾವು ಇತರರಿಗೆ ಹೊಸ ಸಭೆಗಳನ್ನು ಆರಂಭಿಸಲು, ಕೆಲವು ವೇಳೆ ಅದೇ ಸ್ಥಳದಲ್ಲಿ, ಅಂದರೆ ನಾವು ಸೇವೆ ಮಾಡುವಲ್ಲಿಯೇ ಸ್ಥಾಪಿಸಲು ಕೊಟ್ಟಿರುತ್ತೇವೆ. ನಾವು ಇತರ ಜನರ ದರ್ಶನಗಳಲ್ಲಿ ಬಂಡವಾಳ ಹೂಡಿ, ತಮ್ಮ ಸೇವೆಗಳನ್ನು ಆರಂಭಿಸಲು ಸಹಾಯ ಮಾಡಲು, ಅಥವಾ ಅವರು ತಮ್ಮ ಪ್ರಯಾಣದಲ್ಲಿ ಮುಂದುವರಿಯುವಾಗ ಅವರ ಮಾರ್ಗದುದ್ದಕ್ಕೂ ಸಹಾಯಮಾಡಲು ನಾವು ಪ್ರಯತ್ನಿಸಿರುತ್ತೇವೆ. ವಾಸ್ತವವಾಗಿ ನಾವು ಪ್ರತಿಯೊಬ್ಬರಿಗೂ ಇದನ್ನು ಮಾಡಲಿಕ್ಕಾಗುವುದಿಲ್ಲ. ಆದರೆ ದೇವರು ನಿಮ್ಮನ್ನು ಎಷ್ಟು ಮಟ್ಟಿಗೆ ಅಭಿವೃದ್ಧಿಪಡಿಸಿರುತ್ತಾನೋ, ನಾವು ಕೊಟ್ಟು ಬಿಡಬೇಕಾದ ನಮ್ಮ ಭಾಗವನ್ನು ಮಾಡುತ್ತೇವೆ ಹಾಗೂ ಒಂದು ವೈಯಕ್ತಿಕ ಮಟ್ಟದಲ್ಲಿ ನಾನು ನನ್ನ ಸ್ವಂತ ವೈಯಕ್ತಿಕ ಹಣವನ್ನು ಬಿತ್ತಿರುತ್ತೇನೆ. ಸಭೆಯ ನಿಧಿಯಿಂದ ಒಂದು ಚೆಕ್ ಬರೆದು ಬೇರೊಂದು ಸೇವೆಗಾಗಿ ಕೊಡುವುದು ಅದು ನನ್ನನ್ನು ವೈಯಕ್ತಿಕವಾಗಿ ಪರಿಣಾಮಕ್ಕೊಳಪಡಿಸುವುದಿಲ್ಲ. ಆದರೆ ನಾನು ವೈಯಕ್ತಿಕವಾಗಿ ಒಬ್ಬ ಉದಾರಿ ಕೊಡುಗೈಯವನಾಗಿರಬೇಕು ಹಾಗೂ ಇದರಿಂದ ನಾನು ನನ್ನ ಸ್ವಂತ ಹಣವನ್ನು ಜನರ ಜೀವಿತಗಳಿಗೆ ಕೊಡುತ್ತೇನೆ.



# ಸ್ತ್ರೀಯರು

“ಅವಳಿಂದ ಗಾಯಪಟ್ಟು ಬಿದ್ದವರು ಬಹುಮಂದಿ, ಹತರಾದವರೋ ಲೆಕ್ಕವೇ ಇಲ್ಲ.”

ಜ್ಞಾನೋಕ್ತಿಗಳು 7:26

ಅಧ್ಯಾಯ 10

# 10

# ಸ್ತ್ರೀಯರು

ಈ ಅಧ್ಯಾಯವು ಸೇವೆಯಲ್ಲಿರುವ ಕ್ರೈಸ್ತ ಪುರುಷರಿಗೆ ಸಂಬೋಧಿಸಲ್ಪಟ್ಟಿದೆ. ಹಣದಿಂದ ಪ್ರತ್ಯೇಕವಾಗಿ, "ಸ್ತ್ರೀಯರು", ಕ್ರೈಸ್ತ ಸೇವಕರಾದ ನಮಗೆ ಒಂದು ಪ್ರಮುಖ ಸವಾಲಾಗಿರುತ್ತಾರೆ. ನಾವು ಮೇಲಿಂದ ಮೇಲೆ ಈ ವಲಯದಲ್ಲಿ ಹಲವಾರು ದುರ್ಘಟನೆಗಳ ಬಗ್ಗೆ ಕೇಳುತ್ತೇವೆ. ಹಾಗೂ ನಿಜವಾಗಿಯೂ ನಾವು ಕೇಳದೆ ಇರುವ ಅನೇಕ ದುರ್ಘಟನೆಗಳೂ ಇರುತ್ತವೆ. ಸ್ತ್ರೀಯರ ಕಡೆ ಆಕರ್ಷಣೆಯು ಎಲ್ಲರಿಗೂ ಸಂಭವಿಸುತ್ತದೆ, ಒಂದು ವೇಳೆ ಒಂದು ದೊಡ್ಡ ನಗರದ ಒಂದು ದೊಡ್ಡ ಸಭೆಯ ಸಭಾಪಾಲಕನಾಗಿರಬಹುದು, ಅಥವಾ ಒಬ್ಬ ಸರಳ ಜೀವಿಯಾದ, ಒಂದು ಗ್ರಾಮದಲ್ಲಿ ಸಾಮಾನ್ಯ ಬೋಧಕನಿರಬಹುದು, ನಾವೆಲ್ಲರೂ ಈ ವಲಯದಲ್ಲಿ ಶೋಧನೆಗೆ ಗುರಿಯಾಗುತ್ತೇವೆ. ನಾನು ಬಹು ಸರಳ ಹಿನ್ನೆಲೆಗಳಿಂದ ಕೂಡಿದ ಸಭಾಪಾಲಕರನ್ನು ಸಂಧಿಸಿರುತ್ತೇನೆ, ಅವರು ಹೆಚ್ಚುಮಟ್ಟಿಗೆ ಜೀವಿತದಲ್ಲಿ ಏನೂ ಹೊಂದಿಲ್ಲ, ಹಾಗೂ ಯಾರಾದರೂ ತಮ್ಮ ಹೋರಾಟದ ಪ್ರಮುಖ ವಲಯವು ಯಾವುದೆಂದು ಸ್ಪಷ್ಟಪಡಿಸುವಾಗ, ಅವರ ಪರಿಸ್ಥಿತಿಗೆ ಕಾರಣ ಆರ್ಥಿಕ ಬಿಕ್ಕಟ್ಟು ಹಾಗೂ ಒಪ್ಪೊತ್ತಿನ ಊಟಕ್ಕೂ ಇಲ್ಲದ ಪರಿಸ್ಥಿತಿ ಎಂಬುದನ್ನು ತಿಳಿಯಬಹುದು. ನನ್ನ ಅತ್ಯಂತ ವಿಸ್ಮಯ ಉಂಟಾಗಿದ್ದು ಹೇಗೆಂದರೆ, ಅವರು ಬಂದು ನನ್ನೊಂದಿಗೆ ಹಂಚಿಕೊಂಡ ಸಮಸ್ಯೆಗಳು ಸ್ತ್ರೀಯರೊಂದಿಗೆ ಸಂಬಂಧಿಸಿದ್ದದಾಗಿತ್ತು. ಹಾಗೂ ಅವರ ನೈತಿಕ ಸೋಲುವಿಕೆಗಳು ಹಾಗೋ ತಪ್ಪುಗಳು ಅವರು ಸ್ತ್ರೀಯರೊಂದಿಗೆ ಮಾಡುವ ಸೇವೆಯಿಂದ ಉಂಟಾಗಿವೆ ಎಂಬುದು ಸ್ಪಷ್ಟವಾಗುತ್ತದೆ. ಹೀಗಾಗಿ ನಾನು ಯೋಚಿಸುವುದೇನೆಂದರೆ, ಈ ಹೋರಾಟ ಹಾಗೂ ಶೋಧನೆಯ ಯಾವ ಮಾನವನನ್ನೂ—ಸಿರಿವಂತನಾಗಲೀ ಅಥವಾ ಬಡವನಾಗಲಿ, ನಗರದಲ್ಲಾಗಲಿ, ಗ್ರಾಮದಲ್ಲಿರಲಿ, ಆಳವಾದ ಪ್ರಾರ್ಥನಾ ಪೂರ್ವಕವಾಗಿರಲಿ, ಹೇಗಾದರೂ ಅಭಿಷೇಕ ಹೊಂದಿರಲಿ, ಸೇವೆಯಲ್ಲಿ ಎಂಥಾ ಕರೆಯನ್ನು ಯಾವ ವಲಯದಲ್ಲಿ ಹೊಂದಿರಲಿ,

ಬಸದಿಗಳೆಂಬ ಧಾರ್ಮಿಕ ನಿವಾಸಗಳಲ್ಲಿರಲಿ ಅಥವಾ ಗುಡಿಸಲಿನಲ್ಲಿರಲಿ ಯಾವ ಪುರುಷನನ್ನೂ ಬಿಡುವುದಿಲ್ಲ. ಈ ವಲಯದಲ್ಲಿ ನಮ್ಮಲ್ಲಿ ಕೆಲವರು ಈಗಾಗಲೇ ಸೋಲುವಿಕೆಗಳನ್ನು ಹೊಂದಿರುತ್ತಾರೆ. ನಾವು ಎದ್ದೇಳುವ ಅಗತ್ಯವಿದೆ, ಉಜ್ಜೀವನ ಹೊಂದಬೇಕು, ಹಾಗೂ ದ್ವಿಮುಖ ಕಾವಲಾಗಿರುವಾಗ ಮುಂದುವರಿಯುತ್ತಾ ಇರ್ರಿ. ಈ ಅಧ್ಯಾಯವು ನಾವು ಕ್ರೈಸ್ತ ಸೇವಕರಾಗಿ ಹೇಗೆ ಈ ವಲಯದಲ್ಲಿ ಮೇಲುಗೈಯಾಗುವುದು ಎಂಬುದರೊಂದಿಗೆ ವ್ಯವಹರಿಸುತ್ತದೆ.

## ದೆಲೀಲಳ ತೊಡೆಯ ಮೇಲೆ ಮಲಗಬೇಡಿರಿ

**"ಆಕೆಯು ಸಂಸೋನನನ್ನು ತನ್ನ ತೊಡೆಯ ಮೇಲೆ ಮಲಗಿಸಿಕೊಂಡು ಅವನಿಗೆ ನಿದ್ರೆ ಹತ್ತಿದಾಗ ಒಬ್ಬ ಮನುಷ್ಯನಿಂದ ಅವನ ತಲೆಯ ಏಳು ಜಡೆಗಳನ್ನು ಬೋಳಿಸಿ ಅವನನ್ನು ದುರ್ಬಲ ಪಡಿಸಿದಳು. ಅವನ ಶಕ್ತಿಯು ಹೋಯಿತು, ಆಗ ಅವಳು ಸಂಸೋನನೇ, ಫಿಲಿಷ್ಟಿಯರು ಬಂದಿದ್ದಾರೆಂದು ಕೂಗಲು ಅವನು ಎಚ್ಚತ್ತು-ಮುಂಚಿನಂತೆ ಈಗಲೂ ಕೊಸರಿಕೊಂಡು ಹೋಗುವೆನು ಅಂದುಕೊಂಡನು; ಆದರೆ ಯೆಹೋವನು ತನ್ನನ್ನು ಬಿಟ್ಟುಹೋಗಿದ್ದಾನೆಂಬುದು ಅವನಿಗೆ ತಿಳಿಯಲಿಲ್ಲ"** (ನ್ಯಾಯಸ್ಥಾಪಕರು 16:19,20).

ಸಂಸೋನನು ದೇವರಿಂದ ಕರೆಯಲ್ಪಟ್ಟು ದೇವ ಜನರಿಗಾಗಿ ಒಬ್ಬ ನಾಯಕನಾಗಿ, ಒಬ್ಬ ವಿಮೋಚಕನಾಗಿ ಅಭಿಷೇಕಿಸಲ್ಪಟ್ಟನು. ದೇವರು ಅವನಿಗೆ ತಾನು ನಡೆಯುವ ರೀತಿಯಲ್ಲಿ, ನಡೆಯಲು, ಜೀವಿಸಲು, ಕರೆ, ಅಭಿಷೇಕ, ಹಾಗೂ ದೇವರ ವರ ನೀಡುವಿಕೆಗಳಲ್ಲಿ ಹೇಗೆ ನಡೆಯುವುದೆಂದು ಅವನಿಗೆ ದೇವರು ಕಲಿಸಿದ್ದಾನೆ. ಅವನು ಒಬ್ಬ ನಾಜೀರನಾಗಿದ್ದನು. ಹೀಗಿದ್ದರೂ, ಸ್ತ್ರೀಯರ ಕಡೆಗೆ ಅವನ ಪ್ರೀತಿಯು, ಅವನ ಪ್ರಮುಖ ಬೀಳುವಿಕೆಯಾಗಿತ್ತು. ಸಂಸೋನನ ಬಲಹೀನತೆಯಲ್ಲಿ ಅವನ ಶಾಂತತೆಯು ಅವನು ರಾಜಿಯಾಗಲು ಹಾಗೂ ದೇವರ ಕರೆಯಲ್ಲಿನ ನಡೆಗೆ ಅವನನ್ನು ನಡೆಸಲು ಬಲಪಡಿಸಿದ ಅಂಶವನ್ನು ಬಿಟ್ಟುಕೊಡಲು ಕಾರಣವಾಯಿತು. ಅವನು ದೆಲೀಲಳ ತೊಡೆಯ ಮೇಲೆ ಮಲಗಿದ್ದ ವೇಳೆಯಲ್ಲಿ ಅವನ ಶಕ್ತಿಯೆಲ್ಲಾ ಅವನಿಂದ ಹೀರಲ್ಪಟ್ಟಿತು. ಇದು ಒಂದು ರಾತ್ರಿಯಲ್ಲಿ ಆಗಲಿಲ್ಲ. ಇದು ಒಂದು ಸಮಯದ ಅವಧಿಯಲ್ಲಿ ಸ್ವಲ್ಪ ಸ್ವಲ್ಪವಾಗಿ, ನಿಧಾನವಾಗಿ ಆಯಿತು. ದೆಲೀಲಳು ಸಂಸೋನನ ಅಂತರಾಳವನ್ನೇ ಹೊಕ್ಕು, ಅವನ ಶಕ್ತಿಯ ಮೂಲವನ್ನೇ ಕತ್ತರಿಸಿ

ಹಾಕುವುದರಲ್ಲಿ ಯಶಸ್ವಿಯಾದಳು. ಸಂಸೋನನು ಫಿಲಿಷ್ಟಿಯರ ಮುಂದೆ ಕುರುಡನಾದನು, ಇದು ವಾಸ್ತವವಾಗಿ ಅವನನ್ನು ಕುರುಡನನ್ನಾಗಿಸಿತು. ಅವನು ಸ್ತ್ರೀಯರಿಗಾಗಿ ತನ್ನ ಆಶಾ ಪೂರಣೆಯಿಂದ ಕುರುಡನಾದನು. ತಾನು ಮಾಡಬಾರದ್ದನ್ನು ಅವನು ತಿಳಿದಿದ್ದರೊಂದಿಗೆ ಆಟವಾಡುತ್ತಾ ತನ್ನ ಶಕ್ತಿಯು ಎಂದೆಂದಿಗೂ ಉಳಿಯುತ್ತದೆಂದು ಆಲೋಚಿಸಿದ್ದನು. ಒಂದು ದಿನದವರೆಗೆ ದೇವರು ಅವನಿಂದ ದೂರವಾಗಿ ಉಳಿದಿದ್ದನು.

ಅತ್ಯಂತ ಹೆಚ್ಚಿನ ನೈತಿಕ ಸೋಲುವಿಕೆಗಳು ಸಂಭವಿಸಲು ಕಾರಣವೇನೆಂದರೆ, ಒಂದು ಸಮಯದ ಅವಧಿಯಲ್ಲಿ ಬೆಳೆಯುವ ಬಲಹೀನತೆಯಾಗಿರುತ್ತದೆ, ಹಲವಾರು ಸ್ಥಿತಿಗಳಲ್ಲಿ, ಇದು ಸಂಭವಿಸುತ್ತದೆ ಎಂಬ ತಿಳುವಳಿಕೆಯಿಲ್ಲದೆ ಆಗುತ್ತದೆ, ಇದು ಒಂದು ಬಲೆಯೊಳಗೆ ಅಂದರೆ ನಾಶನದ ಬಲೆಯೊಳಗೆ ನಿಧಾನವಾಗಿ ಜಾರುವಂಥದ್ದಾಗುತ್ತದೆ. ಇದು ಮನಸ್ಸಿನಲ್ಲಿ ವಂಚನೆಗಳೊಂದಿಗೆ ಆರಂಭವಾಗುತ್ತದೆ. ಶತ್ರುವು ತೊಂದರೆಯಿಲ್ಲದಂತೆ ಕಾಣುವ ಆಲೋಚನೆಗಳನ್ನು ನೆಡುತ್ತಾನೆ. ಆದರೆ ನಾವು ಅವುಗಳನ್ನು ಅಪ್ಪಿಕೊಂಡು ಅವುಗಳ ಮೇಲೆ ಕಾರ್ಯ ಮಾಡಲು ಆರಂಭಿಸುತ್ತೇವೆ. ಸ್ತ್ರೀಯರ ಮೇಲೆ ಲಂಪಟ ಸಾಹಿತ್ಯದ ಸಂಕ್ಷಿಪ್ತ, ಆಶಾ ಪೂರ್ಣತೆ, "ಸಹೋದರಿ"ಯರೊಂದಿಗೆ ಆಕಸ್ಮಿಕ ರಸಿಕತೆ ಮುಂತಾದದ್ದನ್ನು ಕುರಿತು, ಸ್ತ್ರೀಯರ ಮೇಲೆ ದೃಷ್ಟಿ ಹಾಯಿಸುವುದು, ಶೀಘ್ರದಲ್ಲಿಯೇ ಶತ್ರುವಿನ ಆಲೋಚನೆಗಳು ಹಾಗೂ ಸಲಹೆಗಳು ಬಹು ಬಲವಾಗುತ್ತವೆ ಹಾಗೂ ನಾವು ಮನಸ್ಸಿನ ಚರ್ಚೆಯಿಂದ ಅಥವಾ ಬಹಳವಾಗಿ ಮನವೊಲಿಸಿದ ಕಾರಣ ಸೋತು ಹೋಗಿರುತ್ತೇವೆ. ನಾವು "ದೆಲೀಲಳ ತೊಡೆಯ ಮೇಲೆ ಮಲಗಲು" ಆರಂಭಿಸುತ್ತೇವೆ. ನಮ್ಮ ಆಲೋಚನೆಗಳು, ಊಹೆಗಳು ಹಾಗೂ ಯೋಚನೆಗಳು ಬಂಧನಕ್ಕೊಳಗಾಗುತ್ತವೆ. ಬಹುಶಃ ನಾವು ನಿಂತಿರುವುದಕ್ಕಾಗಿ ಹಾಗೂ ಬೋಧನೆಯ ಬಗ್ಗೆ ನಾವು ತಿಳಿದಿರುವ ಸತ್ಯಕ್ಕೆ ನಾವು ಕುರುಡರಾಗಿರುತ್ತೇವೆ. ಅನಂತರ ಒಂದು ಪ್ರಾಣಾಂತಿಕ ಹೊಡೆತವು ನಮ್ಮನ್ನು ಬೀಳಿಸುತ್ತದೆ.

**"ಆಗ ಮರಣಕ್ಕಿಂತ ಹೆಚ್ಚು ವಿಷವೊಂದು ಕಂಡುಬಂತು, ಯಾವುದೆಂದರೆ, ಕೆಟ್ಟ ಹೆಂಗಸೇ. ಅವಳು ಬೋನು, ಅವಳ ಹೃದಯ ಬಲೆ, ಅವಳ ಕೈ ಪಾಶ; ದೇವರು ಒಲಿದವನು ಇವಳಿಂದ ತಪ್ಪಿಸಿಕೊಳ್ಳುವನು; ಪಾಪಿಯೋ ಅವಳ ಕೈಗೆ ಸಿಕ್ಕಿ ಬೀಳುವನು"** (ಪ್ರಸಂಗಿ 7:26).

## ಚಿಕ್ಕ ಕಣ್ಣುಗಳೇ ನೀವು ಹೇಗೆ ನೋಡುತ್ತೀರೆಂದು ಜಾಗರೂಕರಾಗಿರ್ರಿ

**"ನಮ್ಮ ದ್ರೋಹಗಳನ್ನು ನಿನ್ನ ಮುಂದೆಯೂ ನಮ್ಮ ಗುಪ್ತಪಾಪಗಳನ್ನು ನಿನ್ನ ತೇಜೋದೃಷ್ಟಿಯಲ್ಲಿಯೂ ಇಟ್ಟುಕೊಂಡಿದ್ದೀ"** (ಕೀರ್ತನೆಗಳು 90:8).

**"ವ್ಯಭಿಚಾರ ಮಾಡಬಾರದೆಂದು ಹೇಳಿಯದೆ ಎಂಬುದಾಗಿ ನೀವು ಕೇಳಿದ್ದೀರಷ್ಟೆ. ಆದರೆ ನಾನು ನಿಮಗೆ ಹೇಳುವುದೇನೆಂದರೆ– ಪರಸ್ತ್ರೀಯನ್ನು ನೋಡಿ ಮೋಹಿಸುವ ಪ್ರತಿ ಮನುಷ್ಯನು ಆಗಲೇ ತನ್ನ ಮನಸ್ಸಿನಲ್ಲಿ ಆಕೆಯ ಕೂಡ ವ್ಯಭಿಚಾರ ಮಾಡಿದವನಾದನು. ನಿನ್ನ ಬಲಗಣ್ಣು ನಿನ್ನನ್ನು ಪಾಪದಲ್ಲಿ ಸಿಕ್ಕಿಸುವುದಾದರೆ ಅದನ್ನು ಕಿತ್ತು ಬಿಸಾಟುಬಿಡು. ನಿನ್ನ ದೇಹವೆಲ್ಲಾ ನರಕದಲ್ಲಿ ಬೀಳುವುದಕ್ಕಿಂತ ಅವಯವಗಳಲ್ಲಿ ಒಂದು ಹೋಗುವುದು ನಿನಗೆ ಹಿತವಲ್ಲವೇ. ನಿನ್ನ ಬಲಗೈ ನಿನ್ನನ್ನು ಪಾಪದಲ್ಲಿ ಸಿಕ್ಕಿಸುವದಾದರೆ ಅದನ್ನು ಕಡಿದು ಬಿಸಾಟುಬಿಡು, ನಿನ್ನ ದೇಹವೆಲ್ಲ ನರಕದಲ್ಲಿ ಬೀಳುವದಕ್ಕಿಂತ ಅವಯವಗಳಲ್ಲಿ ಒಂದು ಹೋಗುವುದು ನಿನಗೆ ಹಿತವಲ್ಲವೇ"** (ಮತ್ತಾಯ 5:27–30).

**"ನಿನ್ನ ಹೃದಯವು ಅವಳ ಬೆಡಗನ್ನು ಮೋಹಿಸದಿರಲಿ, ಅವಳು ತನ್ನ ಕಣ್ಣುರೆಪ್ಪೆಗಳಿಂದ ನಿನ್ನನ್ನು ವಶಮಾಡಿಕೊಂಡಾಳು, ನೋಡಿಕೋ"** (ಜ್ಞಾನೋಕ್ತಿಗಳು 6:25).

ಒಬ್ಬ ಸುಂದರವಾದ ಹುಡುಗಿಯನ್ನು ನೋಡುವುದು ನಾವು ಒಬ್ಬ ಮಹಿಳೆಯನ್ನು ಹೇಗೆ ನೋಡುತ್ತೇವೆ ಎಂಬುದು ಪ್ರಾಮುಖ್ಯವಾದುದು. ನಾವು ಆಕೆಯ ಕಡೆಗೆ ಕಾಮಾಸಕ್ತಿಯ ಕಣ್ಣುಗಳಿಂದ ನೋಡಿದರೆ,— ಅಂದರೆ ವಶವಾಗಲು ಒಂದು ಆಶೆ—ಇದರಿಂದ ನಾವು ಪಾಪಮಾಡುತ್ತೇವೆ. ಬಹುಮಟ್ಟಿಗೆ ಆಗಾಗ್ಗೆ ನಾವು "ಏನು" ನೋಡಿದೆವೋ ಅದನ್ನು ತಡೆಯಲಿಕ್ಕಾಗುವುದಿಲ್ಲ. ನಾವು ಬಹುಶಃ ಬೀದಿಯಲ್ಲಿ ಉದ್ದಕ್ಕೂ ನಡೆಯುತ್ತಿರಬಹುದು, ಆಗ ಒಬ್ಬ ಸುಂದರಿಯಾದ ಸ್ತ್ರೀ ನಮ್ಮನ್ನು ಹಾದು ಹೋಗಬಹುದು ಅಥವಾ ನಮ್ಮ ಕಣ್ಣುಗಳು ಆಕಸ್ಮಿಕವಾಗ ಅರ್ಧಂಬರ್ಧ ಉಡುಪು ಧರಿಸಿದ ಒಬ್ಬ ಸ್ತ್ರೀಯ ಒಂದು ದೊಡ್ಡದಾದ ಚಿತ್ರಫಲಕದ ಮೇಲೆ ಬೀಳಬಹುದು. ನಾವು ಉದ್ದೇಶ ಪೂರ್ವಕವಾಗಿ ಅದನ್ನು ನೋಡಲಿಕ್ಕಿಲ್ಲ. ಹೇಗಾದರೂ ನಾವು ಮುಂದಿನ ಕ್ಷಣಗಳಲ್ಲೇ ಏನು ಮಾಡುತ್ತೇವೆ, ಎಂಬುದು ನಮ್ಮ ಕೈಗಳಲ್ಲಿರುತ್ತದೆ. ನಾವು ತಕ್ಷಣವೇ ಆ ಫಲಕದಿಂದ ನಮ್ಮ ಕಣ್ಣುಗಳನ್ನು ತೆಗೆಯಬೇಕಾಗುತ್ತದೆ, ಅಥವಾ ಅದನ್ನು ಮುಂದುವರಿಸಿ ದಿಟ್ಟಿಸಿ ನೋಡಬಹುದು, ಹಾಗೂ ನಾವು ನಮ್ಮ ಮನಸ್ಸನ್ನು ಆ ಕಾಮದಾಶೆಯ ಆಲೋಚನೆಗಳಲ್ಲಿ ಸುತ್ತುವಂತೆ ಮಾಡುತ್ತೇವೆ. ಸೌಂದರ್ಯವನ್ನು ಶ್ಲಾಘಿಸಿ, ಕೊಂಡಾಡುವುದು ಪಾಪವಲ್ಲ

ಎಂಬುದು ನಿಜ, ಹೇಗಾದರೂ ಶ್ಲಾಘಿಸುವ ಹಾಗೂ ಹೊಗಳುವ ಸೌಂದರ್ಯದ ನೆಪದಲ್ಲಿ ಬಹಳ ಜನರು ಕಾಮದಾಶೆಗೆ-ವಶವಾಗುವ ಒಂದು ಆಶೆಗೆ—ಬಲಿ ಬೀಳುತ್ತಾರೆ—ಹಾಗೂ ಪಾಪದಲ್ಲಿ ಬೀಳುತ್ತಾರೆ. ಅದೇ ಕ್ಷಣದಲ್ಲಿ ನಮ್ಮ ಭಾವೋದ್ವೇಗಗಳು ಉಕ್ಕಿ ಬರುವಂತೆ ಆಗುವುದು ಬಹುಮುಖ್ಯವಾದದ್ದು ಅಥವಾ ನಮ್ಮ ಆಲೋಚನೆಗಳು ತಪ್ಪಾದ ಮಾರ್ಗದಲ್ಲಿ ಹೋಗಲಾರಂಭಿಸುತ್ತವೆ. ನಾವು ನಮ್ಮ ಭಾವೋದ್ವೇಗಗಳು ಹಾಗೂ ಆಲೋಚನೆಗಳನ್ನು ಆಗಲೇ ಹಿಡಿತದಲ್ಲಿಟ್ಟುಕೊಳ್ಳಬೇಕು.

ದೇವರ ವಾಕ್ಯದ ಬಗ್ಗೆ ನಿಮ್ಮನ್ನು ಎಚ್ಚರಿಸಿಕೊಳ್ಳಿರಿ. ನಿಮ್ಮ ಹೃದಯದಿಂದ ಆಲೋಚನೆಯನ್ನು ಖಂಡಿಸಿರಿ. ಆ ಕ್ಷಣದಲ್ಲೇ ನಿಮ್ಮ ಭಾವೋದ್ವೇಗಗಳನ್ನು ಕುರಿತು ಮಾತನಾಡಿ ಹಾಗೂ ಹಿಡಿತದಲ್ಲಿಟ್ಟುಕೊಳ್ಳಿರಿ, ನಿಮ್ಮ ಹೃದಯದಿಂದ ಹೀಗೆ ಮಾಡಿರಿ.

ನಾವು ಆಯುಧ ಧರಿಸಬೇಕಾದ ಕೆಲವು ವೇದ ಭಾಗಗಳು ಇಲ್ಲಿವೆ:

**"ನನ್ನ ಕಣ್ಣುಗಳೊಡನೆ ನಿಬಂಧನೆಯನ್ನು ಮಾಡಿಕೊಂಡಿದ್ದೇನೆ, ಯುವತಿಯ ಮೇಲೆ ಹೇಗೆ ಕಣ್ಣಿಟ್ಟೆನು?"** (ಯೋಬನು 31:1).

**"ಯಾವ ನೀಚವಾದ ಕಾರ್ಯವನ್ನೂ ದೃಷ್ಟಿಸುವುದಿಲ್ಲ"** (ಕೀರ್ತನೆಗಳು 101:3).

**"ಸಕಲ ವಿಧವಾದ ಕೆಟ್ಟತನಕ್ಕೆ ದೂರವಾಗಿರಿ"** (1 ಥೆಸಲೋನಿಕದವರಿಗೆ 5:22).

## ಯೌವ್ವನ ಸ್ತ್ರೀಯರನ್ನು ಪೂರ್ಣ ಶುದ್ಧಭಾವದಿಂದ ಸಹೋದರಿಯರೆಂದು ನಡೆಸಿಕೊಳ್ಳಿರಿ

**"ವೃದ್ಧನನ್ನು ಗದರಿಸದೆ ತಂದೆಯೆಂದು ಭಾವಿಸಿ ಬುದ್ಧಿ ಹೇಳು. ಯೌವನಸ್ಥರನ್ನು ಅಣ್ಣ ತಮ್ಮಂದಿರೆಂದೂ ವೃದ್ಧಸ್ತ್ರೀಯರನ್ನು ತಾಯಿಗಳೆಂದೂ ಯೌವ್ವನ ಸ್ತ್ರೀಯರನ್ನು ಪೂರ್ಣ ಶುದ್ಧಭಾವದಿಂದ ಅಕ್ಕತಂಗಿಯರೆಂದೂ ಎಣಿಸಿ ಅವರವರಿಗೆ ಬುದ್ಧಿ ಹೇಳು" (1 ತಿಮೊಥೆಯನಿಗೆ 5:1-2).**

ತಿಮೊಥೆಯನು ಎಫೆಸ ಸಭೆಯನ್ನು ಮೇಲ್ವಿಚಾರಣೆ ಮಾಡುತ್ತಾ ನಡೆಸುತ್ತಿದ್ದಾನೆ ಹಾಗೂ ಪೌಲನು ತನ್ನ ಪತ್ರಗಳಲ್ಲಿ ತಿಮೊಥೆಯನಿಗೆ, ಹಲವಾರು ಕ್ಷೇತ್ರಗಳಲ್ಲಿ ಒಂದು ಸ್ಥಳೀಯ ಸಭೆಯ ಪಾಲನೆ ಮಾಡುವ ಪ್ರಾಮುಖ್ಯತೆಯನ್ನು ತಿಳಿಯಪಡಿಸುತ್ತಾನೆ. ಪೌಲನು ತಿಮೊಥೆಯನಿಗೆ

ನೀಡುವ ಒಂದು ಪ್ರಾಮುಖ್ಯವಾದ ಸೂಚನೆಗಳಲ್ಲಿ ಒಂದು ಏನೆಂದರೆ, ವಯಸ್ಸಾದ ಸ್ತ್ರೀಯರನ್ನು ತಾಯಂದಿರು ಹಾಗೂ ಯೌವ್ವನಸ್ಥ ಸ್ತ್ರೀಯರನ್ನು ಸಹೋದರಿಯರನ್ನಾಗಿಯೂ ಪೂರ್ಣಶುದ್ಧಭಾವದಿಂದ ನಡಿಸಿಕೊಳ್ಳಲು ಸೂಚಿಸುತ್ತಾನೆ. ಇದು ಅನಿವಾರ್ಯವಾದದ್ದು ಅಂದರೆ ಒಬ್ಬ ಸಭಾಪಾಲಕನಾಗಿ ಅಥವಾ ದೇವ ಸೇವಕನಾಗಿ ನೀವು ಸಭಿಕರಲ್ಲಿ ಯೌವ್ವನಸ್ಥ ಸ್ತ್ರೀಯರನ್ನು ಪರಸ್ಪರ ಸಂಪರ್ಕ ಹೊಂದಿರಿ. ನೀವು ಅವರ ಅಗತ್ಯತೆಗಾಗಿ ಆಲಿಸಿರಿ, ಅವರನ್ನು ಪ್ರೋತ್ಸಾಹಿಸಿರಿ, ಅವರಿಗೆ ಸಮಾಲೋಚಿಸಿರಿ, ಹೇಗಾದರೂ ನಮ್ಮ ಹೃದಯಗಳನ್ನು ಹಾಗೂ ನಮ್ಮ ಪ್ರಚೋದನೆಗಳನ್ನು ಕಾಯಬೇಕು, ನಮ್ಮ ಆಲೋಚನೆಗಳು ಹಾಗೂ ಭಾವೋದ್ವೇಗಗಳನ್ನು ಪ್ರಕ್ರಿಯೆ ಮುಖಾಂತರವಾಗಿ ಶುದ್ಧವಾಗಿ ಇಟ್ಟುಕೊಳ್ಳಬೇಕು.

ನಿಮ್ಮೊಳಗೆ ನೀವು ಪ್ರಾಮಾಣಿಕರಾಗಿರ್ರಿ. ಯೌವ್ವನಸ್ಥ ಸ್ತ್ರೀಯು ನಿಮ್ಮನ್ನು ಸಮೀಪಿಸುತ್ತಾ ತಪ್ಪು ಅಭಿಪ್ರಾಯಗಳು ಅಥವಾ ನಿಮ್ಮ ಮೇಲಿನ ವ್ಯಾಮೋಹದಿಂದ ಬರುವುದನ್ನು ನೀವು ಗ್ರಹಿಸಿದರೆ ಒಂದು ಹೆಜ್ಜೆ ಹಿಂದೆ ಹೋಗಿರಿ. ನಿಮ್ಮ ಸ್ವಂತ ಭಾವೋದ್ವೇಗಗಳೇ ಸಹಾಯಕ್ಕಾಗಿ ನಿಮ್ಮ ಬಳಿ ಬರುವ ಒಬ್ಬ ಯುವ ಸ್ತ್ರೀಗಾಗಿ ಹೆಚ್ಚುತ್ತಿರುವುದನ್ನು ನೀವು ಗ್ರಹಿಸಿದರೆ, ಹಿಂದಕ್ಕೆ ಸರಿಯಿರಿ. ನಿಮ್ಮನ್ನು ಹಾಗೂ ಅವರನ್ನು ಕಾಪಾಡುವುದು ಮತ್ತು ರಕ್ಷಿಸುವುದು ಯಾವಾಗಲೂ ಉತ್ತಮವಾದದ್ದು ಹಿಂದಿನ ಅಧ್ಯಾಯಗಳಲ್ಲಿ ನಾವು ತಿಳಿಸಿರುವಂತೆ ಆತ್ಮ ರಕ್ಷಣೆಯ ತಂತ್ರವನ್ನು ಹೊಂದಿಕೊಳ್ಳಿರಿ. ನಿಮ್ಮ ನೈತಿಕ ಬೇಲಿಗಳನ್ನು, ನೀವು ದಾಟಲು ನಿರಾಕರಿಸುವ ಬೇಲಿಗಳನ್ನು ಕಾಪಾಡಿಕೊಳ್ಳಿರಿ, ಇದರಿಂದ ನಿಮ್ಮನ್ನೇ ಕಾಯಬಹುದು. ನಿಮ್ಮ ಹೃದಯವನ್ನು ಮತ್ತು ಮನಸ್ಸನ್ನು ತಪ್ಪು ಭಾವನೆಗಳು ಹಾಗೂ ಭಾವೋದ್ವೇಗಗಳನ್ನು ಬಂಧಿಸಲ್ಪಡುವುದರಿಂದ ಕಾಪಾಡಿರಿ.

## ಒಂದು ಅಂತರದಿಂದ ಬೇರೆಯಾಗಿರಿ ಆದರೆ ಸ್ತ್ರೀಯರು ಸ್ತ್ರೀಯರಿಗೆ ಸಲಹೆಗಾರರಾಗುವುದನ್ನು ಬಿಡಿರಿ

**"ದೇವ ಭಕ್ತೆಯರಿಗೆ ಯೋಗ್ಯವಾದ ನಡತೆಯುಳ್ಳವರೂ ಸದ್ಬೋದನೆ ಹೇಳುವವರೂ ಆಗಿರಬೇಕೆಂದು ಬೋಧಿಸು. ಇದಲ್ಲದೆ ಅವರು ಪ್ರಾಯದ ಸ್ತ್ರೀಯರಿಗೆ ನಿಮ್ಮ ಮೂಲಕ ದೇವರ ವಾಕ್ಯಕ್ಕೆ ದೂಷಣೆಯಾಗದಂತೆ ನೀವು ಗಂಡಂದಿರನ್ನು ಮಕ್ಕಳನ್ನೂ ಪ್ರೀತಿಸುವವರೂ**

**ದಮೆಯುಳ್ಳವರೂ ಪತಿವ್ರತೆಯರೂ ಮನೆಯಲ್ಲೇ ಕೆಲಸ ಮಾಡುವವರೂ ಸುಶೀಲೆಯರೂ ನಿಮ್ಮ ಗಂಡಂದಿರಿಗೆ ಅಧೀನರೂ ಆಗಿರಬೇಕೆಂದು ಬುದ್ಧಿ ಕಲಿಸುವ ಹಾಗೆ ಬೋಧಿಸು"** (ತೀತನಿಗೆ 2:3–5).

ಹಲವಾರು ಸಭಾಪಾಲಕರುಗಳು ಹಾಗೂ ದೇವ ಜನರು ಭಾವನಾತ್ಮಕವಾಗಿ ಸ್ತ್ರೀಯರೊಂದಿಗೆ ಒಂದುಗೂಡಿ, ಸಭೆಯಲ್ಲಿ ಅಥವಾ ಸೇವೆಯಲ್ಲಿರುವ ಸ್ತ್ರೀಯರಿಗೆ ಸಲಹೆ ನೀಡುವ ಅಗತ್ಯವಿದೆ ಎಂದು ಒಂದಾಗುತ್ತಾರೆ. ಸೇವೆಯಲ್ಲಿ ಯೌವ್ವನ ಸ್ತ್ರೀಯರನ್ನು ಪೋಷಿಸುವ ಹಾಗೂ ಸಲಹೆ ನೀಡುವ ಆಲೋಚನೆಯು ಬಹು ಬುದ್ಧಿವಂತಿಕೆ ಹಾಗೂ ಪ್ರಚೋದನೆಯುಳ್ಳದ್ದಾಗಿ ಶುದ್ಧವಾಗಿರಬೇಕು. ಹೇಗಾದರೂ ಇದು ಸರಿಯಾಗಿ ನಿಭಾಯಿಸಲ್ಪಡದಿದ್ದರೆ ಒಂದು ಅಪಾಯಕಾರಿ ವಲಯವಾಗಲು ಸಾಧ್ಯ. ಒಬ್ಬ ಪುರುಷನಾಗಿ ನೀವು ಬಹಳಷ್ಟು ಸಮಯವನ್ನು "ಸಲಹೆ ನೀಡುವ" ಪ್ರಕ್ರಿಯೆಯಲ್ಲಿ ಯೌವ್ವನ ಸ್ತ್ರೀಯೊಂದಿಗೆ ಕಳೆದರೆ, ಅಲ್ಲಿ ಭಾವನಾತ್ಮಕವಾದ ವ್ಯಾಮೋಹಗಳು ಅಭಿವೃದ್ಧಿಯಾಗಲು ಹೆಚ್ಚಿನ ಸಾಧ್ಯತೆ ಇದೆ. ಈ ಭಾವನೆಗಳು ಶೀಘ್ರದಲ್ಲಿ ವಿವೇಚನೆಯನ್ನು ಕುಗ್ಗಿಸಿ ಚಿತ್ತವನ್ನು ಬಲಹೀನ ಮಾಡಿ ಮನಸ್ಸನ್ನು ಕುರುಡಾಗಿಸುತ್ತದೆ. ನಂತರದಲ್ಲಿ ಈ ಎರಡು ವ್ಯಕ್ತಿಗಳು ಲೈಂಗಿಕ ಪಾಪಕ್ಕೆ ಬೀಳುತ್ತಾರೆ." ತೀತನಿಗೆ ಪಾಲನು ಬಂದನು, "ಹಿರಿಯರಿಂದ ಸ್ತ್ರೀಯರು" ಒಳ್ಳೇ ಕಾರ್ಯಗಳಿಗೆ ಬೋಧಕರೂ, ಯೌವ್ವನ ಸ್ತ್ರೀಯರಿಗೆ ಬೋಧಿಸುವುದರಲ್ಲಿ ಒಳಗೊಳ್ಳುವವರೂ ಆಗಿರಬೇಕೆಂದು ತಿಳಿಸಿರುತ್ತಾನೆ. ಹೀಗಾಗಿ ನಾವು ಯೌವನಸ್ಥ ಮಹಿಳೆಯರಿಗೆ ಸಲಹೆ ನೀಡುವುದನ್ನು ಬಿಟ್ಟು, ವೃದ್ಧರಾದ ಸ್ತ್ರೀಯರ ಕೈಗಳಿಗೆ ಒಪ್ಪಿಸಬೇಕು. ಪುರುಷರಾಗಿ ನಾವು ಒಂದು ಅಂತರದಿಂದ ಬೇರೆಯಾಗಿರಬೇಕು. ಮಾರ್ಗದರ್ಶನ, ಬೋಧನೆ, ಪ್ರೋತ್ಸಾಹ, ಹಾಗೂ ಅವಕಾಶಗಳನ್ನು ಸೃಷ್ಟಿಸುವಾಗ, ಒಂದು ಆರೋಗ್ಯಕರ ಅಂತರವನ್ನು ಕಾಪಾಡಬೇಕು. ಸ್ತ್ರೀಯರೇ ಸ್ತೀಯರಿಗೆ ಸಲಹೆ ನೀಡಲಿ.

## ಮಹಿಳಾ ಸೇವಕಿಯರನ್ನು ಸರಿಯಾಗಿ ನಡಿಸಿರಿ

ಒಬ್ಬ ಸಭಾಪಾಲಕರು ಅಥವಾ ನಾಯಕರಾಗಿ, ನಿಮ್ಮ ಸ್ಥಳೀಯ ಸಭೆ ಅಥವಾ ಸೇವೆಗೆ ನಿಮ್ಮ ಕೆಳಗೆ ಸೇವೆ ಮಾಡಲು ಹಾಗೂ ನಾಯಕತ್ವವನ್ನು

ಒದಗಿಸಲು, ಹಲವಾರು ಸೇವೆಯ ವಿಷಯಗಳಿಗೆ ಸ್ತ್ರೀಯರನ್ನು ದೇವರು ಮೇಲಕ್ಕೇರಿಸುತ್ತಾರೆ. ಉದಾಹರಣೆಗೆ ನಿಮ್ಮ ಮಕ್ಕಳ ಸಭೆಯ ಪಾಲಕರು ಬಹುಶಃ ಒಬ್ಬ ಸ್ತ್ರೀಯಾಗಿರಬಹುದು. ನಿಮ್ಮ ಆರಾಧನೆಯ ಸಭಾಪಾಲಕರು ಬಹುಶಃ ಒಬ್ಬ ಸ್ತ್ರೀಯಾಗಿರಬಹುದು. ನೀವು ಒಬ್ಬ ಸ್ತ್ರೀಯು ಪ್ರಾರ್ಥನೆ ಹಾಗೂ ಮಧ್ಯಸ್ಥಿಕೆಯನ್ನು ನಿಮ್ಮ ಸೇವೆಗಾಗಿ ನಡೆಸುವುದಕ್ಕೆ ಹೊಂದಿರಬಹುದು, ಹಾಗೂ ಇತ್ಯಾದಿ. ದೇವರು ಈ ಸ್ತ್ರೀಯರನ್ನು ಪೋಷಿಸಿ, ನಿಮ್ಮ ನಾಯಕತ್ವದಲ್ಲಿ ಎಬ್ಬಿಸಿರುತ್ತಾನೆ. ಅವರು ನಾಯಕರಾಗಿ, ತಮ್ಮ ವರಗಳೊಡನೆ ಕರೆ ಹಾಗೂ ಅಭಿಷೇಕದೊಂದಿಗೆ ಎದ್ದೇಳುತ್ತಿರುವಂತೆ ನೀವು ಅವರನ್ನು ಅಂಗೀಕರಿಸಿ, ಗೌರವಿಸಿ ಯೋಗ್ಯವಾಗಿ ನಡೆಸಬೇಕು.

ಒಬ್ಬ ಸ್ತ್ರೀ ಸೇವಕಿಯು ವಿವಾಹಿತಳಾಗಿದ್ದರೆ, ಪತಿಯು ಆಕೆಯ ತಲೆ, ನೀವು ಆಕೆಯ ತಲೆ ಅಲ್ಲ ಎಂಬುದನ್ನು ನೆನಪಿನಲ್ಲಿಡಿರಿ. ಇದರಿಂದ ಒಬ್ಬ ಸಭಾಪಾಲಕರಾಗಿ ನಿಮ್ಮ ಎಲ್ಲೆಗಳನ್ನು ತಿಳಿಯಿರಿ ಹಾಗೂ ಆಕೆಯ ಪತಿಯ ಅಧಿಕಾರಯುಕ್ತವಾದ ಎಲ್ಲೆಯೊಳಗೆ ಹೆಜ್ಜೆ ಇಡಲು ಪ್ರಯತ್ನಿಸಬೇಡಿ. ನೀವು ಆಕೆಗೆ ಸೂಚನೆ ಹಾಗೂ ಮಾರ್ಗದರ್ಶನವನ್ನು ಆಕೆಯ ಸೇವೆಯ ವಲಯಕ್ಕೆ ಬಂದಾಗ ಕೊಡಿರಿ, ಆದರೆ ಬೇರೆ ಎಲ್ಲಾ ವಲಯಗಳಲ್ಲಿ ಆಕೆಯ ಪತಿಯು ಆಕೆಗಾಗಿ ಜವಾಬ್ದಾರನಾಗಿರುತ್ತಾನೆ. ಸಭಾಪಾಲಕರು ಈ ವಲಯದಲ್ಲಿ ಜಾಗರೂಕರಾಗಿಲ್ಲದೆ ಇರುವಾಗ ಹಾಗೂ ವಿಷಯಗಳನ್ನು ಮಾಡಲು ಆರಂಭಿಸಿ, ಸ್ತ್ರೀಯ ಪತಿಯು ಮಾರ್ಗದರ್ಶನ ಒದಗಿಸಬೇಕಾಗಿರುವಾಗ ಕಾರ್ಯಗಳಿಗೆ ತಲೆಹಾಕಿ, ಸ್ತ್ರೀಯು ತನ್ನ ಸ್ವಂತ ಪತಿಯನ್ನೋ ಅಥವಾ ಸಭಾಪಾಲಕರನ್ನೋ, ಯಾರನ್ನು ಆಲಿಸಬೇಕೆಂಬ ಗೊಂದಲಕ್ಕೊಳಗಾಗುತ್ತಾರೆ. ಸತ್ಯವೇದವು ಹೇಗಾದರೂ ಸ್ಪಷ್ಟವಾಗಿ ಹೇಳುತ್ತದೆ, "ಸ್ತ್ರೀಯರೇ, ನೀವು ಕರ್ತನಿಗೆ ಹೇಗೋ ಹಾಗೆಯೇ ನಿಮ್ಮ ನಿಮ್ಮ ಗಂಡಂದಿರಿಗೆ ಅಧೀನರಾಗಿರ್ರಿ" (ಎಫೆಸದವರಿಗೆ 5:22).

ನಿಮ್ಮ ಸೇವೆಯಲ್ಲಿ ಒಬ್ಬ ಸೇವಕಿಯು ಅಥವಾ ನಾಯಕಿಯು ಅವಿವಾಹಿತರಾಗಿದ್ದರೆ, ಆಗ ನಾವು ಮೊದಲೇ ಹೇಳಿದಂತೆ ನಾಯಕತ್ವವನ್ನು ಹಾಗೂ ಮಾರ್ಗದರ್ಶನವನ್ನು ಒಂದು ಅಂತರದಿಂದ ಒದಗಿಸಬೇಕು. ನಿಮ್ಮ ಭಾವೋದ್ವೇಗಗಳನ್ನು ಕಾಯಿರಿ, ಬೇರೆ ಇತರ ಸ್ತ್ರೀಯರು ಆಕೆಯ ಭಾವನಾತ್ಮಕ ಬೆಂಬಲ ಹಾಗೂ ಒಡನಾಟಕ್ಕೆ ಜೊತೆಗೂಡಲಿ.

## ಅವರನ್ನು ಸಮನಾಗಿ ನಡೆಸಿರಿ, ಹೀಗಿದ್ದರೂ ಸೌಮ್ಯವಾಗಿ ನಡೆಸಿಕೊಳ್ಳಿರಿ

**"ನೀವೆಲ್ಲರೂ ಕ್ರಿಸ್ತ ಯೇಸುವಿನಲ್ಲಿ ಒಂದೇ ಆಗಿರುವವರಿಂದ ಯೆಹೊದ್ಯನು ಗ್ರೀಕನು ಎಂದೂ, ಆಳು ಒಡೆಯ ಎಂದೂ, ಗಂಡು ಹೆಣ್ಣು ಎಂದೂ ಬೇಧವಿಲ್ಲ"** (ಗಲಾತ್ಯದವರಿಗೆ 3:28).

ದೇವರ ವರಗಳು, ಕೃಪೆ, ಅಶೀರ್ವಾದಗಳು, ಹಾಗೂ ಬಲಪಡಿಸುವಿಕೆಗಳು ಪುರುಷರಿಗೆ ಹಾಗೂ ಸ್ತ್ರೀಯರಿಗೆ ಸಮನಾಗಿ ಕೊಡಲ್ಪಟ್ಟಿವೆ. ದೇವರು ಪುರುಷರಿಗೆ ಸ್ತ್ರೀಯರಿಗಿಂತ ಮೇಲಿನ ಆದ್ಯತೆಯನ್ನು ತನ್ನ ಅಭಿಷೇಕ, ವರಗಳು ಹಾಗೂ ಕೃಪೆಯನ್ನು ನೀಡುವಾಗ ಕೊಡಲಿಲ್ಲ. ಪುರುಷರು ಮತ್ತು ಸ್ತ್ರೀಯರು ಒಟ್ಟಾಗಿ ಜೀವವರದಲ್ಲಿ ಬಾಧ್ಯರಾಗಿದ್ದಾರೆ (1 ಪೇತ್ರ 3;7). ಸ್ಥಳೀಯ ಸಭೆ ಮತ್ತು ಸೇವೆಯಲ್ಲಿ ಇದರಿಂದ ನಾವು ಪುರುಷ ಮತ್ತು ಸ್ತ್ರೀಯರನ್ನು ಸಮಾನವಾಗಿ ನಡೆಸಿಕೊಂಡು ಸೇವೆಗೆ, ನಡೆಸುವಿಕೆಗೆ, ಜವಾಬ್ದಾರಿ ಹೊರಲು ಅವಕಾಶಗಳನ್ನು ಒದಗಿಸಬೇಕು. ನಾವು ಅವರನ್ನು ನಡತೆ ಹಾಗೂ ಲೆಕ್ಕ ಒಪ್ಪಿಸುವ ಕಾರ್ಯಕ್ಕೆ ಇದೇ ಮಟ್ಟಗಳಗೆ ಅಂಟಿಕೊಳ್ಳುವಂತೆ ನಿರೀಕ್ಷಿಸಬೇಕು. ಹೇಗಾದರೂ ಇವೆಲ್ಲದರೊಂದಿಗೆ ನಾವೂ ಕೂಡಾ ಸ್ತ್ರೀಯರೊಂದಿಗೆ ವ್ಯವಹರಿಸುವಾಗ ಅವರ ಶಕ್ತಿಗಳು ಮತ್ತು ಬಲಹೀನತೆಗಳೆರಡನ್ನೂ ಗುರುತಿಸಿ ಸೌಮ್ಯವಾಗಿ ನಡೆಸಿಕೊಳ್ಳುವ ತಿಳುವಳಿಕೆ ಹೊಂದಿರಬೇಕು.

## ಅವರ ಬಲಹೀನತೆಯು ನಿಮ್ಮ ಭೂಸ್ಫೋಟಕ-ದೂರ ಇರಿ

ಪುರುಷರು ಮತ್ತು ಸ್ತ್ರೀಯರು ಭಾವೋದ್ವೇಗದ ಅಗತ್ಯತೆಗಳಿವೆ. ಉದಾಹರಣೆಗೆ, ಇಲ್ಲಿ ಸಾಮಾನ್ಯ ಭಾವನಾತ್ಮಕ ಅಗತ್ಯತೆಗಳು ಎಂದರೆ ವಾತ್ಸಲ್ಯ, ಮೆಚ್ಚಿಗೆ, ಹೊಗಳಿಕೆ, ಸಂವಾದ, ಒಡನಾಟ ಹಾಗೂ ಭರವಸೆ –ಈ ಮುಂತಾದವುಗಳು. ಪ್ರತಿಯೊಬ್ಬ ವ್ಯಕ್ತಿಯೂ ಇತರರಿಗಿಂತ ಈ ಅಂಶಗಳಲ್ಲಿ ಕೆಲವಕ್ಕೆ ಹೆಚ್ಚಿನ ಪ್ರಾಮುಖ್ಯತೆ ಕೊಡುತ್ತಾರೆ. ಸಂಧಿಸದ ಅಥವಾ ಪೂರೈಸಲ್ಪಡದ ನಮ್ಮ ಭಾವನಾತ್ಮಕ ಅಗತ್ಯಗಳು ನಮ್ಮ ಬಲಹೀನತೆಗಳ ವಲಯಗಳಾಗಿರುತ್ತವೆ. ನಾವು ಆಗ "ಯಾವುದೋ ರೀತಿಯಲ್ಲಿ ಆ ಅಗತ್ಯತೆಗಳಲ್ಲಿ ಒಂದು ಅಥವಾ ಹೆಚ್ಚು ಅಗತ್ಯತೆಗಳನ್ನು "ತುಂಬಿಸುವ" ಅಥವಾ ಸಂಧಿಸುವ ಯಾರ ಕಡೆಗಾದರೂ "ಆಕರ್ಷಿಸ"ಲ್ಪಡುತ್ತೇವೆ.

ಒಬ್ಬ ವಿವಾಹಿತ ಪುರುಷನು, ಒಬ್ಬ ಸಭಾ ಪಾಲಕನು ಅಥವಾ ಕ್ರೈಸ್ತ ನಾಯಕನಾಗಿ, ನೀವು ನಿಮ್ಮ ಸ್ವಂತ ಪತ್ನಿ ಹಾಗೂ ಮಕ್ಕಳ ಹೊರತಾಗಿ ಬೇರೆ ಯಾವ ಸ್ತ್ರೀಗಾಗಿ ಏನೇನು ಮಾಡಬಾರದೆಂಬುದಕ್ಕೆ ಕೆಲವು ಅಂಶಗಳು ಕೆಳಗೆ ನೀಡಲ್ಪಟ್ಟಿವೆ. ಈ ವಿಷಯಗಳನ್ನು ಒಬ್ಬ ಸ್ತ್ರೀಯ ಪತಿ ಅಥವಾ ಇತರ ಸ್ತ್ರೀಯರಿಗೆ ಬಿಟ್ಟು ಬಿಡಿರಿ.

- ಒಬ್ಬ ಸ್ತ್ರೀಯನ್ನು ಆಕೆಯ ತೋರಿಕೆಗಳ ಬಗ್ಗೆ ಪ್ರಶಂಸಿಸಬೇಡಿರಿ. ಆಕೆಯ ಪತಿ ಅಥವಾ ಇತರ ಸ್ತ್ರೀಯರು ಆಕೆಗಾಗಿ ಇದನ್ನು ಮಾಡಲಿ.
- ಒಬ್ಬ ಸ್ತ್ರೀಗೆ ಆಕೆಯ ಪೋಷಾಕಿನ ಬಗ್ಗೆ ಪ್ರಶಂಸಿಸುವುದನ್ನು ತಡೆಯಿರಿ. ಆಕೆಯ ಪತಿ ಅಥವಾ ಇತರ ಸ್ತ್ರೀಯರು ಇದನ್ನು ಆಕೆಗಾಗಿ ಇದನ್ನು ಮಾಡಲಿ.
- ಒಬ್ಬ ಸ್ತ್ರೀಯ ಜೊತೆಗೆ ಬಹಳಷ್ಟು ಸಂಭಾಷಣೆಯಲ್ಲಿ ಸೇರುವುದನ್ನು ತಡೆಯಿರಿ. ಆಕೆಯ ಪತಿ ಅಥವಾ ಇತರ ಸ್ತ್ರೀಯರು ಅದನ್ನು ಆಕೆಗಾಗಿ ಮಾಡಲಿ.
- ಒಬ್ಬ ಸ್ತ್ರೀಗಾಗಿ ಆಪ್ತ ಜೊತೆಗಾರನಾಗಬೇಡಿರಿ ಅಥವಾ ಭಾವನಾತ್ಮಕ ಬೆಂಬಲವಾಗಿರಲು ಪ್ರಯತ್ನಿಸಬೇಡಿರಿ. ಆಕೆಯ ಪತಿ ಅಥವಾ ಇತರ ಸ್ತ್ರೀಯರು ಆಕೆಗಾಗಿ ಇದನ್ನು ಮಾಡಲಿ.

ಇಲ್ಲಿನ ಅಂಶವೇನೆಂದರೆ, ಬೇರೊಬ್ಬ ಸ್ತ್ರೀಯ ಭಾವನಾತ್ಮಕ ಅಗತ್ಯತೆಗಳನ್ನು ಪೂರ್ಣಗೊಳಸಲು ನೀವು ಪ್ರಯತ್ನಿಸುವ ಪಾತ್ರದೊಳಕ್ಕೆ ಎಂದಿಗೂ ಹೆಜ್ಜೆ ಇಡಬೇಡಿರಿ. ಅದನ್ನು ಆ ಸ್ತ್ರೀಯ ಪತಿ ಅಥವಾ ಇತರ ಸ್ತ್ರೀಯರಿಗಾಗಿ ಬಿಡಿರಿ. ವರ್ಷಗಳ ಕಾಲ, ನಾನು ಉದ್ದೇಶಪೂರ್ವಕವಾಗಿ ಸ್ತ್ರೀಯರಿಂದ ನಾವು ಆರೋಗ್ಯಕರ ಅಂತರವನ್ನು ಉಳಿಸಿಕೊಂಡು ಬಂದೆನು. ಆದರೂ ಕೆಲವು ವೇಳೆ ಜನರು, ನಾನು "ಸ್ನೇಹ ಭಾವ"ವಿಲ್ಲದವನಾಗಿ ಅಥವಾ ಒಂದು ಅಪಾರದರ್ಶಕ ಗೋಡೆಯನ್ನು ಹೊಂದಿರುವುದಾಗಿ ದೂರು ಹೊರಿಸಬಹುದು. ಇದು ನಾನು ಯೋಗ್ಯವಾದ ಪ್ರೀತಿ ಅಥವಾ ಕನಿಕರ ಹೊಂದಿದ್ದೇನೆಂಬುದಾಗಿ ಅಲ್ಲ. ಆದರೆ ನಾನು ಯೋಗ್ಯವಾದ ಪ್ರೀತಿ ಅಥವಾ ಅನುಕಂಪವನ್ನು ಹೊಂದಿಲ್ಲ ಎಂತಲ್ಲ, ಆದರೆ ನಾನು ದೇವರ ಅಥವಾ ಅನುಕಂಪವನ್ನು ಹೊಂದಿಲ್ಲ ಎಂತಲ್ಲ, ಆದರೆ ನಾನು

ದೇವರ ಕರೆಯ ಬಗ್ಗೆ ನನ್ನ ಜೀವಿತದಲ್ಲಿ ಸಾಕಷ್ಟು ತಿಳಿದಿದ್ದೇನೆ, ಹಾಗೂ ಸಾಕಷ್ಟು ಪರಾಂಬರಿಸುತ್ತೇನೆ. ಇದನ್ನು ನಾನು ಎಲ್ಲಿ ಗೆರೆ ಎಳೆಯಬೇಕೆಂದು ತಿಳಿಯಲು ಮಾಡುತ್ತೇನೆ.

## ಒಂದು ವೈಯಕ್ತಿಕ ಸ್ವಯಂ ರಕ್ಷಣಾ ಯೋಜನೆಯೊಂದನ್ನು ಹೊಂದಿರಿ

**"ಜ್ಞಾನವು ನಿನ್ನ ಹೃದಯದೊಳಗೆ ಪ್ರವೇಶಿಸುವದು, ತಿಳುವಳಿಕೆಯು ನಿನ್ನ ಆತ್ಮಕ್ಕೆ ಅಂದವಾಗಿರುವದು. ಬುದ್ಧಿಯು ನಿನಗೆ ಕಾವಲಾಗಿರುವದು, ವಿವೇಕವು ನಿನ್ನನ್ನು ಕಾಪಾಡುವದು"** (ಜ್ಞಾನೋಕ್ತಿಗಳು 2:10,11).

ನಿಮಗಾಗಿ ಮಹಿಳೆಯರಿಗೆ ಹೇಗೆ ಸೇವೆ ಮಾಡುತ್ತೇರಿ ಎಂಬುದನ್ನು ಸ್ಥಾಪಿಸಲು ಕೆಲವು ನಿರ್ದಿಷ್ಟ ಮಾರ್ಗದರ್ಶನಗಳು ನಿಮಗೆ ಬೇಕಾಗಿವೆ, ಇದರಿಂದ ನೀವು ನಿಮ್ಮನ್ನು ಹಾಗೂ ಅವರನ್ನು ಕಾಪಾಡಿಕೊಳ್ಳಿರಿ. ನಾನು ನನಗಾಗಿ ಮಾಡಿಕೊಂಡಿರುವ ಕೆಲವು ಅಂಶಗಳು ಇಲ್ಲವೆ.

- ಒಬ್ಬ ಸ್ತ್ರೀಗಾಗಿ  ಪ್ರಾರ್ಥಿಸುವಾಗ, ನಾನು ನನ್ನ ಕೈಗಳನ್ನು ಇಡುವ ಅಗತ್ಯವಿದೆಯೇ ಎಂದು ಭಾವಿಸಿದರೆ ನಾನು ಅವರ ತಲೆಯ ಮೇಲೆ ಮಾತ್ರ ಕೈಗಳನ್ನಿಡಬೇಕು. ಅವರ ದೇಹದ ಮೇಲೆ ಬೇರೆ ಯಾವ ಭಾಗದ ಮೇಲಾದರೂ ಕೈಗಳನ್ನಿಡುವ ಅಗತ್ಯತೆ ಇದ್ದರೆ, ನಾನು ಅವರ ಸ್ವಂತ ಕೈಯನ್ನು ಅವರೇ ಇಟ್ಟುಕೊಳ್ಳುವಂತೆ ಅಥವಾ ಬೇರೊಬ್ಬ ಸ್ತ್ರೀ ಹಾಗೆ ಮಾಡುವಂತೆ ಮಾಡುತ್ತೇನೆ.
- ಒಬ್ಬ ಸ್ತ್ರೀಯೊಂದಿಗೆ ನಾನು ಸಮಾಲೋಚಿಸಬೇಕಾದರೆ ನಾನು ಆಕೆಯನ್ನು ಒಂದು ಅಥವಾ ಎರಡು ಸಾರಿ ಸಂಧಿಸುತ್ತೇನೆ, ಹಾಗೂ ಮುಂದೆ ಸಮಾಲೋಚನೆಯ ಅಗತ್ಯವಿದ್ದರೆ ನಾನು ಆಕೆಯನ್ನು ಸೇವೆ  ಮಾಡಲು ಸಮರ್ಥರಾಗಿರುವ ಬೇರೊಬ್ಬ ಸ್ತ್ರೀಯ ಬಳಿಗೆ ಕಳುಹಿಸುತ್ತೇನೆ.
- ಏನಾದರೂ ಚರ್ಚೆ ಮಾಡಲು ಒಬ್ಬ ಸ್ತ್ರೀಯೊಂದಿಗೆ ನಾನು ವೈಯಕ್ತಿಕವಾಗಿ ಸಂಧಿಸಬೇಕಾಗಿದ್ದರೆ, ನಾನು ಯಾವಾಗಲೂ ತೀರ ಸಮೀಪದಲ್ಲಿ ಹಾಗೂ ಕಾಣಿಸುವಷ್ಟು ದೂರದಲ್ಲಿ ಇತರರು ಇರುವ ಸ್ಥಳವನ್ನು ಆಯ್ಕೆ ಮಾಡುತ್ತೇನೆ.

- ನಾನು ಒಂದು ಆರೋಗ್ಯಕರ ಅಂತರವನ್ನು ಇಟ್ಟುಕೊಳ್ಳುತ್ತೆನೆ, ಹಾಗೂ ಬಹಳಷ್ಟು ಮಟ್ಟಿಗೆ ಸಾಧಾರಣವಾದ, "ಸ್ನೇಹಭಾವದ" ಸಂವಾದಗಳನ್ನು ಸ್ತ್ರೀಯರೊಂದಿಗೆ ಇಟ್ಟುಕೊಳ್ಳುವುದಿಲ್ಲ.
- ನಾನು ಯುವತಿಯರನ್ನು "ಅಪ್ಪಿಕೊಳ್ಳುವುದನ್ನು" ತಡೆಯುತ್ತೇನೆ ಹಾಗೂ ಸಾಧಾರಣವಾದ ರೀತಿಯಲ್ಲಿ ಕೈಕುಲುಕುತ್ತೇನೆ. ಸ್ತ್ರೀಯರಿಗೆ ನಾನು ಅಪ್ಪುಗೆಗಳನ್ನು ಕುಟುಂಬ ವರ್ಗದವರಿಗಾಗಿ ಹಾಗೂ ಸಾಧಾರಣವಾದ ರೀತಿಯಲ್ಲಿ ಕೈಕುಲುಕುತ್ತೆನೆ. ಸ್ತ್ರೀಯರಿಗೆ ನಾನು ಅಪ್ಪುಗೆಗಳನ್ನು ಕುಟುಂಬ ವರ್ಗದವರಿಗಾಗಿ ಹಾಗೂ ತಾಯಿಯ ವಾತ್ಸಲ್ಯದೊಂದಿಗೆ ನಾನು ನಡೆಸಿಕೊಳ್ಳುವ ಹಿರಿಯ ಸ್ತ್ರೀಯರಿಗೆ ಮೀಸಲಿಡುತ್ತೇನೆ.
- ನಾನು ಬೇರೊಬ್ಬ ಸ್ತ್ರೀಯೊಂದಿಗೆ (ಕುಟುಂಬ ಸದಸ್ಯರ ಹೊರತು) ಸಾಧ್ಯವಾದಷ್ಟುಮಟ್ಟಿಗೆ ಒಂಟಿಯಾಗಿನನ್ನ ಕಾರಿನಲ್ಲಿ ಪ್ರಯಾಣ ಮಾಡುವುದನ್ನು ತಡೆಯುತ್ತೇನೆ, ಇದರಲ್ಲಿ ಏನಾದರೂ ತುರ್ತು ಪರಿಸ್ಥಿತಿಗಳು ಅಥವಾ ಯೋಗ್ಯವಾದ ಅಗತ್ಯತೆಗಳಂಥ ಅಪರೂಪದ ಸಂದರ್ಭಗಳಿರಬಹುದು.

ನಾನು ಒಂದು ಪರಿಪೂರ್ಣವಾದ ಆತ್ಮ ಸಂರಕ್ಷಣೆಯ ಯೋಜನೆಗಾಗಿ "ಬುಲೆಟ್ ಪ್ರೂಫ್" ಅನ್ನು ಪಡೆಯಲು ಹಕ್ಕು ಚಲಾಯಿಸುವುದಿಲ್ಲ, ಕೆಲವರು ನಾನು ಮೇಲೆ ಪಟ್ಟಿಮಾಡಿರುವ ವಿಷಯಗಳಲ್ಲಿ ಕೆಲವನ್ನು ಒಪ್ಪಲಾರರು. ನಾನು ಇವುಗಳನ್ನು ಪ್ರತಿಯೊಬ್ಬರಿಗಾಗಿ ಸುವರ್ಣ ನಿಯಮವಾಗಿ ಒಪ್ಪಿಸುತ್ತಿಲ್ಲ. ನಾನು ಏನು ಮಾಡಬೇಕೆಂದು ತಿಳಿದಿರುತ್ತೇನೋ ಅದನ್ನೇ ನನ್ನನ್ನು ರಕ್ಷಿಸಿಕೊಳ್ಳಲು, ಹೇಗೆಂದು ನಾನು ಅತ್ಯಂತ ಉತ್ತಮವಾದದ್ದೆಂದು ತಿಳಿಯುತ್ತೇನೋ, ಹಾಗೂ ಈ ವಿಷಯಗಳನ್ನು ಹಂಚಿಕೊಳ್ಳಲು ಬಯಸುವಂಥವುಗಳನ್ನೇ ಮಾಡುತ್ತೇನೆ, ಇದರಿಂದ ಯಾವುದು ನಿಮ್ಮ ಸ್ವಂತ ಜೀವಿತ ಹಾಗೂ ಸೇವೆಗೆ ಪ್ರಯೋಜನಕರವೆಂದು ನೀವು ಕಾಣುತ್ತೀರೋ ಅದನ್ನೇ ನೀವು ಅಳವಡಿಸಿಕೊಳ್ಳಬಹುದು.

## ಗುಡ್ ಬೈ! (ಶುಭವಾಗಲಿ), ಪವಿತ್ರವಾದ ಮುತ್ತು

**"ಪವಿತ್ರವಾದ ಮುದ್ದಿಟ್ಟು ಒಬ್ಬರನ್ನೊಬ್ಬರು ವಂದಿಸಿರಿ, ಕ್ರಿಸ್ತನ ಸಭೆಗಳೆಲ್ಲಾ ನಿಮ್ಮನ್ನು ವಂದಿಸುತ್ತವೆ"** (ರೋಮಾಪುರದವರಿಗೆ 16:16).

**"ಸಹೋದರರೆಲ್ಲರು ನಿಮ್ಮನ್ನು ವಂದಿಸುತ್ತಾರೆ. ಪವಿತವಾದ ಮುದ್ದಿಟ್ಟು ಒಬರನ್ನೊಬ್ಬರು ವಂದಿಸಿರಿ" (1 ಕೊರಿಂಥದವರಿಗೆ 16:20).**

**"ಪವಿತ್ರವಾದ ಮುದ್ದಿಟ್ಟು ಒಬ್ಬರನ್ನೊಬ್ಬರು ವಂದಿಸಿರಿ"** (2 ಕೊರಿಂಥದವರಿಗೆ 13:12).

**"ಪವಿತ್ರವಾದ ಮುದ್ದಿಟ್ಟು ಸಹೋದರರೆಲ್ಲರನ್ನೂ ವಂದಿಸಿರಿ"** (1 ಥೆಸಲೋನಿಕದವರಿಗೆ 5:26).

‘‘ಹಿಂದಿನ ಆರಂಭದ ದಿನಗಳಲ್ಲಿ ಮುತ್ತು ಶಾಂತಿ, ಸ್ನೇಹ, ಹಾಗೂ ಸಹೋದರ ಪ್ರೀತಿಗಳ ಒಂದು ಕುರುಹಾಗಿ ಜನರ ನಡುವೆ ಮೇಲಿಂದ ಮೇಲೆ ನೀಡಲ್ಪಡುತ್ತಿತ್ತು ಹಾಗೂ ಕ್ರೈಸ್ತರು ತಮ್ಮ ಸಾರ್ವಜನಿಕ ಕೂಟಗಳಲ್ಲಿ, ತಮ್ಮ ಸಂದರ್ಭಾನುಸಾರವಾಗಿ ಬಳಸುತ್ತಿದ್ದರು. ಇದು ಕೊನೆಗೂ ಪಕ್ಕಕ್ಕಿಡಲ್ಪಟ್ಟಿತು, ಇದು ದುರುಪಯೋಗವೆಂಬುದಕ್ಕಾಗಿ ಅಲ್ಲ, ಆದರೆ ಸಭೆಯು ಬಹು ಹೆಚ್ಚಾಗಿ ಬೆಳೆದ ಕಾರಣ ವಿಷಯವು ಅಸಾಧ್ಯವಾಯಿತು. ಕೆಲವು ರಾಷ್ಟ್ರಗಳಲ್ಲಿ ಇದು ಅಪರೂಪವಾಗಿ, ದುರುಪಯೋಗಕ್ಕೊಳಪಟ್ಟಿಲ್ಲ, ಅಥವಾ ಅದು ಕೆಡುಕಿಗೆ ಪರಿಶ್ರಮಪೂರ್ಣವಾದದ್ದೂ ಆಗಿರಲಿಲ್ಲ, ಏಕೆಂದರೆ ಅದು ಸಾಂಪ್ರದಾಯಿಕವೂ ಸಾಧಾರಣವೂ ಆಗಿತ್ತು. ಹಸ್ತಲಾಘವವು ಇತ್ತೀಚೆಗೆ ಎಲ್ಲ ಕ್ರೈಸ್ತ ಸಭೆಗಳಲ್ಲಿ ಪರ್ಯಾಯವಾಗಿ ನೀಡಲ್ಪಟ್ಟಿದೆ.’’ (ಆಡಮ್ ಕ್ಲಾರ್ಕ್ಸ್ – ಸತ್ಯವೇದದ ಮೇಲಿನ ಸಾರಾಂಶ ವಿವರಣೆ, ಆಡಮ್ ಕ್ಲಾರ್ಕ್ಸ್ ಎಲ್‌ಎಲ್‌ಡಿ ಎಫ್‌ಎಸ್‌ಎ 1715–1832).

ಕೆಲವು ಸಭೆಗಳು ಮುತ್ತು ಕೊಡುವುದರ ಮುಖಾಂತರ ಒಬ್ಬರನ್ನೊಬ್ಬರು ಅಭಿನಂದಿಸುವ ಅಭ್ಯಾಸವನ್ನು ಮುಂದುವರಿಸಲು ಸತ್ಯವೇದವನ್ನು ಬಳಸುತ್ತಾರೆಂದು ನಾನು ಅರಿತುಕೊಳ್ಳುತ್ತೇನೆ. ನಾನು ಇನ್ನೊಬ್ಬ ವ್ಯಕ್ತಿಯ ಅಭ್ಯಾಸ ಅಥವಾ ಆದ್ಯತೆಯನ್ನು ಅಭಿವಂದನೆಯ ವಿಧಾನಕ್ಕಾಗಿ ತೀರ್ಪು ಮಾಡುವುದಿಲ್ಲ. ನಾವು ನಮ್ಮ ಸಭೆಗಳಲ್ಲಿ ಹಾಗೆ ಮಾಡುವುದಿಲ್ಲ, ದುರುಪಯೋಗ ಹಾಗೂ ಭಾವೋದ್ವೇಗದ ಬಂಧನಗಳ ಸಾಧ್ಯತೆಯಿಂದ, ಇದು ಕೂಡಾ ಮುಂದುವರಿಯಬಹುದೆಂಬುದೇ ಇದರ ಕಾರಣ ನನ್ನ ವೈಯಕ್ತಿಕ ಮನಗಾಣುವಿಕೆಯು ಸ್ತ್ರೀಯರನ್ನು ಅಗತ್ಯವಿದ್ದಾಗ, ಒಂದು ಸರಳವಾದ ಹಸ್ತಲಾಘನದಿಂದ ಅಭಿನಂದಿಸುವುದು ಅತ್ಯುತ್ತಮವಾಗಿದೆ. ನಾವು "ಪವಿತ್ರ ಮುತ್ತು’’ ಈ ವಿಷಯವನ್ನು ಅಭ್ಯಾಸ ಮಾಡುವುದಿಲ್ಲ.

## ಮಹಾ ಜಯೋತ್ಸವ ಅಥವಾ ಬಿಕ್ಕಟ್ಟಿನ ಕ್ಷಣಗಳಲ್ಲಿ ಎರಡರಷ್ಟು ಕಾವಲಿನಲ್ಲಿರಿ

**"ಆದಕಾರಣ ನಿಂತಿದ್ದೇವೆಂದು ನೆನಸುವವನು ಬೀಳದಂತೆ ಎಚ್ಚರಿಕೆಯಾಗಿರಲಿ"** (1 ಕೊರಿಂಥದವರಿಗೆ 10:12)

**"ಸ್ವಸ್ಥ ಚಿತ್ತರಾಗಿರಿ, ಎಚ್ಚರವಾಗಿರಿ; ನಿಮ್ಮ ವಿರೋಧಿಯಾದ ಸೈತಾನನು ಗರ್ಜಿಸುವ ಸಿಂಹದೋಪಾದಿಯಲ್ಲಿ ಯಾರನ್ನು ನುಂಗಲಿ ಎಂದು ಹುಡುಕುತ್ತಾ ತಿರುಗುತ್ತಾನೆ"** (1 ಪೇತ್ರನು 5:8).

ಪುರುಷರಾಗಿ ನಾವು ನಮ್ಮ ಬಲಹೀನತೆಯ ಕ್ಷಣಗಳ ಕುರಿತು ಎಚ್ಚರಿಕೆಯಾಗಿರಬೇಕು, ನಾವು ಪುರುಷರಾಗಿ, ಮಹಾ ಜಯೋತ್ಸವ ಸಮಯಗಳಲ್ಲಿ ಹಾಗೂ ಮಹಾ ಬಿಕ್ಕಟ್ಟಿನ ಸಮಯಗಳಲ್ಲಿ ಅಭೇದ್ಯತೆಯನ್ನು ಹೊಂದುತ್ತೆವೆ. ನಾವು ಒಂದು ಮಹಾ ಸಮ್ಮೇಳನವನ್ನು ಮುಗಿಸಿದ ಮೇಲೆ, ಅಥವಾ ಒಂದು ಪ್ರಬಲವಾದ ಆರಾಧನಾ ಕೂಟ, ಅಥವಾ ಸೇವೆಯ ಒಂದು ಫಲಭರಿತ ಸಮಯವನ್ನು ಮುಗಿಸಿದ ಮೇಲೆ ನಾವು ನಮ್ಮ ಕಾವಲಿನವರನ್ನು ಸ್ವಲ್ಪ ಮಟ್ಟಿಗೆ ವಿರಾಮ ನೀಡಲು ಅವಕಾಶ ಕೊಡುತ್ತೇವೆ. ನಾವು ಸ್ವಲ್ಪಮಟ್ಟಿಗೆ "ನಿರಾಳ"ವಾಗಿರಲು ಬಯಸುತ್ತೇವೆ. ನಾವು ವಿಶ್ರಾಂತಿ ಹೊಂದಲು ಬಯಸುತ್ತೇವೆ. ನಾವು ಉಲ್ಲಾಸ ಆಚರಣೆ ಹಾಗೂ ಯಶಸ್ಸಿನ ಭಾವವನ್ನು ಹೊಂದುತ್ತೇವೆ. ಇದು ಈ ಕ್ಷಣಗಳಲ್ಲಿ ನಮ್ಮ ಕಾವಲಿನವರನ್ನು ವಿಶ್ರಾಂತಿಗೆ ಕಳುಹಿಸಲು ಪ್ರಚೋದಿಸಲ್ಪಟ್ಟ ಸಮಯದಿಂದ ನಾವು ಅಭ್ಯೇದ್ಯತೆಯನ್ನು ಹೊಂದುತ್ತೇವೆ. ಅದೇ ರೀತಿಯಲ್ಲಿ ನಾವು ಒಂದು ಬಿಕ್ಕಟ್ಟಿನಲ್ಲಿ ಹೋಗುತ್ತಿರುವಾಗ, ನಮ್ಮ ಭಾವೋದ್ವೇಗಗಳು "ಮಿತಿಮೀರಿ ಕೆಲಸ ಮಾಡು"ವಾಗ, ನಾವು ಕೂಡಾ ಆಯಾಸ ಹೊಂದಿ, ಭಾವನಾತ್ಮಕವಾಗಿ ನೊಂದಾಗ, ಗಾಯಗೊಂಡು ದಣಿದಾಗ ನಾವು ಕೂಡಾ ಬಹಳಷ್ಟು ಗಾಯವಾಗುವ ಸ್ಥಿತಿ ಹೊಂದುತ್ತೇವೆ. ಇಂಥಾ ಕ್ಷಣಗಳಲ್ಲಿ ನಾವು ತಿಳುವಳಿಕೆ, ಪ್ರೀತಿ, ಪ್ರೋತ್ಸಾಹ, ಬೆಂಬಲಗಳ ಅಗತ್ಯ ಹೊಂದಿರುತ್ತೇವೆ, ಹಾಗೂ ನಾವು ಅದನ್ನು ಕಂಡುಕೊಳ್ಳುವ ಎಲ್ಲಿಗಾದರೂ ಹೋಗಲು ಪ್ರಚೋದಿಸಲ್ಪಡುತ್ತೇವೆ. ನಮ್ಮ ವಿವೇಚನೆ ಹಾಗೂ ತೀರ್ಪು ಇವು ಅದರ ಅತ್ಯುತ್ತಮತೆಯಲ್ಲಿಲ್ಲ. ನಾವು ಬಲಹೀನ ತೀರ್ಮಾನಗಳು ಹಾಗು ತಪ್ಪಾದ ಆಯ್ಕೆಗಳನ್ನು ಮಾಡುತ್ತೇವೆ.

ಸಾಮಾನ್ಯವಾಗಿ ಶತ್ರುವು ದಾರಿಗಳಲ್ಲಿ ಬಲಹೀನತೆಯ ಕ್ಷಣಗಳನ್ನು ಗುರುತಿಸುವಾಗ, ನಾವು ಹೆಚ್ಚಾಗಿ ಗಾಯವಾದ ಸ್ಥಿತಿಯಲ್ಲಿರುವಾಗ ತನ್ನ ಚಾಲನೆಗಳು, ಆಕ್ರಮಣಗಳನ್ನು ಮಾಡುತ್ತಾನೆ. ಮಹಾ ಯಶಸ್ಸಿನ ಸಮಯಗಳಲ್ಲಿ, ನೀವು ನಿಮಗೆ, "ಇಷ್ಟಕ್ಕೂ ನಾನು ದೇವರ ರಾಜ್ಯಕ್ಕಾಗಿ ಬಹಳ ಕಷ್ಟಪಟ್ಟು ಕೆಲಸಮಾಡಿದ್ದೇನೆ, ಹೀಗಾಗಿ ಸ್ವಲ್ಪಮಟ್ಟಿಗೆ ಆಶಾ ಪೂರಣೆಯಿದ್ದರೆ ಸಾಕು," ಎಂದು ಹೇಳಿಕೊಳ್ಳಬಹುದು. ಇದರಿಂದ ಶತ್ರುವು ನಿಮ್ಮಿಂದ "ಭ್ರಾಂತಿ"ಗೊಳಪಡಿಸಲ್ಪಡುವ ಒಬ್ಬ ಸ್ತ್ರೀಯನ್ನು ಸ್ಥಾಪಿಸುವುದಾದರೆ, ನಿಮ್ಮ ಯಶಸ್ಸಿನ ಮಹಾ ಮೆಚ್ಚುಗೆಯಲ್ಲಿ ಹಾಗೂ ನಿಮ್ಮ ಸೊಕ್ಕನ್ನು ಬಡಿಯುವುದರಲ್ಲಿ ನೀವು ಬಹು ಸುಲಭವಾಗಿ ಬಿದ್ದು ಹೋಗುತ್ತೀರಿ. ಅದೇ ರೀತಿಯಲ್ಲಿ, ನೀವು ಒಂದು ಮಹಾ ಬಿಕ್ಕಟ್ಟಿನಲ್ಲಿ ಹಾಗೂ ನೋವಿನಲ್ಲಿ ಹಾದು ಹೋಗುವಾಗ, ಶತ್ರುವು ನಿಮ್ಮೊಂದಿಗೆ ಒತ್ತಡ ಹೇರುವ, ನಿಮ್ಮನ್ನು ಆಲಿಸುವ, ಆದರಣೆಯ ಮಾತುಗಳನ್ನಾಡುವ, ಸಂತೈಸುವ ಹಾಗೂ ಪ್ರೋತ್ಸಾಹದ ನುಡಿಗಳನ್ನು ಹೇಳುವ ಒಬ್ಬ ಯುವತಿಯನ್ನು ಸಿದ್ಧಪಡಿಸಿದರೆ, ಆ ಕ್ಷಣದಲ್ಲಿ ಭಾವನಾತ್ಮಕವಾದ ಬಲೆಯಲ್ಲಿ ಸುಲಭವಾಗಿ ಸಿಕ್ಕಿಬೀಳಬಹುದು. ಆದಕಾರಣ ಮಹಾ ಜಯೋತ್ಸವದ ಹಾಗೂ ಮಹಾ ಬಿಕ್ಕಟ್ಟಿನ ಕ್ಷಣಗಳಲ್ಲಿ ನೀವು ಬಹಳ ಗಾಯವಾಗುವ ಸಂದರ್ಭ ಇದೇ ಎಂಬುದನ್ನು ಗುರುತಿಸಿಕೊಳ್ಳಿರಿ. ಎರಡರಷ್ಟು ಕಾವಲು ಹೊಂದಿರಿ. ಆ ಕ್ಷಣಗಳಲ್ಲಿ ಉತ್ತಮವಾದ ತೀರ್ಮಾನಗಳನ್ನು ಮಾಡುವುದನ್ನು ತಡೆಗಟ್ಟಿರಿ. ಸಂಗತಿಗಳು "ಶಾಂತವಾಗುವ"ವರೆಗೆ ಕಾಯಿರಿ, ನೀವು ವಿಶ್ರಮಿಸುವವರೆಗೆ ಕಾಯಿರಿ. ನೀವು ಚೆನ್ನಾಗಿ ತಿಳಿದಿರುವ, ಹಾಗೂ ಭರವಸೆ ಇಡುವ ಜನರ ಸುತ್ತಲೂ ಉಳಿಯಿರಿ.

## ನಿಮ್ಮ ವಾತ್ಸಲ್ಯಗಳನ್ನು ಕಾಯಿರಿ

**"ನಿನ್ನ ಹೃದಯವನ್ನು ಬಹು ಜಾಗರೂಕತೆಯಿಂದ ಕಾಪಾಡಿಕೋ; ಅದರೊಳಗಿಂದ ಜೀವಧಾರೆಗಳು ಹೊರಡುವವು"** (ಜ್ಞಾನೋಕ್ತಿಗಳು 4:23).

**"ನಿಜವಾದ ಸುನ್ನತಿಯವರು ಯಾರೆಂದರೆ-ದೇವರಾತ್ಮನಿಂದ ಪ್ರೇರಿತರಾಗಿ ಆರಾಧಿಸುವವರೂ ಕ್ರಿಸ್ತಯೇಸುವಿನಲ್ಲಿ ಹರ್ಷಗೊಳ್ಳುವವರೂ ಶರೀರ ಸಂಬಂಧವಾದವುಗಳಲ್ಲಿ ಭರವಸೆವಿಲ್ಲದವರೂ ಆಗಿರುವ ನಾವೇ"** (ಫಿಲಿಪ್ಪಿಯವರಿಗೆ 3:3).

ನೀವು ಬಹುಶಃ ನೀತಿವಂತ ವ್ಯಕ್ತಿಯಾಗಿರಬಹುದು, ಬಹುವರ ಸಂಪನ್ನನಾದ ಹಾಗೂ ಬಹುವಾಗಿ ಅಭಿಷೇಕ ಹೊಂದಿದವನೂ

ಆಗಿರಬಹುದು. ಆದರೆ ನೀವು ಯಾರು ಅಥವಾ ಏನೇ ಆಗಿದ್ದರೂ ಸರಿ, ನಿನ್ನ ಶರೀರವು ಬಲಹೀನವಾದದ್ದು ಹಾಗೂ ಕಷ್ಟದಲ್ಲಿ ಮುಳುಗಿರುತ್ತದೆ. ನಿನ್ನ ಶರೀರದ ಮೇಲೆ ನಿಮಗೆ ಯಾವ ನಂಬಿಕೆಯೂ ಇರಲಾರದು. ನಿಮ್ಮ ಶರೀರದ ಮೇಲೆ ನೀವು ಭರವಸೆ ಇಡಬೇಡಿ.

ಪಿಶಾಚನು ಸುತ್ತುಮುತ್ತಲೂ ಇಲ್ಲದೆ ಇರುವಾಗಲೂ ಅವನ ಕಾರ್ಯ ಮಾಡಲು ಶರೀರ ನಂಬಿಗಸ್ತಿಕೆಯುಳ್ಳದ್ದಾಗಿರುತ್ತದೆ. ಯಾಕೋಬನು ಬಹುಸ್ಪಷ್ಟವಾಗಿ ನಮಗೆ ಹೇಳುತ್ತಾನೆ. "ಆದರೆ ಪ್ರತಿಯೊಬ್ಬನೂ ತನ್ನಲ್ಲಿರುವ ಆಶಾಪಾಶದಿಂದ ಎಳೆಯಲ್ಪಟ್ಟು ಮರುಳುಗೊಂಡವನಾಗಿ ಪ್ರೇರೇಪಿಸಲ್ಪಡುತ್ತಾನೆ" (ಯಾಕೋಬನು 1:14). ನಮ್ಮ ಸ್ವಂತ ಶರೀರದಾಶೆಗಳೇ, ನಮ್ಮನ್ನು ಸೆಳೆದು ಹಾಕುತ್ತವೆ, ನಮ್ಮ ಇಚ್ಛೆಯನ್ನು ಬಲಹೀನಗೊಳಿಸುತ್ತವೆ ಹಾಗೂ ನಮ್ಮನ್ನು ಶೋಧನೆಗೆ ನಡಿಸುತ್ತದೆ. ಪಿಶಾಚನ ಉದ್ಯೋಗವು, ನಮ್ಮ ಶರೀರದಾಶೆಗಳನ್ನು ಕಲುಕುವಂಥದ್ದಾಗಿರುತ್ತದೆ.

ಸ್ತ್ರೀಯರಲ್ಲಿ ಮತ್ತು ಅವರ ಮುಖಾಂತರ ದೇವರು ಏನು ಮಾಡುತ್ತಾನೆಂಬುದನ್ನು ನಾವು ಪ್ರೀತಿಸಿ, ಗೌರವಿಸಿ, ಪ್ರಶಂಸಿಸುವ ಸಂದರ್ಭದಲ್ಲಿ ನಾವು ಪುರುಷರಾಗಿ ನಮ್ಮ ಸ್ವಂತ ಬಲಹೀನತೆಗಳನ್ನು ನೆನಪುಮಾಡಿಕೊಳ್ಳಬೆಕು. ಈ ವಲಯದಲ್ಲಿ ನಾವು ನಮ್ಮನ್ನೇ ನಂಬಲು ಅಸಾಧ್ಯ. ನಮ್ಮ ಒಂದೇ ಒಂದು ಐಚ್ಛಿಕ ಅಂಶವು ನಮ್ಮ ವಾತ್ಸಲ್ಯಗಳನ್ನು ಗಮನಿಸುವುದು ಹಾಗೂ ನಮ್ಮನ್ನು ಮುಂದುವರಿದು ಕಾಯ್ದುಕೊಳ್ಳುವುದು. ಶೋಧನೆಗಳು ಬರುತ್ತವೆ. ಆದರೆ ನಾವು ಈ ವಲಯದಲ್ಲಿ ಶೋಧನೆಗೊಳಗಾಗದಂತೆ ಎಡೆಬಿಡದೆ ನಿಗಾವಹಿಸಿ ಪ್ರಾರ್ಥಿಸಬೇಕು.

## ಆತ್ಮ ಸಂಬಂಧ (ಸೇತುವೆ)ಗಳನ್ನು ವಿವೇಚಿಸಿರಿ ಅಥವಾ ನಾಶಮಾಡಿರಿ

**"ಸೈತಾನನು ನಮ್ಮನ್ನು ವಂಚಿಸಿ ನಷ್ಟಪಡಿಸಬಾರದು; ಅವನ ಯೋಚನೆಗಳನ್ನು ನಾವು ಅರಿಯದವರಲ್ಲವಲ್ಲಾ"** (2 ಕೊರಿಂಥದವರಿಗೆ 2:11).

**"ನಾವು ಉಪಯೋಗಿಸುವ ಆಯುಧಗಳು ಲೋಕ ಸಂಬಂಧವಾದ ಆಯುಧಗಳಲ್ಲ, ಅವು ದೇವರ ಎಣಿಕೆಯಲ್ಲಿ ಬಲವಾಗಿದ್ದು ಕೋಟೆಗಳನ್ನು ಕೆಡವಿ ಹಾಕುವಂಥವುಗಳಾಗಿವೆ. ನಾವು ವಿತರ್ಕಗಳನ್ನೂ ದೇವಜ್ಞಾನವನ್ನು ವಿರೋಧಿಸುವುದಕ್ಕೆ ಏರಿಸಲ್ಪಟ್ಟಿರುವ ಉನ್ನತವಾದ ಎಲ್ಲಾ ಕೊತ್ತಲಗಳನ್ನೂ ಕೆಡವಿಹಾಕಿ ಎಲ್ಲಾ ಯೋಚನೆಗಳನ್ನು ಕ್ರಿಸ್ತನಿಗೆ ವಿಧೇಯವಾಗುವಂತೆ ಸೆರೆಹಿಡಿದು ನಿಮ್ಮ ವಿಧೇಯತ್ವವು ಪರಿಪೂರ್ಣವಾದ ಮೇಲೆ ಎಲ್ಲಾ ಅವಿಧೇಯತ್ವಕ್ಕೆ ಶಿಕ್ಷೆ ಮಾಡುವುದಕ್ಕೆ ಸಿದ್ಧರಾಗಿದ್ದೇವೆ"** (2 ಕೊರಿಂಥದವರಿಗೆ 10:4–6).

ಶತ್ರುವಿನ ಮೊದಲನೆ ಆಕ್ರಮಣ ಮಾಡುವ ವಲಯವು ಮನಸ್ಸು ಆಗಿರುತ್ತದೆ. ಆಲೋಚನೆಗಳು, ಅಭಿಪ್ರಾಯಗಳು ಕಲ್ಪನೆಗಳನ್ನು ಅಂದರೆ ದೇವರ ಜ್ಞಾನಕ್ಕೆ ವಿರುದ್ಧವಾದ ದೈವಿಕವಲ್ಲದ ಅಂಶಗಳನ್ನು ಅವನು ಬಿತ್ತುತ್ತಾನೆ. ನಾವು ಶಾರೀರಿಕ ದುರಾಶೆಗಳನ್ನು ಹಾಗೂ ದೈವಿಕವಲ್ಲದ ಆಲೋಚನೆಗಳನ್ನು ಇಳುವರಿ ಮಾಡಿದರೆ, ನಾವು ನಮ್ಮ ಜೀವಿತಗಳಲ್ಲಿ ದೇವರ ಆಶೀರ್ವಾದಗಳ ಹಕ್ಕು ಕಳೆದುಕೊಳ್ಳುತ್ತೇವೆ. ಶತ್ರುವು ಸ್ತ್ರೀಯರು ಪುರುಷರಾದ ನಮಗೆ ಬಲಹೀನತೆಯ ಒಂದು ವಲಯವಾಗಿದ್ದಾರೆಂದು ತಿಳಿದಿದೆ. ಶತ್ರುವು "ಜೀವಾತ್ಮನ" (ಭಾವನಾತ್ಮಕ) ಆಕರ್ಷಣೆಗಳೊಂದಿಗೆ, ಸ್ತ್ರೀಯರೊಂದಿಗೆ ಹೊಂದಿಸಲು ಮತ್ತು ಸಂಬಂಧ ಕಟ್ಟಲು (ಸೇತುವೆಗಳು) ಪ್ರಯತ್ನಿಸಿ, ಸಿದ್ಧಮಾಡುತ್ತಾನೆ. ಶತ್ರುವಿನ ತಂತ್ರಗಳೇನು ಎಂಬುದರ ಬಗ್ಗೆ ಎಚ್ಚರಿಕೆಯಾಗಿರ್ರಿ ಶಾಂತ ಚಿತ್ತರಾಗಿರ್ರಿ. ಮೂರ್ಖತನದಿಂದ ಮುಂದೆ ಹೋಗಬೇಡಿರಿ. ಶಾಂತಚಿತ್ತರಾಗಿರ್ರಿ, ಅಲ್ಲದೆ ಜಾಗರೂಕರಾಗಿರ್ರಿ. ಏನಾದರೂ ಮಾಡಲು ಶತ್ರುವು ಪ್ರಯತ್ನ ಮಾಡುವುದನ್ನು ನೀವು ಕಂಡುಕೊಂಡರೆ, ವಿವೇಚನೆಯಿಂದ, ನಿಮ್ಮಲ್ಲಿರುವ ದೈವದತ್ತವಾದ ಆಯುಧಗಳನ್ನು ಬಳಸಿ ಅವುಗಳನ್ನು ನಾಶಮಾಡಿರಿ. ನಿಮ್ಮ ಹೃದಯದಿಂದ ಅದನ್ನು ನಿಭಾಯಿಸಿರಿ. ನಿಮ್ಮ ಹೃದಯ ಮತ್ತು ಮನಸ್ಸನ್ನು ದೇವರ ವಾಕ್ಯದಿಂದ ಕಾಯಿರಿ. ಈ ವಲಯದಲ್ಲಿ ನಿಮ್ಮ ವಿರೋಧವಾಗಿ ಬರುವ ಶತ್ರುವಿನ ಯಾವುದೇ ಕೆಲಸವನ್ನು ಗದರಿಸಿ, ಹರಿದು ಬಿಸಾಡಿರಿ. ನಂಬಿಕೆಯ ಒಳ್ಳೇ ಹೋರಾಟವನ್ನು ಮಾಡು. ನಿತ್ಯಜೀವವನ್ನು ಹಿಡಿದುಕೋ. ಅದರಿಂದ ದೂರ ಹೋಗದೆ ಇರು. ಪೇಚಿನಲ್ಲಿ ಬಹಳವಿದೆ. ನಂಬಿಕೆಯ ಹೋರಾಟವು ಬೆಲೆಯುಳ್ಳ ಹೋರಾಟವಾಗಿದೆ. ಗೆಲ್ಲಲು ಹೋರಾಡು!



# ಕೀರ್ತಿ

"ಒಬ್ಬನೇ ದೇವರಿಂದ ಬರುವಂಥ ಮಾನವನು ಅಪೇಕ್ಷಿಸದೆ, ಒಬ್ಬರಿಂದೊಬ್ಬರು ಮಾನವನ್ನು ಅಂಗೀಕರಿಸುವವರಾದ ನೀವು ಹೇಗೆ ನಂಬಿರಿ?"

(ಯೋಹಾನ 5:44)

ಅಧ್ಯಾಯ 11

# 11

# ಕೀರ್ತಿ

ಈ ಅಧ್ಯಾಯದಲ್ಲಿ, ಕೀರ್ತಿ, ಪ್ರಸಿದ್ಧಿ, ಜಯಪ್ರಿಯತೆಗಳ ಪರಿಣಾಮದೊಂದಿಗೆ ವ್ಯವಹರಿಸುತ್ತೇವೆ—ಇದು ಕ್ರೈಸ್ತ ಸೇವಕರಲ್ಲಿ ಹಲವಾರು ಮಂದಿ ನಾವು ಹೋರಾಡುತ್ತಿರುವ ಮತ್ತೊಂದು ದೊಡ್ಡ ವಲಯವಾಗಿದೆ. ನಾವು ಗುರುತಿಸಲ್ಪಟ್ಟಾಗ, ದೃಢೀಕರಿಸಲ್ಪಟ್ಟು, ಶ್ಲಾಘಿಸಲ್ಪಟ್ಟು; ಆಹ್ವಾನಿಸಲ್ಪಟ್ಟಾಗ ನಾವು, "ಒಳ್ಳೆಯ ಭಾವನೆ" ಹೊಂದುತ್ತೇವೆ. ನಮ್ಮಲ್ಲಿ ಕೆಲವರು ಕುಗ್ಗಿದ ಭಾವನೆ ಹೊಂದಿಕೊಳ್ಳುತ್ತೇವೆ ಹಾಗೂ ಕರ್ತನಿಂದ ಅನುಗ್ರಹ ಹೊಂದುವುದಿಲ್ಲ. ಜನರಿಂದ ನಾವು ಗುರುತಿಸಲ್ಪಟ್ಟು ಚಪ್ಪಾಳೆ ಹೊಡೆತ ಪಡೆಯದೆ ಇರುವಾಗ ನಮಗೆ ಬರಬೇಕಾಗಿತ್ತು ಎಂದು ಆಲೋಚಿಸುತ್ತೇವೆ. ನಮ್ಮ ಒಡೆಯನು, ಜನರು ತನ್ನ ಬಗ್ಗೆ ಏನು ಯೋಚಿಸುತ್ತಾರೆ ಹಾಗೂ ಹೇಳುತ್ತಾರೆಂಬುದಕ್ಕಿಂತ ಮೇಲೆ ಜೀವಿಸಿದನು ಆತನು *"ನಾನು ಮನುಷ್ಯರಿಂದಾಗುವ ಮಾನವನ್ನು ಅಂಗೀಕರಿಸುವುದಿಲ್ಲ"* ಎಂದನು (ಯೋಹಾನ 5:41).

ದಾರಿಯುದ್ದಕ್ಕೂ ಒಂದು ಕಡೆ ನಾವು ಯೇಸುವಿನ ಕಡೆ ಕೇಂದ್ರೀಕರಿಸುವುದರಿಂದ ದೂರವಾಗಿ ಅಲೆಯುತ್ತಿದ್ದೆವು. ಹಾಗೂ ಈ ದಿನದ ಕ್ರೈಸ್ತೀಯತೆಯು ವ್ಯಾಪಾರ ವಹಿವಾಟು, ಕಾರ್ಯ ಅಭಿವೃದ್ಧಿಗಳು, ಪ್ರಸಿದ್ಧತೆಯ ಕಾರ್ಯಾಚರಣೆಗಳನ್ನು ಮೃದುಗೊಳಿಸಲು ಒಂದು ಸಾದೃಶ್ಯವನ್ನು ತೆಗೆದುಕೊಂಡಿದೆ. ಕೀರ್ತಿ ಅಥವಾ ಮಾನನಷ್ಟ ಯಾವುದರ ಬಗ್ಗೆಯೂ ಗಣನೆ ಮಾಡದ ನಮ್ಮ ಒಡೆಯನು ಹಾಗೂ ಅಪೊಸ್ತಲರಂತೆಯೇ ನಾವು ಆಗುತ್ತೇವೆ. ಈ ದಿನ, ನಮ್ಮಲ್ಲಿರುವ ಬೋಧಕರು ರಾಜಕೀಯ ವ್ಯಕ್ತಿಗಳೊಂದಿಗೆ ಅಥವಾ ಪ್ರಖ್ಯಾತ ವ್ಯಕ್ತಿಗಳೊಂದಿಗೆ ವೇದಿಕೆಯ ಮೇಲೆ, ತಮ್ಮ ಸ್ವಂತ ಸೇವೆಯ ಕುರಿತು ಬೇಡಿಕೆ ಸಲ್ಲಿಸಲು ತಮ್ಮ ಸ್ನೇಹವನ್ನು ತೋರ್ಪಡಿಸುವುದನ್ನು ನಾವು ನೋಡುತ್ತೇವೆ. ಸೇವೆಯ ವೆಬ್‌ಸೈಟ್‌ಗಳು, ಸುದ್ದಿ ಪತ್ರಿಕೆಗಳು, ವಾರಪತ್ರಿಕೆಗಳು "ದೇವರ ಮನುಷ್ಯನ" ಚಿತ್ರಗಳೊಂದಿಗೆ ನಾಚಿಕೆಯಿಲ್ಲದೆ

ಸಿಡಿಯುವುದು ಕಾಣುತ್ತದೆ. ಪ್ರತಿಯೊಂದೂ ಅವನ ಕುರಿತಾಗಿ, ಅವನ ಅಭಿಷೇಕ, ಅವನ ಕೀರ್ತಿ, ಅವನ ಪ್ರಪಂಚಾದ್ಯಂತ ಸೇವೆಗಳ ಕುರಿತಾಗಿ ಇರುತ್ತದೆ. ಜೀವಂತ ಅಳತೆಗಿಂತ ದೊಡ್ಡದಾದ ಭಿತ್ತಿಪತ್ರಗಳು, ದೇವರ ಮನುಷ್ಯನ ಕಟೌಟ್‌ಗಳು ಪ್ರಾರ್ಥನಾಕೂಟ ನಡೆಯುವ ಸ್ಥಳವನ್ನೆಲ್ಲಾ, ಸಭೆ ಸೇರುವ ಸ್ಥಳ, ದೇವಾಲಯದ ಕಟ್ಟಡ್ಡ ಎಲ್ಲವನ್ನೂ ತುಂಬಿಕೊಂಡಿರುತ್ತವೆ. ಆಲೋಚಕರಲ್ಲದ ವಿಶ್ವಾಸಿಗಳು ದೇವರ ಮನುಷ್ಯನನ್ನು ಹಿಂಬಾಲಿಸುತ್ತಾ ಆತನನ್ನು ದೇವಾಂಶ ಸಂಭೂತನೆಂದೂ, ಕ್ರೈಸ್ತ ನಂಬಿಕೆಯ ಒಬ್ಬ "ಹೀರೋ" ಎಂದೂ ಬಹುಮಟ್ಟಿಗೆ ಆರಾಧಿಸಲು ಹೋಗುತ್ತಾರೆ. ಇವೆಲ್ಲದರಲ್ಲಿಯೂ ಯೇಸುವು ಎಲ್ಲಿದ್ದಾನೆಂದು ನೀವು ಆಶ್ಚರ್ಯ ಪಡುವಿರಿ. ಅಪೊಸ್ತಲರು ಹೇಳಿದರು: *"ನಮ್ಮನ್ನೇ ಪ್ರಸಿದ್ಧಿಪಡಿಸಿಗೊಳ್ಳದೆ ನಮ್ಮನ್ನು ಯೇಸುವಿನ ನಿಮಿತ್ತ ನಿಮ್ಮ ದಾಸರೆಂತಲೂ ಕ್ರಿಸ್ತೇಸುವನ್ನೇ ಕರ್ತನೆಂತಲೂ ಪ್ರಸಿದ್ಧಿ ಪಡಿಸುತ್ತೇವೆ"* (2 ಕೊರಿಂಥದವರಿಗೆ 4:5).

## ಒಳ್ಳೆಯ ಹೆಸರು ಪ್ರಾಮುಖ್ಯವಾದದ್ದು, ಆದರೆ ಕೀರ್ತಿಯಲ್ಲ

**"ಬಹುಧನಕ್ಕಿಂತಲೂ ಒಳ್ಳೆಯ ಹೆಸರು ಉತ್ತಮ; ಬೆಳ್ಳಿ ಬಂಗಾರಕ್ಕಿಂತಲೂ ಸತ್ಕೀರ್ತಿಯು ಅಮೂಲ್ಯ"** (ಜ್ಞಾನೋಕ್ತಿಗಳು 22:1).

**"ಸುಗಂಧ ತೈಲಕ್ಕಿಂತ ಒಳ್ಳೆಯ ಹೆಸರು ಉತ್ತಮ; ಜನನ ದಿನಕ್ಕಿಂತ ಮರಣದಿನ ಮೇಲು"** (ಪ್ರಸಂಗಿ 7:1).

ಒಳ್ಳೇ ಹೆಸರನ್ನು ಪಡೆದುಕೊಳ್ಳುವುದು ಪ್ರಾಮುಖ್ಯವಾದದ್ದು ಒಬ್ಬರು ಜೀವಿಸುವ ಜೀವಿತದಿಂದಲೇ ಒಂದು ಒಳ್ಳೇ ಹೆಸರು ಬರುತ್ತದೆ. ಮಹಾ ಕೀರ್ತಿಯು ಮೃದುಗೊಳಿಸುವ ವ್ಯವಹಾರ, ಮುಕ್ತ ಸಾಮಾಜಿಕ ಮಾಧ್ಯಮ ತಂತ್ರಗಳಿಂದ ಗಳಿಸಲ್ಪಡುತ್ತದೆ. ಒಳ್ಳೇ ಹೆಸರು, ಸ್ಥಿರವಾದ ನಡತೆಯ ಮುಖಾಂತರ ಬರುತ್ತದೆ. ಒಂದು ಒಳ್ಳೇ ಹೆಸರು ನಿಮಗೆ ಕೊಡಲ್ಪಟ್ಟಿದೆ. ಕೀರ್ತಿಯು ನೀವು ನಿಮಗಾಗಿ ಹಿಂಬಾಲಿಸುವಂಥದ್ದು ಕೀರ್ತಿಯು ಮಾಯವಾಗುತ್ತದೆ. ಒಂದು ಒಳ್ಳೇ ಹೆಸರು ಹೀಗೆ ಹೇಳುತ್ತದೆ, *"ಶಿಷ್ಟರ ಸ್ಮರಣೆಯು ಆಶೀರ್ವಾದಕ್ಕಾಸ್ಪದ"* (ಜ್ಞಾನೋಕ್ತಿಗಳು 10:7).

ನಮ್ಮ ಕೇಂದ್ರೀಕರಣವು ಕ್ರಿಸ್ತನಂತಿರುವಿಕೆಯನ್ನು ಹಿಂಬಾಲಿಸುತ್ತದೆ ಹಾಗೂ ಯೇಸುವು ಜೀವಿಸಿದಂತೆ ಜೀವಿಸುತ್ತದೆ. ಈ ಪ್ರಕ್ರಿಯೆಯಲ್ಲಿ ನಾವು ಹಾಸ್ಯವನ್ನು, ಸುಳ್ಳು ಅಪವಾದಗಳನ್ನು ಹಾಗೂ ಹಿಂಸೆಗಳನ್ನು

ಎದುರಿಸಬಹುದು, ನಾವು ಮಾನನಷ್ಟ, ಅಪಮಾನ ಹಾಗೂ ಹಾಸ್ಯವನ್ನು ಕುರಿತು ಭಯಪಡುವ ಅಗತ್ಯವಿಲ್ಲ *"ಅವರು ಮನೆಯ ಯಜಮಾನನಿಗೆ ಬೆಲ್ಜೆಬೂಲನೆಂದು ಹೆಸರಿಟ್ಟ ಮೇಲೆ ಆತನ ಮನೆಯವರನ್ನು ಏನಂದಾರು!* (ಮತ್ತಾಯ 10:25ಬಿ) ಸಮಯದೊಂದಿಗೆ, ನಾವು ಜೀವಿಸುವ ಜೀವಿತವನ್ನು ನೋಡುವವರು ಯೇಸುವನ್ನು ನಮ್ಮಲ್ಲಿ ಕಾಣುತ್ತಾರೆ. ಒಳ್ಳೇ ಹೆಸರು ತನ್ನ ಸಮಯದಲ್ಲಿ ಬರುತ್ತದೆ.

ಒಂದು ಹೊಳೆಯುವ ನಕ್ಷತ್ರವಾಗಿರಿ—ಚುಚ್ಚುವ ನಕ್ಷತ್ರವಲ್ಲ. ಇಲ್ಲಿ, ಈ ದಿನ, ಹೋಯಿತು ಹಾಗೂ ನಾಳೆ ಮರೆಯಿತು.

## ಮನುಷ್ಯರನ್ನು ಸಂತೋಷಪಡಿಸುವವನಾಗಬೇಡರಿ

**"ನಾನೀಗ ಯಾರನ್ನು ಒಲಿಸಿಕೊಳ್ಳುತ್ತಾ ಇದ್ದೇನೆ? ಮನುಷ್ಯರನ್ನೋ? ದೇವರನ್ನೋ? ನಾನು ಮನುಷ್ಯರನ್ನು ಮೆಚ್ಚಿಸುವುದಕ್ಕೆ ಪ್ರಯತ್ನಿಸುತ್ತಾ ಇದ್ದೇನೋ? ಇನ್ನೂ ಮನುಷ್ಯರನ್ನು ಮೆಚ್ಚಿಸುವವನಾಗಿದ್ದರೆ ನಾನು ಕ್ರಿಸ್ತನ ದಾಸನಲ್ಲ"** (ಗಲಾತ್ಯದವರಿಗೆ 1:10).

ನಮ್ಮೊಳಗೆ ನೆಲೆಗೊಳಸಿಕೊಳ್ಳಬೇಕಾದ ವಿಷಯಗಳಲ್ಲಿ ಒಂದು ಹಾಗೂ ನಮ್ಮ ಸೇವೆಯನ್ನು ನಾವು ಆರಂಭಿಸುವಾಗ ಮಾಡಬೇಕಾದ ಅತ್ಯುತ್ತಮ ಅಂಶವು ಯಾವುದೆಂದರೆ ದೇವರನ್ನು ಮೆಚ್ಚಿಸುವ ಒಂದೇ ಆಶೆ ನಮ್ಮದಾಗಿರಬೇಕು. ನಾವು ಪರಲೋಕದ ಶ್ಲಾಘನೆಗಾಗಿ ಜೀವಿಸುತ್ತೇವೆ, ಆದರೆ ಮನುಷ್ಯನು ನೀಡುವ ಪದವಿ ಪುರಸ್ಕಾರಕ್ಕಾಗಿ ಅಲ್ಲ. ನಮ್ಮ ಹೃದಯಗಳಲ್ಲಿ ಇದು ನೆಲೆಗೊಳ್ಳಬೇಕಾದರೆ, ನಾವು ಜನರ ಕಿವಿಗಳನ್ನು ಸಂತೋಷಗೊಳಸುವ ಸಂದೇಶಗಳನ್ನು ಬೋಧಿಸುವುದರಲ್ಲಿ ನಾವು ಹೋರಾಟ ಮಾಡಬೇಕಾಗಿಲ್ಲ. ಪ್ರಭಾವಿತರನ್ನಾಗಿ ಮಾಡುವುದಕ್ಕಾಗಿ ಬೋಧಿಸಬೇಕಾಗಿಲ್ಲ. ಆದರೆ ಪ್ರತ್ಯೇಕಿಸುವುದಕ್ಕಾಗಿ ನಾವು ಜನರು ನಮ್ಮನ್ನು ಹಿಂಬಾಲಿಸಲಿಕ್ಕಾಗಿ ಸಂದೇಶಗಳನ್ನು ಸಾರುವುದಿಲ್ಲ, ಆದರೆ ಜನರು ಯೇಸುವನ್ನು ಅನುಸರಿಸುವಂತೆ ಮಾಡಲು ಜನರು ನಮ್ಮನ್ನು ಬಿಟ್ಟರೆ, ನಮ್ಮನ್ನು ಟೀಕಿಸಿದರೆ, ನಮ್ಮ ಸಭೆಯನ್ನು ಬಿಟ್ಟರೆ, ಅಥವಾ ನಮ್ಮ ಸೇವೆಗೆ ಬೆಂಬಲ ನೀಡುವುದನ್ನು ನಿಲ್ಲಿಸಿದರೆ, ನಾವು ಸುಲಭದಲ್ಲಿ ಅಪರಾಧಕ್ಕೊಳಗಾಗುವುದಿಲ್ಲ. ನಮ್ಮನ್ನು ಯಾರೂ ಪ್ರಶಂಸಿಸದಿದ್ದರೆ, ಬೆಂಬಲಿಸದಿದ್ದರೆ ಅಥವಾ ಶ್ಲಾಘಿಸದಿದ್ದರೆ, ನಾವು ಸಂಕಟಕ್ಕೊಳಗಾಗುವುದಿಲ್ಲ. ಈ ಯಾವ ವಿಷಯಗಳೂ ನಮ್ಮ ಮೇಲೆ

ಗಂಭೀರವಾಗಿ ಪರಿಣಾಮ ಬೀರುವುದಿಲ್ಲ, ಏಕೆಂದರೆ ನಮ್ಮ ಹೃದಯವು ಮನುಷ್ಯರನ್ನಲ್ಲ, ಆದರೆ ಕರ್ತನನ್ನು ಸಂತೋಷ ಪಡಿಸಲು ಸಿದ್ಧವಾಗಿದೆ.

ಮನುಷ್ಯರನ್ನು ಮೆಚ್ಚಿಸುವಿದಿಲ್ಲವೆಂದರೆ ನಾವು ಜನರನ್ನು ಆಲಿಸುವುದಿಲ್ಲ ಎಂಬುದಾಗಿ ಅಲ್ಲ; ವಿಶೇಷವಾಗಿ, ನಮ್ಮ ಬಗ್ಗೆ ಕಾಳಜಿ ಇರುವವರು, ನಮ್ಮ ತಪ್ಪುಗಳನ್ನು ತೋರಿಸಿ ನಮ್ಮನ್ನು ತಿದ್ದುವಾಗ ಅವರನ್ನು ಆಲಿಸುವುದಿಲ್ಲವೆಂತಲ್ಲ, ನಾವು ನಿಜವಾಗಿ ಫಲಿತಾಂಶದ ಅನುಭವ, ತಿದ್ದುವಿಕೆ ಹಾಗೂ ಯೋಗ್ಯವಾದ ಟೀಕೆಗಳಿಗೆ ಗಮನಕೊಡುತ್ತೇವೆ. ನಾವು ಕರ್ತನು ನಮ್ಮನ್ನು ತಿದ್ದುವ ಮಾರ್ಗಗಳಲ್ಲಿ ಒಂದಾಗಿ ಸ್ವೀಕರಿಸುತ್ತೇವೆ.

## ಸ್ವಯಂ ಪದೋನ್ನತಿಯಲ್ಲಿ ಒಳಗೊಳ್ಳಬೇಡಿರಿ ದೇವರೇ ಪ್ರಗತಿಯನ್ನು ಕೊಡಲಿ

**"ಜೇನನ್ನು ಹೆಚ್ಚಾಗಿ ತಿನ್ನುವದು ಹಿತವಲ್ಲ, ಸ್ವಂತ ಮಾನವನ್ನು ಹೆಚ್ಚಾಗಿ ಯೋಚಿಸುವದು ಮಾನವಲ್ಲ"** (ಜ್ಞಾನೋಕ್ತಿಗಳು 25:27).

**"ನಾನು ಸಸಿಯನ್ನು ನೆಟ್ಟೆನು, ಅಪೊಲ್ಲೋಸನು ನೀರು ಹೊಯಿದನು, ಆದರೆ ಬೆಳಸುತ್ತಾ ಬಂದವನು ದೇವರು, ಹೀಗಿರಲಾಗಿ ನೆಡುವವನಾಗಲಿ ನೀರು ಹೊಯ್ಯುವವನಾಗಲಿ ವಿಶೇಷವಾದವನಲ್ಲ, ಬೆಳಸುವ ದೇವರೇ ವಿಶೇಷವಾದವನು"** (1 ಕೊರಿಂಥದವರಿಗೆ 3:6,7).

**"ಯೆಹೋವನು ಮನೇ ಕಟ್ಟದಿದ್ದರೆ ಅದನ್ನು ಕಟ್ಟುವವರು ಕಷ್ಟಪಡುವದು ವ್ಯರ್ಥ; ಯೆಹೋವನು ಪಟ್ಟಣವನ್ನು ಕಾಯದಿದ್ದರೆ ಕಾವಲುಗಾರರು ಅದನ್ನು ಕಾಯುವದು ವ್ಯರ್ಥ"** (ಕೀರ್ತನೆ 127:1).

ಸ್ವಯಂ ಹತೋಟಿಯ ಮತ್ತೊಂದು ಅಂಶವೆಂದರೆ, ನಾವು ದೇವರ ಸೇವಕರಾಗಿ, ನಾವು ಸ್ವಯಂ ಪದೋನ್ನತಿಯಲ್ಲಿ ಎಂದಿಗೂ ಒಳಗೊಳ್ಳಬಾರದೆಂದು ಅಭ್ಯಾಸ ಮಾಡಬೇಕಾಗುತ್ತದೆ. ನೀವಾಗಿ ಪದೋನ್ನತಿಗೆ ಹೋಗಬೇಡಿರಿ. ನಿಮ್ಮ ಸ್ವಂತ ಸೇವೆಯನ್ನು ಬೆಳೆಸಲು ಪ್ರಯತ್ನಿಸಿರಿ. "ಹೆಚ್ಚು ಹೆಸರುವಾಸಿ"ಯಾಗಲು ಅಥವಾ "ಹೆಚ್ಚು ಪ್ರಸಿದ್ಧರಾಗಲು" ಅಥವಾ "ಹೆಚ್ಚು ಗುರುತಿಸಲ್ಪಡಲು ಬಯಸುವ ಪ್ರಚೋದನೆ ಮಾಡುವಂತೆ ಏನೂ ಮಾಡಬೇಡಿರಿ ನಿಮ್ಮನ್ನು ನೀವೇ, "ನಾನು ಯಾತಕ್ಕಾಗಿ ಇದನ್ನು ಮಾಡುತ್ತೆದ್ದೇನೆ?" ಎಂದು ಕೇಳಿಕೊಳ್ಳಿರಿ. ನಿಮಗೆ ನೀವೇ ಪ್ರಾಮಾಣಿಕ ಉತ್ತರ ಕೊಡಿರಿ. ಇದು ನನ್ನ ಸ್ವಂತ

ಮಹಿಮೆಯನ್ನು ಹುಡುಕುವುದಕ್ಕಾಗಿದ್ದರೆ, ನನ್ನನ್ನು ನಾನು ಪದೋನ್ನತಿ ಪಡಿಸಿಕೊಂಡು ಒಬ್ಬ ಮಹಾ ಅಭಿಷಿಕ್ತ ಸೇವಕನಾಗುತ್ತೇನೆ. ನಿಲ್ಲಿಸಿರಿ, ಹೀಗೆ ಮಾಡಬೇಡಿರಿ.

ನೀವು ದೇವರು ನಿಮಗೆ ತರುವ ಬೆಳವಣಿಗೆ ಹಾಗೂ ಅಭಿವೃದ್ಧಿ ಇದು ಮಾತ್ರ ನಿಮ್ಮ ಹೃದಯದಲ್ಲಿನ ಉದ್ದೇಶವಾಗಿರುತ್ತದೆ. ಕರ್ತನು ಮನೆಯನ್ನು ಕಟ್ಟಲಿ (ಸೇವೆ, ಸಭೆ) ನಿಮ್ಮಲ್ಲಿ ಹಾಗೂ ನಿಮ್ಮ ಮುಖಾಂತರ ದೇವರು ಮಾಡಿದ ತುಂಬಿ ಹರಿಯುವಿಕೆಯಿಂದ ವೃದ್ಧಿಯಾಗಲಿ, ನಿಮ್ಮನ್ನು ನೀವು ಪದೋನ್ನತಿ ಪಡಿಸಿಕೊಳ್ಳುವುದರಿಂದಲ್ಲ. ನೀವು ನಿಮ್ಮ ಕೂಟಗಳು ಅಥವಾ ಸಮ್ಮೇಳನಗಳನ್ನು ನೀವು ಪ್ರಕಟಿಸಿದಾಗ, ಒಂದು ಪವಿತ್ರವಾದ ಪ್ರಚೋಧನೆಯಿಂದ ಇದನ್ನು ಮಾಡಿರಿ–ಜನರು ಸುಮ್ಮನೆ ಘಟನೆಯನ್ನು ತಿಳಿಯಲಿ, ಹಾಗೂ ನಿಮ್ಮನ್ನು ಪದೋನ್ನತಿ ಪಡಿಸುವುದಲ್ಲ. ನೀವು ಸೇವೆಯಲ್ಲಿ ಏನು ಮಾಡುತ್ತೀರೋ ಅದನ್ನು ಮಾಡುವಾಗ ನಿಮ್ಮ ಪ್ರಚೋದನೆಗಳು ಶುದ್ಧವಾಗಿರಲಿ. ಜೀವಿತಗಳನ್ನು ಆಶೀರ್ವದಿಸಲು ಇದನ್ನು ಮಾಡಿರಿ ಹೆಚ್ಚು ಹೆಸರು ವಾಸಿಯಾಗುವುದಕ್ಕಲ್ಲ.

## ಜನಪ್ರಿಯತೆಯು ಫಲಭರಿತ ಸ್ಥಿತಿಯ ಗುರುತಿಸುವಿಕೆಯಲ್ಲ

**"ಸಾರ್ದಿಸಿನಲ್ಲಿರು ಸಭೆಯ ದೂತನಿಗೆ ಬರೆ–ದೇವರ ಏಳು ಆತ್ಮಗಳೂ ಏಳು ನಕ್ಷತ್ರಗಳೂ ಉಳ್ಳತನು ಹೇಳುವುದೇನೆಂದರೆ–ನಿನ್ನ ಕೃತ್ಯಗಳನ್ನು ಬಲ್ಲೆನು; ಜೀವಿಸುವವನು ಎಂದು ಕೃತ್ಯಗಳನ್ನು ಬಲ್ಲೆನು; ಜೀವಿಸುವವನು ಎಂದು ಹೆಸರು ನಿನಗಿದ್ದರೂ ಸತ್ತವನಾಗಿದ್ದೀ ಎಂಬುದನ್ನು ಬಲ್ಲೆನು"** (ಪ್ರಕಟನೆ 3:1).

ಟ್ವಿಟ್ಟರ್ ಅಥವಾ ಫೇಸ್ ಬುಕ್‌ನಲ್ಲಿ ಎಷ್ಟು ಮಂದಿ ಅಭಿಮಾನಿಗಳು ಹಾಗೂ ಹಿಂಬಾಲಕರು ಇದ್ದಾರೆ ಎಂಬುದು ನಿಜವಾಗಿ ಗಣನೆಗೆ ಬರುವುದಿಲ್ಲ, ಪರಲೋಕದಲ್ಲಿ ನಮ್ಮ ನಿಲುವಿಗೆ ಈ ಯಾವುದೂ ಸೂಚನೆಯಾಗುವುದಿಲ್ಲ. ನಮ್ಮ ಪ್ರಸಂಗಕ್ಕೆ ನಾವು ಎಷ್ಟು "ಇಷ್ಟ"ಗಳನ್ನು ಶೇಖರಿಸಿದ್ದೇವೋ ಅದು ಗಣನೆಗೆ ಬರುವುದಿಲ್ಲ. ನಿಜವಾದ ಪ್ರಶ್ನೆಯು ಏನೆಂದರೆ ನಾವು ಸತ್ಯವನ್ನು ಬೋಧಿಸಿ, ಯೇಸು ಕ್ರಿಸ್ತನನ್ನು ಮಹಿಮೆ ಪಡಿಸಿರುತ್ತೇವೋ? ದೇವರು ನಮ್ಮ ಪ್ರಸಂಗಕ್ಕೆ ಹೇಗೆ ಬೆಲೆ ಕಟ್ಟಿರುತ್ತಾನೆ? ನಮ್ಮ ಬಗ್ಗೆ ದೇವರ ಅಭಿಪ್ರಾಯವು ನಮ್ಮ ಕ್ರೈಸ್ತಜನಪ್ರಿಯತೆಯ ಬೆಲೆಗೆ ನೇರವಾಗಿ ವಿರುದ್ಧವಾಗಿರುತ್ತದೆ? ನಾವು ಜೀವಿಸಿರುವ ಈ ಕ್ರೈಸ್ತತ್ವದಲ್ಲಿ ನಾವು ಖ್ಯಾತಿಯನ್ನು

ಹೊಂದಿರಬಹುದು, ಆದರೆ ದೇವರು ನಮ್ಮನ್ನು "ಸತ್ತವರು" ಎಂದು ಕರೆಯಬಲ್ಲನು! ಇದರಿಂದ ಹೆಸರು ವಾಸಿಯಾಗಿದ್ದರೂ ನಾವು ದೇವರ ರಾಜ್ಯಕ್ಕಾಗಿ ಪ್ರಯೋಜನವುಳ್ಳವರು ಅಥವಾ ಫಲಭರಿತ ಸ್ಥಿತಿಯವರು ಎಂದು ಅರ್ಥ ಬರುವುದಿಲ್ಲ. ಇದು ತಿಳಯಪಡಿಸುವುದೇನೆಂದರೆ, ಒಂದು ಪುಸ್ತಕವನ್ನು ಎಂದಿಗೂ ಬರೆಯದವರು, ಅದನ್ನು ಅತ್ಯುತ್ತಮ ಮಾರಾಟಗಾರರ ಪಟ್ಟಿಯಲ್ಲಿ ಎಂದಿಗೂ ಮಾಡದವರು, ಕ್ರೈಸ್ತೀಯ ಟಿ.ವಿ.ಯಲ್ಲಿ ಎಂದಿಗೂ ಕಾಣಿಸಲ್ಪಡದವರು, ತಮ್ಮ ಮನೆಯ ಹೊರಗೆ ಎಂದಿಗೂ ಕಾಣದೆ, ಅಥವಾ ಕೇಳದೆ ಇರುವವರು, ಎಷ್ಟೋ ಮಂದಿ ಇದ್ದಾರೆ, ಹಾಗೂ, ಹೀಗಿದ್ದರೂ ಇಂದಿನ ಪ್ರಸಿದ್ಧರಾದ ಕ್ರೈಸ್ತ ವ್ಯಕ್ತಿತ್ವಗಳಲ್ಲಿ ಬಹುಮಂದಿಯನ್ನು ಬಿಟ್ಟು, ಈ ಜನರು ಪರಲೋಕದಲ್ಲಿ ಪ್ರತಿಫಲವನ್ನು ಹೊಂದಿ, ತಮ್ಮ ಹಿಂದೆ ದಾರಿಯನ್ನು ಬಿಟ್ಟುಕೊಡುತ್ತಾರೆ.

ವಾಸ್ತವವೇನೆಂದರೆ ನಾವು ಎಂದಿಗೂ ನಮ್ಮ ಜನಪ್ರಿಯತೆಯ ಪರಿವಿಡಿಯನ್ನು ನಾವು ದೇವರ ಮುಂದೆ ಹೇಗೆ ಮಾಡುತ್ತೇವೆಂಬ ಸೂಚನೆಯಾಗಿ ನೋಡುವುದಿಲ್ಲ. ಒಂದು ಪ್ರಶ್ನೆಯು ನಾವು ಎಡಬಿಡದೆ ಕೇಳಬೇಕಾಗುತ್ತದೆ, "ನಾವು ತಂದೆಯ ಚಿತ್ತವನ್ನು ಮಾಡುತ್ತಿದ್ದೇವೋ" ಎಂದು ಕೇಳಬೇಕು.

## ಜನರು ನಿಮ್ಮ ಬಗ್ಗೆ ಏನು ಯೋಚಿಸುತ್ತಾರೋ ಅವರಿಂದ ನಿಮ್ಮನ್ನು ಪ್ರತ್ಯೇಕಿಸಲ್ಪಡಿರಿ

**"ನಾವು ಸಂಕಟಗಳಲ್ಲಿಯೂ ಕೊರತೆಗಳಲ್ಲಿಯೂ ಇಕ್ಕಟ್ಟುಗಳಲ್ಲಿಯೂ ಪೆಟ್ಟುಗಳಲ್ಲಿಯೂ ಸೆರೆಮನೆಗಳಲ್ಲಿಯೂ.... ಶುದ್ಧ ಮನಸ್ಸು, ಜ್ಞಾನ ದೀರ್ಘಶಾಂತಿ..... ಇವುಗಳಿಂದ ಕೂಡಿದವರಾಗಿದ್ದೇವೆ. ಮಾನ ಅವಮಾನ ಕೀರ್ತಿ ಅಪಕೀರ್ತಿಗಳನ್ನು ಹೊಂದಿದವರೂ ಆಗಿದ್ದೇವೆ. ಮೋಸಗಾರರೆನಿಸಿಕೊಂಡರೂ ಸತ್ಯವಂತರೂ, ಅಜ್ಞಾತರೆನಿಸಿಕೊಂಡರೂ ವಿಜ್ಞಾತರೂ,.... ಆಗಿದ್ದೇವೆ"** (2 ಕೊರಿಂಥದವರಿಗೆ 6:4,8,9).

ದೇವರ ಸೇವಕರಾಗಿ ನಾವು ವೃದ್ಧಿ ಮಾಡಬೇಕಾದ ಶಕ್ತಿಗಳಲ್ಲಿ ಒಂದು ಏನೆಂದರೆ, ಜನರು ಒಳ್ಳೇದನ್ನು ಅಥವಾ ಕೆಟ್ಟದ್ದನ್ನು ಏನು ಹೇಳಿದರೂ ಅದು ನಮ್ಮ ಮೇಲೆ ಪರಿಣಾಮ ಬೀರದಂತೆ ಮಾಡುವುದನ್ನು ವೃದ್ಧಿಪಡಿಸುವುದು. ನಮಗೆ ಗೌರವ ನೀಡುವವರು ಇದ್ದಾರೆ. ನಮಗೆ ಒಳ್ಳೆಯ ವರದಿ ನೀಡುವವರು ಕೂಡಾ ಇದ್ದಾರೆ ಹಾಗೂ ಕೆಟ್ಟ ವರದಿ

ನೀಡುವವರೂ ಇದ್ದಾರೆ. ಸೇವಕರಾಗಿ ನಾವು ನಿಜವಾಗಿ ಯಾರು ಹಾಗೂ ದೇವರ ಮುಂದೆ ವೈಯಕ್ತಿಕವಾಗಿ ನಿಜವಾಗಿ ಎಲ್ಲಿ ನಿಂತಿದ್ದೇವೆ ಎಂಬುದನ್ನು ನಾವು ನೆನಪು ಮಾಡಿಕೊಳ್ಳಬೇಕು.

ಜನರು ನಿಮ್ಮನ್ನು ಶ್ಲಾಘಿಸಿದಾಗ, ಸನ್ಮಾನಿಸಿದಾಗ, ನಿಮ್ಮ ಬಗ್ಗೆ ಉನ್ನತವಾದ ಮಾತುಗಳನ್ನಾಡುವಾಗ, ಅದು ನಿಮ್ಮ ತಲೆಯೊಳಗೆ ಹೋಗುವಂತೆ ಮಾಡಬೇಡಿ. ಸೊಕ್ಕಿನ ವಿರುದ್ಧವಾಗಿ ಕಾಪಾಡಿರಿ. ಜನರು ನಿಮ್ಮನ್ನು ಸನ್ಮಾನಿಸದೆ ಇರುವಾಗ, ನಿಮ್ಮ ಬಗ್ಗೆ ಕೆಡುಕನ್ನು ಮಾತಾಡಿದಾಗ, ನಿಮ್ಮನ್ನು ದೂಷಿಸಿದಾಗ, ಅದು ನಿಮ್ಮ ಹೃದಯದೊಳಕ್ಕೆ ಹೋಗದಂತೆ ನೋಡಿಕೊಳ್ಳಿರಿ. ಅದು ಗಾಯ ಮಾಡಿ ನೋಯಿಸದಂತೆ ಕಾದುಕೊಳ್ಳಿರಿ. ನಾವು ಸೇವಕನಿಗೆ ಸೊಕ್ಕಿನಿಂದ ಹೊರಬರಲು ಅಥವಾ ನೋವಿನಿಂದ ಹೊರಬರಲು (ಸಂಕಟ) ಏನೂ ಒದಗಿಸಲಾಗುವುದಿಲ್ಲ. ನಿಮ್ಮ ಕುರಿತು ಜನರು ಏನು ಹೇಳುತ್ತಾರೆ ಎಂಬುದರಿಂದ ನಿಮ್ಮನ್ನು ಪ್ರತ್ಯೇಕಿಸಿಕೊಳ್ಳಲು ಕಲಿಯಬೇಕು.

## ಮನುಷ್ಯರ ಮುಂದಿನ ನಿಮ್ಮ ನಿಲುವಿಗಿಂತಲೂ ದೇವರ ಮುಂದೆ ನಿಮ್ಮ ನಿಲುವು ಬಹು ಪ್ರಾಮುಖ್ಯವಾದದ್ದು

ಅಂತಿಮವಾಗಿ ದೇವರ ಮುಂದೆ ನೀವು ಯಾರು ಎಂಬುದು ಮನುಷ್ಯರ ಮುಂದೆ ಇರುವುದಕ್ಕಿಂತ ಬಹು ಪ್ರಾಮುಖ್ಯವಾದದ್ದಾಗಿದೆ. ದೇವರ ಮನುಷ್ಯರ ಮುಂದೆ ನಿಮ್ಮ ನಿಲುವಿಗಿಂತ ದೇವರ ಮುಂದೆ ನಿಮ್ಮ ನಿಲುವು ಪ್ರಾಮುಖ್ಯವಾದುದು. ಇದು ಬಹಳಷ್ಟು ಮಟ್ಟಿಗೆ "ಕರ್ತನಿಗೆ ಅತ್ಯಂತ ಪ್ರೀತಿ ಪಾತ್ರನು", ಎಂದು ಆದರಿಸಲ್ಪಡುವುದು, ಮಿಲಿಯಗಟ್ಟಳೆ ಜನರಿಂದ ಪ್ರೀತಿಪಾತ್ರನೆಂದು ಅನ್ನಿಸಿಕೊಳ್ಳುವುದಕ್ಕಿಂತ ಎಷ್ಟೋ ಉತ್ತಮವಾದದ್ದು, ಕರ್ತನು ಯಾರಿಗಾಗಿ ನಿಲ್ಲುತ್ತಾನೋ ಅಂಥ ಒಬ್ಬನಾಗುವುದು, ಭೂಮಿಯ ಮೇಲೆ ಮಿಲಿಯಗಟ್ಟಳೆ ಜನರಿಂದ ಸನ್ಮಾನಿಸಲ್ಪಡುವುದಕ್ಕಿಂತ ಎಷ್ಟೋ ಉತ್ತಮವಾದದ್ದು, "ಭಲಾ, ಒಳ್ಳೆಯ ಆಳು ನೀನು," ಎಂಬ ನುಡಿಗಳೊಡನೆ ಪರಲೋಕಕ್ಕೆ ಸ್ವಾಗತಿಸಲ್ಪಡುವುದು, ಮಿಲಿಯಗಟ್ಟಳೆ ಸಂತೋಷದ ಕೂಗುಗಳು ಸ್ತುತಿಗಳನ್ನು ಹೊಂದುವುದಕ್ಕಿಂತ ಎಷ್ಟೋ ಪಾಲು ಉತ್ತಮವಾದದ್ದು.

ನಮ್ಮ ನಿಲುವು ದೇವರ ಮುಂದೆ ಭೂಮಿಯ ಮೇಲೆ ಜನರು ನಮ್ಮನ್ನು ಗುರುತಿಸುವ ಹಾಗೂ ಸನ್ಮಾನಿಸುವಂತೆ ಮಾಡುವುದಾದರೆ ಅದು ಒಳ್ಳೆಯದು, ನಾವು ಇದರಿಂದ ಸ್ಪಂದಿಸಲ್ಪಟ್ಟಿಲ್ಲ ಇದಕ್ಕಾಗಿ ಜೀವಿಸುತ್ತಲೂ ಇಲ್ಲ. ನಮ್ಮ ಹೃದಯಗಳು ಯಾವಾಗಲೂ ನಮ್ಮ ದೇವರ ಮುಂದೆ ಏನಾಗಿದ್ದೇವೆ ಎಂಬುದರ ಮೇಲೆ ಕೇಂದ್ರೀಕರಿಸಲ್ಪಡುತ್ತದೆ. ಇದೇ ಗಣನೆಗೆ ಬರುವಂಥದ್ದಾಗಿರುತ್ತದೆ.

## ನಿಮ್ಮನ್ನು "ಮೂರ್ತಿ"ಯಾಗಿ ಮಾಡದೆ, ಅಥವಾ ನಿಮಗೆ "ಪದೋನ್ನತಿ" ಮಾಡದಂತೆ ಜನರಿಗೆ ಬೋಧಿಸಿರಿ

**"ಬಲಾಧಿಕ್ಯವು ದೇವರದೇ ಹೊರತು ನಮ್ಮೊಳಗಿಂದ ಬಂದದ್ದಲ್ಲವೆಂದು ತೋರುವುದಕ್ಕಾಗಿ ಈ ನಿಕ್ಷೇಪವು ಮಣ್ಣಿನ ಘಟಕಗಳಲ್ಲಿ ನಮಗುಂಟು"** (2 ಕೊರಿಂಥದವರಿಗೆ 4:7).

ನಮ್ಮ ಸೇವೆಯನ್ನು ನಾವು ಆರಂಭಿಸಿದ ಸಮಯದಿಂದ ನಾವು "ಸಾಮಾನ್ಯ"ವಾಗಿ ಇರುವಂತೆ ಹಾಗೂ ದೇವರ ಒಬ್ಬ ಸೇವಕನಾಗಿ, ಒಂದು "ದಿವ್ಯ ಪ್ರಭೆ"ಯನ್ನು ಸೃಷ್ಟಿಸದೆ, ಅಥವಾ ನಿರ್ಮಿಸದೆ ಇರಲು ಪ್ರಯತ್ನಿಸಿದೆವು, ಇದನ್ನು ಬಹಳಷ್ಟು ಮಂದಿ ಮಾಡುತ್ತಾರೆ. ನಾವು ನಮ್ಮ ಸುತ್ತಲೂ ಜನರು ಇರುವಂತೆ ಬಿಡುತ್ತೇವೆ, ಜೊತೆಯಲ್ಲಿ ನಮ್ಮ ಸಭೆಯಲ್ಲಿರುವವರು ಕೂಡಾ ನಾವು ಕೇವಲ ಸಾಮಾನ್ಯರಾದ ಮಾನವರು, ದೇವರು ನಮ್ಮ ಮೂಲಕ ಕಾರ್ಯ ಮಾಡುವ ಕೇವಲ ಮಣ್ಣಿನ ಪಾತ್ರೆಗಳು, ಎಂಬುದನ್ನು ನೋಡುತ್ತಾರೆ. ನಮ್ಮ ಬಗ್ಗೆ "ಹೆಚ್ಚಿನ ವಿಶೇಷ" ಏನೂ ಇಲ್ಲ. ಇದು ವರವಾಗಿದೆ, ದೇವರ ಕೃಪೆ ಮತ್ತು ಕೆಲಸದಲ್ಲಿ ಅಭಿಷೇಕವಾಗಿದೆ. ನಮ್ಮ ಬಗ್ಗೆ ಏನೂ ಇಲ್ಲ. ನಾವು ಈ ರೀತಿಯಲ್ಲಿ ವಿಷಯಗಳನ್ನು ಕಾಪಾಡುವುದಕ್ಕಾಗಿ ಕಷ್ಟಪಟ್ಟು ದುಡಿಯುತ್ತೇವೆ.

ನಾವು ನಮ್ಮ ಮಾಧ್ಯಮ ತಂಡಕ್ಕೆ ಮತ್ತು ಇತರರಿಗೆ ಸೇವೆಯಲ್ಲಿ ಒಳಗೊಳ್ಳುವಂತೆ ಉದ್ದೇಶಪೂರ್ವಕವಾಗಿ ಸೂಚನೆ ಕೊಟ್ಟಿರುತ್ತೇವೆ, ನಮ್ಮ ಚಿತ್ರಗಳನ್ನು ಅಥವಾ ಹೆಸರುಗಳನ್ನು ಮಾಧ್ಯಮ ವಸ್ತುಗಳಲ್ಲಿ ಸಿಡಿಸಬಾರದೆಂದು ಹೇಳಿರುತ್ತೇವೆ. ನಾವು ನಮ್ಮ ಸೇವಾ ತಂಡಕ್ಕೆ ನಮ್ಮಿಂದ ದೂರವಾಗಿ ಗಮನವನ್ನು ಇಡಬೇಕೆಂದು, ಇದರಿಂದ ಜನರು ನಮ್ಮ ಕಡೆಗೆ ಸೆಳೆಯಲ್ಪಡಲಾರರು ಎಂದು ಉದ್ದೇಶಪೂರ್ವಕವಾಗಿ ಹೇಳಿರುತ್ತೇವೆ.

ನಾವು ಜಾಗರೂಕರಾಗಿಲ್ಲದಿದ್ದರೆ, ನಮ್ಮ ನಿಯತಕಾಲಿಕ ಪತ್ರಿಕೆಗಳು, ಟಿ.ವಿ. ಕಾರ್ಯಕ್ರಮಗಳು, ಕೂಟಗಳು, ಸಮ್ಮೇಳನಗಳು, ಕಟ್ಟಡಗಳು, "ನಮ್ಮಿಂದಲೇ ಪೂರ್ಣವಾಗಿ ತುಂಬಲ್ಪಟ್ಟಿರುತ್ತವೆ. ಇದರಿಂದ ಜನರು ಕರ್ತನಾದ ಯೇಸುಕ್ರಿಸ್ತನನ್ನು ಅನುಸರಿಸುವುದರ ಬದಲಾಗಿ ನಮ್ಮನ್ನು ಮೂರ್ತಿಗಳೆಂದು ಭಾವಿಸುತ್ತಾರೆ. ನಮ್ಮ ಸಭೆಗಳು/ ಸೇವೆಗಳಲ್ಲಿ ನಮ್ಮ ನಿಯತಕಾಲಿಕಗಳನ್ನು ತುಂಬಬೇಡಿರೆಂದು ನಾವು ಸೂಚನೆಕೊಡಬೇಕು, ಟಿ.ವಿ. ಕಾರ್ಯಕ್ರಮಗಳು ಇತ್ಯಾದಿ. ಲೈಫ್ ಸೈಜ್ ಭಿತ್ತಿಪತ್ರಗಳು ವ್ಯಕ್ತಿಗಳನ್ನು ವೈಯಕ್ತಿಕವಾಗಿ ನಿಮ್ಮ ಪದೋನ್ನತಿ ಮಾಡುತ್ತವೆ. ನಮ್ಮ ಪದೋನ್ನತಿ ಅಂಶಗಳು ಕರ್ತನಿಗೆ, ಆತ್ಮನ ವಾಕ್ಯಕ್ಕೆ ಆತನ ಆತ್ಮಕ್ಕೆ ಜನರನ್ನು ಸೂಚಿಸುವ ಚಿತ್ರಣಗಳಿರಬೇಕು, ನಾವು ವ್ಯಕ್ತಿಗಳನ್ನು ಸೆಳೆಯುವಂತಿರಬಾರದು.

## ನೀವು ಎಷ್ಟು "ದೊಡ್ಡ"ವರಾಗಿದ್ದರೂ ಯಾವಾಗಲೂ ಸಮನಾದ ನೆಲದ ಮೇಲೆ ನಡೆಯಿರಿ

**"ಕ್ರಿಸ್ತಯೇಸುವಿನಲ್ಲಿದ್ದಂಥಾ ಮನಸ್ಸು ನಿಮ್ಮಲ್ಲಿಯೂ ಇರಲಿ. ಆತನು ದೇವ ಸ್ವರೂಪವಾಗಿದ್ದರೂ ದೇವರಿಗೆ ಸರಿಸಮಾನನಾಗಿರುವದೆಂಬ ಅಮೂಲ್ಯ ಪದವಿಯನ್ನು ಬಿಡಲೊಲ್ಲೆನು ಎಂದೆಣಿಸದೆ ತನ್ನನ್ನು ಬರಿದು ಮಾಡಿಕೊಂಡು ದಾಸನ ರೂಪವನ್ನು ಧರಿಸಿಕೊಂಡು ಮನುಷ್ಯರಿಗೆ ಸದೃಶ್ಯನಾದನು"** (ಫಿಲಿಪ್ಪಿಯವರಿಗೆ 2:4–7).

ಪ್ರಸಿದ್ಧತೆ ಹಾಗೂ ಕೀರ್ತಿಯ ಉನ್ನತಿ ಎಷ್ಟಿದ್ದರೂ, ನಾವು ಕ್ರೈಸ್ತತ್ವದಲ್ಲಿ ಎಷ್ಟು ಮೇಲಕ್ಕೇರಿದ್ದರೂ, ಕ್ರೈಸ್ತ ನಾಯಕರಾಗಿ ಎಂಥಾ ಬಲವುಳ್ಳವರಾಗಿದ್ದರೂ, ನಾವು ಎಂಥಾ ರೀತಿಯಲ್ಲಿ ಪ್ರಭಾವಿತರಾಗಿ ಮೇಲಕ್ಕೇರಿದರೂ ಸರಿ, ನಾವು ಯಾವಾಗಲೂ "ಸಮ ನೆಲ"ದಲ್ಲಿ ನಡೆಯಬೇಕು, ನಾವು ನಮ್ಮ ಪಾದಗಳನ್ನು ನೆಲದ ಮೇಲೆ ಇಡಬೇಕು. ತನ್ನನ್ನು ಉನ್ನತಿಸಿಕೊಳ್ಳದ ಮನುಷ್ಯರಲ್ಲಿ ಒಬ್ಬನಾಗಿರಲು ಹೆಜ್ಜೆಯಿಟ್ಟ ರೀತಿಯಲ್ಲಿ ತನ್ನನ್ನು ದೀನನಾಗಿಸಿಕೊಂಡ ನಮ್ಮ ಕರ್ತನಂತೆ ಆಗೋಣ. ಇದೇ ಮನೋಭಾವವು ನಮ್ಮ ಹೃದಯಗಳು ಹಾಗೂ ಮನಸ್ಸುಗಳಲ್ಲಿ ಹರಡಲಿ.

ಯಾವಾಗಲೂ ಸರಳವಾಗಿರ್ರಿ, ಯಾವಾಗಲೂ ಪ್ರವೇಶಕ್ಕೆ ಯೋಗ್ಯವಾಗಿರ್ರಿ, ಯಾವಾಗಲೂ ನಮ್ರರಾಗಿ ಉಳಿಯಿರಿ ಯಾವಾಗಲೂ ನೀವು ಕೇವಲ ಒಂದು ಮಣ್ಣಿನ ಪಾತ್ರೆ ಎಂಬುದನ್ನು ಮರೆಯಬೇಡಿರಿ.

## ನಾನು ಎಷ್ಟು ಹೆಚ್ಚಾಗಿ ಕೊಡಲ್ಪಡುತ್ತೇನೋ, ನಾನು ಅಷ್ಟೂ ಹೆಚ್ಚಾಗಿ ಜವಾಬ್ದಾರನಾಗಿರಬೇಕು

**"ತನ್ನ ಯಜಮಾನನ ಚಿತ್ತವನ್ನು ತಿಳಿದ ಆಳು ಸಿದ್ಧಮಾಡದೆ ಹೋದರೆ ಅಥವಾ ಅವನ ಚಿತ್ತಕ್ಕನುಸಾರ ನಡೆಯದಿದ್ದರೆ ಅವನು ಬಹಳ ಪೆಟ್ಟು ತಿನ್ನುವನು. ತಿಳಿಯದೆ ಪೆಟ್ಟುಗಳಿಗೆ ಯೋಗ್ಯವಾದದ್ದನ್ನು ನಡಿಸಿದವನು ಸ್ವಲ್ಪ ಪೆಟ್ಟು ತಿನ್ನುವನು. ಯಾವನಿಗೆ ಬಹಳವಾಗಿ ಕೊಟ್ಟಿದೆಯೋ ಅವನ ಕಡೆಯಿಂದ ಬಹಳವಾಗಿ ನಿರೀಕ್ಷಿಸಲ್ಪಡುವದು; ಇದಲ್ಲದೆ ಯಾವನ ವಶಕ್ಕೆ ಬಹಳವಾಗಿ ಒಪ್ಪಿಸಿದೆಯೋ ಅವನ ಕಡೆಯಿಂದ ಇನ್ನೂ ಹೆಚ್ಚಾಗಿ ಕೇಳುವರು" (ಲೂಕ 12:47,48).**

ದೇವರ ರಾಜ್ಯದ ಸಂಬಂಧವಾಗಿ ಒಂದು ಸರಳವಾದ, ಅಲ್ಲದೆ ಅತ್ಯಂತ ದೊಡ್ಡದಾದ ಒಂದು ಸತ್ಯತೆ ಇದೆ. ದೇವರ ರಾಜ್ಯದಲ್ಲಿ ಎಷ್ಟು ಹೆಚ್ಚಾಗಿ ನಮಗೆ ಕೊಡಲ್ಪಟ್ಟರೂ, ಅಷ್ಟೂ ಹೆಚ್ಚು ನಮ್ಮ ಅಗತ್ಯತೆ ಇರುತ್ತದೆ ಹೆಚ್ಚಾಗಿ ಕೊಡಲ್ಪಟ್ಟಾಗೆ ಹೊಣೆಗಾರಿಕೆಯ ದುಟ್ಟವು ಹೆಚ್ಚುತ್ತಾ ಹೋಗುತ್ತದೆ. ನಿಲುವಿನೊಂದಿಗೆ ಹೊಣೆಗಾರಿಕೆಯು ಹೆಚ್ಚುತ್ತದೆ. ಹೆಚ್ಚುವಿಕೆಯೊಂದಿಗೆ ಒಂದು ದೊಡ್ಡ ಮಟ್ಟದ ಹೊಣೆಗಾರಿಕೆ ಬರುತ್ತದೆ. ಇದರ ಅರ್ಥವೇನೆಂದರೆ, ನಾನು ಹಾಜರಾಗುವ ವಿಷಯಗಳೊಂದಿಗೆ ಶ್ರಮದ ದುಡಿತದ ಅಳತೆಯು ಹೆಚ್ಚಬೇಕು, ಇದು ದೇವರು ನನ್ನಲ್ಲಿ ಹಾಗೂ ನನ್ನ ಮೂಲಕ ಏನು ಮಾಡುತ್ತಾನೋ, ದೇವರು ಹೆಚ್ಚಿಸುತ್ತಾ ಹೋಗುತ್ತಾನೆ. ಸಾಮಾನ್ಯವಾಗಿ ಜನರು ಅಲಕ್ಷ್ಯರಾಗಿರಲು, ಹೆಚ್ಚು ನಿರ್ಲಕ್ಷ್ಯತನ, ಹೆಚ್ಚು ವಿಷಯ ಗಮನಗೊಡಬೇಕಾಗಿ ಬಂದಾಗ ಕಡಿಮೆಯಾಗಿ ಗಮನಿಸುವುದು, ವಿಷಯಗಳು ಬೆಳೆದು ಹೆಚ್ಚಳವಾಗಲು ಆರಂಭಿಸುವಾಗ ಹೀಗೆ ಮಾಡಲು ಪ್ರೇರೇಪಿಸಲ್ಪಡುತ್ತಾರೆ. ಇದು ನಂತರ ಅವರ ಬೀಳುವಿಕೆಯಾಗಿರುತ್ತದೆ. ನಾವು ಎಂದಿಗೂ ಎಷ್ಟು ಹೆಚ್ಚು ನಮಗೆ ಕೊಡಲ್ಪಟ್ಟರೂ ಅಷ್ಟು ಹೆಚ್ಚು ಜವಾಬ್ದಾರರಾಗಿಬೇಕೆಂಬುದನ್ನು ನಾವು ಎಂದಿಗೂ ಮರೆಯಬಾರದು. ಇದು ನಮಗೆ ರಾಜ್ಯದಲ್ಲಿ ಅಗತ್ಯವಾಗಿರುತ್ತದೆ.

## ನನ್ನನ್ನು ಆತನು ಎಷ್ಟು ಎತ್ತರಕ್ಕೆ ಕೊಂಡೊಯ್ಯುತ್ತಾನೋ ಅಷ್ಟು ಕೆಳಕ್ಕೆ ನಾನು ಹೆಜ್ಜೆಯಿಡಬೇಕು

**"ಹೀಗಿರುವದರಿಂದ ದೇವರ ತ್ರಾಣವುಳ್ಳ ಹಸ್ತದ ಕೆಳಗೆ ನಿಮ್ಮನ್ನು ತಗ್ಗಿಸಿಕೊಳ್ಳಿರಿ; ಆತನು ತಕ್ಕ ಕಾಲದಲ್ಲಿ ನಿಮ್ಮನ್ನು ಮೇಲಕ್ಕೆ ತರುವನು" (1 ಪ್ರೇತನು 5:6).**

ನಮ್ಮನ್ನು ನಾವು ತಗ್ಗಿಸಿಕೊಂಡಾಗ ಘನತೆಯು ಹೆಚ್ಚುತ್ತದೆ. ಅಂದರೆ, ದೇವರು ನಮ್ಮನ್ನು ಒಂದು ಹೊಸ ಉನ್ನತ ಮಟ್ಟಕ್ಕೆ ಎತ್ತಿದಾಗ ನಾವು ನಮ್ರತೆಯ ಹೊಸಮಟ್ಟಕ್ಕೆ ಸಾಗಬೇಕು. ಆಗ ಮಾತ್ರ ಆತನು ನಮ್ಮನ್ನು ಉನ್ನತಮಟ್ಟಗಳಿಗೆ ತೆಗೆದುಕೊಂಡು ಹೋಗುತ್ತಾನೆ. ಇದರಿಂದ ಪ್ರತಿಸಾರಿಯೂ ನಮ್ಮನ್ನು ದೇವರು ಉನ್ನತಿಸಿದಾಗ ಹಾಗೂ ಒಂದು ಹೊಸ ಸನ್ಮಾನದ ಮಟ್ಟಕ್ಕೆ ತೆಗೆದುಕೊಂಡು ಹೋದಾಗ ಇದು ನಮಗೆ ಕೆಳಕ್ಕೆ ಹೆಜ್ಜೆ ಇಡಲು ಸಮಯವಾಗಿರುತ್ತದೆ. ನಮ್ಮನ್ನು ನಾವು ತಗ್ಗಿಸಿಕೊಳ್ಳಲು ಇನ್ನೂ ದೇವರು ಹಾಗೂ ಮನುಷ್ಯನ ಮುಂದೆ ತಗ್ಗಿಸಿಕೊಳ್ಳಲು ನಮಗೆ ಸಮಯವಾಗಿರುತ್ತದೆ.

## ನಾನು ಕಡಿಮೆಯಾಗಿ ತಿಳಿದಷ್ಟೂ ಇದು ಉತ್ತಮವಾಗಿರುತ್ತದೆ

ಕೀರ್ತಿ, ಗುರುತಿಸುವಿಕೆ, ಹೊಗಳಿಗೆ ಹಾಗೂ ಶ್ಲಾಘನೆಗಳಿಗಾಗಿ ಆಶೆ ಉಂಟಾದಾಗಲೆಲ್ಲಾ ಸಾಯಬೇಕು. ಇದು ಬಂದರೆ, ಆಗ ಇದು ಒಳ್ಳೆಯದು. ಇದು ಬಾರದಿದ್ದರೆ, ನೀವು ಹೇಗೂ ಇದಕ್ಕೆ ಒಳಗಾಗಿಲ್ಲ. ದೇವರು ನಿಮಗೆ ಪದೋನ್ನತಿ ನೀಡಿದಾಗ, ನಿಮ್ಮನ್ನು ಕಾಯ್ದುಕೊಳ್ಳಲು ಇಲ್ಲಿ ಒಂದು ಪ್ರಾಮುಖ್ಯವಾದ ಆಧಾರವಿದೆ, ಪ್ರತಿಸಾರಿಯೂ ದೇವರು ನಿಮ್ಮ ಜೀವಿತದಲ್ಲಿ ವೃದ್ಧಿ, ಗುರುತಿಸುವಿಕೆ, ಉನ್ನತಿಗಲನ್ನು ತರುತ್ತಾನೆ. ನೀವು ಸ್ವಲ್ಪ ಕೆಳಕ್ಕೆ ಹೆಜ್ಜೆ ಇಟ್ಟು, ನಿಮ್ಮನ್ನು ದೇವರ ಮತ್ತು ಮನುಷ್ಯನ ಮುಂದೆ ತಗ್ಗಿಸಿಕೊಳ್ಳಿರಿ. ಪ್ರತಿಸಾರಿ ದೇವರು ನಿಮ್ಮನ್ನು ಒಂದು ಮೆಟ್ಟಿಲು ಮೇಲಕ್ಕೆ ಒಯ್ದರೆ, ನೀವು ಒಂದು ಮೆಟ್ಟಿಲು ಕೆಳಗಿಳಿಯಿರಿ, ದೇವರು ನಿಮ್ಮನ್ನು ಎತ್ತರಕ್ಕೆ ಕೊಂಡೊಯ್ದಷ್ಟೂ, ಕೆಳಕ್ಕೆ ನೀವು ನಡೆಯಲು ಆಯ್ಕೆ ಮಾಡಿರಿ, ಎಷ್ಟು ಹೆಚ್ಚಾಗಿ ದೇವರು ನಿಮಗೆ ಸ್ಪಷ್ಟವಾಗಿ ಕಾಣುವಂತೆ ಮಾಡುತ್ತಾನೋ, ಅಷ್ಟು ಹೆಚ್ಚಾಗಿ ನಿಚ್ಚಳವಾಗಿ ಆಗಲು ಆಯ್ಕೆ ಮಾಡಿಕೊಳ್ಳಿರಿ. ನಿಮ್ಮ ಜೀವಿತದಲ್ಲಿ ದೇವರು ಹೆಚ್ಚಾಗಿ ಗುರುತಿಸುವಿಕೆಯನ್ನು ತರುತ್ತಾನೆ, ಅಷ್ಟೂ ಹೆಚ್ಚಾಗಿ ಆತನಲ್ಲಿ ನೀವು ಅಡಗಿಕೊಳ್ಳಿರಿ. ನಾನು ಮನುಷ್ಯರಿಂದ ಗೌರವವನ್ನು ಅನುಸರಿಸಬಾರದೆಂದು ಉದ್ದೇಶಿಸಿದ್ದೇನೆ. ನನ್ನ ಆಶೆಯು ಆತನ ಹೃದಯವನ್ನು ಮೆಚ್ಚಿಸುವುದಕ್ಕಾಗಿ ಲೋಕದಲ್ಲಿ ಯಾವುದೇ ಸನ್ಮಾನವನ್ನು ನನ್ನ ದಾರಿಗೆ ದೇವರು ಕಳುಹಿಸಿಕೊಟ್ಟರೆ, ಅದು

ಒಳ್ಳೆಯದೇ. ಆತನು ಇದನ್ನು ನನಗಾಗಿ ಮಾಡಿದನು ಹಾಗೂ ನಾನು ನನಗಾಗಿ ಕೀರ್ತಿಯನ್ನು ಅನುಸರಿಸಲಿಲ್ಲ.

## "ದೇವರ ಸಂಕೀರ್ಣತೆಯ" ಕುರಿತು ಎಚ್ಚರಿಕೆಯಾಗಿರಿ

**"ಆಹಾ ಉದಯ ನಕ್ಷತ್ರವೇ ಬೆಳ್ಳಿಯೇ ಆಕಾಶದಿಂದ ಹೇಗೆ ಬಿದ್ದೆ...! ಜನಾಂಗಗಳನ್ನು ಕೆಡವಿದ ನೀನು ಕಡಿಯಲ್ಪಟ್ಟು ನೆಲಕ್ಕೆ ಉರುಳಿದೆಯಲ್ಲಾ! ನೀನು ನಿನ್ನ ಮನಸ್ಸಿನಲ್ಲಿ–ನಾನು ಆಕಾಶಕ್ಕೆ ಹತ್ತಿ ಉತ್ತರದಿಕ್ಕಿನ ಕಟ್ಟಕಡೆಯಿಂದ ಸುರಗಣ ಪರ್ವತದಲ್ಲಿ ನನ್ನ ಸಿಂಹಾಸನವನ್ನು ದೇವರ ನಕ್ಷತ್ರಗಳಿಗಿಂತ ಮೇಲೆ ಏರಿಸಿ ಆಸೀನನಾಗುವೆನು; ಉನ್ನತ ಮೇಘಮಂಡಲದ ಮೇಲೆ ಏರಿ ಉನ್ನತೋನ್ನತನಿಗೆ ಸರಿಸಮಾನನಾಗುವೆನು ಅಂದುಕೊಂಡಿಯಲ್ಲಾ!"** (ಯೆಶಾಯ 14:12–14).

ಪರಂಪರೆಯ ಎಲ್ಲೋ ಒಂದು ಕಡೆ ನಾವು ದೇವರ ಒಬ್ಬ ಪುರುಷ ಅಥವಾ ಒಬ್ಬ ಸ್ತ್ರೀಯಾಗಿ ವಿಸ್ತರಿಸಿ ಬೆಳೆಯುತ್ತಾ ಹೋದಂತೆ, ಹಾಗೂ ಮುಂದೆ ನಿಧಾನವಾಗಿ, ಬಹು ಸೂಕ್ಷ್ಮವಾಗಿ, ಹಾಗೂ ಬಹು ಪ್ರಜಾಹೀನ ಸ್ಥಿತಿಯಲ್ಲಿ ಮೇಲೇರುತ್ತಾ ದೇವರ ಸೇವಕನಾಗಿ ನಿಲುವನ್ನು ಹೊಂದಿ, "ದೇವರ ಸಂಕೀರ್ಣತೆಯು" ಹರಿದು ಬರುತ್ತದೆ. ನಾವು ಬೋಧಿಸುವ ವಾಕ್ಯದ ಮೇಲೆ ಬಹು ಸೂಕ್ಷ್ಮವಾಗಿ, ಒಂದು ನಿರ್ದಿಷ್ಟ ನಿಲುಗಡೆಯಲ್ಲಿ, ದೇವರು ತನ್ನ ಜನರಿಗಾಗಿ ಸಿದ್ಧ ಮಾಡಿರುವ ಮಟ್ಟಗಳ ಮೇಲೆ ನಮ್ಮನು ನಾವು ಇಡುತ್ತೇವೆ. ನಾವು ವಾಕ್ಯವು ಇತರರಿಗಾಗಿ ಎಂದು ಭಾವಿಸುತ್ತೇವೆ. ಆದರೆ ನಾವು ಅದಕ್ಕೆ ಮೇಲೆ ಇದ್ದೇವೆ. ನಾವು ದೇವರ ವಾಕ್ಯದ ಮೇಲೆ ಇರುವುದನ್ನು ನೋಡುವುದರಿಂದ ನಾವು ನಿಧಾನವಾಗಿ ದೇವರ ವಾಕ್ಯದ ನಮ್ಮ ವೈಯಕ್ತಿಕ, ಗೋಪ್ಯವಾದ ಉಲ್ಲಂಘನೆಗಳನ್ನು ಕ್ಷಮಿಸಿಕೊಳ್ಳುತ್ತೇವೆ. ನಾವು ನಮ್ಮನ್ನು ಒಂದು "ದೇವರು" ಎಂಬಂತೆ ಮಾಡಿಕೊಳ್ಳುತ್ತೇವೆ. ನಾವು ದೇವರಿಗೆ ಉತ್ತರಕೊಡಬೇಕಾಗಿರುವಾಗ, ಬೇರೆ ಯಾರಿಗೂ ಉತ್ತರಕೊಡಬೇಕಾಗಿಲ್ಲ. ಈ ಸ್ಥಿತಿಯನ್ನು ನಾವು ತಲುಪುವಾಗ, ದೇವರು ನಮ್ಮ ಮನಸಾಕ್ಷಿಯನ್ನು ಬಿಟ್ಟಿರುತ್ತಾನೆ ಹಾಗೂ ಇದರಿಂದ ನಾವು ನಿಜವಾಗಿ ಯಾರಿಗೂ ಉತ್ತರಿಸಬೇಕಾಗಿಲ್ಲ. ಆದರೂ ನಾವು ದೇವರಿಗೆ ಮಾತ್ರ ಉತರಿಸುತ್ತೇವೆಂದುಕೊಂಡಿದ್ದೇವೆ! ನಾವು ನಮ್ಮನ್ನು "ದೇವರಾಗಿಸಿ"ಕೊಂಡಿದ್ದೇವೆ. ನಾವು ಪಿಶಾಚನಂತೆ ಶಿಕ್ಷೆಗೆ ಒಳಗಾಗುತ್ತೇವೆ.

ನಮ್ಮ ಎಡೆಬಿಡದ ಸಂರಕ್ಷಣೆಯು ನಮ್ರತೆಯಲ್ಲಿ ನಡೆಯುವುದು. "ಕ್ರಿಸ್ತನಿಗೆ ಭಯಪಡುವವರಾಗಿದ್ದು ಒಬ್ಬರಿಗೊಬ್ಬರು ವಿನಯವುಳ್ಳವರಾಗಿ ನಡೆದುಕೊಳ್ಳಿರಿ" (ಎಫೆಸದವರಿಗೆ 5:21). ನಾವು ಇತರರಿಗೆ ಅರ್ಪಿಸಿಕೊಳ್ಳುವಂತೆ ಒಂದು ಸ್ಥಳದಲ್ಲಿದ್ದರೆ, ನಾನು "ದೇವರ ಸಂಕೀರ್ಣ"ದಿಂದ ಮುಕ್ತವಾಗಿರುತ್ತೇನೆಂದು ನನಗೆಗೊತ್ತು. ಯಾವಾಗಲೂ ಸೌಮ್ಯ ಆತ್ಮನಿಂದ, ನಿಜವಾದ ನಮ್ರತೆಯ ಆತ್ಮದಲ್ಲಿ ನಡೆಯಿಂದ ಯಾವಾಗಲೂ ನಿಮಗಿಂತ "ಕೆಳಗೆ" ಇರುವವರನ್ನು, ನೀವು ನಡೆಸುವವರನ್ನು ನಿಮ್ಮ ಜೀವಿತದಲ್ಲಿ ಮಾತಾಡುವುದಕ್ಕಾಗಿ ದೇವರು ಬಳಸುವ ರೀತಿಯಲ್ಲಿ ನಡೆಯಿರಿ.

## ಮುಕ್ತಾಯ

ದೇವರ ಕರೆ, ಹಾಗೂ ಕ್ರೈಸ್ತಸೇವೆ ಯಾವ ಸಣ್ಣ ವಿಷಯವಲ್ಲ. ನಾವು ದೈವಿಕ ಜ್ಞಾನದೊಂದಿಗೆ ದೇವರು ನಮ್ಮನ್ನು ಯಾತಕ್ಕಾಗಿ ಕರೆದನೆಂಬುದನ್ನು ಸಾಧಿಸಲು ನಡೆಯಬೇಕು. ಹೀಗಿದ್ದರೂ ನಮ್ಮ ವಿಶ್ವಾಸವು ನಮ್ಮ ಬಲದಲ್ಲಿ ಅಥವಾ ಸಾಮರ್ಥ್ಯದಲ್ಲಿ ಇರುವುದಿಲ್ಲ ನಮ್ಮ ವಿಶ್ವಾಸವು ಪೂರ್ಣವಾಗಿ ಆತನಲ್ಲಿ ಒಳಗೊಂಡಿದೆ.

**"ಎಡವಿ ಬೀಳದಂತೆ ನಿಮ್ಮನ್ನು ಕಾಪಾಡುವುದಕ್ಕೂ ತನ್ನ ಪ್ರಭಾವದ ಸಮಕ್ಷಮದಲ್ಲಿ ನಿಮ್ಮನ್ನು ನಿರ್ದೋಷಿಗಳನ್ನಾಗಿ ಹರ್ಷದೊಡನೆ ನಿಲ್ಲಿಸುವುದಕ್ಕೂ ಶಕ್ತನಾಗಿರುವ ನಮ್ಮ ರಕ್ಷಕನಾದ ಒಬ್ಬನೇ ದೇವರಿಗೆ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ಪ್ರಭಾವ ಮಹತ್ವ ಆಧಿಪತ್ಯ ಅಧಿಕಾರಗಳು ಎಲ್ಲಾ ಕಾಲಕ್ಕಿಂತ ಮೊದಲೂ [ಇದ್ದ ಹಾಗೆ] ಈಗಲೂ ಯಾವಾಗಲೂ ಇರಲಿ, ಆಮೆನ್" (ಯೂದನು 1:24,25).**

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವುದು. (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಬೇತಿಗೊಳಿಸುವುದು (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಬೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾಸೇವಕರ ಸಮಾವೇಶವನ್ನು ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚ್ಚುಗೆವುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ನಮ್ಮ ಕಛೇರಿಯ ವಿಳಾಸವಾದ ''ಆಲ್ ಪೀಪಲ್ಸ್ ಸಭೆ ಬೆಂಗಳೂರು'' ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು (ದಯವಿಟ್ಟು ಗಮನಿಸಿ: ಆಲ್ ಪೀಫಲ್ಸ್ ಸಭೆಯು FCRA ಅನುಮತಿ ಹೊಂದಿಲ್ಲ ಮತ್ತು ಭಾರತೀಯ ನಾಗರೀಕರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು.)

Account Name: All Peoples Church

Account Number: 0057213809,

IFSC Code: CITI0000004

Bank: Citibank N.A., 506-507,

Level 5, Prestige Meridian 2, # 30, M.G. Road, Bangalore - 560 001

ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ! ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!

# ಆಲ್ ಪೀಪಲ್ಸ್ ಚರ್ಚ್‌ನ ಪ್ರಕಟಣೆಗಳು

ಕೆಲಸದ ಕಡೆಗೆ ಸತ್ಯವೇದದ ನೋಟ
ನಿನ್ನ ಕರೆಯನ್ನು ಕಡೆಗಣಿಸದಿರು
ನಿರೀಕ್ಷೆಯನ್ನು ಕಳೆದುಕೊಳ್ಳಬೇಡ
ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು
ವೈಯುಕ್ತಿಕ ಮತ್ತು ತಲೆಮಾರಿನ ಬಂಧನಗಳನ್ನು ಮುರಿಯುವುದು
ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು
ದೇವರ ರಾಜ್ಯ ಕಟ್ಟುವವರು
ಪರಲೋಕವೆಂದು ಕರೆಯಲ್ಪಡುವ ನಿಜ ಸ್ಥಳ
ದೇವರ ಉದ್ದೇಶಗಳಿಗೆ ಜನ್ಮ ಕೊಡುವುದು
ಬೇರುಗಳಿಗೆ ಕೊಡಲಿ ಹಾಕುವುದು
ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು
ಉಜ್ಜೀವನದಲ್ಲಿ ಒಂದು ಸಭೆ
ದೇವರ ಪ್ರಸನ್ನತೆ
ಜ್ಞಾನ, ಪ್ರಕಟನೆ ಮತ್ತು ಬಲದ ಆತ್ಮನು
ದೇವರು ಒಳ್ಳೆಯ ದೇವರಾಗಿದ್ದಾನೆ

**ಉಚಿತ ಇ-ಪುಸ್ತಕಗಳು**

ನಮ್ಮ ಚರ್ಚ್ ವೆಬ್ ಸೈಟ್‌ನಿಂದ (www.apcwo.org/publications) ನಮ್ಮ ಎಲ್ಲಾ ಪುಸ್ತಕಗಳ ಪಿ ಡಿ ಎಫ್ ಅನುವಾದವನ್ನು ಉಚಿತವಾಗಿ ಸಂಗ್ರಹಿಸಲು ದೊರೆಯುತ್ತವೆ. ಇತರೆ ಪ್ರಾದೇಶಿಕ ಭಾಷೆಗಳಲ್ಲೂ ಸಹ ಈ ಪುಸ್ತಕಗಳು ದೊರೆಯುತ್ತದೆ. ಇಂತಹ ಉಚಿತ ಪುಸ್ತಕಗಳಿಗಾಗಿ ಇ-ಮೇಲ್ ಅಥವಾ ಅಂಚೆಯ ಮೂಲಕವಾಗಿ ನಮ್ಮನ್ನು ಸಂಪರ್ಕಿಸಬಹುದಾಗಿದೆ.

**ಉಚಿತ ಆಡಿಯೋ ಮತ್ತು ವೀಡಿಯೊ ಸಂದೇಶಗಳು**

'ಲಿವಿಂಗ್ ಸ್ಪ್ರಾಂಗ್ ಎಂಬ ಗಾಡ್ ಟವಿಯ ಕಾರ್ಯಕ್ರಮದ ಮತ್ತು ಸಮಾವೇಶಗಳ ವಿಡಿಯೋ ರೆಕಾರ್ಡಿಂಗ್ ಗಳಿಗಾಗಿ ಮತ್ತು ನಮ್ಮ ಭಾನುವಾರದ ಸಂದೇಶಗಳ ಆಡಿಯೋ ರೆಕಾರ್ಡಿಂಗ್ (MP3)ಗಳಿಗಾಗಿ ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿ.

## ಸತ್ಯವೇದ ಶಾಲೆ

ಮತ್ತು ಸೇವಾತರಬೇತಿಕೇಂದ್ರ

ಆಲ್ ಪೀಪಲ್ಸ್ ಸಭೆ - ಮತ್ತು ಸೇವಾತರಬೇತಿ ಕೇಂದ್ರ (A P C - BC & MTC) 2005 ರ ಆಗಸ್ಟ್ ತಿಂಗಳಲ್ಲಿ ಸ್ಥಾಪಿತವಾಯಿತು. ಇಲ್ಲಿ ಪುರುಷರು ಮತ್ತು ಸ್ತ್ರೀಯರನ್ನು ಸೇವೆಗಾಗಿ ಸಿದ್ಧಗೊಳಿಸಿ, ತರಬೇತಿಗೊಳಿಸಿ, ನಂಬಿಗಸ್ಥರಾದವರನ್ನು ಭಾರತದೇಶಕ್ಕೂ ಇತರದೇಶಗಳಿಗೂ - ಹಳ್ಳಿ, ಪಟ್ಟಣ, ನಗರ ಮತ್ತು ರಾಷ್ಟ್ರಗಳನ್ನು ಯೇಸುಕ್ರಿಸ್ತನಿಗಾಗಿ ಗೆಲ್ಲಲು ತರಬೇತಿಗೊಳಿಸುತ್ತೇವೆ.

**ಎ.ಪಿ.ಸಿ - ಬಿ.ಸಿ. / ಎಂ.ಟಿ.ಸಿ. - 2 ಪರಿವಿಡಿಗಳನ್ನು ನೀಡುತ್ತದೆ.**

- ಶೈಕ್ಷಣಿಕ ಪರಿಣಿತಿಯೊಡನೆ ಆತ್ಮಿಕ ಮತ್ತು ಪ್ರಾಯೋಗಿಕ ಸೇವಾತರಬೇತಿಯನ್ನು ಒದಗಿಸುವುದಕ್ಕಾಗಿ ಪೂರ್ಣಾವಧಿ ವಿದ್ಯಾರ್ಥಿಗಳಿಗಾಗಿ 2 ವರ್ಷಗಳ ಸತ್ಯವೇದ ಶಾಲೆಯ ಶಿಕ್ಷಣ ಪರಿವಿಡಿ. 2 ವರ್ಷಗಳ ಪರಿವಿಡಿಗಳನ್ನು ಮುಗಿಸಿದ ವಿದ್ಯಾರ್ಥಿಗಳು **ಡಿಪ್ಲೋಮಾ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ** (Dip.Th/Cm) ಪಡೆದುಕೊಳ್ಳುತ್ತಾರೆ. ತರಗತಿಗಳು ಆಂಗ್ಲಭಾಷೆಯಲ್ಲಿ ನಡೆಸಲ್ಪಡುತ್ತವೆ. ನಮ್ಮ ಬೋಧನಾ ವಿಭಾಗವು ತರಬೇತಿಹೊಂದಿದ ಮತ್ತು ದೇವರ ವಾಕ್ಯದ ಅಭಿಷೇಕ ಹೊಂದಿದ ಶಿಕ್ಷಕರನ್ನು ಒಳಗೊಂಡಿದೆ. ಎಲ್ಲಾ ಬೋಧಕರು ಹಾಗೂ ವಿದ್ಯಾರ್ಥಿಗಳು ಎ.ಪಿ.ಸಿ ಯ ಅಧ್ಯಯನ ಕೇಂದ್ರ ಮತ್ತು ಗ್ರಂಥಾಲಯವನ್ನು (Sc & L) ಉಪಯೋಗಿಸಬಹುದಾಗಿದೆ.

- ಪ್ರಾಯೋಗಿಕ ತರಬೇತಿ ಹೊಂದಲು ಅಪೇಕ್ಷಿಸುವ ನಮ್ಮ ಸತ್ಯವೇದ ಶಾಲೆಯ ಪಧವೀದರರಿಗೆ ಪ್ರಾಯೋಗಿಕ ಸೇವಾ ತರಬೇತಿ ನೀಡುತ್ತೇವೆ. ಒಂದು ಅಥವಾ ಹೆಚ್ಚಿನ ವರ್ಷಗಳನ್ನು ಮುಗಿಸಿದವರು **ಪ್ರಾಯೋಗಿಕ ಸೇವಾ ಪ್ರಮಾಣಪತ್ರ** ಪಡೆದುಕೊಳ್ಳುತ್ತಾರೆ ಮತ್ತು ತೊಡಗಿಸಿಕೊಂಡ ಅವಧಿಯು ಸ್ಪಷ್ಟವಾಗಿ ನಮೂದಿಸಲ್ಪಡುತ್ತದೆ.

# ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರದಲ್ಲಿ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂಬುದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ನಾವು, ಆತನ ಪವಿತ್ರಾತ್ಮನ ಪ್ರಮಾಣಿಕರಣ ಮತ್ತು ರಾಜಿ ಹೊಂದದ, ಅಭಿಷೇಕಹೊಂದಿದ ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅಧ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ. (1 ಕೊರಿಂಥದವರಿಗೆ 2: 4,5, ಇಬ್ರಿಯರಿಗೆ 2: 3,4.) ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆ ನಮ್ಮ ಗುರಿಯಾಗಿದೆ.

ಬೆಂಗಳೂರನ್ನು ಪ್ರಮುಖವಾಗಿಟ್ಟುಕೊಂಡು, ಹೊಸ ಸಭೆಗಳು ನಿಯತಕಾಲಿಕವಾಗಿ ಭಾರತದಾದ್ಯಂತ ಸ್ಥಾಪಿಸಲ್ಪಡುತ್ತಿವೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪ್‌ಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿರಿ. www.apcwo.org ಅಥವಾ contact@apcwo.org ಗೆ ಇ-ಮೇಲ್ ಕಳುಹಿಸಿರಿ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದೀರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು.

ಆತನು ಪಾಪರಹಿತ ಜೀವನ ನಡಿಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ - ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು. ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಅದ್ಭುತ ಕಾರ್ಯಗಳು ನಮಗೆ ದೇವರು, ಒಳ್ಳೆಯ ದೇವರು, ಆತನು ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಬಯಸುತ್ತಾನೆ. ದೇವರು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತವೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಅಂಗೀಕಾರವಾಗದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು, ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಕೆಗೊಳಿಸುತ್ತದೆ. ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೆನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು ''ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತವಾದ ಕ್ರಿಸ್ತ ಯೇಸುವಿನಲ್ಲಿರವ ನಿತ್ಯಜೀವ'' ಎಂದು ಹೇಳುತ್ತದೆ (ರೋಮಪುರ 6:23) ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು. ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ, ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ, ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ. ನೀನು ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಮತ್ತು ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

**''ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು''** (ಅಪೊಸ್ತಲರ ಕೃತ್ಯ 10:43)

**''ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬುದೇ''** (ರೋಮಾಪುರದವರಿಗೆ 10:9)

ನೀವು ಸಹ ಯೇಸುಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪರಿಹಾರಗಳನ್ನು ಹೊಂದಿಕೊಳ್ಳಬಹುದು. ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

*ಪ್ರಿಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥ ಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರ್‍ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ ನನ್ನ ಬಾಯಿಂದ, ''ನೀನು ನನಗಾಗಿ ಸತ್ತೇ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ. ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧೀಕರಣ ಪಡೆದುಕೊಂಡೆ'' ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯಮಾಡು. ಆಮೇನ್*